ನಮ್ಮ ಲೋಂಚ್ ಹೊರಟು ಹೋಗುವಾಗ ಎರಡು ಕಡೆಗಳಲ್ಲಿ ಪೇರಿನ ಮೇಲಿನ ಸಂಕಗಳನ್ನು ಏರಿಸಿ ನಮ್ಮ ಲೋಂಚ್ ಅದರ ಅಡಿ ಹೋಗುವುದು. ಹಾಗೆ ಎರಡು ಸಂಕಗಳನ್ನು ಸುಮಾರು 1 ಮೈಲಲ್ಲಿ ದಾಟಿದ ನಂತರ ಲೋಂಚು ನೀರಾ ಉತ್ತರ ದಿಕ್ಕಿಗೆ ನೀರಿನ ಕಾಲುವೆ ಮೇಲೆ ಪ್ರಯಾಣ ಮಾಡಿತ್ತು. ಹಾಗೆ ಕಾಲುವೆಯು ಸುರು ಆಗುವಲ್ಲಿ ಸಮುದ್ರದ ನೀರಿನ ಮಟ್ಟಕ್ಕೂ ಕಾಲುವೆಯ ನೀರಿನ ಮಟ್ಟಕ್ಕೂ ಸುಮಾರು 6 ಅಡಿ ಹೆಚ್ಚು ಕಡಿಮೆಯಿದ್ದು ಸಮುದ್ರ ಮೇಲೆ, ಕಾಲುವೆ ಕೆಳಗೆ ಇದ್ದುದರಿಂದ ಒಂದು ಹೆದ್ದಾಗಿಲಿನ (lock)ಮೂಲಕ ಲೋಂಚನ್ನು ಇಳಿಸುವರು. ಹೀಗೆ ನಾವು ಈ ಕಾಲುವೆಯಲ್ಲಿ ಪ್ರಯಾಣ ಮಾಡುವಾಗ ಎರಡೂಕಡೆ ಭೂಮಿ ಕಾಲುವೆಗಿಂತಲೂ ಸುಮಾರು ೯ 10 ಅಡಿ ಕೆಳಕ್ಕೆ. ಇದು ಈ ದೇಶದ ಒಂದು ವಿಚಿತ್ರ. ಎಷ್ಟೆ ನೋಡಿದರೂ ಸಮುದ್ರವು ಊರಿಗಿಂತ 8-10 ಅಡಿ ಎತ್ತರವಿದ್ದು ಮಣ್ಣಿನ ಬಹು ದೊಡ್ಡ ದಂಡೆಗಳ ಮೂಲಕ ಸಮುದ್ರವನ್ನು ಕಡೆಗಟ್ಟಿರುವರು. ಆದ ಕಾರಣವೇ ಇಂಗ್ಲೀಷಿನಲ್ಲಿ ಒಂದು ಗಾದೆಯಿದೆ. God made the world, But the Dutchman made Holland. ದೇವರು ಲೋಕವನ್ನು ನಿರ್ಮಿಸಿದ್ದಾದರೂ ಡಚ್ಚರು ಹೊಲ್ಲೆಂಡ್ ದೇಶವನ್ನು ನಿರ್ಮಿಸಿದ್ದು. ಎಲ್ಲಿಯಾದರೂ ಒಂದು ಕಡೆ ಈ ದಂಡೆಯು ಒಡೆದು ಹೋದರೆ ಸಮುದ್ರದ ನೀರು ಒಳಕ್ಕೆ ಬಂದು ಊರುಗಳೇ ಮುಳುಗುವವು. ಎಷ್ಟೆ ಸ್ಟಾರಡೇಮ್ ಬರಿ ಅನೇಕ ಸಾವಿರ ಚಚ್ಚೌಕ ಮೈಲುಗಳ ವಿಸ್ತೀರ್ಣದ ಜೂಡರ್ ಜೀ ಎಂಬ ದೇಶದ ಮಧ್ಯ ಇರುವ ಸಮುದ್ರ. ಅದಕ್ಕೆ ಅಲ್ಲಲ್ಲಿ ದಂಡೆ ಕಟ್ಟಿ, ನೀರು ಬತ್ತಿಸಿ ಸುಮಾರು 800 ಚದರ ಮೈಲು ಕೃಷಿ ಭೂಮಿಯನ್ನು ಈಗ ಮಾಡುತ್ತಿರುವರು.

ಹೀಗೆ ಕಾಲುವೆಯ ಎರಡೂ ಕಡೆ ಭೂಮಿಯಲ್ಲಿ ಹಸುರಾದ ಹುಲ್ಲಿನ ಮೇವುಗಾವಲುಗಳನ್ನು ಎಲ್ಲೆಲ್ಲೂ ಕಾಣಬಹುದು. ಅವುಗಳಲ್ಲಿ ಮೇಯುವ ದನ ಎತ್ತು ಕುದುರೆಗಳು ಇಲ್ಲಿರುವಷ್ಟು ಚಲೋ ದನಗಳು ದೇರೆ ದೇಶಗಳಲ್ಲಿ ದುರ್ಲಭ ಆದ್ದರಿಂದಲೇ ಈ ದೇಶದಿಂದ ಯಥೇಷ್ಟ ಚೀಸ್ (Cheese) ಮೊದಲಾದ ಹಾಲಿನ ವಸ್ತುಗಳನ್ನು ದೇರೆ ದೇಶಗಳಿಗೆ ಕಳುಹಿಸುವರು.

ಹೀಗೆ ನಾವು ಹೋಗುವಾಗ ಅಲ್ಲಿಯ ನಾಯುವಿದಾನ ನಿರ್ವಾಹದ ಶ್ರಮದಲ್ಲಿ ಕಳೆದಯುದ್ದ ನಡೆದಿತ್ತಂತೆ. ಕಾಲುವೆ ಬದಿ ವಿದ್ಯುಚ್ಛಕ್ತಿ ಹೋಗುವ ಮರದ ಕಂಬಿಕಂಬಗಳು ಕಾಲುವೆಯ ಎರಡು ಬದಿ ದಡಗಳಲ್ಲಿ ನಗರದಿಂದ 8-10 ಮೈಲು ವರೆಗೂ ಅನೇಕ ಜನರು ಸ್ಯಾಕಲಿನಲ್ಲಿ ಬಂದು [ಕೆಲವು ಸಾರಿ ಗಂಡಹೆಂಡಿರು ವಿಷಯ ಹಿಡಿಯಲಿಕ್ಕೆ ಗಾಳ ಹಾಕುತ್ತಿರುವರು. ಕಾಲುವೆ ಬದಿಯಲ್ಲೇ ರಸ್ತೆಯಿದೆ. ಆದರಲ್ಲಿ ಕಾರು ಲೋರಿಗಳು ಚಲಿಸುತ್ತಿದ್ದವು. ಆದರೆ ಬದಿ ಪ್ರತ್ಯೇಕ ಒಂದು ಸ್ಯಾಕಲ್ ರಸ್ತೆ. ಈ ದೇಶದಲ್ಲಿ ಇದು ಒಂದು ವಿಶೇಷ ಎಲ್ಲೆಲ್ಲೂ ಬದಿ ರಸ್ತೆ ಸ್ಯಾಕಲ್ ಹೋಗಲಿಕ್ಕೆ ಪ್ರತ್ಯೇಕ ಬಂದು ದಾರಿ

ಹೀಗೆ ಕೆಲವು ದೂರ ಹೋಗುವಷ್ಟರಲ್ಲಿ 11 ಗಂಟೆಗೆ ಬ್ರೋಕ್-ಇನ್ ವಾಟರ್‌ಲೇಂಡ್ [Brock-in-Waterland] ಎಂಬ ಒಂದು ಸಣ್ಣ ಹಳ್ಳಿ ಬಂತು. ಅಲ್ಲಿ ಹಳೇ ಇಗರ್ಜಿ, ಸುಮಾರು ನೂರು ಮನೆಗಳು, ಅಲ್ಲಲ್ಲಿ ಕಾಲುವೆ ಇವೆ. ಇದು ಒಂದು ಪುರಾತನದ ಹಳ್ಳಿ. ಅಲ್ಲಿ ನಮ್ಮ ಲೋಂಚಿನಿಂದ ಇಳಿದು ಅರ್ಧ ತಾಸು ಸಮಯ ಕಳೆದೆವು.

ಈ ಹಳ್ಳಿಯಲ್ಲಿ ಒಂದು ವಾಡಾ ಡೈರಿನ ಮನೆಗೆ [Dairy Farm]ಗೆ ನಮ್ಮನ್ನು ಕರೆದುಕೊಂಡು ಹೋಗಿ ಅಲ್ಲಿ ಒಳಗೆಲ್ಲಾ ತೋರಿಸಿದರು. ಎದುರು ಮುಖಾಕಡೆ ಮನೆ. ಹಿಂದೆ ದನಗಳನ್ನು ಕಟ್ಟುವ ಹಟ್ಟಿ, ಮೇಲೆ ಆಟ್ಟ, ಆದರಲ್ಲಿ ಹುಲ್ಲಿನ ರಾಶಿ. ಚಳಗಾಲದಲ್ಲಿ ಮಾತ್ರ ಇಲ್ಲಿ ದನಗಳನ್ನು ಕಟ್ಟುವುದು. ದಿನಿಲುಗಾಲ ಅವು ಮುಲ್ಲುಗಾವಲಲ್ಲೇ ಇರುವವು. ಹಟ್ಟಿಯು ಸುಮಾರು 80ಅಡಿ ಉದ್ದ, 25 ಅಡಿ ಅಗಲ. ಎರಡೂ ಬದಿಗಳಲ್ಲಿ ದನಗಳು ಕಟ್ಟುವುದು. ಮಧ್ಯ ಜೋಗಿಬರುವ ದಾರಿ. ಹಟ್ಟಿಯ ಒಳಗೆ ಬಹಳ ಸ್ವಚ್ಛವಿದೆ. ಇಲ್ಲಿ ಚೀಸ್ [Cheese] ಮಾಡುವ ಕ್ರಮ ತೋರಿಸಿದರು. ನಮ್ಮೊಟ್ಟಿನ ಸಂಚಾಲಕನು ಇಂಗ್ಲಿಷ್, ಡಚ್ ಮತ್ತು ಫ್ರೆಂಚ್ ಹೀಗೆ 3 ಭಾಷೆಗಳಲ್ಲಿ ವಿವರಿಸಿದನು. ಅಲ್ಲಿಂದಲೇ ನಮ್ಮೊಟ್ಟಿಗೆ ಇದ್ದ ಅಮೇರಿಕದವರು ಚೀಸನ್ನು ಕ್ರಯಕ್ಕೆ ಪಡೆದು ನೀರಾ ಕಮ್ಮ ಮನೆಗೆ ಕಳಿಸಿಕೊಡುವ ವಿಲೇವಾರಿ ಮಾಡಿದರು ಎಲ್ಲಾ ನೋಡಿದ ನಂತರ ಮನೆಯ ಸಣ್ಣ ಜುಟ್ಟಿಗಿ ಇನಾಮು ಪಡೆಯುವರೆ ಹರಿವಾಣ ತಂದಳು. ಅದಕ್ಕೆ ನಮ್ಮ ಯಥಾನುಶಕ್ತಿ ಪಾಣಿ ಹಾಕಿದೆವು.

[ವಿಚಾರವಾಣಿ] —ಕೆ. ಆರ್. ಕಾಂತ

[ಮುಂದರಿಯುವುದು]

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು, ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಮ ಅಗಿ ಯೂಚಿಲ್ಲರೆಯಾಗಿಯೂ ಮೊದೆಯುತ್ತವೆ.

ಕಲ್ಕಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ

For Protection and Provision
Consult
The New Guardian of India Life Insurance Co., Ltd.
Estd] Head office: MADRAS [1934

A Policy in this Progressive Life Office is good investment; its Agency is valuable business connection.

Applications for representation are invited from influential persons.

Please apply to:
The Branch Manager,
Diamond Building, Hampankatta,
MANGALORE, S. K.

ಮೂಲ್ಕಿ ಬ್ಯಾಂಕ್,
ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿಸಲಾಗಿ 21 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಆತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು

The Moolky Bank Ltd.,
Moolky, S. K

— ಮಕ್ಕಳನ್ನು ಹಡೆಯುವುದು ಸಾಕು —

ಅಕಕ್ಕ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ದೀರ್ಘ ಗೃಹಸ್ಥ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಳಕೆರಿಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಖಸಿನೀರಿನಲ್ಲಿ ಸೇವಿಸಬೇಕು.

ಕಿಮ್ಮತ್ತು:—ಹರವೀನಲ್ಲಿ ಖಡಬೇಕು. ೭ ದಿವಸ ಸಂಪೂರ್ಣ ಔಷಧದ ದಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೫ ಆಣೆ.

ತಯಾರಕರು:—ಹಾಳಪ್ಪಾ ಶಕೀರಪ್ಪಾ ಡಾವಣಗೇರಿ

ಆಯುರ್ವೇದ ಔಷಧಾಲಯ ಗದಗ-ಸಿಟಿ.

ತಾಲೂಕರು:—ಹುಬ್ಬಳ್ಳಿ ಶಾಮನಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಫಾರಾದ ದಿಪೋಕರ—ಬಾಸಪ್ಪ ಸಿದ್ಧಲಿಂಗಪ್ಪ ಭಾಕವಾಡಕರ ರಾಣಾಪುರ ನಂಜುಡೇಶ್ವರ ಮೂರ್ತಿ ಡಾವಣಗೇರಿ ಬಾವಣಗೇರಿ:—ಬಾವಣಗೇರಿ ಪ್ರೆಸ್ಸ್ ೮೦ ಎಸ್ ಕರಿಲಾಡಾ ಕೆಮಿಕ್ಸ್, ಬಾವೇರಿ ಬ್ಯಾಡಗಿ

"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಬಾಣಂತಿಯರ ಸಲುವಾಗಿಯೇ ದೇಶ್ಯಮತ್ತು ಪ್ರಕೃತಿದ ದೇಹಸ್ಥಿತಿಯನ್ನು ನಿರ್ವೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಇವರೆ
ನವಜೀವಾತು
ಎಂಬ
ಸೂತಿಕಾ ರಸಾಯನ



ಹೆಚ್ಚಿನ ಮಾಹಿತಿಗೆ—ಡಾ॥ ಯಂ. ವಿ. ಶಾಸ್ತ್ರೀ, ಬಿಎಲ್. ಏ
ಕೊಡಿಯಾಲಬೈಲ ಪೋಸ್ಟು, (ಮಂಗಳೂರು)

ಸ್ಥಾನಿಕರು:—ಡಾ॥ ಏ ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

ವಾರದ ಭವಿಷ್ಯ

2ತಾರೀಕು 3-1-52 ರಿಂದ — ತಾರೀಕು 9-1-52 ವರೆಗೆ

ಮೇಷ:—ಕೆಲವೊಂದು ಗೃಹಗಳ ಸ್ಥಾನಾಂತರ ದಿಂದಾಗಿ ನಿಮ್ಮ ಜೀವನದಲ್ಲಿ ಸ್ವಲ್ಪ ಪರಿವರ್ತನೆ ತುಂಬಾಗಲಿದೆ. ಮುಂಬಿನಂತೆ ದುಡಿದರೂ ಇಂದು ಫಲಾಪೇಕ್ಷೆಯು ಹಿಂದಿನಂತೆ ಲಭಿಸದು. ಗಂಡ ಹೆಂಡಿರಲ್ಲಿ ಸದಾ ಕಲಹವಾಗಲಿದೆ. ಲೇವಾದೇವಿ ನಿಮಿತ್ತ ಕೊರ್ಟುಹತ್ತುವ ಸಂಭವವಿರುವದು ಅಕಸ್ಮಿತ ಪ್ರವಾಸದ ಯೋಗವಿದೆ ತಾ 5-6-7 ಈ ದಿನಗಳಲ್ಲಿ ವಿಜಯ ಧನಾಪ್ತಿ ಸುಖಭೋಗಗಳು ಏರ್ಪಟ್ಟಿ ಸಿದುದಕ್ಕಿಂತ ಹೆಚ್ಚಾಗಿ ಲಭಿಸುವವು.

ವೃಷಭ:—ನಿಮ್ಮ ದೈವವಿಂದಾಗಿ ನಿಮ್ಮ ಮೇಲೆ ಅನುಗ್ರಹವಂಬರಿದೆ. ಕಳೆದ ವಾರ ಕ್ಕೂ ಈ ದಿನಗಳಿಗೂ ರಾತ್ರಿ ಹಗಲಿನ ಅಭೇದ ಕಾಣಿಸೀತು. ನಿಮ್ಮ ಉತ್ಸಹ ಶಕ್ತಿಯು ಉತ್ತಮವಾಗಿದ್ದು ಧನದ ಅಡಚಣೆಯಿಂದ ಮುಕ್ತರಾಗುವಿರಿ. ಪ್ರತಿಯೊಂದು ಕಾರ್ಯದಲ್ಲೂ ಮುಂದಿಟ್ಟ ಹೆಜ್ಜೆಯನ್ನು ಹಿಂದಿಗೆಯದೆ ಕಾರ್ಯಾಪನ್ನ ಅತುಲ ಶಕ್ತಿಸದಕಾರಗಳು ಲಭಿಸುವವು. ಆದರೆ ಸ್ತ್ರೀಜನರಿಂದ ಸದಾ ಅನಿಷ್ಟ ಸಂಭವಿಸುವ ಯೋಗವಿದೆ- ತಾ 3 4-8-9 ಅತ್ಯುತ್ತಮ

ಮಿಥುನ—ಪರಿಸ್ಥಿತಿಯು ಅತೀವ ಕಠಿಣಾವಸ್ಥೆಗೆ ಬಂದಿರುವದು. ಯಾವನೊಬ್ಬ ಗೃಹನ ಅನುಗ್ರಹವು ನಿಮಗೀವಾರದಲ್ಲಿ ಕಾಣಿಸದು. ಅದ್ದರಿಂದ ಹೆಚ್ಚಿನ ನಿಮ್ಮ ಕಾರ್ಯಗಳಲ್ಲಿ ನಿಮಗೆ ಪರಾಭವ ನಷ್ಟಗಳುಂಟಾಗುವವು. ಮನಸ್ಸು ಅತೀವ ಚಂಚಲವಾಗುವದು. ಸಂಸಾರದ ತಾಪತ್ರಯದಿಂದಾಗಿ ವೈರಾಗ್ಯವೇ ಹುಟ್ಟೀತು. ಕಫ ವಾತ ದೋಷ ದಿಂದಾಗಿ ಆರೋಗ್ಯವು ಕೆಡುವ ಸಂಭವವಿದೆ. ಅದರೂ ವಾರಾಂತ್ಯ 5ದಿನಗಳು ಹೆಚ್ಚಿನ ದೋಷಕಾರಿಗಳಾಗಲಾರವು.

ಕರ್ಕಟ—ಹಲವಾರು ದಿನಗಳಿಂದ ಲೂ ನಿಮ್ಮ ಪರಿಸ್ಥಿತಿಯು ಅತ್ಯುಚ್ಚ ಮಟ್ಟದಲ್ಲೇ ನಿಂತಿರುವದು. ಇಂದೂ ಸಹ ನಿಮ್ಮ ಭಾಗ್ಯಕ್ಕೆ ಯಾವ ಕೊರತೆಯೂ ಕಾಣಿಸದು. ಆದರೆ ಕೆಲವೊಂದು ಕೃತ್ರಿಮ ಮಿತ್ರರು ನಿಮ್ಮನ್ನು ಮೋಸಗೊಳಿಸಿರುವರು. ದುರ್ಜನರ ಬಲಿಗೆ ಸಿಲುಕಿ ಜನಾಪವಾದಕ್ಕೆ ಗುರಿಯಾಗುವಿರಿ. ಅದಾರ ದೋಷದಿಂದಾಗಿ ಆರೋಗ್ಯವು ಸ್ವಲ್ಪಮಟ್ಟಿಗೆ ಕೆಡಲಿದೆ. ವಾರಾಂತ್ಯದ 5ದಿನಗಳು ನಿಮ್ಮ ಬಯಕೆಯನ್ನು ಪೂರ್ತಿಸಲು ಸಮರ್ಥಗಳಾಗಿವೆ.

ಸಿಂಹ—ವಿಕ್ರಮಶಾಲಿಗಳಾದ ಕೆಲವು ವಿಕ್ರಮಸ್ವಾಮಿನ್ಯಂದು ಅಕ್ಷರಶಿಸಿರುವನಾದ ಕಾರಣ ನಿಮ್ಮ ಸಾಹಸಕ್ರಿಯೆಗಳು ಸಫಲಗಳಾಗುವವು. ಖರ್ಚಿಗೆ ಸಾಕಷ್ಟು ಸ್ವಯಂ ದುಡಿಯುವಿರಿ. ಮಕ್ಕಳಿಂದಲೂ ನೀಚ ಜನರಿಂದಲೂ ಧನ ಲಭಿಸುವ ಯೋಗವಿದೆ. ಎಷ್ಟಿದ್ದರೂ ದಿನಾಂತ್ಯದಲ್ಲಿ ಕೈಯಲ್ಲಿ ಕಾಸಿಲ್ಲದಂತಾಗುವದು. ಆರೋಗ್ಯವು ಚೆನ್ನಾಗಿರದು. ಗೃಹಕಲಹವು ಹೆಚ್ಚಲಿದೆ. ವಾರಾಂತ್ಯದ 2ದಿನಗಲ್ಲಿ ನಿಮ್ಮ ಇಷ್ಟಗಳು ಹೆಚ್ಚಾಗಿ ನೆರವೇರುವವು.

ಕನ್ಯಾ—ಶತ್ರುಗ್ರಹರ ಒಧ್ಯ ರಾಶ್ಯದ ಅನುಗ್ರಹವು ನಿಮಗಿಂದು ಲಭಿಸುವ ಕಾರಣ ಸೌಖ್ಯಸಮೃದ್ಧಿಗಳಲ್ಲಿ ಕೀರ್ತಿಯನ್ನೂ ಲಾಭವನ್ನೂ ಗಳಿಸುವಿರಿ. ಸರಕಾರಿ ಜನರ ಪೀಡೆ ಪಿತ್ಥೋಪ್ಪದೋಷದಿಂದ ದೇಹಾಲಸ್ಯ ಅತ್ಯಾಯಂ ವಿರಹ ಇತ್ಯಾದಿ ಅನಿಷ್ಟಗಳು ಕಾಣಿಸುವವು. ಮತ್ತು ಬೇಕಾದ ವಸ್ತುಒಡವೆಗಳಿದ್ದರೂ ನಿಮ್ಮ ಸಮಯಕ್ಕೆ ಉದಗಲೊಲ್ಲದು. ವಾರಾದಿಯ 5ದಿನಗಳಲ್ಲಿ ವಿಜಯ ಲಾಭ ಮಿತ್ರ ಸಮಾಗಮಗಳಾಗಲಿವೆ.

ತುಲಾ—ಶುಕ್ರಜನರ ಪೀಡೆಯು ದಿನದಿಂದ ದಿನಕ್ಕೆ ಹೆಚ್ಚುವದು ಮಾತ್ರವಲ್ಲ ಮನೋರೋಗವು ಅಧಿಕವಾಗುವದು. ಧನನಾಶಕ್ಕೆ ಕಾರಣಗಳಾದ ಅನರ್ಥ ಶಕಗಳು ಪ್ರಾಪ್ತವಾಗಲಿವೆ. ಹೆಚ್ಚೇಕೆ ತನುಮನಗಳಿಗೆ ನಿಮಗೆ ನೆಮ್ಮದಿ ದೊರೆಯದೆಂದರೆ ತಪ್ಪಾಗದು. ಆದರೂ ಕೃಪೆಯೆನೆಂದರೆ ವಾರಾದಿಯ 5ದಿನಗಳಲ್ಲಿ ಬುದಿಮೆಗೆ ತಳ್ಳಿ ಪ್ರತಿಫಲವೂ ಸನ್ನಿಶ್ಚರ ಬೆಂಬಲವೂ ಆತ್ಮೋತ್ಸಹೋತ್ಸಾಹಗಳೂ ವಸ್ತುಗಳೂ ಲಭಿಸುವವು.

ವೃಶ್ಚಿಕ—ಈ ವಾರದಲ್ಲಿ ನಿಮ್ಮ ಆದಾಯವು ಮುಂಬಿನಂತೆಯೆ ಖರ್ಚಿನ ಭಾಗದಲ್ಲಿ ಸ್ವಲ್ಪ ಹೆಚ್ಚಳ ಕಾಣಿಸುವದು. ಅದರೂ ಗಾಬರಿಯಾಗಲಕ್ಕೆ ಕಾರಣವಿಲ್ಲ. ಪಿತೃದೋಷದಿಂದಾಗಿ ಆರೋಗ್ಯಕ್ಕೆ ಧಕ್ಕೆ ತಗಲಲಿದೆ. ರಾಜಕೀಯವುದಂಗದಲ್ಲಿ ನಿರೀಕ್ಷಿಸಿದ ಗೆಲುವಿರದು. ಸನ್ಮಿತ್ರರೂ ಬಂಧುಗಳೂ ಇನರ ನೆರವು ಉತ್ತಮವಿರುವದು. ವಾರಾಂತ್ಯದ 5ದಿನಗಳನ್ನು ಸುಖದಿಂದ ಕಳೆವಿರಿ.

ಧನು—ಗಾಂಧಾರಂಧಕಾರದಲ್ಲಿ ದಿಕ್ಕು ತೋಚದೆ ಚಟಪಡಿಸುತ್ತಿದ್ದ ನಿಮಗೆ ಈ ವಾರದಲ್ಲಿ ಬೆಳಕು ಕಾಣಿಸಲಿರುವದು. ಇಂದಿನ ನಿಮ್ಮ ಕಾರ್ಯಗಳು ಸಫಲಗಳಾಗುವವು. ಹಲವಾರು ತರದಿಂದ ಹಣ ಕೈಸೇರೀತು. ಜನರ ಸಹಕಾರವೂ ಲಭಿಸುವದು. ಅಂತೂ ಹಿಂದಿನ ದಿನಗಳಷ್ಟು ಕಷ್ಟದಾಯಿಯಾಗಿ ಪರಿಣಮಿಸದೀವಾರವು. ವಾರಾಂತ್ಯದ 2ದಿನಗಳಲ್ಲಿ ಸ್ತ್ರೀಧನ, ವಿಜಯ, ಗೃಹಸುಖ, ಬಂಧು ದರ್ಶನಾದಿಗಳು ಲಭಿಸಲಿವೆ.

ಮಕರ—ಕಾಲವು ಅತೀವ ಪ್ರತಿಕೂಲವಾವಸ್ಥೆಗೆ ಬಂದಿರುವದು. ಯಾವ ಭಾಗದಲ್ಲಿ ನೋಡಿದರೂ ಆಕಾರಗಳೇ ಕಾಣಿಸವು. ಸಾಂಸಾರಿಕ ತಾಪತ್ರಯದಿಂದ ಬಹುವಾಗಿ ನೊಂದ ನಿಮಗೆ ಶತ್ರುಜನರು ಹಲವಾರು ತೆರದಿಂದ ಪೀಡಿಸುವರು. ಆರ್ಥಿಕ ಬಿಕ್ಕಟ್ಟು ಪಾದ ಸಮೂಹದಲ್ಲಿ ತಲೆಯೆತ್ತಿ ತಿರುಗಲಾಗದು. ತನ್ನವರೇ ರೋಗ್ಯವೂ ಕೆಡಲಿದೆ. ಆದರೂ ತಾ. 3, 4ರಲ್ಲಿ ಮಿತ್ರಜನರ ಬೆಂಬಲದಿಂದ ಕಲವೊಂದು ಕಾರ್ಯಗಳಲ್ಲಿ ವಿಜಯವನ್ನು ಪಡೆವಿರಿ.

ಕುಂಭ—ಈ ವಾರದಲ್ಲಿ ನಿಮ್ಮ ಆದೃಷ್ಟವು ಸ್ವಲ್ಪ ಕುಗ್ಗಿರುವದು. ಆತುರವು ಮುಂಬಿನಂತೆ ನಿಮ್ಮ ಉದ್ಯಮದಲ್ಲಿ ಲಾಭಗಳು ಕಾಣಿಸವು. ಜನಕಿಯ ಬೆಂಬಲ ಸಾಕಷ್ಟಿದ್ದರೂ ವಿನಾಕಾರಣ ಕಲಹಗಳು ದಿನ ದಿನಕ್ಕೆ ಹೆಚ್ಚುವವು. ಪತ್ನಿಪುತ್ರರ ವಿರಹವಾಗುವದು. ಧಾತುದೌರ್ಬಲ್ಯದಿಂದಾಗಿ ದೇಹದಲ್ಲಿ ನಿಶ್ಶಕ್ತಿ ಹೆಚ್ಚಲಿದೆ. ಆದರೂ ತಾ. 5, 6, 7 ಈ ದಿನಗಳಲ್ಲಿ ಗುರುಹಿರಿಯರ ಅನುಗ್ರಹದಿಂದಾಗಿ ನಿರೀಕ್ಷೆಗಿಂತ ಅಧಿಕವಾದ ಫಲವನ್ನೂ ವಿಜಯವನ್ನೂ ಸಂಪಾದಿಸುವಿರಿ.

ಮೀನ—ನಿಮ್ಮ ಭಾಗ್ಯಕ್ಕೇವಾರವು ಸ್ವಲ್ಪ ಅಕಾದಾಯಕವಾಗಿದೆ. ಕೈಗೊಂಡ ಕಾರ್ಯಗಳು ನಿರೀಕ್ಷೆಯಿಂದ ನೆರವೇರುವವು. ನೀರೀಕ್ಷಿಸಿದಂತೆ ಫಲಾಪೇಕ್ಷೆಯೂ ಇದುವದು. ಆದರೆ ಕೆಲವೊಮ್ಮೆ ಹಿಂದುಮುಂದಿನ ಯೋಚನೆಮಾಡದೆ ದುಡುಕಿ ನಷ್ಟಕಷ್ಟಗಳಿಗೀಡಾಗುವ ಸಂಭವವಿದೆ. ಗೃಹತಾಪತ್ರಯಗಳು ಕಾಂತವಾಗುವವು. ಶತ್ರುಗಳಿಂದ ಅಗಾಗ ಧನಮಾನಗಳಿಗೆ ಧಕ್ಕೆತಗಲುವ ಪ್ರಸಂಗವೂ ಬಾರೀತು. ತಾ. 3, 4, 8, 9 ಈ ದಿನಗಳಲ್ಲಿ ಅತ್ಮೀಯರ ಭೆಟ್ಟಿ ಮಹತ್ಕಾರ್ಯ ಸಂಗಡಣ ಇತ್ಯಾದಿ ಕಾರ್ಯಗಳು ನೆರವೇರುವವು.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈಕರ್, ಶಯನ ಇವೆಲ್ಲವು ಉತ್ತಮ ವ್ಯವಸ್ಥೆ

ಕರೆದರೆ ಓಗೊಡುವ ನೌಕರರಿ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ಹಿಂದಿನಿನು, ಇವುಗಳ ಯಚಿಕುಚಿ ಹೇಳಬೇಕೆ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್ಟು

For up-to-date Lodging & Boarding

ROYAL MAHAL,

UDIPI. S. Kanara.

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಉತ್ಪಿಗೆ, ಭಾಜ ಹಲ್ಲು ನೇದನೆಗಳಿಗೂ, ಎದೆ ನೋವು, ಭಾಯಗಳು, ಜಾತಿಹೊಳ್ಳುವುದು, ಚೇಳವಿಷಮುಂತಾದವು, ಪಕ್ಷವಾತ, ಮೊಡಿನೆ. ಮೊದಲಾದ ಎಲ್ಲಾರೋಗಗಳಿಗೂ ಸಿದ್ಧೌಷಧ



REGD

ಹುಳು ಕಡ್ಡಿ

ದುದ್ದು

ನಮ್ಮಲ್ಲಿ

ನಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್

ಬಾದರಾಸು, ಬೊಂಬಾಯಿ ಮತ್ತು ಕಲ್ಕತ್ತ.

ಗೊನೋರಿಯಾ ಹರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು. ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು, ಥಾಯವಾಗಿದ್ದರೆ,.....ಜಿಟ್ಟೆ ಬದ್ದಿದ್ದರೆ, ಉಷ್ಣದಿಂದ ಚೀರು ತಿಳಿದಿದ್ದರೆ, ಉಷುಷು ಆಗಿದ್ದರೆ, ಮೂಲವ್ಯಾಧಿ, ಭಗೆಂದ್ರ, ಗಂಡುಮಾಲಿ, ಕೈಕಾಲು ಕೂಲಿ, ಅರ್ಧಾಂಗ ವಾದು ನಡುನೋಯುವದು ಸ್ತ್ರೀಯರ ಬಿಳಿಕೆಂವು ಸೆರಗು ಹೋಗುತ್ತಿದ್ದರೆ, ಕೊಲಿಕಾಟು ಗರ್ವಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸಟಯಾಗಿ ಭೇದಿ ಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರವ ಮುಂಜಾನೆ ಸಂಜೆ ಎರಡು ಸಾರಿ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರಿ ೭ ದಿವಸ ಸೇವಿಸಬೇಕು- ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆ ಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಆಕಾರ, ಕಂಬುಳಕಾಯಿ, ಒಳ್ಳೆಯ ಬಡಸಬೇಕು.

ಬಾಟ್ಲಿ ಒಂದಕ್ಕೆ ಕರೂ. ಪೋಸ್ಟ ಖರ್ಚು ೯ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:—ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ಡಾವಣಗೆರೆ: ಡಾವಣಗೆರೆ ಪ್ರೆಸ್. ಸಂಜುಡೇಶ್ವರ ಮೂರ್ತಿ ಡಾವಣಗೆರೆ.

ಶಕ್ತಿಷಧಸಹಾರ ಮಾಡಕಕ್ಕ ಮೂಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ಡಾವಣಗೆರೆ,

ಆಯುರ್ವೇದ ಔಷಧಾಲಯ, ಗದಗ-

ಮತ್ತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನು ಉಪಯೋಗಿಸಿದರೆ ಹದಿವಷ್ಟ ಮತ್ತುಸ್ರಾವವಾಗುವುದು. ಹಣೋಟಿಗೆ ಬರುವುದು, ಈ ಔಷಧ ಸೇವನೆಯಿಂದ ಪ್ರಬ್ರ ಗುಣಹೊಂದುವುದು, ಯಾವ ಬಾಧೆಯೂಯಿಲ್ಲ. ಸಾಮಿರಾರು ಮುಂದಿಗೆ ಖಾತ್ರಿ ಗುಣವಾಗಿದೆ- ಬೆಲೆ: ರೂ. 3-ಕ್ಕೆ ಸ್ಪೆಶಲ್ ರೂ. 5- ಅಧಿಕಾಧಿಕ ಸ್ಪೆಶಲ್ ರೂ. 8- [ವಿ. ಪಿ ಹನ್ನೆರಡಾಣೆ ಪ್ರತ್ಯೇಕ.]

Mrs. P. DEVEE, F. DS. (N. J.)
Tollygunge CALCUTTA.

ಸ್ವಾತಿಶ್ವರು ಶಶಾಂಕಂವನಿ, ಮುಂಗಳೂರು





Approved from by the Govt. of Mysore
Certificated by the Agent of the Govt of
Cylone & Indian

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA.

Regd.No. M. 3618

LICENCE No. 31
Licensed to Post without Prepayment

ESTD. 1921 ಸ್ಥಾಪನೆ

10-1-1952

Founder: Sri A. B. Shetty,
Minister for Agriculture & Veterinary

ನವಯುಗ
ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪಾರಪತ್ರಿಕೆ.

ಕೃಷಿಮಂತ್ರಿ ಶ್ರೀ.ಎ.ಬಿ. ಶೆಟ್ಟರಿಂದ ಸ್ಥಾಪಿತವಾದುದು.

ನವಯುಗ

ನವಯುಗ
ಉಡುಪಿ, ದ. ಕ

ವಾರ್ಷಿಕ ಚಂದಾ
ರೂ 5-12-0
6 ತಿಂಗಳಿಗೆ
ರೂ. 3-0-0
ಬಿಡಿ ಪ್ರತಿಗೆ
0-2-0

ವರ್ಷ ೩೧ ಪಾರ ೧೮ | NAVAYUGA WEEKLY Post Box No. 22 UDIPI. | Vol 3 No. 18

ಭಾರತ ರೈಲ್ವೆಗಳ ರಚನೆ ಮತ್ತು ಸುಧಾರಣೆ.

ರಾಷ್ಟ್ರದ ಜೀವನದಲ್ಲಿ ರೈಲ್ವೆಗಳಿಗೆ ಅತ್ಯಂತ ಮಹತ್ವದ ಸ್ಥಾನವಿರುತ್ತದೆ. ಪ್ರಯಾಣ, ಸಾರಿಗೆ, ಸಂವರ್ಧಗಳ ವ್ಯವಸ್ಥೆಯನ್ನು ಸ್ವತಂತ್ರ ಹಾಗೂ ಸಮೃದ್ಧವಾಗಿ ಮಾಡಿಕೊಳ್ಳದೆ ಯಾವ ರಾಷ್ಟ್ರವೂ ತಲೆಯೆತ್ತಿ ನಿಲ್ಲಲಾರದು. ವಾಣಿಜ್ಯಕ್ಕೆ ರಾಷ್ಟ್ರಗಳು ರೇಲ್ವೆಗಳ ರಚನೆ ಹಾಗೂ ವಿಸ್ತರಣೆಗಳನ್ನು ತ್ವರಿತವಾಗಿ ಹೆಚ್ಚಿಸಿಕೊಂಡದ್ದೇ ಅವುಗಳ ಅಭಿವೃದ್ಧಿಯ ಮುಖ್ಯಕಾರಣವಾಗಿದೆ. ಸಾಹಿತ್ಯ ಸಂಸ್ಕೃತಿ ಹಾಗೂ ಸಮಾಜ ಜೀವನದ ವಿಕಾಸಕ್ಕೂ ಪ್ರಯಾಣ ಸಾರಿಗೆ ಸಂವರ್ಧಗಳ ಸೌಕರ್ಯಗಳು ಸುಲಭ ಹಾಗೂ ಅನುಕೂಲವಾಗಿರುವುದು ಅತ್ಯಗತ್ಯವಾಗಿರುತ್ತದೆ.

ಭಾರತ ರೇಲ್ವೆಕ್ಷೇತ್ರ ತುಂಬಾ ವಿಶಾಲವಾಗಿದ್ದಿದೆ ಇನ್ನೂ ವಿಶಾಲಗೊಳ್ಳುತ್ತಿದೆ. ರೇಲ್ವೆಗಳಿಗಾಗಿ ಭಾರತ ಸರಕಾರವು ೮೦೦ ಕೋಟಿ ರೂಪಾಯಿಗಳನ್ನು ತೊಡಗಿಸಿರುತ್ತದೆ. ೧೦ ಲಕ್ಷ ಜನರು ಹೊಟ್ಟೆ ತುಂಬಿಕೊಳ್ಳುತ್ತಾರೆ.

ಭಾರತಕ್ಕೆ ಸ್ವಾಯತ್ತತೆ ಸಿಕ್ಕಾಗ್ಗೆ ರೇಲ್ವೆಗಳು ತುಂಬಾ ದುರ್ಬಲವಾಗಿದ್ದವು. ಯುದ್ಧ ಕಾಲದ ಕಾರ್ಯಭಾರದಿಂದ ಸವಕಳಿ ಹೊಂದಿ ದುರಸ್ತಿ ಕಾಣದೆ ಹೀನಸ್ಥಿತಿಗೆ ಇಳಿದಿದ್ದವು. ವಿಭಜನೆಯಿಂದ ಮತ್ತೆ ಹೊಸ ಸಮಸ್ಯೆಗಳು ಉದ್ಭವಿತವಾದವು. ರೇಲ್ವೆ ಸಾಮಗ್ರಿ ಹಾಗೂ ತಾಂತ್ರಿಕರನ್ನು ಹಂಚಿಕೊಳ್ಳಬೇಕಾಯಿತು. ಹೀಗಾಗಿ ಸರಕಾರವು ಹೊಸ ತಾಂತ್ರಿಕರನ್ನು ತರಬೇತುಗೊಳಿಸಬೇಕಾಯಿತು. ಇದು ಇಷ್ಟಕ್ಕೆ ಮುಗಿಯದೆ ನಿರಾಶ್ರಿತರ ಸಮಸ್ಯೆಯು ಮುಂದೆ ಬಂದು ನಿಂತಿತು. ದಿನವೂ ಇಕ್ಕಡೆಗಳಿಂದ ನಿರಾಶ್ರಿತರ ಸಾಗಾಟ ಹೆಚ್ಚಿತು. ಕೇವಲ ೨॥ ತಿಂಗಳಲ್ಲಿ ೬೦ ಲಕ್ಷ ನಿರಾಶ್ರಿತರನ್ನು ರೇಲ್ವೆಗಳಿಂದ ಸಾಗಿಸಲಾಯಿತು. ಸಾಮಾನ್ಯವಾಗಿ ಈ ಕೆಲಸಕ್ಕಾಗಿ ಒಂದು ಸಾವಿರ ಪ್ಯಾಸೆಂಜರ ಗಾಡಿಗಳಾದರೂ ಹಿಡಿಯಬಹುದಾಗಿತ್ತು ಆದರೆ ಈ ಅದ್ಭುತ ಕಾರ್ಯವನ್ನು ವೇಗ ಸಂಘಟನೆಗಳಿಂದ ಸಾಧಿಸಲಾಯಿತು. ಜಗತ್ತಿನಲ್ಲಿಯೇ ಇದೊಂದು ಅದ್ಭುತ ಕಾರ್ಯ ಸಿದ್ಧಿಯಾಗಿತ್ತು. ಈ ನಿರಾಶ್ರಿತರ ಸಮಸ್ಯೆಯಿಂದಾಗಿ ದೇಶದ ಇತರ ಭಾಗಗಳಲ್ಲಿ ರೈಲುಗಳ ಕೊರತೆಯಾಗಿ ತೀರ ತೊಂದರೆಯುಂಟಾಯಿತು.

ಕರಾಚಿ ನಗರವು ಪಾಕಿಸ್ತಾನಕ್ಕೆ ಹೋದದ್ದರಿಂದ ವ್ಯವಹಾರ ಹಾಗೂ ಪ್ರಯಾಣಗಳು ಮುಂಬೈ ನಗರದ ಮುಖಾಂತರವಾಗಿ ನಡೆಯಹತ್ತಿದವು. ಆದರೆ ನಿರಾಶ್ರಿತರ ಸಾಗಾಟದಿಂದಾಗಿ ಎಲ್ಲ ರೈಲುಗಳ ಬ್ಲೂ ಜನದಟ್ಟಣೆ ತೀರ ಹೆಚ್ಚಿತು:- ಈ ವಿಷಮ ಸ್ಥಿತಿಯ ಪರಿಹಾರಕ್ಕಾಗಿ ದಿಲ್ಲಿ, ಮಥುರಾ ಮಾರ್ಗದಲ್ಲಿ ೪೫ ಮೈಲುಗಳಷ್ಟು ಡಬಲ್ ಲೈನ್ ಹಾಕಬೇಕಾಯಿತು. ಇದಕ್ಕಾಗಿ ೧ ಕೋಟಿ ೧೦ ಲಕ್ಷ ರೂಪಾಯಿಗಳ ವೆಚ್ಚ ತಗುಲಿತು. ಮತ್ತು ೧೯೪೯-೫೦ ಡಿಸೆಂಬರ ತಿಂಗಳಲ್ಲಿ ೧೪ ಕೋಟಿ ರೂಪಾಯಿಗಳ ವೆಚ್ಚ ತಗುಲಿಸಿ ೧೪೨ ಮೈಲುಗಳ ಅಸ್ಸಾಮ-ಭಾರತ ರೈಲ್ವೆಯನ್ನು ನಿರ್ಮಿಸಲಾಗಿದೆ. ಈ ಅದ್ಭುತ ಕಾರ್ಯವನ್ನು ಕೇವಲ ಎರಡೇ ವರ್ಷಗಳಲ್ಲಿ ಸಾಧಿಸಲಾಗಿದೆ.

೧೯೪೭ರಲ್ಲಿ ವಿನಿಯಂತ್ರಣವು ಜಾರಿಯಲ್ಲಿ ಬಂದಕೂಡಲೇ ರೈಲ್ವೆಗಳ ಸಾಗಾಟದ ಮೇಲೆ ಕಾರ್ಯಭಾರ ಹೆಚ್ಚಾಯಿತು. ಆಗ ಕಬ್ಬಿಣ ಹಾಗೂ ಕಲ್ಲಿದ್ದಿಲಿಗಳ ಸಾಗಾಟಕ್ಕೆ ಅತಂಕವಾಗಿ ಲಭ್ಯಮಕ್ಕೆ ಧಕ್ಕೆಯಾಗದಂತೆ ನೋಡಿಕೊಳ್ಳಲು ಕೇಂದ್ರ ಸಾರಿಗೆ ಮಂಡಳವನ್ನು ರಚಿಸಲಾಯಿತು. ಹಾಗೂ ಸಾರಿಗೆಯ ಕಾರ್ಯಕ್ಷಮತೆಯನ್ನು ಹೆಚ್ಚಿಸಿ ಅಧಿಕ ಆದಾಯ ಪಡೆಯಲು ಯತ್ನಿಸಲಾಯಿತು.

ಯುದ್ಧ ಕಾಲದಲ್ಲಾದ ಸವಕಳಿಯನ್ನು ತುಂಬಿಕೊಳ್ಳಲು ವಿದೇಶಗಳಿಂದ ಯಂತ್ರಸಾಮಗ್ರಿಗಳನ್ನು ಆಯತಗೊಳಿಸಲಾಯಿತು. ಭಾರತ ರೇಲ್ವೆಯಲ್ಲಿ ಸ್ವಾವಲಂಬನೆಯನ್ನು ಸಾಧಿಸಲು ಚಿತ್ತರಂಜನ ಲೋಕೊಮೋಟಿವ್ ಕಾರಖಾನೆಯನ್ನು ಸ್ಥಾಪಿಸಲಾಯಿತು. ಇದು ೨೦೦ ಇಂಜನು ಹಾಗೂ ೫೦ ಹೆಚ್ಚಿನ ಬಾಯಿಲರುಗಳನ್ನು ತಯಾರಿಸುವುದು-ಇದು ೧೯೫೬ರಲ್ಲಿ ಪೂರ್ಣ ಕಾರ್ಯಕಾರಿಯಾಗುವುದು.

೧೯೪೮-೪೯ರಿಂದ ರೇಲ್ವೆ ಪ್ರಯಾಣಿಕರ ಸಂಖ್ಯೆಯು ಹೆಚ್ಚಾಗಿದ್ದು ಪ್ರಯಾಣವು ಕಾಪಡಾಯಕವಾಗಿರುತ್ತದೆ. ಈ ಪರಿಸ್ಥಿತಿಯ ನಿವಾರಣೆಗಾಗಿ ಹಿಂದುಸ್ತಾನ ನಿರ್ಮಾಣ ಕಾರ್ಖಾನೆಯಲ್ಲಿ ಹೊಸರೇಲ್ವೆ ಡಬ್ಬಿಗಳನ್ನು ಕಟ್ಟುವ ಕೆಲಸವನ್ನು ವ್ಯಾಪಕವಾಗಿಸಲಾಗಿದೆ. ಈ ವರ್ಷವೇ ೬೦೦ ಡಬ್ಬಿಗಳು ಸಿದ್ಧವಾಗಲಿವೆ. ಇದಲ್ಲದೆ ರೇಲ್ವೆ ಡಬ್ಬಿಗಳನ್ನು ತಯಾರಿಸುವ ಕಾರಖಾನೆಯನ್ನು ಸ್ಥಾಪಿಸುವ ಬಗ್ಗೆ ಒಂದು ಸ್ವಿಸ್ ಫರ್ಮಿನೊಡನೆ ಕರಾರು ಮಾಡಿಕೊಳ್ಳಲಾಗಿರುತ್ತದೆ

ಈ ಎಲ್ಲ ಪ್ರಯತ್ನಗಳಲ್ಲಿ ಸರಕಾರವು ೩ನೇ ವರ್ಗದ ಪ್ರಯಾಣಿಕರ ಸೌಕರ್ಯ ಸೌಲಭ್ಯಗಳಿಗಾಗಿ ವಿಶೇಷ ಸ್ಥಾನ ಕೊಟ್ಟಿರುತ್ತದೆ. ೧೯೪೯ರ ಕೊನೆಯೊಳಗಾಗಿ ೧೩೦ ಹೊಸ ಗಾಡಿಗಳನ್ನು ಸ್ಟ್ಯಾರಂಭಿಸಲಾಯಿತು. ಇನ್ನೇ ವರ್ಷದ ಪ್ರಯಾಣಿಕರ ಸೌಕರ್ಯಗಳಿಗಾಗಿ ಸರಕಾರವು ೫ ವರ್ಷಗಳಲ್ಲಿ ೧೫೫ ಕೋಟಿ ರೂಪಾಯಿ ವೆಚ್ಚ ಮಾಡಲಿದೆ.

ಇಷ್ಟೆಲ್ಲ ವೆಚ್ಚದ ಭಾರವನ್ನು ಹೊತ್ತು ಸರಕಾರವು ತೀರ ಅಲ್ಪಾವಧಿಯಲ್ಲಿ ಇಷ್ಟು ಸೌಕರ್ಯಗಳನ್ನು ಒದಗಿಸಿರುತ್ತದೆ. ಈ ವ್ಯವಸ್ಥೆಗಾಗಿ ಹಣ ಒದಗಿಸಲು ರೇಲ್ವೆ ದರಗಳನ್ನು ಹೆಚ್ಚಿಸಲೇಬೇಕಾಯಿತು. ರೇಲ್ವೆ ದರಗಳ ಭಾರವು ಕೆಳವರ್ಗದ ಪ್ರಯಾಣಿಕರ ಮೇಲೆ ವಿಶೇಷವೇನಿದೆ ಮೇಲ್ವರ್ಗದ ಪ್ರಯಾಣಿಕರ ಮೇಲೆ ಹೆಚ್ಚು ಬೀಳುವಂತೆ ಲಕ್ಷ ವಹಿಸಲಾಗಿದೆ.

Our Cumulative Deposit Scheme

A Cumulative Deposit is a very Convenient plan for making compulsory provision for old age, for children's education, marriage of daughters etc. etc. It can also be opened in the name of a minor. There are various choices as regards period of deposit and monthly instalment and you can make your own choice. Our officers will be glad to give you full particulars.

The Canara Industrial & Banking Syndicate Ltd.

Estd: 1925. H. O: UDIPI.

ಗಮನಿಸಿರಿ! ಪರೀಕ್ಷಿಸಿ ನೋಡಿರಿ!! ಸುಖಪಡೆಯಿರಿ!!

ನಿಮ್ಮ ಮೇಲ್ಮೈಗಾಗಿ ಲಕ್ಷಿಸಿರಿ

ಹೆಚ್ಚು ಹೇಳುವದೇನಿದೆ? ಹಸಿವೆ ಇಲ್ಲದಿದ್ದರೂ, ಜೀರ್ಣಶಕ್ತಿ ಸಂಪೂರ್ಣವಾಗಿ ಹೋಗಿದ್ದರೂ, ದೇಹವು ಬಹಳವಾಗಿ ಕ್ಷೀಣಿಸಿ ಮೂಳೆ (ಎಲುಬು) ಚರ್ಮಗಳು ಕಾಣುವ ಹಾಗಿದ್ದರೂ, ಕಣ್ಣುಗುಳಿಗಳು ಬಿದ್ದಿದ್ದು ಹಿಂದಲೆಯನ್ನು ಹೋಗಿ ಸೇರಿದ್ದರೂ, ಬಲ, ಚಟುವಟಿಕೆ, ಧೈರ್ಯ ಇವುಗಳು ಇಲ್ಲದೆ ಹೋದರೂ, ಕುಳ್ಳವು, ಇಂಪ್ರಿಟೆನ್ಸು, ಪೂರ್ತಿಯಾಗಿ ನಿರಾಶ ಹೋಗಿದ್ದರೂ, ಮೇಲ ವ್ಯಾಧಿಗಳೇ ಮೊದಲಾದ ವ್ಯಾಧಿಗಳಿಂದ ನರಳುತ್ತಿದ್ದರೂ ನಮ್ಮ "ಮನ್ಮಥ ಬಂಗಾರವನ ಲೇಹ್ಯ" ಸೇವನೆಯಿಂದ ಸಂಪೂರ್ಣ ಸುಖದೊರೆಯುವುದು. ಅಲ್ಲದೆ ಅರೋಗ್ಯಭಾಗ್ಯವನ್ನೂ ಪಡೆಯಬಹುದು. ಇಂತಹ ಜೀವದಾಯಕವಾದ ಅಮೃತಕಾಯಕಲ್ಪವಾದ ರಸಾಯನವು.

ಬೆಲೆ ೨ ತೊಲೆಯ ಡಬ್ಬಿಗೆ ರೂ. 2-8-0

ವಂಚಿಪುಳಾಳ್ ಮೆಡಿಕಲ್ ಹಾಲ್
ತಿರುವನಂತಪುರಂ-
(TRIVANDRUM)

ಪ್ರಜಾಸತ್ತೆ

ಪ್ರಜಾಮತ ಸಂಗ್ರಹದಿಂದಲೇ ಕಾಯಿದೆ ಕಾನೂನುಗಳು!

ಚುನಾವಣೆಗಳಿಂದಲೇ ಸರಕಾರದ ಅಳಿವು ಉಳಿವುಗಳು!

[ಹಿಂದಿನ ಸಂಚಿಕೆಯಿಂದ ಮುಂದುವರಿದುದು]

ಪ್ರಜಾಮತ ಸಂಗ್ರಹದಿಂದ ಜನರುನೆಟ್ಟಿಗೆ ಕಂಯಿದೆ ಮಸೂದೆಗಳನ್ನು ತಯಾರಿಸುವುದರ ಕುರಿತ ಕೆಲವರು ಆಕ್ಷೇಪ ಸೂಚಿಸುವರು ಪ್ರಜಾಮತ ಸಂಗ್ರಹವಿರುವ ರಾಷ್ಟ್ರಗಳೆ ರಷ್ಯವೇ ನಿನಗೆ ನಮಸ್ಕಾರವೆಂದು ಮಾರ್ಕ್ವಿಸ್ ಡಿಸಾಸೆ (Marquis De Puisieux ಎಂಬ ಫ್ರೆಂಚ್‌ರಾಯ ಭಾರಯು ಸ್ವಿಡ್‌ಲೆಂಡಿನಿಂದನಿವೃತ್ತಿಹೊಂದಿ 170ನೆ ಇಸವಿಯಲ್ಲಿ ಹೋಗುವಾಗ ಹೇಳಿರುವನು. ಈತನ ಸ್ಥಾನಕ್ಕೆ ನೇಮಕಟ್ಟಿ ಕೋಮ್ಟು ಡುಲೂಕ್ (Comte duluo)ಎಂಬವರು ಸರ್ ಹದಿನಾಲ್ಕನೆ ಲೂವಿಯವರ (Louisxiv) ಮಂತ್ರಿ ಎಂ. ಡಿ. ಚಮಿಲ್ಲಾರ್ಡ್‌ರಿಗೆ (M- D-Chamillard)ರಿಗೆ ಬರೆದ ಪತ್ರದಲ್ಲಿ ಸಹಾ ಇದೇ ತರದ ವಿರೋಧ ಸೂಚಿಸಿರುವರು ಜನರೆಲ್ಲರೂ ಒಟ್ಟುಕೂಡಿ ಸಭೆಸೇರಿ ಚರ್ಚೆಮಾಡಿ ಯಾವ ತೀರ್ಮಾನಕ್ಕೂ ಬಾರದೆ ಬಿಜಯಂ ಗೈದರು. ಇದನ್ನು ಪ್ರಜಾಮತ ಸಂಗ್ರಹವೆಂದು ಈ ಜನರು ಹೇಳುವರು. ತವ್ಮ ಮನದೊಳವನ್ನು ತಮಗೆ ತಿಳಿಯಲಾರದ ತಪ್ಪು ಹೆಜ್ಜೆಯನ್ನೂ ಬೇರೆಲ್ಲಿಯೂ ಕಾಣಲಾರೆನು. ಆ ಕಾಲದಲ್ಲಿ ಪ್ರಜಾಮತ ಸಂಗ್ರಹವು ಬಹಳ ಹೀನ ಸ್ಥಿತಿಯಲ್ಲಿತ್ತು. ಮತ್ತು ಸ್ವಲ್ಪ ವಿಷಯಗಳಲ್ಲಿ ಮಾತ್ರ ವಿದ್ದಿತು. ವಿದೇಶಗಳ ವ್ಯವಹಾರದ ಕುರಿತು ಕ್ಯಾಂಟನ್ನು ತೀರ್ಮಾನಕ್ಕೆ ಬಿಡುವುದರ ಕಾರಣ ಯಾವ ತೀರ್ಮಾನವನ್ನು ಮೊದಲಾಗಿ ಮಾಡುವದಿಲ್ಲ. ಈಗಿನ ಕಾಲದಲ್ಲಿ ಅನೇಕ ಬದಲಾವಣೆಗಳು ನಡೆದಿವೆ ಮುಖ್ಯ ಕಾನೂನುಗಳೆಲ್ಲಾ ಪ್ರಜಾಮತ ಸಂಗ್ರಹದಲ್ಲಿ ಊರ್ಜಿತಗೊಳ್ಳುವದು ಇಲ್ಲವೆ ರದ್ದಾಗುವದು. ಎಂ. ಎಸ್ಮೀನ್ (Esmeen)ಎಂಬ ಫ್ರೆಂಚ್ ಬರಹಗಾರರು. ಈ ಕುರಿತು ಹೀಗೆಂದಿರುವರು ತತ್ವ ಮತ್ತು ಆಚರಣೆ ಎರಡರಲ್ಲೂ ಪ್ರಜಾಮತ ಸಂಗ್ರಹವು ಕೆಟ್ಟಿದ್ದು. ಜನರು ವಿದ್ಯಾಹೀನರಾದರಿಂದ ಮತ್ತು ಪೂರಸೊತ್ತುಯಿಲ್ಲದ ಕಾರಣ ಕಣ್ಣುಮುಚ್ಚಿ ಮತಕೊಡುವರು ಇಲ್ಲವಾದರೆ ಎಷ್ಟು ಒಳ್ಳೆ ಮಸೂದೆಯಾದರೂ ಒಂದಲ್ಲ ಒಂದು ಆಂಶವು ಆಹಿತವಾದ್ದಾದರೆ ಇಡೀ ಮಸೂದೆಯನ್ನೇ ತಿರಸ್ಕರಿಸುವರು. ಅಥವಾ ಇಡಿ ಮಸೂದೆಯನ್ನೇ ಮತಗಣನೆಗೆ ಇಡುವದಾದ್ದಾರಿಂದ ಒಳ್ಳೇದಿರಲಿ ಕೆಟ್ಟದ್ದಿರಲಿ ಒಪ್ಪಬೇಕಾಗುತ್ತದೆ. ಸಂಧಾನಗಳಿಗೆ ಮತ್ತು ಹೊಸ ಕಾನೂನುಗಳಿಗೆ ತಡೆಯೂಗುವವು ಸ್ವಿಡ್‌ಲೆಂಡಿನಲ್ಲಿ ಕೆಟ್ಟದ್ದಾಗದಿದ್ದರೂ ಹಲವು ಒಳ್ಳೇದಾಗ ವದನ್ನು ನಿಲ್ಲಿಸಿರುವರು. ಪ್ರತಿನಿಧಿ ಸರಕಾರವನ್ನು ತೀರುಮಟ್ಟಿಕ್ಕೆ ತರುವದು ಮತ್ತು ಅದರ ಗೌರವ, ಅಧಿಕಾರ ಮತ್ತು ಜವಾಬ್ದಾರಿಕೆಯನ್ನು ಕಡಮೆ ಮಾಡುವದು ತಿಳಿವಳಿಕೆ ಹೀನರಾದ ಮತದಾರರ ತೀರ್ಮಾನಕ್ಕೆ ಒಪ್ಪಿಸುವದೆ ಜವಾಬ್ದಾರಿಕೆಯ ಎಳ್ಳವರಿಂದ ಬೇಜವಾಬ್ದಾರಿಗೆ ವೋರಿಯಿಡುವದಾ ದೆ. ಜ್ಞಾನಿಗಳಿಂದ ಅಜ್ಞಾನಿಗಳಿಗೆ ಪುನರ್‌ವಿಚಾರಣೆ ಬಿಟ್ಟಿ ಪರುವುದಾಗಿದೆ. (Appeal from the Responsible to the irresponsible from Knowledge to ignorence) ಉಪಕ್ರಮದಲ್ಲಿ ತಯಾರಾಗುವ ಮಸೂದೆಗಳ ಕಡಮೆ ಶಾಸನಸಭೆಯ ಟೀಕೆ ಮತ್ತು ವಿವರ್ಶೆ ಒಳಪಡದೆ ಇರುವುದರಿಂದ ನ್ಯೂನತೆಗಳಿರುವವು. ವಿಚಾರವಿಲ್ಲದೆ ಜಡ್ಡುಹಿಡ್ಡಿಯಾಗಿ ಒಪ್ಪುವುದು ಅನುಮಾನಕರವೆಂಬುವದು ಸ್ವಾರ್ಥ ಪರರಾದ ಪಕ್ಷಗಳು ಉದ್ರೇಕದಿಂದ ಮತ್ತು ಪ್ರೇಶಂಕೆ ಮುಂದಾಳುಗಳು ಸ್ವಲ್ಪ ಜನರಿಗೆ ಸೌಕರ್ಯ ಒದಗಿಸಿ ಕೊಡುವುದಾಗಿ ಜನರನ್ನು ಮೋಹಗೊಳಿಸಿ ಭರವಸೆ ಕೊಟ್ಟು ಬಳಿದುಕೊಳ್ಳುವಂಥ ಕ್ಯಾಂತಿಕಾರಕ ಬದಲಾವಣೆಗಳನ್ನು ತರಬಹುದು. ಇದು ಉಪಕ್ರಮದಿಂದಲೇ ಬಂದದ್ದಾದರೆ ನಂತರ ಪಶ್ಚಾತ್ತಾಪ ತೋರಿಸುವದುನ್ಯರ್ಥ ಇದನ್ನು ರದ್ದುಮಾಡಲು ಪ್ರಯತ್ನ ಮಾಡಿದರೆ ಕಷ್ಟ.

ಎಂ. ಎಸ್ಮೀನ್ (M. Esmein) ಹೇಳುವದು ಪೂರ್ಣ ಅಲ್ಲಗಳೆಯಲು ಬರುವದಿಲ್ಲ. ಪ್ರಜಾಮತ ಸಂಗ್ರಹದಲ್ಲಿ ಕೆಟ್ಟದ್ದಾಗುವದಕ್ಕಿಂತ ಒಳ್ಳೇದಾಗುವದೆಂಬ ಜಾಸ್ತಿ. ಪ್ರಜಾಸತ್ತೆಯು ವೃದ್ಧಿಯಾದಹಾಗೆ ಶಾಸನಸಭೆಯವರು ಮಸೂದೆಯ ಕರಡನ್ನು ತಯಾರಿಸುವವರಿಗಿಂತಲು ಮತದಾರರಿಗೆ ಕೆಟ್ಟಿನ ಅಧಿಕಾರ ಬರುತ್ತ ಇದೆ. ಅಲ್ಪ ಸಂಖ್ಯಾಕರು ತಾವೇ ಜನರನ್ನು ಪ್ರತಿನಿಧಿಸುವರೆಂದು ಕೂಗೆಬ್ಬಿಸುವರು ಆಗಾಗ ಅದು ಹೌದೋ ಅಲ್ಲವೋ ಎಂದು ತಿಳಿಯಲು ದಾರಿಯಾಗಿದೆ. ಪ್ರಜಾಮತ ಸಂಗ್ರಹವು ಕ್ರಾಂತಿಯನ್ನು ತಡೆಗಟ್ಟುವದು. ಕಂಡಾಬಟ್ಟೆ ವರ್ತುವಿಕೆಯನ್ನು ಆವರಿಸಿದ ಕಾಯಿದೆಗಳ ಗದಂತೆ ನೋಡಿದೆ. ಜನರಿಂದ ನಿಂದಿಸಲ್ಪಡತಕ್ಕ ಹೆಲವಾರು ಕಾಯಿದೆಗಳಿರುವುದಕ್ಕಿಂತ ಮಾನ್ಯತೆ ಪಡೆಯುವ ಸ್ವಲ್ಪ ಕಾನೂನುಗಳಿರುವುದೇ ಒಳ್ಳೆದು. ರಾಜಕೀಯ ವಿಚಾರದಲ್ಲಿ ಇದು ಅನುಭವ ಕೊಡುವ ದಾರಿಯಾಗಿದೆ. ಮತಸೇಗ್ರಹದ ಸವ.ಯ ಎದುರು ಬಂದ ಪ್ರಶ್ನೆಯ ಕುರಿತು ಬೇಕುಬೇಕಾದ ಅನುಭವ ಪಡೆಯುವರು ಕಾಯಿದೆಗಳ ಸೂಕ್ಷ್ಮತೆ ತಿಳಿಯಲಾಗ್ಯವಾದರೂ ವಿಷಯಗಳ ಅನುಭವ ಪಡೆಯುವದು. ಕೆಲವು ಸಮಯ ಅರಿವಾಹಿ ಜನರು ಮತಗಟ್ಟಿಗೆ ಉದಾಸೀನರಾಗಿ ಹೋಗುವುದಿಲ್ಲ ಅವರು ಸಹ ಬಹಿರಂಗವಾಗಿ ನಡೆಯುವ ಚರ್ಚೆಯಿಂದ ಪ್ರಯೋಜನ ಪಡೆಯುವರು. ಪ್ರಜಾಮತ ಸಂಗ್ರಹವೆಂಬುದು ವಾಯು ಭಾರ ಮಾಪಕ ಯಂತ್ರ (Barometer) ದಂತಿರುವದು. ಚುನಾವಣೆಯ ಸಮಯವಲ್ಲ ಇತರ ಸಮಯಗಳಲ್ಲಿ ಸಾರ್ವಜನಿಕ ವಿಷಯಗಳ ಕುರಿತು ಜನಮತವು ಹೇಗಿದಾವೆಂದು ತಿಳಿಯಲು ಅವಕಾಶ ಕೊಡುವದು ಶಾಸನ ಸಭೆಯವರು ಜನರ ಒಲವನ್ನು ತಿಳಿದು ಅವರ ಮತಕ್ಕೆ ವಿರೋಧವಾದ ಯಾವ ವಿಚಾರವೂ ಮುಂದೆ ಬಾರದಂತೆ ಜಾಗರೂಕತೆ ವಹಿಸುವರು. ಪ್ರಜಾಮತ ಸಂಗ್ರಹ ವಿರುವಲ್ಲಿ ವರ್ಗ ಮತ್ತು ಪಂಗಡಗಳಿಗೆ ತವ್ಮ ಬೇಳೆ ಬೇಯಿಸಲು ಎಡೆ ಕಡಿಮೆ. ಕಾಯಿದೆಗಳಿಗೆ ಜನರ ಮನ್ನಣೆ ದೊರೆತು ಹೆಚ್ಚ ಶಕ್ತಿ ಬರುವದು. ಜನರ ತೀರ್ಮಾನವೇ ಅಜೈರಿ ತೀರ್ಮಾನವಾದ್ದರಿಂದ ಪುನರ್ವಿಚಾರಣೆಯಿಲ್ಲದ ಕಂಡಾಬಟ್ಟೆ ವರ್ತನೆಗಳು ನಿಂತು ಬಿಡುವವು (controversy is stilled) ಪ್ರತಿನಿಧಿ ಸಭೆಯಲ್ಲಿ ಅಂಗೀಕೃತವಾದ ಮಸೂದೆಗಳು ಪ್ರಜಾಮತ ಸಂಗ್ರಹವಿರುವಲ್ಲಿ ಜನರ ಮುಂಜಾಗರೂತೆಯ ಬಗ್ಗೆ ಬರುವದಾದುದಿಂದ ಕೆಟ್ಟ ಇಂಗಿತೆಯ ಸ್ವಾರ್ಥಪರ ಮತ್ತು ಪ್ರಪ್ಪಂಚದ ಕಾರ್ಯಗಳಿಗೆ ಅವಕಾಶ ದೊರೆಯುವದು ಕಷ್ಟ. ಪಾರ್ಲಿಮೆಂಟಿಗೆ ಪದ್ಧತಿ ಪ್ರಕಾರ ಮಂತ್ರಿಗಳು ತಂದ ಮುಖ್ಯ ಮಸೂದೆಗಳು ಬಿದ್ದುಹೋದರೆ ಅವರು ರಾಜಿಕೊಡುವ ಪ್ರಸಂಗ ಬರುವದು ಕೆಲವು ಸಮಯ ಹೊಸ ಚುನಾವಣೆಯಾಗುವ ಸಂಭವ ಜಾಸ್ತಿ. ಪ್ರಜಾಮತ ಸಂಗ್ರಹವಿರುವಲ್ಲಿ ರಾಜನೇ ಮತಗಣನೆಯಲ್ಲಿ ಬಿದ್ದುಹೋದರೂ ಮಂತ್ರಿಗಳು ರಾಜಿ ಕೊಡಬೇಕೆಂದಿಲ್ಲ. ಬಹು ಪಕ್ಷೀಧವರು ಕೆಲವು ಸಲ ತವ್ಮ ಬೆಂಬಲವನ್ನು ಮಂತ್ರಿಮಂಡಲಕ್ಕೆ ಕೊಡುವದಿಲ್ಲವೆಂಬ ಗದರಿಕೆಯಿಂದ ಅವರಿಗೆ ಬೇಕಾದ್ದನ್ನು ಮಾಡುವರ. ಬಹು ಪಕ್ಷಗಳಿರುವಲ್ಲಿ ಕೆಲವು ಸಮಯ ಬಹುಮತವನ್ನು ಪಡೆಯುವರೆಗೂ ಒಡಂಬಡಿಕೆ ಮಾಡಿಕೊಂಡು ಹಿತವಿಲ್ಲದ ರಿಯಾಯಿತಿಯನ್ನು ತೋರಿಸುವರು. ಪಕ್ಷಗಳು ತಮಗೆ ಸಿಕ್ಕುವ ಇತರ ಪ್ರಯೋಜನದ ಆಶೆಯಿಂದ ಮನಸ್ಸಿಲ್ಲದ ಕೆಲವು ಮಸೂದೆಗಳಿಗೆ ಸಮ್ಮತಿ ಕೊಡುವರು.

[ಮುಂದಿರಲಿರುವುದು]

ಸಿ. ಎಚ್. ಶೆಟ್ಟಿ. ಬಿ ಎ

TEL: 40592

WATSONS AERATED WATERS

14 Parel Road, Cross Lane, BOMBAY 12

ಎಲ್ಲಾ ತರದ ಸೋಡಾ ಮತ್ತು ಇತರ ಪಾನೀಯಗಳನ್ನು ಆರೋಗ್ಯ ಶಾಸ್ತ್ರ ರೀತಿಯಲ್ಲಿ ಅತ್ಯಾಧುನಿಕ ವಿದ್ಯುಶ್ಚಕ್ತಿಯ ಯಂತ್ರಗಳ ಮೂಲಕ ತಯಾರಿಸುವೆವು

ನಗರದ ಎಲ್ಲಾ ಭಾಗಗಳಲ್ಲಿಯೂ ನಮ್ಮ ಪಾನೀಯಗಳು ಸುಲಭ ದರದಲ್ಲಿ ದೊರೆಯುವುವು.

ಪ್ರಗತಿಹೊಂದುತ್ತಿರುವ ಕನ್ನಡಿಗರ ಮಹಾಸಂಸ್ಥೆ.

ವಾಟ್ಸನ್ಸ್ ಎರೇಟೆಡ್ ವಾಟರ್ಸ್,

14, ಪರೇಲ್ ರೋಡ್, ಕ್ರೋಸ್ ಲೇನ್, ಬೊಂಬಾಯಿ 12.

(ಟೆಲಿಫೋನ್ 40592)

ರಾಮತೀರ್ಥ ಬ್ರಾಹ್ಮಿ ತೈಲ

ಸ್ಪೆಶಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತಿನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತವೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತವೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ತಂಪು ಕೂಲವಿದೆ ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿನ ಕ್ರಯಃ ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,

ಧಾರವಾಡ (ಜಿ. ವಿ. ಪಿ.) ಮುಂಬಯಿ, ಇಳಿ

ಲಕ್ಷ್ಮೀ ಸೆಂಟಾಲ್ ಮಾತ್ರೆ

ಇದರ ಉಪಯೋಗದಿಂದ ಬಹುಕಾಲದ ಮೇಹ, ಪ್ರಮೇಹ, ಮೂತ್ರದ ಉರಿ, ಮೂತ್ರ ಕೃಚ್ಛ್ರ, ಮೂತ್ರದೊಡನೆ ಯಾಮುಂದಾಗಿ ಬಿಳುವು, ಹರಸಿನ, ಕೆಂಪುಈ ವರ್ಣಗಳಲ್ಲಿ ಕೀವು ಹೋಗುವುದು,ತೊಡೆ ಸಂದಿನಲ್ಲಿ ನೋವು, ಕಾಲ ಗಂಟುಗಳಲ್ಲಿ ವೇದನೆ, ಕಣ್ಣಿನಲ್ಲಿ ಕೀವು ಬರುವುದು, ಶರೀರದಲ್ಲಿ ಉಷ್ಣತೆ, ಸ್ಪಷ್ಟೇಂದ್ರಿಯ ಇವೆಲ್ಲಾ ಪಾತ್ರಿಯಾಗಿ ಗುಣಹೊಂದುವುದು

ಡಬ್ಬಿ ಒಂದಕ್ಕೆ ರೂ. ೭—೦—೦

ಏಜಂಟ್ರು—

ಶಾ ಕಂಪೆನಿ, ಮಂಗಳೂರು.

ಕೊರಡ್ಕಲ್ ಶ್ರೀನಿವಾಸರಾವ್
ವಿರಚಿತ

ಸುಲಭದಲ್ಲಿ ಇಂಗ್ಲಿಷ್

ಆಂಗ್ಲ ಸ್ವಯಂಬೋಧಿನಿ.

ಬೆಲೆ ರೂ. 1 8 0

ನವಭಾರತ ಪುಸ್ತಕ ಭಂಡಾರ, ಉಡುಪಿ.

ಚುನಾವಣೆಯಲ್ಲಿ ಜನತೆಯ ಪಾತ್ರ

ಚುನಾವಣಾ ಫಲಿತಾಂಶದಿಂದ ವಿರೋಧಿ ಪಕ್ಷಗಳ ಸತ್ವಪರೀಕ್ಷೆ— ಸತ್ವಾತ್ರಕ್ಕೇನೇ ಜನತೆಯ ಮತದಾನ

ನಮ್ಮ ದೇಶದ ಬೇರೆ ಬೇರೆ ಕಡೆಗಳಲ್ಲಿ ಚುನಾವಣೆಗಳಾರಂಭವಾಗಿದ್ದು ಫಲಿತಾಂಶಗಳು ಈಗಾಗಲೇ ಪ್ರಕಟಗೊಂಡಿರುತ್ತವೆ. ಚುನಾವಣೆಯು ಅತ್ಯಂತ ಯೋಗ್ಯ ರೀತಿಯಲ್ಲಿ ನಡೆಯತಕ್ಕದ್ದೆಂಬ ಭಾರತ ಸರಕಾರದಭಿಲಾಷೆಯ ಉದ್ದೇಶವು ಕಾರ್ಯರೂಪದಲ್ಲಿ ಬಂದಿರುವದಾದರೂ ಜನತೆಯು ತನ್ನ ಮತದಾನದ ದೆಲೆಯನ್ನು ಚೆನ್ನಾಗಿ ಅಂತು ಮತದಾನ ಮಾಡಿದೆಯೇ? ಅನಕ್ಷರಸ್ಥರೂ, ಅಶಿಕ್ಷಿತರೂ ಲವಲೇಶವಾದರೂ ರಾಜಕೀಯ ಜ್ಞಾನವಿಲ್ಲದವರೂ ತಾವು ಮತದಾನ ಮಾಡಿದ ವಿಚಾರಗಳಲ್ಲಿ ಅದರ ಮಹತ್ವವನ್ನರಿತಿದ್ದಾರೆಯೇ? ಎಂಬುದನ್ನು ನಾವು ವಿವೇಚಿಸಬೇಕಾಗಿದೆ

ಹಿಮಾಚಲ ಪ್ರದೇಶ, ತಿರುವಾಂಕೂರ ಕೊಚ್ಚಿನ-ಮದ್ರಾಸ- ಮುಂಬಯಿ- ಹೈದರಾಬಾದ- ಒರಿಸ್ಸಾ- ಮಧ್ಯ ಪ್ರದೇಶ ಮುಂತಾದ ಕಡೆಗಳಲ್ಲಿ ಚುನಾವಣೆಗಳು ಭರದಿಂದ ನಡೆದಿವೆ. ಎಲ್ಲ ಕಡೆಯಲ್ಲೂ ಜನ ಉತ್ಸುಕತೆಯಿಂದಲೂ ಪ್ರಯತ್ನ ಪೂರ್ವಕವಾಗಿಯೂ ಇದರಲ್ಲಿ ಭಾಗ ವಹಿಸಿದ್ದು ಕಂಡು ಬಂದಿದೆ. ಈ ಉತ್ಸಾಹಕ್ಕೆ ದೇಶಾಭಿಮಾನ- ಪಕ್ಷ ಪಂಗಡಗಳ ಒಲವುಗಳು ಕಾರಣವಾಗಿದ್ದಹಾಗೆ ಹುರಿಯಾಳುಗಳ ಒತ್ತಾಯವೂ ಇನ್ನೊಂದು ಕಾರಣವಿರಬಹುದು- ಚುನಾವಣಾ ಪ್ರಚಾರವು ನಾಲಕ್ಕರು ತಿಂಗಳಿನಿಂದ ಆರಂಭವಾಗಿತ್ತಾದರೂ ಮತದಾರರಿಗೆ ಮತದಾನ ಮಾಡುವ ಮುಖ್ಯ ವಿಧಾನವನ್ನು ನಮ್ಮ ಹುರಿಯಾಳು ತಿಳಿಹೇಳಿದ್ದಿಲ್ಲ.ತಮ್ಮ ಗುರುತಿನ ಪೆಟ್ಟಿಗೆಯ ಪರಿಚಯ ಮಾಡಿಕೊಟ್ಟಿರುವರಾದರೂ ಮೊದಲಿಗೆ ಶಾಸನ ಸಭೆಗೆ ಮತದಾನ ಮಾಡಿ ಮತ್ತೆ ಲೋಕ ಸಭೆಗೆ ಮತದಾನ ಮಾಡಬೇಕೆಂಬ ವಿಚಾರ ಹೆಚ್ಚು ಜನಕ್ಕೆ ತಿಳಿದಂತಿಲ್ಲ. ಪ್ರಾದೇಶಿಕ ಕಾಂಗ್ರೆಸ್ ಸಮಿತಿಗಳು ಮುಂಚಿತವಾಗಿ ಮತದಾನ ಮಾಡುವ ವಿಧಾನಗಳನ್ನು ಸ್ಪಷ್ಟವಾಗಿಯೂ ಸವಿವರವಾಗಿಯೂ ಪ್ರಕಟಿಗೊಳಿಸಿದ್ದರೂ ಅದನ್ನು ಮನನ ಮಾಡಿ ಮತದಾನ ಮಾಡಿದವರು ಬಹಳ ಕಡಿಮೆ. ಹಳ್ಳಿಗರಿಗೆ ಪ್ರಾಯಶಃ ಈ ವಿಚಾರ ಗೊತ್ತೇ ಇಲ್ಲವೆಂದರೂ ಒಪ್ಪಬಹುದೇನೋ! ಏಕೆಂದರೆ ಹಲವು ಕಡೆಗಳಲ್ಲಿ ಮತದಾರರು ಶಾಸನಸಭೆಗೆ ಮತವನ್ನು ಹಾಕಿ ನೇರವಾಗಿ ಹೊರಗೆ ಬಂದು ಲೋಕಸಭೆಗೆ ಹಾಕುವದನ್ನು ಮರೆತಿದ್ದಾರೆ. ಇನ್ನು ಹಲವರು ಶಾಸನ ಸಭೆಗೆ ಮತವನ್ನು ಹಾಕಿ ಲೋಕ ಸಭೆಗೆ ಕೊಟ್ಟಿರುವ ಚೀಟಿಯನ್ನು ಮನೆಗೆ ಒಯ್ದು ದ್ದಾರೆ. ಇನ್ನು ಕೆಲವರು ಮತದಾನ ನೀಡುವ ಸೋಟು ರದ್ದುವಾಗಿತ್ತು! ಆದರೆ ಮನೆಯಿಂದ ಮತಗಟ್ಟೆಯ ವರೆಗೆ ಬರುವಾಗ ಅವರು ಜ್ಞಾಪಿಸಿಕೊಂಡು ಬಂದ ಗುರುತು ಮರೆಯುವ ಸಂಭವವೇ ಹೆಚ್ಚು! ಕ್ಯೂವಿನಲ್ಲಿ ನಿಂತು, ನಿಂತು ಯಾವ ಪೆಟ್ಟಿಗೆಗಾದರೂ ಹಾಕಿಬಿಟ್ಟರೆ ಒಂದು ರಗಳೆ ಪರಿಹಾರವಾದಂತಾಯಿತೆಂದು ಅವರು ನಿರ್ಧಾರಕ್ಕೆ ಬಂದಿದ್ದರೆ ಅದರಲ್ಲೇನೂ ಆಶ್ಚರ್ಯಪಡುವ ಅಂಶವಿಲ್ಲ. ಆ ಚೀಟಿನೆವರು ಏನು ಹೇಳುತ್ತಾರೋ ಅದಕ್ಕೇನೇ ತನ್ನ ಮತ ಚೀಟಿಯನ್ನು ಹಾಕಿರಲೂ ಬಹುದು. ಅಂತೂ ಯಾವುದಾದರೂ ಒಂದು ಪೆಟ್ಟಿಗೆಗೆ ಹಾಕಿಬಿಟ್ಟು ಹೊರಗೆ ಬಂದವರೇ ಜಾಸ್ತಿ. ಏಕೆಂದರೇ ಸುರುವಿನಲ್ಲೇ ಅದರ ಜ್ಞಾನವಿಲ್ಲದ ಮೇಲೆ ಹೆಂಗಸರಿಗೆ ಅದರ ಜ್ಞಾನ ಎಲ್ಲಿಂದ ಬರಬೇಕು?

ಈ ಅಂಶಗಳನ್ನೆಲ್ಲ ಲಕ್ಷಿಸುವಾಗ ಪ್ರಜಾಪ್ರಭುತ್ವದ ವಿಶಿಷ್ಟವಾದ ಒಂದು ಪದ್ಧತಿಯು ಪರಿಪೂರ್ಣವಾಗಿಲ್ಲವೆಂದು ಹೇಳಬೇಕಾಗಿದೆ. ಭಾರತ ಸರಕಾರದ ಚುನಾವಣಾ ಪದ್ಧತಿಯು ಪ್ರಜಾಪ್ರಭುತ್ವಕ್ಕೆ ಮುಕ್ತಮಾರ್ಗವಾಗಿರುವದಾದರೂ ಜನತೆಯು ಅದರ ಮಹತ್ವತೆಯನ್ನರಿಯದೆ ಯದ್ವಾತದ್ವಾ ವರ್ತಿಸಿದಲ್ಲಿ ಮೂಲಶಕ್ತವೆ ಕೆಟ್ಟುಂತಾಗಬಹುದು. ಜನರಿಗೆ ಮುಖ್ಯವಾದ ಅಂಶಗಳಲ್ಲಿರುವ ಅಜ್ಞಾನವನ್ನು ಲಕ್ಷಿಸಿದರೆ ರಾಜಕೀಯ ಜ್ಞಾನ ಉಳ್ಳವರಿಗೆ ಇದು ಕೊಂಚ ತಲ್ಲಣವೇ?—ಈ ಜನರ ಕೈಗೆ ಈ ಅಧಿಕಾರ ಇಂತಹ ಸ್ಥಿತಿಯಲ್ಲಿ ಕೊಡುವದು ಸರಿಯೆ? ಎನುವ ವಿಚಾರ ತಳೆಯದೆ ಇರದು.

ಅಂತೂ ಈ ಚುನಾವಣೆಯಲ್ಲಿ ಹಲವು ಲೋಪದೋಷಗಳು ಉಂಡುಬಂದಿದ್ದು, ಇವು ಬುದ್ಧಿಪೂರ್ವಕವಾಗಿರದೆ ಅನಿವಾರ್ಯವಾಗಿ ನಡೆದುದರಿಂದ ನಾವು ಯಾರನ್ನೂ ದೂರುವಂತಿಲ್ಲ. ಈ ಸಂದರ್ಭದಲ್ಲಿ ಮುಖ್ಯವಾಗಿ ಒಂದಂಶವನ್ನು ನಾವು ಎತ್ತಿ ಹೇಳಬೇಕಾಗಿದೆ. ಅದೇನೆಂದರೆ ಚುನಾವಣಾ ಅಧಿಕಾರಿಗಳ ಕಾರ್ಯದಕ್ಷತೆ. ಪ್ರತಿಯೊಂದು ಕಡೆಯಲ್ಲೂ ನಿಷ್ಪಕ್ಷಪಾತವಾಗಿಯೂ-ವ್ಯವಸ್ಥಿತ ರೀತಿಯಲ್ಲೂ ಇವರು ಕಾರ್ಯವನ್ನು ಪೂರೈಸಿದ್ದಾರೆ. ಶಿಸ್ತು-ಸುರಕ್ಷಿತತೆಗಳಿಂದ ಎಲ್ಲ ವಕ್ಷಸಂಬಂಧಿದವರಲ್ಲೂ ಕೃತ್ರಿಮರವಾದ ರೀತಿಯಲ್ಲಿ ನಡೆದುಕೊಂಡ ಅಧಿಕಾರಿವರ್ಗವನ್ನು ನಾವು ಶ್ಲಾಘಿಸದಿರಲಾರೆವು.

ಜಗತ್ತಿಗೇ ಹಿರಿದಾದ ಚುನಾವಣೆ ನಮ್ಮದು. ಅದೂ ಪ್ರಥಮವಾಗಿ ನಾವಿದನ್ನು ಅಭ್ಯಸಿಸುವದಾಗಿದೆ. ಯಾವ ಲೋಪದೋಷಗಳು ಕಂಡುಬಂದಿದ್ದರೂ ಈ ಹಿಂದಿನ ಅನುಭವವಿಲ್ಲದಿರುವದರ ಕಾರಣವೆನ್ನಬಹುದಾಗಿದೆ. ಮುಂದಕ್ಕೆ ಇದರಿಂದ ನಾವು ತುಂಬ ಕಲಿಯಲಿಕ್ಕುಂಟು!

ಚುನಾವಣೆ ನಡೆದು ಈಗ ಗೊತ್ತಾದ ಫಲಿತಾಂಶವನ್ನು ಲಕ್ಷಿಸಿದರೆ ಬಹುಜನಕ್ಕೆ ನಮ್ಮ ದೇಶ ಸ್ಥಿರತೆಯು ಆರವು ಚೆನ್ನಾಗಿ ಅರಿವಿದೆಂದು ಅರ್ಥವಾಗುತ್ತದೆ. ವಿರೋಧಿ ಪಕ್ಷದವರ ನೆಲೆಗೆ ತಿವಿಗೊಡದೆ ತಮ್ಮ ಕರ್ತವ್ಯವನ್ನು ಚೆನ್ನಾಗಿ ನಿರ್ವಾಹಿಸಿದ್ದಾರೆಂದೇ ಹೇಳಬೇಕು. ಸರ್ವಸಾಮಾನ್ಯ ಎಲ್ಲ ಕಡೆಯಲ್ಲೂ ಕಾಂಗ್ರೆಸ್ಸೇ ಜಯಶೀಲವಾಗುತ್ತ ಬಂದಿದೆ; ಮಾತ್ರವಲ್ಲ ಸಮಾಜವಾದಿಗಳ ವಿಶೇಷ ವರ್ಚಸ್ಸುಳ್ಳ ಮುಂಬಯಿಯಂತಹ ಪ್ರದೇಶದಲ್ಲೂ ಕಾಂಗ್ರೆಸು ಗಳಿಸಿದ ವಿಜಯ ಅದ್ಭುತವಾದುದು. 28 ಸ್ಥಾನಗಳಲ್ಲಿ 24 ಸ್ಥಾನಗಳನ್ನೂ ಕಾಂಗ್ರೆಸ್ಸು ಗಳಿಸಿದೆ. ಸಮಾಜವಾದಿಗಳು ಪಡೆದ ಸ್ಥಾನಗಳು ಕೇವಲ 2. ಮುಂಬಯಿಯು ಫಲಿತಾಂಶ ಹೀಗಾದೀತೆಂದು ಯಾರೂ ಊಹಿಸಿದ್ದಿಲ್ಲ "ಕಾಂಗ್ರೆಸ್ಸು ಜನಕ್ಕೆ ಬೇಡವಾಗಿದೆ. ನಾವೇ ಜನತೆಯ ಪ್ರತಿನಿಧಿಗಳೆಂದು ಹೇಳಿಕೊಳ್ಳುವ ವಿರೋಧಿ ಪಕ್ಷದ ಮುಖಂಡರು ಸಂಪೂರ್ಣ ನೋಲನ್ನೊಪ್ಪಿಕೊಂಡಿದ್ದಾರೆ. ಕಾಂಗ್ರೆಸ್ಸಿನ ಕಡೆಗೆ ಜನತೆಯ ಒಲವು-ವಿಶ್ವಾಸವಿದೆಯೋ ಇಲ್ಲವೋ-ಎನ್ನುವದಕ್ಕೆ ಇದು ಉತ್ತಮ ಉದಾಹರಣೆ-ವಾಸ್ತವಿಕ ಚಿತ್ರಣವಿದೂಷಣೆ! ಉಳಿದ ಕಡೆಗಳಲ್ಲಿ ಕಾಂಗ್ರೆಸ್ಸು ಜಯಶೀಲವಾಗುವದು ದೊಡ್ಡ ಮಾತಲ್ಲ; ಆದರೆ ಮುಂಬಯಿಯ ಫಲಿತಾಂಶ ನಮ್ಮ ಎಲ್ಲ ಕಡೆಯ ಭವಿಷ್ಯದ ಸ್ಥಿತ್ಯಂತರಗಳಿಗೆ ಯೋಗ್ಯ ಮಾನದಂಡವಾಗಬಹುದು.- ವಿರೋಧಿ ಪಕ್ಷಗಳ ಬಲಾಬಲಗಳ ಕೈಗನ್ನಡಿಯಾಗಬಹುದು. ಅಜ್ಞಾನ ಹಾಗೂ ಅಜಾಗರೂಕತೆಯಿಂದ ಮತಗಳು ವ್ಯರ್ಥವಾದರೂ ಹೆಚ್ಚು ಮತಗಳ ಪದ್ಧತಿಯೋಗ ಮಾಗೂ, ಸತ್ಪಾತ್ರಕ್ಕೆ ದಾನವಾಗಿದೆಯೆನ್ನುವದಕ್ಕೆ ಇಂದು ಗೊತ್ತಾದ ಫಲಿತಾಂಶವೇ ನಿದರ್ಶನವಾಗಿದೆ

"ನಿಮ್ಮ ಕಂಪೆನಿಯಲ್ಲಿ ನಿಮಗೂ ಪತ್ರದಾರರ ಹಿತಗಳಿಗೆ ಭದ್ರಕೆ ತುಂಬಾ ಇರುವುದರಿಂದ ಅವರಿಗೆ ಹೆಚ್ಚಿನ ಪ್ರಮಾಣದಲ್ಲಿ ಲಾಭವೂ ಸಿಗುವುದು."

—ಶ್ರೀ ಕೆ ಎ. ಹೆಂಡಿಕ್, B. SC , F. I. A.
(ಸಲಹೆಗಾರ ವಿಮಾಗಣಕರು)

"ಕೆನರಾ ಮ್ಯೂಚುವಲ್" ಕಂಪೆನಿಯ ಎಲ್ಲ ವ್ಯವಹಾರಗಳು ಹೀಗೆ ಚೆಲೋದಾಗಿ ನಡೆಸಲ್ಪಡುವುದರಿಂದ ಈ ಕಂಪೆನಿಯು ಜನರ ವಿಶ್ವಾಸಾದರಗಳಿಗೆ ಪಾತ್ರವಾಗಿದೆ. ಕಂಪೆನಿಯ ಚತುರ್ಥ ವಿಮಾಗಣನೆ (Valuation)ಯಂತೆ, ಆಜೀವ (Whole Life) ಮತ್ತು ಉಂಬಳಿ (Endowment) ವಿಮೆಗಳಿಗೆ ಕ್ರಮವಾಗಿ ಸಾಲಿಯಾನ ಸಾವಿರಕ್ಕೆ ರೂ. 12 ಮತ್ತು ರೂ. 9ರಂತೆ ಬೋನಸು ಹಂಚಲಾಗುವುದು ಇದೇ ದರದಲ್ಲಿ ನಡುಗಾಲದ (Interim) ಬೋನಸನ್ನು ಸಹ ಇಡಲಾಗಿದೆ

— ದಿ ಕೆನರಾ ಮ್ಯೂಚುವಲ್ —
ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,
ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.

Happy New-Year Greetings

We are glad to announce that 12,000 shares of our Bank of the total value of Rs 3 lacs recently floated have been over-subscribed. We are grateful to the public for the increased confidence they have reposed in us. We assure that we will do our utmost to deserve this well-placed confidence.

THE VIJAYA BANK LTD.

ESTD- 1931. H. O. MANGALORE.

B M. Shetty, B. A. B. L. Secretary.

P J Shetty, M. A. B. L. G. A. I. I. B., Superintendent.

B Manjaya Hegde, Advocate.
[President, District Board S. K.]
Chairman of the Board of Directors.

ಲೋಕಾಂತ

ಭಾರತ ಯೋಜನೆಗಳಿಗೆ ಅಮೆರಿಕೆಯು ಸಹಾಯ.

ಭಾರತ ಅಭಿವೃದ್ಧಿ ಯೋಜನೆಗಳನ್ನು ಕಾರ್ಯರೂಪದಲ್ಲಿ ತರುವದರ ಸಲುವಾಗಿ ಅಮೆರಿಕೆಯು ಭಾರತಕ್ಕೆ 25 ಕೋಟಿ ರೂ.ಗಳನ್ನು ಇದೇ ಜೂನ 30 ನೆಯ ತಾರೀಕಿನೊಳಗಾಗಿ ಕೊಡುವದಾಗಿ ಒಪ್ಪಂದವಾಗಿದೆ. ಭಾರತದ ಪರವಾಗಿ ಮುಖ್ಯ ಪ್ರಧಾನರಾದ ಶ್ರೀ ನೆಹ್ರೂರವರೂ ಅಮೆರಿಕೆಯ ಪರವಾಗಿ ಅಮೆರಿಕೆಯ ಭಾರತ ರಾಯಭಾರಿಗಳಾದ ಚೆಸ್ಟರ ಬೌಲ್ಸರೂ ಒಪ್ಪಂದಕ್ಕೆ ಅಂಕಿತ ಹಾಕಿರುವರು. ಭಾರತದ ಅನೇಕ ಅಭಿವೃದ್ಧಿ ಯೋಜನೆಗಳಿಗೆ ಈ ಸಹಾಯ ನಿಧಿಯಿಂದ ಹಿಂದೂಸ್ತಾನ ಸರಕಾರವು ಸಾಲರೂಪವಾಗಿ ಧನಸಹಾಯ ನೀಡುವದು. ಭಾರತವು ಆಹಾರಕ್ಕಾಗಿ ಪರಾವಲಂಬಿಯಾಗುವದನ್ನು ತಪ್ಪಿಸಲು ಒಕ್ಕಲುತನದ ಏಳ್ಗೆಗಾಗಿ ಕೈಕೊಳ್ಳುವ ಯೋಜನೆಗಳಿಗಾಗಿಯೇ ಈ ಹಣದಲ್ಲಿ ಹೆಚ್ಚಿನಂಶವನ್ನು ಪಡೆಯೋಗಿಸಲಾಗುವದೆಂದು ತಿಳಿಯುತ್ತದೆ.

ಲಾರ್ಡ್ ಲಿನ್‌ಲಿಥ್‌ಗೋರವರ ನಿಧನ

"ಭಾರತದಿಂದ ಕೊಲಂಬೊ"ಅಂಥೋಲನದ ಸಮಯದಲ್ಲಿ ಭಾರತ ವೈಸರಾಯಿಯಾಗಿದ್ದ ಲಾರ್ಡ್ ಲಿನ್‌ಲಿಥ್‌ಗೋರವರು ಇಂಗ್ಲಂಡದಲ್ಲಿ ಬೇಟೆಯಾಡಲುಹೋದಾಗ ಮರಣಹೊಂದಿದರು 1943ರಲ್ಲಿ ಭಾರತದಿಂದ ಮರಳಿಬಂದ ಕೂಡಲೇ ಅರಸನು ಜಾರ್ಜರು ಅವರಿಗೆ "ಇಂಗ್ಲಂಡದಲ್ಲಿಯ ಅತ್ಯುಚ್ಚ ಪದವಿಯನ್ನಿತ್ತು ಗೌರವಿಸಿದರು. ಮರಣ ಕಾಲದಲ್ಲಿ ಅವರಿಗೆ 64 ವರ್ಷಗಳಾಗಿತ್ತೆಂದು ತಿಳಿಯುತ್ತದೆ.

ವಾಶಿಂಗಟನ್ನಿನಲ್ಲಿ ಚರ್ಚಿಲ್ಲರು

ಇಂಗ್ಲಾಂಡದ ಮುಖ್ಯಮಂತ್ರಿ ವಿನ್ಸ್‌ಟನ್ ಚರ್ಚಿಲ್ಲರೂ ವಿದೇಶಾಂಗ ಮಂತ್ರಿ ಆ್ಯಂಥನಿ ಈಡೆನ್ನರು ವಾಶಿಂಗಟನಿನಲ್ಲಿಗೆ ಬಂದು ಆಧ್ಯಕ್ಷ ಟ್ರೂಮನ್ನರೊಡನೆ ವಾಹಶ್ವದ ಗುಪ್ತ ಯೋಜನೆಗಳ ಕುರಿತು ಮಾತುಕತೆ ನಡೆಸಿರುವರು. ಅರಬ ರಾಷ್ಟ್ರಗಳ ಸಂಬಂಧದ ಮಾತುಗಳು ಮುಖ್ಯವಾಗಿವೆಯೆಂದು ಹೇಳಲಾಗಿದೆ.

ಅಫ್ರಿಕನ್ನರ ಧೋರಣೆಯ ಖಂಡನೆ

ದ. ಆಫ್ರಿಕೆಯ ಹಿಂದೀಯರನ್ನು ಅಲ್ಲಿಯ ಸರಕಾರವು ನಡೆಸಿಕೊಳ್ಳುತ್ತಿರುವ ಪ್ರಶ್ನೆಯನ್ನು ಬಿಡಿಸಲು ದ. ಆಫ್ರಿಕಾ, ಭಾರತ ಹಾಗೂ ಪಾಕಿಸ್ತಾನಕ್ಕೆ ಸಹಾಯ ನೀಡಲು ತ್ರಿಮೂರ್ತಿಗಳ ಸಮಿತಿಯು ನೇಮಿಸಲ್ಪಡಬೇಕೆಂಬ ಗೊತ್ತುವಳಿಯು ಕುರಿತು ಪ್ಯಾರಿಸದಲ್ಲಿ ಕೂಡಿದ ಸಂ. ರಾ. ವಿಶೇಷ ರಾಜಕೀಯ ಸಭೆ ಚರ್ಚೆ ನಡೆಸಿತ. ಜಾಗತಿಕ ಅಭಿಪ್ರಾಯಕ್ಕೆ ವಿರುದ್ಧವಾಗಿ ದ. ಆಫ್ರಿಕೆಯು ವರ್ತಿಸುತ್ತಿದೆಯೆಂದೂ ಲೈಬೀರಿಯದ ಪ್ರತಿನಿಧಿಯಾ, ದ. ಆಫ್ರಿಕೆಯಲ್ಲಿಯ ಹಿಂದೀಯರು ಚಿಕ್ಕಹಿಂಸೆಗೊಳಗಾಗಿದ್ದಾರೆ. ಇತರ ೫ಪ್ಪು ವರ್ಣದವರ ಪಾಡಿಂತೂ ಹೇಳುವದೇ ಬೇಡವೆಂದು ಖುಶ್ಕೀಫ್‌ಯಿದ ಪ್ರತಿನಿಧಿಯೂ ಡಾ. ಮಾಲನ್ನರ ಸರಕಾರವ ಹಿಟ್ಲರನ ನೀತಿಯನ್ನು ಅನುಸರಿಸುತ್ತಿದೆಂದು ಚೆಕೊಸ್ಲೊವಿಯಾದ ಪ್ರತಿನಿಧಿಯೂ ಟೀಕಿಸಿದರು.

ಸುಯೇಜ ಪ್ರಕರಣದಲ್ಲಿ 15 ಬ್ರಿಟಿಶರ ಮರಣ

ಸುಯೇಜದಲ್ಲಿ ಬ್ರಿಟಿಶ ಅಧಿಕಾರಿಗಳ ಹಾಗೂ ಇಜಿಪ್ತ್ಯನರೊಳಗೆ ನಡೆದ ಭೀಕರ ಕಾಳಗದಲ್ಲಿ 15 ಬ್ರಿಟಿಶ ಅಧಿಕಾರಿಗಳು ಮರಣಹೊಂದಿರುವರೆಂದೂ 14 ಇಜಿಪ್ತಿಯನ್ನರು ಗಾಯಗೊಂಡಿರುವರೆಂದೂ ಕೇಳಲಾಗಿದೆ ಅರೇಬಿಯಾದ ಸಮೀಪದಲ್ಲಿಯ ಬ್ರಿಟಿಷ ಸೈನ್ಯ ಜಾಣೆಯ ಸಮೀಪದಲ್ಲಿ ತೀವ್ರ ಸ್ಫೋಟಗಳು ಸಂಭವಿಸಿದ್ದುದೆಂದು ತಿಳಿಯುತ್ತದೆ. ಆದರೆ ಎವರಿಗೆ ಏನೂ ಗೊತ್ತಾಗಿಲ್ಲ.

ಕೊರಿಯ ಮಾತುಕತೆಗಳಲ್ಲಿ ಪ್ರಗತಿ ಸಾಲದು

ಕೊರಿಯ ಯುದ್ಧ ಮುಕ್ತಾಯದ ಮಾತುಕತೆಗಳಲ್ಲಿ ವಿಶೇಷ ಪ್ರಗತಿ ಕಂಡು ಬರುತ್ತಿಲ್ಲವೆಂದು ತಿಳಿಯುತ್ತದೆ. ಕೊರಿಯ ಯುದ್ಧವನ್ನು ಕೊನೆಗಾಣಿಸಲು ನೆರವಾಗುವಂತೆ ಭದ್ರಕಾಮಂಳವು ಅವಶ್ಯ ಪ್ರಯತ್ನ ಹಾಗೂ ಯೋಗ್ಯ ಉಪಾಯಗಳನ್ನು ಕೈಗೊಳ್ಳಬೇಕೆಂದು ಭದ್ರತಾ ಮಂಡಳದ ಉಚ್ಚ ಪಟ್ಟದ ಸಭೆಯು ಕೂಡಬೇಕೆಂದೂ ರಶಿಯ ಪ್ರತಿನಿಧಿಯು ಭದ್ರತಾಮಂಡಲದಲ್ಲಿ ಕೇಳಿದನು.

ಪಾಕಿಸ್ತಾನದ ಕಾರಸ್ತಾನವನ್ನು ಸಹಿಸೆವು

ಪಕ್ತೂನದಲ್ಲಿ ಅಸಂತೃಪ್ತಿ ಮತ್ತು ಉದ್ವಿಗ್ನತೆಯು ಬಳಕವಾಗಿದ್ದ ಪಾಕಿಸ್ತಾನ ಸೈನ್ಯವನ್ನು ಪಕ್ತೂನಿಸ್ತಾನ ಪ್ರದೇಶದಿಂದ ಹಿಂದಕ್ಕೆ ಕರೆಸಿಕೊಳ್ಳದಿದ್ದರೆ ಪರಿಸ್ಥಿತಿಯು ಕೈಮೀರಿ ಸಂಭವವಿದೆ. ಪಾಕಿಸ್ತಾನ ಹಾಗೂ ಪಕ್ತೂನಿ ಸೈನಿಕರಲ್ಲಿ ಈಗಾಗಲೇ ಚಕಮಕಿ ನಡೆಯುತ್ತಿದ್ದು ಈ ಪ್ರಶ್ನೆಯನ್ನು ಯ. ರಾ. ಸಂಘಕ್ಕೆ ಒಯ್ಯಲು ನಾವು ಸಿದ್ಧರಿ. ಪಾನ ಒಂಧಗಳನ್ನು ಜೇಲಿನಲ್ಲಿಟ್ಟಿದ್ದು ಅತಿ ಕ್ರೂರ ಕೃತಿಯಾಗಿದೆ. ಅವರು ಯಾವ ಅಪರಾಧವನ್ನೂ ಮಾಡಿಲ್ಲ. ಪಾಕಿಸ್ತಾನದ ಈ ಕಾರಸ್ತಾನವನ್ನು ನಾವು ಸಹಿಸೆವು ಎಂದು ಅಫಘಾನಿ ರಾಯಭಾರಿಯು ಕೇಳಿದನು.

ಸ್ವಾಮಿ ಸೀತಾರಾಮರ ಸತ್ಯಾಗ್ರಹ

ಆಂಧ್ರ ಪ್ರಾಂತರಚನೆಗಾಗಿ ಸ್ವಾಮಿ ಸೀತಾರಾಮರು ಫೆಬ್ರುವರಿ 12ನೆಯ ದಿನಾಂಕ ಸತ್ಯಾಗ್ರಹ ಕೈಗೊಳ್ಳುವರೆಂದೂ ಆಂಧ್ರ ಪ್ರಮುಖರು ಇದರಲ್ಲಿ ಸಹಭಾಗಿಗಳಾಗಬೇಕೆಂದೂ ಶ್ರೀ ಚಲಪತಿ ರಾಯರು ತಿಳಿಸಿದರು: ಸ್ವಾಮಿ ಸೀತಾರಾಮರು ಸತ್ಯಾಗ್ರಹ ಸಂಘಟನೆಗಾಗಿ ಮತ್ತು ನಿಧಿ ಸಂಗ್ರಹಕ್ಕಾಗಿ ಕೂಡಿಸಲಾ ಸ್ವಯಂಸೇವಕರನ್ನೂ, ಏಜಂಟರನ್ನೂ ನೇಮಿಸಿರುವರು.

ನುಂಗನೂ ಮತದಾನವೂ

ಮುಂಬಯಿ ಶಹರದ ಭುಲೇಶ್ವರದಲ್ಲಿಯ ಮತಗಟ್ಟೆಯೊಂದರಲ್ಲಿ ನೆರೆದ ಮತದಾರರ ನಡುವೆ ಮುಂಗುವೊಂದು ಜಗಿದು ಅಧಿಕಾರಿಯ ಮೇಜಿನ ಮೇಲೆ ಕೂತುಬಿಟ್ಟಿತು. ಇದನ್ನು ಕಂಡು ಮತದಾರರು ಭೀತರಾಗಿ ಹೊರ ಓಡಿದರು. ಹಲ್ಲು ಕಿರಿಯುತ್ತ ಅಧಿಕಾರಿಗಳನ್ನು ಅಣಕಿಸುತ್ತಿದ್ದ ಕೆಂಪು ಮುಖದ ಮುಂಗನನ್ನು ಕಂಡು ಅಧಿಕಾರಿಗಳು ಕೋಣೆಯಿಂದ ಹೊರಹೋದರು. ಹೀಗೆ ಹತ್ತು ನಿಮಿಷಗಳ ಕಾಲ ಅದು ಅಲ್ಲಿಂದ ಕದಲದೆ ಇದ್ದ ಕಾರಣ ಮತ್ತೆ ಪೋಲಿಸ್ ಸಬ್ ಇನ್ಸ್‌ಪೆಕ್ಟರರು ಬಿವ್ವಾಲರು ಹಿಡಿದು ಬೆದರಿಸಬೇಕಾಯ್ತು.

ಕಮ್ಯುನಿಸ್ಟರು ಶರಣಾಗತರಾಗಲಿ

ಕಮ್ಯುನಿಸ್ಟರ ನೇಲಿನ ನಿರ್ಭಂಧವನ್ನು ತೆಗೆಯುವವಿಚಾರವನ್ನು ಪ್ರಸ್ತಾಪಿಸ ತ್ತಾ ಕೈದಕ್ಕಾಬಾದ ಮುಖ್ಯ ಮಂತ್ರಿ ಶ್ರೀ ವೆಲ್ಲೋಡಿಯವರು ಹೀಗೆ ಹೇಳಿದರು "ಕಮ್ಯುನಿಸ್ಟರು ತಮ್ಮಲ್ಲಿರುವ ಶಸ್ತ್ರಾಸ್ತ್ರಗಳನ್ನೆಲ್ಲ ಒಪ್ಪಿಸದಿರುವವರೆಗೆ ಜನರ ಸಂಕ್ಷಿಪ್ತತೆಯ ಬಗ್ಗೆ ಸರಕಾರಕ್ಕೆ ವಿಶ್ವಾಸ ಉಂಟಾಗಲಾರದು. ಶಸ್ತ್ರಾಸ್ತ್ರಗಳನ್ನು ಸರಕಾರಕ್ಕೆ ಒಪ್ಪಿಸುವುದೇ ಸುಲಭವಾದ ಮಾರ್ಗ".

ನಿಯಂತ್ರಣ ಯಾರಿಗೆ ಬೇಕು?

ಇರುವ ಸಾಮಾಗ್ರಿಗಳ ಹಂಚುವಿಕೆಯು ಸರಿಯಾಗಿ ಆಗುವದಕ್ಕಾಗಿ ವಿಶೇಷ ಅವು ಬಡವರಿಗೂ ಸಿಗುವಂತಾಗಲು ನಿಯಂತ್ರಣಗಳು ಅತಿ ಅಗತ್ಯವಾದ ವುಗಳಾಗಿವೆ. ಈಗಿನ ಸಮಯದಲ್ಲಿ ನಿಯಂತ್ರಣಗಳನ್ನು ತೆಗೆದು ಹಾಕಿದರೆ ಬೆಲೆಗಳು ಕೂಡಲೇ ವಿಪರೀತವಾಗಿ ವಿರಿಬಡವರಿಗೆ ತುಂಬಾ ಪೆಟ್ಟು ಬೀಳುವದು. ಕೇವಲ ಸ್ವಾರ್ಥಿಗಳೇ ನಿಯಂತ್ರಣ ತೆಗೆದು ಹಾಕುವುದರಲ್ಲಿ ಆಸ್ಥೆ ತಾಳಿರುವರೆಂದು ಹಥವಾಡಲ್ಲಿ ಮಾತಾಡುತ್ತಾ ಶ್ರೀ ನೆಹ್ರೂರವರು ಹೇಳಿದರು.

ವಿರೋಧಿ ಪಕ್ಷಗಳ ಖುಶೋದ್ಗಾರ

ರಾಂಚಿಯಲ್ಲಿ ಶ್ರೀ ನೆಹ್ರೂರವರಿಗೆ ಅಭೂತಪೂರ್ವ ಸ್ವಾಗತವನ್ನಿತ್ತು ಗೌರವಿಸಲಾದರೂ ವಿರೋಧಿ ಪಕ್ಷದವರು ಮೂರು ವಿಮಾನಗಳಿಂದ ನೇಲೆ ಹಾರಾಡುತ್ತ ಕರಪತ್ರಗಳನ್ನು ಸುರುವಿದರು. ಆದರಲ್ಲಿ "ಏರಿದ ಧಾರಣೆ ಹಾಗೂ ಅನ್ನ ವಸ್ತ್ರಗಳ ಅಭಾವದಿಂದ ಜನ ಬಳಲಿದ್ದಾರೆ, ಕಾಂಗ್ರೆಸ್ಸಿಗರನೇತೃರು ಈ ಅವ್ಯವಸ್ಥೆಗೆ ಕಾರಣರಾಗಿದ್ದಾರೆ. ಜನರು ಜನತಾಪಕ್ಷಕ್ಕೆ ಮತ ಕೊಡಬೇಕು" ಎಂದು ಬರೆಯಲಾಗಿತ್ತು]

ಚುನಾವಣೆಯ ಸ್ವಾರಸ್ಯಗಳು.

ಅಸ್ಸಾಮ ರಾಜ್ಯದ ಮತಗಟ್ಟೆಯೊಂದರಲ್ಲಿ 90 ವರ್ಷದ ವೃದ್ಧನೋರ್ವನು ಮತದಾನಕ್ಕಾಗಿ ಕೈಗೋಲೂರುತ್ತ ಬಂದು, ನೆಹ್ರೂರವರ ಪೆಟ್ಟಿಗೆಯೆಲ್ಲಿದೆ? ಎಂದು ಕೇಳಿದನ. ನೆಹ್ರೂರವರ ಪೆಟ್ಟಿಗೆ ಇಲ್ಲಿಲ್ಲವೆಂದು ಅಧಿಕಾರಿಗಳು ತಿಳಿಸಿದಾಗ ಅವನು ಮತದಾನ ಮಾಡದೆ ಹಿಂತಿರುಗಿದನಂತೆ.

ಅವ್ಯತಸರ ಮತಗಟ್ಟೆಯೊಂದರಲ್ಲಿ ಮಹಿಳೆಯೋರ್ವಳು ಮತಪತ್ರದೊಂದಿಗೆ ಪ್ರವೇಶಿಸಿ ಸಬೇದಾಕ್ಷರ್ಯಗಳಿಂದ ನೋಡುತ್ತಿರುವವನ್ನು ಅಧಿಕಾರಿಗಳು ಲಕ್ಷಿಸಿ ಅವಳನ್ನು ಕೇಳಲಾಗ ಬಂರಿಯುತ್ತಿರುವ ದೀಪವೆಲ್ಲಿ? ಎಂದು ಕೇಳಿದಳಂತೆ. ದೀಪದ ಚಿಹ್ನ ಉಳ್ಳಂತಹ ಪೆಟ್ಟಿಗೆಯನ್ನು ತೋರಿಸಿದೂ "ಉರಿಯುತ್ತಿರುವ ದೀಪವಿದ್ದ ಪೆಟ್ಟಿಗೆಯಲ್ಲಿಯೇ ಮತ ಹಾಕಲು ತನಗೆ ತಿಳಿಸಿರುವದಾಗಿ ಅವಳು ಹೇಳಿದಳು.

ಅಂಬಾಲದ ಇನ್ನೊಂದು ಮತಗಟ್ಟೆಯಲ್ಲಿ ಹಳ್ಳಿಗನೊಬ್ಬನು ಮೇಲಿನಂತೆಯೇ ಉರಿಯುತ್ತಿರುವ ದೀಪವನ್ನು ಶೋಧಿಸುವಲ್ಲಿ ನಿರಾಶನಾಗಿ ಅಧ್ಯಕ್ಷರ ಮೇಜಿನ ಮೇಲಿಟ್ಟಿದ್ದ ಟೇಬಲ್ ಲ್ಯಾಂಪಿನಲ್ಲಿ ಮತ ಹಾಕಿಬಂದನು

ಬ್ಯಾಂಕಿಂಗ್ ಕಂಟಿಗಳ ವಿಚಾರಣೆಗೆ ಹೊಸ ನ್ಯಾಯಮಂಡಳಿ

ಕೆಲ ಬ್ಯಾಂಕುಗಳಲ್ಲಿರುವ ಸಂಸ್ಥಾಮುಂದುವರಿಯುವದನ್ನು ಲಕ್ಷಿಸಿ ಸರಕಾರವು ಔದ್ಯೋಗಿಕ ಕಂಟಿ ಕಾಯ್ದೆಯನ್ವಯ ಹೊಸ ಅಜ್ಞೆ ಹೊರಡಿಸಿ ಫಿರ್ಯಾದಿ ಸಿರುವದು. ಮತ್ತು ಬ್ಯಾಂಕಿಂಗ ಕಂಪೆನಿಗಳ ತಂಟಿಗಳನ್ನು ಬಗೆಹರಿಸಲು ಹೊಸ ಔದ್ಯೋಗಿಕ ನ್ಯಾಯಮಂಡಳ ನೇಮಿಸಲಾಗಿದೆಂದು ಭಾರತ ಸರಕಾರವು ತಾರಿದೆ. ಮಂಡಳಕ್ಕೆ ಒಪ್ಪಿಸಲಾದ 34 ವಿಷಯಗಳಲ್ಲಿ ವೇತನ ಪ್ರಮಾಣ, ತುಟ್ಟಿಭತ್ತೆ, ನುನೆ ಬಾಡಿಗೆ, ಪ್ರವಾಸ ಭತ್ತೆ, ಬೋನಸ್, ಪ್ರಾವಿಡೆಂಟ್ ಫಂಡ್, ವಿರಾಮ ವೇತನ, ರಜೆಯ ನಿಯಮಗಳು, ಕೆಲಸದ ಅವಧಿ, ವೈದ್ಯಕೀಯ ಸಹಾಯ ಮುಂತಾದ ವಿಚಾರಗಳಿರುತ್ತವೆ.

ಝಂಡುರವರ ZANDU'S

ಕೇಸರಿ ಜೀವನ KESARI JIVAN

ವನ್ನು ಉಪಯೋಗಿಸಲು ಒತ್ತಾಯಿಸಿರಿ.

ಕೆಮ್ಮು, ನೆಗಡಿ, ಆಸ್ತಮ, ಧ್ವನಿ ಒಡೆಯುವಿಕೆ ಮೊದಲಾದುವುಗಳಿಗೆ ಅತ್ಯುತ್ತಮ ಔಷಧಿ.

ಕೇಸರಿ ಜೀವನವು ತಾರುಣ್ಯವನ್ನೂ, ನವಚೈತನ್ಯವನ್ನೂ ಉಂಟು ಮಾಡಿ ದೇಹದ ಅಂಗಾಂಗಗಳನ್ನೂ ಪುಷ್ಟಿಯಾಗಿ ಮಾಡಬಲ್ಲುದು. ಮೆದುಳಿನ ನಿತ್ರಾಣವಿರುವ ಅಧ್ಯಾಪಕರಿಗೂ, ವಿದ್ಯಾರ್ಥಿಗಳಿಗೂ, ವಕೀಲರಿಗೂ, ಪಡ್ಡರಿಗೂ, ಹೆಚ್ಚಿಗೆ ಸರ್ವರಿಗೂ ಉತ್ತಮ ಪರಿಣಾಮಕಾರಿ ಔಷಧ.

ಕೇಸರಿ ಜೀವನ ದೊರಕುವ ಸ್ಥಳಗಳು:-

1. ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್‌ಸ್ಟಿಟ್ಯೂಟ್,ಲಿ.,ಉಡುಪಿ, 2. ವಿ. ವಿ. ಶೆಣೈ, ಕಮಿಸ್ಟ್, ಕಾರ್ಕಳ, 3. ಕಾ ಕಂಪೆನಿ, ಹಂಪನಕಟ್ಟೆ, ಮಂಗಳೂರು ಅಥವಾ ಕೆಳಗಿನ ಸೋಲ್ ಏಜಂಟರಲ್ಲಿ:-

ZANDU

ದಾಮೋದರ್ ಎಂಡ್ ಕೊ.
113 ನ್ಯಾಸಿಯಪ್ಪ ನಾಯಕನ್ ಸ್ಟ್ರೀಟ್,
ಪೂ. ಟಿ ಮದ್ರಾಸು.

ಚಂದಾ ವಿವರ
ವರ್ಷಕ್ಕೆ ರೂ. 5—12—0
6 ತಿಂಗಳಿಗೆ ರೂ. 3—0—0

ಗುರುವಾರ ಉಡುಪಿ ೧೦-೧-೧೯೫೨

ಭಾರತ ಅಮೆರಿಕಾ ತಾಂತ್ರಿಕ ಸಹಾಯನಿಧಿ

ಭಾರತ ಸರಕಾರವು ಪಂಚವಾರ್ಷಿಕ ಯೋಜನೆ ಮತ್ತು ಇತರ ಅಭಿವೃದ್ಧಿಯೋಜನೆಗಳನ್ನು ತ್ವರಿತವಾಗಿ ಕೈಗೊಳ್ಳಲು ಅಮೆರಿಕೆಯು 50 ದಶ ಲಕ್ಷ ಡಾಲರು ಅಂದರೆ 25 ಕೋಟಿ ರೂ-ಗಳನ್ನು ಸಹಾಯ ಕೊಡುವ ಒಪ್ಪಂದವೊಂದು ದಶಂಬರ 28ರಲ್ಲಿ ಭಾರತ ಹಾಗು ಅಮೆರಿಕಾ ಸರಕಾರಗಳ ಪ್ರತಿನಿಧಿಗಳೊಡನೆ ನಡೆಯಿತು. ಈ ಒಪ್ಪಂದದನ್ವಯ ಅಮೆರಿಕೆಯು 25 ಕೋಟಿ ರೂ.ಗಳನ್ನು ಜೂನ್ 30 ರೊಳಗೆ ಭಾರತಕ್ಕೆ ಕೊಡುವದು. ಈ ನಿಧಿಯನ್ನು ಭಾರತ-ಅಮೆರಿಕಾ ತಾಂತ್ರಿಕ ಸಹಾಯನಿಧಿಎಂದು ಹೆಸರಿಸಲಾಗಿದೆ. ಜೂನ 30 ರೊಳಗೆ ಭಾರತಕ್ಕೆ ಕೊಡುವದು. ಈ ನಿಧಿಯನ್ನು ಭಾರತ-ಅಮೆರಿಕಾ ತಾಂತ್ರಿಕ ಸಹಾಯನಿಧಿಎಂದೂ ಹೆಸರಿಸಲಾಗಿದೆ. ಜೂನ 30 ರೊಳಗೆ ಭಾರತಕ್ಕೆ ಕೊಡುವದು. ಈ ನಿಧಿಯನ್ನು ಭಾರತ-ಅಮೆರಿಕಾ ತಾಂತ್ರಿಕ ಸಹಾಯನಿಧಿಎಂದೂ ಹೆಸರಿಸಲಾಗಿದೆ.

ಭಾರತ ಸರಕಾರದ ಮುಂದಿರುವ ಯೋಜನೆಗಳ ಸಾಮಾನ್ಯ ಮೇಲ್ವಿಚಾರಣೆ ಮತ್ತು ಪರಿಸ್ಥಿತಿಯನ್ನು ವಲೋಕಿಸಲು ಹಿಂದೀ ಕೇಂದ್ರ ಸಮಿತಿಯನ್ನು ನೇಮಿಸಬೇಕೆಂದೂ, ಈ ಸಮಿತಿಯ ಸದಸ್ಯರನ್ನಾ ರಿಯಸಲು ಭಾರತಸರಕಾರದ ಕರ್ತವ್ಯವೆಂದೂ ಅಮೆರಿಕಾ ತಾಂತ್ರಿಕಸಹಕಾರ ಆಡಳಿತ ಡೈರೆಕ್ಟರರಾದ ಕ್ಲೆಪ್ಪನವೆಬ್ಬರಟ್ಸಲ ಹೇಳಿದ್ದಾರೆಂದು ಹಿಂದೂಸ್ತಾನದಲ್ಲಿಯ ಬೇರೆ ಬೇರೆ ಪ್ರಾಂತಗಳಲ್ಲಿಯ ಯೋಗ್ಯ ಅಧಿಕಾರಿಗಳ ಸಲಹೆಯನ್ವಯ ಈ ಸಮಿತಿಯು ಅಭಿವೃದ್ಧಿ ಕಾರ್ಯಾವನ್ನು ಕೈಗೊಳ್ಳತಕ್ಕದ್ದೆಂದೂ ಒಪ್ಪಂದದಲ್ಲಿ ಹೇಳಲಾಗಿದೆ. ದೇಶದಲ್ಲಿಯ ವಿವಿಧ 50 ನಗರ—ಹಳ್ಳಿ ಅಭಿವೃದ್ಧಿ ಕ್ಷೇತ್ರಗಳನ್ನು ನಿರ್ಮಿಸಲಾಗುವದು. ಪ್ರತಿ ಕ್ಷೇತ್ರದಲ್ಲಿ ಸುಮಾರು 2ಲಕ್ಷ ಜನರಿರುವ 300 ಹಳ್ಳಿಗಳು ಸಮಾವೇಶಗೊಳ್ಳುವವು.

ದೇಶದ ಅನೇಕ ಅಭಿವೃದ್ಧಿ ಯೋಜನೆಗಳಿಗೆ ಈ ನಿಧಿಯಿಂದ ಸಾಲಸೌಲಭ್ಯದಲ್ಲಿ ಹಣವನ್ನೊದಗಿಸಲಾಗುತ್ತದೆ. ಮತ್ತೆ ಅದು ಹಿಂದೆ ಬಂದ ಬಳಿಕ ಅದನ್ನು ಇನ್ನೊಂದು ಕಡೆಯ ಯೋಜನೆಗಳಿಗಾಗಿ ನೀಡಲಾಗುವದು. ಭಾರತ ಅಮೆರಿಕಾ ನಿಧಿಯ ಆಡಳಿತೆಯನ್ನು ಹಿಂದುಸ್ತಾನದ ಸರಕಾರದ ಪರವಾಗಿ ಆರ್ಥಿಕ ಶಾಮೆಯ ಉಪ ಅಧಿಕಾರಿಯಾಗಿ, ಭಾರತದಲ್ಲಿಯ ಅಮೆರಿಕಾ ರಾಯಭಾರಿಯ ಸಲಹೆಯ ಮೇರೆಗೆ ಕೆಲಸ ಮಾಡುವ ಕ್ಲೆಪ್ಪನ್‌ವೆಬ್ಬರ್ ಸಂಯೋಕ್ತವಾಗಿ ನೋಡಿಕೊಳ್ಳುವರು.

ಭಾರತ ಸರಕಾರವು ಈಹಣವನ್ನುಮುಖ್ಯವಾಗಿ ನೀಲಂವೇ ಹಾಗೂ ಒಕ್ಕಲುತನದ ಅಭಿವೃದ್ಧಿ ಯೋಜನೆಗಳಿಗಾಗಿ ಉಪಯೋಗಿಸುವದು. ಭಾರತಕ್ಕೆ ಸದ್ಯ ದೊಡ್ಡ ಅಪತ್ತೆಂದರೆ ಆಹಾರದ್ವಾನ್ಯತ್ತೆ. 52 ರ್ಷ ಆಹಾರ ವಿಷಯದಲ್ಲಿ ನಾವು ಸ್ವಾವಲಂಬಿಗಳಾಗುವೆವೆಂದು ನಮ್ಮ ಮಂತ್ರಿವರ್ಯರು ಆಶ್ವಾಸನ ಕೊಟ್ಟಿದ್ದರೂ- ನಮ್ಮ ಸ್ಥಿತಿ ಹಿಂದಿಗಿಂತಲೂ ಕರಿಣಾವಸ್ಥೆಗೆ ಬಂದಿರುವುದು. ದಿನದಿನಕ್ಕೆ ಹೆಚ್ಚುತ್ತಿರುವ ಜನಸಂಖ್ಯೆಯಿಂದ ನುಂದಕ್ಕೆ ಆಹಾರದ ಕೊರತೆಯು ಇನ್ನಷ್ಟು ಭೀಕರವಾಗಬಹುದು. ಒಕ್ಕಲತನ ಸುಧಾರಣಾ ಕಾರ್ಯವನ್ನು ಕೈಗೊಂಡಿದೆಯಾದರೂ ಈ ನಾಲ್ಕು ವರ್ಷಗಳ ವೆಚ್ಚಮಾಡಿದಷ್ಟು ಮತ್ತು ವ್ಯಯಿಸಿದಷ್ಟು ಫಲವಾಪ್ತಿ ಆದರಿಂದಾಗಲಿಲ್ಲ.

ಒಂದುಕಡೆ ಹೆಚ್ಚು ಆಹಾರ ಬೆಳೆಸುವ ಕಾರ್ಯ ನಡೆಯುತ್ತಿರುವಾಗ ಇನ್ನೊಂದು ಕಡೆ ಸಾಗುವಳಿಯಾಗುತ್ತಿದ್ದ ಭೂಮಿಗಳೆ ಪಡುಬೀಳುತ್ತಿರುವ ದಾಖಲೆಗಳು ಸಿಗುತ್ತಿವೆ. ಇಂತಹ ಬಿಕ್ಕಟ್ಟು ಸುಧಾರಣೆಗಳಿಂದ ಇಡಿಯ ದೇಶದ ಆಹಾರದ ಪ್ರಶ್ನೆಯನ್ನು ಬಗೆಹರಿಸಲು ಸಾಧ್ಯವೇ ಇಲ್ಲ. ಸದ್ಯ ಭಾರತ ಸರಕಾರ ಅನೇಕ ನೀರಾವರಿ ಯೋಜನೆಗಳನ್ನು ಕೈಗೆಂಡು ತನ್ಮೂಲಕ ಕೋಟಿ ಕೋಟಿ ಎಕ್ರೆ ಭೂಮಿಗಳಲ್ಲಿ ಆಹಾರ ಧಾನ್ಯ ಬೆಳೆಸುವ ನಿರ್ಧಾರ ಮಾಡಿದೆ. ಈ ಮಹಾ ಯೋಜನೆಗಳು ಕೈಗೂಡಬೇಕಾದರೆ ಕನಿಷ್ಠಪಕ್ಷ 5 ವರ್ಷವಾದರೂ ಬೇಕು.—ಕೊಲಂಬೋ ಯೋಜನೆಯಂತೆ ಹಲವು ವಿದೇಶೀಯ ಸಹಾಯವನ್ನೂ ಬೇರೆ ಪಡೆಯಲಿದೆ ಅಮೆರಿಕೆಯೂ ಈ ಸಂಧಿಗ್ಧ ಪರಿಸ್ಥಿತಿಯಲ್ಲಿ ತನ್ನ ಸಹಾಯವನ್ನು ನೀಡಿದೆ- ಈ ಸಹಕಾರ ಹಾಗೂ ತಾಂತ್ರಿಕ ಬೆಂಬಲಗಳಿಂದ ಭಾರತವು ಇನ್ನೈದು ವರ್ಷದ ವೇಳಾದರೂ ಆಹಾರ ವಿಚಾರದಲ್ಲಿ ಸ್ವಾವಲಂಬಿಯಾಗಬಹುದು. ಮಾತ್ರವಲ್ಲ ಜೊತೆಯಲ್ಲಿ ವಿದ್ಯುಚ್ಛಕ್ತಿಯ ಬಲದಿಂದ ಇತರ ಉದ್ಯಮಗಳೂ ಅಭಿವೃದ್ಧಿಗೊಳ್ಳಲಿವೆ.

ವಿದೇಶೀಯ ಬಂಡವಾಳದ ಮೇಲೆ ಭಾರತದ ಅಭಿವೃದ್ಧಿ ಜೊಂಡಕೊಂಡಿದೆಯೆಂದು ಹಲವರು ಟೀಕಿಸುತ್ತಿರುವರು. ಆದರೆ ದೇಶದ ಆಂತರಿಕ ಪರಿಸ್ಥಿತಿಯನ್ನರಿತವರಾರೂ ಇದನ್ನು ದೂಷಿಸುವಂತಿಲ್ಲ.ಏಕೆಂದರೆ ಪ್ರಸ್ತುತ ಭಾರತವು ಸ.ಮಾರು 5ಮಿಲಿಯ ಟನ್ನು ಆಮದು ಧಾನ್ಯಗಳನ್ನು ಹೊರದೇಶದಿಂದ ಆಮದು ಮಾಡಿಕೆಳ್ಳುತ್ತಲಿದೆ- ಸರ್ವಸಾಧಾರಣ 250 ಕೋಟಿ ರೂ.ಗಳನ್ನು ವರ್ಷಕ್ಕೆ ಹೊರದೇಶಕ್ಕೆ ಆಹಾರಕ್ಕಾಗಿ ಕಳಿಸುತ್ತಿದ್ದೇವೆ. ಈ ಅಂಕೆ ಸಂಖೆಗಳನ್ನು ಲಕ್ಷಿಸಿದರೆ ಭಾರತ ಇಂದು ವಿದೇಶೀಯರ ಸದಾಯದಿಂದ ಅಭಿವೃದ್ಧಿ ಕಾರ್ಯವನ್ನು ಕೈಗೊಂಡು ಪರಾವಲಂಬಿ ಭವನ್ನು ನಿರ್ಮೂಲಗೊಳಿಸುವ ಘೋರಣೆಯನ್ನಿಟ್ಟು ಕೊಂಡದ್ದು ಗೊಚರವಾಗದಿರದು.

ಈ ಸಂದರ್ಭದಲ್ಲಿ ಒಂದಂಶವನ್ನು ಸೂಚ್ಯವಾಗಿ ಜ್ಞೇಯಪಡಿಸಬೇಕಾಗಿದೆ ಅಮೆರಿಕಾ ಕೇಂದ್ರಸರಕಾರವಷ್ಟೆ ಈ ನಾಲ್ಕು ವರ್ಷಗಳಲ್ಲಿ ತೊಡಗಿದ್ದ ಹಲವು ವ್ಯವಹಾರಗಳಲ್ಲಿ ಹೇರಳ ಹಣವ್ಯರ್ಥವಾದ ದಾಖಲೆಗಳು ಕಂಡುಬಂದಿವೆ. ಗೊಬ್ಬರ ಪ್ರಕರಣದಲ್ಲಾ ನೂತನ ಗೃಹವಿಚಾರದಲ್ಲೂ, ವಿದೇಶಗಳಿಂದ ಜೀಪು ಕಾರುಗಳನ್ನು ತರಿಸುವ ಸಂದರ್ಭದಲ್ಲೂ—ಕೋಟಿ-ಟ್ವೆಲೆ ರೂಪಾಯಿಗಳು ನಿಷ್ಫಲಗೊಂಡಿವೆ. "ವನಮಹೋತ್ಸವ"ಹೆಚ್ಚು ಆಹಾರ ಬೆಳೆಸಿರಿ" ಎನ್ನುವ ಪ್ರಚಾರ ವೈಖರಿಯಿಂದ ಸರಕಾರ ವ್ಯಯಿಸಿದ್ದಕ್ಕೆ ಸರಿಯಾಗಿ ಕಾರ್ಯರೂಪದಲ್ಲಿ ಆದರ ಪ್ರತಿಫಲ ಕಂಡುಬಂದಿರುವದಿಲ್ಲ. ಇಲ್ಲಿ ಅಡಕತದಲ್ಲಿಯ ಅವಜ್ಞಾನ ಕಾರಣವಿರಲೂ ಬಹುದು- ಅವ್ಯವಹಾರ ನಡೆದ ದಾಖಲೆಗಳೂ ಕಾರಣವಾಗಿರಬಹುದು. ಆದರೆ ಮುಂದಕ್ಕೂ ಅಂತಹ ಪ್ರಮಾದಗಳಾಗದಂತೆ ದಾಗ್ರತೆಯನ್ನು ವಹಿಸುವದು ಅದ್ಯ ಕರ್ತವ್ಯವಿದೆ ಭಾರತ ಅಮೆರಿಕ ತಾಂತ್ರಿಕ ಸಹಾಯ ನಿಧಿಯ ಸದ್ವಿನಿಯೋಗಕ್ಕೆ ಉಭಯ ರಾಷ್ಟ್ರಗಳ ಪ್ರತಿನಿಧಿಗಳೂ ಕೂಡಿ, ಸಮಾಲೋಚನೆ ನಡೆಸಿ ಕಾರ್ಯಪ್ರವೃತ್ತರಾಗುವದರಿಂದ ಹೆಚ್ಚಿನ ಲೋಪದೋಷಗಳು ಬಂಲಾರವೆಂದು ನಾವು ಊಹಿಸಬಹುದು. ಒಂದು ವೇಳೆ ಹಿಂದಿನ ಅನರ್ಥ ಪರಂಪರೆಗೇ ಇಲ್ಲಿ ಕೋಟಿಬಿಂದರೆ ಸಾರ್ವಜನಿಕ ಸೊತ್ತಾದ ಕೋಟಿ ಕೋಟಿ ರೂ.ಗಳ ನಾಶವಾಗಬಹುದು. ಇಷ್ಟು ದೊಡ್ಡ ಪ್ರಮಾಣದಲ್ಲಿ ಸಂಚವರ್ಷಿಕ ದಂತಹ ಮಹತ್ವದ ಯೋಜನೆಗಳಲ್ಲಿ ತೊಡಗುವಾಗ ಮಂಜಾಗ್ರತೆ-ದಕ್ಷತೆ ವಹಿಸಿವೆಷ್ಟು ಸಾಲದು. ಅಮೆರಿಕಾ ಮತ್ತು ಭಾರತಗಳೊಳಗಿನ ರಾಜಕೀಯ ಧೋರಣೆಗಳು ಕೊಂಚ ವಿರುದ್ಧವಾಗಿರುವದಾದರೂ ಈ ಕೊಡುಗೆ ಶುದ್ಧ ಸದುದ್ದೇಶದಿಂದ ಬೇರೆ ಕೂಡಿದೆಯೆನ್ನುವದರಲ್ಲಿ ಸಂದೇಹವಿಲ್ಲ ಆಸಾಂವಿಧಾನಿಕವಾಗಿ ಆಹಾರವನ್ನು ನೀಡಿಯೂ—ಅನೇಕ ಅಭಿವೃದ್ಧಿ ಯೋಜನೆಗಳನ್ನು ಕಾರ್ಯರೂಪದಲ್ಲಿ ತರಲು ಆರ್ಥಿಕ ಸಹಾಯ ಅವಶ್ಯವೆನಿಸಿದಾಗ ಆರ್ಥಿಕ ಸಹಾಯವನ್ನು ನೀಡಿಯೂ ಅಮೆರಿಕ ಸಹಕರಿಸಿದೆ.

ಇದನ್ನು ಸಂದರ್ಭ ಸಾಧಕ ತಂತ್ರವೆಂದು ಕರೆಯುವ ಮಹನೀಯರು ರಾಜಕೀಯ ಜ್ಞಾನವಿಲ್ಲದವರೆನ್ನಬೇಕು. ಭಾರತ ಅಮೆರಿಕಾ ತಾಂತ್ರಿಕ ಸಹಾಯ ನಿಧಿಯು ಭಾರತದ ನಾನಾಬಗೆಯ ಅಭಿವೃದ್ಧಿಯನ್ನು ಸಾಧಿಸುವ ಗುರಿಯನ್ನಿಟ್ಟುಕೊಂಡು ಕಾರ್ಯಪ್ರವೃತ್ತವಾಗಿದೆ. ಇಂತಹ ಸಂದರ್ಭದಲ್ಲಿ ಜನ ಕಮ್ಮ ಸಂಪೂರ್ಣ ಸಹಕಾರವನ್ನು ನೀಡಿ ಸದ್ಯ ಅಧಿಕಾರದಲ್ಲಿರುವ ಸರಕಾರವನ್ನು ಬಲಪಡಿಸುವ ತಮ್ಮ ಕರ್ತವ್ಯವನ್ನು ಮರೆಯದಿರಲಿ.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್ ಉಡುಪಿ.

ಮೇಲ್ಕುಂಡ ಕಂಪೆನಿಯು 1950ನೆ ಇಸವಿ ದಶಂಬರ ತಾ. 31ಕ್ಕೆ ಅಂತ್ಯವಾದ ಆಕ್ಯಂತ ಪ್ರಗತಿದಾಯಕವಾದ ವೆಲ್ಯೂಯೇಶನ್ ವರದಿ ನಮ್ಮ ಹಸ್ತಗತವಾಗಿದೆ. 1939-42ರಲ್ಲಿ 3526 ಪೊಲಿಸಿಗಳ ಬಾಬ್ತು ವಿಮಾ ಮೊಬಲಗು ಬೋನಸ್ ಕೂಡಿ ರೂಪಾಯಿ 47,69,401. ಇದ್ದುದು 1913-46ರಲ್ಲಿ 11823 ಪೊಲಿಸಿಗಳಿಗೆ ಏರಿ ವಿಮಾ ಮೊಬಲಗು ರೂ. 2,02,53,070ಕ್ಕೆ ಏರಿತು. 1947-50 ರಲ್ಲಾ 16561ರ ಇನ್ನೊಂದು ಪ್ರಗತಿ ಮೆಟ್ಟಿಲನ್ನು ಏರಿ ರೂ. 3,08,76,873ರ ಮೆಟ್ಟಿಗೆ ಬಂದಿತು. ಅಂತೆಯೇ ಪ್ರೀಮಿಯಮ್ ಉತ್ಪತ್ತಿಯು ಅನುಕ್ರಮವಾಗಿ ರೂ. 7,64,227; ರೂ 30,41,673 ಮತ್ತು ರೂ 60,38,852ರ ಮೆಲ್ಮಟ್ಟಿಕ್ಕೆ ಮುಟ್ಟಿ ಲ್ಯಾಭ್ ಫಂಡು ಕೂಡಾ ರೂ. 5,24,878; ರೂ. 23,42,141 ಮತ್ತು ರೂ. 61,91,192ಕ್ಕೆ ಏರಿತು. ಈ ಹತ್ತೆರಡು ವರುಷಗಳ ಅವಧಿಯಲ್ಲಿ ಕಂಪೆನಿಯು ವ್ಯವಹಾರ ಮತ್ತು ಪ್ರೀಮಿಯಮ್ ಉತ್ಪತ್ತಿಯು ಹೆಚ್ಚಾಗುತ್ತಾ ಬಂದು ಇದೀಗ ಗಣನೀಯ ಸ್ಥಾನವನ್ನು ಪಡೆದಿದೆ. ಕಂಪೆನಿಯ ಹತ್ತೆರಡು ವರುಷಗಳ ವೆಚ್ಚವು ಅತಿ ಕಡಿಮೆಯಿದ್ದು ವಿಮಾ ಕಂಪೆನಿ ಕಾಯಿದೆಯಲ್ಲಿ ಸೂಚಿಸಿದ ನುತಿಗಿಂತಲೂ ಅಲ್ಪವಾಗಿರುವುದು ಅಭಿನಂದನೀಯವೂ ಕೆರಿಯ ಕಂಪೆನಿಗಳಿಗೆ ಆದರ್ಶನೀಯವೂ ಆಗಿದೆ. ಖರ್ಚು ಕಳೆದು ಉಳಿದ ರೂ. 5,66,067ರಲ್ಲಿ ರೂ. 5,62,000ನ್ನು ಬೋನಸ್ ಹಂಚಲು ನಿರ್ಧರಿಸಲಾಗಿದೆ. ಲಾಭಸಹಿತ ಎಂಡೋವೆಂಟ್ ಸಾನಿರದ ಪಾಲಿಸಿಗಳಿಗೆ ರೂ 9/- ರಂತೆಯೂ ಜೀವನವಧಿ ಲಾಭಸಹಿತ ಸಾನಿರದ ಪಾಲಿಸಿಗಳಿಗೆ ರೂ. 12/ರಂತೆಯೂ ಬೋನಸ್ ಹಂಚಲಾಗುವುದು ವೆಲ್ಯೂಯೇಶನ್ ತೀರಾ ಕೃಷ್ಟಿಕರವಿದೆ. ಕಂಪೆನಿಯ ದಕ್ಷ ಆಡಳಿತೆದಾರರ ನೇತೃತ್ವದಲ್ಲಿ ಪಾಲಿಸಿದಾರರ ಹಿತವು ಭದ್ರವಾಗಿದೆ. ಈ ಗಿನ ಉನ್ನತಿಯಿಂದ ಇನ್ನು ಮುಂದೆಯೂ ಪಾಲಿಸಿದಾರರಿಗೆ ಹೆಚ್ಚಿನ ಪ್ರಮಾಣದ ಬೋನಸ್ ಸಿಕ್ಕಲು ಅವ್ಕಾಶವಿದೆ. ಕಂಪೆನಿಯ ಸರ್ವತೋಮುಖ ಅಭಿವೃದ್ಧಿಗಾಗಿ ದುಡಿದು-ತ್ಯಾಗವಿರುವ ನಾಯಕಮಂಡಳಿಯನ್ನು ಮುಖ್ಯಕಃ ಅದರ ಪ್ರಧಾನ ಸಂಚಾಲಕ ವಿವಾಕ್ಪ್ರವೀಣ ಶ್ರೀ ಟಿ.ಕಳಿನಾಥ ಪೈಗಳನ್ನು ಅಭಿನಂದಿಸುತ್ತೇವೆ.

ಉಡುಪಿಯಲ್ಲಿ ಕಾಂಗ್ರೆಸ್ ಉಮೇದ್ವಾರಿ ಶ್ರೀ. ಟಿ. ಎ. ಪೈಗಳಿಗೆ ವಿಜಯೆ

ಉಡುಪಿ ಮತದಾರ ಕ್ಷೇತ್ರದ ಮತಗಣನೆಯು ತಾ 9ರಲ್ಲಿ ನಡೆಯಿತು. 74500 ಮತದಾರರಲ್ಲಿ 50,880 ಮಂದಿ ಮತದಾನ ಮಾಡಿರುತ್ತಾರೆ ನಮ್ಮ ಪತ್ರಿಕೆಯು ಪ್ರಿಂಟಿಗೆ ಹೋಗುವ ವೇಳೆಗೆ ಬದಲಾವಣೆಯಾದ ಪೆಟ್ಟಿಗೆಗಳನ್ನು ಬಿಟ್ಟು ಕಾಂಗ್ರೆಸ್ ಉಮೇದ್ವಾರಿ ಶ್ರೀ ಟಿ ಎ ಪೈಗಳಿಗೆ 25,236 ಮತಗಳು ದೊರೆತಿವೆ. ಪ್ರಜಾಪಕ್ಷದ ಶ್ರೀ. ಕಲ್ಯಾಡಿ ರಾಮರಾಯರಿಗೆ 13,100ಮತಗಳೂ ಸೋಶಿಯಲಿಸ್ಟ್ ಪಕ್ಷದ ಶ್ರೀ. ಎನ್ ವಿಟ್ಠಲದಾಸರಿಗೆ 12500 ಮತಗಳೂ ಬಿದ್ದಿರಬಹುದಾಗಿ ಅಂದಾಜುಮಾಡಬಹುದು. ಅಂತೂ ಕಾಂಗ್ರೆಸಿಗೆ ಪ್ರಚಂಡ ವಿಜಯವೇ ಸರಿ.

ನಮ್ಮ ಚಂದಾದಾರರು ತಮ್ಮ ದಾಕಯನ್ನು ದಯಮಾಡಿ ಆದಷ್ಟು ಬೇಗನೆ ಕಳುಹಿಸಿಕೊಟ್ಟು ಪ್ರೋತ್ಸಾಹಿಸುವಂತೆ ತಿರುಗೊಮ್ಮೆ ವಿನಂತಿಸಿಕೊಳ್ಳುತ್ತೇವೆ.

ಮೆನೇಜರ್, ನವಯುಗ

CORRECTION

In the publication of suit No. 873 of 1951 of the Bombay City Civil Court at Bombay between Jagjivandas Brijlal Agarwala and Mrs Gulabibai wife of Jagjivandas Brijlal appearing in our weekly Issue dated 3-1-52 in page 8, the date of appearance ought to be **13th day of February, 1952** instead of 13th day of February, 1951. Readers will please take note of the correction. (Ed- N)

ಮಂಗಳೂರು

ವಿದಾಯ ಸತ್ಕಾರ — ಕೃಷ್ಣಿಯ ಪೋರ್ಟ್ ಅಥೋರಿಟಿಯಲ್ಲಿ ಸುಮಾರು ೨೫ ವರ್ಷಗಳ ಕಾಲ ಸೇವೆ ಸಲ್ಲಿಸಿ ನಿವೃತ್ತರಾಗಿ ಹೋಗುತ್ತಿರುವ ಶ್ರೀ ಎಂ. ಎಸ್. ಕೃಷ್ಣಯ್ಯರವರಿಗೆ ಪೋರ್ಟ್ ಅಥೋರಿಟಿಯ ಸಿಬ್ಬಂದಿಯವರು ಸೋಮವಾರ ಸಂಜೆ ಪೋರ್ಟ್ ಅಥೋರಿಟಿ ಕಛೇರಿಯಲ್ಲಿ ವಿದಾಯ ಸತ್ಕಾರ ಏರ್ಪಡಿಸಿದ್ದರು. ಶ್ರೀ ಕೃಷ್ಣಯ್ಯರವರು ಪೋರ್ಟ್ ಅಥೋರಿಟಿಯಲ್ಲಿ ಸಲ್ಲಿಸಿದ ಸೇವೆಯನ್ನು ಶ್ಲಾಘಿಸಿ ಮಾತನಾಡಿದರು. ಶ್ರೀ ಕೃಷ್ಣಯ್ಯರವರು ಪ್ರತ್ಯುತ್ತರ ನೀಡಿದರು. ಶ್ರೀ ಕೃಷ್ಣಯ್ಯರವರಿಗೆ ಸಿಬ್ಬಂದಿಯವರು ಕಾಣಿಕೆ ಸಮರ್ಪಿಸಿದರು.

ವಿದ್ಯಾರ್ಥಿನಿಯರ ಸಂಘದ ವಾರ್ಷಿಕೋತ್ಸವ—ಕೆನರಾ ಹೈಸ್ಕೂಲ್ ಹಳೇ ವಿದ್ಯಾರ್ಥಿನಿಯರ ಸಂಘದ ವಾರ್ಷಿಕ ದಿನಾಚರಣೆಯು ಇದೇ ತಾ. 7ರಲ್ಲಿ ಕೆನರಾ ಹೈಸ್ಕೂಲಿನಲ್ಲಿ ಜರಗಿತು. ಅಂದು ಪೂರ್ವಾಹ್ನ ಸಂಘದ ಸಭೆ, ಉಪಾಹಾರ, ಸಂಜೆ ಬಹಿರಂಗ ಸಭೆ, ವಿವಿಧ ವಿನೋದಾವಳಿಗಳ ಕಾರ್ಯಕ್ರಮಗಳಾದುವು.

ಸಾಹುಕಾರ್ ಎಸ್. ವೆಂಕಟೇಶ ಪೈಗಳ ಶೋಚನೀಯ ನಿಧನ—ಮಂಗಳೂರಿನಲ್ಲಧ್ಯಗೃಹಸ್ಥರೂ, ಸರ್ವಜನಿಕ ಸೇವಾಸಕ್ತರೂ ಬೇಂಕರೂ ಆದ ಸಾಹುಕಾರ್ ಎಸ್. ವೆಂಕಟೇಶ ಪೈಗಳವರು ಕಳದ ತಾ. 29ರಲ್ಲಿ 44ನೇ ವಯಸ್ಸಿನಲ್ಲಿ ದುರ್ಧರಾತ್ರಿ ನಂತರ ಹೃದಯಸ್ತಂಭನದಿಂದಾಗಿ ಅಕಾಲ ಮೃತ್ಯುವಿಗೆ ತುತ್ತಾದುದು ಕಂಡಾ ನಿಷಾದವಿಸಿನಿಸುತ್ತದೆ.ಇವರ ಅಕಸ್ಮಿಕ ನಿಧನದ ವಾರ್ತೆಯಿಂದ ಇಡೀ ನಗರಕ್ಕೇನೇ ದಿಗ್ಭ್ರಮೆಬಡಿದಂತಾಯಿತು. ಸಾಹುಕಾರು ಜನರು ಅವರ ಅಂತ್ಯಕ್ರಿಯೆಗಳನ್ನೆ ನೆರವೆರಿಸಿದ್ದರು. ದಿವಂಗತರು ಸರ್ವಜನಿಕ ಸಂಸ್ಥೆಗಳಿಗೆ ಉದಾರ ಮನಸ್ಸಿನಿಂದ ಧನಸಹಾಯವನ್ನಿತ್ತಿದ್ದರು. ಇವರ ಅಗಲುವಿಕೆಯಿಂದ ಪ. ಕ. ಜಿಲ್ಲೆಗೊಂದು ಅಪಾರ ನಷ್ಟ ಉಂಟಾಯಿತು. ಶೀಯುತರಿಗೆ 5 ಹೆಣ್ಣು 2 ಗಂಡು ಮಕ್ಕಳಿದ್ದಾರೆ ಶ್ರೀ ವೈಗಳವರ ಆತ್ಮಕ್ಕೆ ಚಿರಶಾಂತಿಯನ್ನು ಕೋರಿ ಅವರ ನಿಧನದಿಂದುಂಟಾದ ಅವರ ಕುಟುಂಬದವರ ಅಪಾರ ದುಃಖದಲ್ಲಿ ಸಹಾನುಭಾವವನ್ನು ಸೂಚಿಸುವೆವು.

ಜನ್ಮದಿನೋತ್ಸವ ಆಚರಣೆ — ಮಂಗಳೂರಿನ ಶ್ರೀ ರಾಮ ಕೃಷ್ಣ ಆಶ್ರಮದವರು, ಶ್ರೀ ರಾಮ ಕೃಷ್ಣ ಪರಮ ಹಂಸರ ಸಹಧರ್ಮಿಣಿ ಮಹಾಮಾತೆ ಶ್ರೀ ಶಾರದಾ ಮಣಿ ದೇವಿಯ 99ನೆ ಜನ್ಮ ದಿನೋತ್ಸವವನ್ನು ಕಳೆದ ತಾ 30ರಲ್ಲು ಜರಗಿಸಲಿದ್ದುದು ಶ್ರೀ ಎಸ್. ವೆಂಕಟೇಶ ಪೈಗಳ ಅಕಸ್ಮಿಕ ನಿಧನದಿಂದಾಗಿ ಮುಂದುವರಿಸಲ್ಪಟ್ಟು ಇದೇ ತಾ 6ರಲ್ಲು ಸಂಜೆ ಬೆಸೆಂಟ್ ಬಾಲಿಕಾ ಪಾಠ ಶಾಲೆಯಲ್ಲಿ ಆಚರಿಸಿದರು.

ದಕ್ಷಿಣ ಭಾಗದ ಮಹದಾನಃ—ಜಿಲ್ಲೆಯ ದಕ್ಷಿಣ ವಿಭಾಗದ ಅಂದರೆ ಮಂಗಳೂರು, ಪಾಣೆಮಂಗಳೂರು, ಪುತ್ತೂರು, ಕಾಸರಗೋಡು, ಹೊಸದುರ್ಗ ಮಹದಾನ ಕ್ಷೇತ್ರಗಳ 5 ಎಸೆಂಬ್ಲಿ ಸ್ಥಾನಗಳಿಗೂ ಒಂದು ಪಾರ್ಲಿಮೆಂಟ್ ಸ್ಥಾನಕ್ಕೂ ಚುನಾವಣೆಯು ತಾ 8-1-52ರಲ್ಲಿ ನಡೆಯುತು. ಎಸೆಂಬ್ಲಿಯ 5 ಸ್ಥಾನಗಳಿಗೆ 20; ಪಾರ್ಲಿಮೆಂಟಿನ 1 ಸ್ಥಾನಕ್ಕೆ 2 ನಾಮೇದ್ದಾರಿದ್ದಾರೆ. ಎಲ್ಲಾ ಕಡೆಗಳಲ್ಲೂ ಕಾಂಗ್ರೆಸೇಗೆತ್ತರ ಸಂಭವನಿದೆ ಎಂದು ತಿಳಿದುಬರುತ್ತದೆ.

ಜಿಲ್ಲಾ ಬೋರ್ಡಿನ ಆಡಳಿತ ವರದಿ ವಿಮರ್ಶೆ ದ. ಕ. ಜಿಲ್ಲಾ ಬೋರ್ಡಿನ 1950-51ನೆ ವರ್ಷದ ಆಡಳಿತ ವರದಿ ಕುರಿತು ಜಿಲ್ಲಾ ಕಲೆಕ್ಟರರು ಮಾಡಿದ ವಿಮರ್ಶೆಯಲ್ಲಿ ಈ ರೀತಿ ಅಭಿಪ್ರಾಯ ಕೂಡಲಾಗಿದೆ.

ರಸ್ತೆಗಳು ಹ್ಯಾವೇ ಪಾತೆಯವರು ರಸ್ತೆಗಳನ್ನು ಕೃಷ್ಟಿಕರವಾಗಿ ನೋಡಿಕೊಂಡಿಲ್ಲವೆಂಬ ಸಾರ್ವಜನಿಕ ಅಭಿಪ್ರಾಯವನ್ನು ವರದಿಯು ವ್ಯಕ್ತಪಡಿಸಿರುತ್ತದೆ. ಈ ವರುಷದಲ್ಲಿ ಹದಿನೇಳು ಮೈಲುಗಳಷ್ಟು ಹೊಸ ರಸ್ತೆಗಳಾಗಿವೆ. ಮಲೆನಾಡು ಪ್ರಾಂತಗಳಲ್ಲಿ ರಸ್ತೆಗಳೂ ಸೇತುವೆಗಳೂ ಇನ್ನೂ ಅತೀ ಅಗತ್ಯವಾಗಿ ದವುಗಳಾಗಿವೆ. ರೈಲು ರಸ್ತೆ ಅರವತ್ತು ಮೈಲು ದೂರ. ಮಂಗಳೂರು ಹಾಸನ ರೈಲು ರಸ್ತೆಯ ಸೂಚನೆಯನ್ನೂ ಇನ್ನಾದರೂ ಕೈಕೊಳ್ಳಬಹುದು. ಕರಾವಳಿಯ ಕಡವುಗಳ ವಿಚಾರದಲ್ಲಿ ಹೆಚ್ಚಿನ ಗಮನವೀಯಬೇಕು. ಮುಂದಿನ ಬಜೆ ವರುಷಗಳಲ್ಲಿ 1769 ಮೀಟರ ನೆಡುವ ಯೋಜನೆಯಾಗಿದೆ. ಇದು ಕಡಿಮೆಯಾಗಿದೆ.

ಸಾರ್ವಜನಿಕ ಆರೋಗ್ಯ — ಈಗ ಇರುವ 4 ಆಸ್ಪತ್ರೆಗಳು 8 ಡಿಸ್ಪೆನ್ಸರಿಗಳು 29 ಗ್ರಾಮಾಲಯಗಳು ಈಚೆಲ್ಲೆಗೆ ಬಹಳ ಕಡಿಮೆ. ಜೊತೆಯಗಡ ಎ. ಎಸ್. ಕೋಮನ್ ನಾಯರರು ಆಸ್ಪತ್ರೆಗಳಿಗಾಗಿ ರೂಪಾಯಿ 1000 ದಾನವಿತ್ತುದು ಸ್ತುತ್ಯಾರ್ಹ. ಬೋರ್ಡು ಇಂತಹ ದಾನ ಸಿಗುವಂತೆ ಕನಿಷ್ಠ ವರ್ಷಕ್ಕೊಮ್ಮೆಯಾದರೂ ಪಯತ್ನಿಸಬೇಕು. ಆರೋಗ್ಯ ಕಾಪಾಡುವ ವಿಚಾರದಲ್ಲಿ ಬೋರ್ಡು ಇನ್ನೂ ಹೆಚ್ಚಿನ ಕೆಲಸಮಾಡಬೇಕು.

ವಿದ್ಯಾಭ್ಯಾಸ—ಈಗ ಬೋರ್ಡಿಗೆ 556 ಪ್ರಾಥಮಿಕ ಶಾಲೆಗಳನ್ನು ನಡೆಸುತ್ತಿದೆ. ಪ್ರಾಥಮಿಕ ಶಿಕ್ಷಣ ನಿಧಿಯಲ್ಲ ಜಮಖಿಲ್ಲದುದು ರಿಂದ ಹೊಸ ಶಾಖೆಗಳನ್ನು ತೆರೆಯಬಾರದಾಗಿ ಸರಕಾರ ಸೂಚಿಸಿದೆ. ಬೋರ್ಡಿನ ಕೈಕೆಳಗೆ 13 ಹೈಸ್ಕೂಲುಗಳಿವೆ. ಈ ಶಾಲೆಗಳ ಶಟ್ಟೋಣಗಳ ಪುರಸ್ಸಿಯ ಕಡಿಗೆ ಇನ್ನೂ ಗಮನವೀಯಬೇಕು. ಬೋರ್ಡಿನ ಆರ್ಥಿಕ ಸ್ಥಿತಿಯು ಕೃಶವಾಗಿಲ್ಲವಾದ್ದರಿಂದ ಹೆಚ್ಚು ಕಡಿಮೆಯಾದಲು ಪ್ರಯತ್ನಿಸಬೇಕು. ಬೋರ್ಡಿನ ಸ್ಥಳಾಕ್ರಮಣವೇ ಮೊದಲಾದ ಕಛೇರಿಯ ವಿಚಾರದ ಕೆಲಸವು ಏನೇನೂ ಕೃಷ್ಟಿಕರವಾಗಿಲ್ಲ. ಈ ಕುರಿತು ಸರಕಾರವಿತ್ತ ಮೊದಲ ಸೂಚನೆಗಳೇ ದಾಖಲಿಸಲ್ಪಟ್ಟಿಲ್ಲಿಂ ಬೋರ್ಡು ಅಧ್ಯಕ್ಷರು ಜಿಲ್ಲೆಯಲ್ಲಿ ಕೈಕೊಂಡ ಸಂಚಾರ ಕಾರ್ಯಕ್ರಮವು ಕೂಡ ಕೃಷ್ಟಿಕರವಾಗಿಲ್ಲ, ಒಟ್ಟಾರೆ ಬೋರ್ಡಿನ ಆಡಳಿತೆಯು ಚೆನ್ನಾಗಿದೆ, ಬೋರ್ಡಿನ ವಿಚಾರದಲ್ಲಿ ಜನತೆಯು ವಿಶ್ವಾಸವಿದೆ.

ಪಾರ್ಲಿಮೆಂಟ್ ಚುನಾವಣೆ—ಡಾ| ಬಿ. ಶೆಟ್ಟಿಯವರು ಶ್ರೀ ಸದಾಶಿವರಾವ್ ವೈದ್ಯಾಶ್ರಮದ ವಾರ್ಷಿಕೋತ್ಸವವು ಕಳದ ತಾ. 30 ಮತ್ತು 31ರಲ್ಲು ಅನುಕ್ರಮವಾಗಿ ಶ್ರೀಗಳಾದ ಎನ್. ಎನ್. ಸಾವರ್ಜ ಮತ್ತು ಕೆ. ಬಿ. ಜನರಾಜ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು.

ಉಡುಪಿ

ರೇಶನಿಂಗ್ ಎಕ್ಸ್‌ಪ್ಯಾನ್ಸರಿ ಕಮಿಟಿ ಸಭೆಯು ಈಚೆಗೆ ನಿವೃತ್ತ ಡಿಸ್ಟ್ರಿಕ್ಟ್ ಕಲೆಕ್ಟರ್ ಶ್ರೀ ಕೆ. ಕೃಷ್ಣಯ್ಯನವರ ಅಧ್ಯಕ್ಷತೆಯಲ್ಲಿ ಮುನಿಸಿಪಲ್ ಮೈನರ್ ಶಾಲೆಯಲ್ಲಿ ಜರಗಿತು. ಉಡುಪಿ ಸೀದಾ ಕ್ಷೇತ್ರದಲ್ಲಿ ಈಗ ಕೊಡಲಾಗುವ ಅಕ್ಕಿ ಮಿತಿಯನ್ನು ಎಂಟು ಟಿನ್ನಿಗೆ ಏರಿಸಬೇಕೆನ್ನುವ, ಪಟ್ಟುದಾರರಲ್ಲದವರು ಸೀದಾ ಕ್ಷೇತ್ರದ ಹೊರಗಿನಿಂದ ತಮಗೆ ಬೇಕಾಗುವ ಸೀದಾ ಪದ್ಧತಿಗನುಸಾರವಾಗಿ ಒಂದು ವರ್ಷದ ಅಕ್ಕಿಯನ್ನು ತಂರಿಟ್ಟುಕೊಳ್ಳಲು ಅನುಮತಿ ದೊರೆಯಬೇಕೆನ್ನುವ ನಿರ್ಣಯವಾಯಿತು. ಎಂಟು ವರುಷಕ್ಕೆ ಮೇಲ್ಪಟ್ಟ ಮಕ್ಕಳಿಗೆ ಪ್ರಾಯಸ್ಥರ ಪ್ರಮಾಣದಲ್ಲಿ ರೇಶನ್ ದೊರೆಯುವರೆಗೆ ಈಗ ಇರುವ ಪ್ರಾಯಸ್ಥರ 12 ವರ್ಷದ ಅರ್ಜಿಕೆಯನ್ನು ಎಂಟು ವರುಷಕ್ಕೆ ತಗ್ಗಿಸಬೇಕೆಂದು ಸರಕಾರವನ್ನು ಕೇಳಿಕೊಳ್ಳಲಾಯಿತು. ಮಾನವಳಿಗಳಿಗೆ ವಯಸ್ಸಿನ ದೃತ್ಯಾಸವಿಲ್ಲದ ರೇಶನಿಂಗ್ ಮಿತಿಯು ದೊರೆಯುವಂತೆ ಕಾರ್ಡುದಾರರಿಗೂ ದೊರಕುವಂತಾಗಬೇಕೆನ್ನುವ, ಉಡುಪಿ ಇಲೆಕ್ಟ್ರಿಕ್ ಕಂಪೆನಿಗೆ ಹೊಸ ಎಂಜಿನನ್ನು ಒದಗಿಸಿ ಕೊಟ್ಟು ಕೃಷಿಕರೂ ಹೆಚ್ಚಿನ ವಿದ್ಯುತ್ತನ್ನು ಉಪಯೋಗಿಸುವಂತಾಗಬೇಕೆನ್ನುವ ಶಿಫಾರಸ್ಸುಗಳಾದುವು.

ಪರ್ಯಾಯ ಪಾರ್ಥ ಪ್ರಾರಂಭ ಉಡುಪಿಯ ಶ್ರೀ ಕೃಷ್ಣ ಮಠದಲ್ಲಿ ಇದೇ ತಾ. 9ರಲ್ಲು ಸಪ್ತೋತ್ಸವ ಪ್ರಾರಂಭವಾಗಿದೆ. ಮಳೆಯ ಸಂಕ್ರಾಂತಿ ಮತ್ತು ಚೂಡೋತ್ಸವ ಗಳು ಇದೇ ತಾ. 14, 15ರಲ್ಲು ಜರಗುವವು. ತಾ. 18ನೇ ಶುಕ್ರವಾರ ಶ್ರೀ ವೇದವಾರ ಸ್ವಾಮಿಗಳ ಪರ್ಯಾಯ ಮಹೋತ್ಸವ ನೆರವೇರಲಿದೆ.

ಮುನಿಸಿಪಲ್ ಆಡಳಿತ ವರದಿಯ ವಿಮರ್ಶೆ ಮದ್ರಾಸು ಸರಕಾರವು ಉಡುಪಿ ಮುನಿಸಿಪಲ್ ಕೌನ್ಸಿಲಿನ 1950-51ನೇ ವರ್ಷದ ಆಡಳಿತ ವರದಿಯನ್ನು ವಿಮರ್ಶಿಸಿ ಈ ಕೆಳಗಿನ ಅಭಿಪ್ರಾಯಗಳನ್ನು ಕೊಟ್ಟಿದೆ. ಕೌನ್ಸಿಲು ವಿಸಾಟಿಂಗುಗಳಿಗೆ ಮೆಂಬರರು ಹಾಜರಾದ ಸರಾಸರಿ ಸಂಖ್ಯೆಯು ಕಡಿಮೆಯಾಗಿದೆ. ಮೆಂಬರರು ವಿಸಾಟಿಂಗುಗಳಿಗೆ ಹೆಚ್ಚಾಗಿ ಹಾಜರಾಗಿ ನಗರಾಡಳಿತದಲ್ಲಿ ಹೆಚ್ಚಿನ ಆಸಕ್ತಿಯನ್ನು ವಹಿಸಬೇಕಾಗಿದೆ ಮುನಿಸಿಪಲ್ ಕ್ಷೇತ್ರದ ರಸ್ತೆಗಳು ಕೃಷ್ಟಿಕರವಾಗಿವೆ ಎಂದು ಕಲೆಕ್ಟರರು ಬರೆದಿರುತ್ತಾರೆ. ಜಲ್ಲಿ ಕಲ್ಲು ಹಾಳಲು ಬಾಕಿಯಿರುವ ಮೂರು ಮೈಲು ರಸ್ತೆಗಳ ಕಡೆಗೆ ಲಕ್ಷ್ಯಕೊಡಬೇಕು. ಸ್ಥಳಾಕ್ರಮಣ ಕೆಲಸವು ಸಮಾಧಾನಕರವಾಗಿಲ್ಲ. ಟೌನ್ ಸರ್ವೆಯರೊಬ್ಬನ ನೇಮಕವಾಗಬೇಕು.

ಮುನಿಸಿಪಲ್ ಕ್ಷೇತ್ರದಲ್ಲಿ ಎಲಿಮೆಂಟರಿ ವಿದ್ಯಾಭ್ಯಾಸವು ಕಡ್ಡಾಯವಾಗಿಲ್ಲ. ಯಾವ ಶಾಲೆಗೂ ಹೋಗದ 194 ಹುಡುಗರು ಮತ್ತು 118 ಹುಡುಗಿಯರು ಕೂಡಾ ವಿದ್ಯಾಭ್ಯಾಸ ಪಡೆಯುವಂತಾಗಬೇಕು. ವಯಸ್ಕ ಶಿಕ್ಷಣ ಕೇಂದ್ರಗಳು ಜಾಸ್ತಿಯಾಗಬೇಕು ಸಂತೆಮಾರ್ಕೆಟು, ಗಾಡಿಸ್ಟೇಂಡು, ಕಸಾಯಿ ಖಾನೆಗಳ ಉತ್ಪತ್ತಿಯು ವರದಿ ವರುಷದಲ್ಲಿ ಕಡಿಮೆಯಾಗುವುದರ ಕಾರಣಗಳನ್ನು ಕಂಡು ಹಿಡಿಯಬೇಕು. ಅಲ್ಲದೆ ಜಾಲ್ತಿ ವರುಷದಲ್ಲಿ ಉತ್ಪತ್ತಿಯನ್ನು ಜಾಸ್ತಿಮಾಡುವಂತಾಗಬೇಕು. ಮುನಿಸಿಪಾಲಿಟಿಯಲ್ಲಿ ಹಿರಿಗೆ ಕೇಂದ್ರವೊಂದಿದ್ದು ಅಲ್ಲಿಯ ಸೂಲಗಿತ್ತಿಯ ಕೆಲಸವು ತೃಪ್ತಿಪಟ್ಟಿಗೆ ಸಮಾಧಾನಕರವಿದೆ. ಆದರೆ ವರದಿ ವರುಷದಲ್ಲಾದ ಜನನಗಳ ಪೈಕಿ 398 ಹೆರಿಗೆಗಳಿಗೆ ಮುನಿಸಿಪಾಲಿಟಿ ಏನೂ ಯಿಂದ ಸಹಾಯ ದೊರೆಯಲಿಲ್ಲ. ನಗರದಲ್ಲಾಗುವ ಪ್ರತಿಯೊಂದು ಜನನಕ್ಕೂ ಮುನಿಸಿಪಲ್ ಸೂಲಗಿತ್ತಿಯ ಸೇವೆ ದೊರೆಯುವಂತಾಗಬೇಕು. ಹೆಚ್ಚಿನ ಮನೆಗಳಿಗೆ ಪಾಯಖಾನೆಗಳು ಇಲ್ಲವಾದುದರಿಂದ ಮಪ್ರಾಸು ಪಬ್ಲಿಕ್ ಹೆಲ್ತ್ ಅಕ್ಟನ್ನು ಸದುಪಯೋಗ ಪಡಿಸಿಯಾದರೂ ಪಾಯಿಖಾನೆಗಳ ಸಂಖ್ಯೆ ಜಾಸ್ತಿಯಾಗುವಂತಾಗಬೇಕು.

ಕೆಲವೆಗೆ ವಸೂಲಿ ಕೆಲಸವೂ ಸಮಾಧಾನಕರವಾಗಿಲ್ಲ. ವರದಿ ವರುಷದಲ್ಲಿ ರೂ 58,190 ವಸೂಲಿಗೆ ಬಾಕಿಯಿತ್ತು. ಈ ಜಾಲ್ತಿ ವರುಷದಲ್ಲಿ ಪೂರ್ಣ ವಸೂಲಾಗಬೇಕು. ನಗರ ಸಭಾಡಳಿತವು ಎಂದಿನಂತೆ ವರದಿ ವರುಷದಲ್ಲೂ ಸಾಧಾರಣ ಚೆನ್ನಾಗಿದೆ.

ಬೆಂಕಿಯಿಂದ ಮರಣ—ತಾ. ೨ ರಂದು ಉಡುಪಿಯಿಂದ ಸುಮಾರು 3 ಮೈಲು ದೂರದಲ್ಲಿರುವ ಕುಂಜೀಲ ಕಾಡಿನ ಮನೆಯೊಂದರಲ್ಲಿ ಹುಲ್ಲಿನ ಗುಡಿಸಲೊಂದಕ್ಕೆ ಬೆಂಕಿಬಿದ್ದು 6 ತಿಂಗಳ ತೊಟ್ಟಿಲ ಕೂಸೊಂದು, 2 ವರ್ಷದ ಮಗುವೊಂದು ಮೃತಪಟ್ಟಿವೆ. ಬೆಂಕಿ ದ್ದಾಗ ಮನೆಯಲ್ಲಿ ಹಿರಿಯರಾರೂ ಇಲ್ಲವೆಂದು ತಿಳಿದುಬರುತ್ತದೆ.

ತಿದ್ದುಪಡಿ:—ಕಳದ ಸಂಚಿಕೆ ೬ ನೇ ಪುಟದಲ್ಲಿ ಪ್ರಕಟವಾದ ಪ್ರಬಂಧದಲ್ಲಿ ಕನ್ನಾಟಕ ವಿಶೇಷೀಕರಣ ಎಂಬ ವೇಳೆ ದೊಂದಿಗೆ ಅದರ ಲೇಖಕರಾದ ಶ್ರೀ ಆರ್. ಆಸ್ರಾಂ, ವಕೀಲರ್, ಮಂಗಳೂರು ಇವರ ಹೆಸರು ಬಿಟ್ಟು ಹೋಯಿದಕ್ಕಾಗಿ ಪಾದಿಸುತ್ತೇವೆ. (ಸಂ. ನ)



ಹೊಸವರುಷ, ಮತ್ತು ಪರ್ಯಾಯ ಮಹೋತ್ಸವಗಳ ಸಮ್ಮಿಲನದ ಮುಹೂರ್ತದಲ್ಲಿ

ನಡಿಯುವ ಚಿತ್ರ

ಹರ ಹರ ಮಹದೇವ

ಅಥವಾ

ಕಾಮದಹನ

ಪಾತ್ರವರ್ಗ:—ತ್ರಿಲೋಕ್ ಕಾಪೂರ್, ಜೀವನ್, ಮಿನ್ಹಾ, ವಿ.ಕಾಪೂರ್, ನಿರುಪರೋಯ್, ದುರ್ಗಾಖೋಟೆ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ

UDIPI MUNICIPALITY

TENDER NOTICE

Sealed tenders will be received by the undersigned at the Municipal Office, Udipi up to 4. O. P. M. on 18-1-1952 for the following work:—

Name of work	Estimate	Tender deposit
Putting up five compost cisterns measuring 10'x6'x3½' each and a thatched shed of 20' x 10'	Rs.2000/-	Rs 100/-

Further Particulars may be obtained from the Municipal Office during Office hours on working days.

Municipal Office, Udipi,
Dated 8-1-1952.

A. S. D'Souza,
Commissioner, U. M.

ದಕ್ಷಿಣ ಕನ್ನಡ ಜಿಲ್ಲಾ ಉತ್ತರ ವಿಭಾಗದ ಚುನಾವಣಾ ಫಲಿತಾಂಶ

ಮೂಲ್ಕಿಯಲ್ಲಿ ಕಾಂಗ್ರೆಸಿನ ಪ್ರಚಂಡ ವಿಜಯ!

ಎದುರಾಳಿಗಳು ಡಿಪಾಸಿಟ್ ಕಳಕೊಂಡರು

ತಾ. 2-1-52ರಲ್ಲಿ ನಡೆದ ಚುನಾವಣೆಯು ಉತ್ತರ ವಿಭಾಗದ ಸೈಕಿ ಮೂಲ್ಕಿ ಮತದಾರ ಕ್ಷೇತ್ರದ ಮತಗಣನೆಯು ತಾ 4ರಲ್ಲಿ ಮಂಗಳೂರಿನಲ್ಲಿಯೂ, ಕುಂದಾಪುರ ಮತದಾರ ಕ್ಷೇತ್ರದ ಮತಗಣನೆಯು ತಾ. 5ರಲ್ಲಿ ಕುಂದಾಪುರದಲ್ಲಿಯೂ, ಬ್ರಹ್ಮಾವರ ಮತದಾರ ಕ್ಷೇತ್ರದ ಮತಗಣನೆಯು ತಾ. 6ರಲ್ಲಿ ಉಡುಪಿಯಲ್ಲಿಯೂ ನಡೆದು ಫಲಿತಾಂಶ ಹೊರಬಿದ್ದಿರುವುದು ಉದ್ದಿ ಮತ್ತು ಕಾರ್ಕಳ ಮತದಾರ ಕ್ಷೇತ್ರಗಳ ಮತಗಣನೆಯು ತಾ. 9 ಮತ್ತು 10ರಲ್ಲಿ ನಡೆಯಲಿದೆ. ಅದಿಗೆ ಎರಡೂ ಕ್ಷೇತ್ರಗಳ ಶಿರ್ಷ ಮತ್ತು ಹೆಬ್ರಿ ಮತಕಟ್ಟೆಗಳಲ್ಲಿ ಪ್ರಿಸೈಡಿಂಗ್ ಆಫೀಸರರ ಅಡಗ್ರತೆಯಿಂದ ಮತಪತ್ರಗಳ ಬದಲಾವಣೆ [ಎಸೆಂದ್ದಿದ್ದು ಪಾರ್ಲಿಮೆಂಟಿಗೆ, ಪಾರ್ಲಿಮೆಂಟಿದ್ದು ಎಸೆಂದ್ದಿಗೆ] ಯಾಗಿರುವುದೆಂದೂ ಆ ಸಂಬಂಧ ಮತಗಣನೆ ತಡೆಹಿಡಿಯಬಹುದೆಂದೂ ತಿಳಿದು ಬರುತ್ತದೆ.

ಮೂಲ್ಕಿ ಮತದಾರ ಕ್ಷೇತ್ರದಿಂದ

ಕಾಂಗ್ರೆಸ್ ಹುರಿಯಾಳು ಶ್ರೀ ಎಸ್. ಎಸ್. ಸುವರ್ಣನವರು 26361 ಮತಗಳನ್ನು ಪಡೆದು ಆರಿಸಿ ಬಂದಿರುವರು. ಈ ಕ್ಷೇತ್ರದಲ್ಲಿ ಒಟ್ಟು 68621 ಮತದಾರರಿದ್ದು 42209 ಮಂದಿ ಮತದಾನ ಮಾಡಿರುವರು. ಶ್ರೀ ಸುದರ್ಶನ ಎದುರಾಳಿಗಳಾದ ಡಾ! ಸಂಜೀವ ನಾಥ (ಸಾಮ್ಯವಾದಿ) 8562, ಶ್ರೀ ಕೆ. ಸದಾಶಿವರಾವ್ [ಜನಸಂಘ] 5267 ಶ್ರೀ ಟಿ. ಬಿ. ಡಿ. ಸೋಜ [ಸ್ವತಂತ್ರ] 2919 ಮತಗಳು ದಿದ್ದಿವೆ. ಇವರಲ್ಲಿ ಕೊನೆಯವರಿಬ್ಬರು ತಮ್ಮ ಡಿಪೊಜಿಟುಗಳನ್ನು ಕಳೆದುಕೊಂಡಿರುವರು.

ಕುಂದಾಪುರ ಮತದಾರ ಕ್ಷೇತ್ರದಿಂದ

ಕಾಂಗ್ರೆಸ್ ಹುರಿಯಾಳು ಶ್ರೀ ವೈ. ಮಂಜಯ್ಯ ಶೆಟ್ಟರು 4853 ಅಧಿಕ ವೋಟುಗಳಿಂದ ಮದ್ರಾಸ್ ಎಸೆಂಬ್ಲಿಗೆ ಚುನಾಯಿತರಾಗಿದ್ದಾರೆ. ಈ ಕ್ಷೇತ್ರದಲ್ಲಿ 44841 ಮಂದಿ ಮತದಾನ ಮಾಡಿದರು. ಕಾಂಗ್ರೆಸ ಹುರಿಯಾಳು ಶ್ರೀ ಶೆಟ್ಟರಿಗೆ 24847 ವೋಟುಗಳು ಅವರ ಎದುರು ಪ್ರಬಲ ಸಮಾಜವಾದಿ ಹುರಿಯಾಳು ಶ್ರೀ ವಿ. ಶ್ರೀನಿವಾಸ ಶೆಟ್ಟರಿಗೆ 19994 ವೋಟುಗಳೂ ದೊರೆತ್ತಿದ್ದುವು

ಬ್ರಹ್ಮಾವರ ಮತದಾರ ಕ್ಷೇತ್ರದಿಂದ- ಕೆ. ಮಂ. ಪ್ರಬಲಪ್ಪನ ಹುರಿಯಾಳು ಶ್ರೀ ಎಸ್ ಎಸ್. ಕೊಳ್ಳಿಬೈಲ್, ಅವರು 1548 ಬಹುಮತಗಳಿಂದ ಆಯ್ಕೆಪ್ಪಟ್ಟರುದರು ಈ ಕ್ಷೇತ್ರದ ಒಟ್ಟು ಮತದಾರರ ಸಂಖ್ಯೆ 64926ರಲ್ಲಿ 43905 ಮಂದಿ ಮತದಾನ ಮಾಡಿರುವರು. ಕಾಂಗ್ರೆಸ ಹುರಿಯಾಳು ಶ್ರೀ ಜಗಜ್ಜೀವನದಾಸ ಶೆಟ್ಟರಿಗೆ 21171 ಮತಗಳೂ ಕೆ. ಮಂ. ಪ್ರ. ಪ ಹುರಿಯಾಳು ಶ್ರೀ ಎಸ್. ಎಸ್. ಕೊಳ್ಳಿಬೈಲ್ ಅವರಿಗೆ 22719 ಮತಗಳು ದೊರೆತ್ತಿದ್ದವು. 15 ಮತಗಳು ಮಾತ್ರ ಹಾಳಾಗಿದ್ದುವು.

ಮರವಂತೆ—ಕುಂದಾಪುರ ತಾಲೂಕು ಮರವಂತೆಯ ಶ್ರೀ ಜಕ್ಕನಕಟ್ಟೆ ಯಕ್ಷೇಶ್ವರೀ ಅಮ್ಮನವರ ಸನ್ನಿಧಿಯಲ್ಲಿ ಕಾಲಂಪ್ರತಿ ಜರಗುವ ಮಂಡಲ ಸೇವೆ ಮತ್ತು ಹೊಸತಾಗಿ ಪ್ರಾರಂಭಿಸಲಾಗುವ ಗೆಂಡಸೇವೆಯು ಇದೇ ತಾ 22ನೇ ಮಂಗಳವಾರ ರಾತ್ರಿನಡೆಯಲಿರುವುದು

ಕುಳ್ಳೆಟ್ಟೆ—ಕುಂದಾಪುರ ತಾಲೂಕಿನ ಪಳಿಂಜೆ, ಉಳಿಪಾಡಿ, ಕೊಲ್ಲೂರು ಮತ್ತು ತಾಳಿಪಾಡಿ ಗ್ರಾಮಗಳ ಕೇಂದ್ರ ಸ್ಥಳವಾದ ಕುಳ್ಳೆಟ್ಟೆಯಲ್ಲಿ ಕಳದ ತಾ. 31ರಲ್ಲಿ ಶ್ರೀ ಘಾರಿ ನಾಮಾಂಕಿತ ಸಾರ್ವಜನಿಕ ಪಾಚನಾಲಯವೊಂದು ತೆರೆಯಲಾಗಿದೆ.

ಮಿಜಾರು—ಕಳದ ಫೆಬ್ರವರಿ ತಿಂಗಳಾಂಧಧಲ್ಲಿ ಶ್ರೀ ಎಮ್. ಕೇಶವ ಶೆಟ್ಟರ ನೇತೃತ್ವದಲ್ಲಿ ತೆರೆಯಲಾದ ವಯಸ್ಕರ ಕೂಟದ ವರ್ಷಾವಧಿ ಭಜನ ಮಂಗಳವು ಕಳದ ತಾ. 24ರಲ್ಲು ಕೂಟದ ಅಧ್ಯಕ್ಷ ಶ್ರೀ ಎಸ್. ಎಸ್. ಅಡ್ಯಂತಾಯರ ಅಧ್ಯಕ್ಷತೆಯಲ್ಲಿ ಅಕ್ಷಂಕ ಯಶಸ್ವಿಯಾಗಿ ಜರಗಿತು. ಈ ಸಮಾರಂಭದಲ್ಲಿ ಜಾತಿಮತ ಭೇದವಿಲ್ಲದೆ ಸಾಧಾರಣ ಐದುನೂರು ಜನರು ಭಾಗವಹಿಸಿದ್ದರು.

ಲೇಬರ್ ಶಾಲು ಹರಿಜನ ಮುಕ್ಕಳ ಊಟದ ಗೋಳು—ಕಂಗ್ರೆಸ್ ಸರಕಾರವು ಅಧಿಕಾರಕ್ಕೆ ಬಂದಂದಿನಿಂದ ಮುದ್ರಾಸ ಪ್ರಾಂತದ ಎಲ್ಲಾ ಹರಿಜನ ಶಾಲಾ ಮಕ್ಕಳಿಗೆ ಮಧ್ಯಾಹ್ನ 1 ಊಟದ ವ್ಯವಸ್ಥೆಯಾಗಿರುವುದು. ಆದರೆ ದ. ಕ. ಜಲ್ಲೆಯಲ್ಲೂ ವ್ಯವಸ್ಥೆ ಇದ್ದಾಗ್ಯೂ ಈವರೆಗೆ ಊಟದ ವ್ಯವಸ್ಥೆಯನ್ನು ಪಾರ್ಷಿನ ಕಂಟ್ರಾಕ್ಟರ ಕಾರ್ಯಕ್ರಮವಲ್ಲಿ ಲೋಪದೋಷಗಳುಂಟಾಗಿ ಬಾಲಕರಿಗೆ ಸರಿಯಾಗಿ ಊಟ ಸಿಕ್ಕುತ್ತಿಲ್ಲವೆಂಬ ದೂರು ಬರುತ್ತಿದೆಯೆಂದೂ ಆ ಕಾರಣ ಮೇಲಧಿಕಾರಿಗಳೂ ತಕ್ಕ ಸಿಗಾ ಕೊಡಬೇಕಾಗಿದೆಯೆಂದೂ ಶ್ರೀ ಕೆ. ಈಶ್ವರ, ಎಮ್. ಎಲ್. ಎ. ಅವರು ತಿಳಿಸುತ್ತಾರೆ.

ಮಲ್ಪೆ—ದಿ ಸೌರ್‌ಕೆನರಾ ಫಿಶರೀಸ್ ಟೀಚರ್ಸ್ ಯೂನಿಯನ್ನಿನ ವಾರ್ಷಿಕ ಅಧಿವೇಶನವು ತಾ. 29-12-1951ರಲ್ಲಿ ಮಲ್ಪೆ ಫಿಶರೀಸ್ ಮಿಡಲ್ ಸ್ಕೂಲಿನಲ್ಲಿ ಉಡುಪಿ ಉತ್ತರ ರೇಂಜಿನ ಶಾಲೆಗಳ ಶಿಕ್ಷಕಿ ಇನ್ಸ್‌ಪೆಕ್ಟರಾದ ಶ್ರೀ ಎಚ್. ಸಂಜೀವ ರಾಯರ ಅಧ್ಯಕ್ಷತೆಯಲ್ಲಿ ಜರಗಿತು ಹತ್ತಕಾರ್ಯದರ್ಶಿಗಳಾದ ಶ್ರೀ ಎ. ಸುಬ್ರಾಯ ಆಲ್ಪೇರು ವಾರ್ಷಿಕ ವರದಿಯನ್ನೂ, ಲೆಕ್ಕವನ್ನೂ ಸಭೆಯ ಮುಂದೆ ಇಡಲಾಗಿ ಸರ್ವಾನುಮತದಿಂದ ಮಂಜೂರುಮಾಡಲಾಯಿತು. ಸಭೆಯ ಪರವಾಗಿ ಶ್ರೀ ಜೋಸೆಫ್ ಡಿ'ಸೋಜರೂ, ಶ್ರೀ ಎ. ಜಿ ಗೋಪಾಲಕೃಷ್ಣ ರಾಯರೂ, ಶ್ರೀ ಕುಮಾರ ಸ್ವಾಮಿಯವರೂ ಬಾಷಣಗಳನ್ನಾಡಿದರು. ತಾ. 1-4-47ರ ಲಾಗಾಯಿತಿನಿಂದೆ ಎಲ್ಲ ಉಪಾಧ್ಯಾಯರಿಗೆ ಸಿಕ್ಕಿದ್ದಂತೆ ಹೊಂದಿಸಿ ಬಾಕಿ ಹಣವು ಫಿಶರೀಸ್ ಉಪಾಧ್ಯಾಯರಿಗೆ ಸಿಕ್ಕಬೇಕೆಂತಲೂ, ಸರಕಾರ ಮಂಜೂರು ಮಾಡಿದ್ದ 90 ಪೋಸ್ಟುಗಳಿಗೆ ಉಪಾಧ್ಯಾಯರನ್ನು ಕಾಯಂಗೊಳಿಸಬೇಕೆಂತಲೂ, ಹಂಗಾಮಿ ಸರ್ವಿಸಿನವರನ್ನು ಕೂಡಲೇ ಕ್ರಮವಾದ ಸರ್ವಿಸ್ಸಿಗೆ ತರಬೇಕೆಂತಲೂ, ಫಿಶರೀಸ್ ಉಪಾಧ್ಯಾಯರಿಗಾಗಿ ಮಲ್ಪೆಯಲ್ಲಿಯೇ ಒಂದು ಸರಕಾರಿ ಸಂಘವನ್ನು ತೆರೆಯಬೇಕೆಂತಲೂ, ಉಪಾಧ್ಯಾಯನಿಯರ ಮಕ್ಕಳಿಗೆ ಸಿಕ್ಕಿದ್ದ ಸಂಬಳ ರಿಯಾಯತಿಯು ಉಪಾಧ್ಯಾಯರ ಮಕ್ಕಳಿಗೂ ಸಿಗಬೇಕೆಂತಲೂ, ಮುಟ್ಟೋ ಪಾಧ್ಯಾಯರ ಭತ್ತೆಯನ್ನು ಕೂಡಲೇ ಹೆಚ್ಚಿಸಬೇಕೆಂತಲೂ, ಕಲ್ಲಿಕೋಟೆಯಲ್ಲಿರುವ ಫಿಶರೀಸ್ ಟ್ರೈನಿಂಗ್‌ನವರಿಗಾದರೂ ರೂ 10/- ರ ಭತ್ತೆಯನ್ನು ಕೊಡಬೇಕೆಂತಲೂ ಹೊಸ ಸ್ಕೇಲಾನಂತ್ರ ಹಿಂದಿನ ಬಾಕಿಗಳನ್ನು ಅನಾವಶ್ಯಕವಾದ ವಿಳಂಬವಿಲ್ಲದೆ ಇಲಾಖೆಯವರು ಕೊಡಬೇಕೆಂತಲೂ, ಪ್ರೊವಿಡೆಂಟ್ ಫಂಡ್ ಮತ್ತು ಜೀವವಿಮೆಯ ಸ್ಕೀಮನ್ನು ಕೂಡಲೇ ಜಾರಿಗೆ ತರಬೇಕೆಂತಲೂ ಪ್ರತಿಯೊಬ್ಬ ಉಪಾಧ್ಯಾಯನಿಗೆ ಸಾಧ್ಯವಾದಷ್ಟು ಮನೆಗೆ ಸಮೀಪವೇ ನೇಮಕ ಮಾಡಬೇಕೆಂತಲೂ ಪಗ್ಗೆ ರಂಗಪ್ಪಗೌರು ಸರ್ವಾನುಮತದಿಂದ ಸಂಜೂರು ಮಾಡಲ್ಪಟ್ಟುವು.

ಬಳಿಕ 1952ನೇ ಇಸವಿಯ ಕಾರ್ಯಕಾರೀ ಮಂಡಲಿಗೆ ಈ ಕೆಳಗಿನ ಸದಸ್ಯರುಗಳನ್ನು ಸರ್ವಾನುಮತದಿಂದ ಆರಿಸಲಾಯಿತು.

1] ಶ್ರೀಮತಿ ಎಸ್ ಸಾರಾ, ಬಿ. ಎ. ಬಿ. H. M ಮಲ್ಪೆ ಮಿಡಲ್ ಸ್ಕೂಲು (ಅಧ್ಯಕ್ಷೆ), 2] ಶ್ರೀಯುತ ಬಿ ನಾರಾಯಣ, 3] ಶ್ರೀ ಎ. ಸುಬ್ರಾಯ ಆಲ್ಪೆ, (ಜತೆಕಾರ್ಯದರ್ಶಿಗಳು), 4] ಜೋಸೆಫ್ ಡಿ' ಸೋಜ, 5] ಶ್ರೀ ಪಿ ಶಿವಣ್ಣ ಜೆಗ್ಗ, 6] ಶ್ರೀ ಆನಂದ ತಿಂಗಳಾಯ, 7] ಶ್ರೀ ಎ. ಜಿ. ಗೋಪಾಲ ಕೃಷ್ಣರಾಯ, 8] ಶ್ರೀ ಯು. ಚಂದಪ್ಪ, 9] ಶ್ರೀ ಯು ಚಂದಮ್ಮ ಮೊಂಡರ್

ಅಧ್ಯಕ್ಷರ ಭಾಷಣ, ಲಘುಉಪಹಾರ, ಧನ್ಯವಾದ ಸಮರ್ಪಣೆಯಾದ ಬಳಿಕ ರಾಷ್ಟ್ರಗೀತೆಯೊಂದಿಗೆ ಸಭಾಂತ್ಯವಾಯಿತು.

ಹೊಸ ಜಿಲ್ಲಾ ಕಾಂಗ್ರೆಸ್ ಕಮಿಟಿ ಸದಸ್ಯರು

ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಕಮಿಟಿಯಲ್ಲಿ ಇತ್ತಲಾಗಿ ಖಾಲಿಯಾದ್ದಿರುವ 11 ಸ್ಥಾನಗಳಿಗೆ ಈ ಮೊದಲೇ ಪ್ರಕಟವಾದಂತೆ ಚುನಾವಣೆ ನಡೆದಾಗ ಈ ಕೆಳಗಿನವರು ಆರಿಸಿಬಂದಿರುತ್ತಾರೆ.

[1] ಶ್ರೀ ಕನ್ನಾಲ ರಾಮಭಟ್ಟ, ಕನ್ನಾಲ ಮನೆ-ಮಂಜೇಶ್ವರ ಸರ್ಕಲ್,

[2] ಶ್ರೀ ವಾಟಿಕ್ಕಿಲ ನಾರಾಯಣ ಭಟ್ಟ, ಬಾಯಾರು-ಮಂಜೇಶ್ವರ ಸರ್ಕಲ್,

[3] ಶ್ರೀ ಕೆ. ಮಾಣಿಸ್ವಾಮಿ, ಕಾಸರಗೋಡು -ಕಾಸರಗೋಡು ಸರ್ಕಲ್

[4] ಕನಕಕೋಡಿ ಕೆ. ಪಿ. ಗಂಗಾಧರ ರೈ, ನೆಲ್ಲಿಗೆರೆ-ಕಾಸರಗೋಡು ಸರ್ಕಲ್

[5] ಶ್ರೀ ಕುಂಬಾಲ ಅಣ್ಣಪ್ಪ ಭಂಡಾರಿ, ಕೊಳ್ಯಾಡಿ ಪುತ್ತೂರು ಸರ್ಕಲ್,

[6] ಶ್ರೀ ಬಿ. ಮಹಾಬಲ ಶೆಟ್ಟಿ, ಮಂಗಳೂರು -ಮೂಲ್ಕಿ ಸರ್ಕಲ್,

[7] ಎಚ್. ದೇವಪ್ಪ ಕರ್ಕೇರ, ಸುಂಗಳೂರು-ಹೊಸಪೇಗ್ಗ ಸರ್ಕಲ್,

[8] ಶ್ರೀ ಎ. ಎಲ್ ರೈಗೋ, ಮಂಗಳೂರು -ಕಬೆಡಾಡಿ ಸರ್ಕಲ್,

[9] ಶ್ರೀ ಸಿ. ಯಚ್. ತಿಮ್ಮಪ್ಪ, ಸಸಿಹಿತ್ಲು -ಉಡುಪಿ ಸರ್ಕಲ್,

[10] ಶ್ರೀ ಸೂರಪ್ಪ ಸುವರ್ಣ, ಮಂಗಳೂರು -ಉಡುಪಿ ಸರ್ಕಲ್

ಶ್ರೀ ಸೋಮಪ್ಪ ಬಂಗೇರ ಮಂಗಳೂರು ಸರ್ಕಲ್.

(ಸಹಿ) ಕೆ. ಕೆ ಶೆಟ್ಟಿ,
ಪ್ರಧಾನ ಕಾರ್ಯದರ್ಶಿ

ಪ್ರಕಟಣೆ

ನಮ್ಮ ಮಧ್ವಾಣ್ಣ ಶ್ರೀ ವ್ಯಾಳ್ಳಿ ಬಾವುಂಡಿ ದೈವದ ಕಾಲಾವಧಿ ನೇಮವು ಎಂದಿನಂತೆ ಈ ವರುಷ ತಾ 17-1-1952ನೆ ದಿನ ಬಜಕ ನಿಜ್ಯಂಧಪಯಿಂದ ನಡೆಯಲಿರುವುದು. ಆದು ವರಿಂದ ಭಕ್ತಾಧಿಮಾನಿಗಳೆಲ್ಲರೂ ಆ ದಿವಸ ದಯವಾಡಿ ಬಂದು ಶ್ರೀ ದೈವದ ಗಂಧ ಪ್ರಸಾಧವನ್ನು ಸ್ವೀಕರಿಸಿ ದೈವದ ಕೃಪೆಗೆ ಪಾತ್ರರಾಗಬೇಕಾಗಿ ಅಪೇಕ್ಷಿಸುವ

ನೊಕ್ಕೇಸರರ ವಿನಂತಿ

ಋತುಸ್ರಾವ ನಿಂತಿತು

'ಕುಮಾರಿ' ಪಿಲ್ಲೆಗಳನು ಉಸಯೋಗಿಸಿದರೆ ಹದಿಹರೆಯ ಋತುಸ್ರಾವವಾಗುತ್ತದೆ. ಹಣ್ಣೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂಯಿಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ- ಪಿಲ್ಲೆ: ರೂ. 3-; ಸ್ಪೆಶಲ್ ರೂ. 5- ಅಧಿಕಾಧಿಕ ಸ್ಪೆಶಲ್ ರೂ. 6- [ಸಿ. ಪಿ ಹನ್ನೆರಡನೆತ ಪ್ರತ್ಯೇಕ.]

Mrs D. DEVEE, F DS (N. J.)
Tollygunge CALCUTTA
ಸ್ಪಾತಿಸ್ಪರು ಕಹಾಳಂಪಿಸಿ, ಸುಂಗಳೂರು

ಮಿನೆರ್ವಾ ನಂಬ್ರ 430.

ರೂಪಾಯಿ 60,000 ಪಡೆಯಿರಿ.

ಪ್ರಥಮ ಇನಾಮು- ಸರ್ವಸಮ ರೂ **50,000**

ದ್ವಿತೀಯ ಬಹುಮಾನ ಪ್ರಥಮ ಎರಡು ಸಂಖ್ಯೆ ಸರಿಯಾದುದಕ್ಕೆ ರೂ **10,000**

ಅತ್ಯಧಿಕ ಪ್ರವೇಶಗಳನ್ನು ಕಳುಹಿಸುವವರಿಗೆ ವಿಶೇಷ ಪಾರಿತೋಷ ರೂ. **1,000**

ಒಂದು ಪ್ರವೇಶಕ್ಕೆ 1ರೂಪಾಯಿ. 16 ರೂಪ್ಯಾಗಳಿಗೆ 24ಉತ್ತರಗಳನ್ನುಳಿಸಬಹುದು- ಉತ್ತರ ಸ್ವೀಕರಿಸುವ ಕೊನೆಯದಿನ 26-1-52. ಅಪೇಕ್ಷಿಸಿದ್ದಲ್ಲಿ ಬಹುಮಾನ ಪಡೆದವರ ಹೆಸರು ವಿಳಾಸವನ್ನು ಪ್ರಕಟಿಸಲಾಗುವುದು.

ಬೌಕಿದಲ್ಲಿಯ ಕಡಿಗಳಲ್ಲಿಯ ಒಟ್ಟು ಪೊಕ್ಕಳ 26 ಇಪ್ಪತ್ತಾರು ಬರುವಂತೆ 5 ರಿಂದ 8ರ ವರೆಗಿನ ಅಂಕೆಗಳನ್ನು ಒಮ್ಮೆ ಮಾತ್ರ ಉಪಯೋಗಿಸಿರಿ.

ನಿಯಮಗಳು: ಖಾಲಿ ಕಾಗದದ ಮೇಲೆ ಬರೆದು ಎಷ್ಟು ಪ್ರವೇಶಗಳನ್ನು ಬೇಕಾದರೂ ರಿಜಿಸ್ಟರ್ಡ್ ಪೋಸ್ಟು ದ್ವಾರಾ ಕಳುಹಿಸಬಹುದು ಮನಿಯಾರ್ಡರ್ ತೀರಿಯನ್ನು ಗಲೀ, ಕಾಸ್ ಮಾಡದೆ ಪೋಸ್ಟಲ್ ಆರ್ಡರನ್ನಾಗಲೀ ಉತ್ತರದೊಂದಿಗೆ ಕಳುಹಿಸತಕ್ಕದ್ದು. ಪತ್ರವ್ಯವಹಾರ ಇಂಗ್ಲಿಷಿನಲ್ಲಿಯೇ ಫಲಿತಾಂಶ ಅಪೇಕ್ಷಿಸುವವರು ಎರಡಾಣೆ ಹಿಪ್ಪಲು ಚೀಟು ಮುಂದಾಗಿ ಕಳುಹಿಸತಕ್ಕದ್ದು ಉತ್ತರ ಕಳುಹಿಸತಕ್ಕ ವಿಳಾಸ

The Manager, **MINERVA PUZZLES (Govt. Regd)**
MADURAI, S. India. (430-K)

ಮಿನೆರ್ವಾ ನಂಬ್ರ 425ನೇ ಸ್ಪರ್ಧೆಯ ಉತ್ತರ: 9—11—13—10—12
ಎಲ್ಲಾ ಸರಿಯಾದ ಉತ್ತರಕ್ಕೆ ಪ್ರಥಮ ಬಹುಮಾನ ರೂ. 4150-0-0 ಪ್ರಥಮ ಎರಡು ಅಂಶೆಗಳು ಸರಿಯಾದ ಉತ್ತರಕ್ಕೆ ರೂ 2500-0-0 ದ್ವಿತೀಯ ಬಹುಮಾನ ಕೊಡಲಾಗಿದೆ

"ವಿಜಯ" ಕಬ್ಬಿನ ಗಾಣ

ಎರಡು ಎತ್ತುಗಳಿಂದ ಎಳೆಯಲ್ಪಡುವ

ಉತ್ಕೃಷ್ಟ ತರಗತಿಯ ಯಂತ್ರ

ಬೆಲೆ ರೂ. 465.

ನಿಮ್ಮ ಬಂದರ ಡಿಲೆವರಿ

THE VIJAY ENGINEERING CO BOMBAY 10

WANTED

Agents for the sale of our new design fountain pens o Rs- 300/-1o Rs- 400/- P M sallary or commision basis For samples and free terms apply:

LAWRANCE BROTHERS (N W I)
Nagdevi BOMBAY 3.

ನಿಮಗೆ ತಿಳಿದಿದೆಯೆ?

ದಕ್ಷಿಣ ಕನ್ನಡದ ವಿಸ್ತೀರ್ಣ 25,77,295 ಎಕರೆಗಳು, ವೇಸಾಯ ಸಾಗುತ್ತಿರುವ ಭೂಮಿ 5,69848 ಎಕರೆಗಳು, 1946-50ರ ವರೆಗೆ ಕೆಲ್ಪಗೆ ಬಿತ್ತಿ ವೇಸಾಯ ಸಾಗಿದ ವಿಸ್ತೀರ್ಣ 3,20,000 ಎಕರೆಗಳು, ಉಳಿತಾಯವಾದ ಬೀಜ 2,140 ಟನ್ನುಗಳು, ಹಸಿ ಎಲೆ ಸೊಪ್ಪರ ಹಾಕಿದ ವಿಸ್ತೀರ್ಣ 4,738 ಎಕ್ರೆಗಳು, ರೈತರಿಗೆ ಸುಲಭ ಬೆಲೆಗೆ ಗೊಬ್ಬರವನ್ನಾಗಿ ಕೊಟ್ಟಹಂದಿ 9,224 ಟನ್ನುಗಳು, ಸುವರ್ ಫೊಸ್ಫೇಟ್ ಮತ್ತು ಇತರ ಫೊಸ್ಫೇಟ್ 408½ ಟನ್ನುಗಳು. ಅಮೋನಿಯಂ ಸಲ್ಫೇಟ್ 1,439 ಟನ್ನುಗಳು. ಮಾರಾಟವಾದ ಬೀಜದ ಭತ್ತ 327 ಟನ್ನುಗಳು ಬಿತ್ತಿದ ವಿಸ್ತೀರ್ಣ 3,17,880 ಎಕ್ರೆಗಳು, ಹೆಚ್ಚು ಬೆಳೆದ ಭತ್ತ 17,028 ಟನ್ನುಗಳು, ಕೊಟ್ಟ ಸಬ್ಸಿಡಿ ಸಾಲ ರೂ. 1,02,975 0-0 ತಯಾರಿಸಿದ ಕಂಪ್ಪೆಗೊಬ್ಬರ 17,900 ಟನ್ನುಗಳು, ಉಚಿತವಾಗಿ ಕೊಟ್ಟ ನೆಲಗಡಲೆ ಹಿಂಡಿ 3,643½ ಟನ್ನುಗಳು, ಅಮೋನಿಯಂ ಸಲ್ಫೇಟ್ 958½ ಟನ್ನುಗಳು, ಇವನ್ನು ಉಪಯೋಗಿಸಲಾದ ವಿಸ್ತೀರ್ಣ 36,00 ಎಕ್ರೆಗಳು ದೊರೆಯಬಹುದಾದ ಹೆಚ್ಚಗೆ ಅಕ್ಕಿ 3,560 ಟನ್ನುಗಳು.

1945-46ರಿಂದ 1949-50ರ ವರೆಗೆ ಪೂರ್ಣಗೊಳಿಸಿದ ಭೂಉಳುವಾಯ ರೂ. 5,55,305

1946-46ರಿಂದ 50ರ ವರೆಗೆ ಅವಧಿ ಮುಗಿದ ಅಕ್ಕಿ 75,530 ಟನ್ನುಗಳು, ಪಿಲೆಟ್ 4,261 ಟನ್ನುಗಳು, ಗೋದಿ 13,539 ಟನ್ನುಗಳು. ನಮ್ಮ ಜಿಲ್ಲೆಯ ಕಾಡುಗಳ ವಿಸ್ತೀರ್ಣ 802 ಚದರಮೈಲು, ಒಟ್ಟು ಕಾಡುಗಳ ಸಂಖ್ಯೆ 205, ವಿದ್ಯುಚ್ಛಕ್ತಿ ಯೋಜನೆಗಾಗಿ ಮಂಜೂರಾದ ರೂ. 62ಲಕ್ಷಗಳು.

ಮಂಗಳೂರು ಉಡುಪಿಗಳಲ್ಲಿ ವಿದ್ಯುಚ್ಛಕ್ತಿ ಬಗ್ಗೆ ಯಾಂತ್ರಿಕ ಸುಧಾರಣೆಗೆ ರೂ. 13,90,000, ಹೊಸತಾಗಿ ಆರಂಭಿಸಿದ ಹೈಸ್ಕೂಲುಗಳು 21 ಜಿಲ್ಲೆಯಲ್ಲಿರುವ ಒಟ್ಟು ಹೈಸ್ಕೂಲುಗಳು 64, ಕಾಲೇಜುಗಳು 4, ಟ್ರೈನಿಂಗ್ ಕಾಲೇಜುಗಳು 2, ಸಂಸ್ಕೃತ ಕಾಲೇಜುಗಳು 3, ಟ್ರೈನಿಂಗ್ ಶಾಲೆಗಳು 7, ಬುನಾದಿ ಶಿಕ್ಷಣ ತರಬೇತಿ ಶಾಲೆಗಳು 3, ಕೈಗಾರಿಕಾ ಶಾಲೆ 1.

ಹೊಸತಾಗಿ ತೆರೆದ ಗ್ರಾಮಪಚಿತ್ಸಾಲಯಗಳು 8, ಪ್ರಸೂತಿ ಶಿಶುಸಂರಕ್ಷಣೆಗಳ ಕೇಂದ್ರಗಳು 14, ಸರಕಾರಿ ಆಸ್ಪತ್ರೆಗಳು, 5 ಲೋಕಲ್‌ಫಂಡು ಆಸ್ಪತ್ರೆಗಳು 4, ಲೋಕಲ್ ಡಿಸ್ಪೆನ್ಸರಿಗಳು 8, ಮಂಗಳೂರಿನ ಮುಖ್ಯ ಆಸ್ಪತ್ರೆ ಲೇಡಿ ಹೋಸ್ಪರ್ ಆಸ್ಪತ್ರೆ ಇವುಗಳ ಸುಧಾರಣೆಗಾಗಿ ಮಂಜೂರಾದ ಹಣ ರೂ. 28,25,000, ಉಡ್ಪಿ ಆಸ್ಪತ್ರೆಯ ಸುಧಾರಣೆಗೆ ರೂ. 1,07,000 ಕುಂದಾಪುರ ಆಸ್ಪತ್ರೆಗೆ ರೂ. 31,300 ಪುತ್ತೂರು ಆಸ್ಪತ್ರೆಗೆ ರೂ. 9,150 ಉಡ್ಪಿ ಮತ್ತು ಕಾಸರಗೋಡ ಆಸ್ಪತ್ರೆಗಳಿಗೆ ವಿದ್ಯುಚ್ಛಕ್ತಿ ಪೂರೈಕೆಗಾಗಿ ಕ್ರಮವಾಗಿ 3,000 ಮತ್ತು 4,000

ಮಂಗಳೂರು ನಗರ ಸಭೆಯಲ್ಲಿರುವ ಎಲಿಮೆಂಟರಿ ಶಾಲೆಗಳು 17, ಹಾ. ಎಲೆಮೆಂಟರಿ ಶಾಲೆಗಳು 4, ಶಾಲೆಗಳಿಗಾಗಿ ಒಟ್ಟುಮಾಡಿದ ವೆಚ್ಚ ರೂ. 49,304, ಪಸ್ತಕಗಳಿಗಾಗಿ ಆದ ವೆಚ್ಚ ರೂ. 20,000, 1949-50ರಲ್ಲಿ ಸರಕಾರದ ಸಹಾಯ ರೂ. 64,075, ತಿರುಗಿ ಮಂಜೂರಾದ ರೂ. 48,41,000, ಚಂಡಿ ಯೋಜನೆಗೆ ಮಂಜೂರಾದ ಹಣ ರೂ. 9ಲಕ್ಷ, ಮಂಗಳೂರಿನ ನೀರಿನ ಪೂರೈಕೆ ಯೋಜನೆಗೆ ಮಂಜೂರಾದ ಅಂದಾಜುವೆಚ್ಚ 48ಲಕ್ಷದ 41ಸಾವಿರ, ಜಿಲ್ಲೆಯಲ್ಲಿ ನೀರಿನ ಪೂರೈಕೆಗಾಗಿ ಮಂಜೂರಾದ ಹಣ ರೂ. 1,35,000

ಜಿಲ್ಲೆಯಲ್ಲಿರುವ ರಸ್ತೆಗಳ ಒಟ್ಟು ಉದ್ದ 1440 ಮೈಲು. ಪೋರಿ ನೇಚುವೆ ಇತ್ಯಾದಿಗಳಿಗೆ 1947ರಿಂದ 1950ರ ವರೆಗೆ ಸೈವೇಸ್ ಹಾಗೂ ಜಿಲ್ಲಾ ಬೋರ್ಡಿನ ಮೂಲಕ ಆದ ವೆಚ್ಚ ರೂ. 21,25,048. ಜನ ಸಂಖ್ಯೆ 1941ರಲ್ಲಿ 15,22 016, 1951ರಲ್ಲಿ 17,46,118, ಗಂಡಸರ ಸಂಖ್ಯೆ 8,40,540 ಹೆಂಗಸರ ಸಂಖ್ಯೆ 9,05,578. ಓದುವರ ಸಂಖ್ಯೆ 7,72,553, ಬುನಾದಿಶಾಲೆಗಳು 10. ಸ್ಥಾನಗಳು 11, ಕೇಂದ್ರ ಪಾಲಿಮೆಂಟಿಗೆ ಸ್ಥಾನಗಳು 2.

ನದಿಕೊಳ್ಳಗಳ ಯೋಜನೆಗಳಿಂದ ಒದಗುವ ಲಾಭಗಳು—೧,೯೦೦ ಕೋಟಿ

ರೂಪಾಯಿಗಳ ವೆಚ್ಚ-ಶರಾವತಿ ಯೋಜನೆಗಳನ್ನು ಕಾಂಗ್ರೆಸ ಸರಕಾರವು ರಚಿಸಿರುತ್ತದೆ. ಇವುಗಳಲ್ಲಿ ಅನೇಕ ಯೋಜನೆಗಳ ಕಾರ್ಯವು ಪ್ರಾರಂಭವಾಗಿದ್ದು, ೧೨೨ ಯೋಜನೆಗಳನ್ನು ಮಾತ್ರ ನಿಧಿ ಕೊರತೆಯ ಮೂಲಕ ಸದ್ಯ ಕಡೆಹಿಡಿಯಲಾಗಿದೆ. ಈಗ ಕಾರ್ಯ ಪ್ರಾರಂಭವಾದ ೧೨೫ ಯೋಜನೆಗಳಲ್ಲಿ ೧೧ ಅನೇಕೋದ್ದೇಶಗಳ ಯೋಜನೆಗಳೂ [Multi-purpose] ೬೦ ನೀರಾವರಿ ಯೋಜನೆಗಳೂ, ೬೪ ವಿದ್ಯುದ್ಯೋಜನೆಗಳೂ ಇರುತ್ತವೆ. ಈ ೧೨೫ ಯೋಜನೆಗಳಲ್ಲಿ ೧೨ ಮಹಾ ಯೋಜನೆಗಳೆದ್ದು ಒಂದೊಂದಕ್ಕೆ ನಂಬಿಕೋಟಿ ರೂ.ಗಳಿಗಿಂತ ಅಧಿಕ ವೆಚ್ಚ ತಗಲುತ್ತದೆ. ಮಹಾ ಯೋಜನೆಗಳಿಗಾಗಿ ಒಟ್ಟು ೪೪ ಕೋಟಿ ರೂ. ವೆಚ್ಚ ಹತ್ತಬಹುದೆಂದು ಅಂದಾಜು ಮಾಡಲಾಗಿದೆ.

ಅನೇಕೋದ್ದೇಶಗಳ [Multi-purpose], ಯೋಜನೆಗಳಿಂದ ಮುಖ್ಯವಾಗಿ ಮೂರು ಲಾಭಗಳು ದೊರಕುತ್ತವೆ. [೧] ಪ್ರತಿ ವರ್ಷವೂ ಅನೇಕ ಜನ, ಧನ ಬೆಳೆ ಸಂಪತ್ತುಗಳನ್ನು ನಾಶಪಡಿಸುವ ಮಹಾ ಪೂರಗಳ ನಿಯಂತ್ರಣ [೨] ಆಹಾರ ಹಾಗೂ ರೊಕ್ಕದ ಬೆಳೆಗಳನ್ನು ಅಧಿಕ ಪ್ರಮಾಣದಲ್ಲಿ ಬೆಳೆಯಲು ಹೆಚ್ಚಿನ ಅನುಕೂಲಕೆಗಳು [೩] ಮತ್ತು ಅಧಿಕ ಪ್ರಮಾಣದಲ್ಲಿ ವಿದ್ಯುಚ್ಛಕ್ತಿಯ ಉತ್ಪಾದನೆ



For energetic and active living, for your mental and physical vigour and strength,

Always Use

KALI KAMALI

Chyavanprash.

A renowned Ayurvedic Medicine, prepared from rare Himalayan herbs and minerals. Useful for men, women and Children alike. An ideal tonic for weak nerves and heart.
Price per tin containing 80 tolas Rs. 10-0-0 Postage extra.

Stockist for South & N. Kanara & Mysore state: **M. Vinayaka Rao,** Bannanje Road, Udipi. S. K

AYURVEDIC PHARMACY
Baba kali Kamali-Wala RISHIKESH.

ಬಹುಬೇಗ ಗುಣಕಾರಿ! ಶಾಸ್ತ್ರೋಕ್ತ ಔಷಧ!!
ಮತ್ತೆಲ್ಲಿಯೂ ದೊರೆಯಲಾರದು!!!

ಮೇಹ ಸಂಜೀವಿನಿ ಎಣ್ಣೆ

ಪತಿವ್ರತೆಯಾದ ಕನ್ನ ಹೆಂಡತಿಯಲ್ಲಿಯೇ ಅಕ್ರಸಂಭೋಗ ಮಾಡುವುದರಿಂದ ಅನರ್ಥಕಾರವಾದ ಅನೇಕ ರೋಗಗಳು ಬರುತ್ತಿರುವಲ್ಲಿ-ದುಷ್ಟ ಸ್ತ್ರೀಯರಲ್ಲಿ ತಮ್ಮ ಪ್ರಾಯವೆಂಬ ಅಮೋಘ ವಸ್ತುವನ್ನು ಧಾರೆಯೆರೆದು ಹಾಳುಮಾಡಿಕೊಂಡಿರುವವರಿಗೆ ಈ ಔಷಧವು ಅಮೃತ ಕಲಶದಂತೆ ನವಜೀವನವನ್ನೇ ಕಲ್ಪಿಸಕಕ್ಕದ್ದಾಗಿರುವದೆಂಬುದೇ ವೈದ್ಯಶಾಸ್ತ್ರಜ್ಞರ ತಾತ್ಪರ್ಯವಾಗಿದೆ. ಈ "ಮೇಹ ಸಂಜೀವಿನಿ ಯಣ್ಣೆಯ ಸೇವನೆಯಿಂದ ಸ್ತ್ರೀಪುರುಷರಿಗೆ ಸಂಭವಿಸುವ-ಬಿಳುಪು, ಕೆಂಪು, ಹಸುರು ಮುಂತಾದ 18 ವಿಧ ಪ್ರಮೇಹ ರೋಗಗಳು, ಉರಿಮೂತ್ರ, ಮುಸುಕು ಹುಣ್ಣು, ಮೇಹಪುಳುಕು, ಮೇಹಚಟ್ಟೆಗಳು, ನಾಭಿವ್ರಣ, ಮೇಹವಾಯು, ಕೊಡೆಬಾಧ, ಭಗಂದರ, ಟಾಕಿ, ಪಸಿ ಮುಂತಾದ ಜಾಡ್ಯಗಳು ಬುದ್ದೊಂದಿಗೆ ನಾಶವಾಗುವವಲ್ಲದೆ, ಈ ಎಣ್ಣೆಯ ಸೇವನೆಯಿಂದ ಸ್ತ್ರೀಯರಿಗೆ ಶ್ವಾಸ್ರವಾಗುವ ಅಶ್ಯಮ ಯಶವಾಗುವದಿಲ್ಲ, ಮುತುಸೂಲೆ, ಪ್ರದರ ಮುಂತಾದ ರೋಗಗಳು ನಿರ್ನಾಮವಾಗುವುವು. ಕ್ರಯ: ಸೀಸೆ 1ಕ್ಕೆ ರೂ. 3.

ವಿಳಾಸ:— ಬಿ. ಜಿ. ರಾಮಸ್ವಾಮಿ ನಾಯ್ಡು,
ಸುದರ್ಶನ ಆಯುರ್ವೇದ ವೈದ್ಯಶಾಲಾ, ನಗರ್ತರಪೇಟೆ, ಬೆಂಗಳೂರು-2.
ಇತರ ಔಷಧಗಳ ಕ್ಯಾಟಲಾಗಿಗೆ ಇಂದೇ ಬರೆಯಿರಿ. ಇಂದೇ ತರಿಸಿಕೊಳ್ಳಿ.

ಅಮೃತಾಂಜನ ಲಿಮಿಟೆಡ್
ಪೂನಾವಾಸ್ತು, ಬೊಂಬಾಯಿ ಮತ್ತು ಕಲ್ಕತ್ತ.

ಮೂಲ್ಕಿ ಬೇಂಕ್,

ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 21 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಆತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು

The Moolky Bank Ltd.,
Moolky, S K

ಅನುಶಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಉತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆನೋವು, ಸ್ನಾಯಗಳು, ಬಾತುಕೊಳ್ಳುವುದು, ಚೇಳಿವಿಷಮುಂತಾದವು, ಸರ್ಪವಾತ, ಮೊಡವೆ. ಮೊದಲಾದ ಎಲ್ಲಾ ರೋಗಗಳಿಗೂ ನಿದ್ರೌಷಧ

ನವಯುಗ

ಮೈಸೂರು ಶ್ರೀಮನ್ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ ಖಾಸ್‌ವೈದ್ಯ ಅಂಬಳೆ ನರಸಿಂಹ ಪಂಡಿತರ ಮೆನೆತನ

ವೈ. ರಾಮಸ್ವಾಮಿ ಅಯ್ಯಂಗಾರವರ

ಸಂತಾನ ಸಿಂಧೂರ

ಬಹಿಷ್ಠೆ ಸಂಬಂಧದ ಹೊಟ್ಟೆನೋವು ಉಂಟು ಮಕ್ಕಳಿಲ್ಲ, ಇಂಥವರಿಗೂ ಮತ್ತು ಬಹಿಷ್ಠೆ ಸಂಬಂಧದ ಹೊಟ್ಟೆನೋವಿನ ಜೊತೆಗೆ ತಲೆನೋವು, ನಡುವಳಿಕೆ, ಬೆನ್ನು ನೋವು, ಆಡರ್ಣ, ಕೆಮ್ಮು, ಏದ್ರಾಭಂಗ, ಇಗುಪ್ಪ ಇತ್ಯಾದಿ ಗಂಭೀರ ವ್ಯಾಧಿಗಳಿಗೂ

ಗ್ಯಾರಂಟೀ ಔಷಧ.

ಮೂರು ದಿವಸಗಳಲ್ಲಿ ಈ ಹೊಟ್ಟೆನೋವು ಗುಣವಾಗಿ ಜಾಗ್ರತೆ ಸಂತಾನ ಫಲ ಬೇಕಾದರೆ ಮೇಲ್ಕಂಡ ನಿದ್ರೌಷಧಿ ಒಂದು ಸೆಟ್ ಅನುಪಾನ ಪತ್ರಿಕೆ ಮೇರೆ ಇಲ್ಲವೂ ಸೇವಿಸಿ ೧ ಸಾಳು. ಬೋಧನವಾದ 15-16 ವರ್ಷ ಮಕ್ಕಳಿಲ್ಲದವರಿಗೂ ಮಕ್ಕಳಾಗಿವೆ. ಅನೇಕ ಪ್ರಶಂಸಾಪತ್ರಗಳನ್ನು ಪಡೆದಿದೆ.

ಕ್ರಯ:— ಒಂದುಸೆಟ್ 5ರೂ. ಪ್ಯಾಕಿಂಗ್ ಮತ್ತು ಪೋಸ್ತಾಲು ಖರ್ಚು 1ರೂ. ವಿ. ಪಿ. ಇಲ್ಲ. ಕ್ಯಾಟಲಾಗ್ ಉಚಿತ 6ರೂ. ಮಾಲ ಆರ್ಡರ್ ಮಾಡಿರಿ. ಕೂಡ್ಲೆ ರಿಜಿಸ್ಟರ್ ಪಾರ್ಸಲ್ ರವಾನೆ.

ವಿಳಾಸ:—

ವೈ ರಾಮಸ್ವಾಮಿ ಅಯ್ಯಂಗಾರ್ ಸನ್ಸ್,
1) ಅಂಬಳೆ ಪೋಸ್ಟು, ಯಳಂದೂರು ತಾ ಚಾಮರಾಜನಗರ ಮೈಸೂರು ಡಿಸ್ಟ್ರಿಕ್ಟ್.
ಆಫೀಸು 269 ಸೋಡಾರ್ ಸ್ಟ್ರೀಟ್, ದಿವಾನ್ಸ್‌ರೋಡು, ಮೈಸೂರು.

ವಿವಿಧ ಪಾತ್ರೆಗಳು

ಯಾವಕ್ರಮ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು, ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಮಂ ಆಗಿ ಯಾವಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಕಂಜೆ ವ್ಯಾಸರಾಚಾರ್ಯ,
ರಥಬೀದಿ, ಉಡುಪಿ

[ಕಳೆದ ಸಂಚಿಕೆಯಿಂದ]

ಅದೇ ರೀತಿ ಮುಂದೆ 6-8 ಮೈಲು ಹೋಗಿ ಇನ್ನೊಂದು ಊರಲ್ಲಿ ಅರ್ಧ ಕಾಸು ಕಳೆದಿದ್ದು —ಅದರ ಹೆಸರು ಮೊನಿಕೆಂದೇಮ್ (Monnikendam) ಎಂತ ಇದು ಬಹಳ ಪ್ರವಾಸದ ಊರು. ಇದರಲ್ಲಿ 1400ರಲ್ಲಿ ಕಟ್ಟಿದ ಇಗರ್ಜಿಯೊಂದಿದೆ ಈ ಊರನ್ನು ಪಾದ್ರಿಗಳು (Monks) ಕಟ್ಟಿದ್ದ ಕಾರಣ ಮೇರಿ ತಾಯಿ ಹೆಸರು ಬಂತು ಊರಿನ ಉತ್ತರಕ್ಕೆ ದೊಡ್ಡ ಎತ್ತರವಾದ ದಂಡೆ (Dam) ಅದು 1916ರಲ್ಲಿ ಒಡೆದು ಸಮುದ್ರವು ಸಹಿತ ಭೂಮಿ ಒಳಕ್ಕೆ ಬಂದು ಸಾವಿರಾರು ಎಕ್ರೆ ಜಾಗ ಈಗಲೂ ನೀರಿನಿ ಇದೆ. ಹಾಗೆ ದಂಡೆ ಒಡೆದಾಗ ಊರಿನ ಜನರು ಮತ್ತು ಸುಮಾರು 300 ದನಕರುಗಳು ಈ ಇಗರ್ಜಿಯ ಒಳಕ್ಕೆ ಇದ್ದು ಉಳಿದುಕೊಂಡರು. ನಾವು ಇಗರ್ಜಿಯ ಒಳಕ್ಕೆ ಹೋಗಿ ನೋಡಿದೆವು. ರಸ್ತೆಯಲ್ಲಿ ತಿರುಗಾಡುವ ದಾರಿ ಮನೆಗಳಲ್ಲಿ ಹಿಂದಿನ ಕಾಲ ಆದರ ಮ್ಯೂಲಿಕರು ಮಾಡಿದ ಕಸೂದಿನ ಚಿತ್ತಾರಗಳು ಇವೆ. ಹಾಗೆ ಒಬ್ಬ ಕಸಾಯಿಯ ಅಂಗಡಿಯ ಎದುರು ನೋಡೆಯಲ್ಲಿ ದನದ ಚಿತ್ರ. ಅದರಲ್ಲಿ ವರ್ಷ 1621 ಕೆತ್ತಿದೆ. ಇನ್ನೊಂದರಲ್ಲಿ ತಿಮಿಂಗಿಲದ (whale) ಚಿತ್ರ. ಊರಿನ ರಸ್ತೆಯ ಮಧ್ಯ ಪುರಾತನದಲ್ಲಿ ಇದ್ದಿಯ ಜನರು ಸ್ಪೈನ್ ದೇಶದವರ ಮೇಲೆ ಯುದ್ಧ ಮಾಡಿ ಗೆದ್ದಂತಕ್ಕೆ ಸ್ಮಾರಕವಾಗಿ ಒಂದು ಎತ್ತರವಾದ ಗೋಪುರ ವಿದೆ.

ಊರು ಸಂಚರಿಸಿ ಪುನಃ ನಮ್ಮ ಲೋಂಚಿಗೆ ಬಂದು ಇನ್ನೂ ಮುಂದಕ್ಕೆ 8-10 ಮೈಲು ಪ್ರಯಾಣ ಮಾಡಿ ಇದರಂತೆ ಇನ್ನೊಂದು ಊರಲ್ಲಿ ಬಂದು ಇಳಿದೆವು ಅದರ ಹೆಸರು ಮಾರ್ಕನ್ (Marken) ಎಂದು. ಇದ್ದಿಯ ಜನರು ಅವರ ಪುರಾತನದ ಉಡುಪು ತೊಡುಪುಗಳನ್ನೇ ಧರಿಸುವರು. ಕಾಲಿಗೆ ದೊಡ್ಡ ಆಕಾರದ ಮರದಿಂದ ಮಾಡಿದ ಬೂಟ್ಸು. ಅನೇಕ ಚಿಕ್ಕ ಅಂಗಡಿಗಳು. ಅವುಗಳಲ್ಲಿ ವ್ಯಾಪಾರ ಮಾಡುವವರು ಹೆಚ್ಚಾಗಿ ಹೆಂಗಸರೇ. ಒಬ್ಬಳು ನನ್ನೊಡನೆ ಇಂಗ್ಲೀಷಿನಲ್ಲಿ ಹೀಗೆ ನುಡಿದಳು. "ಗಾಂಧಿ ಇಲ್ಲಿಗೆ 1929ರಲ್ಲಿ ಬಂದಿದ್ದರು. ಈಗ ನಮ್ಮ ದೇಶದಲ್ಲಿ ನೆಹ್ರು ಇದ್ದಾರಲ್ಲವೋ?" ಈ ಅಂಗಡಿಗಳಲ್ಲಿ ಊರಿನ ಮತ್ತು ಬೇರೆ ಊರುಗಳಿಂದ ತಂದಿಟ್ಟ ಅನೇಕ ಸಣ್ಣ ಸಣ್ಣ ಸಾಮಾನುಗಳನ್ನು ಮಾರುವರು. ಒಂದು ಕಡೆ ಒಂದು ಮನೆ ಒಳಕ್ಕೆ ಹೋಗಿ ನೋಡಿದೆವು. ಮಾದರಿ ಜಲಗೆಗಿಂದ ಕಟ್ಟಿದ ಕಾಲುಗಳ ಮೇಲೆ ನಿಂತಿರುವ ಮನೆ, ಇಂತಿ ಭರತದ ನೀರು ಆದಿ ಬರುವುದು. ಆದರಲ್ಲಿ ಸಣ್ಣ 3 ಕೋಣೆಗಳು ಗೋಡೆಗಳಲ್ಲಿ ಅನೇಕ ಪುರಾತನದ ಪಲೇ ಬಿದ್ದ ಪ್ಲೇಟುಗಳವೆ. ಇವೇ ಅವರ ಕುಟುಂಬ ಕಾಲಧನ (heir loom). ಮನೆಯ ಎಲ್ಲಾ ವಸ್ತುಗಳನ್ನು ಉರುಟಾಗಿ ಕಟ್ಟುಕಟ್ಟಾಗಿ ಮಾಡಿ ಇಟ್ಟಿರುವರು. ಗೋಡೆಯಲ್ಲಿ ಅಡಗಿರುವ ಮುಚ್ಚಲುಬಾದಾದ ಸುಲಗುವೆ ಹಾಸಿಗೆ, ಮನೆ ಮತ್ತು ಅದರಲ್ಲಿರುವ ಸಾಮಾನುಗಳನ್ನು ಬಹು ಸ್ವಚ್ಛವಾಗಿ ಇಟ್ಟಿರುವರು. ಇದ್ದಿ ಹುಡುಗಿಯರು 18 ವರ್ಷವಾಗುವಾಗ ತಮಗೆ ಬೇಕಾದ ಉಡುಪನ್ನು ಮಾಡಲಿಕ್ಕೆ ಕಲಿಯುದೆ ಅನ್ಯಾಯವಾದರಂತೆ. ಹಾಗೆಯೇ ಹುಡುಗರೂ ಮೀನು ಹೇಗೆ ಮರದ ಬೂಟ್ಸು ಮಾಡಲಿಕ್ಕೆ ಕಲಿಯಬೇಕು. ಇಲ್ಲಿಯ ಚಳಿ ಎಷ್ಟೆಂದರೆ ಹೆಂಗಸರು ಕೂಡಾ ಒಳಕ್ಕೆ ಧರಿಸುವ ಉಡುಪು (underwear) ಬಹುದೊಗಿನ ಉಣ್ಣೆ ಬಟ್ಟೆ. ಸಣ್ಣ ಮಕ್ಕಳಾಗಿರುವಾಗ ಹುಡುಗ ಹುಡುಗಿಯರಿಗೆ ಒಂದೇ ತರದ ಉಡುಪು. ಇಲ್ಲಿಯ ಹೆಂಗಸರು ಗಂಡಸರಂತೆ ಗಿಂತಲೂ ಚುರುರು. ಗಂಡಸರು ಸಾಮ್ಯ ಸ್ವಭಾವ, ಊರಲ್ಲಿ ಸುಮಾರು 100 ಮನೆಗಳು. ಒಂದು ಇಗರ್ಜಿ, ಸುತ್ತಲೂ ಎಲ್ಲೆಲ್ಲೂ ನೀರು. ನಾವು ಹೋದಾಗ ಉತ್ತರ ಸಮುದ್ರದಿಂದ (North Sea) ಬಹು ಚಳಿಯಾದ ತಂಗಾಳಿ ಬೀಸುತ್ತಿತ್ತು ಬೇಸಿಗೆ ಕಾಲದಲ್ಲೇ ಹೀಗಿದ್ದಾಗ ಚಳಿಗಾಲದಲ್ಲಿ ಈ ಊರಲ್ಲಿ ಇರುವುದು ಕಷ್ಟ. ಜೀವನಕ್ಕೆ ಕೂಡ ಬೇಸಿಗೆ ಕಾಲದಲ್ಲಿ ನಮ್ಮಂತೆ ಬರುವ ಪ್ರವಾಸಿಗಳ ವ್ಯಾಪಾರವಲ್ಲವಾದರೆ ಕಷ್ಟ ಜೀವನ.

ಇಲ್ಲಿ ಒಂದು ಗಂಟೆ ಸಮಯ ಕಳೆದು ನಮ್ಮ ಲೋಂಚಿಗೆ ಬಂದು ಪುನಃ 8-10 ಮೈಲು ಇನ್ನೂ ಉತ್ತರಕ್ಕೆ ಪ್ರಯಾಣ ಮಾಡಿದೆವು. ಗಂಟೆ 3ಕ್ಕೆ ವೊಲಂಡೇಮ್ (Volendam) ಎಂಬ ಸಣ್ಣ ಊರು ಬಂತು. ಇಲ್ಲಿಯ ಜನರ ನಮೂನೆಯೇ ಬೇರೆ. ಗಂಡಸರು ಹೆಂಗಸರು ಸಪೂರ ಮತ್ತು ಬಹು ಎತ್ತರ ಹೆಂಗಸರ ತಲೆ ಮೇಲೆ ದಿಕ್ಕಿನ ವಸ್ತ್ರದ ಕೊಳವೆಯಂತೆ ಕಾಣುವ ಉಡುಪು. ಯುವಕರಂಗೆ ದಪ್ಪವಾದ ಕಪ್ಪು ಉಣ್ಣೆಯ ಉಡುಪು. ಕಾಲ್ಚೀಗೆ ಬೀಳ್ ಬೈನ್. ಇಲ್ಲಿ ಒಂದು ಚಲೋ ಹೋಟೇಲು ಇದೆ. ಇಲ್ಲಿ ಊಟಮಾಡಿ ಕಳವು ಸ ವಿಶ್ರಮಿಸಿದೆವು.

ಗಂಟೆ 3-40ಕ್ಕೆ ಅಲ್ಲಿಂದ ನಮ್ಮ ಲೋಂಚನ್ನು ಬಿಟ್ಟು ಟ್ರಾವರ್ ಎತ್ತಿ ಸೀದಾ ಹಿಂತಿರುಗಿ ಬಂದವು. ಟ್ರಾವರ್ ಗಂಟೆಗೆ ಸುಮಾರು 40ಮೈಲು ವೇಗದಲ್ಲಿ ಬರುವುದು, ಇಲ್ಲಿ ರೈಲು ಬದಲಿಗೆ ಟ್ರಾವೆಲಿಸ್-ವುದು. ಬರುವಾಗ ಅಲ್ಲಲ್ಲಿ ಗಡ್ಡೆಪೈರುಗಳನ್ನು ಕಾಣಬರುದು. ಅಲ್ಲಲ್ಲಿ ಸಣ್ಣ ಸಣ್ಣ ಊರುಗಳಿವೆ. ಎಮ್ಸ್ಟರ್ಡೇಮ್ ಮುಟ್ಟಿದಾಗ ಬಂದರದಮೇಲೆ ಸಂಕವಿಲ್ಲದ ಕಾರಣ ದೋಣಿಯ ಲ್ಲಿ ದಾಟಬೇಕು. ಸುಮಾರು ಒಂದು ಫರ್ಲಂಗಿನಿಂತಲೂ ಅಗಲವಾದರೂ ಐದೇ ನಿಮಿಟಿನಲ್ಲಿ ಕಡವನ್ನು ಅಗಲವಾದ ಮೋಟರ್ ಜಂಗಲಿನಲ್ಲಿ ದಾಟಿದೆವು.

ನಗರಕ್ಕೆ ಬರುವಾಗ ಘಂಟೆ 4½ ಆಗಿತ್ತು. ನಾನು ಆ ಊರನ್ನು ಬಿಡಲಿಕ್ಕೆ 1 ಗಂಟೆ ಸಮಯ ಇನ್ನೂ ಇದ್ದ ಕಾರಣ ಊರಿನಲ್ಲೇ ತಿರುಗಾಡುವ ಇನ್ನೊಂದು ಲೋಂಚನ ಟೇಟು ತೆಗೆದು ಫ್ರನ್ ಸಂಚರಿಸಿದೆ. ಅದಕ್ಕೆ 1 ಗಿಲ್ಡರ್ 10 ಸೆಂಟ್ಸು. ಪಟ್ಟಣದಲ್ಲಿ ಹಲವು ಕಾಲುವೆಗಳ ಮೂಲಕ ಅನೇಕ ಕಡೆಗಳಿಗೆ ಹೋಗಬಹುದು. ಕಾಲುವೆಗಳು ಸುಮಾರು 50 60 ಅಡಿ ಅಗಲವಿದ್ದು ಎರಡು ಬದಿಗಳಲ್ಲಿ ಉತ್ತರ ಇಂಗಡಲ್ಲಿ ರಸ್ತೆಗಳು ಮತ್ತು ಸಾಲುಸಾಲಾಗಿ 4 5 ಉಬ್ಬರಿಗೆಯ ಮನೆ ಮತ್ತು ಅಂಗಡಿಗಳು. ಹೀಗೆ ಹೋಗುವಾಗ ಒಬ್ಬಳು ಸ್ತ್ರೀ ನಮ್ಮ ಸಂಚಾಲಕಳಾಗಿದ್ದು ಅಲ್ಲಲ್ಲಿ ಏನಿದೆ ಎಂಬ ದೃಷ್ಟಿವರ್ಣಕ ಯಂತ್ರದ ಮೂಲಕ ಹೇಳುವಳು. ಅವಳು ಹೇಳುವ ರೀತಿಯಲ್ಲಿ ನನಗೆ ಏನೂ ತಿಳಿಯಲಿಲ್ಲ. ಆದರೆ ಒಂದು ಕಡೆ ಅಲ್ಲಿಯ ಪ್ರಸಿದ್ಧ ಚಿತ್ರಕಾರನಾದ ರೆಮಂಬ್ರೆಂಟ್ (Rembrandt, 1606 1669) ಎಂಬವನಿದ್ದ ಮನೆ ತೋರಿಸಿದಳು. ಹಾಗೆಯೇ ಅನೇಕ ಐಶ್ವರ್ಯವಂತ ವ್ಯಾಪಾರಿಗಳ ಮನೆಗಳು. ನಗರದಲ್ಲಿ ಎಲ್ಲಿ ನೋಡಿದರೂ ಕೆಲಸ; ಎಲ್ಲೆಲ್ಲೂ ವ್ಯಾಪಾರ. ಇಲ್ಲಿಯ ಜನರು ಬಹಳ ಕಷ್ಟಪಡುವದ ಸಮರ್ಥರೇ ಸಂ

ಸಾಯಂಕಾಲ ಮುಂತೆ ಹೋದ ರೈಲ್ವೆ ಸ್ಟೇಶನಿಗೆ ಬಂದು 6-15ಕ್ಕೆ ಜರ್ಮನಿಗೆ ಹೊರಡುವ ರೈಲಲ್ಲಿ ಹೊರಟೆನು. ಈ ರೈಲಲ್ಲಿ 3ನೇ ಕ್ಲಾಸ್ ಕೂಡ ಇಂಗ್ಲಂಡಿನಂತೆ ಒಳ್ಳೆದು. ಆದರೆ ಅಲ್ಲಿ 3 ಜನರು ಕೂತುಕೊಳ್ಳುವ ಸೀಟಿನಲ್ಲಿ ಇಲ್ಲಿ 4 ಜನರು ಕೂತುಕೊಳ್ಳುವುದು. ನನ್ನ ಪ್ರಯಾಣ 2ನೇ ಕ್ಲಾಸಿನಲ್ಲಿ. ರೈಲು ಬಹು ವೇಗದಲ್ಲಿ ಚಲಿಸಿತು. ಹೊಲ್ಲೆಂಡ್ ಬಿಟ್ಟು ಜರ್ಮನಿಗೆ ಸೇರುವಲ್ಲಿ ಎಂದಿನಂತೆ ಎರಡೂಸಲ ಜಕ್ತಿಯಾಯಿತು. ಜರ್ಮನಿಯ ಒಳಹೊಕ್ಕಾಗ ಘರ್ಜಿಗೆ ಹಣ ಪಲ್ಟುಸಿತು. ಒಂದು ಪೌಂಡಿಗೆ 10½ ಜರ್ಮನ್ ಮಾರ್ಕ್ಸ್. ಆದರೆ ನಂತರ ಬರ್ಲಿನ್ ವೇಂತಿನಲ್ಲಿ 11½ ಮಾರ್ಕ್ಸ್! ರಾತ್ರಿಯಲ್ಲಿ ಕತ್ತಲೆ ಇದ್ದು ವಿಶೇಷ ಬರುಗಾಳಿ. ಮಧ್ಯರಾತ್ರಿ ಗಂಟೆ 12 33ಕ್ಕೆ ಸರಿಯಾಗಿ ಜರ್ಮನಿಯ ಪ್ರಸಿದ್ಧ ಪಟ್ಟಣವಾದ ಕೊಲೋನ್(Cologne ಎಂಬ ನಗರಕ್ಕೆ ಬಂದು ಸೇರಿಕು ಅಲ್ಲಿಂದ ನಾನು ಟೇಕ್ಸಿ ಮೂಲಕ ನನಗೋಸ್ಕರ ಮುಂಚಾಗಿ ಕಾದಿಟ್ಟ ಹೊಟೆಲ್ ಗೆಸ್ಟೆ (Geste) ಎಂಬಲ್ಲಿಗೆ ಬಂದು ಸೇರುವಾಗ ಘಂಟೆ ಬಂದಕ್ಕೂ ಮಿಕ್ಕಿತು ಇಲ್ಲಿಯ. ವಿಚಾರ ಮುಂದಿನ ಪತ್ರದಲ್ಲಿ

[ವಿಚಾರಣೆ] ಕೆ ಆರ್. ಕಾರಂತ

ಪ್ರವಾಸಿಯ ಪತ್ರಗಳು ೨೧

For Protection and Provision

Consult

The New Guardian of India Life Insurance Co., Ltd.

Estd] Head office: **MADRAS** [1934

A Policy in this Progressive Life Office is good investment, its Agency is valuable business connection

Applications for representation are invited from influential persons.

Please apply to:

The Branch Manager,
Diamond Building, Hampankatta,
MANGALORE-S K

ಕುಂದಾಪುರ ದಿವಾಣಿ ಮುನ್ಸೀಫರ ಕೋರ್ಟಿನಲ್ಲಿ

S. C. 313/1951

ವಾದಿ —ನಾರಾಯಣ

ಪ್ರತಿವಾದಿರು— ಬುದ್ಧಿವಂತ ಕಟ್ಟೆಕೂಡಾ ಪ್ರತಿವಾದಿರು- 3 ಮಲ್ಯಾನಾಗಿ ಜೆಂಗ್ಲಿನ ಮಗ ಮೈಕೂರು ಪೊಲೀಸ್ಸ್ ಸಾರ್ಜಂಟ ಅಲ್ಲು ಕರೂರಲ್ಲಿರುವವನ ಇವರಿಗೆ—

ನಾದಿಯು ತಾವು ಸಾಲಿಪೆಂಗ್ಲಿಗೆ ತಾರೀಕು 15-5-1948ರಲ್ಲಿ 1, 2ನೇ ಶ್ರತಿವಾದಿರು ರೂ. 78- 0—0ಕ್ಕೆ ಬರೆಕೊಟ್ಟ ದಿವಾಂಡ ನೋಟಿನ ಹಣಗಳಬಡ್ಡಿಗಳ ಬಗ್ಗೂ ವಾದಿಯು ಸದ್ರಿ ದಾವಾ ಮಾಡಿರುವುದರಿಂದ ಆ ಕಾರಿತು ನಿಮ್ಮದೇಸಾದ್ಯ ಅಕ್ಟೋಪ ವಿಸ್ತೆ ತಾ 23-1-1952ನೇ ವಸಹಗಲು 10 ಗಂಟೆಗೆ ಮೇಲ್ಕಂಡ ಕೋರ್ಟಿನ ಹಾಜ್ಯ ಆಗಿ ಜ್ಞಾಹೀರು ಮಾಡಿಕೊಳ್ಳಕ್ಕಕ್ಕು. ತಪ್ಪದಲ್ಲಿ ಏಕಪಕ್ಷವಾಗಿ ತೀರ್ಮಾನಿಸಲಾದೀತು ಎಂಬಸಂತಿ ಕೋರ್ಟಿನ ಹುಕುಂ ಪ್ರಕಾರ ನಿಮಗೆ ಈ ಮೂಲಕ ತಿಳಿಸೋಣಾಗುತ್ತದೆ

K. Raghunatha Shenai
Pleader for Plaintiff
Coonda poor 28 12-1951

ಅಂದವಾದ ಮತ್ತು ಆಚ್ಚುಕಟ್ಟಾದ ಮುದ್ರಣಕ್ಕೆ
ನವಯುಗ ಪ್ರೆಸ್ ಉಡುಪಿ

— ಮಕ್ಕಳನ್ನು ಹಡೆಯುವುದು ಸಾಕು —

ಆಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ್** ರೋಗಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನೆ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬೆಳೆದರೂ, ನ್ಯಾದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ಕಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಪಸಿನೀರಿನಲ್ಲಿ ಸೇವಿಸಬೇಕು.

ಕಿಮ್ಮತ್ತು:—ಹರವೀನಲ್ಲಿ ಕಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ್ ಚಾರ್ಜು ೧೫ ಆಣೆ.

ಪೂರೈಕರು:—ಹಾಲಪ್ಪಾ ಭಕೇರಪ್ಪಾ ಡಾವಣಗೇರಿ

ಆಯುರ್ವೇದ ಔಷಧಾಲಯ ಗದಗ-ಸಿಟಿ.

ಏಜಂಸಿಯು:—ಮುಲ್ಕಿ ಭೂಮಪ್ಪ,—ಮುಲ್ಕಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ— ಹಾವಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಂಡೇಶ್ವರ ಮೂರ್ತಿ ಡಾವಣಗೆರೆ ಡಾವಣಗೆರೆ:—ಡಾವಣಗೆರೆ ಪ್ರೆಸ್ ಆರ್ ಎಸ್ ಕಮಲಾಪುರ ಕೆಮಿಸ್ಟ್, ಹಾವೇರಿ ಬ್ಯಾಡಗಿ

"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರಿ,

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತಿಯ ದೇಹಸ್ಥಿತಿಯನ್ನು ನಿರೀಕ್ಷಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಧಾರ್ಮಶಾಲಿಗಳಿಗೂ ಸುಲಭವಾಗಿರುವುದು.

ಇವರ

ನವಜೀವಾತು

ಎಂಬ

ಸೂತಿಕಾ ರಸಾಯನ



ಹೆಚ್ಚಿನ ಮಾಹಿತಿಗೆ—ಡಾ॥ ಯಂ. ವಿ. ಶಾಸ್ತ್ರಿ, ಯಲ್ ಬಿ ಕೊಡಿಯಾಲಬೈಲು ಪೋಸ್ಟು, (ಮಂಗಳೂರು).

ಸ್ಥಾಪಕರು- ಡಾ॥ ವಿ ಕೆ ಶಿವರಾಮಾಚಾರ್, ಕುಂಜಿಬೆಟ್ಟು, ಉಡುಪಿ

ವಾರದ ಭವಿಷ್ಯ

ತಾರೀಕು 10-1-52 ರಿಂದ | ತಾರೀಕು 16-1-52 ವರೆಗೆ

ಮೇಷ—ಧನಲಾಭಗಳಿಗೆ ಅನುಗ್ರಹವು ನಿಮಗೆ ಲಭಿಸಿದಾದರೂ ಭಾಗ್ಯ ಪರೀಕ್ಷೆಯು ವ್ಯಯದಲ್ಲಿರುವ ಕಾರಣ ನೀವೆಷ್ಟೇ ಸಂಪಾದಿಸಿದರೂ ಕೈಯಲ್ಲಿ ಕಾಸೊಂದು ಉಳಿಯಲಾರದು. ಗೃಹಕೃತ್ಯದಲ್ಲಿ ಅವ್ಯವಸ್ಥೆಯು ಹೆಚ್ಚುವದು. ವ್ಯವಹಾರ ನಿಮಿತ್ತ ಕೋರ್ಟು ಮನೆಗೆ ತಿರುಗುವ ಪ್ರಸಂಗ ಬಂದೀತು. ತಮ್ಮಮನಗಳಿಗೆ ಸುಖಶಾಂತಿಗಳೆಲ್ಲ ವಾದರೂ ತಾ. 10, 11ರಲ್ಲಿ ನಿಜಯ ಲಾಭ ಸುಖಗಳನ್ನು ಹೊಂದುವಿರಿ.

ವೃಷಭ—ಆಳಾಗಿ ದುಡಿದರೆ ಅರಸನಾಗಿ ಉಣಬಹುದೆಂಬಂತೆ ಈ ವಾರದಲ್ಲಿ ನೀವು ಶ್ರದ್ಧಾವಹಿಸಿ ಕಾರ್ಯರಂಗದಲ್ಲಿ ಧುಮುಕಿದರೆ ನಿಮ್ಮ ಅಭೀಷ್ಟವು ನಿಶ್ಚಯೇನ ನೆರವೇರಲಿದೆ ತಾಪತ್ರಯಗಳೆಲ್ಲವೂ ಮಾಯವಾಗುವವು ಜನತೆಯ ಬೆಂಬಲವು ಹೆಚ್ಚಾಗಿ ಲಭಿಸುವದು ಅದೂ ಸ್ತ್ರೀನಿಮಿತ್ತವಾದ ಅಭೀಷ್ಟಗಳು ಸಂಭವಿಸುವ ಯೋಗವಿದೆ. ತಾ. 13 14 ನಾಂಷ್ಟಾರ್ಥಪ್ರದ ದಿನಗಳು.

ಮಿಥುನ—ಸಂಪೂರ್ಣ ಗೃಹಮಂಡಲವೇ ನಿಮಗೆ ಪ್ರತಿಕೂಲವಾಗಿ ನಿಂತಿರುವುದು. ಆದಕಾರಣ ನಿಮ್ಮ ಧೈರ್ಯ ಸಾಹಸಗಳೆಲ್ಲವೂ ಅರಣ್ಯರೋದನದಂತೆ ವಿಫಲಗಳಾಗುವವು. ಆರ್ಥಿಕ ದುರವಸ್ಥೆ ಜನನಿಂದೆ ಕಲಹ ಸಾಂಸಾರಿಕ ತಾಪತ್ರಯ ಇತ್ಯಾದಿಗಳು ಮೇಲಿಂದ ಮೇಲೆ ಏಡಿಸಲಿವೆ. ಹೆದರಿದ ಹುಲ್ಲೆಯಂತಾದ ನಿಮ್ಮ ಚಿತ್ತಕ್ಕೆ ತಾ. 10, 11, 15, 16ರಲ್ಲಿ ಕೊಂಚ ನೆಮ್ಮದಿ ಲಭಿಸೀತು.

ಕರ್ಕಟ—ಇಂದೀಗ ನಿಮ್ಮ ಭಾಗ್ಯಕ್ಕೆ ಎಕಿಬಿಲ್ಲವೆಂದರೂ ಅತಿಶಯೋಕ್ತಿಯೆನಿಸದು. ಮಣ್ಣು ಹಿಡಿದರೂ ಹೊನ್ನಾಗುವ ಸುಸಮಯವಿದು. ಎಂತಹಮಹತ್ಕಾರ್ಯವಾದರೂ ಕ್ಷಣಮಾತ್ರದಲ್ಲಿ ಕೊನೆಹೊಂದಿಸುವ ಅಸದೃಶ ಶಕ್ತಿಯುಕ್ತಿಗಳು ನಿಮ್ಮಲ್ಲಿ ನೆಲೆಸಿರುವವು. ಜನತೆಯಲ್ಲಿ ವಿಶೇಷ ಗೌರವಾದರಗಳನ್ನು ಪಡೆವಿರಿ. ತಾ. 13, 14 ಈ ಎರಡು ದಿನಗಳು ಅತೀವ ಲಾಭ ಸುಖದಾಯಿಗಳಾಗಿವೆ.

ಸಿಂಹ—ಶಕ್ತಿವಿಪಾರಿ ದಂಡಿಯವಿರಿ. ಆದರೆ ನಿಮ್ಮ ಪರಿಶ್ರಮಕ್ಕೆ ತಕ್ಕ ಫಲ ಕಾಣಸದು ಅಳಿಸ್ಥಿತ ಪ್ರವಾಸವು ಗಂಟುಬಿದ್ದು ನಷ್ಟಕಷ್ಟಗಳಿಗೆ ನಿಮ್ಮನ್ನು ಗುರಿಮಾಡುವದು. ಮನೆಯಲ್ಲಿಂತೂ ಕಂದಮಕ್ಕಳೊಂದು ಗುಂಡ ಹೆಂಡಿರೊಳು ಮಾತೃಭೇದವುಂಟಾಗಿ ಕಲಹಕ್ಕೆ ಡೆಯಾಗುವದು. ಸಾಲದ ಅಚಾಚಿಯಿಂದ ವಿಶೇಷ ಏಡಿತರಾದ ನಿಮಗೆ ತಾ. 10, 11, 15, 16 ಕೊಂಚ ಸುಖಕಾರಿಯಾದೀತು.

ಕನ್ಯಾ—ನಿಮಗೀವಾರದಲ್ಲಿ ಶುಭಗ್ರಹರಿಲ್ಲರ ಅನುಗ್ರಹವು ದೊರೆತಿರುವ ಕಾರಣ ಸತ್ಕಾರ್ಯ ಸದುದ್ಯಮಗಳಲ್ಲಿ ನಿಮ್ಮ ಅಭೀಷ್ಟವು ಯಾವೆಂದು ತರದ ಎಡರು ತೊಡರುಗಳಿಲ್ಲದೆ ನೆರವೇರುವದು. ಕೆಲವೊಮ್ಮೆ ಅಧಿಕಾರಿಜನರ ಏಡೆ ಮತ್ತು ದೇಹದಲ್ಲಿ ಅನಾರೋಗ್ಯವು ಕೂಡ ಕಾಣಿಸಿಕೊಳ್ಳಬಹುದು. ವಾರಾದಿಯ 5ದಿನಗಳು ನಿಮ್ಮ ಬಯಕೆಯನ್ನು ನಿರ್ವಿಘ್ನದಿಂದ ನೆರವೇರಿಸುವವು.

ತುಲಾ—ಈ ವಾರವು ನಿಮ್ಮ ಭಾಗ್ಯಕ್ಕೆ ಸ್ವಲ್ಪ ಅನಿಷ್ಟಕಾರಿಯಾಗಿ ಪರಿಣಮಿಸಲಿದೆ. ವ್ಯಯಾಗತ ಶನಿಯೂ ಜನ್ಮಗತ ಕುಜನೂ ಶತ್ರುಸ್ಥಾನಗತನಾದ ಬೃಹಸ್ಪತಿಯೂ ನಿಮಗೆ ನಾನಾತರದ ಶೋಕತಾಪಗಳನ್ನು ತಂದೊಡ್ಡಲಿರುವರು. ವಿದೇಶಪಜೀವಿಗಳಾದ ನೌಕರಿ ಜನರಿಗೂ ಕಾಯಕಕ್ಕೆ ಬೇವಿಗಳಾದ ಸೇವಕನರ್ಗಕ್ಕೂ ಈ ವಾರವು ಅನಿಷ್ಟದಾಯಿಯಾಗಿ ಪರಿಣಮಿಸಲಿದೆ. ಆದರೂ ವಾರಾಂತ್ಯದ 4 ದಿನಗಳು ಇತರ ದಿನಗಳಿಂತ ಉತ್ತಮವೆನಿಸುವವು.

ವೃಶ್ಚಿಕ—ನಿಮ್ಮ ಆದಾಯವು ಮಂದಗತಿಯಲ್ಲಿರುವದು. ಖರ್ಚಿನ ಭಾಗವು ಸ್ವಲ್ಪ ಹೆಚ್ಚಲಿದೆ. ಆದರೂ ನಿರ್ವಿಘ್ನಂತ ದ್ವಿಗುಣ ಉತ್ಪತ್ತಿಯಿರುವ ನೀವು ಆರ್ಥಿಕ ಭಾಗದಲ್ಲಿ ಚಿಂತಿಸಬೇಕಾಗಿಲ್ಲ ದೈವಾನುಸಂಧಾನವು ಮನಸ್ಸು ಈಗಲೀಗ ಚಂಚಲವಾಗ ಕೊಡಗಿದೆ ಸಾಮಾಜಿಕ ಕಾರ್ಯಗಳಲ್ಲಿ ಪ್ರಗತಿ ಹೊಂದುವಿರಿ. ವಿದ್ಯೋತ್ಪಜೀವಿಗಳಿಗೂ ಸೇವಕ ವರ್ಗಕ್ಕೂ ನಿರೀಕ್ಷೆಗಿಂತ ಅಧಿಕವಾದ ಫಲ ಲಭಿಸಲಿದೆ. ವಾರಾಂತ್ಯದ 2 ದಿನಗಳು ಸುಬಲಾಭಕಾರಿಗಳಾಗಿವೆ.

ಧನು:—ನಿಮ್ಮ ಶ್ರಮಕ್ಕೆ ತಕ್ಕ ಫಲ ದೊರೆವುದು. ಅದರೂ ಖರ್ಚು ಉತ್ಪತ್ತಿಗಿಂತ ದ್ವಿಗುಣ ವಿರುವುದರಿಂದ ಆರ್ಥಿಕ ತಾಪತ್ರಯದಿಂದ ಮುಕ್ತವಾಗಲಾರಿ. ವಿನಾಕಾರಣ ಬಂಧುಗಳಲ್ಲೂ ಜನತೆಯಲ್ಲೂ ಕಲಹವಾದೀತು. ಉದರ ರೋಗದಿಂದ ಬಳಲಲಿರುವಿರಿ. ಸಾಂಸಾರಿಕ ತಾಪತ್ರಯವು ಬಚ್ಚಂಕ ಕಡಿಮೆಯಾಗಲಿದೆ. ವಾರಾದಿಯ 2 ದಿನಗಳು ಅನುಕೂಲ-

ಮಕರ—ದೈವವು ಅತೀವ ಪ್ರತಿಕೂಲಾವಸ್ಥೆಗೆ ಬಂದಿದೆ. ಕಾರ್ಯಾರಂಭಕ್ಕೆ ಮುಂಚಿತವಾಗಿ ವಿಘ್ನಗಳುಪಸ್ಥಿತವಾಗುವವು. ಗುರುಹಿರಿಯರೊಡನೆ ಮನಸ್ತಾಪ, ಧರ್ಮ ಕರ್ಮಗಳಲ್ಲಿ ಅನಾದರ, ಅತ್ಮೀಯರ ವಿರಹ, ಇತ್ಯಾದಿಗಳಿಂದ ಸತತ ದುಃಖಭಾಗಿಗಳಾದ ತಮಗೆ ತಾ. 10ರಿಂದ 14ರ ವರೆಗಿನ ದಿನಗಳಲ್ಲಿ ಅಪಮೃತ್ಯುಗಳು ಕೊಂಚ ಕಡಮೆಯಾಗಲಿವೆ.

ಕುಂಭ—ನಿಮ್ಮ ಧನಲಾಭಸ್ಥಾನಗಳು ಬಲೀಯರಾದ ಗ್ರಹದಿಂದ ಕೂಡಿರುವ ಕಾರಣ ನಿಮ್ಮ ಸಂಪದ್ಭಾಗವು ಈ ವಾರದಲ್ಲಿ ಅತೀವ ವೃದ್ಧಿಹೊಂದಲಿದೆ. ಉದ್ಯೋಗದಲ್ಲೂ ವ್ಯಾಪಾರದಿಗಳಲ್ಲೂ ನಿರೀಕ್ಷೆಗಿಂತ ಅಧಿಕವಾದ ಫಲ ಲಭಿಸೀತು, ಆದರೆ ಹೆಚ್ಚಿನ ಜನರೊಡನೆ ವಾಕ್ಕಲಹಕ್ಕೆ ಗುರಿಯಾದೀರಿ. ಆರೋಗ್ಯಕ್ಕೂ ಸ್ವಲ್ಪ ಹಾನಿಯಿದೆ. ತಾ. 13ರಿಂದ 16ರ ವರೆಗಿನ ದಿನಗಳು ಅನುಕೂಲ-

ಮೀನ—ನಿಮ್ಮ ಎಣಿಕೆಯಂತೆ ಕಾರ್ಯವು ಫಲಿಸದು, ಆಪ್ತೇಷ್ಟ ವರ್ಗವು ವಂಚನೆ ಗೈಯಲಿದೆ. ಶತ್ರುಜನರು ಏಡೆಯು ಅಧಿಕವಾಗುವದು, ಹೆಂಡತಿ ಮಕ್ಕಳ ಆರೋಗ್ಯವು ಕೆಡಲಿದೆ. ಖರ್ಚಿಗೆ ತಕ್ಕ ಆದ್ಯಾಯವಿರುವುದರಿಂದ ನಿಮಗೆ ಹಣದ ಅಡಚಣೆ ಉಂಟಾಗಲಿದೆ. ವಾರಾಂತ್ಯದ 2ದಿನಗಳಲ್ಲಿ ಮಿತ್ರರ ಸಮಾಗಮ ಇಷ್ಟಾರ್ಥಗಳ ಸಿದ್ಧಿ ಕಾರ್ಯವಿಜಯಗಳನ್ನು ಹೊಂದುವಿರಿ.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ವೈಕರ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ

ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ದ್ರಾಹ್ಮಣರ ಆಡಿಗೆ, ಹಿಂಡಿತನಸು, ಇವುಗಳ ರುಚಿಶುಚಿ ಹೇಳಬೇಕೆ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್ಟ

For up-to-date Lodging & Boarding

ROYAL MAHAL,

UDIPI. S. Kanara.

ಗೊನೋರಿಯಾ ಪರಮಾರೋಗ ಉಪ್ಪು ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಕರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹೆಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತಲು ಛಾಯವಾಗಿದ್ದರೆ,....ಹಟ್ಟಿ ಬಿದ್ದಿದ್ದರೆ, ಉಷ್ಣದಿಂದ ಜೀರು ಇಳದಿದ್ದರೆ, ಉಡುಜಡ: ಆಗಿದ್ದರೆ, ಮೂಲನ್ಯಾಧಿ, ಭಗೆಂದ್ರ, ಗಂಡುಮಾಲಿ, ಕೈಕಾಲು ಕೂಲಿ, ಅರ್ಧಾಂಗ ವಾಯು ನಷ್ಟನೋಯು-ವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಕೊಲಿಕಟ್ಟು ಗರ್ಭಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿ ಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ಮಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಸೀಆಕಾರ, ಕೋಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ಒಂಭೈ ರೂ. ಪೋಸ್ಟ ಚಾರ್ಜ ೮ ಆಣೆ

ಬಿಜೆಂಟರು:—ಗದಗ:—ಗದಗ ಧಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಧಾರ್ಮಸಿ ಬಾಗಲಕೋಟೆ:—ಬಾಗಲಕೋಟೆ ಧಾರ್ಮಸಿ, ಧಾರವಾಡ:—ಧಾರವಾಡ ಧಾರ್ಮಸಿ, ಡಾವಣಗೇರಿ: ಡಾವಣಗೇರಿ ಪ್ರೆಸ್. ನಂಜುಡೇಸ್ವರ ಮೂರ್ತಿ ಡಾವಣಗೇರಿ.

ಪತ್ರವ್ಯವಹಾರ ಮಾಡಬೇಕಾದ ವಿಳಾಸ

ರೇವಣಸಿದ್ಧಪ್ಪ ಸಾಂಪ್ಪ ಡಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ-

ಸ್ವೀಕಾರ ವಿಮರ್ಶೆ

೧ ಹಂಬಲ

ಲೇಖಕರು: ಶ್ರೀ ಕೃಷ್ಣವರ್ಮಕಿ ಕ್ಯೂರ್- ಪ್ರಕಾಶಕರು: ಉಚಿತ ಪುಸ್ತಕನ ಬೆಳಕ ಚಾಕಿ ಬೆಳಗಾಂವ್. ದೆಲೆ ರೂ. ೧—೦—೦

ಏಳು ಕತೆಗಳ ಸಂಗ್ರಹವಿಲ್ಲಿ 'ಹಂಬಲ' ಅತ್ಯುತ್ತಮವೆನಿಸಬಹುದು. ಹಂಬಲ ಮನಸ್ಸಿನ ಕವಾದ ಕತೆ. ಮೂರ್ತಿಯು ಮನಸ್ಸಿನ ಮೇಲಾದ ಆಘಾತದಿಂದ ಅತನ ಮನಸ್ಸು ಅಲ್ಲೋಲಕಲ್ಲೋಲವಾದಂತಹ ಬಗೆಯನ್ನು ಬೆನ್ನಾಗಿ ಚಿತ್ರಿಸಲಾಗಿದೆ. ದಿನಚರಿಯಂತೂ ಅತ್ಯಂತ ಪರಿಣಾಮಕಾರಿಯಾಗಿ ಮೂಡಿಬಂದಿದೆ. ಮೂರ್ತಿಯು ಬಾಳನೌಕೆಯೂ ಬಿರುಗಾಳಿಯಲ್ಲಿ ಸಿಲುಕಿ ಪೇಚಾಡುತ್ತಿರುವದನ್ನು ಲಕ್ಷಿಸಿ, ಕೊನೆಗಾದರೂ ದಡ ಸೇರೀತೆಂದು ನಿರೀಕ್ಷಿಸುತ್ತ ಬಂದ ಸಮಿಕ್ಷಕನಿಗೆ ಮಂತ್ರೆ ಅದು ಆ ಸಂಚಿಯಲ್ಲಿ ನುಚ್ಚುನೂರಾಗುವ ಮರಂಕವನ್ನೆ ಕಾಣಬೇಕಾಯಿತು, 'ವಯಸ್ಸೆ ಸ್ಸು?' ಅದ್ಭುತವೆನಿಸುವ ಚಮತ್ಕಾರಿಕ ಕತೆ. "ಪ್ರೊಫೆಸರ್ ರಾವ್" ಬಡತನದ ಬಾಳುವೆಯನ್ನು ಚಿತ್ರಿಸುವಂತೂ ಸುಂದರ ಕತೆಯಿದು. ಈ ಮಂತ್ರ ಕನ್ನೆಯನ್ನು ಮದುವೆಯಾದ ದೀನ ಬಂಧು ಪ್ರೊ. ರಾವ್ ರವರು ತನ್ನ ಮನಸ್ಸಿನ ದುಗುಡವನ್ನು ದಿನಚರಿಯಲ್ಲಿ ಬರೆದು ಮನಸ್ಸನ್ನು ಸಮಾಧಾನ ಕಂದುಕೊಳ್ಳುವರು. ಓದಿಗಾಗಿ ರಾವ್‌ರವರ ಸಹಾಯವನ್ನು ಯಾಚಿಸುತ್ತ ಬಂದ ಹುಡುಗನನ್ನು ಹೆಂಡತಿ ಶಾರದೆ ನಿರ್ದಾಕ್ಷಿಣ್ಯವಾಗಿ ಮಾತಾನಾಡಿ ಹಿಂದಕ್ಕೆ ಕಳಿಸುವದೂ ಅದಕ್ಕಾಗಿ ಶ್ರೀ ರಾವ್‌ರವರು ಪರಿತಪಿಸಿ ಅವನನ್ನು ಹಿಂಬಾಲಿಸಿಕೊಂಡು ಹೋಗುವದೂ, ಆ ಕಂಡಿತ ದಿನಚರಿಯಲ್ಲಿ ಹೃದ್ರಾವಕ ಸನ್ನಿವೇಶವನ್ನು ಬರೆದಿಡುವದೂ, ಕಾದೆ ಅವನ್ನೋದಿ ತನ್ನ ಕಣ್ಣಿಂಬುನಿಸ್ಸಿಗೆ ಮರುಗುವದೂ- ಇವೆಲ್ಲ ಒಂದಕ್ಕೊಂದು ಹೊಂದಿಕೆಯಾದ ಸುಂದರ ಸನ್ನಿವೇಶಗಳು. ಉಳಿದ ನಾಲ್ಕು ಕತೆಗಳೂ ದೀರೆ ದೀರೆ ಉದ್ದೇಶದಿಂದ ಬರೆದಂಥವುಗಳು. ಹಲವುಕಡೆಗಳಲ್ಲಿ ಮಾತುಗಾರಿಕೆ ಸ್ವಲ್ಪಹೆಚ್ಚು- ಅಪ್ರಾಸಂಗಿಕವೆಂದು-ಕಂಡುಬಂದರೂ ಯೋಗ್ಯ ಕತೆಗಳನ್ನು ಬರೆಯಬಲ್ಲ ವಿಷಯ ವೈವಿಶ್ಯತೆ-ಕಥನ ಶೈಲಿ ಶ್ರೀ ಕೃಷ್ಣ ಮೂರ್ತಿಯವರಿಗೆ ಸಿದ್ಧಿಸಿದೆಯೆನ್ನಬಹುದು ಎಂತಲೇ ಇದಕ್ಕಿಂತಲೂ ಮಿಗಿಲಿನಿಸಿದ ಕತೆಗಳನ್ನು ಶ್ರೀ ಕೃಷ್ಣಮೂರ್ತಿಯವರು ಕನ್ನಡ ಜನಕ್ಕೆ ಕೊಡುವಂತಾಗಲೆಂದು ನಾವು ಹಾರೈಸುತ್ತೇವೆ.

೨ ಭಾರತೀ ದೀಪಾವಳೀ ಸಂಚಿಕೆ

ಸಂಪಾದಕರು: ಶ್ರೀಮತಿ ಕೆ. ಸಾವಿತ್ರಿ ಅವರು, ಭಾರತೀ ಪುಸ್ತಕಶಾಲೆ ಮಂದಿರ ಪೋ ಬಾಕ್ಸ್ ನಂ. 5573 ಮುಂಬೈ 14. ವಾ- ಚಂದಾ 3-8-0 ಬಿಡಿ ನಂ ಚಿತ್ರ 0-5-0.

ದೀಪಾವಳಿ ವಿಶೇಷ ಸಂಚಿಕೆಯಲ್ಲಿಯ ಸಹಜ ಸಾಮಾನ್ಯ ಎಲ್ಲಾ ಲಕ್ಷಣಗಳೂ ಒಂದಿಲ್ಲ ಒಂದು ರೀತಿಯಿಂದ ಮನನೀಯವೂ ವಿಜ್ಞಾಪೂರ್ಣವೂ ಆದಂತಹ ಕತೆಗಳೇ. ಇಂದು ಕನ್ನಡ ಕತೆಗಳು ಬಹಳವಾಗಿ ಕನ್ನಡದಲ್ಲಿ ಬರುತ್ತಿವೆಯಾದರೂ, ಶ್ರೀಗಳಾದ ವಾಸ್ತಿ, ಅನಂದ, ಅನಂದಕಂದ, ಕೆ. ವಿ. ಪುಟ್ಟಪ್ಪ, ಎಚ್- ಅನಂತ ಪದ್ಮನಾಭ ಭಟ್ಟ ಮುಂತಾದವರು ಬೇಪಂತ ಕತೆಗಳ ಮಟ್ಟಕ್ಕೇರುವ ಕತೆಗಳು ಬಹಳ ಕಡಮೆಯುಳ್ಳೇ ಬರುತ್ತಿವೆ. ಕನ್ನ ಕತೆಗಳಿಗೆ ಕತೆಗಾರ ಹೆಸರಾದ ಪತ್ರಿಕೆ. ಸದ್ಯ ಭಾರತೀ ಅದಕ್ಕಿಂತಲೂ ಮಿಗಿಲಾದ ಸ್ಥಾನಮಾನವನ್ನು ಗಳಿಸಿಕೊಂಡು ಜನಪ್ರಿಯವಾಗಿದೆ ದೀಪಾವಳೀ ಸಂಚಿಕೆಯು ಆತ್ಯಮೂಲ್ಯವೂ ಸಂಗ್ರಾಹ್ಯವೂ ಆಗಿರುತ್ತದೆ.

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA.

Regd.No. M. 3618

LICENCE No. 31
Licensed to Post without Prepayment

ESTD. 1921 ಸ್ಥಾಪನೆ

17—1—1952

Founder: Sri A. B. Shetty,
Minister for Agriculture & Veterans

ನ ವ ಯು ಗ
ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ವಾರಪತ್ರಿಕೆ.

ಕೃಷಿಮಂತ್ರಿ ಶ್ರೀ ಎ. ಬಿ. ಶೆಟ್ಟರಿಂದ ಸ್ಥಾಪಿತವಾದುದು.



ನ ವ ಯು ಗ
ಉಡುಪಿ, ದ ಕ

ವಾರ್ಷಿಕ ಚಂದಾ ರೂ 5 12 0
6 ತಿಂಗಳಿಗೆ ರೂ 2-14-0
ಬಿಡಿ ಪ್ರತಿಗೆ 0-2 "

ವರ್ಷ ೩೧ ವಾರ ೦೯

NAVAYUGA WEEKLY Post Box No. 22 UDIPI.

Vol 3 : No 19

ಕುತೂಹಲದಾಯೀ ರಾಜಕೀಯ ನೋಟಗಳು.

ಜಗತ್ತಿನ ನಾಲ್ಕೂನಿಟ್ಟಿನನೋಟದಿಂದ ನೋಡಿದರೂ ಎಲ್ಲ ಕಡೆಯಲ್ಲೂ ಒಂದು ಬಗೆಯ ನಿರೀಕ್ಷೆ—ಮಹತ್ವವನ್ನು ಸಾಧಿಸುವ ಹಂಬಲ ಕಂಡುಬರುತ್ತವೆ. ಏಶಿಯದ ರಾಷ್ಟ್ರಗಳಲ್ಲಿ ಯಂದ್ಧಸನ್ನಾಹದ ಕೂಗು ಕಡಿಮೆಯಾಗಿದ್ದರೂ— ವಾಸ್ತವಿಕಾತ್ಮ ರಾಷ್ಟ್ರಗಳ ವೈರುಷ ಪ್ರದರ್ಶನದ ಕಾತುರತೆ ಯಿಂದಾಗಿ ಜಗತ್ತು ಮೂರನೇ ಮಹಾಯುದ್ಧಕ್ಕೆ ಆಣಿಯಾಗದೇ ಇರಲಿಕ್ಕೇನೂ ಎನಿಸುತ್ತದೆ. ಕೊರಿಯ ರಣರಂಗದ ಯುದ್ಧ ಮುಕ್ತಾಯದ ಮಾತುಕತೆಗಳಲ್ಲಿ ಸ್ವಲ್ಪವೂ ಪ್ರಗತಿ ಕಂಡ ಬರುತ್ತಿಲ್ಲ. ಕೂಲಿಗಾರ ಪಕ್ಷದ ಕೈಯಿಂದ ಅಧಿಕಾರ ಕಸ್ಪಿ ಕನ್ಸರ್ವೇಟಿವ್ ಪಕ್ಷಕ್ಕೆ ಬಂದರೆ ಅರಬ ರಾಷ್ಟ್ರಗಳ ಸಮಸ್ಯೆ ಸರಿಹಾರವಾದೀತೆಂದು ಇಂಗ್ಲೆಂಡದವರು ನಂಬಿದ್ದರು. ಸದ್ಯ ಅರಬ ರಾಷ್ಟ್ರಗಳ ಸಮಸ್ಯೆಗಳೇನೂ ಜಗತ್ತಿಗೆ ಹರಿದಂತಿಲ್ಲ. ಇರಾಣವು ಇಂಗ್ಲಂಡ ದೊಡನೆ ಹಟಸಾಧಿಸಿದ್ದರಿಂದ ತನಗಾದ ಲಾಭವೇನೆಂಬುದನ್ನು ಆರಿಯದಾಗಿದೆ. ರಾಷ್ಟ್ರೀಕರಣದಗೊತ್ತುಗುರಿಯಿಲ್ಲದೆ ಇರಾಣದ ಮುಖ್ಯ ಮಂತ್ರಿ ಮಸಾದಿಕರು ಹಾಹಾರಿದರು, ಬ್ರಿಟಿಷ ತಜ್ಞರನ್ನು ಹೊರ ದಬ್ಬಲಾಯಿತು ಆದರೆ ಇನ್ನೂ ಇರಾಣದ ಸ್ಪಷ್ಟ ಜಗತ್ತಿಗೆ ಹರಿಯಲಿಲ್ಲ ಮಾತ್ರವಲ್ಲ ಲಕ್ಷೋಪಲಕ್ಷ ರುಪಾಯಿ ಬೆಲಬರಬಹುದಾದಂಥಹ ಎಣ್ಣೆಗಳು ಹಾಗೆಯೇ ಉಳಿದಿವೆ. ಈ ನಷ್ಟವನ್ನು ಇರಾಣ ಬಹುಕಾಲ ಸಹಿಸದ.- ಆರ್ಥಿಕ ಮುಗ್ಗಟ್ಟಿನಿಂದ ಇರಾಣದ ಅಂತರಂಗಸ್ಥಿತಿ ಚಿಂತಾಜನಕವಾಗಿದೆ. ರಾಷ್ಟ್ರೀಕರಣದ ಈ ಹೋರಾಟದಿಂದ ಪತ್ಯಪ್ಪನ್ನು ಅನಿಷ್ಪವೇ ವ್ಯಾಪ್ತಿಯಾಯಿತು. ಇರಾಣದಲ್ಲಿ ಚುನಾವಣೆಯಾಗಲಿದೆ. ಜನತೆಗೆ ಮಸಾದಿಕರ ಮೇಲೆಸಕಾನು ಭೂತಿಯಿಲ್ಲ:ಕ್ಷಣ ಕ್ಷಣಕ್ಕೆ ಅವರು ಪಾರ್ಲಿಮೆಂಟಿನ ಮುಂದೆ ಸುರಿಸುವ ಕಣ್ಣೀರಿಗೆ ಅಲ್ಲಿನ ಜನ ಬೆಲೆ ಕೊಡುತ್ತಲೂ ಇಲ್ಲ!

ಎಣ್ಣೆ ಕಂಪೆನಿಯ ಆಧಾರದಿಂದ ಜಾಗತಿಕ ಬ್ಯಾಂಕಿನಿಂದ ನಾಲಪಡೆಯುವ ಮಾತುಕತೆ ಯಶಸ್ವಿಯಾಗಿದೆಯಾದರೂ ಬ್ರಿಟನು ಅದಕ್ಕೆ ಅಡ್ಡಿಮಾಡಿದೆ. ಬ್ರಿಟನಿನ ಮಾತನ್ನು ಅಮೆರಿಕಾನರು ತಿರಸ್ಕರಿಸುವಂತಿಲ್ಲ. ಸದ್ಯ ಚರ್ಚಿಲ ಸಾಹೇಬರು ಮಹತ್ವದ ಸಂಗತಿಗಳನ್ನು ಚರ್ಚಿಸುವವರಗೆ ಸಲುವಾಗಿ ವಾಶಿಂಗಟನ್ನಿಗೆ ಪಯಣ ಬೆಳೆಸಿರುವರು. ಇರಾಣ ಕಂಪೆನಿಯ ಪ್ರಶ್ನೆಯ ಇತ್ಯರ್ಥವೂ ಇಲ್ಲಿ ಆಗಬಹುದು.

ಇತರ ರಾಷ್ಟ್ರಗಳೊಡನೆ ಇಟ್ಟುಕೊಳ್ಳಬೇಕಾದ ಸಂಬಂಧವನ್ನೇ ಕಡಿದು ಹಾಕಬಲ್ಲ ಸಂಯೇಜ ಕಾಲುವೆಯ ಪ್ರಶ್ನೆಯೊಂದು ಎರತನೆಯ ಕೊರಿಯಾ ಆಗಬಹುದೇನೋ ಎನುವಂತೆ ಅಲ್ಲಿಯ ವಾತಾವರಣ ಗಂಭೀರವಾಗುತ್ತಲಿದೆ. ಯುದ್ಧಪ್ರಿಯ ಚರ್ಚಿಲ್ಲರಿಗೆ ಸಂಧಾನದಲ್ಲಿ ಕಾಲಹರಣ ಮಾಡುವದಕ್ಕಿಂತ ಶಸ್ತ್ರದಿಂದ ಇತಿಶ್ರೀಗೊಳ್ಳಲೆಂಬುದೇ ಅವರ ಮುಖ್ಯ ಧೋರಣೆ! ಸದ್ಯ ಅಧ್ಯಕ್ಷ ಟ್ರುಮನ್ನರೊಡನೆ ಗುಪ್ತಾಲೋಚನೆ ನಡೆಸುವದರಲ್ಲಿ ಮಹತ್ವದ ವಿಚಾರ ಇದೇಯಾಗಿರಬಹುದು ಸುಯೇಜ ಕಾಲುವೆ ಬೇರೆ ಬೇರೆ ರಾಷ್ಟ್ರಗಳೊಡನೆ ಸಂಪರ್ಕ ಸಹಕಾರಗಳನ್ನು ಬೆಳಸಬೇಕಾದ ಮಧ್ಯಾದ್ವಾರ ಹೇಗೋ ಹಾಗೇ ಬೇರೆ ಬೇರೆ ರಾಷ್ಟ್ರಗಳು ತನಗೆ ದ್ವೇಷ ಸಾಧಿಸುವ ಮಹಾಯುದ್ಧರೂಪ ಹಾಗದು. ಇಜಿಪ್ತವನ್ನು ಪೂರ್ತಿ ಮಾಡುವದು ಚರ್ಚಿಲ್ಲರಿಗೆ ದೊಡ್ಡ ಮಾತೇ ನಲ್ಲ! ಬ್ರಿಟಿಷ ಅಧಿಕಾರಿಗಳ ಮೇಲೆ ಇಜಿಪ್ತಿಯರ್ಸರು ಮಾಡುತ್ತಿರುವ ಚಿತ್ರಹಿಂಸೆಯನ್ನು ಚರ್ಚಿಲ್ಲರು ಎತ್ತಲಕ್ಕೂ ಸಹಿಸ. ವರಲ್ಲ. ಈ ಪ್ರತಿಭಟನೆಯ ಹಿನ್ನೆಲೆಯಲ್ಲಿ ರಶಿಯದ ಸ್ಫೂರ್ತಿ ಇದೆಯೆಂಬುದನ್ನು ಅವರು ಚೆನ್ನಾಗಿ ಅರಿತಿರುವರು. ಅಂತಲೇ ಟ್ರುಮನ್ನರೊಡನೆ ಭಾರೀ ಮಂತ್ರಾಲೋಚನೆ ನಡೆಯುತ್ತಲಿದೆ

ಕಮ್ಯೂನಿಸ್ಟರ ಕಟುವಿರೋಧಿಯೂ ಅವರ ನಿರ್ನಾಮಕ್ಕೆ ಅವಿರತ ಹೋರಾಟ ನಡೆಸುವ ಮಹತ್ವಾಕಾಂಕ್ಷೆಯನ್ನಿಟ್ಟುಕೊಂಡಿರುವ ಟ್ರುಮನ್ನರು ಈಗ ಹೊಸ ರಾಗವನ್ನು ಹಾಡುತ್ತಲಿದ್ದಾರೆ. ದಿವಾರಾತ್ರಿ ರಶಿಯದ್ವೇ ಕನಸು ಈ ವ್ಯಹಾರಿಗೆ. ಶಾಂತಿಯ ಮಾತನ್ನಾಡುವಾಗಲೂ— ಸಂಧಾನದ ಯತ್ನ ನಡೆಸುವಾಗಲೂ— ರಶಿಯ ತನ್ನ ಪರಮರಕ್ಕಸನೆಂಬ ಭಾವನೆಯನ್ನಿಟ್ಟುಕೊಂಡೇ ಮುಂಜಿ ಸಾಗುವರು. ಚರ್ಚಿಲ್ಲರೊಡನೆ ಸಮಾಲೋಚನೆ ನಡೆಸಿದ ಹುರುಪೋ ಏನೋ ಅಧ್ಯಕ್ಷ ಟ್ರುಮನ್ನರು ರಶಿಯವು ಯುದ್ಧ ಸನ್ನಾಹ ನಡೆಸುತ್ತಲಿದೆಂದೂ ಅದರ ಉದ್ಧಟತನದಂದೆ 1952ರೊಳಗಾಗಿ ಮೂರನೇ ಮಹಾಯುದ್ಧ ಅನಿವಾರ್ಯವೆಂದೂ-ಅದಕ್ಕಾಗಿ ಮೂರನೇ ಮಹಾಯುದ್ಧದ ಪೂರ್ವಭಾವಿಯಾಗಿ ನಾವು ಈಗಿಂದೀಗಲೇ ಶಸ್ತ್ರ ಸೈನ್ಯವನ್ನು ಕಲಿತಾಳಕ್ಕೆ ದೇಕೆಂದೂ ರಾಗವೆಳೆಯುತ್ತಿದ್ದಾರೆ. ಅಂತೂ ಯುದ್ಧಪ್ರಿಯರೀರ್ವರು ಒಂದೆಡೆ ಸೇರಿ ಈ ರೀತಿಯ ತೀವ್ರಾನಕ್ಕೆ ಒದಿದ್ದಾರೆ ಹುದೆಂದು ನಾವು ಊಹಿಸಬೇಕಾಗುತ್ತದೆ ಯೆಂದ್ದಸಂಗ್ರಹದ ಮಾತುಕತೆಗಳು ನಡೆಯುತ್ತಿರುವಾಗಲೇ ಈ ಪ್ರಹಸನ ಯುದ್ಧ. ಈ ರೀತಿಯ ಉದ್ರೇಗಕಾರಕ ಹೇಳಿಕೆಯನ್ನು ಕೊಡಬೇಕೆಂದರೆ ಆ ತೀರಿತು ಮಾತೇ ಚರ್ಚೆಯ ಮುಖ್ಯಾಂತವಾಗಿಸ್ಟೆನ್ನುವದಕ್ಕೆ ಸಂದೇಹವಿಲ್ಲ. ಜಗತ್ತಿನ ಪ್ರಬಲ ರಾಷ್ಟ್ರಗಳ ಮಧ್ಯೆ ಧುರೀಣರಲ್ಲೇ ಈ ರೀತಿಯ ಯುದ್ಧೋತ್ಸಾಹತೆ ಕಂಡುಬಂದರೆ ಮೂರನೆಯ ವಿಶ್ವಯುದ್ಧದ ಪ್ರಶ್ನೆ ಬಹಳ ದೂರದ ಮಾತಾಗಿ ಉಳಿಯುದು. ಕೋಲಾಹಲವನ್ನೆಬ್ಬಿಸುವದರ ಸಲುವಾಗಿಯೇ ಈ ಭಾರೀ ಕುತೂಹಲದಿಂದ ಯುದ್ಧಪ್ರಿಯ-ಮಿತ್ರಧ್ವಯರ ಸಮ್ಮಿಲನ.

ಭಾರತ, ಇಂದು ಒಂದು ಹೊಸ ಅಧ್ಯಾಯವನ್ನು ತೆರೆಯುತ್ತಲಿದೆ. ಸದ್ಯದ ಚುನಾವಣೆ ನವಭಾರತದ ಭವಿತವ್ಯವನ್ನು ನಿರ್ಧರಿಸಬಹುದೆನ್ನುವದಕ್ಕೆ ಸಂದೇಹವೇ ಇಲ್ಲ! ಈ ಕನ್ನಡ್ಡಿಗೆ ಚುನಾವಣೆಯು ಸ್ವಾತಂತ್ರ್ಯವೆಂದ ಗತಿಯಿಂದ ಸಾಗುತ್ತಲಿದೆ. ಮದ್ರಾಸು, ಒರಿಸ್ಸಾ, ಹೈದರಾಬಾದ, ತಿರುವಾಂಕೂರ, ಕೊಚ್ಚಿನ, ಮುಂತಾದ ಕಡೆಗಳ ಈ ವರೆಗಿನ ಫಲಿತಾಂಶವನ್ನು ಲಕ್ಷಿಸುವಾಗ ಕಾಂಗ್ರೆಸ್ಸು ಇತರ ಪಕ್ಷಗಳನ್ನು ವಿರೋಧಿಸುವ ಒಲವನ್ನು ಗಳಿಸಿಲ್ಲವೆಂದು ತಿಳಿಯುತ್ತದೆ. ಇಷ್ಟಾರಲ್ಲೇ ಕಾಂಗ್ರೆಸು ಪಕಾರವನ್ನು ಸ್ಪಷ್ಟ ಅಧಿಕಾರ ನಡೆಸುವವರ ಕನಸು ನೆನವಾಗುವಂತಿಲ್ಲವೆಂದು ವಿರೋಧಿ ಪಕ್ಷಗಳವರು ಆಣಕವಾಡುತ್ತಲಿದ್ದಾರೆ. ಬಹುಪಂಚ್ಯೆಯಲ್ಲಿ ಚುನಾಯಿಸಿ ಬರಬೇಕಾದ ಸ್ಥಾನಗಳಿರುವಾಗಲೇ ವಿರೋಧಿಗಳಲ್ಲಿ ಇಷ್ಟೆಲ್ಲ ಕುತೂಹಲ ಹುಟ್ಟಿದೆ. ಇನ್ನು ಬಿಡ ಮೇಲಾದರೆ ತಿರುಗಿ ಹೊಟ್ಟೆಯರಿಬುಲುಂಟೆ. ಒಂದು ವೇಳೆ ವಿರೋಧಿ ಪಕ್ಷಗಳು ಹಲವು ಕಡೆಗಳಲ್ಲಿ ತಮ್ಮ ವರ್ಚಸ್ಸನ್ನು ಪಯೋಗಿಸಿ ನವ್ಯ ಕುತೂಹಲವನ್ನು ಕೆರಳಿಸುವಂತೆ ಮಾಡಿದರೂ ಭಾರತ ಸರಕಾರದ ಮುಂದಿರುವ ಸಕಸ್ಯಾರು ಜೋಡನೆ ಸುನ್ನವಸ್ಥಿತ ರೂಪದಲ್ಲಿ—ನಿರ್ದಿಷ್ಟ ಕಾಲಕ್ಕೆ ಕೈಗೊಡಬೇಕಾದ ಕಾರ್ಯಕ್ರಮ ಬರಬೇಕಾದ್ದು ಅನಿವಾರ್ಯವೆಂಬುದನ್ನು ಎಲ್ಲರೂ ಅವಶ್ಯವಾಗಿ ಅರಿತುಕೊಳ್ಳಬೇಕಾಗಿದೆ! ಶಾಸನ ಸಭೆಗಳಿಂದಿಗೆ ಗಿಲ್ಲ ಗದ್ದಲಗಳ ಜಿಲ್ಲೆಯೆ ಮಾತ್ರವಲ್ಲ ಯುದ್ಧದ ರಂಗವೆಂದು ಹಲವರು ನಂಬಿಯಿರಬಹುದು ಈ ಬೆಸ್ಸಿ ಕಟೋದ್ಯೋಗಳು ನೋಡಿದವನಿಕ್ಕೇನೋ ಬಹಳ ಕೃತಿ ಹಲವರಿಗೆ ಗಳಾಗಿರಬಹುದು. ಆದರೆ ರಾಷ್ಟ್ರ ಹಿತದೃಷ್ಟಿಯಿಂದ ನೋಡಿದರೆ ಇವೆ ನಿಜವಾಗಿಯೂ ಅಪಾಯಕಾರಿಗಳೆ!

TEL: 40592

WATSONS AERATED WATERS
14 Parel Road, Cross Lane, BOMBAY 12

ಎಲ್ಲಾ ತರದ ಸೋಡಾ ಮತ್ತು ಇತರ ಪಾನೀಯಗಳನ್ನು ಆರೋಗ್ಯ ಶಾಸ್ತ್ರ ರೀತಿಯಲ್ಲಿ ಅತ್ಯಾಧುನಿಕ ವಿದ್ಯುಚ್ಛಕ್ತಿಯ ಯಂತ್ರಗಳ ಮೂಲಕ ತಯಾರಿಸುವೆವು.

ನಗರದ ಎಲ್ಲಾ ಭಾಗಗಳಲ್ಲಿಯೂ ನಮ್ಮ ಪಾನೀಯಗಳು ಸುಲಭ ದರದಲ್ಲಿ ದೊರೆಯುವುವು.

ಪ್ರಗತಿಹೊಂದುತ್ತಿರುವ ಕನ್ನಡಿಗರ ಮಹಾಸಂಸ್ಥೆ

ವಾಟ್ಸನ್ಸ್ ಎರೇಟೆಡ್ ವಾಟರ್ಸ್,
14, ಪರೇಲ್ ರೋಡ್, ಕ್ರಾಸ್ ಲೇನ್, ಬೊಂಬಾಯಿ 12.
(ಟೆಲಿಫೋನ್: 40592)



"ವಿಜಯ" ಕಬ್ಬಿನ ಗಾಣ
ಎರಡು ಎತ್ತುಗಳಿಂದ ಎಳೆಯಲ್ಪಡುವ
ಉತ್ಕೃಷ್ಟ ತರಗತಿಯ ಯಂತ್ರ
ಬೆಲೆ ರೂ 465
ನಿಮ್ಮ ಬಂದರ ಡಿಲೆವರಿ
THE VIJAY ENGINEERING CO BOMBAY 1

ಪ್ರಜಾಮತ ಸಂಗ್ರಹ ಮತ್ತು ಉಪ ಕ್ರಮಗಳಿಂದುಂಟಾಗುವ ಕೆಡಕುಗಳನ್ನು ತಪ್ಪಿಸುವರೆ ಅಥವಾ ಕಡಿಮೆ ಮಾಡುವ ರೆ ಬ್ರೈಸ್ ಎಂಬವರು 'ಮಾಡರ್ನ್ ಡೆ ಮೋಕ್ರೆಸಿ' ಎಂಬ ಗ್ರಂಥದಲ್ಲಿ ಕೆಲ ಪ್ರಯೋಗಗಳನ್ನು ಹೇಳಿರುವರು. ಪ್ರಜಾಮತ ಸಂಗ್ರಹವನ್ನು ಅಪೇಕ್ಷಿಸುವರೆ ಸಹ ಹಾಕಬೇಕಾದ ಜನಸಂಖ್ಯೆಯು ದೇಶದ ಜನರ ಒತ್ತಡ ನೋಡಿ ನಿರ್ಣಯಿಸಬೇಕೆಂದಿರುವರು. ಹೆಚ್ಚು ಜನರಿರುವಲ್ಲಿ ಬಹು ಸುಲಭದಿಂದ ಸಹ ಪಡೆಯಬಹುದಾದ್ದರಿಂದ ಶೇಕಡಾ ಎಂಟು ಅಥವಾ ಹತ್ತು ರಷ್ಟು ಪ್ರಜಾಮತಕ್ಕೆ ಅದರ ಎರಡು ಪಾಲಷ್ಟು ಉಪಕ್ರಮಕ್ಕೆ ಬೇಕೆಂದಿರುವರು. ವಿಚಾರ ಕಡಮೆಯಾದ, ಸ್ಪಷ್ಟವಲ್ಲದ ಮತ್ತು ಸಂಶಯಾಸ್ಪದವಾದ ಕರಡು ತಯಾರಾಗದಂತೆ ತಜ್ಞರಿಂದ ತಯಾರಿಸಬೇಕು. ಅಲ್ಲವಾದಲ್ಲಿ ಯೋಜನೆಯ ಗುರಿಯನ್ನು ಮಾತ್ರ ಮುಂದಿಡಬೇಕು. ಉಳಿದ ಕೆಲಸವನ್ನು ಶಾಸನ ಸಭೆಗೆ ಬಿಡಬೇಕು. ಮತಗಣನೆಯ ಮುಂಚಿತವಾಗಿ ಕರಡಿನ ನಕ್ಲು ಎಲ್ಲರಿಗೂ ಸಿಕ್ಕುವಂತೆ ಮಾಡಬೇಕು. ಅದರ ಉದ್ದೇಶ ಮತ್ತು ಆಡತವಾದ ವಿಷಯಗಳ ಕುರಿತು ಸಂಕ್ಷೇಪ ವಂದಿ ಇರಬೇಕು ಉಪಕ್ರಮದಲ್ಲಿ ತಯಾರಾದ ಮಸೂದೆಯು ಶಾಸನ ಸಭೆಯಲ್ಲಿ ಶೋಧಿಸಲ್ಪಡಬೇಕು. ಅವರ ಅಭಿಪ್ರಾಯ ವ್ಯಕ್ತ ಪಡಿಸಬೇಕು. ಆಗತ್ಯ ಕಂಡರೆ ತಿದ್ದುವೇ ಆದ ಇನ್ನೊಂದು ಕರಡನ್ನು ಇದರ ಬದಲಿಗೆ ತಯಾರಿಸಬೇಕು. ಜರೂರಿನಿಂದ ತೀರ್ಮಾನವಾಗತಕ್ಕವುಗಳು. ಹೆಚ್ಚಾಗಿ ವಿದೇಶದೊಡನೆ ನಡೆದ ಒಡಂಬಡಿಕೆ ಮತ್ತು ಹಣಕಾಸಿನ ವ್ಯವಹಾರಗಳನ್ನು ಪ್ರಜಾಮತ ಸಂಗ್ರಹಕ್ಕೆ ಒಪ್ಪಿಸುವದು ಸರಿಯಲ್ಲ. ಸಾಮಾನ್ಯ ಮತದಾರರು ತಿಳಿಯಲಾರದಷ್ಟು ಹಲವು ವಿಷಯಗಳನ್ನು ಒಂದೇ ಸವನೆ ಮತ ಸಂಗ್ರಹಕ್ಕೆ ಒಪ್ಪಿಸಬಾರದು. ಒಂದು ಬಾಬು ಪ್ರಜಾಮತ ಸಂಗ್ರಹದಲ್ಲಿ ಬಿದ್ದುಹೋದರೆ ಅದೇ ಪುನಃ ಪುನಃ ಕೂಡ್ಲಿ ಕೂಡ್ಲಿ ಬಾರದಂತೆ ಸಮಯದ ಗಡಿಮಿತಿ ಇಡಬೇಕು. ಪೈಯಕ್ತಿಕ ಅನುಭವವನ್ನು ಪಡೆಯುವುದಕ್ಕಾಗಿ ಪ್ರಜಾಮತ ಸಂಗ್ರಹವಿರುವುದರಿಂದ ವಕ್ಷಗಳ ವರ್ತಸ್ಸು ಕಡಿಮೆಯಾಗಬೇಕು. ಮುಖ್ಯ ಮಸೂದೆಗಳು ಬಹುಪಕ್ಷದವರನ್ನು ಕಡೆಗಣಿಸಿ ಸ್ವಲ್ಪ ಜನರ ಸ್ವಾರ್ಥಕ್ಕಾಗಿ ಆಗದಂತೆ 3/5ನೇ ಜುಮ್ಲಾ ಓಟರರು ಇಲ್ಲದಿರುವಲ್ಲಿ ಉಪಕ್ರಮವು ನಡೆಯದಂತೆ ನೋಡಿಕೊಳ್ಳಬೇಕು. ದೊಡ್ಡ ರಾಷ್ಟ್ರಗಳಲ್ಲಿ ಪ್ರಜಾಮತ ಸಂಗ್ರಹಕ್ಕೆ ಕರ್ಚಾಗುವದಾದ್ದರಿಂದ ಪ್ರಜಾಮತ ಸಂಗ್ರಹಕ್ಕೆ ಒಪ್ಪಿಸತಕ್ಕ ವಿಷಯಗಳಿಗೆ ಮಿತಿ ಇಡಬೇಕು.

ಜನರು ಸರಿಯಾಗಿ ಮತಕೊಡಲಾರರು. ಪಗಡೆದವರು ಪಕ್ಷಗಳು ತಮ್ಮ ಕೈ

ಪ್ರಜಾಸತ್ತೆ

ಪ್ರಜಾಮತವೊ? ಪಕ್ಷಗಳ ಕೈವಾಡವೊ?

ಕಾಯಿದೆ ಕಾನೂನು ಮತ್ತು ಶಾಂತಿನೆಮ್ಮದಿಗಳಿಂದಲೇ ಸಮಾಜ ವೃದ್ಧಿ

[ಹಿಂದಿನ ಸಂಚಿಕೆಯಿಂದ ಮುಂದುವರಿದುದು]

ವಾಡ ತೋರಿಸುವವು. ಪಕ್ಷಗಳಿಲ್ಲದೆ ಮತದಾರರನ್ನು ಒಟ್ಟುಗೂಡಿಸುವದು ಕಷ್ಟವಾದ್ದರಿಂದ ಪ್ರಜಾಮತ ಸಂಗ್ರಹದ ಧ್ಯೇಯವನ್ನೇ ಪಕ್ಷಗಳು ಬಲವಾದಲ್ಲಿ ಹಾಳು ಮಾಡುವವು. ಜನರು ತಮ್ಮ ಸ್ವಂತ ಅಭಿಪ್ರಾಯದ ಬದಲಾಗಿ ಇತರರು ಹೇಳಿ ಕೊಟ್ಟಂತೆ ನಡೆಯುವರು. ಎಷ್ಟರ ಮಟ್ಟಿಗೆ ಇವರ ಕೈವಾಡವು ಕಡಿಮೆಯಾಗುವುದೋ ಅಷ್ಟರ ಮಟ್ಟಿಗೆ ಪ್ರಜಾಮತ ಸಂಗ್ರಹವು ಒಳ್ಳೇದಾಗುವದು. ಕಡಮೆ ಜನರಿರುವ ಸಣ್ಣ ರಾಷ್ಟ್ರಗಳಲ್ಲಿ ಪ್ರಜಾಮತ ಸಂಗ್ರಹವು ಯೋಗ್ಯ ರೀತಿಯಿಂದ ನಡೆಯುವದು. ರಾಗ ಭಾವವಿಲ್ಲದಿರುವಲ್ಲಿ ಮತ್ತು ತಿಳುವಳಿಕೆಯುಳ್ಳವರು ಹೆಚ್ಚಿರುವಲ್ಲಿ ಪ್ರಜಾಮತ ಸಂಗ್ರಹವು ಒಳ್ಳೇ ರೀತಿಯಿಂದ ನಡೆಯುವದು.

ಈ ಮೇಲೆ ಡೈರೆಕ್ಟ್ ಆಕ್ಷನ್ (Direct Action) ಎಂದರೇನೆಂಬುದನ್ನು ತಿಳಿಯಬೇಕಾಗಿದೆ. ಲೋಕದ ಎಲ್ಲಾ ಕಡೆಗಳಲ್ಲೂ ಶ್ರಮಜೀವಿಗಳು ತಾವಿಗೆ ಅವಶ್ಯವಾದ ಆರ್ಥಿಕ ಸೌಕರ್ಯಗಳು ಉದ್ದಿಮೆದಾರರು ಮತ್ತು ಮ್ಹಾಲಿಕರಿಂದ ದೊರೆಯುವದು ದುರ್ಲಭವೆಂದು ಕಂಡೊಡನೆಯೇ ಅವರೆಲ್ಲರೂ ಒಂದಾಗಿ ದುಡಿಯುವದನ್ನು ಕೈದುಮಾಡಿ ಕೈಕಟ್ಟಿ ಕೂತು ಬಿಡುವರು ಇದಕ್ಕೆ ಸ್ಟ್ರೈಕ್ ಎಂದು ಹೇಳುವರು. ಶ್ರೀಮಂತರು ಆರ್ಥಿಕ ಉತ್ಪಾದನೆಯಿಂದ ಸಿಕ್ಕುವ ಲಾಭವನ್ನು ಕಳಕೊಳ್ಳಲು ತಯಾರಿಯಿಲ್ಲದ ಕಾರಣ ಇವರನ್ನು ಹೇಗಾದರೂ ಕುಶಿ ಪಡಿಸುವರು. ಒಂದು ವೇಳೆ ಕೂಲಿಕಾರರೆ ಸೋತು ಹೋಗುವ ಪ್ರಸಂಗ ಬಂದರೆ ಊರ ಮಹನೀಯರು ಕನಿಕರಪಟ್ಟು ಅವರ ಬಗ್ಗೆ ಸಹಾನುಭೂತಿ ತೋರಿಸಿ ಸಹಾಯ ಮಾಡಿ ಕಲಹ ನಿವೃತ್ತಿ ಮಾಡುವರು. ಈ ಕ್ರಮವನ್ನು ರಾಜಕೀಯ ವಿಚಾರಗಳಲ್ಲಿ ಸಹ ತಂದೊಡ್ಡುವ ಕ್ರಮವನ್ನು ಇತ್ತೀಚೆಗೆ ಕೆಲವು ಕಡೆಗಳಲ್ಲಿ ತಂದಿರುವರು. ರಷ್ಯದವರು ಈ ತಕ್ಷಕ್ಕೆ ಮಹತ್ವ ಕೊಟ್ಟಿರುವರು. ಕಾರ್ಲ್ ಮಾರ್ಕ್ಸ್ ಮತ್ತು ಎಂಜೆಲ್ಸ್ (Karl Marx and Engels) ಎಂಬ ಇಬ್ಬರು ತಜ್ಞೀಯರು ಆರ್ಥಶಾಸ್ತ್ರಕ್ಕೆ ಒಂದು ಹೊಸ ಭಾಷ್ಯ ಮಾಡಿರುವರು. ಲೋಕದ ವ್ಯವಹಾರವೆಲ್ಲಾ ಆರ್ಥಿಕ ಸ್ಥಿತಿಯನ್ನು ಹೊಂದಿರುವದು. ಶ್ರೀಮಂತ ವರ್ಗದವರು ಉದ್ದಿಮೆದಾರರು ತಮ್ಮ ಹಣದ ಒಲುಮೆ, ಲಂಚಗೂಳಿತನ ಮತ್ತು ಬಲಾತ್ಕಾರ, ಜುಲುಮಿನಿಂದ ಸರಕಾರವನ್ನು ತಮ್ಮ ಅಧೀನವಾಗಿರುವುದಾದರೆ ಇಷ್ಟೆಲ್ಲ ಬೇಕೆಂತಿಲ್ಲ. ಸಾರ್ವಜನಿಕರು ಚಳವಳ ಹೂಡಿ ವಿರೋಧ ಪ್ರದರ್ಶಿಸಿ ಪ್ರಚಾರ ಮಾಡಿದರೆ ಯಾವ ಸರಕಾರವನ್ನಾದರೂ ಸಂದಾಗಿ ತರಬಹುದು. ರಾಜಕೀಯ ವಿಚಾರದಲ್ಲಿ ಆರ್ಥಿಕ ಬಲವನ್ನು ಯಾವಾಗಲೂ ಉಪಯೋಗಿಸುವದು ಪ್ರಜಾಸತ್ತೆಯ ತತ್ವಕ್ಕೆ ವಿರೋಧವಾದ್ದು. ರಾಜಕೀಯ ಸಮಾನತೆಯನ್ನು ಅಲ್ಲಗಳೆದಂತಾಗುವದು. ಕೆಲವು ಚುನಾಯಿತ ಉದ್ದಿಮೆಗಳಲ್ಲಿ ಆಧಿಕಾರವನ್ನಿಟ್ಟಂತಾಗುವದು. ರೈಲ್ವೇ ಕೆಲಸದವರು ಉಸಾಧ್ಯಾಯರಿಗಿಂತ ಬಲವಂತರೆನ್ನಿಸುವರು ತೋಟಿಗರು ಗುಮಾಸ್ತರಿಗಿಂತ ಶಕ್ತಿಯಂತರೆನ್ನಿಸಿಕೊಳ್ಳುವರು. ಕೂಲಿಕಾರರು ಮಾಡಿದಂತೆ ಮ್ಹಾಲೀಕರಿಗೂ ಇದಿರು ಸಂಪು ಹೂಡುವ ಹಕ್ಕಿದೆ. ಸರಕಾರವು ಹದಗೆಟ್ಟು ನಡೆದರೆ ರಾಜಕೀಯ ಚಳವಳವನ್ನೇ ಹೊಡಬೇಕಲ್ಲದೆ ಆರ್ಥಿಕ ಬಿಕ್ಕಟ್ಟು ತರಬಾರದು. ರಾಜಕೀಯ ಚಳವಳದಲ್ಲಿ ಒಂದುಗೂಡಿಸುವದಾದರೆ ಬೇರಾವ ಶಕ್ತಿಯನ್ನೂ ಉಪಯೋಗಿಸಲು ಅಧಿಕಾರವಿಲ್ಲ. ಆದರೆ ಈ ಮಾತಿಗೂ ಒಂದು ಮಿತಿಯಿದೆ. ಇದನ್ನು ಸಂಪೂರ್ಣ ಬಹಿಷ್ಕರಿಸಿದರೆ ಜಮದಗ್ನಿಯ ಸಿಟ್ಟು ಬಿಟ್ಟಂತೆ ಶೇ. ೪೧. ಸರಕಾರಿಗಳು ಕಾಯಿದೆತೀರ ಚಳವಳಕ್ಕೆ ಕಿವಿಕೊಡುವದು ಕಡಮೆ. ಡೈರೆಕ್ಟ್ ಯಾಕ್ಷನ್ನಿಗೆ ಬಗ್ಗುತ್ತಾರೆಂದು ಚರಿತ್ರೆಯಲ್ಲಿ ಒಂದಿ ತಿಳಿದಿರುವೆವು. ಇಂಗ್ಲಾಂಡಿನಲ್ಲಿ 1832ರ ಸುಧಾರಣೆ. ಅಮೆರಿಕದವರು, ಆಯರ್‌ಲೇಂಡಿನವರು, ಇಂಡೋನೇಶಿಯಾ, ಈಜಿಪ್ಟ್ ಇವೆಲ್ಲಾ ದೃಷ್ಟಾಂತಗಳಾಗಿವೆ. ಕಾನೂನು ಮತ್ತು ಶಾಂತತೆ ನೆಮ್ಮದಿ ಇವುಗಳು ಸಮಾಜದ ವೃದ್ಧಿಗೆ ಅವಶ್ಯಕವಾದ ಸಂಗತಿಗಳು. ಕ್ರಾಂತಿಯೇಳುವಲ್ಲಿ ಇದು ಇರಲಾರದು. ನಿಯಮದಲ್ಲಿರುವ ನಿಜವಾದ ಆಧಿಕಾರವನ್ನು ಯಾವಾಗಲೂ ತುಚ್ಛೀಕರಿಸುವದು ಹೀಯಾಳಿಸುವದು ಸಮಾಜದ ಬುಡಕ್ಕೆ ಕೊಡಲಿ ಇಟ್ಟಂತೆಯೇ ಸರಿ. ಕೆಲವು ಸಮಯ ಕಾಯಿದೆಭಂಗ ಮಾಡುವದು ಮಾನವರ ನೈತಿಕ ಕರ್ತವ್ಯವಾಗಿರುವದು. ಸರಕಾರವು ಜನರ ಒಪ್ಪಿಗೆಯನ್ನು ತೊರೆದಿರುವದೆಂಬುದೇ ಸಮಾಜದ ಕರಾರು. ಜನರ ಸೂಜನೆಯನ್ನಾ ಅಲ್ಲಗಳೆದರೆ ಅವರ ಆಕ್ಷೇಪಗಳನ್ನು ಲೆಕ್ಕಿಸದಿದ್ದರೆ ಮತ್ತು ಸರಕಾರದವರು ಅಧಿಕಾರ ದುರುಪಯೋಗ ಮಾಡಿದರೆ ಅವರೇ ಈ ಕರಾರನ್ನು ವಿಂದಂತಾಗುವದು. ಜನರ ಸಹನಶಕ್ತಿಗೆ ಸಹ ಮಿತಿ ಇದೆ. ಸಾಮಾಜಿಕ ಪ್ರಯೋಜನದ ದೃಷ್ಟಿಯಿಂದ ರಾಜಕೀಯದಲ್ಲಿ ಬಲ ಪ್ರಯೋಗಮಾಡಬಾರದು. ತಮ್ಮ ಗೌರವವನ್ನು ರಕ್ಷಿಸುವ ಖಾಸ್ಗಾಗಿ ತನಗಿರುವ ಹಕ್ಕನ್ನು ಮರೆತುಬಿಡಬಾರದು. ಚರಿತ್ರೆಯಲ್ಲಿ ಹಲವು ನ್ಯಾಯಯುಕ್ತವಾದ ಕ್ರಾಂತಿಗಳನ್ನು ತಿಳಿದಿರುವೆವು ಅದೂ ಕ್ರಾಂತಿಯು ಸಿಡಿಮದ್ದಿನ ಹಾಗೆ ಅಪಾಯಕರವಾದ ಯುಕ್ತಿ. ಅಜಾಗರೂಕರಾದರೆ ಉಪಯೋಗಿಸಿದವರ ಮೇಲೂ ಪರಿಣಾಮವನ್ನುಂಟುಮಾಡಬಲ್ಲುದು. ನವ್ಯ ಇಂಡಿಯಾ ದೇಶಕ್ಕೆ ಒಂದು ಹೊಸ ಮಾದರಿಯ ಸಂಪನ್ನು ತಂದಿರುವದು.

[ಮುಂದುವರಿಯುವದು]

ಸಿ. ಎಚ್. ಶೆಟ್ಟಿ. ಬಿ. ಎ.

"ನಿಮ್ಮ ಕಂಪನಿಯಲ್ಲಿ ವಿಮಾ ಪತ್ರದಾರರ ಹಿತಗಳಿಗೆ ಭದ್ರತೆ ತುಂಬಾ ಇರುವುದಲ್ಲದೆ ಅವರಿಗೆ ಹೆಚ್ಚಿನ ಪ್ರಮಾಣದಲ್ಲಿ ಲಾಭವೂ ಸಿಗುವುದು."

—ಶ್ರೀ ಕೆ. ಎ. ಪಂಡಿತ್, B. sc, F. I. A
(ಸಲಹೆಗಾರ ವಿಮಾಗಣಕರು)

"ಕೆನರಾ ಮ್ಯೂಚುವಲ್" ಕಂಪೆನಿಯ ಎಲ್ಲ ವ್ಯವಹಾರಗಳು ಹೀಗೆ ಚೆಲೋವಾಗಿ ನಡೆಸಲ್ಪಡುವುದರಿಂದ ಈ ಕಂಪೆನಿಯು ಜನರ ವಿಶ್ವಾಸಾದರಗಳಿಗೆ ಪಾತ್ರವಾಗಿದೆ. ಕಂಪೆನಿಯ ಚತುರ್ಥ ವಿಮಾಗಣನೆ (Valuation)ಯಂತೆ, ಆಜೀವ (Whole Life) ಮತ್ತು ಉಂಬಳಿ (Endowment) ವಿಮೆಗಳಿಗೆ ಕ್ರಮವಾಗಿ ಸಾಲಿಯಾನ ಸಾವಿರಕ್ಕೆ ರೂ. 12 ಮತ್ತು ರೂ. 9ರಂತೆ ಬೋನಸನ್ನು ಹಂಚಲಾಗುವುದು. ಇದೇ ದರದಲ್ಲಿ ನಡುಗಾಲದ (Interim) ಬೋನಸನ್ನು ಸಹ ಇಡಲಾಗಿದೆ.

— ದಿ ಕೆನರಾ ಮ್ಯೂಚುವಲ್ —
ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,
ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.

ರಾಮತೀರ್ಥ ಬ್ರಾಹ್ಮಿ ತೈಲ

ಸ್ಪೆಶಲ್ ನಂ. ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತವೆ ಪುಕ್ಕು ನೆತ್ತಿಯಲ್ಲಿ ಕೂದಲು ಬರುತ್ತವೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿನ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಜಿ. ಐ. ಪಿ.) ಮುಂಬಯಿ, ೧೪

WANTED

Agents for the sale of our new design fountain pens on Rs. 300/-To Rs. 400/- P.M. sallary or commisiion basis. For samples and free terms apply:

LAWRANCE BROTHERS (N. W. U.)
Nagdevi BOMBAY 3.

ಬಂದರದ ಕುರಿತು ಅಯ್ಯಂಗಾರರ ಕನಸು

ಕಾಂಡ್ಲಾ ಬಂದರದಶಂಕುಸ್ಥಾಪನೆಯು ಜನವರಿ ತಾ. 10ರಂದು ಭಾರತದ ಮುಖ್ಯ ಮಂತ್ರಿ ಜವಾಹರಲಾಲರಿಂದ ನೆರವೇರಿಸಲ್ಪಟ್ಟಿತು. ಭಾರತ ವಿಭಜನೆಯಿಂದಾಗಿ ಮುಖ್ಯ ಬಂದರಗಳು ಪಾಕಿಸ್ತಾನಕ್ಕೆ ಸೇರಿದವು. ಇದರಿಂದ ವ್ಯಾಪಾರ ವಹಿವಾಟುಗಳಿಂದ ವಿಶೇಷ ಧಕ್ಕೆಯುಂಟಾಗಿದ್ದು ಪೂರ್ವ ಮತ್ತು ಪಶ್ಚಿಮ ಕರಾವಳಿಯಲ್ಲಿ ನೂತನ ಬಂದರಿಗೆ ಅವಶ್ಯಕತೆಯು ಕಂಡುಬಂದಿತು. ಕಾಂಡ್ಲಾ, 13 ಕೋಟಿ ರೂಪಾಯಿಗಳ ವೆಚ್ಚದಿಂದ ಹಿಂದೂಸ್ಥಾನದ ಬಹುದೊಡ್ಡ ಬಂದರವಾಗಿ ರೂಪುಗೊಳ್ಳಲಿದೆ. ಸ್ವಾತಂತ್ರ್ಯಪ್ರಾಪ್ತವಾದ ನಂತರ ದೇಶದ ವ್ಯಾಪಾರ ವ್ಯವಹಾರಗಳ ಅಭಿವೃದ್ಧಿಯ ಮೊದಲ ಹೆಜ್ಜೆಯಾಗಿ ಕಾಂಡ್ಲಾ ಬಂದರವು ನಿರ್ಮಾಣಗೊಳ್ಳುತ್ತಿರುವುದು ಅಭಿಮಾನದ ಸಂಗತಿಯೆಂದು ಶ್ರೀ ಜವಾಹರಲಾಲರು ನುಡಿದಿರುವರು. ಈ ಸಂದರ್ಭದಲ್ಲಿ ಸಾರಿಗೆ ಮಂತ್ರಿಗಳಾದ ಶ್ರೀ ಎನ್. ಗೋಪಾಲ ಸ್ವಾಮಿ ಅಯ್ಯಂಗಾರರು ಪಶ್ಚಿಮ ಕರಾವಳಿಯಲ್ಲಿ ಇನ್ನೊಂದು ಬಂದರದ ರಚನೆಯ ಕುರಿತು ಮಾತನಾಡುತ್ತಾ "ಭಾರತದ ಇತರ ಬಂದರಗಳು ಸದ್ಯವಿದೇಶೀಯರ ಕೈಯೊಳಗಿದ್ದು ಕಾಲಾನುಗತಿಕವಾಗಿ ಭಾರತಕ್ಕೆ ತಿರುಗಿ ಬರುವದೆನ್ನುವ ದರಲ್ಲಿ ಸಂದೇಹವೇ ಬೇಡ" ಎಂದಿರುವರು. ಇದು ಕರ್ನಾಟಕದಲ್ಲಿ ಇನ್ನೊಂದು ಬಂದರ ನಿರ್ಮಾಣಗೊಳ್ಳಬೇಕಾದ ಮುಖ್ಯ ಅಂಶಕ್ಕೆ ಪುಷ್ಟಿಕರವಾಗಿದೆ. ಮಲ್ಪೆ, ಮಂಗಳೂರು, ಭಟ್ಕಳಗಳಲ್ಲಿ ಯಾವುದು ಪ್ರಾಕೃತಿಕ ಹಾಗೂ ತಾಂತ್ರಿಕ ಸಾಧ್ಯರ್ಯಗಳಿಂದ ಯೋಗ್ಯ ಸ್ಥಳವಾಗಿದೆಯೆಂದು ನಿರ್ಣಯಿಸುವದಕ್ಕೆ ಸರಕಾರವು ತಾಂತ್ರಿಕ ತಜ್ಞರನ್ನು ನೇಮಿಸಿ ಲಕ್ಷಾಪಸಲಕ್ಷ ರೂಪಾಯಿ ವ್ಯಯ ಮಾಡಿತು. ಸಮಿತಿಯ ಅಭಿಪ್ರಾಯಗಳು ಮಲ್ಪೆಯ ಪ್ರಾಶಸ್ತ್ಯವನ್ನು ಎತ್ತಿಹಿಡಿದಿವೆಯೆಂದೂ ತಿಳಿದುಬಂದಿದೆ ಆರ್ಥಿಕ ದುಃಸ್ಥಿತಿಯಿಂದ ಸದ್ಯಕ್ಕೆ ಯೋಜನೆಯನ್ನು ಮುಂದೂಡಲಾಗಿದೆಯೆಂದು ಇನ್ನೊಂದು ಕಾರಣವನ್ನು ಕೊಡಲಾಗಿದೆ. ಆರ್ಥಿಕ ತೊಂದರೆಯೇ ಇದಕ್ಕೆ ಅಡ್ಡಿಯಾಗಬಹುದಾದರೆ ಸಮಿತಿಯ ನಿರ್ದಿಷ್ಟ ಅಭಿಪ್ರಾಯವೇನೆಂಬುದನ್ನು ಸ್ಪಷ್ಟೀಕರಿಸುವದರಿಂದ ಯಾವ ಬಾಧೆಕವೂ ಇಲ್ಲ. ತಿರುಗೊಮ್ಮೆ ಪರೀಕ್ಷಿಸಿ ವರದಿಯನ್ನು ತಯಾರಿಸಲಾಗುವದೆಂದೂ ಸುದ್ದಿಯಿದೆ. ಅಂತೂ ಇವೆಲ್ಲ ಕಾಲ ಹಾಕಿದೂ ದುಡ್ಡು ಕರಗುವದಕ್ಕೆ ಹಾದಿಯಾದೀತೇ ವಿನಹ ಬೇರೇನೂ ಆಗುವಂತಿಲ್ಲವೆಂಬುದು ಶ್ರೀ ಅಯ್ಯಂಗಾರ್ಯರ ಮಾತಿನಿಂದ ಖಚಿತವಾಗುತ್ತದೆ. ಗೋವೆಯ ಬಂದರವೇ ಒಂದಲ್ಲ ಒಂದು ಕಾಲಕ್ಕೆ ನಮ್ಮ ಸ್ವಾಧೀನಕ್ಕೆ ಬರುವದರಿಂದ ಶಿಮೊಗ ಕರಾವಳಿಯ ಅವಶ್ಯಕತೆ ಅಷ್ಟಾಗಿ ಕಂಡುಬರುವುದಿಲ್ಲವೆನುವಂತೆ ಅವರು ಹೇಳಿರುವರು. ಇದರಿಂದ ಕರ್ನಾಟಕಕ್ಕಾದ ನಮಗೆ ವಿಷಾದವಾಗಿದೆ. ಪರಕೀಯರ ಆಧೀನದಲ್ಲಿರುವ ಬಂದರವನ್ನು ಸ್ವಾಧೀನಪಡಿಸಿಕೊಳ್ಳುವ ಇರಾಧೆಯ ಭವಿಷ್ಯದ ಕಾರಿತ ಕನಸು ಕಾಣುವದು ಅತಿ ವಿಸ್ಮಯಕರವಾಗಿದೆ. ಸ್ವಲ್ಪ ಮಟ್ಟಿಗೆ ಇದು ಅಸಂಭಾವ್ಯನೆಂದೂ ತೋರುವದು. ಏನೇ ಇರಲಿ ಕಾಂಡ್ಲಾ ರೂಪುಗೊಂಡು ದೇಶದ ಪ್ರಬುದ್ಧ ಬಂದರವಾಗಿ ಮೆರೆಯಲಿರುವದು ಅಭಿಮಾನದ ಸಂಗತಿ. ಶ್ರೀ ಅಯ್ಯಂಗಾರ್ಯರ ಕನಸು ನೆನಸಾಗದೆ ಹೋದರೆ ಇನ್ನೊಂದು ಪ್ರಬುದ್ಧ ಬಂದರ ಕರ್ನಾಟಕದಲ್ಲಿ ನಿರ್ಮಾಣಗೊಂಡೀತೇನೋ ಎಂದು ನಾವು ಅಭಿಮಾನ ಪಡುವ ವರಿದ್ದೇವೆ. ಕೊನೆಗಾದರೂ ಹಾಗಾದೀತೆಂದು ನಿರೀಕ್ಷಿಸೋಣ.

ತಿರುವಾಂಕೂರು ಕೊಚ್ಚಿನದಲ್ಲಿ ಯಾರಿಗೆ ಪಟ್ಟ?

ಹಿಮಾಚಲ ಪ್ರದೇಶ ಮತ್ತು ತಿರುವಾಂಕೂರು ಕೊಚ್ಚಿನಗಳಲ್ಲಿ ಚುನಾವಣೆಯು ಘೋಷಿಸಿಕೊಂಡಿದ್ದು ರಾಜಕೀಯ ಪಕ್ಷಗಳ ಬಲಾಬಲಗಳ ಮೇಲೆ ಸರಕಾರವನ್ನು ಸ್ಥಾಪಿಸುವ ಕಾಲ ಸನ್ನಿಹಿತವಾಗಿದೆ. ಹಿಮಾಚಲ ಪ್ರದೇಶದಲ್ಲಿ ಕಾಂಗ್ರೆಸ್ಸು ಪ್ರಬಲ ಪಕ್ಷವಾಗಿದ್ದು ಕಾಂಗ್ರೆಸ್ ಮಂತ್ರಿಮಂಡಳ ನಿರ್ಮಾಣಗೊಳ್ಳುವದು. ತಿರುವಾಂಕೂರು ಕೊಚ್ಚಿನಗಳಲ್ಲಿಯ 158ಸ್ಥಾನಗಳಲ್ಲಿ ಕಾಂಗ್ರೆಸ್ಸು ಗಳಿಸಿರುವ 44 ಸ್ಥಾನಗಳಿಂದ ಕಾಂಗ್ರೆಸ್ ಸರಕಾರವನ್ನೆಲ್ಲಿ ಸ್ಥಾಪಿಸುವದು ಶಕ್ಯವಿಲ್ಲ. ಎರಡನೆಯದಾಗಿ ಯುನೈಟೆಡ್ ಫ್ರಂಟಿಗೆ ಹಾಗೂ ಕಮ್ಯೂನಿಸ್ಟರಿಗೆ 32 ಸ್ಥಾನಗಳು ದೊರಕಿವೆ. ಹೆಚ್ಚು ಅಶೋತ್ತರಗಳನ್ನು ಕಲ್ಪಿಸಿಕೊಂಡಿದ್ದ ಸಮಾಜವಾದಿಗಳಿಗೆ 12 ಸ್ಥಾನಗಳಿಗಿಂತ ಹೆಚ್ಚಿನ ಸ್ಥಾನ ದೊರಕಿದೆ ಇದ್ದ ಕಾರಣ ಅವರಿಂದೇನೂ ಸಾಧಿಸಲು ಬರುವಂತಿಲ್ಲ. ಸ್ವತಂತ್ರರು 11 ಸ್ಥಾನವನ್ನು ಗಳಿಸಿರುವರು ಆದರೆ ಅರಸುಬಂದಿರುವವರಲ್ಲಿ ಕಮ್ಯೂನಿಸ್ಟರು ಹೆಚ್ಚು ಪ್ರಭಾವವನ್ನು ಬೀರುತ್ತಲಿದ್ದಾರೆ. ಸಾಮಾನ್ಯ ಜನತೆಯ ಒಲವು ಅವರ ಕಡೆಗೆ ಇದ್ದಂತೆ ತೋರುವದು. ಸ್ವತಂತ್ರರು ಕಮ್ಯೂನಿಸ್ಟರೊಡನೆ ಐಕ್ಯಗೊಳ್ಳುವ ಇರಾಧೆಯುಳ್ಳವರಾಗಬಹುದು. ಧ್ಯೇಯವಾದಿಗಳೆಂದು ಜಂಭ ಕೊಚ್ಚಿಕೊಳ್ಳುತ್ತಿರುವ ಸಮಾಜವಾದಿಗಳು ಕಮ್ಯೂನಿಸ್ಟರೊಡನೆ ಸೇರಿಕೊಳ್ಳಲು ನಿರಾಕರಿಸುತ್ತಲಿದ್ದಾರೆ. ಒಂದು ವೇಳೆ ಸಮಾಜವಾದಿಗಳು ಕಮ್ಯೂನಿಸ್ಟರೊಡನೆ ಸೇರಿಕೊಂಡರೆ ಕಮ್ಯೂನಿಸ್ಟರು ತಮ್ಮ ಪಕ್ಷದ ಸರಕಾರ ಸ್ಥಾಪಿಸಬಹುದೋ ಏನೋ! ಒಣಾದರ್ಶಗಳ ಬೆನ್ನು ಹಿಡಿದ ಇವರಿಗೆ ಇದು ಇಷ್ಟವಾಗಲಾರದು. ಅಂತೂ ತಿರುವಾಂಕೂರ ಕೊಚ್ಚಿನ ಆಡಳಿತ ಯಾರಿಗೆ ಸೇರಬಹುದು? ಎನ್ನುವ ವಿಚಾರ ಕುತೂಹಲಕಾರಿಯಾಗಿದ್ದು! ಸ್ವತಂತ್ರರೂ ಇತರ ಸಣ್ಣಪುಟ್ಟ ಪಾರ್ಟಿಗಳು ಕಮ್ಯೂನಿಸ್ಟರಿಗೆ ಪ್ರೋತ್ಸಾಹವನ್ನಿತ್ತು ಅವರೇ ಅಧಿಕಾರವನ್ನು ವಹಿಸಿಕೊಳ್ಳುವದು ಹೆಚ್ಚು ಸಂಭವನೀಯವೆಂದು ತೋರುತ್ತದೆ. ಇದಾಗದೆ ಹೋದರೆ ಇನ್ನಾರು ತಿಂಗಳೊಳಗಾಗಿ ಮರಚುನಾವಣೆಯ ಸಿದ್ಧಿ ಕೇಳುವಂತಾದರೆ ಆಶ್ಚರ್ಯಪಡುವಂತಿಲ್ಲ! ಸದ್ಯದ ಬಿಸಿ ವಾತಾವರಣವನ್ನು ಲಕ್ಷಿಸಿದರೆ ಉಳಿದ ಪಕ್ಷಗಳು ಅಧಿಕಾರಕ್ಕೆ ಬರುವದು ಅಸಂಭವನೆಂದು ತೋರುತ್ತದೆ.

ಸಮಾಜವಾದಿಗಳ ಆತ್ಮಸಮರ್ಥನೆ

ಕಾಂಗ್ರೆಸ್ಸಿನ ನಂತರ ಸಂಘಟಿತ ರಾಜಕೀಯ ಪಕ್ಷವೆಂದು ಹೆಸರಾದ ಸಮಾಜವಾದೀ ಪಕ್ಷದ ಪ್ರಚಂಡ ಪರಾಭವದ ಸುದ್ದಿಯು ಅತ್ಯಂತ ವಿಸ್ಮಯಕರವಾಗಿದೆ. ಮುಂಬಯಿ ರಾಜ್ಯದಲ್ಲಿ ಸಮಾಜವಾದಿಗಳು ಅರಸಿಬಂದು ಅವರೇ ಸ್ವಪರಕಾರ ಸ್ಥಾಪಿಸಬಹುದೆಂಬ ನಿರೀಕ್ಷೆಯು ಇಂದು ಬುಡ ಮೇಲಾಯಿತು. ಶ್ರೀ ಅಶೋಕ ಮೇಧಾ, ಜೇಪೀ, ಕೃಪಲಾನಿ, ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯ ಮೊದಲಾದ ಮಹಾಮಹರು ಕಾಂಗ್ರೆಸ್ಸಿನಿಂದಿರು ನಿಂತು ಪರಾಭವಗೊಂಡದ್ದು ಹೆಸರವಿಗೆ ಸಜೀವಾತ್ಕರ್ಷವನ್ನುಂಟುಮಾಡಿರಬಹುದು. ತಮ್ಮ ಪರಾಭವಕ್ಕೆ ಶ್ರೀ ನೆಹ್ರೂರವರ ಸಂಚಾರ ಹಾಗೂ ಪ್ರಚಾರವು ಕಂಠರವ್ಯಾಯವಾಯಿತೆಂದೂ, "ನಾನೂ ಒಬ್ಬ ಸಮಾಜವಾದಿಯೆಂದು ಅವರು ಹೇಳಿ ಜಳಕೆಯನ್ನು ವಂಚಿಸಿದ್ದು, ಇದುವೆ ನಮ್ಮ ಪರಾಭವಕ್ಕೆ ಹೇತುವಾಗಿದೆಂದೂ ಸಮಾಜವಾದೀ ಧುರೀಣರು ಆತ್ಮಸಮರ್ಥನೆ ಮಾಡಿಕೊಳ್ಳುವದು ವಿಚಿತ್ರದ ಸಂಗತಿಯಾಗಿದೆ. ಸರಕಾರಕ್ಕೆ ಮುಖ್ಯರನೇ ಮೊದಲಾದ ನಾನಾ ಬಗೆಯ ಕೀಟಲೆಯನ್ನೀಯುವುದರ ಮೂಲಕ ಸಮಾಜವಾದಿಗಳು ಕೆಲಸಗಾರರ ಒಲವನ್ನು ಗಳಿಸಿಕೊಳ್ಳಲೆತ್ನ ಮಾಡಿದ ವಂಚನೆಗಿಂತ ಇದು ಮಹತ್ತಾಗಲಿಕ್ಕಿಲ್ಲ! ಆದರ್ಶದ ಹೆಸರನ್ನು ಹೇಳುತ್ತಾ ಏನನ್ನೂ ಸಾಧಿಸಲಾಗದ ಅವರ ಆ ಸಡಿಲಾಯಕ ಸ್ಥಿತಿಯೇ ಜನತೆಗೂ ಚೆನ್ನಾಮನವರಿಕೆಯಾಗಿದೆ. ಅಂತಲೇ ಕೆಲಸಗಾರರೇ ಪ್ರಧಾನರಾಗುಳ್ಳ ಮುಂಬಯಿಯಂತಹ ರಾಷ್ಟ್ರಗಳಲ್ಲಿ ಸಮಾಜವಾದಿಗಳಿಗೆ ಗೆಲುವಾಗಲಿಲ್ಲ. ಆದಕ್ಕೆ ನೆಹ್ರೂರವರು ಕಾರಣವೆಂದು ಹೇಳುವದು ಕೇವಲ ಹುಚ್ಚುತನ! ತಿರುವಾಂಕೂರು ಕೊಚ್ಚಿನಗಳನ್ನೂ ನೆಹ್ರೂರವರು ಸಂದರ್ಶಿಸಿ ಜನತೆಯಿಂದ ಅಭೂತಪೂರ್ವ ಸ್ವಾಗತವನ್ನು ಗಳಿಸಿಕೊಂಡಿರುವರು. ಆದರೆ ಅಲ್ಲೇನೂ ಕಾಂಗ್ರೆಸ್ಸೇ ಬರಲಿಲ್ಲ. ಅಥವಾ ಕಮ್ಯೂನಿಸ್ಟರು ಪರಾಭವಗೊಳ್ಳಲಿಲ್ಲ. ಜೇಪೀಯವರ ಅದೇಶದಿಂದ ಬದಲಾಗುವಷ್ಟು ಮಟ್ಟಿಗೆ ದೌರ್ಬಲ್ಯ ಸಮಾಜವಾದಿಗಳಲ್ಲಿದ್ದರೆ ಆ ತಪ್ಪಿಗೆ ಸಮಾಜವಾದಿಗಳೇ ಕಾರಣರಾದೀತೇ ವಿನಹ ನೆಹ್ರೂರವರಲ್ಲ! ಆದರ್ಶವಾದದ ಬೆನ್ನು ಹಿಡಿದಿರುವ ಸಮಾಜವಾದಿಗಳ ನಾಲ್ಕು ವರ್ಷದ ರಾಜಕೀಯ ಚಟುವಟಿಕೆಗಳೂ ಕಾರ್ಯಕ್ರಮವೂ ಜನತೆಯ ಒಲವನ್ನು ಗಳಿಸಿಕೊಳ್ಳಲು ಸಮರ್ಥವಾಗದೆ ಹೋಗಿದ್ದರೆ ಅವರು ಅನುಸರಿಸುತ್ತಿರುವ ಪದ್ಧತಿಯು ಲೋಪದೋಷಗಳಿಂದ ಕೂಡಿದ್ದೇ ಆಗಿದೆ. ಹೊರತು ಶ್ರೀ ನೆಹ್ರೂರವರ ಸಂಚಾರ ಪ್ರಚಾರ ಲಕ್ಷಣೇ ಲಕ್ಷ!

Happy New-Year Greetings

We are glad to announce that 12,000 shares of our Bank of the total value of Rs 3 lacs recently floated have been over-subscribed We are grateful to the public for the increased confidence they have reposed in us We assure that we will do our utmost to deserve this well-placed confidence

THE VIJAYA BANK LTD.

ESTD- 1931- H O- MANGALORE-

B M. Shetty, B. A. B L Secretary-

P J Shetty, M. A B L. C A I I B., Superintendent.

B Manjaya Hegde, Advocate.
[President, District Board S. K.]
Chairman of the Board of Directors



BALLBEARING
—THE LIFEBLOOD OF THE INDUSTRY!

Dealers in:
ROTARY OIL MILLS
FLOUR MILLS
BALL, ROLLER & THRUST BEARINGS

TELEGRAMS —'CHEAPTRADE'

A. RAMSON AND CO.

ಲೋಕಾಂತ

ಕಾಶ್ಮೀರ ಪ್ರಶ್ನೆ

ಕಾಶ್ಮೀರ ಪ್ರಶ್ನೆಪ್ರಯ 17ನೇ ಗುರುವಾರಕ್ಕೆ ಭದ್ರತಾ ಮಂಡಳಿಯಲ್ಲಿರುವ ಚರ್ಚೆಗೆ ಬರಲಿದೆ. ಡಾ| ಗ್ರಾಹ್ಯಾಮ್‌ರವರ ವರದಿಯನ್ನು ಕೇಳಿಕೊಳ್ಳಲಿದ್ದು ಕಾಶ್ಮೀರದಲ್ಲಿ ಸೈನ್ಯೀಕರಣ ಸಾಧಿಸಲು ಗ್ರಾಹ್ಯಾಮ್‌ರವರು ಪ್ರಯತ್ನಗಳನ್ನು ಆವರು ಸಭೆಯ ಮುಂದಿಡುವರೆ.- ಬಳಿಕ ಭಾರತ ಪಾಕಿಸ್ತಾನದ ಪ್ರತಿನಿಧಿಗಳನ್ನು ತಮ್ಮ ತಮ್ಮ ನಿಲುಮೆಯನ್ನು ಸ್ಪಷ್ಟೀಕರಿಸುವಂತೆ ಸಂ. ರಾ. ಸಂಘವು ಕೇಳಿಕೊಳ್ಳಬಹುದು

ನಿಶಸ್ತ್ರೀಕರಣ ಗೊತ್ತುವಳಿ

ಕ್ರಮೇಣ ನಿಶಸ್ತ್ರೀಕರಣ ನಡೆಯಬೇಕೆಂಬಗೊತ್ತುವಳಿಯೊಂದು ಪಾಶ್ಚಾತ್ಯರಾಷ್ಟ್ರಗಳಿಂದಸಂ ರಾ.ಸಂಘದೆದುರುವ ಂಡಿಸಲ್ಪಟ್ಟು ಅದರಲ್ಲಿ 30 ದಿನಗಳೊಳಗೆ ನಿಃಶಸ್ತ್ರೀಕರಣ ಸಮಿತಿಯನ್ನು ನೇಮಿಸಬೇಕೆಂದು ಹೇಳಿದೆ. ನಾಲ್ಕು ದೊಡ್ಡ ರಾಷ್ಟ್ರಗಳಲ್ಲಿ ಒಮ್ಮತವಿಲ್ಲದೆ ಇರುವದರಿಂದ ಭಾರತವು ಈ ಗೊತ್ತುವಳಿಯ ಬಗ್ಗೆ ತಟಸ್ಥ ಉಳಿಯುವದೆಂದೂ ಭಾರತದ ಪ್ರತಿನಿಧಿ ಹೇಳಿದನು ಅಂತೆಯೆ ಇನ್ನೂ ಅರು ರಾಷ್ಟ್ರಗಳೂ ತಟಸ್ಥ ಉಳಿದವು. ಗೊತ್ತುವಳಿ ಸ್ವೀಕೃತವಾಯಿತು.

ಪರ್ಶಿಯದ ದಿಟ್ಟತನ

ಪರ್ಶಿಯದಲ್ಲಿರುವ ಎಲ್ಲ ಬ್ರಿಟಿಷ್ ಪ್ರತಿನಿಧಿಗಳನ್ನು ಬ್ರಿಟನ್ನು ಮುಂಬೈಬೇಕೆಂದು ಪರ್ಶಿಯ ಬ್ರಿಟಿಷ ಸರಕಾರಕ್ಕೆ ತಿಳಿಸಿದೆ. ಈ ಬೇಡಿಕೆಯನ್ನು ಹಿಂತೆಗೆದುಕೊಳ್ಳಬೇಕೆಂದು ಪರ್ಶಿಯದಲ್ಲಿಯ ಬ್ರಿಟಿಷ ರಾಯಭಾರಿ ಶರರ್ಡರು ಕೇಳಿಕೊಂಡರೂ ಡಾ| ಮುಸದ್ದಿಕರು "ನಾನು ಮುಖ್ಯ ಮಂತ್ರಿಯಾಗಿರುವ ವರೆಗೆ ಈ ಬೇಡಿಕೆಯನ್ನು ಹಿಂತೆಗೆದುಕೊಳ್ಳುವದಿಲ್ಲ ಇದು ಪರ್ಶಿಯಾ ಮಂತ್ರಿ ಮಂಡಳದ ನಿರ್ಣಯವಾಗಿದೆ. ನಾನದನ್ನು ಬದಲಿಸಲು ಸಿದ್ಧನಿಲ್ಲ" ಎಂದಿರುವರು.

ಸುಯೇಜ್‌ದಲ್ಲಿ ಪುನಃ ಚಳವಳಿ

ಸುಯೇಜ ಕಾಲುವೆ ಪ್ರದೇಶದ ಬ್ರಿಟಿಷ ಸೈನ್ಯ ಪಡೆಯ ಅತಿ ದೊಡ್ಡ ಆರ್ಡಿನೆನ್ಸ ಡಿಪೋವಿನ ಸಮೀಪದಲ್ಲಿ ಬ್ರಿಟಿಶರ ಗಸ್ತು ಪಡೆಯ ವಾಹನಕ್ಕೆ ಸುರಂಗ ತಾಗಿದ್ದರ ನೆವದ ಮೇಲೆ ಈಜಿಪ್ತ ಭಯೋತ್ಪಾದಕರು ಹಾಗೂ ಬ್ರಿಟಿಶ ಸೈನಿಕರಲ್ಲಿ ಸಂಜೆಯ ವರೆಗೆ ಭೀಕರ ಕಾಳಗ ನಡೆಯಿತೆಂದು ತಿಳಿಯುತ್ತದೆ.

ದ ಆಫ್ರಿಕೆಯಲ್ಲಿಯ ಭಾರತೀಯರ ವಿಚಾರಣೆಗೆ ಸಮಿತಿಯ ನೇಮಕ

ಭಾರತೀಯರನ್ನು ದ. ಆಫ್ರಿಕೆಯು ವರ್ಣದ್ವೇಷ ಕಾಯಿದೆ ಮೂಲಕ ಹಿಂಸಿಸುತ್ತಿರುವದೆಂದುಭಾರತ-ಪಾಕಿಸ್ತಾನಗಳ ಮಾಡಿಕೊಂಡಿರುವ ಒಪ್ಪಂದವನ್ನು ಸಂ ರಾ.ಸಂಘವು ಕೇಳಿಕೊಂಡು ಈ ಸಮಸ್ಯೆಯನ್ನು ಬಗೆಹರಿಸುವದಕ್ಕೂ ಭಿನ್ನಾಭಿಪ್ರಾಯಗಳನ್ನು ಹೋಗಲಾಡಿಸುವದಕ್ಕೂ ಮೂವರು ಸದಸ್ಯರುಳ್ಳ ಒಂದು ಸಮಿತಿಯನ್ನು ನೇಮಿಸಿ ಸಮಿತಿಗೆ ದ. ಆಫ್ರಿಕೆಯಲ್ಲಿಯ ಭಾರತೀಯರನ್ನು ನಡೆಸಿಕೊಳ್ಳುವ ಪ್ರಶ್ನೆಯನ್ನು ಒಪ್ಪಿಸಬೇಕೆನುವ ಗೊತ್ತುವಳಿಯೊಂದನ್ನು ಸ್ವೀಕರಿಸಿತ.

ಟ್ರೂಮನ್ ಚರ್ಚಿಲ್ ಮಾತ ಕತೆಯ ಪ್ರತಿಕ್ರಿಯೆ

ಅಧ್ಯಕ್ಷ ಟ್ರುಮನ್ನರ ಹಾಗೂ ಬ್ರಿಟನ್ನಿನ ಪ್ರಮುಖ ಮಂತ್ರಿ ಚರ್ಚಿಲ್‌ರವರ ನಡುವಿನ ಮಾತುಕತೆಗಳ ಫಲವಾಗಿಯೇ ಎಂಬಂತೆ ಕಳೆದ ಮೂರು ತಿಂಗಳಿಂದ ಬೆಳೆದ ತ್ವೇಷವನ್ನು ತೊಡೆದು ಹಾಕಲು ಬ್ರಿಟಿಷ ಸರಕಾರ ಇಚಿಷ್ಟಕ್ಕೆ ಹೊಸ ಸಂಚನೆಗಳನ್ನು ಒಂದು ವಾರದೊಳಗಾಗಿ ಮಾಡಲಿರುವೆಯೆಂದು ತಿಳಿಯುತ್ತದೆ ಬ್ರಿಟಿಶ ಸರಕಾರವು ಮಾಡುವ ಸೂಚನೆಗಳಿಗೆ ಅಮೆರಿಕದ ಬೆಂಬಲದ ಭರವಸೆಯುದೆಯಂತೆ.

ವಿರೋಧಿ ಪಕ್ಷಗಳ ಧೋರಣೆ

ಶ್ರೀ ಜವಾಹರ ಲಾಲ ನೆಹ್ರೂರವರು ಆಜಮೀರದಲ್ಲಿ ವಿರೋಧಿ ಪಕ್ಷಗಳ ಕುರಿತು ಮಾತನಾಡುತ್ತಾ "ಕಾಂಗ್ರೆಸು ದೇಶದ ಬಲ್ಲಿಯ ಏಕಮೇವ ರಾಜಕೀಯ ಸಂಸ್ಥೆಯಾಗಿರಬೇಕೆಂದು ನಾನು ಹೇಳುವುದಿಲ್ಲ. ಪ್ರಜಾಪ್ರಭುತ್ವದಲ್ಲಿ ವಿರೋಧಿ ಪಕ್ಷವಿರುವದು ಒಳ್ಳೇ ಲಕ್ಷಣ. ಆದರೆ ವಿರೋಧಿ ಪಕ್ಷವು ಅರ್ಥಿಕ ತತ್ವಗಳ ತಳಹದಿಯ ಮೇಲೆ ಕಟ್ಟಲ್ಪಡಬೇಕು. ಜಾತೀಯ ಭಾವನೆಯ ತಳಹದಿಯ ಮೇಲೆ ವಿರೋಧಿ ಪಕ್ಷವನ್ನು ಕಟ್ಟುವದು ಸರಿಯಾಗದು" ಎಂದು ಹೇಳಿದರು.

ಮದ್ರಾಸದಲ್ಲಿ ಶ್ರೀ ಬಿ. ಎನ್ ರಾಯರು.

ಜಾಗತಿಕ ನ್ಯಾಯಾಲಯದ ಜಡ್ಜರಲ್ಲೊಬ್ಬರಾದ ಶ್ರೀ ಬೆನಗಲ್ ನರಸಿಂಗರಾಯರು ಮದ್ರಾಸದಲ್ಲಿ ಪತ್ರಿಕಾಕರ್ತರ ಸಭೆಯಲ್ಲಿ "ಮೂರನೇ ಮಹಾಯುದ್ಧವು ಅನಿವಾರ್ಯವೆಂದು ನನಗೆ ಅನಿಸುವದಿಲ್ಲ ಜಗತ್ತಿನ ಬೇರೆ ಬೇರೆ ಧೋರಣೆಗಳೊಡನೆ ಮಾತನಾಡಿದಾಗ ಅವರಿಗೆ ಯುದ್ಧ ಬೇಕಾಗಿರುವದು ಕಂಡುಬರಲಿಲ್ಲ"ವೆಂದು ಹೇಳಿದರು. ಕಾಶ್ಮೀರ ವಿಚಾರದಲ್ಲಿ ಪ್ರಶ್ನಿಸಲಾಗಿ ಅದು ಸದ್ಯದಲ್ಲೇ ಭದ್ರತಾ ಸಮಿತಿಯ ಮುಂದೆ ಒಂದು ನಿರ್ಧಾರಕ್ಕೆ ಬರಲಿರುವದರಿಂದ ಏಳುರಿಸಿ ತಾನೇನೂ ಹೇಳುವಂತಿಲ್ಲವೆಂದು ಹೇಳಿದರು.

ಕಾಶ್ಮೀರದಲ್ಲಿ ಭಾರತ ಸೈನ್ಯ ನಿರುವದು ವಿಹಿತ

ಭಾರತದ ಸೈನ್ಯವು ಕಾಶ್ಮೀರದಲ್ಲಿ ಇರಲೇ ಬೇಕು. ಅದು ನಮ್ಮ ರಕ್ಷಣೆಗಾಗಿ ನಮ್ಮ ವಿನಂತಿಗನುಸಾರವಾಗಿ ಬಂದಿದೆ. ನನ್ನ ದೇಶದ ರಕ್ಷಣೆಗಾಗಿ ಅದು ಇಲ್ಲಿ ಇದ್ದೇ ಇರುವದು. ಕಾಶ್ಮೀರದಿಂದ ಭಾರತದ ಸೈನ್ಯಗಳನ್ನು ಹೊರಗಟ್ಟಬೇಕೆಂದು ಕೇಳುವದು ಜಗತ್ತಿನಲ್ಲಿಯ ಯಾವುದೇ ರಾಷ್ಟ್ರಕ್ಕೆ ಅದು ಎಷ್ಟದೇ ದೊಡ್ಡದಿರಲಿ ಹೇಳಿದ ಮಾತಲ್ಲ. ಸಂಯುಕ್ತ ರಾಷ್ಟ್ರ ಸಂಘದಲ್ಲಿ ದೊಡ್ಡದೊಡ್ಡವರು ಭಾರತದ ಸೈನ್ಯ ಹೋಗಬೇಕೆಂದು ಹೇಳುತ್ತಿರುವುದನ್ನು ಕಂಡು ನೀನೊದವಿಸುತ್ತಿದೆಂದು ಕಾಶ್ಮೀರ ಕಂದಾಯ ಮಂತ್ರಿಗಳು ಮದ್ರಾಸದಲ್ಲಿ ಹೇಳಿದರು.

ಹಸಿವು ದಾರಿದ್ರ್ಯಗಳೇ ಕಮ್ಯೂನಿಸಮದ ಮೂಲ

ಆರ್ಥಿಕಾಭಾವಿನ ಮೇಲೆ ಹೆಚ್ಚಿನ ಭರವಸೆಯನ್ನಿಟ್ಟ ಕುಳಿತಿರುವುದಾಗಿ ಜಗತ್ತಿನಲ್ಲಿಯ ಹಿಂದುಳಿದ ರಾಷ್ಟ್ರಗಳಲ್ಲಿಯ ಹಸಿವು ಜಾಗೂ ದಾರಿದ್ರ್ಯಗಳನ್ನು ನಿರ್ಮೂಲ ಮಾಡುವದೊಂದೇ ಕಮ್ಯೂನಿಜಮ್ಯನ್ನು ಹತ್ತಿಕ್ಕಲು ಪ್ರಭಾವಿ ಉಪಾಯವಾಗಿದೆ. ಜಗತ್ತಿನಲ್ಲಿ ಆರಿನಷ್ಟು ಆರೆ ಹೊಟ್ಟೆಯ ಜನರ ಜೀವನ ಮಟ್ಟವನ್ನು ಏರಿಸುವದು ಅತ್ಯವಶ್ಯವಿದೆ" ಎಂಬುದಾಗಿ ಸಂ. ರಾ. ಒಕ್ಕಲಿಕ ಆಹಾರ ಸಂಸ್ಥೆಯ ಮಾಜೀ ಡೈರೆಕ್ಟರರ ದ ಲಾರ್ಡ ಬಾಯ್ಡ ಆವರು ಪಾಕಿಸ್ತಾನದಲ್ಲಿ ಹೇಳಿದರು.

ಬ್ರಿಟನದಲ್ಲಿ ಗಾಂಧೀ ಆದರ್ಶ

ಬ್ರಿಟಿಶರು ಯುದ್ಧವನ್ನು ಸಂಪೂರ್ಣವಾಗಿ ತಿರಸ್ಕರಿಸಬೇಕ ; ಮತ್ತು ಮಹಾತ್ಮಾ ಗಾಂಧಿಯವರ ತತ್ವಗಳನ್ನನುಸರಿಸಬೇಕೆಂದು ಫೆಲೋಷಿಪ ಆಫ್ ರಿಕನ್ಸಿಲಿಯೇಶನ್ ಸಂಸ್ಥೆಯ ಮುಂದೆ ಸತ್ಯಾಗ್ರಹ ಹೂಡಿದರು ಪೋಲೀಸರು ಅವರನ್ನು ಬಂಧಿಸಿದರು. ಮಹಿಳೆಯರು ಬಂದು ಸತ್ಯಾಗ್ರಹ ಹೂಡಿದರು. ಪೋಲಿಸ ಕಾರ್ಯಕ್ಕೆ ಅಡ್ಡಿ ಬಂದರೆಂಬ ಆರೋಪದ ಮೇಲೆ ಅವರನ್ನು ಬಂಧಿಸಲಾಗಿದೆ.

ದ್ವಿದ್ಯೋಗಿಕ ಜಾತ್ರೆ

ಭಾರತ ಮತ್ತು ಮುಂಬಯಿ ಸರಕಾರಗಳ ಆಶ್ರಯದಲ್ಲಿ ಅಂತರಾಷ್ಟ್ರೀಯ ದ್ವಿದ್ಯೋಗಿಕ ಜಾತ್ರೆಯು ಮುಂಬಯಿಯಲ್ಲಿ ಜರಗಿತು. ಚೀನಾ, ರಶಿಯಾ, ಅಫಗಾಣಿಸ್ತಾನ ಮತ್ತು ಇರಾಣ ಮುಂತಾದ ರಾಷ್ಟ್ರಗಳು ಇದರಲ್ಲಿ ಭಾಗವಹಿಸಿವೆ. ಭಾರತದ ಇಂಥ ಜಾತ್ರೆ ಸೇರುತ್ತಿರುವದು ಇದೇ ಮೊದಲನೆಯ ಸಲ.

ಭಾರತದಲ್ಲಿ ಬೆಳ್ಳಿ ಶುದ್ಧೀಕರಣ ಕಾರ್ಖಾನೆ.

60 ಲಕ್ಷ ರೂಪಾಯಿ ಖರ್ಚಿನಿಂದ ವಿಶಾಖಪಟ್ಟಣದಲ್ಲಿಯೇ ಪ್ರಥಮತಃ ಕಲಾಯತ್ತಿಯ ಅಲಿಮಾಂದಲ್ಲಿ ಬೆಳ್ಳಿ ಶುದ್ಧೀಕರಣ ಕಾರ್ಖಾನೆಯು 1953ರೊಳಗಾಗಿ ಸ್ಥಾಪಿಸಲ್ಪಟ್ಟು ಕಾರ್ಯ ಕೈಗೊಳ್ಳುವದು. ಈ ಕಾರ್ಖಾನೆಯ ರಚನೆಯಿಂದ ಭಾರತ ಕ್ಕೆ 5ಕೋಟಿ ರೂ ಉಳಿತಾಯವಾಗಬಹುದೆಂದು ತಿಳಿಯುತ್ತದೆ.

ಸ್ವಾಮಿ ಸೀತಾರಾಮರ ಚಿನ್ನಹ

ಆಂಧ್ರ ವಿಶ್ವಾಂತರಚನೆಯು ಮುಖ್ಯ ಪುರಸ್ಕರ್ತರಾದ ಸ್ವಾಮಿ ಸೀತಾರಾಮರು ಒಂದು ಪ್ರಕಟಣೆಯನ್ನು ಹೊರಡಿಸಿ ಭಾಷಾವಾರು ಪ್ರಾಂತಗಳ ಪ್ರತಿಪಾದಕರೆಲ್ಲ ಒಂದುಗೂಡಿ ತಮ್ಮ ಗುರಿಯನ್ನು ಮುಟ್ಟಲು ಹೋರಾಡಬೇಕಲ್ಲದೆ ಆಂಧ್ರಪ್ರಾಂತವು ಬೇಗನೆ ತಲೆಯೆತ್ತುವದಕ್ಕೆ ಸಹಾಯ ನೀಡಬೇಕೆಂದು ಕೇಳಿಕೊಂಡಿರುವರು

ಪ್ರಿಸ್ಯಾಡಿಂಗ್ ಆಫೀಸರರ ಬಂಧನ

ಭೋಪಾಲದ ಸುಲ್ತಾನಗಂಜ ಮಹದಾರ ಸಂಘದ ನೈಗಾಸ್ಥಿಯಾ ಮಹಾಗ್ಯೆಯು ಪ್ರಿಸಾಯಿ ಡಿಂಗ್ ಆಫೀಸರಿಯೇ ಆದಿಯಾಗಿ ಆರು ಸ್ಥಳೀಯ ಅಧಿಕಾರಿಗಳನ್ನು ಮತಪೆಟ್ಟಿಗೆಗಳ ಮುದ್ರೆಗಳನ್ನು ಒಡೆದದ್ದರ ಕಾರಣದ ಮೇಲೆ ಬಂಧಿಸಲಾಗಿದೆ. ಆ ಪ್ರದೇಶದಲ್ಲಿ ಪುನಃ ಮತದಾನ ನಡೆಯಬೇಕಾಗಿದೆ.

Our Pigmy Deposit Scheme

..... brings our bank to your door. You may save as small a sum as annas two. Our collector will call on you every day to receive it

At the rate of annas two per day you save Rs. 50/- in 7 years because we allow interest at 3½% per annum At the rate of Re. 1/- per day your Savings are Rs 2,800/- in 7 years At the rate of Rs. 10/- it is Rs. 28,000/-. Come in to-day and join the band of **Prudent Prosperous Pigmy People.**

The Canara Industrial & Banking Syndicate Ltd.

Estd: 1925. H. O: UDIPI.



ಚಂದಾ ವಿವರ
ವರ್ಷಕ್ಕೆ ರೂ. 5—12—0
6 ತಿಂಗಳಿಗೆ ರೂ. 3—0—0

ಗುರುವಾರ ಉಡುಪಿ ೧೩-೧-'೫೫

ಭಾರತದಲ್ಲಿ ಕಮ್ಯೂನಿಸ್ಟರ ವರ್ಚಸ್ಸು!

ರಷಿಯಾದ ಆದರ್ಶವನ್ನು ಹಿಡಿದುಕೊಂಡು ಭಾರತದಲ್ಲಿ ಅದೇ ಮಾದರಿಯ ಸರಕಾರವನ್ನು ಸ್ಥಾಪಿಸುತ್ತೇನೆಯೆಂದು ನಮ್ಮ ಕಮ್ಯೂನಿಸ್ಟ ಬಂಧುಗಳು ಕೇಳುವಂತಿದೆ. ಕಮ್ಯೂನಿಸಮ್ಮಿನ ವರಿಪೂರ್ಣ ಜ್ಞಾನವಿಲ್ಲದಿರುವುದಕ್ಕೆ ಇದು ಸಾಧಿಸಿದ ವ್ಯಾಹತ್ವದ ಯೋಜನೆಗಳ ಲಾಭವನ್ನು ಗಣಿಸದೆಯೂ ರಷಿಯಾ ಹಾಗೂ ಕಮ್ಯೂನಿಸ್ಟ ಚೀನವನ್ನು ಟೀಕಿಸುವದು—ಲೋಕ ಕಂಠರವರಿಂದು ಅರಚಿಸುವದೂ ಪಾಶ್ಚಾತ್ಯ ರಾಷ್ಟ್ರಗಳ ಸದ್ಯದ ಧೋರಣವಾಗಿದೆ. ಭಾರತದಲ್ಲಿಯು ಕಮ್ಯೂನಿಸ್ಟರ ಮೇಲೆ ಜನರಿಗೆ ವಿಶ್ವಾಸ—ಸಹಾನುಭೂತಿ ಮೂಡದೆ ಇರುವದಕ್ಕೆ ಮೇಲಿನ ರಾಷ್ಟ್ರಗಳು ಕಡೆಗಣಿಸಿದ್ದಿರ ಕಾರಣವಲ್ಲ. ಇಲ್ಲಿಯ ಕಾಮ್ರೇಡುಗಳಲ್ಲಿ ಮುಖ್ಯವಾಗಿ ಯೋಗ್ಯ ಧುರೀಣರಿಲ್ಲದೆ ಅಂತರ್ಜಲತೆ ಹಾಗೂ ಕ್ರಾಂತಿಮಾರ್ಗಗಳೇ ಕಮ್ಯೂನಿಸಮದ ವ್ಯಾಪಕತೆಯ ಸಾಧನಗಳೆಂದು ಹಲವರು ಭಾವಿಸಿದಂತಿದೆ. ರಷಿಯದ ಆದರ್ಶವನ್ನು ಹೇಳುತ್ತಿರುವಾಗ ಅಲ್ಲಿಯ ಜನತೆಯ ಹಾಗೆಯೆ ಕರ್ತವ್ಯಪರಾಯಣರಾಗಬೇಕೆಂಬುದನ್ನು ನಮ್ಮಲ್ಲಿಯ ಕಾಮ್ರೇಡ ಬಂಧುಗಳು ಮರೆತಿದ್ದಾರೆ. ರಷಿಯದ ರಾಜಕೀಯ ಪದ್ಧತಿಯ-ನ್ಯಾಶ್ರೀ ನೆಹ್ರೂರವರು ಶ್ಲಾಘಿಸಿರುವರು. ವಾಸ್ತವವಲ್ಲ ಅವರು ಕಮ್ಯೂನಿಸ್ಟರ ಹಿಂಸಾತ್ಮಕ ಕೃತಿಗಳ ವೈರಿಗಳು ಆಗಿರುವರೇ ವಿನಹ ಕಮ್ಯೂನಿಸಮದ ದ್ವೇಷಿಯಾಗಿರುವುದಿಲ್ಲ. ರಷಿಯ ಹತ್ತು ವರ್ಷಗಳಲ್ಲಿ ಸಾಧಿಸಿದ ಪ್ರಗತಿಗೆ ಅಲ್ಲಿನ ಜನರ ಸಹಕಾರ ಕಷ್ಟ ಸಹಿಷ್ಣುತೆಗಳೇ ಕಾರಣವೆಂದು ಅವರು ಮೊನ್ನೆ ಮೊನ್ನೆ ಚುನಾವಣಾ ಭಾಷಣದಲ್ಲಿ ಹೇಳಿದ್ದುಂಟು. ಇದು ಗ್ರಾಹ್ಯವಾದ ಅಂಶ. ದೇಶದ ಜನಕ್ಕೆ ಆನ್ನ ಉದ್ಯೋಗ, ವಿದ್ಯಾಬುದ್ಧಿ ಸಾಕಷ್ಟು ಇರುವದಾದರೆ ಯಾವ ವಾದವಾದರೂ ಸ್ವಾಗತಾರ್ಹವೇ. ನಮ್ಮಲ್ಲಿಯ ಕಮ್ಯೂನಿಸ್ಟರು ಅಂತಹ ರಾಷ್ಟ್ರದ ಕನಸು ಕಾಣುವ ಮೊದಲು ಅಲ್ಲಿನ ಜನ ಹೇಗೆ ಕಷ್ಟದಿಂದ ದುಡಿಯುವದನ್ನು ಮರೆಯಬಾರದು. ಜನತೆ ನಮ್ಮ ಕರ್ತವ್ಯವೆಂದು ದೇಶದ ಹಿತದಲ್ಲಿ-ರಾಷ್ಟ್ರೀಯಭಿಮಾನವನ್ನು ತಾಳದೆ ಹೋದರೆ ದೇಶದ ಉದ್ಧಾರವಾಗಲೀ—ಅಭಿವೃದ್ಧಿಯಾಗಲೀ—ಆಗುವದು ಶಕ್ಯವಿಲ್ಲ ಇಲ್ಲಿನ ಕಮ್ಯೂನಿಸ್ಟರಲ್ಲಿ ಇನ್ನೊಂದು ತೆಳುವಳಿಕೆಯುಂಟು. ಅದೇನೆಂದರೆ ಹಿಂಸಾತ್ಮಕ ಕೃತಿಯಿಂದಲೂ—ಭಯೋತ್ಪಾದಕ ಕಾರ್ಯಗಳಿಂದಲೂ ಕಮ್ಯೂನಿಸಮನ್ನು ತರಬಹುದೆಂಬುದು. ಪಾಪ್ಯಂಶಃ ಇಂತಹ ಕೃತಿಗಳಿಂದಲೇ ಕಮ್ಯೂನಿಸಂ ಎಂದರೆ ರಾಕ್ಷಸ ಭಾತುಕರೆಂಬ ಭಾವನೆ ಜನತೆಯಲ್ಲಿ ಮೂಡಿದ್ದು. ಆಂಧ್ರ ಕೈದಾಬಾದಿನ ತೆಲಂಗಾಣ ಪ್ರದೇಶ, ಕಲ್ಕತ್ತಾ ಮುಂತಾದ ಕಡೆಗಳಲ್ಲಾದ ಸೋದರ ಹತ್ಯಾಕಾಂಡವನ್ನು ಲಕ್ಷಿಸಿದರೆ ಅವರ ಮನೋವೃತ್ತಿ ಎಂತಹದೆಂದು ಅರ್ಥವಾಗುವದು. ಭಾರತದಂತಹ ಸಾಂಸ್ಕೃತಿಕ ರಾಷ್ಟ್ರಕ್ಕೆ ಈ ಧರ್ಮ ಎಂದಿಗೂ ಒಪ್ಪುವಂತಿಲ್ಲ. ಈ ಮಾತಿನ ಅರ್ಥ ಕಮ್ಯೂನಿಸಂ ಅನ್ಯವಹಾರ್ಯ ವಿಹಿಷ್ಕರಿಸಬೇಕೆಂದಲ್ಲ! ಭಾರತದ ಸ್ಥಿತಿಗತಿಗೆ ಇಲ್ಲಿಯ ಕಮ್ಯೂನಿಸ್ಟರು ಅನುಸರಿಸುವ ಪದ್ಧತಿ—ರಾಜಕೀಯ ಮಾರ್ಗ ಉಚಿತವಾದುದಲ್ಲ ವೆಂಬುದೇ.

ಭಾರತವನ್ನು ಬ್ರಿಟಿಷರು ಬಿಟ್ಟುಹೋದಾಗ ನಮ್ಮ ಪರಿಸ್ಥಿತಿ ಕೇವಲ ಶೋಚನೀಯವಿತ್ತು. ಸ್ವಾತಂತ್ರ್ಯದಾಹವೇನೋ ನಮ್ಮಲ್ಲಿ ಬಲವಾಗಿದ್ದರೂ, ಬಂದ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಬೇಕಾದ ಪರಿಸ್ಥಿತಿ ಅತ್ಯಂತ ಕಠಿಣವೇ ಆಗಿತ್ತು; ಭಾರತದ ವಿಭಜನೆಯಿಂದಾಗಿ ಉಂಟಾದ ಜಾತೀಯ ವಿದ್ವೇಷ, ನಮ್ಮೊಳಗೆ ಆಳರಸರ ಸ್ವತ್ಯೇಕೀಕರಣ, ಆರ್ಥಿಕ ಮುಗ್ಗಟ್ಟು ಇವುಗಳಿಂದಾಗಿ ಭಾರತವು ಸ್ವಾತಂತ್ರ್ಯ ಬಂದೊಡನೆ ತತ್ತರಿಸಿ ಹೋಗುವ ಅವಸ್ಥೆಯಾಗಿತ್ತು; ನಮ್ಮ ನೇತಾ ಗಾಂಧೀಜಿ ಅಸ್ಮಿಕವಾಗಿ ದುರಂತ್ಯನೊಬ್ಬನ ಕೈಯಿಂದ ಮರಣಕ್ಕೀಡಾದರು; ಇಂತಹ ಸಂದರ್ಭದಲ್ಲಿ ವಿರುಗಾಳಿಗೆ ಸಿಲುಕಿದ ಭಾರತ ನೌಕೆಯನ್ನು ದೇವಿಗೆ ತಲಪಿಸುವವರಾರಿದ್ದಾರೆಂದು ಎಲ್ಲರೂ ಕಳವಳಗೊಂಡಿದ್ದರು; ಆದರೆ ಆ ಸಂಕಟಗಳೆಲ್ಲವೂ ಪರಿಹಾರವಾಯಿತು. ಕೃತ್ರಿಮ ಕಾರಸ್ಥಾನವಾದ ಜಾತೀಯ ವಿದ್ವೇಷ ಅತಿಗಿತ; ಆಳ್ವರಸರು ಮುಂದಿ ಆಳರಸರ ವಿಷದ ಹಲ್ಲು ಕಳಚಿಬಿತ್ತು; ನೆಹರುಗಳ ಮಹಾ ನಾಯಕತ್ವದಲ್ಲಿ ಭಾರತ ಮುನ್ನಡೆಯಿತು; ಸ್ವಾತಂತ್ರ್ಯದ ಸಂಬಂಧದಲ್ಲಿ, ಪ್ರಜಾಪ್ರಭುತ್ವದ ಪ್ರಗತಿ ಮಾರ್ಗದಲ್ಲಿ ಮುನ್ನಡೆದು ನಾವು ಗುರಿಯನ್ನು ತಲಪಿದೆವು.

ನಮ್ಮ ಮಹಾ ನಾಯಕನಾದ ನೆಹರು ಪ್ರಪಂಚದಲ್ಲಿಯೇ ಅದ್ವಿತ ಪ್ರಯೋಗವಾದ ಈ ಮಹಾ ಚುನಾವಣೆಯ ಅಗ್ನಿ ಪರೀಕ್ಷೆಗೆ ಭಾರತವನ್ನು ಒಳಗು ಮಾಡಿದರು; ಹದಿನೇಳುವರೆ ಕೋಟಿ ಜನರ ಕೈಯಲ್ಲಿ ಭಾರತದ ಭವಿಷ್ಯತ್ತನ್ನು ರೂಪಿಸುವ ಅಧಿಕಾರ ಕೊಡಲಾಯಿತು; ನೆಹರು ಬಗೆದಿದ್ದರೆ, ಕಾಂಗ್ರೆಸಿನ ಕೈಯಲ್ಲಿಯೇ ಅಧಿಕಾರವಿರಬೇಕೆಂದು ಬಸಿಯಿದ್ದರೆ ಈ ಚುನಾವಣೆಯನ್ನು ಇನ್ನೆಷ್ಟು ಮುಂದುವರಿಸಲು ಅವರಿಗೆ ಖಂಡಿತ ಸಾಧ್ಯವಾಗಿತ್ತು. ಆದರೆ ಉಜ್ವಲ ಪ್ರಜಾಪ್ರಭುತ್ವದ ನಾಂದಿಗಳಾದ ಅವರು ಅಂತಹ ದುರಾಸೆಗೆ ಬಲಿಯಾಗದೆ ಜನತೆಯ ಆಕಾಂಕ್ಷೆಗಳನ್ನು ತಿಳಿಯಲು ಈ ಮಹಾಪ್ರಯೋಗವನ್ನು ಕೈಕೊಂಡರು. ಆದರೆ ಫಲಿತಾಂಶವನ್ನು ನಾವು ಬೇಗನೇ ತಿಳಿಯಲಿದ್ದೇವೆ.

ಎಂತಹ ಕಟುವಿಮರ್ಶಕನಾದರೂ ಇಂದಿನ ಈ ಚುನಾವಣೆಯ ರೀತಿಯನ್ನು ದೂರುವಂತಿಲ್ಲ. ಯಾವನೊಬ್ಬ ನಾಗರಿಕನಿದೂ ತನ್ನ ಮತವನ್ನು ಯಾವೊಂದು ಭೀತಿಯಲ್ಲದೆ ಕೇಳುವ ವಿಪಾಡು ಮಾಡಲಾಗಿದೆ ಪ್ರಾಯಸ್ಥರೆಲ್ಲರಿಗೂ ಒಕ್ಕು ಕೊಡಲಾಗಿದೆ ಧನಿ ಒಕ್ಕಲುಗಳೆಲ್ಲರೂ ಒಂದೇ ಅಧಿಕಾರದಲ್ಲಿ ಒಂದೇ ಸ್ವಾತಂತ್ರ್ಯದಲ್ಲಿ ನಿಂತು ರಾಷ್ಟ್ರದ ಭವಿಷ್ಯವನ್ನು ರೂಪಿಸಲು ಬೇಕಾದ ಸಾಕಾರ್ಯಗಳನ್ನು ಒದಗಿಸಲಾಗಿದೆ. ಚುನಾವಣೆಯು ಕೂಡಾ ಬಹಳ ಶಾಂತ ರೀತಿಯಲ್ಲಿ ನಡೆದಿದೆ. ಭಾರತದ ಅದ್ಯಂತ ನೂರಿಪ್ಪತ್ತಾರು ಪಕ್ಷಗಳು ನಿಂತು ಚುನಾವಣೆಯ ಹೋರಾಟ ನಡೆಸುತ್ತಿದ್ದರೂ ಎಲ್ಲವೂ ಶಾಂತ ರೀತಿಯಿಂದಲೇ ನಾಗಿದೆ. ವಿದೇಶಗಳಿಂದ ಈ ಚುನಾವಣೆಯು ಪ್ರೇಕ್ಷಕರಾಗಿ ಬಂದ ತಜ್ಞರು ಕೂಡಾ ಭಾರತದ ಅದ್ಯಂತ ತಿರುಗಾಡಿ ಚುನಾವಣೆಯ ಪದ್ಧತಿ ರೀತಿಗಳು ಬಹಳ ಚೆಲೋದಾಗಿ ನಡೆದಿವೆಯೆಂದು ಪ್ರಶಂಸೆ ಮಾಡಿದ್ದಾರೆ. ಇದು ಭಾರತದ ಜನಕೋಟಿಯು ವಾನಾಸಿಕ ಮಟ್ಟವನ್ನು ತಿಳಿಸುತ್ತದೆ. ಅಧಿಕಾರ ಸ್ವಾರ್ಥಲಾಲಸೆಯಿಂದ ಅಲ್ಲಿ ಇಲ್ಲಿ ಹಲಕೆಲವರು ಪ್ರಕ್ಷೋಭಕ ರೀತಿಯಿಂದ ವರ್ತಿಸಿದರೂ ಸಾಮಾನ್ಯ ಜನತೆ ಶಾಂತರೀತಿಯಿಂದ ವರ್ತಿಸುತ್ತಿರುವುದನ್ನು ನೋಡಿದರೆ ನಮ್ಮ ರಾಷ್ಟ್ರದಲ್ಲಿ ಪ್ರಜಾಪ್ರಭುತ್ವವು ಪೂರ್ಣ ಯಶಸ್ವಿಯಾಗುವುದರ ಕುರಿತು ಯಾವೊಂದು ಸಂಶಯವೂ ಕಂಡು ಬರುವುದಿಲ್ಲ. ಯಾವ ಪಕ್ಷ ಅಧಿಕಾರಕ್ಕೆ ಬರಲಿ, ಯಾರು ಮಂತ್ರಿಗಳಾಗಲಿ ನಮಗಿಗ ಈ ವಿಷಯವು ಅತ್ಯಂತ ಮುಖ್ಯವಾದ ಸಂಗತಿಯಾಗಿದೆ

ಕಾಂಗ್ರೆಸ್ ಪಕ್ಷವು ಅಧಿಕಾರದಲ್ಲಿರುವ ವಕ್ಷ; ಸ್ವಾತಂತ್ರ್ಯ ಬಂದಾಗ ಅಧಿಕಾರವನ್ನು ನಿರ್ವಹಿಸಲು ಅರ್ಹತೆ ಪಡೆದಿದ್ದ ಪೂರ್ಣ ಆರ್ಹತೆ ಹೊಂದಿದ್ದ ಪಕ್ಷ ಅದೊಂದೇ! ಹಾಗಾಗಿ ಅದು ಅಧಿಕಾರ ಸೂತ್ರ ತೈಗೆ ತೆಗೆದುಕೊಂಡಿತು; ಪ್ರಾಂತಗಳಲ್ಲಿ ಕೇಂದ್ರದಲ್ಲಿಯೂ ಕಾಂಗ್ರೆಸ್ ಅಧಿಕಾರವೇ ಆಯಿತು; ಕೇಂದ್ರದ ಅಧಿಕಾರದ ಮಟ್ಟಿಗೆ ನೆಹರು ಸರ್ವಸಕ್ಷೀಯರನ್ನು ಸೇರಿಸಿಕೊಂಡೇ ಮಂತ್ರಿಮಂಡಳ ಮಾಡಿದರೂ ಅಲ್ಲಿಯೂ ಕಾಂಗ್ರೆಸ್ ಪ್ರಭಾವವೇ ಹೆಚ್ಚಾಗಿತ್ತೆಂಬುದಲ್ಲಿ ಸಂಶಯವಿಲ್ಲ. ಅಂತೂ ಆ ಸಂದರ್ಭದಲ್ಲಿ ಕಾಂಗ್ರೆಸ್ ಅಧಿಕಾರ ವಹಿಸುವ ವಿಷಯ ಯಾವೊಂದು ಅಪಸ್ವರವೂ ಉಂಟಾಗಿಲ್ಲ; ಕಾರಣವೂ ಇರಲಿಲ್ಲ.

ಆದರೆ ನಾಲ್ಕು ವರ್ಷಗಳ ಅಧಿಕಾರ ವಹಿಸಿದ ನಂತರ ಅಪಸ್ವರ ಉಂಟಾಗಿದೆ; ಆಳುವ ಪಕ್ಷಕ್ಕೆ ಕೇಳುವ ಪಕ್ಷ ಬೇಕೆಂದು ಕೆಲವರು ಹೇಳುತ್ತಾರೆ; ಇದು ಸರಿಯಾದ ನೂತೆ; ಕೇಳುವ ಪಕ್ಷವಷ್ಟೆ ನ್ಯಾಯ ರೀತಿಯಲ್ಲಿ ಬೇಕೆಂದು ಮಾತ್ರ ನಾವು ನೆನಪಿನಲ್ಲಿಟ್ಟು ಕೊಳ್ಳಬೇಕು ವಿಷಯವಾಗಿದೆ. ಇನ್ನು ಕಾಂಗ್ರೆಸನ್ನು ಉರುಳಿಸುವುದೊಂದೇ ಪ್ರಯತ್ನದಲ್ಲಿ ತೊಡಗಿದವರು ಕೆಲವರಿದ್ದಾರೆ ಉರುಳಿಸಿದ ನಂತರ ಮುಂದೇನೆಂಬ ವಿಚಾರ ಇಂದಿಗೆ ಆವಗೂ ಇದ್ದಂತೆ ತೋರುವುದಿಲ್ಲ ಇದರಲ್ಲಿ ಉಗ್ರಗಾಮಿಗಳು, ಅಪ್ರಾಗತಿಕರು, ಜಾತೀಯವಾದಿಗಳು ಎಲ್ಲರೂ ಒಂದಾಗಿದ್ದಾರೆ. ಇಂತಹ ಸವಿಚಿತ್ರ ಸಂಯೋಜನೆಯಿಂದ ಕಾಂಗ್ರೆಸನ್ನು ಮಂಡಿಯು ಜಾಕಿದರೆ ಮುಂದೆ ಎಂತಹ ಸರಕಾರ ನಿರ್ಮಾಣವಾಗುವುದೋ ಅರ್ಥವಾಗುವುದಿಲ್ಲ. ಅರಾಜಕತೆಯುಂಟಾಗುವ ಸಂಭವನೀಯ. ಅರಾಜಕತೆಯಿಂದಲೇ ಲಾಭ ಪ

[ಗನೇ ಸುಟ ಪೋಷಿ]

ಬೊಂಬಾಯಿಯ ಸಿಟಿ ಸಿವಿಲ್ ಕೋರ್ಟಿನಲ್ಲಿ

ವ್ಯಾಜ್ಯ ನಂಬ್ರ 2370/1951

ಎಸ್. ಆರ್. ಸೆಟ್ಟಿ, ಹಿಂದೂ, ಬೊಂಬಾಯಿ ನಿವಾಸಿ C/o ನಂಬ್ರ 18 ಪೀಡಿ ಶೋಫ್, ಕೃಷ್ಣನಿವಾಸ ಬಿಲ್ಡಿಂಗ್, ಹಾಸ್ಪಿಟಲ್ ಎವಿನ್ಯೂರೋಡ್, ಪರೆಲ್, ಬೊಂಬಾಯಿ— } ವಾದಿ

ಮತ್ತು

1 ವಿಠಲ ಸುಬ್ರಾಯ ಸಾಮಂತ, 2 ಗೋಪಾಲ ಸುಬ್ರಾಯ ಸಾಮಂತ, 3 ಪಾಂಡುರಂಗ ಸುಬ್ರಾಯ ಸಾಮಂತ, 4 ಗೋಪಾಲ ಮಂಜುನಾಥ ಕಾಮತ್— } ಪ್ರತಿವಾದಿರು.

[1] ವಿಠಲ ಸುಬ್ರಾಯ ಸಾಮಂತ [2] ಗೋಪಾಲ ಸುಬ್ರಾಯ ಸಾಮಂತ ಮತ್ತು [3] ಪಾಂಡುರಂಗ ಸುಬ್ರಾಯ ಸಾಮಂತ—1,2 ಮತ್ತು 3ನೇ ಪ್ರತಿವಾದಿಯರಿಗೆ

ಬೊಂಬಾಯಿ ಪರೆಲ್, ಹಾಸ್ಪಿಟಲ್ ರೋಡಿನ ಕೃಷ್ಣ ನಿವಾಸ ಬಿಲ್ಡಿಂಗಿನಲ್ಲಿರುವ ಅನಂದ ಭುವನ ಹಿಂದೂ ರೆಸ್ಟೋರೆಂಟನ್ನು 1ನೇ ಆಧವಾ [2]ರಿಂದ 3ನೆ ಪ್ರತಿವಾದಿಗಳಿಗೆ 4ನೆ ಪ್ರತಿವಾದಿಗೆ ಎಸ್ಸಾನ್ ಮಾಡಿದ್ದು ಮತ್ತು ಟ್ರಾನ್ಸ್‌ಫರ್ ಮಾಡಿದ್ದು ಬಗ್ಗೆ ಬೇಕಾಗಿಯೂ, ರೂ ಸು 3000/- ಮತ್ತು ಅದರ ಮೇಲಣ ಬಡ್ಡಿ, ಕೋರ್ಟು ಖರ್ಚು ಪರಿಹಾರಕ್ಕಾಗಿಯೂ, ವಾದಿಯು ಈ ದಾವೆಯನ್ನು ಈ ಕೋರ್ಟಿನಲ್ಲಿ ದಾಖಲು ಮಾಡಿದ್ದಾಗಿ ತಿಳಿಸೋಣಾನಿಯದೆ

ಈ ದಾವೆಯು ಈ ಕೋರ್ಟಿನಲ್ಲಿ 13-2-1952ನೆ ದಿವಸ ಹಗಲು 11 ಗಂಟೆಗೆ ತನ್ನಿಗೆ ಇದೋಣಾನಿದೆ ಎಂದು ಈ ಮೂಲಕ ನೋಟೀಸು ಕೊಡೋಣಾಗಿದೆ ಈ ದಾವೆಗೆ ಸಂಬಂಧ ಪಟ್ಟ ರಿಕಾರ್ಡುಗಳೇನಾದರೂ ನಿಮ್ಮಕಡೆ ಇದ್ದಲ್ಲಿ ಅವುಗಳನ್ನು ನೀವು ಯಾ ನಿಮ್ಮ ಅಧಿಕೃತ ವಕೀಲರ ಮುಖಾಂತರ ಹಾಜರುಪಡಿಸಿ ನಿಮ್ಮ ಆಕ್ಷೇಪಗಳೇನಾದರೂ ಇದ್ದಲ್ಲಿ ಸೂಚಿಸತಕ್ಕದ್ದು. ಈ ದಿನವೇ ಈ ವ್ಯಾಜ್ಯದ ಅಯ್ಕೆರು ತೀರ್ಮಾನವಾಗಲಿರುವುದರಿಂದ ನಿಮ್ಮ ಸಾಕ್ಷಿಗಾರರೆಲ್ಲರನ್ನೂ ಅಂದೇ ಬರಮಾಡತಕ್ಕದ್ದಾಗಿದೆ. ನೀವು ನೇಲೆ ಹೇಳಿದಂತೆ ಹಾಜರಾಗಿರಲು ತಪ್ಪಿದ್ದಲ್ಲಿ ಎಕ್ಸ್‌ಪಾರ್ಟಿಯಾಗಿ ದಾವಾ ತೀರ್ಮಾನಿಸಲಾಗುವುದು. ತಿಳಿದಿರಲಿ.

● ಬೊಂಬಾಯಿ ಸಿಟಿ ಸಿವಿಲ್ ಕೋರ್ಟಿನ ಮೊಹರು
ರಿಜಿಸ್ಟ್ರಾರರ ಸಹಿ ತಾ 17-1-52 } ಕೆ. ವಿ. ಡಿ ವಿದ್ಯಾರಾಮನ್, ವಾದಿಕಡೆ ಎಡ್ವೋಕೇಟ್

THE UNITED KARNATAK INSURANCE CO. LTD.
H O DHARWAR. ESTD: 1929.

We wish all our Policyholders, Agents, Doctors and Well-wishers,

Happiness and Prosperity on the dawn of the 5th Republic Day Celebration.

On this occasion, we offer our valuable services in safeguarding the interest of those who require **Insurance Protection and Service.**

CHIEF AGENTS FOR: **MYSORE STATE & BELLARY DT.**

International Commercial Corporation Ltd.

P. O. Box No. 10, UDIPI.

ಪ್ರಜಾಪ್ರಭುತ್ವ ಮತ್ತು ಪ್ರೌಢ ಮತದಾನ ಪದ್ಧತಿ.

ಪ್ರೌಢಮತದಾನ ಕ್ರಮದಲ್ಲಿ ನಮ್ಮಲ್ಲಿಯ ಪ್ರಭಮ ಮುದಾ ಚುನಾವಣೆಗಳನ್ನು ಕಾಣುವಾಗ ನಮ್ಮ ಪ್ರಜಾಪ್ರಭುತ್ವ ಉತ್ತಮ ರೀತಿಯಲ್ಲಿ ರೂಪುಗೊಳ್ಳುತ್ತಿದೆ ಯೆಂದು ಧೈರ್ಯ ಕಾಣುತ್ತಿದೆ. ಅಕ್ಷರಾಭ್ಯಾಸವಿಲ್ಲದ ಮುಂದಿಗೆ ಮತಕೊಡುವ ಹಕ್ಕನ್ನು ಕೊಟ್ಟುದು ಸರಿಯಲ್ಲವೆಂದು ಭಾವಿಸುವವರು ಎಷ್ಟೋ ಮಂದಿಇದ್ದಾರೆ. ಆದರೆ ಪ್ರಜಾಧರ್ಮ ತಿಳಿಯಲು ಅಕ್ಷರಾಭ್ಯಾಸವಿಲ್ಲದ ಅಸಾಧ್ಯವೆಂದ ಮಾತು ಸಂಯೆನ್ನು ಸುತ್ತ ಇಲ್ಲ. ಜನರಿಗೆ ಅಪ್ರಿಯ ರೀತಿಯಲ್ಲಿ ವರ್ತಿಸುದವರನ್ನು ಚುನಾವಣೆಗಳಲ್ಲಿ ಮತದಾರರು ಉರುಳಿಸುತ್ತಿರುವುದನ್ನು ಕಾಣುವಾಗ ನಮ್ಮ ಮಶ ದಾರರು ತಮ್ಮ ಹಕ್ಕನ್ನು ಚೆನ್ನಾಗಿ ಉಪಯೋಗಿಸಬಲ್ಲರೆಂದೇ ಹೇಳಬೇಕು.

ವಯಸ್ಕರೆಲ್ಲರಿಗೆ ಈ ಮತದಾನದ ಹಕ್ಕನ್ನು ಕೊಟ್ಟಿರುವುದು ಈ ದೇಶದ ಭಾರೀ ಕಲ್ಯಾಣದ ದೃಷ್ಟಿಯಿಂದ ಅತ್ಯಾವಶ್ಯಕ ವಿಷಯವೆಂಬುದನ್ನು ನಾವು ಮನಗಾಣಬೇಕು. ಇನ್ನು ಮುಂದೆ ಜನಸಾಮಾನ್ಯರ ಹಿತದ ಕಡೆಗೆ ಆಡಳಿತೆ ನಡೆಸುವವರು ಗಮನ ಕೊಡದೆ ನಿವೃತ್ತಿ ಇಲ್ಲ ವೆಂಬ ಸ್ಥಿತಿ ಇದರಿಂದ ಉಂಟಾಗುತ್ತಿದೆ. ನಮ್ಮ ಸ್ವರಾಜ್ಯವು ನಿಜವಾಗಿಯೂ ಜನಸಾಮಾನ್ಯರ ಹಿತದಲ್ಲಿ ಪರಿಣತವಾಗುವಂತೆ ಮಾಡಲು ಈ ಪ್ರೌಢಮತದಾನ ಪದ್ಧತಿ ಉತ್ತಮ ಸಾಧನವೆಂಬ ಬಗ್ಗೆ ಸಂಶಯ ಕಾಣುವುದಿಲ್ಲ. ಆದುದರಿಂದ ಜನಸಾಮಾನ್ಯರಿಗೆ ಸಿಕ್ಕಿರುವ ಈ ಹಕ್ಕನ್ನು ಮುಂದೆ ಬೇರೆ ಬೇರೆ ಬಗೆಯ ಪ್ರಾಂತಿತ್ಯಪೂರ್ಣ ನೆವಗಳನ್ನೊಡ್ಡಿ ಜಪ ಹರಿಸದಂತೆ ಎಲ್ಲ ಪ್ರಜೆಗಳೂ ಅತ್ಯಂತ ಜಾಗರೂಕರಿರಬೇಕೆಂದು ಈಗಲೇ ಎಚ್ಚರಿಸುವುದೊಳ್ಳಿತು. ನಮ್ಮ ಮತದಾನದ ಹಕ್ಕನ್ನು ಶಾಶ್ವತವಾಗಿ ರಕ್ಷಿಸಿಕೊಳ್ಳೋಣ. ಅದು ಪ್ರತಿಯೊಬ್ಬ ಪ್ರಜೆಯ ಜನ್ಮ ಸಿದ್ಧ ಹಕ್ಕೆಂಬುದನ್ನು ಎಂದೂ ಮರೆಯದಿರೋಣ. ಈ ಹಕ್ಕನ್ನು ಸರಿಯಾಗಿ ಉಪಯೋಗಿಸಲು ನಾವು ಕಲಿಯಬೇಕಾದ ಅಂಶ ಇನ್ನೆಷ್ಟೋ ಇದೆ. ಅದನ್ನು ಕಲಿಯೋಣ.

ಚುನಾವಣೆಗಳಲ್ಲಿಯ ಅನುಭವದ ಕೆಲವು ಎರಡು ಮಾತು ಅನುಚಿತವಾಗದು. ಮುಂದೆ ಬರುವ ಉಮೇದ್ವಾರರು ತಿಳಿದುಕೊಳ್ಳಬೇಕಾದ ಒಂದು ಮಹತ್ವದ ಮಾತನ್ನು ಪ್ರಸ್ತಪಡಿಸುವುದು ಅತ್ಯಗತ್ಯ. ಶಾಸನ ಸಭೆ ಅಥವಾ ಪಾರ್ಲಿಮೆಂಟು ಸದಸ್ಯತನವೆಂಬುದನ್ನು ಈ ಉಮೇದ್ವಾರರಾದರೂ ಸರಿಯಾಗಿ ತಿಳಿದುಕೊಳ್ಳಬೇಕು. ಈ ಸದಸ್ಯತನದಲ್ಲಿ ದೇಶದ ಆಡಳಿತ ರೂಪಿಸುವ ಅಧಿಕಾರ ಆಡಕವಿರುತ್ತದೆಂಬುದು ನಿಜ. ದೇಶದ ಆಡಳಿತೆಯೆಂದರೆ ಪ್ರಜಾಜನರ ಮೇಲೆ ಅಧಿಕಾರ ಚಲಾಯಿಸುವ ಹುದ್ದೆಯೆಂಬ ಭಾವ ಪೂರ್ಣ ಬಿಟ್ಟುಕೊಡಬೇಕು. ಆಡಳಿತೆಯ ಅಧಿಕಾರವೆಂದರೆ ಪ್ರಜಾಜನರ ಸೇವೆ ಮಾಡುವ ಅಧಿಕಾರವೆಂಬುದನ್ನು ಚೆನ್ನಾಗಿ ಮನದಟ್ಟು ಮಾಡಿಕೊಳ್ಳಬೇಕು. ಉಮೇದ್ವಾರರಾಗಿ ಮುಂದೆ ಬರುವವರಲ್ಲಿ ಈ ತಿಳುವಳಿಕೆ ಅತ್ಯಗತ್ಯವೆನ್ನಿಸುತ್ತದೆ.

ಪ್ರಜಾಸೇವೆಗಾಗಿ ಈ ಸ್ಥಾನಗಳಿಗೆ ಉಮೇದ್ವಾರರಾಗಿ ಮುಂದೆ ಬರುವುದರಲ್ಲಿ ಅನುಚಿತವೇನೂ ಇಲ್ಲ. ಇಂಥವರಲ್ಲಿ ಆ ಸ್ಥಾನ ಪಡೆಯಲು ಯಾವುದೇ ಬಗೆಯ ದುರಾಗ್ರಹ ಮಾತ್ರ ಇರಲು ಕಾರಣವಿಲ್ಲ. ಅದೊಂದು ದೊಡ್ಡ ಅಧಿಕಾರದ ಹುದ್ದೆಯೆಂದು ಭಾವಿಸಿದರೆ ಮಾತ್ರ ಸಲ್ಲದ ದಾರಿಯಿಂದ ಸ್ಪರ್ಧಿಸುವಂತಾಗುತ್ತದೆ. ಅಧಿಕಾರ ಲಾಲಸೆಗೆ ಕಾರಣವಾಗುತ್ತದೆ. ಚುನಾವಣೆಗಳಲ್ಲಿ ದುರ್ಭಾವನೆಯ ಭಾವನೆ ತರಲು ಪರಸ್ಪರ ವೈಷಮ್ಯ ಬೆಳೆಸುವ ವಿಷಮ ಪರಿಸ್ಥಿತಿ ಏತಕ್ಕೆ ಬರಬೇಕು? ಗೆಲ್ಲುವುದಕ್ಕಾಗಿ ಸಾವಿರಾರು ರೂಪಾಯಿಗಳ ವೆಚ್ಚ ಕ್ಕೆ ಏತಕ್ಕಾಗಿ ಇಳಿಯಬೇಕು? ನೀತಿ ಮಾತ್ರವಲ್ಲ ಕಾನೂನಿನ ದೃಷ್ಟಿಗೆಗಳನ್ನು ಕೂಡ ಮುರಿಯುವ ಬಗೆಯ ವಿಧಾನಗಳಿಂದ ಮತಗಳನ್ನು ಪಡೆಯುವ ಹಂಬಲ ಏತಕ್ಕೆ ಬೇಕು? ಈ ಮಾತುಗಳನ್ನು ಪ್ರಸ್ತಪಿಸುಗತಗಳನ್ನು ಕಟ್ಟಿಕೊಂಡು ಶೇಖುತ್ತಾ ಇಲ್ಲಿ, ಎಲ್ಲರಿಗೂ ಅನ್ವಯಿಸುವ ಮಾತುಗಳೆಂದು ತಿಳಿಯಬೇಕು. ನಮ್ಮಲ್ಲಿಯು ಈ ಬಾಯಲ್ಲಿ ಚೆ.ನಾವಣೆ ಳಲ್ಲಿಯು ಅತ್ಯಂತ ಕಹಿಯಾದ ಒಂದು ಅನುಭವವೆಂದರೆ ಕಾಂಗ್ರೆಸ್ ಪಕ್ಷದಲ್ಲಿ ತಿರಸ್ಕೃತ ಉಮೇದ್ವಾರರು ವರ್ತನೆಯೆನ್ನ ಬೇಕು. ಹಲವು ಮಂದಿ ಒಂದು ಸ್ಥಾನಕ್ಕೆ ಅರ್ಜಿ ಹಾಕುವಾಗ ಒಬ್ಬರನ್ನು ಮಾತ್ರ ಆರಿಸಿ ಉಳಿದವರನ್ನು ತಿರಸ್ಕರಿಸುವುದು ಅನಿವಾರ್ಯ ವಷ್ಟೆ? ಈ ರೀತಿ ನೀವು ಬೇಡವೆಂದು ಯಾರಿಗೆ ತಿಳಿಸವರೋ ಅವರು ನ್ಯಾಯವಾದ ಸೇವಾಭಾವದಿಂದ ಮುಂದೆ ಬಂದವರೆಂದಾದರೆ ಅವರು ಇದರಿಂದಾಗಿ ದುರಾಗ್ರಹ ತಾಳಲು ಯಾವ ಕಾರಣವೂ ಇಲ್ಲ. ಅದರೆ ಈ ಭಾರಿ ಇಂಥವರಲ್ಲಿ ಹಲವು ಮಂದಿ ಮನಸ್ಸಿನಲ್ಲಿ ನೊಂದುಕೊಂಡುದು ಮಾತ್ರವಲ್ಲ ಕೆಲವರು ಕಾಂಗ್ರೆಸ್ ಸಂಸ್ಥೆಯನ್ನು ಕೂಡಾ ತ್ಯಜಿಸಿ ವಿರುದ್ಧ ಕಾರ್ಯಸಾಧನೆಗೆ ಇಳಿಯುವಂತಾದುದು ವಿಷಾದಕರ. ಇದನ್ನು ಕಾಣುವಾಗ ಕಾಂಗ್ರೆಸಿಗರಲ್ಲಿಯೂ ಸೇವಾಭಾವದ ಬದಲು ಅಧಿಕಾರ ಲಾಲಸೆ ಹೆಚ್ಚುತ್ತಿದೆಯೆ? ಎಂಬ ಹೆದರಿಕೆಯಾಗುವುದು ಸಹಜವಲ್ಲವೆ?

ಪಾಶ್ಚಾತ್ಯ ಪ್ರಜಾಸ್ವಭುತ್ವ ರಾಷ್ಟ್ರಗಳನ್ನು ಚುನಾವಣೆಗಳಲ್ಲಿ ಮುಂದೆ ಬರುವವರು ಸೇವಾಭಾವದಿಂದಲೇ ಬರುತ್ತಿರುವರೇ ಎಂದು ಕೇಳಬಹುದು. ಅವರ ಚುನಾವಣೆಗಳು ಆದರ್ಶ ರೀತಿಯಲ್ಲಿ ನಡೆಯುತ್ತಿವೆಯೇ ಎಂದು ಕೇಳಬಹುದು. ಅಲ್ಲಿಯ ಉಮೇದ್ವಾರರಂತೂ ಖಾವುದೇ ಬಗೆಯ ಬೇಜವಾಬ್ದಾರೀ ರೀತಿಯಿಂದ ಖಂಡಿತವಾಗಿಯೂ ವರ್ತಿಸುವುದಿಲ್ಲವೆಂದು ಖಂಡಿತ ಹೇಳಬಹುದು. ಆ ರೀತಿ ವರ್ತಿಸಿದರೆ ಅಂಥವರಿಗೆ ಖಂಡಿತ ಮತ ಸಿಕ್ಕುವುದಿಲ್ಲ. ನಮ್ಮಲ್ಲಿಯಾದರೂ ಅಷ್ಟೇ- ಕ್ರಮ, ನ್ಯಾಯವಾದ ಯೋಗ್ಯತೆ ತೋರಿಸದೆ ಅಯೋಗ್ಯರಂತೆ ವರ್ತಿಸಿದರೆ ನಮ್ಮ ಮತದಾರರಾದರೂ ತಮ್ಮ ಮತಗಳನ್ನು ಬಹಳ ವಿಟ್ಟಿಗೆ ಅಂಥವರಿಗೆ ಕೊಡುವಂತಿಲ್ಲವೆಂಬ ಬಗ್ಗೆ ಸಂಶಯ ಪಡಲು ಕಾರಣವಿಲ್ಲ. ಕೊನೆಯ ಪಕ್ಷ ಚುನಾವಣೆಗಳಲ್ಲಿ ಮುಂದೆ ಬರುವ ಉಮೇದ್ವಾರರು ನೀತಿಯ ಕಟ್ಟುಗಳನ್ನಾದರೂ ಪಾಲಿಸುವುದು ಅತ್ಯಗತ್ಯವೆಂಬುದನ್ನಾದರೂ ಸರಿಯಾಗಿ ತಿಳಿದುಕೊಳ್ಳಬೇಕು.

ಪ್ರಜಾಪ್ರಭುತ್ವದ ಆಧುನಿಕ ದಾರಿ ನಮಗೆ ಹೊಸತು. ಇದರಲ್ಲಿ ನಾವು ಕಲಿಯ ತಕ್ಕ ವಿಚಾರಗಳು ಅನೇಕ ಇವೆ. ಇದರ ಸಾಕ್ಷ್ಯ ಮಾಹಿತಿ ಇಲ್ಲದೆ ನಡೆದ ಚುನಾವಣೆಗಳೆಂಬುದರಿಂದ ಇಂದು ಸಾಕಷ್ಟು ಸ್ಥಿರತೆಯುಳ್ಳ ಸರಕಾರ ಏರ್ಪಡಿಸುವುದೇ ಕಷ್ಟವೆಂಬ ಪರಿಸ್ಥಿತಿಯನ್ನು ಇದಿರು ನೋಡುವಂತಾಗಿದೆ. ಇಂಥ ವಿಷಯಗಳನ್ನು ನಾವು ಅನುಭವದಿಂದ ಸ್ವತೇವ ಕಲಿಯಲಿಕ್ಕಿದ್ದೇವೆ. ಮುಂದೆ ಸಾಗಿದಂತೆ ನಮ್ಮಲ್ಲಿಯೂ ನಿರ್ದಿಷ್ಟ ಪಕ್ಷ ಪಂಗಡಗಳು ಸರಿಯಾಗಿ ರೂಪುಗೊಳ್ಳಲಿವೆಯೆನ್ನ ಬಹುದು. ಇದರಿಂದಾಗಿ ಜನಸಾಮಾನ್ಯರಿಗೂ ಇದರ ಸಂಯಾದ ಮಾಹಿತಿ ತಾನಾಗಿ ಬರುವುದೆನ್ನ ಬಹುದು.

ಅಂತೂ ನಮ್ಮಲ್ಲಿ ಪ್ರಜಾಸ್ವಭುತ್ವ ಹಾಗೂ ಪ್ರೌಢ ಮತದಾನ ಇತ್ಯಾದಿ ಸರಿಯಾಗಿ ನಡೆಯುವಂತಿಲ್ಲವೆಂಬ ಮಾತನ್ನಿ ಹೆಚ್ಚು ಹುಸುಳ್ಳಿವೆಂಬುದು ಈಗ ಸ್ವಸ್ಪವಾಗುತ್ತಿದೆ. ವರ್ಗದಾರರ ಹಿಡಿತದಲ್ಲಿರುವ ವಿದ್ಯಾಹೀನ ಒಕ್ಕಲುಗಳು ಮತದಾನವನ್ನು ಸ್ವಾತಂತ್ರ್ಯದಿಂದ ಉಪಯೋಗಿಸುವುದು ಅಸಾಧ್ಯವೆಂಬ ಮಾತನ್ನು ನಾವು ಪೂರ್ಣ ಜಲ್ಲಗಳೆಯುವುದಿಲ್ಲವಾದರೂ ಇಂದಿನ ಗುಪ್ತ ಮತದಾನ ಪದ್ಧತಿ ಈ ಬಗೆಯ ಜನರಿಗೂ ಸಾಕಷ್ಟು ಸ್ವಾತಂತ್ರ್ಯದಿಂದ ವರ್ತಿಸುವ ಅನುಕೂಲತೆ ಕಲಿಡುತ್ತಿದೆಯೆಂದು ಈ ಬಾರಿಯ ಅನುಭವ ಹೇಳುತ್ತಿದೆಯಷ್ಟೆ.

ರಾಜಕೀಯ ಸ್ವಾತಂತ್ರ್ಯಪ್ರಾಪ್ತಿಯ ನಿಜವಾದ ಅರ್ಥವು ನಮ್ಮ ಜನರೆಲ್ಲರಿಗೆ ನಿಜವಾಗಿಯೂ ಆದುದು ಈ ಚುನಾವಣೆಗಳಲ್ಲಿ ಎನ್ನಬಹುದು. ಇದು ನಮ್ಮ ಸ್ವರಾಜ್ಯದಲ್ಲಿ ನಾವು ಮುಂದೆ ಇಟ್ಟ ಮೊದಲನೆಯ ಹೆಜ್ಜೆ. ಮತದಾನಕ್ಕೆ ಬಂದ ಸಾರಾಸಾರಿ ಸ್ತ್ರೀಪುರುಷರ ನಿಜವಾದ ಹಿತ ಈ ದಾರಿಯಲ್ಲಿ ಮುಂದೆ ಸಾಧಿಸಲ್ಪಡುವಂತಾಗಲೆಂದು ಹಾರೈಸೋಣ. ಇತರೆಡೆಗಳಲ್ಲಿ ಇಂಥ ಜನರ ವಿಶ್ವಿಗಾಗಿ ರಕ್ಷಣಾಯ ಕ್ರಾಂತಿಗಳಾಗಿವೆ, ನಮ್ಮಲ್ಲಿ ಈ ಕಾರ್ಯ ಶಾಂತರೀತಿಯಿಂದ ಸಾಧಿಸಲ್ಪಡುವಂತಾಗಲಿ. ಇದಕ್ಕೆ ಮೂಲ ಸಾಧನವೆನ್ನಿಸುವ ವಯಸ್ಕರ ಮತದಾನ ಪದ್ಧತಿ ಪ್ರಜೆಗಳ ಪವಿತ್ರ ಹಕ್ಕೆಂದು ಚೆನ್ನಾಗಿ ರಕ್ಷಿಸೋಣವೆಂದು ಹುರಿ ಹೇಳಬೇಕಾಗಿದೆ.

—ಹಿ ರಾ. ಮಲ್ಯ.

ವಿಶ್ವಾಸ ಹುಟ್ಟಿಸುವ ಅಂಕೆ ಸಂಖ್ಯೆಗಳು

ತಾರೀಕು 30 12-1950 ಕ್ಕೆ ಪಡೆಸಿದ ವಿಮಾಗಣನೆ

(1947ರಿಂದ 1950ರ ವರೆಗೆ)

ಚಾಲ್ತಿ ವ್ಯವಹಾರ	....	ರೂ. ಮೂರು ಕೋಟಿಗೂ ಮಿಕ್ಕಿ.
ಜೀವ ನಿಧಿ	....	.... ರೂ. 61,91,192/-
ವಿಮಾಗಣನೆಯಲ್ಲಿ ಲಾಭಾಂಶ...		ರೂ. 5,66,000(ಏಕ್ಕಿ)ಗೂ ಹೆಚ್ಚು
ಘೋಷಿಸಿದ ಬೋನಸು	....	ಆಜೀವ ಮತ್ತು ಉಂಬಳ ವಿಮಾ ಪಾಲಿಸಿಗಳಿಗೆ ಸಾಲಿಯಾನ ಸಾವಿರಕ್ಕೆ ಆನುಕ್ರಮವಾಗಿ ರೂ 12/- ಮತ್ತು ರೂ. 9/-

ನಡುಗಾಲದ ಬೋನಸನ್ನೂ ಇವೇ ದರಗಳಲ್ಲಿ ಇಡಲಾಗಿದೆ.

* * * * * * * * * *

ದಿ ಕೆನರಾ ಮ್ಯೂಚುವಲ್ ಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ: 1935

THE CANARA MUTUAL Assurance Co., Ltd.

ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.

ಸ್ಥಾಪನೆಯಿಂದಲೂ ಎಲ್ಲ ವರ್ಷಗಳಿಗೂ ಬೋನಸು ಹಂಚಿದ ಕಂಪೆನಿ.



ಕಾನೂನು ಮತ್ತು ಸ್ವಾತಂತ್ರ್ಯ ರಕ್ಷಣೆ

ಇಂಗ್ಲೆಂಡಿನ ನ್ಯಾಯಾಧೀಶರಾದ ಸರ್ ಆರ್ಥರ್ ಡೆನ್ನಿಂಗರು ೧೯೪೯ರಲ್ಲಿ ಮಾಡಿದ ಒಳ್ಳೆ ಉಪನ್ಯಾಸಗಳ ಸಾರಸಂಗ್ರಹವನ್ನಿಲ್ಲಿ ಕೊಟ್ಟಿದೆ ಕಾನೂನಿನ ಮೂಲ ತತ್ವಗಳನ್ನು ತಿಳಿದುಕೊಳ್ಳಲವನು ಉತ್ತಮ ಪೌರನಾಗಲಾರನು. ಉತ್ತಮ ಪೌರರಿಂದ ಮಾತ್ರ ರಾಷ್ಟ್ರದ ಏಳಿಗೆ ಸಾಧ್ಯ. ಕಾನೂನು ಸಾಮಾನ್ಯರಿಗೆ ದಕ್ಕಲಿ ವಕೀಲರಿಗೆ ಮಾತ್ರ ಸಾಧ್ಯವಾದ ಅಸ್ತ್ರವಾಗಬಾರದು, ಆಗ ಸಮಾಜದಲ್ಲಿ ಅನೀತಿ ಹೆಚ್ಚುತ್ತದೆ. ಸಾರ್ವಜನಿಕರ ಹಿತಕ್ಕಾಗಿ ನಿರ್ಮಿತವಾದ ಕಾನೂನು ಸರ್ವಸಾಮಾನ್ಯರಿಗೂ ನಿಲುಕುವಂತಿರಬೇಕು. ಆಗ ತಾನೆ ಅದಕ್ಕೆ ಸಾರ್ಥಕತೆ ಲಭಿಸುತ್ತದೆ. ಸರ್ ಡೆನ್ನಿಂಗರು ಸಾಮಾನ್ಯರಿಗೂ ಸುಲಭವಾಗಿ ತಿಳಿಯುವಂತೆ ಅದನ್ನು ಅಲ್ಲಿ ವಿವರಿಸಿದ್ದಾರೆ.

ವ್ಯಕ್ತಿ ಸ್ವಾತಂತ್ರ್ಯ

ಯಾವ ರಾಷ್ಟ್ರದಲ್ಲಿ ವ್ಯಕ್ತಿಸ್ವಾತಂತ್ರ್ಯಕ್ಕೆ ಮನ್ನಣೆ ಇರದೋ ಅಲ್ಲಿ ಕಾನೂನುಬದ್ಧನಾದ ಪ್ರತಿಯೊಬ್ಬ ಪೌರನೂ ತನಗೆಇಷ್ಟಬಂದಂತೆ ಯೋಚಿಸಬಹುದು, ತನಗೆ ಇಷ್ಟಬಂದಂತೆ ಮಾತಾಡಬಹುದು, ಇತರರಿಂದ ತಡೆಯಿಲ್ಲದೆ ನ್ಯಾಯುಬದ್ಧತೆಯಿಂದ ಎಲ್ಲಿ ಬೇಕಾದರೂ ಹೋಗಿ ಬರಬಹುದು. ಆದರೆ ಈ ಸ್ವಾತಂತ್ರ್ಯದ ಮರೆಯಲ್ಲಿ ಕಳ್ಳ ಅಥವಾ ಕೊಲೆಪಾತಕ ಉತ್ತಮರನ್ನು ಹಿಂಸಿಸಲು ಅವಕಾಶವಿರಬಾರದು. ಅಂಥ ಹಿಂಸಕರನ್ನು ಶಿಕ್ಷಿಸುವ ಶಕ್ತಿಯನ್ನು ಸಮಾಜ ಪಡೆದಿರಬೇಕು. ಆದರೆ ಪೋಲೀಸಿನವನು ಕಾರಣ ಹೇಳದೆ ಯಾವನನ್ನಾದರು ಸರಿಯೆ ಬಂಧಿಸಿ ಸೆರೆಗೆ ಕಳುಹಿಸಕೂಡದು. ಸ್ವಲ್ಪ ನೆಪದಿಂದಲೇ ಅಥವಾ ಅದೂ ಇಲ್ಲದೆಯೆ ಅವನ ಮನೆಯನ್ನು ವಹ್ತು ಅಸ್ತಿಪಾಸ್ತಿಗಳನ್ನು ಶೋಧಿಸಕೂಡದು. ತಾವು ತಪ್ಪಿತಸ್ಥರೆಂದು ಒಪ್ಪಿಕೊಳ್ಳುವಂತೆ ಇತರರನ್ನು ಒತ್ತಾಯಮಾಡಕೂಡದು. ಹೀಗೆ ದುರುಪಯೋಗಪಡಿಸಿಕೊಂಡ ಅಧಿಕಾರಕ್ಕಿಂತ ಬೇರೆ ದಬ್ಬಾಳಿಕೆಯಿಲ್ಲ ಸಮಾಜದ ಹಿತಕ್ಕೆ ಭಂಗ ಬರದಂತೆ ಅತ್ಯ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳುವುದು ಪ್ರಯೋಜ್ಯ ವ್ಯಕ್ತಿಯ ಮೂಲಭೂತಹಕ್ಕು.

ಹಿಂದೆ ಇಂಗ್ಲೆಂಡಿನಲ್ಲಿ ನ್ಯಾಯಾಂಗ ಕಾರ್ಯಾಂಗಕ್ಕೆ ಅಧಿನವಾಗಿದ್ದಾಗ ವ್ಯಕ್ತಿ ಸ್ವಾತಂತ್ರ್ಯವೇ ಇರಲಿಲ್ಲ. ೧೬೭೦ರಿಂದೀಚೆಗೆ ಪ್ರತಿಯೊಬ್ಬ ವ್ಯಕ್ತಿಯೂ ಅವನು ಯಾವ ಬಣ್ಣದವನೇ ಆಗಿರಲಿ, ಯಾವ ರಾಜಕೀಯ ಪಂಗಡಕ್ಕೇ ಸೇರಿರಲಿ ಹೇಬಿಯಸ್ ಕಾರ್ಪಸ್ ಎಂಬ ಕಾನೂನಿನ ಆಶ್ರಯದಲ್ಲಿ ರಕ್ಷಣೆ ಪಡೆಯುತ್ತಿದ್ದಾನೆ. ಈ ಕಾನೂನಿನ ಪ್ರಕಾರ ನ್ಯಾಯಾಸ್ಥಾನದ ತೀರ್ಪಿಲ್ಲದೆ ಅಥವಾ ನ್ಯಾಯಾಸ್ಥಾನದ ಮುಂದೆ ವಿಚಾರಣೆ ನಡೆಯುತ್ತಿರುವಾಗ ಯಾರನ್ನೂ ಬಂಧಿಸಕೂಡದು. ಹಾಗೆ ಅಧಿಕಾರಿಗಳು ಇತರರನ್ನು ಬಂಧಿಸುವುದಾದರೆ ಅವನಾತನೇ, ಅವನ ವಕೀಲನಾಗಿ ಇತರರಾರಾದರೂ ಹೈಕೋರ್ಟಿಗೆ ಅರ್ಜಿ ಹಾಕಬಹುದು. ಆಗ ಹೈಕೋರ್ಟು ಕೂಡಲೆ ವಿಚಾರಣೆ ನಡೆಸಿ ಅವನ ಬಂಧನ ಅಕ್ರಮವಾದುದೆಂದು ತೀರ್ಮಾನಿಸಿದರೆ ಅವನನ್ನು ಬಿಡುಗಡೆಮಾಡುತ್ತದೆ ಅಷ್ಟೇ ಅಲ್ಲ; ಈ ಕಾನೂನಿನ ಪ್ರಕಾರ ಅಪರಾಧಿಯನ್ನು ವಿಚಾರಣೆ ಇಲ್ಲದೆ ಸೆರೆಯಲ್ಲಿಡಕೂಡದು. ಪೋಲೀಸಿನವರು ಅವನನ್ನು ೨೪ ಗಂಟೆಯೊಳಗಾಗಿ ನ್ಯಾಯಾಧಿಪತಿಯ ಮುಂದೆ ಹಾಜರುಪಡಿಸಬೇಕು. ಅವನನ್ನು ಜಾಮೀನಿನ ಮೇಲೆ ಬಿಡುವುದೇ ಅಥವಾ ಮುಂದೆಯೂ ಸೆರೆಯಲ್ಲಿಡುವುದೇ ಎಂಬುದನ್ನು ನ್ಯಾಯಾಧಿಪತಿ ತೀರ್ಮಾನಿಸುತ್ತಾನೆ.

ಈ ಕಾನೂನಿಗೆ ಕೆಲವು ವಿನಾಯಿತಿಗಳೂ ಇವೆ. ದೇಶದಲ್ಲಿ ಯುದ್ಧದ ಪರಿಸ್ಥಿತಿ ಒದಗಿದಾಗ ಪಂಚಮದಳ (ಗುಪ್ತವಿಶೇಷ ಧಿಗಳು) ದವರನ್ನು ಅನಿವಾರ್ಯವಾಗಿ ಬಂಧಿಸಬೇಕಾಗುತ್ತದೆ. ಒಬ್ಬ ವ್ಯಕ್ತಿ ಅಪರಾಧ ಮಾಡಿದ್ದಿರಲೂ ಅವನ ವಿಷಯವಾಗಿ ಅನುಮಾನ ತೋರಿದರೆ ಸಾಕ್ಕು ಅವನನ್ನು ಬಂಧಿಸಬಹುದು. ಅಪರಾಧ ನಡೆಯುವ ತನಕ ಕಾಯಬೇಕಾಗಿಲ್ಲ. ಸೇತುವೆಯನ್ನು ಉಡುಳಿಸುವುದು, ರೈಲ್ ಇಂಜಿನ್‌ಗಳನ್ನು ಕೇಳುವುದು, ಯುದ್ಧರಹಸ್ಯಗಳನ್ನು ಶತ್ರುಪಕ್ಷದವರಿಗೆ ತಿಳಿಸುವುದು ಇವೇ ಮೊದಲಾದುವು ಪಂಚಮ ದಳದವರ ಕಾರ್ಯಕಲಾಪಗಳು. ಆದರೆ ಈ ವಿನಾಶಕಾರ್ಯಗಳು ಜರಗುವ ತನಕ ಕೈಕಟ್ಟಿಕೊಂಡು ಕುಳಿತರೆ ದೇಶಕ್ಕೇ ನಷ್ಟ. ಇಂಥವುಗಳನ್ನು ಮೊಳೆಯಲ್ಲಿಯೇ ಮೊಟಕಬೇಕು. ಈ ಅಧಿಕಾರ ಕೇವಲ ತಾತ್ಕಾಲಿಕವಾದದ್ದು.

ವ್ಯಕ್ತಿಸ್ವಾತಂತ್ರ್ಯ ಉಳಿದಿರಬೇಕಾದರೆ ಕಾರ್ಯಾಂಗವೂ ಕಾನೂನಿಗೆ ವಿಧೇಯವಾಗಿರಬೇಕು. ಪ್ರಜೆಗಳಿಗೂ ಅಧಿಕಾರಿಗಳಿಗೂ ನಡುವೆ ನ್ಯಾಯಾಧಿಪತಿಗಳಿರಬೇಕು. ನ್ಯಾಯಾಧಿಪತಿಗಳು ಕಾರ್ಯಾಂಗದಿಂದ ಸ್ವತಂತ್ರರಾಗಿರಬೇಕು. ನಿರ್ಭಯವಾಗಿ ನಿಸ್ಪಕ್ಷಪಾತವಾಗಿ ಅವರು ಪ್ರತಿಯೊಬ್ಬ ಪ್ರಜೆಗೂ ನ್ಯಾಯವನ್ನು ದೊರಕಿಸಕೊಡಬೇಕು

ಪೋಲೀಸಿನವರ ಅಧಿಕಾರವ್ಯಾಪ್ತಿ

ಒಂದು ದೇಶದ ಜನ ಸ್ವಾತಂತ್ರ್ಯವನ್ನು ಅನುಭವಿಸಬೇಕಾದರೆ ಪೋಲೀಸಿನವರ ಅಧಿಕಾರಕ್ಕೆ ಲಗಾಮಿರಬೇಕು. ಸಮಾಜದ ರಕ್ಷಣೆಗಾಗಿ ಅಧಿಕಾರ ಎಷ್ಟು ಅವಶ್ಯಕವೋ ಅಷ್ಟು ಮಾತ್ರ ಇರಬೇಕು. ಕಾನೂನು ಭಂಗಮಾಡುವ ಅಪರಾಧಿಗಳನ್ನು ಬಂಧಿಸಬೇಕು ನಿಜ ಆದರೆ ಕೇವಲ ಅನುಮಾನದಿಂದಲೆ ಇತರರನ್ನು ಬಂಧಿಸಕೂಡದು.

೧೭೫೫ರ ತನಕ ಇಂಗ್ಲೆಂಡಿನಲ್ಲಿಯ ಪೋಲೀಸು ದಳದ ವ್ಯವಸ್ಥೆ ಇರಲಿಲ್ಲ. ಅದಕ್ಕೆ ಮುಂಚೆ ಪ್ರತಿಯೊಬ್ಬ ಪ್ರಜೆಯೂ ಶಾಂತತೆಯನ್ನು ಕಾಪಾಡಬೇಕಾಗಿತ್ತು. ಯಾರಾದರು ಸರಿಯೆ ಮತ್ತೊಬ್ಬ ಅಪರಾಧಿಯೆಂದು ಕಂಡಕೂಡಲೆ ಅವನನ್ನು ಬಂಧಿಸಬಹುದಾಗಿತ್ತು. 'ಕಳ್ಳ' 'ಕಳ್ಳ' ಎಂಬ ಕೂಗು ಕೇಳಿಸಿದೊಡನೆ ಎಲ್ಲರೂ ತಮ್ಮ ಕೆಲಸವನ್ನು ಬಿಟ್ಟು ಅವನನ್ನು ಹಿಡಿಯಬೇಕಾಗಿತ್ತು. ಈಚೆಗಂತ. ಇಂಗ್ಲೆಂಡಿನ ಪೋಲೀಸು ಪಡೆ ಸುವ್ಯವಸ್ಥೆಗೊಂಡಿದೆ. ಶೀಲವಂತರೂ ಒಲವಂತರೂ ಕಲಿತವರೂ ಆದವರನ್ನು ಅರಿಸಿ ಸರಿಯಾದ ತರಬೇತಿಯನ್ನು ಕೊಡಲಾಗುತ್ತಿದೆ. ಅವರು ಸ್ವಾಮಿಕ್ಯಕ್ಕೆ ಕಲೆ ಬಾರದಂತ್ತಿರಬೇಕು. ಇಂಗ್ಲೆಂಡಿನ ಪೋಲೀಸಿನವನು ಖಾಕಿಬಟ್ಟೆಯನ್ನು ತೊಟ್ಟ ಪ್ರಜೆಯೇ ಹೊರತು, ಅವನು ಹಿಂಸ್ರ ಜಂತುವಲ್ಲ, ಭೂತವಲ್ಲ, ಪಿಡುಗಲ್ಲ.

ತಮ್ಮ ಕರ್ತವ್ಯಪಾಲನೆಗೆ ಎಷ್ಟು ಅಧಿಕಾರ ಅವಶ್ಯವೋ ಅಷ್ಟನ್ನು ಮಾತ್ರ ಪೋಲೀಸಿನವರಿಗೆ ಕೊಡಬೇಕು. ಕಾನೂನಿನ ದೃಷ್ಟಿಯಲ್ಲಿ ಪ್ರಜೆಗೂ ಪೋಲೀಸಿನವನಿಗೂ ವ್ಯತ್ಯಾಸವಿಬಾರದು. ಪೋಲೀಸಿನವರು ತಮ್ಮ ಗಡಿಯನ್ನು ಅತಿಕ್ರಮಿಸದಂತೆ ನ್ಯಾಯಾಧಿಪತಿಗಳು ಎಚ್ಚರಿಕೆಯಿಂದ ನೋಡಿಕೊಳ್ಳಬೇಕಾಗುತ್ತದೆ. ಪೋಲೀಸಿನವನು ಅಕ್ರಮವಾಗಿ ವರ್ತಿಸಿ ವ್ಯಕ್ತಿಯನ್ನು ಬಂಧಿಸಿದಾಗ, ಖಾಸಗಿ ವ್ಯಕ್ತಿ ಬಂಧಿಸಿದ್ದರೆ ಅವನ ಮೇಲೆ ಯಾವ ಕ್ರಮವನ್ನು ಜರುಗಿಸಬಹುದೋ ಅದೇ ಕ್ರಮವನ್ನು ಪೋಲೀಸಿನವನ ಮೇಲೂ ಜರುಗಿಸಬಹುದು. ಅವಶ್ಯಕವಾದರೆ ಅಕ್ರಮವಾದ ಬಂಧನವನ್ನು ಬಲಪ್ರಯೋಗದಿಂದ ವಿರೋಧಿಸಬಹುದು. ಪ್ರಯಾಣಿಕನೊಬ್ಬ ರೈಲಿನಲ್ಲಿ ದುಡ್ಡು ಕೊಡದೆ ಪ್ರಯಾಣ ಮಾಡುತ್ತಾನೆನ್ನಿ. ಟಿಕೆಟ್ ಪರೀಕ್ಷಕನಾಗಲಿ ಪೋಲೀಸಿನವನಾಗಲಿ ಅವನನ್ನು ಬಂಧಿಸಲು ಯತ್ನಿಸಿದಾಗ, ಅವನು ತನ್ನ ಪೆಸರು ವಿಳಾಸಗಳನ್ನು ಕೊಡಲೊಪ್ಪಿದರೆ ಬಂಧಿಸಕೂಡದು. ಹಾಗೂ ಬಂಧಿಸದೆ ಪ್ರಯಾಣಿಕ ಅವರನ್ನು ನೋಡಿಕೊಳುವ, ಅಥವ ಅಕ್ರಮಬಂಧನಕ್ಕಾಗಿ ನಷ್ಟ ಮೊಕದ್ದಮೆ ಹೂಡಬಹುದು. ಪ್ರತಿಯೊಬ್ಬನೂ ಒಲಸ್ಯಯೋಗದಿಂದಾದರೂ ಅನ್ಯಾಯಬಂಧನವನ್ನು ತಡೆಯಬೇಕೆಂಬುದೇ ವ್ಯಕ್ತಿಸ್ವಾತಂತ್ರ್ಯದ ಮೂಲಮಂತ್ರ. ಆದರೆ ಪೌರರು ಕ್ರಮಬದ್ಧವಾದ ಅಧಿಕಾರವನ್ನು ವಿರೋಧಿಸಬೇಕೆಂಬುದು ನ್ಯಾಯಾಧೀಶರ ಉದ್ದೇಶವಲ್ಲ

ಬಂಧನದಲ್ಲಿದ್ದಾಗ ಅವಮಿತನನ್ನು ಪೋಲೀಸಿನವರು ಒಹುವಾಗಿ ಹಿಂಸಿಸುವುದುಂಟು. ತಪ್ಪನ್ನು ಒಪ್ಪಿಕೊಳ್ಳುವಂತೆ ಮಾಡುವುದೇ ಅವರಿಂದೆಯ ಉದ್ದೇಶ ಇಂತಹ ಒತ್ತಾಯಪೂರ್ವಕವಾದ ಸಮ್ಮತಿಯಿಂದ ಎಷ್ಟೆಷ್ಟೋ ಅನ್ಯಾಯಗಳು ನಡೆಯುತ್ತಿವೆ ಇಂಗ್ಲೆಂಡಿನಲ್ಲಿ ಇಂಥ ಅನ್ಯಾಯಗಳನ್ನು ತಡೆಯಲೆಂದೇ ಅಲ್ಲಿಯ ನ್ಯಾಯಾಧೀಶರು ಪೋಲೀಸಿನವರು ಆರೋಪಿಯ ಮೇಲೆ ಪ್ರಯೋಗಿಸಬಹುದಾದ ಬಲಪ್ರಯೋಗದ ಮಿತಿಯನ್ನು ನಿರ್ಧರಿಸಿದ್ದಾರೆ. ಅದರ ಪ್ರಕಾರ ಆರೋಪಿಯ ಮೇಲೆ ಪೋಲೀಸಿನವನು ಪ್ರಯೋಗಿಸಬಹುದಾದ ಬಲಪ್ರಯೋಗ ಅವನು ಮಾಡಿದ ಅಪರಾಧಕ್ಕೆ ಅನುಗುಣವಾಗಿರಬೇಕು. ಅಪರಾಧಿಯನ್ನು ಹಿಡಿಯಲು ಅಥವಾ ಅವನು ಪರಾರಿಯಾಗದಂತೆ ತಡೆಯಲು ಅವಶ್ಯಕವಾದಷ್ಟು ಬಲಪ್ರಯೋಗ ಮಾಡಬಹುದು. ಆದರೆ ಅಪರಾಧಿಯನ್ನು ಕೊಲ್ಲಲು ಪೋಲೀಸಿನವನಿಗೆ ಅಧಿಕಾರವಿಲ್ಲ. ಅಪರಾಧಿಯನ್ನು ಹಿಡಿಯಲು ಅವನ ಮೇಲೆ ಗುಂಡು ಹಾರಿಸಬಹುದಾದರೂ ಅವನು ಸಾಯುವಂತೆ ಗುಂಡು ಹಾರಿಸಕೂಡದು. ಅಪರಾಧಿಯನ್ನು ಹಿಡಿಯಲು ಅವನ ಮೇಲೆ ಗುಂಡು ಹಾರಿಸಬೇಕಾದರೆ ಅವನು ಮಾಡಿದ ಅಪರಾಧ ಕೊಲೆಯಾಗಿರಬೇಕು ಅಥವಾ ಕೊಲೆಯಷ್ಟೇ ಘೋರವಾದ ಅಪರಾಧವಾಗಿರಬೇಕು. ಕಳ್ಳತನ ಮಾಡಿದವನ ಮೇಲೆ ಗುಂಡು ಹಾರಿಸಕೂಡದು. ಅಪರಾಧಿಯನ್ನು ಹಿಡಿಯಲು ಅವನ ಮೇಲೆ ಗುಂಡು ಹಾರಿಸಬೇಕಾದರೆ ಅವನು ಮಾಡಿದ ಅಪರಾಧ ಕೊಲೆಯಾಗಿರಬೇಕು ಅಥವಾ ಕೊಲೆಯಷ್ಟೇ ಘೋರವಾದ ಅಪರಾಧವಾಗಿರಬೇಕು. ಕಳ್ಳತನ ಮಾಡಿದವನ ಮೇಲೆ ಗುಂಡು ಹಾರಿಸಕೂಡದು.

ರಾಂಡುರವರ ZANDU'S

ಕೇಸರಿ ಜೀವನ KESARI JIVAN

ವನ್ನು ಉಪಯೋಗಿಸಲು ಒತ್ತಾಯಿಸಿರಿ.

ಕೆಮ್ಮು, ನೆಗಡಿ, ಆಸ್ತಮ, ಧ್ವನಿ ಒಡೆಯುವಿಕೆ ಮೊದಲಾದುವುಗಳಿಗೆ ಅತ್ಯುತ್ತಮ ಔಷಧಿ.

ಕೇಸರಿ ಜೀವನವು ತಾರುಣ್ಯವನ್ನೂ, ನವಚೈತನ್ಯವನ್ನೂ ಉಂಟುಮಾಡಿ ದೇಹದ ಅಂಗಾಂಗಗಳನ್ನೂ ಪುಷ್ಟಿಯಾಗಿ ಮಾಡಬಲ್ಲುದು ಮೆದುಳಿನ ನಿತ್ರಾಣವಿರುವ ಅಧ್ಯಾಪಕರಿಗೂ, ವಿದ್ಯಾರ್ಥಿಗಳಿಗೂ, ವಕೀಲರಿಗೂ, ಜಡ್ಡರಿಗೂ, ಹೆಚ್ಚಿಗೆ ಸರ್ವರಿಗೂ ಉತ್ತಮ ಪರಿಣಾಮಕಾರಿ ಔಷಧ

ಕೇಸರಿ ಜೀವನ ದೊರಕುವ ಸ್ಥಳಗಳು:-

1. ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್‌ಸ್ಟಿಟ್ಯೂಟ್, ಲಿ, ಉಡುಪಿ,
2. ವಿ. ವಿ. ಶೆಣೈ & ಕಮಿಸ್ಸ್, ಕಾರ್ಕಳ, 3. ಶಾ ಕಂಪೆನಿ, ಹಂಪನಕಟ್ಟೆ, ಮಂಗಳೂರು ಅಥವಾ ಕೆಳಗಿನ ಸೋಲ್ ಏಜಂಟರಲ್ಲಿ:-

ZANDU

ದಾನೋದರ್ ಎಂಡ್ ಕೊ.
113 ನ್ಯಾಯಪ್ಪ ನಾಯಕನ್ ಸ್ಟ್ರೀಟ್,
ಪಿ. ಟಿ ಮದ್ರಾಸು.

ಉಡುಗೊರೆ

ನಮಗೆ ಯಾರಿಗಾದರೂ ಯಾವ ಸಂದರ್ಭದಲ್ಲಾದರೂ ಉಡುಗೊರೆಗಳನ್ನು ಕೊಡುವ ಸಂದರ್ಭಬಂದಾಗ-

ನೆನಪಿನಲ್ಲಿರಲಿ-

ಉತ್ತಮ ಪುಸ್ತಕಗಳೇ

ಉತ್ತಮ ಉಡುಗೊರೆಗಳು.

ಬೇಕಾದ ಪುಸ್ತಕಗಳಿಗೆ ಉಡುಪಿಯ ನವಭಾರತ ಪುಸ್ತಕ ಭಂಡಾರದಲ್ಲಿ ವಿಚಾರಿಸಿ.

For Protection and Provision

Consult

The New Guardian of India Life Insurance Co., Ltd.

Estd] Head office: MADRAS [1934

A Policy in this Progressive Life Office is good investment, its Agency is valuable business connection.

Applications for representation are invited from influential persons.

Please apply to:

The Branch Manager,
Diamond Buildings, Hampankatta,
MANGALORE, S. K.

ರಿಸ್ಸಿನ ಪೌರನೊಬ್ಬನನ್ನು ಶಿಕ್ಷೆಗೆ ಗುರಿಪಡಿಸಲಾಯಿತು. ಪ್ರೋಟೆಸ್ಟಿನವರ ಹಿಂಸೆಯನ್ನು ತಡೆಯಲಾರದೆ ಅವನು ತಪ್ಪನ್ನು ಒಪ್ಪಿಕೊಂಡನು. ಅವನಿಗೆ ಮರಣದಂಡನೆಯಾದ ಎರಡು ವರ್ಷಗಳ ನಂತರ ಅವಳ ಬಡುಕಿದ್ದಾಳೆಂಬುದು ಗೊತ್ತಾಯಿತು. ಅದರಿಂದಲೇ ಅಪರಾಧಿಗಳು ಸ್ವತಂತ್ರವಾಗಿ ಮತ್ತು ಸ್ವಯಂಪ್ರೇರಿತರಾಗಿ ವ್ಯಕ್ತಪಡಿಸಿದ ಸಮ್ಮತಿಯನ್ನು ಮಾತ್ರ ನ್ಯಾಯಾಧಿಪತಿಗಳು ಪರಿಗಣಿಸುತ್ತಾರೆ.

ಅಲೋಚಿಸಾ ಸ್ವಾತಂತ್ರ್ಯ

ವ್ಯಕ್ತಿಸ್ವಾತಂತ್ರ್ಯದಂತೆಯೆ ಅಲೋಚನಾ ಮತ್ತು ಮತೀಯ ಸ್ವಾತಂತ್ರ್ಯವೂ ಮುಖ್ಯವಾದುದು. ಯಾವ ಮತವನ್ನು ಒಪ್ಪಬೇಕು, ಯಾವ ತತ್ತ್ವವನ್ನು ಅಂಗೀಕರಿಸಬೇಕು, ಯಾವ ರಾಜಕೀಯ ಪಂಗಡವನ್ನು ಸೇರಬೇಕು ಎನ್ನುವ ವಿಷಯದಲ್ಲಿ ಒಬ್ಬ ಮತ್ತೊಬ್ಬನನ್ನು ಒತ್ತಾಯ ಪಡಿಸಕೂಡದು. ಪ್ರತಿಯೊಬ್ಬನೂ ತನ್ನ ಆತ್ಮಸಾಕ್ಷಿಗನುಗುಣವಾಗಿ ನಡೆಯಬೇಕು. ಸಮಾಜದ ಪ್ರಗತಿಗೆ, ರಾಷ್ಟ್ರದ ಹಿತಕ್ಕೆ ಅಪಾಯಕಾರಿಯಾಗಿರುವ ಅಭಿಪ್ರಾಯಗಳನ್ನು ತಡೆಯುವ ಅಧಿಕಾರ ಸರ್ಕಾರಕ್ಕಿರಬೇಕು. ಆದರೆ ಯಾವುದು ನ್ಯಾಯಬದ್ಧವಾದ ವಿಮರ್ಶೆ, ಯಾವುದು ರಾಷ್ಟ್ರ ದ್ರೋಹಕರವಾದ ವಿಚಾರ ಎಂಬುದು ತೀರ್ಮಾನವಾಗಬೇಕು ಸರ್ಕಾರ ನಡೆಸುವ ಪಕ್ಷಕ್ಕೆ ಸೇರದ ನ್ಯಾಯದರ್ಶಿಗಳಿಂದ ಮಾತ್ರ ಇಂತಹ ತೀರ್ಮಾನ ಸಾಧ್ಯ.

ಇತರರನ್ನು ನೊದಲು ಅಥವಾ ಅವ ಹೇಳನ ಮಾಡಲು ಯಾರಿಗೂ ಹಕ್ಕಿಲ್ಲ ಆದರೆ ಸರ್ವಜನಿಕ ಸಂಬಂಧದ ವಿಷಯಗಳನ್ನು ಸ್ವತಂತ್ರವಾಗಿ ಮಾಚ್ಚುಮರೆಯಿಲ್ಲದೆ ವಿಮರ್ಶಿಸುವ ಹಕ್ಕನ್ನು ಕಸಿದುಕೊಳ್ಳೂಡದು. ಜಗತ್ತಿಯೇ ಯಾರು ಯಾವ ದೇವರನ್ನಾದರೂ. ಪೂಜಿಸಬಹುದು. ಕಾನೂನಿನ ದೃಷ್ಟಿಯಲ್ಲಿ ಆಸ್ತಿಕರು ನಾಸ್ತಿಕರೆಲ್ಲ ಒಂದೇ ಆಗಿರಬೇಕು ಯಾರನ್ನ ಜೀಂ-ದರೂ ಉಪದೇಶದ ಮೂಲಕ ಒಲಿಸಿಕೊಳ್ಳಬಹುದೇ ಹೊರತು ಕಾನೂನಿನ ಮೂಲಕ ಒತ್ತಾಯಪಡಿಸಬಾರದು. ಒಬ್ಬ ವ್ಯಕ್ತಿ ಯಹೂದ್ಯನೆಂದಾಗಲಿ ಮಹೊಮ್ಮದೀಯ, ನೀಗ್ರೊ ಎಂದಾಗಲಿ ಅವರ ಹಕ್ಕುಗಳನ್ನು ಕುಂಠಿತಗೊಳಿಸುವುದೂ ಸರಿಯಲ್ಲ. ಕೂಡಲಿನ ಬಣ್ಣ ಮತ್ತು ತಟಿಯ ಗಾತ್ರಕ್ಕೆ ಅವರ ಹಕ್ಕುಗಳಿಗೂ ಸಂಬಂಧವನ್ನು ಗಂಟು ಹಾಕಬಾರದು.

ನ್ಯಾಯದರ್ಶಿ (ಜೂರಿ)ಗಳ ಸ್ಥಾನಮಾನಗಳು.

ನ್ಯಾಯ ಸ್ಥಾನಗಳು ಸರ್ಕಾರಕ್ಕಾಗಲಿ ಪೌರರಿಗೂ ನಡುವೆ ಇದ್ದು ಸರ್ಕಾರ ಪೌರರ ಸ್ವಾತಂತ್ರ್ಯಕ್ಕೆ ಧಕ್ಕೆ ತಂದ ಹಾಗೆ ನೋಡಿಕೊಳ್ಳಬೇಕಷ್ಟೆ. ಕೆಲವು ರಾಷ್ಟ್ರಗಳಲ್ಲಂತು ನ್ಯಾಯಾಂಗ ಕಾರ್ಯಾಂಗಕ್ಕೆ ಅಧೀನವಾಗಿರುತ್ತದೆ ಕಾನೂನು ರಾಜಕೀಯ ಪಕ್ಷಕ್ಕೆ ವಿಧೇಯವಾಗಿದ್ದು ನ್ಯಾಯಾಂಗ ಪಕ್ಷದ ನೀತಿಯನ್ನು ಜಾರಿಗೆ ತರುವ ಯಂತ್ರವಾಗಿದೆ.

ಇಂಗ್ಲೆಂಡಿನಲ್ಲಿ ನ್ಯಾಯಾಧೀಶರು ಸ್ವತಂತ್ರರು ನಿಜ. ಆದರೆ ಅವರೆಂದೂ ಕೊನೆಯ ತೀರ್ಪಲ್ಲ. ಯಾವನೋ ಒಬ್ಬ ವ್ಯಕ್ತಿ ಅಪರಾಧಿಯೆಂದು ನಿರ್ಣಯವಾಗಬೇಕಾದರೆ ಸಾಮಾನ್ಯ ಜನರಲ್ಲಿ ೧೨ ಮಂದಿಯಾದರೂ ಆ ನಿರ್ಣಯಕ್ಕೆ ಒಕ್ಕೊರಲಿನಿಂದ ಒಪ್ಪಿಗೆಯನ್ನು ಸೂಚಿಸಬೇಕು. ಈ ಸಂಪ್ರದಾಯ ಕ್ರಿಂ ವರ್ಷಗಳಿಂದ ಬಿಳೆದುಬಂದಿದೆ. ಸಾಮಾನ್ಯ ಜನತೆಯ ಪ್ರತಿನಿಧಿಗಳಂತಿರುವ ಈ ಹನ್ನೆರಡು ಮಂದಿಯನ್ನು ನ್ಯಾಯದರ್ಶಿ ಮಂಡಲಿ (ಜ್ಯೂರಿ) ಎಂದು ಕರೆಯುತ್ತಾರೆ. ಈ ಮಂಡಲಿಯ ವಿಷಯದಲ್ಲಿ ನ್ಯಾಯಾಧೀಶರಿಗೆ ವಿಶೇಷವಾದ ಗೌರವವಿದೆ. ಹಿಂದೆ ಈ ನ್ಯಾಯದರ್ಶಿಗಳು ಸಾಕ್ಷಿಗೆ ಅಥವಾ ಕಾನೂನಿಗೆ ವಿರುದ್ಧವಾಗಿ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರೆ ಜುಲ್ಮಾನೆಗೆ ಗುರಿಯಾಗುತ್ತಿದ್ದರು; ಇಲ್ಲವೆ ಸೆರೆಗೆ ಗುರಿಯಾಗುತ್ತಿದ್ದರು. ಈಗ ಅವರು ನ್ಯಾಯಾಧೀಶರಿಗೆ ವಿರೋಧವಾಗಿ ಅಭಿಪ್ರಾಯವನ್ನು ವ್ಯಕ್ತಪಡಿಸಿದರೂ ಅವರನ್ನು ಶಿಕ್ಷಿಸುವಂತಿಲ್ಲ. ಅವರು ಸಾಮಾನ್ಯ ಜನತೆಯ ಅಭಿಪ್ರಾಯವನ್ನು ಪ್ರತಿನಿಧಿಸುವವರಾದುದರಿಂದ ಶಾಸನಕರ್ತರೂ ನ್ಯಾಯಾಧೀಶರೂ ಅವರ ಅಭಿಪ್ರಾಯಕ್ಕೆ ತುರುಸ್ಕಾರ ಕೊಡಬೇಕು. ಕಾನೂನು ಸಾಮಾನ್ಯ ಜನತೆಗೆ ಸುಲಭವಾಗಿ ಅರ್ಥವಾಗುವಂತೆ ಈ ಮಂಡಲಿ ನೋಡಿಕೊಳ್ಳಬೇಕಾಗಿದೆ.

ಇದೆಂದ ಈ ಮಂಡಲಿ ಯಾವಾಗಲೂ ನ್ಯಾಯಾಧೀಶರ ಅಭಿಪ್ರಾಯವನ್ನು ವಿರೋಧಿಸುತ್ತದೆಂದು ತಿಳಿಯಬಾರದು. ನ್ಯಾಯಾಧೀಶರು ಸಂಪ್ರದಾಯ ನ್ಯಾಯ (ಕಾಮನ್ ಲಾ)ವನ್ನು ನ್ಯಾಯದರ್ಶಿಗಳಿಗೆ ವಿವರಿಸುತ್ತಾರೆ. ಈ ವಿವರಣೆಯ ಬೆಳಕಿನಲ್ಲಿ ಆ ನ್ಯಾಯದರ್ಶಿಗಳು ವೊಕದ್ದಮೆಯ ವಾಸ್ತವಾಂಶಗಳನ್ನು ಪರಿಶೀಲಿಸಿ ತಮ್ಮ ಅಭಿಪ್ರಾಯವನ್ನು ಕೊಡುತ್ತಾರೆ. ನ್ಯಾಯಾಧೀಶರು ಆ ಅಭಿಪ್ರಾಯಕ್ಕೆ ಮನ್ನಣೆಕೊಡುತ್ತಾರೆ. ಅವರಲ್ಲಿ ಪರಸ್ಪರ ವಿಶ್ವಾಸವಿರುವುದರಿಂದಲೆ ಈ ವ್ಯವಸ್ಥೆ ಯಶಸ್ವಿಯಾಗಿ ನಡೆಯುತ್ತಿದೆ. ಹೀಗಾಗಿ ಅಪರಾಧಿಗೂ ಅಪರಾಧವನ್ನು ಹೇರುವ ಸಮಾಜಕ್ಕೂ ಸರಿಯಾದ ನ್ಯಾಯ ಸಲ್ಲುತ್ತದೆ.

ಈ ವ್ಯವಸ್ಥೆಯಂತು ನ್ಯಾಯದರ್ಶಿಗಳ ಪ್ರಾಮಾಣಿಕತೆಯನ್ನವಲಂಬಿಸಿದೆ. ಅವರು ಶೀಲವಂತರಾಗಿರಬೇಕು. ಅವರಲ್ಲಿ ವಕ್ಷಪಾತವಿರಬಾರದು. ಭಾವತೀರೇಕವಿರಬಾರದು. ಭಾವಾತೀರೇಕವೆಳ್ಳ ಜನಾಂಗದಲ್ಲಿ ಈ ವ್ಯವಸ್ಥೆ ಜೆನ್ಮಾಗಿ ಫಲಿಯಲಾರದು.

ಇಂಗ್ಲೆಂಡಿನಲ್ಲಿ ಒಬ್ಬ ವ್ಯಕ್ತಿ ಅಪರಾಧಿ ಎಂದು ತೀರ್ಮಾನವಾಗುವ ತನಕ ಅವನನ್ನು ಏನೂ ತಿಳಿಯದವನೆಂತಲೇ ಭಾವಿಸುತ್ತಾರೆ. ಹಿಂದೆ ಅದೇ ವ್ಯಕ್ತಿಗೆ ಜೈಲಾಗಿತ್ತು, ಅವನು ಮಹಾಪರಾಧಿಯಾಗಿದ್ದ ಎಂಬೀ ವಿಷಯಗಳನ್ನು ಸರ್ಕಾರದ ವಕೀಲ ನ್ಯಾಯದರ್ಶಿಗಳ ಮುಂದೆ ಹೇಳುವುದಿಲ್ಲ. ವಿಚಾರಣೆಯ ಕಾಲದಲ್ಲಿ ಆ ವಿಚಾರಣೆಗೆ ಎಷ್ಟು ಸಂಬಂಧಿಸಿದೆಯೋ ಸಾಕ್ಷಿಗಳಿಗೆ ಎಷ್ಟು ತಿಳಿದಿದೆಯೋ ಅಷ್ಟನ್ನು ಮಾತ್ರ ನ್ಯಾಯದರ್ಶಿಗಳ ಮುಂದೆ ಇಡಬೇಕಾಗುತ್ತದೆ. ಆದರೆ ಫ್ರಾನ್ಸಿನಲ್ಲಿನ ವಿಧಾನವೇ ಬೇರೆ. ಅಲ್ಲಿ ಅಪರಾಧಿಯ ಹಿಂದಿನ ಗುಣಾವಗುಣಗಳನ್ನೆಲ್ಲ ಪರಿಶೀಲನೆಗೆ ತೆಗೆದುಕೊಳ್ಳುತ್ತಾರೆ. ಈ ವ್ಯವಸ್ಥೆ ಎಲ್ಲ ದೇಶಗಳಲ್ಲಿಯು ಯಶಸ್ವಿಯಾಗಿ ನ

[ಉಳಿದ ಪುಟ ನೋಡಿರಿ.]

ಪ್ರಜಾಪ್ರಭುತ್ವದ ಸುದಿನದಲ್ಲಿ

ನಿಮಗೆಲ್ಲರಿಗೂ ನಮ್ಮ ಹಾರ್ದಿಕ ಶುಭಾಶಯಗಳು

ಪ್ರಜಾಪ್ರಭುತ್ವದ ಕನಸೇನೋ ನೆನಸಾಯಿತು. ಆದರೆ ಯಾವ ಸುಖಗಳಿಂದೇನು ಫಲ—ದೇಹಸುಖವೊಂದಿಲ್ಲದಿದ್ದರೆ?

ಆದುದರಿಂದ ಮೊದಲು ದೇಹಸುಖವನ್ನು ಕಾಪಾಡಿಕೊಳ್ಳಿರಿ.

ಸುಖ ನಿವಾಸ

ನಿಮ್ಮ ಸುಖ—ಸೌಕರ್ಯಕ್ಕಾಗಿಯೆ ಇದೆ

ಉಡುಪಿಗೆ ಬಂದಾಗ-ಉಡುಪಿಯಲ್ಲಿರುವಾಗ-ತಾಲೂಕುಕಚೇರಿ ಬಳಿ ಇರುವ ಸುಖನಿವಾಸವನ್ನು ಮರೆಯದಿರಿ.

ಸುಖಕರವಾದ ಊಟ–ಉಪಾಹಾರ–ವಸತಿಗಳಿಗಾಗಿ!

SUKHA NIVAS

BOARDING & LODGING

Near Taluk Office: UDIPI. Prop: *H. Venkatesh Nayak*

Kodialbail, MANGALORE. Prop: *H. Vasudeva Nayak.*

ಪ್ರಬುದ್ಧ ಬಂದರು ಮಲ್ಪೆಯೇ ಯಾಕಾಗಬೇಕು?

ನೈಸರ್ಗಿಕ ಸೌಕರ್ಯ ಇನ್ನೆಲ್ಲಿಯೂ ಇಲ್ಲ.

- ಬಂದರನ್ನು ಮಲ್ಪೆಯಲ್ಲಿ ಕಟ್ಟಬೇಕು
- ಮಲ್ಪೆಯಿಂದ ಭದ್ರಾವತಿಗೆ ರೈಲುದಾರಿ ನಿರ್ಮಿಸಬೇಕು
- ಮಂಗಳೂರಿಂದ ಮಲ್ಪೆ ತನಕ ರೈಲನ್ನು ಮುಂದರಿಸಬೇಕು

ಆದರೆ ಬೆಕ್ಕಿನ ಕೊರಳಿಗೆ ಗಂಟೆ ಯಾರು ಕಟ್ಟುವುದು?

ಲೇಖಕರು: ಶ್ರೀ ಟಿ. ಎ. ಪೈ, ಎಂ. ಎಲ್. ಎ (ಜುನಾಯಿತ)

ಉಡುಪಿಯ ಪಶ್ಚಿಮಕ್ಕೆ ೨–೪ ಮೈಲು ದೂರದಲ್ಲಿರುವ ಮಲ್ಪೆ ಚಿಕ್ಕದೊಂದು ಬೆಸ್ತರ ಹಳ್ಳಿ. ಮರ್ಮಗೋವೆಯಿಂದ ೧೬೪ ಮೈಲು ದೂರದಲ್ಲಿ ಚಿಕ್ಕ ಹೊಳೆಯ ಅಳವೆ ಬಾಗಿಲಲ್ಲಿದೆ. ಮಲ್ಪೆಯು ಕಡಲ್ಕರೆಯಿಂದ ಒಂದು ಮೈಲು ದೂರದಲ್ಲಿ ಸಾಂತ ಮೇರೀ ದ್ವೀಪಗಳೆಂಬ ಶಿಲಾದ್ವೀಪಸ್ತೋಮಗಳು ಭದ್ರವಾಗಿ ಕಾವಲು ನಿಂತಿವೆ. ಈ ದ್ವೀಪ ಸ್ತೋಮಗಳನ್ನು ಒಂದಕ್ಕೊಂದು ನರಪಣಿಯ ಹಾಗೆ ಜೋಡಿಸಿ, ಆ ಮೇಲೆ ಈ ಇಡೀ ದ್ವೀಪಸ್ತೋಮಕ್ಕೆ ತೆಂಕಲು ಬಡಗಲಿನ ಕಾವಳಿಗೆ ಅಡ್ಡ ಗೋಡೆಯನ್ನು ಕಟ್ಟಿ ನಿಲ್ಲಿಸಿದರೆ ಪ್ರಶಸ್ತವಾದ ಹಿರಿಬಂದರನ್ನು ನಿರ್ಮಿಸಲಾಗುವುದೆಂದು ಸಮಿತಿಯು ಪ್ರಥಮ ನೋಟದಿಂದಲೇ ಕಂಡುಕೊಂಡಿತು. ಈ ಅಡ್ಡ ಗೋಡೆಗಳನ್ನು ಸಮುದ್ರವು ಅಳವಾಗಿಲ್ಲದ ಕಡೆಯಲ್ಲೇ ಕಟ್ಟಿದರೆ ಸಾಕು. ಏಕೆಂದರೆ ಆಳವಾದ ಕಡೆ ನಿಸರ್ಗವೇ ನಿಲ್ಲಿಸಿದ ಶಿಲಾದ್ವೀಪಗಳು ಅಡ್ಡ ಗೋಡೆಯ ಕೆಲಸ ಮಾಡುತ್ತವೆ. ನಡುವಿನ ಶಿಲಾದ್ವೀಪಕ್ಕೂ ಬಡಗಲಿನ ಒಂದು ದ್ವೀಪಕ್ಕೂ ಮಧ್ಯೆ ೨೫ ಅಡಿ ಆಳದ ನೀರು-ದಾರಿ (channel) ನೈಸರ್ಗಿಕವಾಗಿಯೇ ನಿರ್ಮಿತವಾದದ್ದಿದ್ದು ಅದರ ಮುಖಾಂತರ ಹಡಗುಗಳು ಒಳಗೆ ಪ್ರವೇಶಿಸಬಹುದು. ಆದರೂ ಮಲ್ಪೆ ಬಂದರಿನ ಸವಿಾಪದ ಸಮುದ್ರದ ನೀರಿನಡಿಯಲ್ಲಿ ಮಂಗಳೂರಿನಂತೆಯೇ ಶಿಲೆಗಳು ಇರಬಹುದೆಂಬ ಸಂದೇಹ ಸಮಿತಿಯವರನ್ನು ಕೂಡಲೇ ಅಡಿಮಣ್ಣಿನ ಸಂಶೋಧನೆಗೆ (sub-soil investigation) ಆರಂಭವಾಯಿತು. ಈ ಸಂಶೋಧನೆಯ ಪರಿಣಾಮವು ಸಮಿತಿಯವರಿಗೆ ಧಾರಾಳ ತೃಪ್ತಿಯನ್ನು ತಂದುಕೊಟ್ಟಿದೆ. ಬಂದರ್ದ ಕೊಯಿಗೆಯನ್ನು ಶೋಡಿವ ಸಂದರ್ಭ ಬಂದಾಗ ಎಲ್ಲಿಯೂ ಶಿಲೆ ಸಂಧಿಸುವ ಸಂಭವವಿಲ್ಲ. ಇಷ್ಟಲ್ಲದೆ ಮೊದಲೇಸೂಚಿಸಿದಂತೆ ಮಧ್ಯ ದ್ವೀಪ ಹಾಗೂ ಬಡಗಣ ದ್ವೀಪಗಳ ವಿಶಸ್ಥಿತ್ಯೆ ಇರುವ ನೈಸರ್ಗಿಕ ನೀರುದಾರಿಯು ಮರಳಿನ ಅಗೆತ (Dredging) ವನ್ನು ತೀರ ಸುಲಭಕರವಾಗಿ ಮಾಡುತ್ತದೆ.

ಆದುದರಿಂದ ಮಲ್ಪೆಯಲ್ಲಿ ಹಿರಿಬಂದರುಗಳು ಅವಶ್ಯಕವಾಗುವ ಎಲ್ಲ ಪರಿಸ್ಥಿತಿಗಳೂ ಕೂಡಿ ಬಂದಿವೆ ಎಂದರೂ ತಪ್ಪಾಗಲಾರದು.

ಮಲ್ಪೆಯ ಅನುಕೂಲತೆಗಳನ್ನು ತಜ್ಞರ ಸಮಿತಿಯು ಈ ಕೆಳಗೆ ಕಂಡಂತೆ ಕ್ರೋಢೀಕರಿಸಿದೆ:–

(೧) ಕಡಲ್ಕರೆಗೆ ಸವಾನಾಂತರವಾಗಿ ಒಂದು ಮೈಲು ದೂರದಲ್ಲಿ ನಿಂತಿರುವ ಶಿಲಾಸ್ತೋಮಗಳು ಬಂದರಿಗೆ ನಿಸರ್ಗ ಕೃಪಾಮೋಷಿತ ಕಾವಲುಗಾರರಂತೆ ನಿಂತಿರುವುವು. ಈ ದ್ವೀಪಗಳನ್ನೂ ಕಡಲ್ಕರೆಯನ್ನೂ ಜೋಡಿಸಲು ಅಡ್ಡ ಗೋಡೆ (Break waters)ಗಳನ್ನು ನಿರ್ಮಿಸುವ ಪ್ರಸಕ್ತಿ ಇರುವುದ ನಿಜವಾದರೂ ಆ ಕಲಸವು ಸಮುದ್ರದಲ್ಲಿ ದ್ವೀಪಗಳೇ ನಿಂತಿರುವುದರಿಂದ ಗೋಡೆ ಕಟ್ಟುವ ಕೆಲಸವು ಸುಲಭದಲ್ಲಿ ಆಗುತ್ತದೆ.

(೨) ಅಡಿಮಣ್ಣಿನ ಸಂಶೋಧನೆಯಿಂದ ಕಂಡುಬರುವುದೇನೆಂದರೆ ನೀರಿನಡಿಯಲ್ಲಿರುವ ಶಿಲೆಗಳನ್ನು ಸಂಧಿಸದೆಯೇ ಮರಳನ್ನು ಅಗೆಯಲು ಸಾಧ್ಯವೆಂಟು.

(೩) ಸಮುದ್ರದಿಂದ ಬಂದರಿನೊಳಗೆ ಬರುವ ಹೆಬ್ಬಾಗಿಲು ಪ್ರಶಸ್ತವಾಗಿದೆ.

(೪) ಬಂದರಿನ ಳಂಠ ಎಕರೆ ವಿಸ್ತೀರ್ಣವು ಬಲುದೊಡ್ಡ ಪ್ರಬುದ್ಧ ಬಂದರಿಗೂ ಸಾಲುವಷ್ಟಿದೆ.

(೫) ಕೇವಲ ಚಿಕ್ಕನದಿಯೊಂದು ಬಂದರನ ಹೃದಯದಲ್ಲಿ ಸಮುದ್ರದೊಡನೆ ಸಂಗಮಿಸುತ್ತಿರುವುದರಿಂದ ಇದನ್ನು ಹೆಚ್ಚುವೆಚ್ಚವಿಲ್ಲದೆ ಬೇರೆ ದಾರಿಯಾಗಿ ಕೊಂಡೊಯ್ಯಬಹುದು. ಹೀಗಿರುವುದರಿಂದ ಮಲ್ಪೆಯಲ್ಲಿ ವಾರಕ್ಕೆ ಆಗೆಯುವ [Drudging] ಸಮಸ್ಯೆ ಇಲ್ಲವೇ ಇಲ್ಲ.

(೬) ಬನ್ನಾಡಿಗೆ ಸಾಮೀಪ್ಯವಾಗಿರುವ ಮಲ್ಪೆಯ ಭೌಗೋಲಿಕ ಸನ್ನಿವೇಶವು ಅನುಕೂಲವಾಗಿದೆ. ಭದ್ರಾವತಿಯಿಂದ ಮಲ್ಪೆಗೆ ರೈಲು ಹಾಕುವುದು ಮಂಗಳೂರಿಗೆ ಹಾಕುವುದಕ್ಕಿಂತಲೂ ವ್ಯಯ ಕಡಿಮೆ.

(೭) ಬಂದರ ಕೆಲಸಕ್ಕೂ, ಹೊಸ ಉದ್ಯಮಗಳಿಗೂ ಬೇಕಾದಷ್ಟು ಜಾಲಿಕ್ಕಳ ಮಲ್ಪೆಯಲ್ಲಿ ಸಾವಿರಾರು ಎಕರೆಯಷ್ಟಿದೆ.

(೮) ಜಲವಿದ್ಯುಚ್ಛಕ್ತಿನಾಗರವಾದ ಜೋಗವು ಮಲ್ಪೆಗೆ ಕೇವಲ ೬೦ ಮೈಲು ದೂರದಲ್ಲಿರುತ್ತದೆ.

ಭಟ್ಕಳಕ್ಕಿಂತ ಮಲ್ಪೆಗೆ ೯೫ ಲಕ್ಷ ರೂಪಾಯಿ ಹೆಚ್ಚುವೆಚ್ಚದಲ್ಲಿ ರೈಲು ಹಾಕಿದೇ ಕೆಂಬುದಾಗಲೀ, ಮಲ್ಪೆಯು ಪ್ರಬುದ್ಧ ಬಂದರಾದರೆವಂಗಳೂರಿಗಿಂತ೩೭ ೦೦೦ ಟನ್ನು ಕಡಮೆ ಸರಕಿನ ಆಯಾತ ನಿರ್ಯಾತ ನಡೆಯುವುದಾಗಲೀ ಸಮಿತಿಯವರಿಗೆ ಯಾವ ತರದ ಅಂಜಿಕೆಯನ್ನೂ ಉಂಟ್ಮಾಡಲಿಲ್ಲ. ಮಲ್ಪೆಗಿರುವ ನೈಸರ್ಗಿಕ ಅನುಕೂಲತೆಗಳು ಈ ಕ್ಷುಲ್ಲಕ ಅನನುಕೂಲತೆಗಳನ್ನು ಮೆಟ್ಟಿ ನಿಲ್ಲುವಂತೆಯೂ ಸಮಿತಿಯು ಮಲ್ಪೆಯಲ್ಲಿಯೇ ಹಿರಿಬಂದರವನ್ನು ನಿರ್ಮಿಸಲಾಗತಕ್ಕದ್ದೆಂದೂ, ಅದಕ್ಕೊಸ್ಕರ ಆರಂಭದಲ್ಲಿ ೩೫೦ ಲಕ್ಷ ರೂಪಾಯಿಗಳನ್ನು ಸೆಗೆದಿಡಬೇಕೆಂದೂ ಶಿಫಾರಸು ಮಾಡಿದೆ

ಮಲ್ಪೆಯ ಬಗ್ಗೆ ವಿಶೇಷ ಮಾಹಿತಿ

(ಇಂದಿನಿಂದ ಮಲ್ಪೆಯು ಪ್ರಬುದ್ಧ ಬಂದರಾಗಿ ಬಿಡುತ್ತಿದ್ದರೆ ಅಖಿಲ ಭಾರತ ನಿರ್ಯಾತ ಸಾಗಣೆಯು ಈ ಕೆಳಗಿನಂತಿರುತ್ತಿತ್ತು.

	ಪ್ರಸ್ತುತ	೧೯೪೭	೧೯೫೦	೧೯೫೫
ಒಟ್ಟು ಟನ್ನೇ	೪೪೫,೦೦೦	೪೮ ೦೦೦	೧೮,೦೦೦	೩೦,೦೦೦
ಪಾಂಡಿಟನ್ನೇ	೨೫,೦೦೦	೨೦,೦೦೦	೨೫,೦೦೦	..
ಸ್ಟೀಮರ್‌ಟನ್ನೇ	೪೨೦,೦೦೦	೨೮,೦೦೦	೧೫,೦೦೦	೩೦,೦೦೦
	೪೪೫,೦೦೦	೪೮,೦೦೦	೪೦,೦೦೦	೩೦,೦೦೦
				+ ಪೆಟ್ರೋಲು

೧) ಸೈಸೂರಿಂದ ಬರುವಂಥಾದ್ದು
೨) ಭದ್ರಾವತಿ-ಮಲ್ಪೆ ರೈಲು ಹಾಕಿದ ಮೇಲೆ ಜೋಗದಿಂದ ಉತ್ಪತ್ತಿಯಾಗುವ ವಿದ್ಯುಚ್ಛಕ್ತಿಯಿಂದ ಸಣ್ಣ ಕೈಗಾರಿಕೆಗಳು ಉತ್ಪತ್ತಿ ಮಾಡಬಹುದಾದ ಸರಕುಗಳು
೩) ಬಂದರ್ ಕೆಲಸದ ಇತ್ಯಾದಿ ಸಾಮಗ್ರಿ

ಗರ್ಭಿಣಿ ಸ್ತ್ರೀಯರಿಗೆ ಕಂದಮ್ಮಗಳ ಆರೈಕೆಗಳ ಜೀವನದೆಗಳನ್ನೂ, ಜೋಗದ ವಿದ್ಯುಚ್ಛಕ್ತಿಯು ಸಹಾಯದಿಂದ ಹೊಸದಾಗಿ ಸ್ಥಾಪಿತವಾಗುವ ಉದ್ಯಮಗಳ ಉತ್ಪನ್ನವನ್ನೂ, ಅಷ್ಟಲ್ಲದೆ ಕೇಂದ್ರ ಸರಕಾರವು ಈಗಾಗಲೇ ಹೊರಡಿಸಿರುವ, ಹೆತ್ತಗಳ ನಿರ್ಮಾಣದ ಉದ್ಯಮಕ್ಕೆ ಉತ್ತೇಜನೆ ಕೊಡುವ ಮನ್ನಾಯಿಚನೆಯನ್ನು ಗಮನಿಸಿದರೆ ಮಲ್ಪೆಯಿಂದ ಹೊರ ಹೋಗುವ ಒಳ ಸಾಗುವ ಸರಕುಗಳ ಮೌಲ್ಯವು ಒಟ್ಟು ೮,೦೦,೦೦೦ ರೂಪಾಯಿಗಳಾಗಬಹುದು.

ಹಡಗು ನಿರ್ಮಾಣದ ಉದ್ಯಮದ ಕುರಿತು ಪ್ರಸ್ತಾಪಿಸುತ್ತ ಸಮಿತಿಯು ಮಲ್ಪೆ

— ಮಕ್ಕಳನ್ನು ಹಡೆಯುವುದು ಸಾಕು —

ಅಕಳೆ ಸ್ತ್ರೀಯರಿಗೆ **ಬರ್ಥ ಕಂಟ್ರೋಲ್** ರೋಗ ಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿರೋಗ, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧೧ ಗಳಿಗೆ ಮಧ್ಯಾಹ್ನ ೬ ೧೧ ಗಳಿಗೆ, ಸಂಜೆಗೆ ೧೧ ಗಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಪಟ್ಟುನಿರಂತರವಲ್ಲಿ ಸೇವಿಸಬೇಕು.

ಕಿಮ್ಮತ್ತು:—ಹರವೀಪಲ್ಲೆ ಖಡಕೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0 ಪೋಸ್ಟೇಜ ಹಾರ್ಜು ೧೫ ಆಣೆ.

ಹೂಲಕರು:—ಹಾಳಪ್ಪಾ ಫಕೀರಪ್ಪಾ ಹಾವಣಗೇರಿ

ಆಯುರ್ವೇದ ಔಷಧಾಲಯ ಗದಗ-ಸಿಟಿ.

ಏಜಂಟರು:—ಹುಬ್ಳಿ ಫಾರ್ಮಸಿ—ಹುಬ್ಳಿ, ಗದಗ್ ಬಾಗಲಕೋಟೆ ಧಾರವಾಡ ವಿಜಾಪುರ ಜಾಮಖಂಡಿ ಸಿದ್ಧಾಪುರ ಶಿರಸಿ ಧಾರವಾಡಲ್ಲಿ ವಿಜಾಪುರ ನಂಜುಂಡೇಶ್ವರ ಮೂರ್ತಿ ಜಾವಳಿಗೆ ಜಾವಳಿಗೆರಿ:—ಜಾವಳಿಗೆರಿ ಪ್ರೆಸ್ "ಶ್ರೀ ಎಲ್ ಕಮಲಾಪುರ ಶೆಟ್ಟಿಸ್ಟ್, ಜಾವಳಿ ಪ್ರಕಾಶಕ

ಯೇ ಹಡಗಿನ ನಿರ್ಮಾಣ ಕೇಂದ್ರಕ್ಕೂ ಅತ್ಯಂತಾನುಕೂಲವಾದ ಸ್ಥಳವೆಂದು ಘೋಷಿಸಿದೆ. ನೈಸೂರಿನ ಔದ್ಯಮಿಕ ಕೇಂದ್ರಕ್ಕೆ ಸವಿಹವಾಗಿಯೂ, ದಟ್ಟವಾದ ಅರಣ್ಯಗಳಿಗೆ ಅನತಿದೂರದಲ್ಲಿಯೂ, ಅಗ್ಗವಾದ ವಿದ್ಯುಚ್ಛಕ್ತಿಗೆ ಆರುವತ್ತೇ ಮೈಲು ದೂರದಲ್ಲಿಯೂ ಇರುವ ಮಲ್ಪೆಯನ್ನು ಬಿಟ್ಟರೆ ಹಡಗು ನಿರ್ಮಾಣಕ್ಕೆ ಬೇರೆ ಯಾವ ಪ್ರಶಸ್ತ ಸ್ಥಳ ಇದ್ದೀತು? ಎಂದು ಸಮಿತಿಯು ಪ್ರಶ್ನಿಸುತ್ತದೆ.

ಪ್ರಬುದ್ಧ ಬಂದರು ಮಲ್ಪೆಯ ಆರ್ಥಿಕ ಭದ್ರತೆ ಎಷ್ಟಿದೆ?

ಪ್ರಬುದ್ಧ ಬಂದರನ್ನು ನೋಡುವ ಆರ್ಥಿಕ ದೃಷ್ಟಿ ಎರಡು ಬಗೆಯಾಗಿದೆ. (೧) ಅದನ್ನು ರಚಿಸುವ ಮತ್ತು ನೋಡಿಕೊಳ್ಳುವ ಕೆಲಸ. (೨) ಅದರ ಮೂಲಕ ಹಾದು ಹೋಗುವ ಸಾಮಾನುಗಳಿಂದ ಬರುವ ಆದಾಯ. ಬಂದರಿನ ರಚನೆಗೆ ೩೫ ಲಕ್ಷ ರುಪಾಯಿಗಳು ವೆಚ್ಚವಾಗಬಹುದು. ಯಾವುದೇ ಪ್ರಬುದ್ಧ ಬಂದರಿನ ಮುಖಾಂತರ ಹೋಗುವ ಒಂದು ಟನ್ ಸರಕಿಗೆ ರೂ. ೨-೮-೦ ನಿವ್ವಳ ಆದಾಯವು ಲಭ್ಯವಾದರೆ ಆ ಬಂದರಿಗೆ ಶಾಶ್ವತ ಆರ್ಥಿಕ ಭದ್ರತೆ ಇದೆ ಎಂಬು ನಾವೆಡೆಸಬಹುದು. ಮಲ್ಪೆಯಲ್ಲಿ ಕೆಲವಂಶ ಸಾಗಹೋಯಿಹಡಗಗಳಲ್ಲಿ ನಡೆಯುವುದಾದ್ದರಿಂದ ಈ ಆದಾಯವು 1½ ರುಪಾಯಿಗಿಂತ ಹೆಚ್ಚು ಇರಲಾರದು.

	ಸಾಗಿಕೆ ಸಾಗಣೆ (ಟನ್)	ಹೊಂದಿದ ಬಂದರುಗಳಲ್ಲಿ ದೊರೆಯುವ ಪಾಲು
ಕಲ್ಕತ್ತ	೫,೫೫,೦೦೦ (ಸುಮಾರು ಅಂದಾಜು)	೨೦%
ಬಾಂಬೆ	೨,೩೨,೦೦೦ (ಸುಮಾರು ಅಂದಾಜು)	೧೨%
ಮದ್ರಾಸ್	೮೮೬,೦೦೦ (ಸುಮಾರು ಅಂದಾಜು)	೯%

ಭದ್ರತೆಯಿಂದ ಸರಕುಗಳು ಮರ್ಮಗೋನೆಗೆ ಹೋಗುವುದನ್ನು ಬಿಟ್ಟು ಮಲ್ಪೆಗೆ ಬಂದರೆ ೨೨೪ ಮೈಲುಗಳಷ್ಟು ಉದ್ದದ ಉಳಿತಾಯವಾಗುವುದು ಮಾತ್ರವಲ್ಲ, ೧೯೫೦ರ ಅಂದಾಜು ಸಾಗಣೆಯನ್ನು ಲೆಕ್ಕಕ್ಕೆ ತೆಗೆದುಕೊಂಡರೆ ವರ್ಷಕ್ಕೆ ಈ ಒಂದು ಇಸವಿಯಿಂದಲೇ ೭೨ ಲಕ್ಷ ರುಪಾಯಿಗಳ ಉಳಿತಾಯವಿರುತ್ತದೆ.

ಒಂದು ಪಕ್ಷಕ್ಕೆ ಇನ್ನು ಹತ್ತು ಹನ್ನೆರಡು ವರುಷಗಳ ಕಾಲ ಮಲ್ಪೆಯು ತನ್ನ ವೈಚ್ಛವನ್ನು ತಾನೇ ನಿರ್ವಹಿಸಬಲ್ಲ ಸ್ವಸಂಪೂರ್ಣ ಪ್ರಬುದ್ಧ ಬಂದರವಾಗದಿದ್ದರೂ ಚಿಂತೆಯಿಲ್ಲ ಎಂದು ಸಮಿತಿಯು ಅಭಿಪ್ರಾಯಪಡುತ್ತದೆ.

ಕರಾವಳಿಯ ಜಿಲ್ಲೆಯ ಸಂಚಾರ ಸೌಕರ್ಯಗಳು ಬಹಳ ಅಲ್ಪವಾದುದರಿಂದ, ಮಲ್ಪೆಯು ಸಕಲ ಹವಾಮಾನಗಳಲ್ಲಿಯೂ ತೆರೆದಿರುವ ಸರ್ವಋತು ಬಂದರಾದ ಪ್ರಯುಕ್ತಾನಿಕರ ಗೋಳೂ ಸ್ವಲ್ಪ ಮಟ್ಟಿಗೆ ಕಡಿಮೆಯಾಗುವುದು.

ಸಮಿತಿಯ ಶಿಫಾರಸು

೧. ಬಂದರನ್ನು ಮಲ್ಪೆಯಲ್ಲಿ ಕಟ್ಟಬೇಕು.

೨. ಮಲ್ಪೆಯಿಂದ ಭದ್ರಾವತಿಗೆ ರೈಲುಹಾದಿ ನಿರ್ಮಿಸಬೇಕು.

೩. ಮದರಾಸಿನಿಂದ ಬರುವ ಬ್ರಾಡ್ ಗೇಜ್ ರೈಲನ್ನು ಮಂಗಳೂರಿಂದ ಮಲ್ಪೆಯವರೆಗೆ ಮುಂದುವರಿಸಬೇಕು.

ಬೆಕ್ಕಿನ ಕೊರಳಿಗೆ ಗಂಟೆ ಯಾರು ಕಟ್ಟುವುದು?

ಸರಿ, ಶಿಫಾರಸು ನಡೆಯಲಿ ಎಂದಿಟ್ಟುಕೊಳ್ಳಿ. ಆದರೆ ಈ ಶಿಫಾರಸನ್ನು ಜಾರಿಗೆ ತರುವ ಜವಾಬ್ದಾರಿ ಯಾರದು? ಸರಕಾರವೇ ಇದನ್ನು ಕೈಗೆತ್ತಿಕೊಳ್ಳಬೇಕೆಂದು ಸಮಿತಿಯು ಹೇಳಿದೆ. ಆದರೆ ಸರಕಾರವು ಈ ಯೋಜನೆಯನ್ನು ಕೈಗೆತ್ತಿಕೊಳ್ಳಲು ಸಿದ್ಧವಿಲ್ಲ. ಸರಕಾರದ ಈ ಧೋರಣೆಯಿಂದ ಬೇಸತ್ತು ಕೆಲವು ಸ್ಥಳೀಯ ಪ್ರಮುಖರು ಒಂದು ಸಂಘವನ್ನು ಸ್ಥಾಪಿಸಿ ಈ ಯೋಜನೆಯ ಕಾರ್ಯಸಾಧನೆಗೆ ಪ್ರಯತ್ನಿಸಿದರು. ಆದರೆ ಅವರ ಪ್ರಯತ್ನಕ್ಕೆ ಸಾರ್ವಜನಿಕರ ಸಹಕಾರ ದೊರೆಯಲಿಲ್ಲ. ಸಾರ್ವಜನಿಕರ ಸಹಕಾರವಿಲ್ಲದೆ ಈ ಯೋಜನೆಯನ್ನು ಕೈಗೆತ್ತಿಕೊಳ್ಳಲು ಸರಕಾರವು ಸಿದ್ಧವಿಲ್ಲ. ಸಾರ್ವಜನಿಕರು ಸಹಕರಿಸಿದರೆ ಸರಕಾರವು ಸಹಾಯ ಮಾಡಲು ಸಿದ್ಧವಿದೆ ಎಂದು ಸರಕಾರದ ಪರವಾಗಿ ಹೇಳಲಾಗಿದೆ. ಆದರೆ ಸಾರ್ವಜನಿಕರು ಸಹಕರಿಸಲಿಲ್ಲ ಎಂದು ಸರಕಾರವು ಹೇಳಿದ್ದಕ್ಕೆ ಸಾರ್ವಜನಿಕರು ಸಹಕರಿಸಿದ ಕಾತರವನ್ನೂ ಉತ್ಸಾಹವನ್ನೂ ಮಲ್ಪೆಯ ಬಗ್ಗೆ ಕಳೆಯಲಾರರು. ಸಮಿತಿಯು ಶಿಫಾರಸುಮಾಡಿ ಒಂದು ವರ್ಷವಾಯಿತು. ಹಣಕಾಸಿನ ಅಡಚಣೆಯಿಂದ ಕೆಲಸವನ್ನು ಮುಂತಳ್ಳಲಾಗದೆ. ಎಂದು ಸರಕಾರ ಹೇಳುತ್ತದೆ. ಆರ್ಥಿಕ ಅಭ್ಯುದಯ ಇಂಥ ಯೋಜನೆಗಳಿಗೆ ಹಣಕಾಸನ್ನು ಎಲ್ಲಿಂದಲಾದರೂ ಹೇಗಾದರೂ ತರುವುದು ಅಗತ್ಯ. ಹುಡುಕುವುದು, ಹೊಡೆವುದು ಇಂಥ ಮುಗ್ಗಟ್ಟಿನ ಕಾಲದಲ್ಲಿಯೂ ಅನುಚಿತವಾಗಿಲಾರದು, ಮನಸಿದ್ದರೆ ಮಾರ್ಗವನಿದ್ದಾನೆ, ಬಂದರೂ ಉಂಟು.. ಎಂದು ಹೇಳಬಹುದು.



ಉಡುಪಿಯಲ್ಲಿ ಹೆಸರಾಂತ ಆದರ್ಶ ಬ್ರಾಹ್ಮಣರ ಊಟ-ವಸತಿ-ಉಪಹಾರಗೃಹ ಯಾವುದು?

ನ್ಯೂ ರೋಯಲ್ ಕೆಫೆ

ಸಂತೆಕಟ್ಟೆ, ಉಡುಪಿ.

ಎಂದು ನಿಸ್ಸಂಕೋಚವಾಗಿ ಹೇಳಬಹುದು— ಮನೆಯಲ್ಲಿದ್ದಂತೆ ಭಾಸವಾಗುವಂತಹ ಮನವೊಗ್ಗುವ ವ್ಯವಸ್ಥೆ

ಪ್ರತಿಯೊಂದು ವಿಚಾರದಲ್ಲೂ ನಿಮ್ಮನ್ನು ತೃಪ್ತಿಗೊಳಿಸುವ ಪ್ರಾಮಾಣಿಕತೆ—ಶುಚಿರುಚಿಯಾದ ನೈಪುಣ್ಯತೆ.

ಅಲ್ಲದೆ ಊರಿನ ಕೇಂದ್ರಸ್ಥಾನದಲ್ಲಿದ್ದು ದೇವಸ್ಥಾನ, ಸಿನೆಮಾ, ಬಸ್ಸು ಸ್ಟೇಂಡುಗಳಿಗೆಲ್ಲಾ ತೀರಾ ಸಮೀಪದಲ್ಲಿದೆ.

ಎಮ್. ನರಸಿಂಹ ಭಟ್,
ಮೆನೇಜರ್.

M. R. ಭಟ್,
ಪ್ರೊಪ್ರೈಟರ್.

ದುರ್ಗಾ ಭವನ

ಬಸ್ಸು ಸ್ಟೇಂಡಿನ ಎದುರುಗಡೆ, ಮೂಲ್ಕಿ. ಮೆನೇಜರ್: ಎಮ್. ಜಿ. ಭಟ್.

WHEN YOU ARE IN UDIPI, MAKE IT A POINT TO STAY AT

NEO ROYAL CAFE

SANTHEKATTE, **UDIPI.**

AN IDEAL BOARDING AND LODGING HOUSE WITH CLEAN AND HYGIENIC RESTAURANT ATTACHED.

Located in the heart of the Town, it is within a short distance from Sri Krishna Temple, Cinema Theatre and Bus stand.

Please drop in when you are in Town.

M. Narasimha Bhat,
Manager.

M. R. Bhat,
Proprietor.

Mulki Branch: **DURGA BHAVAN,**
Op. Bus Stand. **M. G. Bhat,** Manager.

ಹೊಸ ವರ್ಷದ, ಐದನೆಯ ಪ್ರಜಾಪ್ರಭುತ್ವ ದಿನದ
ಶುಭಕಾಲದಲ್ಲಿ
ನಮ್ಮ ಗ್ರಾಹಕರೆಲ್ಲರಿಗೂ ಶುಭಾಶಯಗಳು!

ಕಲ್ಮಂಜೆ ವ್ಯಾಸಾಚಾರ್,

ಪಾತ್ರೆ ವ್ಯಾಪಾರಿ, ರಥಬೀದಿ, ಉಡುಪಿ, ದ. ಕನ್ನಡ.

ಬಳಕೆಗೆ ಅಡ್ಡಿಯಿಲ್ಲ! ಥಳಕಿಗೆ ಕುಂದಿಲ್ಲ!! ಬಾಳಿಕೆಗೆ ಸಂಶಯವಿಲ್ಲ!!

ಹಿತ್ತಾಳೆ, ಕಂಚು, ಪಂಚಲೋಹಗಳದೋ, ಎಲುಮಿನಿಯಮ್, ಬೆಳ್ಳಿ, ತಾಮ್ರಗಳದೋ?



ಅಡಿಗೆಗೆ, ದೇವತಾರ್ಚನೆಗೆ, ದಾನಕ್ಕೆ, ಉಡುಗೊರೆಗೆ,
ಮಿತ್ರಕೂಟಕ್ಕೆ, ದೂರ ಸಂಚಾರಕ್ಕೆ

ಕಟ್ಟಿದರೆ ಚಿಕ್ಕ ಗಂಟು! ಬಿಚ್ಚಿದರೆ ಎಲ್ಲಕ್ಕೂ ಉಂಟು!

ತರತರದ ಗಾತ್ರದಲ್ಲಿ, ಬಗೆಬಗೆಯ ಆಕಾರದಲ್ಲಿ
ಅತ್ಯಾಧುನಿಕ ಅಭಿರುಚಿಗೆ ತಕ್ಕಂತೆ ಚಿತ್ತಾಕರ್ಷಕವಾಗಿ!

ಬಂದು ನೋಡಿ! ಬರೆದು ಕೇಳಿ!!
ಕೊಂಡು ಮಹದಾನಂದ ಹೊಂದಿರಿ

ರೊಕ್ಕಕ್ಕೆ ತಕ್ಕ ಚೊಕ್ಕ ತರವಾರು ಪಾತ್ರೆಗಳ ಭರವಸೆಯುಳ್ಳ ವ್ಯಾಪಾರವೆಂದರೆ

ಕಲ್ಮಂಜೆಯವರಲ್ಲಿ

ಪಾತ್ರೆಗಳ ತಯಾರಿಕೆಗೆ ಹೆಸರುಗೊಂಡ ಊರುಗಳ ಸಕಲ ಉತ್ಕೃಷ್ಟ ಮ್ಯಾಲುಗಳು
ಒಂದೇ ಕಡೆ ದೊರೆಯುವ ಸಂಗ್ರಹಾಲಯ.

KALMANJE VYASACHARYA,

MANUFACTURER & MERCHANT,
CAR STREET, UDIPI, S. KANARA.

ದೇಶೀಯ ಕೈಗಾರಿಕೆಗಳಿಗೆ ಸದಾ ಪ್ರೋತ್ಸಾಹವಿರಲಿ.
ಕಲ್ಮಂಜೆಯವರ ಪಾತ್ರೆಗಳಿಂದ ಮನೆಮನೆಯೂ ಬೆಳಗಲಿ!

ನವಯುಗ

ಗುರುವಾರ ಉಡುಪಿ, ೨೪-೧-೧೯೫೨

ಐದನೇ ಪ್ರಜಾಪ್ರಭುತ್ವ ದಿನಾಚರಣೆ

೫ನೇ ಪ್ರಜಾಪ್ರಭುತ್ವದಿನಾಚರಣೆಯ ಈ ಶುಭ ಸಮಾರಂಭವನ್ನು ಧಾರಾಳದ ಜನ ಕೂಡಿ ಹುರುಪು ಉತ್ಸಾಹಗಳಿಂದ ಆಚರಿಸುತ್ತಲಿದೆ ಸ್ವಾತಂತ್ರ್ಯ ಪ್ರಾಪ್ತವಾದ ಈ ನಾಲ್ಕೂವರೆ ವರ್ಷಗಳಲ್ಲಿ ನಾವೊಂದು ಹೊಸ ಮನ್ವಂತರವನ್ನೇ ಸ್ಥಾಪಿಸಿದ್ದೇವೆ.

ಕಾಂಗ್ರೆಸ್ಸಿನ ಗುರಿ ದೇಶದ ಹಿತಸಾಧಿಸುವಂತಹದು. ಈ ಇಷ್ಟಾರ್ಥಸಿದ್ಧಿಗಾಗಿ ಕಾಂಗ್ರೆಸ್ ಈ ವರೆಗೂ ದುಡಿದಿದೆ. ಕಷ್ಟದಿಂದ ಸಂಗಿಬಂದ ಇತಿಹಾಸಪ್ರಸಿದ್ಧವಾದ ಸ್ವಾತಂತ್ರ್ಯ ಹೋರಾಟದ ಮೇಲಾದರೂ ಸ್ವಾತಂತ್ರ್ಯದ ಭವ್ಯ ಕಲ್ಪನೆ ನಮಗಾಗಿರಲಿಲ್ಲ. ಇದರ ನಡುವೆ ಸಾಧಿಸಿದ ಮಹತ್ವದ ಸಂಗತಿಗಳ ಅರಿವೂ ಕೂಡ ಆಗಲಿಲ್ಲ. ನಾಲ್ಕೂವರೆ ವರ್ಷಗಳಲ್ಲಿ ಭಾರತವು ವ್ಯಾಕೃತಿಕ ರೀತಿಗೂ ರಾಜಕೀಯ ಅಘಾತಗಳಿಂದ ಜರ್ಜರಿತವಾಯಿತು. ಇದರಿಂದಾಗಿ ನಮ್ಮ ಆಶಾಗೋಪುರಗಳು ಮಣ್ಣಾಮುಕ್ಕಿದವು; ಕಲ್ಪನೆಗೂ ಯಥಾರ್ಥಕ್ಕೂ ಬಹಳ ಅಂತರವಿದೆಯೆಂಬ ಸತ್ಯವನ್ನು ನಾವು ಕಲಿತದ್ದೂ ಈ ಸಮಯದಲ್ಲೇ.

ದೇಶದ ಹಲವು ಕಡೆಗಳಲ್ಲಿ ಚುನಾವಣೆಗಳು ಮುಗಿದಿದ್ದು ಫಲಿತಾಂಶಗಳು ಪ್ರಕಟಗೊಂಡಿವೆ. ಇನ್ನೂ ಹಲವು ಕಡೆಗಳಲ್ಲಿ ನಡೆಯುತ್ತಿವೆ. ಪ್ರಜಾಪ್ರಭುತ್ವದ ವಿಶಿಷ್ಟವಾದ ಒಂದು ಪದ್ಧತಿಯೆಂಬುದು ಎಲ್ಲರಿಗೂ ವಿದಿತವಿಚಾರವೇ. ವಿಶೇಷ ರಾಷ್ಟ್ರಗಳಲ್ಲಿ ಇದುಮಾದರಿಯಾಗಿದೆ. ಚಿಹ್ನ ನಿಯಂಬುದು ಯೋಗ್ಯ ಮತ್ತು ಬಂಧುತ್ವವಾಗಿದ್ದು ಪ್ರಜಾಪ್ರಭುತ್ವ ರಾಷ್ಟ್ರನಿರ್ಮಾಣದ ಮೂಲ ಶಕ್ತಿಯಾಗಿದೆ. ಅಮೂಲ್ಯವೂ ಅತ್ಯಂತ ಮಹತ್ವಪೂರ್ಣವೂ ಆದ ಈ ಸಂದರ್ಭವನ್ನು ಭಾರತದ ಜನ ಚೆನ್ನಾಗಿ ಉಪಯೋಗಿಸಿಕೊಂಡಿದೆಯೆಂದು ನಾವು ಭಾವಿಸಬಹುದೇ? ಇನ್ನೂ ಅಜ್ಞಾನ-ಅಂಧಾನುಕರಣೆಗಳಿಂದ ಕೂಡಿದ್ದೇವೆಂಬುದನ್ನು ಫಲಿತಾಂಶಗಳು ವ್ಯಕ್ತಪಡಿಸುತ್ತಿಲ್ಲವೆ? ಪ್ರಜಾಪ್ರಭುತ್ವದಲ್ಲಿ ಎಲ್ಲ ಪಕ್ಷಸಂಘಗಳಿಗೂ ಸಮಾನ ಹಕ್ಕು ಇದೆ ಸಹಜ. ಆದರೆ ಅಂತಹ ಸಂಪಕ್ಷವು ಪಕ್ಷ ನಮ್ಮಲ್ಲಿ ಬೆಳೆದಿದೆಯೆ? ಈ ಬಗೆಯ ಅಸ್ಥಿರತೆ ಕರುವಂಕುರಿ ಕೊಚ್ಚೆ—ಮದ್ರಾಸ—ವಿಂಧ್ಯದ ಕಡೆಗಳಲ್ಲಿ ತಲೆಯೆತ್ತಿದ್ದು, ಅಧಿಕಾರ ಯಾವ ಪಕ್ಷಕ್ಕೆ ಸೇರಬೇಕೆಂಬ ಕಾರಿತು ಎನ್ನೆಕ್ಕತ್ತುಂಟಾಗಿದೆ. ಇದರಿಂದ ಸ್ವಲ್ಪ ಮಟ್ಟಿಗೆ ಗಂಡಾಂತರವೇ. ಈ ಸೂತ್ರ ಪಕ್ಷಪಂಗಡಗಳ ಹಾಗೂ ವ್ಯಕ್ತಿ ಸಮೂಹಗಳಿಗೆ ಸಂಬಂಧಿಸಿದ್ದಾಗಿದೆ. ಪ್ರಜಾಪ್ರಭುತ್ವದ ಮೂಲತತ್ವದಂತೆ ಜಗವಿಖ್ಯಾತವಾದ ಮಹತ್ವದ ಹಕ್ಕನ್ನು ಜನತೆಯು ಯೋಗ್ಯರೀತಿಯಿಂದ ನಿರ್ವಹಿಸಬೇಕಾಗಿದೆ. ಇದರ ಇಷ್ಟಾನಿಷ್ಟಗಳು ಏನಿದ್ದರೂ ಅದಕ್ಕೆ ಜನತೆಯೇ ಹೊಣೆ ಹೊರತು ಕ್ರೈಸ್ತವಾದ ಪ್ರಜಾಪ್ರಭುತ್ವ ಪದ್ಧತಿಯಲ್ಲ!

ನಮ್ಮ ಪ್ರಜಾಪ್ರಭುತ್ವದ ಈ ಶುಭ ಸಂಜೆಯ ಕಾಲದಲ್ಲಿ ನಾವು ಸಾಗಿಬಂದ ದಿನಗಳನ್ನು ನೆನೆದುಕೊಂಡು ಮುಂದಿನ ದಿನಗಳಬಗ್ಗೆ ಭವಿಷ್ಯನೋಡಿಗೆ ಚಿಂತಿಸುವದು ವಿಹಿತವಾಗಿದೆ. ನಮ್ಮ ರಾಜಕೀಯಧೋರಣೆ ಜಾಗತಿಕರಂಗದಲ್ಲಿ ಮಾನ್ಯತೆಯನ್ನು ಪಡೆದಿದ್ದು, ಅದರಿಂದಾಗಿ ವಿಶೇಷ ಸ್ಥಾನಮಾನಗಳೂ ನಮಗೆ ಪ್ರಾಪ್ತವಾಗಿವೆ. ಕಾಶ್ಮೀರ ಪ್ರಶ್ನೆಯೊಂದು ನೆರೆ ರಾಷ್ಟ್ರವಾದ ಪಾಕಿಸ್ತಾನದೊಡನೆ ಬೆಳೆಬೇಕಾದ ಮೈತ್ರಿಗೆ ಕಡೆಯಾಗಿದೆಯೆನ್ನುವ ಒಂದಂಶವನ್ನು ಬಿಟ್ಟರೆ ಉಳಿದೆಲ್ಲ ವಿಚಾರದಲ್ಲಿ ನಾವು ಪ್ರಗತಿಪರರಾಗಿದ್ದೇವೆಯೆಂಬುದು ಹೆಮ್ಮೆಯ ವಿಚಾರ.

ಪ್ರಜಾಪ್ರಭುತ್ವದ ಮೂಡರಿಯಾಗಿ ಶಾಂತಿ ಸಮತೆಯಿಂದಲೂ, ಸರ್ವಸಮೃದ್ಧಿಯಿಂದಲೂ ಭಾರತವು ವಿಶ್ವದ ರಾಷ್ಟ್ರವಾಗಿ ಮೆರೆಯಲೆಂದು ಹಾರೈಸುತ್ತೇವೆ.

ನಮ್ಮ ಈ ಸಂಚಿಕೆ—

ಪ್ರಜಾಪ್ರಭುತ್ವ ದಿನಾಂಕದಂದು ಪ್ರಜಾಪ್ರಭುತ್ವ ಸಂಚಿಕೆಯನ್ನು ಹೊರಡಿಸಬೇಕೆಂದು ಕೆಲವೇ ದಿನಗಳ ಹಿಂದೆ ಯೋಚಿಸಿದ್ದಾಯಿತು. ಈ ಅಲ್ಪಾವಧಿಯಲ್ಲಿ ನಾವು ಎಣಿಸಿದಷ್ಟು ಸರ್ವಾಂಗಸುಂದರವಾದ ಸಂಚಿಕೆಯನ್ನು ಹೊರಡಿಸುವುದು ಕಷ್ಟವಿಲ್ಲವೆಂಬುದು ನಮಗೆ ಮನವರಿಕೆಯಾಗದಿಲ್ಲ. ಆದರೂ ಆಲೋಚಿಸಿದಂತೆ ನಿರ್ದಿಷ್ಟ ಕಾಲದಲ್ಲಿ ಪ್ರಜಾಪ್ರಭುತ್ವ ಸಂಚಿಕೆಯನ್ನು ಹೊರಡಿಸುವ ಸಾಹಸ ಮಾಡಿದೆವು. ಈ ಸಂದರ್ಭದಲ್ಲಿ ನಮ್ಮ ಕೋರಿಕೆಯನ್ನು ಮನ್ನಿಸಿ ಮಹನೀಯ ಲೇಖಕರು ತಮ್ಮ ಅಮೂಲ್ಯ ಲೇಖನವನ್ನು ಕೊಟ್ಟು ಸಹಕರಿಸಿರುವುದಕ್ಕಾಗಿ ಜಾಹೀರಾತು ದಾರರು ಈ ಹಿಂದೆ ನಮ್ಮೊಡನೆ ಪ್ರೀತಿ ವಿಶ್ವಾಸಗಳನ್ನಿಟ್ಟು ಸಹಕರಿಸಿದಂತೆಯೂ ಈ ಬಾರಿಯೂ ವಿಶೇಷ ಪ್ರೋತ್ಸಾಹವನ್ನಿತ್ತಿರುವರು ಅವರೆಲ್ಲರಿಗೂ ನಮ್ಮ ಕೃತಜ್ಞತೆಗಳನ್ನು ಸಮರ್ಪಿಸದಿರಲಾರೆವು. ಗೆಳೆಯ ಶ್ರೀ. ಎ. ಜೆ. ಅಲ್ಮೆಯವರ ಸಹಕಾರಕ್ಕಂತೂ ಆಭಾರಗಳಾಗಿದ್ದೇವೆ. ಪ್ರೆಸ್ಸಿನ ಕೆಲಸಗಾರರ ಪರಿಶ್ರಮವನ್ನಿಲ್ಲಿ ಎತ್ತಿ ಹೇಳದಿರಲಾರೆವು. ನಮ್ಮ ಎಣಿಕೆಯಷ್ಟು ಪುಟಗಳನ್ನು ಕೊಡಲಿಕ್ಕಾಗದ್ದರಿಂದ ಹಲವು ಲೇಖನ, ಜಾಹೀರಾತುಗಳನ್ನು ಪ್ರಕಟಿಸಲು ಅಸಾಧ್ಯವಾದುದಕ್ಕೆ ವಿಷಾದಿಸುತ್ತೇವೆ

ಈ ಸಲ ಪರ್ಯಾಯ ಪೀಠವನ್ನೇರಿದ ರಾಷ್ಟ್ರಭಾವನಾಗಳೂ, ವಿದ್ವಾಂಸರೂ ವಾಗ್ಮಿಗಳೂ ಆದ ಕರುಣೋತ್ಸಾಹಿ ಶ್ರೀ ಪೇಜಾವರ ಮಠದ ಶ್ರೀ

ವಿಶ್ವೇಶತೀರ್ಥ ಶ್ರೀಪಾದಂಗಳವರು

ಉಡುಪಿಯ ಪ್ರಥಮ ಎಂ. ಬಿ. ಬಿ. ಎಸ್ ಡಾಕ್ಟರರೂ, ಕೆನರಾ ಬ್ಯಾಂಕಿಂಗ್ ಕೋರ್ಪರೇಶನಿನ ಅಧ್ಯಕ್ಷರೂ ಆಗಿರುವ ಜನಪ್ರಿಯ

ಡಾ। ಯು. ಸುಂದರರಾವ್ ಹೈಗೆಳು.

ಆರೋಗ್ಯ ದೃಷ್ಟಿಯಲ್ಲಿ-

ಶುದ್ಧ ತೆಂಗಿನೆಣ್ಣೆಯು ಶರೀರಕ್ಕೆ ಹಸನಾದ
ಆಳವಾದ ತೃಪ್ತಿದಪ್ಪೇ ಪೋಷಣೆ ಕೊಡುವುದು.
ಆದರೆ ಕಲ್ಮಷವುಳ್ಳ ಎಣ್ಣೆಯು ಆರೋಗ್ಯಕ್ಕೆ ಅಪಾಯಕಾರಿ
ಹಾನಿಕರವಾಗಿದೆ. ಆದುದರಿಂದ—

ಜೈಭಾರತ ಮಿಲ್ಸ್ ಲಿ., ಉಡುಪಿಯವರ

ಪರಿಶುದ್ಧವಾದ ತೆಂಗಿನೆಣ್ಣೆಯನ್ನೇ ಉಪಯೋಗಿಸಿ
ನಿರಂತರವಾದ ಆರೋಗ್ಯವನ್ನು ಉಳಿಸಿಕೊಳ್ಳಿರಿ
ಅತಿ ಮನೋಹರವಾದ ಸುವಾಸನೆಯುಳ್ಳ
ಕಾಫಿ ಹುಡಿಯೂ ನಮ್ಮಲ್ಲಿ ಸದಾ ಸಿದ್ಧವಿದೆ.

JAI BHARAT MILLS LIMITED.,
Chittaranjan Buildings
UDIPI

ರಾಮತೀರ್ಥ ಬ್ರಾಹ್ಮಿ ತೈಲ

ಸ್ಪೆಶಲ್ ನಂ ೧ [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂಕನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬಕ್ಕ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತವೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತವೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿನ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಜ. ಐ. ಪಿ.) ಮುಂಬಯಿ, ೧೪

In the Court of the Subordinate Judge of South Kanara
O. S. No 23/1951

Between·
N. Chandrahasa Adyanthaya —Plaintiff.
and
Sheethamma and others —Defendants

To the defendants

85 Sakharama Adyanthaya, son of Thungu

86 Hemavathi 87 Prema 89 Subbayya Poonja—children of Padmavathi

Defendants 85 and 89 are residing at Palke near Maraka daguthu, Badaga-Mijar village of Karkala Taluk, 88th defendant is residing in Kellarai House. Vamanjoor village Mangalore Taluk and the 86th defendant is residing in Maraka daguthu, Bida—Mijar Village of Karkala Taluk

Please take notice that the abovenamed plaintiff has filed the above suit for partition of the family properties and for accounts etc, and the same stands posted to 5 2-1952 for your appearance If you fail to appear before the above Court on the said date at 11 A M· you will be declared exparte and the suit will be heard and determined in your absence

B P HOLLA,
Advocate for plaintiff

MANGALORE, Dated 7-1 1952·

ಜಿಲ್ಲೆಯ ದಕ್ಷಿಣ ಭಾಗದಲ್ಲಿ ಕಾಂಗ್ರೆಸಿಗೆ ಪ್ರಚಂಡ ವಿಜಯ ಪ್ರಜಾ ಪಕ್ಷದ ಚುಂದ ಳು ಶ್ರೀ। ಕಾರಂತರ ಪರಾಜ ಯ

ದ ಕ. ಜಿಲ್ಲೆಯ ದಕ್ಷಿಣಭಾಗದ ಮತದಾ ರ ಕ್ಷೇತ್ರದ ಲೋಕಸಭೆಯ ಚುನಾವಣೆಯಲ್ಲಿ ಕಾಂಗ್ರೆಸ್ ಹುರಿಯಾಳು ಶ್ರೀ ಬೆನಗಲ್ ಶಿವರಾಯರು ಜಿಲ್ಲೆಯ ಪ್ರಜಾಪಕ್ಷದ ಮುಂ ದಾಳು ಶ್ರೀ ಕೆ ಆರ್ ಕಾರಂತರನ್ನು ಸೋ ಲಿಸಿದರೆಂದು

ಮತಗಳ ವಿವರ– ಶ್ರೀ ಬೆನಗಲ್ ಶಿವರಾವ್, (ಕಾಂ) 96,619, ಶ್ರೀ ಕೆ ಆರ್ ಕಾರಂತ (ಪ್ರ) 87,778, ಡಾ। ಎಸ್. ಎಸ್ ಎ. ಕಮ್(ಸ್ವ) 21,704, ಈ ಕ್ಷೇತ್ರದ ಒಟ್ಟು ಮತದಾರರು 3,40,360, ಮತ ವಿತ್ತವರು 2,06,433, ನಿಷ್ಪಯೋಜಕ ಮತಗಳು 332 ಸ್ಪರ್ಧಿಗಳಲ್ಲಿ ಕೊನೆಯವರಾದ ಡಾ। ಶಮೀರು ತಮ್ಮ ಠೇವಣಿಯನ್ನು ಕಳಕೊಂಡರು

ಪಾಣೆ ಮಂಗಳೂರು— ಕೇಂದ್ರದ ಮದ್ರಾಸು ರಾಜ್ಯ ಶಾಸನ ಸಭೆಯ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಬಿ ಸೈ ಕುಂಠ ಬಾಳಿಗರು ವಿಜಯಿಗಳಾಗಿದ್ದಾರೆ

ಮತಗಳ ವಿವರ– ಶ್ರೀ ಬಿ ವೈಕುಂಠ ಭಾಳಿಗ (ಕಾಂ) 18,369, ಡಾ। ಕೆ. ನೇಮಿ ರಾಜ ಅಜ್ರ [ಸ್ವ] 12,558, ಶ್ರೀ ಎ. ಕೃಷ್ಣ ಸೆಟ್ಟಿ [ಕಮ್ಯೂನಿಸ್ಟ್] 10,745, ಇದ್ದಿ ಒಟ್ಟು ಮತದಾರರು 98,241, ಮತದಿತ್ತವರು 41,672, ನಿಷ್ಪಯೋಜಕ ಮತಗಳು 23.

ಪುತ್ತೂರು—ಮತದಾನ ಕ್ಷೇತ್ರದಲ್ಲಿ ಸಾಮಾನ್ಯ ಸ್ಥಾನವನ್ನು ಕಾಂಗ್ರೆಸಿನ ಅಭ್ಯರ್ಥಿ ಶ್ರೀ ಕೆ. ವೆಂಕಟ್ರಮಣ ಗೌಡರು ಗೆದ್ದಿರುತ್ತಾರೆ. **ಮತಗಳ ವಿವರ**.–ಶ್ರೀ ಕೆ ವಿ. ಗೌಡ [ಕಾಂ] 42,735 ಕೋಟಿ ಶಿವರಾಮ ಕಾರಂತ [ಪ್ರ] 27,947 ಕಾದಿಟ್ಟ ಸ್ಥಾನ ಶ್ರೀ ಕೆ. ಅಪ್ಪಣ್ಣ. [ಕಾಂ] 42,299, ಶ್ರೀ ರಾಮಣ್ಣ ನಾಯಕ [ಪ್ರ] 22,339, ಶ್ರೀ ಬರುವ [ಸರ್ವೋದಯ-ದಿ] 6763, ಶ್ರೀ ಎಸ್ ಜಿ ಸಾಲೆನ್ನ [ಶೆಡ್ಯೂಲು ಜಾತಿ ಫೆಡರೇಶನ್] 2811 ಈ ಕ್ಷೇತ್ರದ ಒಟ್ಟು ಮತದಾರರು 1,21,315 ಮತದಿತ್ತವರು. 74,362 ನಿಷ್ಪ ಯೋಜಕ ಮತಗಳು 3830 ಕೊನೆಯವರು ಬ್ಯಾರು ಡಿಪಾಸಿಟು ಕಳಕೊಂಡರು

ಉಡುಪಿ
ಹೊಸ ವರುಷದ ಅಭಿನಂದನಾ ಸಭೆಯಲ್ಲಿಕೇಳುಸಂಡಿತರಿಗೆ ಮನ್ನಣೆ

ಜನರಲ್ ಇನ್ಫೆಗ್ಮೆಂಟ್ ಎಂಡ್ ಮಾರ್ಶಿಯಲ್ ಕೊಪರೇಶನ್ ಸಂಸ್ಥೆಯ ವತಿಯಿಂದ ಹೊಸ ವರುಷಾರಂಭದಲ್ಲಿ ಗಣ್ಯರು ಹಾಗೂ ಹಿರಿಯ ನೈಕ್ಷಿಯೊಬ್ಬನನ್ನು ಮನ್ನಿಸುವ ಪದ್ಧತಿಯಂತೆ ಈ ಬಾರಿ ತಾ. 17 ರಲ್ಲಿ ಮುಳಿಂದ ನಿವಾಸದಲ್ಲಿ ಪಂಡಿತ ಟಿ ಎಸ್ ಕೇಳ ನಂದಿಯಾರಂನ್ನು ಅಭಿನಂದಿಸುವ ಸಭೆಯ ಅಕ್ಷರ್ ಶ್ರೀ ಜಿ. ಕೆ ರೇ ಗೋವರ ಅಧ್ಯಕ್ಷತೆಯಲ್ಲಿ ಜರಗಿತು. ಈ ಸಂದರ್ಭದಲ್ಲಿಯೇ ಮದ್ರಾಸು ಎಸೆಂಬ್ಲಿಗೆ ಆಯ್ಕೆಯಲ್ಪಟ್ಟ ಟಿ. ಎ ಸೈಗಳನ್ನು ಅಭಿನಂದಿಸಲಾಯಿತು. ಶ್ರೀ ಟಿ ರಮೇಶ ಯು ಪೈಗಳ, ಸ್ವಾಗತ ಭಾಷಣ ಮಾಡಿದರು. ಡಾ। ಟಿ ಎಸ್ ಕೇಳ ನಂದಿಯಾರಂರವರು ಸಭೆಯನ್ನುದ್ದೇಶಿಸಿ ಮಾತನಾಡಿದರು. ಶ್ರೀ ಟಿ ಎ ಪೈಗಳ ಶತ್ರುನಿಷ್ಠೆ, ದೇಶ-ಜನಸೇವಾ ಕಾರ್ಯಕ್ಷೆ ಮೊದಲಾದ ಗುಣಗಳನ್ನು ಹೇಳಿ ಶುಭಹಾರೈಸ

● ತೃಪ್ತಿಕರವಾದ ವಸತಿ —
● ಹಿತಕರವಾದ ಊಟ — —
● ರುಚಿಕರವಾದ ಉಪಾಹಾರ — — —

ಇವುಗಳಿಗೆ

ಉಡುಪಿಯ ಆದರ್ಶ ನಿಲಯವೆಂದರೆ

ವುಡ್ ಲೇಂಡ್ಸ್

ಊರ ಪರವೂರ ಸನ್ಯಾಸ್ಯ ಸದ್ಬ್ರಹ್ಮಸ್ಥರಿಂದ ಮುಕ್ತಕಂಠದಿಂದ
ಹೊಗಳಿಸಿಕೊಂಡ ನವ್ಯ ಹೋಟಿಲಿಗೇ
ಎಂದೆಂದೂ ನಿಮ್ಮ ಸಂದರ್ಶನವೀಯಲು ಮರೆಯದಿರಿ.
ಯಾತ್ರಿಕರಿಗೂ, ಪ್ರಯಾಣಿಕರಿಗೂ ಸರ್ವ ಅನುಕೂಲತೆಯಾಗುವಂತೆ
ನಗರದ ಕೇಂದ್ರ ಭಾಗದಲ್ಲಿದೆ.

WOODLANDS

Highclass Boarding & Lodging, **UDIPI S. Kanara**

ಐರೋಡಿ ರಾಧಾಕೃಷ್ಣ ಪೈ,

ಪಾತ್ರೆವ್ಯಾಪಾರಿ ರಥಬೀದಿ ಉಡುಪಿ ದ. ಕನ್ನಡ,

ನಮ್ಮಲ್ಲಿ ತಾಮ್ರ, ಹಿತ್ತಾಳೆ ತಗಡಿನ ಪಾತ್ರೆಗಳೂ, ಶುದ್ಧ ಕಂಚು ಮತ್ತು
ಸಾಧಾರಣ ಕಂಚಿನ ವಾಸ್ತೆಗಳೂ, ಮನೆ, ಮಠ, ದೇವಸ್ಥಾನಗಳಿಗೆ
ಬೇಕಾಗುವ ರೀತಿಯಲ್ಲಿ ನಿಮ್ಮ ಇಷ್ಟಕ್ಕೆ ಒಪ್ಪುವಂತೆ ಮಾಡಿಸಿ
ಕೊಡುವುದಲ್ಲದೆ ನ್ಯಾಯವಾದ ಬೆಲೆಗೆ ಯಾವಾಗಲೂ
ರಿಪೇರಿ ಮತ್ತು ಪಾಲಿಸ್ಸಿರೆಯಾಗಿ ಮಾರುತ್ತೇವೆ

ಪರ್ಯಾಯ ಮಹೋತ್ಸವದ ಸಲುವಾಗಿ ಸ್ಪೆಶಲ್ ರಿಯಾಯಿತಿಗಳು!
ಇಂತಹ ಅಪೂರ್ವ ಸುಸಂಧಿಯನ್ನು ಎಂದೂ ಕಳಕೊಳ್ಳಬೇಡಿರಿ

— ಕೇವಲ ಕೆಲವು ದಿನಗಳು ಮಾತ್ರ —

ಇದೀಗ ತಾನೆ ಬಂದಿರುವ ಆಲ್ರೌಂಡ್ ಟ್ಯಾಂಫೀಸು, ಕೈಗಡಿಯಾರಗಳು [ಫಿನಲ್ ಲೂಬ, ಮೆರಿಡಿಯನ್, ಸೆಕ್ಸೋನಿಯಾ, ಕ್ರೌನ್ ಮತ್ತು ಎನೋಸಿಲೆ ಟಿಡ್ ಮುಂತಾದ ಪ್ರಸಿದ್ಧ ಕಂಪೆನಿಗಳಿಂದ ತಯಾರಿಸಲ್ಪಟ್ಟವು] ಬಹು ಕಡಿಮೆ ದರದಲ್ಲಿ ಮಾರಾಟಕ್ಕಿಡಲಾಗಿದೆ.

ಸ್ಟಿಫ್ ಆಲಾರ್ಮ್ ಟ್ಯಾಂಫೀಸು ರೂ 18-0-0,
ಸ್ಟಿಫ್ ಬೇಸ್ ಮೋಡಲ್ ಟ್ಯಾಂಫೀಸು ರೂ 20-0 0
ಮೆಸ್ಸಲೋಕ್ ರೂ. 25 0-0 ಜರ್ಮನಿ ಮೇಡ್ ರೂ 20 0-0
ಇಟೀಲಿಯನ್ ಮೇಡ್ ರೂ. 28 0-0

ಅಲ್ಲದೆ ಎಲ್ಲಾ ಸ್ವಾಮಿನ ಬೇರೆ ಬೇರೆ ನಮೂನೆಯ ರಿಸ್ಟ್‌ವಾಚುಗಳಿಗೂ, ಗೋಡೆ ಗಡಿಯಾರಗಳಿಗೂ— ಕೂಡಲೇ ಸಂದರ್ಶಿಸಿ

ಶ್ರೀ ಕೃಷ್ಣಾ ವಾಚ್ ವರ್ಕ್ಸ್, ಸಂತೆಕಟ್ಟೆ, ಉಡುಪಿ.
Prop. **B Sitarama Rao.**

Happy New-Year Greetings

We are glad to announce that 12,000 shares of our Bank of the total value of Rs 3 lacs recently floated have been over-subscribed We are grateful to the public for the increased confidence they have reposed in us We assure that we will do our utmost to deserve this well-placed confidence

THE VIJAYA BANK LTD.

ESTD **1931** H. O **MANGALORE.**

B M. Shetty, B A B L, Secretary.
P J Shetty, M A B L. O A I I B., Superintendent.

B Manjaya Hegde, Advocate.
[President, District Board S K.]
Chairman of the Board of Directors

"ಗೋಪಾಲ ಭೇಷಜಾಶ್ರಮ" ಮಂಗಳೂರು

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ ವಿ. ಶಾಸ್ತ್ರೀ,

ಬಾಣಂತಿಯರ ಸಲು ವಾಗಿಯೇ ದೇಶ ಮತ್ತು ಪ್ರಕೃತಿಪ ದೇಹಸ್ಥಿತಿಯ ನ್ನು ನಿರೀಕ್ಷಿಸಿ ತಯಾ ರಿಸಲ್ಪಟ್ಟ ಅಮೋಘ ವಾದ ಮಧುರದ್ರವ ಸಾಯನ. ಅಲ್ಪ ಮೌ ಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸು ಲಭವಾಗಿರುವುದು.

ಇವರ
ನವಜೀವಾಮೃ
ಎಂಬ
ಸೂತಿಕಾ ರಸಾಯನ

ಪೆಟ್ಟಿನ ಮೂಹಿಕೆಗೆ—ಡಾ। ಯಂ ವಿ. ಶಾಸ್ತ್ರೀ, ಯಲ್. ವಿ
ಕೊಡಿಯಾಲಬೈಲ ಪೋಸ್ಟು, (ಮಂಗಳೂರು)
ಸ್ಯಾಕ್ಸರು.—ಡಾ। ವಿ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

ತಾ 27—1—52ರಿಂದ
ಉಡುಪಿಯ ಆದರ್ಶ ಉಪಹಾರ ಮಂದಿರ
ನಿವ್ಯ ನಿರೀಕ್ಷೆಯ
— ತಾಜ ಮಹಲ್ —

ಉಡುಪಿಯ ಕೇಂದ್ರ ಸ್ಥಳವಾದ ಶ್ರೀ ರಾಮಕೃಷ್ಣ ಥಿಯೇಟರಿನ ಬಳಿಯಲ್ಲಿ
ಪ್ರತಿಯೊಂದು ನವೀನ ಸೌಲಭ್ಯ-- ಸೌಕರ್ಯಗಳೊಂದಿಗೆ ತೆರೆಯಲ್ಪಡಲಿದೆ

TAJ MAHAL Near S R Theatre Ltd-- UDIPI



ಉತ್ತಮ ತಂಬಾಕಿನ

UL BEEDIES

ಸ್ಪೆಶಲ್ ರಚನೆಯ

ಯು. ಯಲ್. ಸ್ಪೆಶಲ್ ಬೀಡಿಗಳನ್ನೇ

ಸೇದಿರಿ.

ಸೇವನಾಮೃಧುರ್ಯದಿಂದಲೇ ಊರು ಪರವೂರುಗಳಲ್ಲಿ ಪ್ರಖ್ಯಾತಿ ಪಡೆದಿದೆ.

Prop: **K A. Lathif Ibrahim Saheb**

ಕಟ್ಟಪಡಿ—ಡಾ। ಕೃಷ್ಣರಾವ್ ಕೆ.ರ ಡ್ಡಲ್, ಅವರು ಇದೇ ತಾ. 17ರಲ್ಲಿ 'ಕೃಷ್ಣ ಚಿಕಿತ್ಸಾಮಂದಿರ' ವೆಂಬ ವೈದ್ಯಕೀಯ ಸಂಸ್ಥೆಯನ್ನು ತೆರೆದಿರುವರು. ಪ್ರಾರಂಭ ಸಮಾರಂಭಕ್ಕೆ ಹಲವರು ಆಮಂತ್ರಿತರಾಗಿದ್ದರು.

ಕುಂದಾಪುರ ಡಿ ಮು. ಕೋರ್ಟಿನಲ್ಲಿ
O S-293/51 R I.A 2366/1951

ಅರ್ಜಿದಾರರು,—ಕೆ. ಕಾರಂತ ಪ್ಯ
ಎದ್ರಿರು— ಕೃಷ್ಣಮ್ಮ ಶೆಡ್ತಿ ಕೂಡಾ
ಕುಂದಾಪುರ ಕಸ್ಬಾ ಗ್ರಾಮದಲ್ಲಿರುವ ಪ
ಡುವರಿ ವೆಂಕಮ್ಮ ಶೆಡ್ತಿರ ಮಗಳು [ನೇ ಎ
ದ್ರಿ ಕೃಷ್ಣಮ್ಮ ಶೆಡ್ತಿಗೆ ಈ ಮೂಲಕ ತಿಳಿಯ
ಪಡಿಸುವುದೇನೆಂದರೆ

ಸದ್ರಿ ವ್ಯವಹಾರದಲ್ಲಿ ಆದ ಪ್ರಲಿಮಿನರಿ ಡಿಕ್ರಿ ವಿಧಿ ಮೇರೆಗೆ ಫೈನಲ್ ಡಿಕ್ರಿ ಕೊಡಿಸ ಬೇಕಂತ ಅರ್ಜಿದಾರರು ದಾಖ್ಲು ಮಾಡಿದ ಮೇಲಿನ ಅರ್ಜಿಯು ತಾರೀಕು 2-2-1952 ಕ್ಕೆ ಮೇಲಿನ ಕೋರ್ಟಿನಲ್ಲಿ ವಿಚಾರಣೆಗೆ ಇಟ್ಟಿರುತ್ತದೆ. ಆ ಕಾರಣ ನಿಮಗಾದರೂ ಅಕ್ಷೇಪಣೆಗಳಿದ್ದರೆ ಸದ್ರಿ ದಿವ್ಸ ಮೇಲಿನ ಕೋರ್ಟಿಗೆ ಹಾಜರಾಗಿ ಜ್ಞಾಪನೆ ಮಾಡಿಕೊಳ್ಳತಕ್ಕದ್ದು. ಎಂಬ ಸಂಗ್ತಿ ಈ ಮೂಲಕ ತಿಳಿಯಪಡಿಸಲಾಗಿದೆ

N.S Parameshwariah.
Date 13-1-52. Coondapur.

ಪ್ರಜಾಪ್ರಭುತ್ವವೂ ರಾಜಕೀಯ ಪಕ್ಷಗಳೂ

ಅಧಿಕಾರ ಲಾಲಸಿಗಳ, ಹತಾಶರ, ಸ್ವಾರ್ಥಿಗಳ ಗುಂಪು ವಿರೋಧಪಕ್ಷವಾದೀತೆ?

ಲೇಖಕರು: ಶ್ರೀ ಎ. ಜೆ. ಆಲ್ಸ್.

ಚುನಾವಣೆಯ ಕಾಲದಲ್ಲಿ ಅನೇಕಾನೇಕ ಪಕ್ಷಗಳು ಹುಟ್ಟಬಂದುವು ಸ್ವಾತಂತ್ರ್ಯ ಸಮರದ ಸಮಯದ ದೇಶದಲ್ಲಿದ್ದ ಪಕ್ಷಗಳೆಷ್ಟು, ಆನಂತರ ಹುಟ್ಟಿದವೆಷ್ಟು ಎಂಬ ವಿಷಯವನ್ನು ಪರಿಶೀಲಿಸುವಾಗ ಇವುಗಳಲ್ಲಿ ಹೆಚ್ಚಿನವು ಅವತಾರ ತಾಳಿದುದು ಚುನಾವಣೆಯ ಕಾರ್ಯಕ್ರಮವನ್ನು ಸರಕಾರ ಸಾರಿದ ಮೇಲೆ ಎಂದು ಕಂಡುಬರುತ್ತದೆ. ಇವುಗಳಲ್ಲಿ ಅನೇಕ ಪಕ್ಷಗಳು ಅಖಿಲ ಭಾರತ ಪಕ್ಷಗಳೆಂದು ಹೇಳಿಕೊಳ್ಳುತ್ತಿವೆ; ಆದರೆ ಆಂತಹ ಪಕ್ಷಗಳ ನೈಜಸ್ವರೂಪವನ್ನು ಕಾಣಬೇಕಾದರೆ ಇವುಗಳ ಕಾರ್ಯಸ್ಥಾನಗಳು ಎಲ್ಲೆಲ್ಲಿವೆ, ಚುನಾವಣೆಯಲ್ಲಿ ಇವುಗಳು ಪಟ್ಟಕಟ್ಟಿದ ಹುರಿಯಾಳುಗಳೆಷ್ಟು ಎಂಬುದನ್ನು ಪರಿಗಣಿಸಬೇಕು. ಇವುಗಳಿಗೆ ಜನತೆ ಕೊಟ್ಟ ಸ್ವಾಗತ ಎಂತಹುದು ಎಂಬುದನ್ನು ತಿಳಿಯಬೇಕಾದರೆ, ಹೂಡಿದ ಹುರಿಯಾಳುಗಳಲ್ಲಿ ಆರಿಸಿಬಂದವರೆಷ್ಟು ಎಂಬ ಲೆಕ್ಕ ಹಾಕಬೇಕು ಅಲ್ಲದೆ, ಅಖಿಲ ಭಾರತದ ರಾಜಕೀಯ ಪಕ್ಷಗಳಾಗಿರಬೇಕಾದರೆ, ಇವುಗಳಿಂದ ದೇಶಸೇವೆ ಸಲ್ಲಬೇಕಾದರೆ, ಜನತೆಗೆ ಪ್ರಯೋಜನ ಸಿಗಬೇಕಾದರೆ, ಇವುಗಳ ತತ್ವ ಧೋರಣೆಗಳೇನೆಂಬುದನ್ನು ವಿಮರ್ಶಿಸಬೇಕು. ಅಂತೂ ಪಂಡಿತ ನೆಹರುಗಳು ಕೊಟ್ಟ 'ಮಳೆಗಾಲದ ಕಪ್ಪೆ'ಗಳೆಂಬ ಬಿರುದು ಇವುಗಳಲ್ಲಿ ಹೆಚ್ಚಿನ ಪಕ್ಷಗಳಿಗೆ ಸಲ್ಲುತ್ತದೆ ಎನ್ನಬೇಕು.

ಪ್ರಜಾಪ್ರಭುತ್ವವು ಸಾರ್ಥಕವಾಗಬೇಕಾದರೆ ಪಕ್ಷ, ಪ್ರತಿಪಕ್ಷಗಳು ಬೇಕೇಬೇಕು. ಒಂದೇ ಸಾರ್ವತ್ರಿಕ ಪಕ್ಷದಿಂದ ಪ್ರಜಾಪ್ರಭುತ್ವವಾಗದು; ಅದು ನಿರಂಕುಶವು ಪ್ರಭುತ್ವವೆಂದಾಗುವುದು. ಆದರೆ ಎಂತಹ ಪ್ರತಿಪಕ್ಷಗಳಿರಬೇಕೆಂಬುದೇ ಭಾರತದ ಈ ಸಂಧಿಗ್ಧ ಕಾಲದಲ್ಲಿ ಗಮನಾರ್ಹವಾದ ವಿಷಯ ನಾಯಿಕೊಡೆಗಳಂತೆ ಒಬ್ಬ ನಾಯಕ, ಮೂವರು ಹಿಂಬಾಲಕರನ್ನೊಳಗೊಂಡ, ಯಾವುದಾದರೊಂದು ಸಂಕುಚಿತ ದೃಷ್ಟಿಯಿಂದ ಸ್ಥಾಪಿಸಲ್ಪಟ್ಟ ನಿರ್ದಿಷ್ಟ ಧ್ಯೇಯ ಧೋರಣೆಗಳಿಲ್ಲದ, ಸ್ಥಳೀಯ ಸ್ಥಿತಿಗತಿಗಳನ್ನನುಸರಿಸಿಕೊಂಡು ಚಿಕ್ಕಪುಟ್ಟ ವಲಯಗಳನ್ನು ಮಾತ್ರ ತಮ್ಮ ಕಾರ್ಯಕ್ಷೇತ್ರವನ್ನಾಗಿ ಇಟ್ಟುಕೊಂಡ ವಾರ್ಟ್, ಪಕ್ಷಗಳಿಂದ ಪ್ರಜಾಪ್ರಭುತ್ವ ಸುಗುಮವಾಗಿ ಸಾಗಬಹುದೆ? ಸಾಗಲಾರದು ದೇಶದಲ್ಲಿ ಇಷ್ಟರ ತನಕ ಪ್ರಕಟವಾಗಿರುವ ಚುನಾವಣಾ ಫಲಿತಾಂಶವನ್ನು ನೋಡಿದರೆ, ಇಂತಹ ಚಿಕ್ಕಪುಟ್ಟ ಅಪ್ರಯೋಜಕ ಪಕ್ಷಗಳಿಂದ ಯಾವುದೇ ಒಂದು ಗಾತ್ರ, ಸೂತ್ರದಲ್ಲಿ ಹಿರಿಯ ಪಕ್ಷವೆನಿಸಿರುವ ಪಕ್ಷಕ್ಕೆ ಅನೇಕ ಪ್ರಾಂತ್ಯಗಳಲ್ಲಿ ನಿಶ್ಚಿತ ಬಹುಮತದಿಂದ ಸ್ಥಿರವಾದ ಸರಕಾರವನ್ನು ನಿರ್ಮಿಸಲು ಸಾಧ್ಯವಾಗಬಹುದೆ? ಎಂಬ ಅನುಮಾನ ಉಂಟಾಗುವುದು ಹೀಗಿರದೆ ಇಂಗ್ಲಾಂಡಿನಲ್ಲಿರುವಂತೆ ಎರಡು ಅಥವಾ ಮೂರು ಪ್ರಬಲಪಕ್ಷಗಳೇ ಇಲ್ಲಿರುತ್ತಿದ್ದರೆ ಒಂದಲ್ಲ ಒಂದು ಪಕ್ಷಕ್ಕೆ ಅನಾಯಾಸವಾಗಿ, ಅಧಿಕಾರ ವಹಿಸಿಕೊಳ್ಳುವುದಾಗಿ ತಮ್ಮ ತಮ್ಮ ಯಾವುದೇ ಧ್ಯೇಯಧೋರಣೆಗಳ ಆಹುತಿ ಕೊಡದೆ, ಸರಕಾರ ರಚಿಸುವ ಅನುಕೂಲತೆ ದೊರೆಯುತ್ತಿತ್ತು. ಅಂತೆಯೇ ತಮ್ಮ ತಮ್ಮ ಗೊತ್ತುಗುರಿಯಂತೆ ಕಾರ್ಯನಿರ್ವಹಿಸಲು ಅನುವಾಗುತ್ತಿತ್ತು. ಹೀಗೆ ಅಧಿಕಾರ ಹೊತ್ತ ಪಕ್ಷವು ಅವಿಶ್ವಾಸಕ್ಕೆ ಗುರಿಯಾದರೆ ಆ ಜವಾಬ್ದಾರಿಗೆ ಹೆಗಲು ಕೊಡಲು ವಿರೋಧಿಪಕ್ಷದಲ್ಲಿ ಅರ್ಹತೆಯೂ ಇರುತ್ತಿತ್ತು. ಇದೇ ನಿಜವಾದ ಪ್ರಜಾ ಪ್ರಭುತ್ವದ ಅಸ್ಥಿವಾರ ಬದಲಿಗೆ, ಯಾವುದೇ ತತ್ವನಿಷ್ಠೆ ಇರದೆ, ಇದ್ದರೂ ಪರಸ್ಪರ ಉತ್ತರ ಧ್ರುವ, ಧಕ್ಷಿಣ ಧ್ರುವ ದಂತೆ ವಿರುದ್ಧ ಇರುವ ವಿವಿಧ ಪಕ್ಷಗಳು ಒಕ್ಕೂಟವಾಗಿ ಸರಕಾರ ರಚಿಸಿ, ಆಮೇಲೆ ಕಜ್ಜಾಡಿ ನುಚ್ಚುನೂರಾಗಿ, ಪದೇ ಪದೇ ದೇಶದಲ್ಲಿ ಚುನಾವಣೆಯಾಗುವಂತಿದ್ದರೆ, ಜನತೆಗೆ ಉತ್ತಮ ಸರಕಾರದ ಪ್ರಯೋಜನ ಕೈಗೆ ಲಭಿಸಬೇಕು, ಅದರಿಂದ ದೇಶಕ್ಕಾಗುವ ನಷ್ಟ ಮತ್ತು ಹಾನಿ ಎಷ್ಟೆಂಬುದನ್ನು ಲಕ್ಷಿಸಬೇಕು ಪ್ರಜಾಪ್ರಭುತ್ವದ ಸಫಲತೆಯಾಗಬೇಕಾದರೆ ಅಖಿಲ ಭಾರತದಲ್ಲಿ ವ್ಯಾಪಿಸಿಕೊಂಡಿರುವ, ಉಚ್ಚ ತತ್ವ, ಧ್ಯೇಯಗಳುಳ್ಳ, ಗಾತ್ರಸೂತ್ರದಲ್ಲಿ ನಿಜವಾದ ಶಕ್ತಿಇರುವ, ಜನತೆಯ ಪ್ರೀತಿ ವಿಶ್ವಾಸ, ಬೆಂಬಲ ಪಡೆದಿರುವ ಕೆಲವೇ ಪಕ್ಷಗಳಿರುವುದು ಉತ್ತಮ ಎಂದು ಆಗ ನಮಗೆ ನಿಚ್ಚಿತವಾಗುವುದು. ಆಗಲೆಯೇ ನಿಷ್ಪ್ರಯೋಜಕ, ನಿಶ್ಶಕ್ತ ಚಿಕ್ಕಪುಟ್ಟ ಪಕ್ಷಗಳಿಗೆ ಚುನಾವಣೆಯಲ್ಲಿ ಬೆಂಬಲಕೊಡುವುದು ದೇಶದ ಹಿತದೃಷ್ಟಿಯಿಂದ ಯುಕ್ತವಲ್ಲವೆಂದೂ ತೋರುವುದು.

ಗಾತ್ರದಲ್ಲಿ ದೊಡ್ಡದಿದ್ದು, ಅಖಿಲ ಭಾರತದಲ್ಲಿ ಬೇರುಬಿಟ್ಟು ವ್ಯಾಪಿಸಿಕೊಂಡಿರುವಾಗಲೂ, ಸೂತ್ರದಲ್ಲಿ ಸಮಂಜಸವಲ್ಲದ ಕೆಲವು ಪಕ್ಷಗಳೂ ನಮ್ಮ ದೇಶದಲ್ಲಿ ಇವೆ. ಹಿಂಸಾತ್ಮಕ ಅಥವಾ ಬಾಹ್ಯಂದ ಪಕ್ಷಗಳು ಈ ಸಾಲಿಗೆ ಸೇರುವುವು. ರಾಷ್ಟ್ರಪಿತ ಮಹಾತ್ಮಾಗಾಂಧಿಯವರ ನಮಗೆ ಹಾಕಿಕೊಟ್ಟಿರುವುದಾತ್ರ ಮೇಲ್ಪಂಕ್ತಿ ಎಂದರೆ ಗೊತ್ತುಮಾಡಿಕೊಂಡ ಗುರಿಯನ್ನು ಸಾಧಿಸುವ ಮಾರ್ಗವು ಶಕ್ತಬಾಹಿರವಾಗಿರಕೂಡದು, ಉತ್ತಮವಾಗಿಯೇ ಇರಬೇಕು ಎಂದು ಅಹಿಂಸೆ ನಮ್ಮ ನಿಷ್ಠೆಯ ತತ್ವ. ಇದರಿಂದಲೇ ಹಿಂದುಸ್ಥಾನಕ್ಕೆ ಸ್ವಾತಂತ್ರ್ಯ ದೊರಕಿಸಿಕೊಳ್ಳುವಂತಾಯಿತು ಯಾವುದೇ ಒಂದು ಧ್ಯೇಯವನ್ನು ಸೂರ್ಯಸಿಕೊಳ್ಳಲು ಹಿಂಸಾಧೋರಣೆಯನ್ನು ನಾವು ಅನುಸರಿಸುವಂತಿಲ್ಲ ಆದರೆ ತಮ್ಮ ಕಾರ್ಯಸಾಧನೆಗಾಗಿ ಇದ್ಯಾವುದರ ಪರಿವೆಯೂ ಇಲ್ಲದೆ ಹಿಂಸೆಗೆ ಕೇಸದ ಪಕ್ಷವು ಇಲ್ಲಿ ಇದೆ ಸಂಕುಚಿತ ಮನೋಭಾವನೆಯ, ಜಾತಿಮತದ ಪ್ರಶ್ನೆಗೆ ಮಹತ್ವವನ್ನು ಕೊಟ್ಟು ಜನತೆಯ ಐಕ್ಯತೆಯಲ್ಲಿ ಒಡಕು ತರುವ, ಜಾತೀಯ ಪಕ್ಷಗಳೂ ಇಲ್ಲಿವೆ ಯೋಗ್ಯ ಪ್ರಜಾಪ್ರಭುತ್ವದ ತಳಹದಿ ಎಂದರೆ ಶಾಂತಯುತ ನೀತಿ ಪ್ರಸಾರ, ವಾಕ್ ಸ್ವಾತಂತ್ರ್ಯ, ಚರ್ಚೆ-ಇದಕ್ಕಾಗಿ ರಾಜಕೀಯ ಪಕ್ಷಗಳ ಸ್ಥಾಪನೆ. ಅಂತೆಯೇ ನ್ಯಾಯ ವಿಧಾಯಕ ಕಾರ್ಯಕ್ರಮಗಳು. ಇದಕ್ಕೆ ಒಲಾತ್ಕಾರ ಅಥವಾ ಹಿಂಸೆ ಆನಗತ್ಯ. ಜನರ ಮೇಲೆ ಒಂದು ಪಕ್ಷದ ತತ್ವನಿಷ್ಠೆಯನ್ನು ಬಲಾತ್ಕಾರದಲ್ಲಿ ಹೊರಿಸುವ ಅಥವಾ ವ್ಯಕ್ತಿಪರ ವಿಳುವಳಿಕೆಯನ್ನು ಹಿಂಸಾತ್ಮಕವಾಗಿ ತಮ್ಮ ನಿರ್ಧಾರಕ್ಕೆ ಸರಿಯಾಗಿ ತಿದ್ದುವ, ವಾಕ್ ಸ್ವಾತಂತ್ರ್ಯವನ್ನು ಕಸಿದುಕೊಳ್ಳುವ ಪಕ್ಷದ ಕೈಯಲ್ಲಿ ಅಧಿಕಾರವಿತ್ತರೆ, ಇಲ್ಲವೇ ಅದನ್ನು ಒಂದು ರಾಜಕೀಯ ಪಕ್ಷವಾಗಿ ಪ್ರೋತ್ಸಾಹಿಸಿದರೆ ಅದರಿಂದ ನೇರಕ್ಕೆ ಬರುವುದು ನಿರಂಕುಶ ಪ್ರಭುತ್ವವಲ್ಲದೆ ಪ್ರಜಾಪ್ರಭುತ್ವವಲ್ಲ ಸೈರ್ವಸೆನ್ನು ಹುಟ್ಟಿಸಿ ಜನರು ಹಿಂಸೆಗೆ ಕೈಹೀಡುವಂತೆ ಮಾಡುವ ಜಾತೀಯ ಪಕ್ಷಗಳೂ, ಪ್ರಭುತ್ವ ಸಾಧನೆಗಾಗಿ ಹಿಂಸೆ ಮಾಡಲು ಹಿಂದೆಗೆಯದ ರಾಜಕೀಯ ಪಕ್ಷಗಳಿಂದ ದೇಶವಿದೇಶ ಸಂಪರ್ಕದಲ್ಲಿ ಒದಕು ಪಟ್ಟು ಅನರ್ದವಾಗಬಹುದಲ್ಲವೆ. ಜನಾಂಗದಲ್ಲಿ ಒಮ್ಮತ, ಏಕ್ಯತೆ ನಷ್ಟವಾಗಿ ಪರಸ್ಪರ ಪೈ

[ಉಳಿದ ಪುಟನೋಡಿರಿ]

ಹೊಸ ವರುಷದ ಶುಭಾಶಯಗಳು

ನಮ್ಮ ಪೋಷಕರಿಗೂ, ಹಿತಚಿಂತಕರಿಗೂ ಮತ್ತು ನಮ್ಮೊಡನೆ ವ್ಯವಹಾರ ನಡೆಸುವ ಸರ್ವರಿಗೂ

ನವವರುಷದಲ್ಲಿ

ಸುಖ, ಶಾಂತಿ, ಅಭಿವೃದ್ಧಿಯುಂಟಾಗಲೆಂದು ಆಶಿಸುತ್ತೇವೆ.

ಬೇಂಕಿಂಗ್ ವ್ಯವಹಾರ ಕ್ಷೇತ್ರದಲ್ಲಿ, ಭದ್ರತೆ, ಗುಪ್ತತೆ ಮತ್ತು ಸೇವೆಯನ್ನು ಹಸನ್ಮುಖಿಗಳಾಗಿ ಸಲ್ಲಿಸಲು ನಾವು ಸದಾ ಸಿದ್ಧರಿದ್ದೇವೆ.

ಈ ಶುಭಮುಹೂರ್ತದಲ್ಲಿ ಆಶ್ವಾಸನೆ ಈಯುತ್ತೇವೆ

ದಿ ಉಡುಪಿ ಬೇಂಕ್
ಲಿಮಿಟೆಡ್

ಪ್ರಧಾನ ಆಫೀಸು: ಉಡುಪಿ (ದ. ಭಾ)

THE
UDIPI BANK LTD.
H. O. UDIPI, S. I.

Advertising is a part of
Commercial Success.
You cannot succeed
without it.

ಅಮೃತಾಂಜನ

ತಲೆನೋವಿಗೆ, ಶಿರೋನೋವಿಗೆ, ಉಳುಕು ಉಬ್ಬಿಗೆ, ಭುಜ ಹಲ್ಲು ನೋವಿಗೆ ನೋವಿಗೆಗಳಿಗೂ, ಎದೆನೋವು, ಕಾಯಿಗಳು, ಜಾತುಕೊಳ್ಳುವುದು, ಚೇಳವಿಷಮುಂತಾದವು, ಪಕ್ಷವಾತ, ಮೊದಲಾದ ಎಲ್ಲಾರೋಗಗಳಿಗೂ ಸಿದ್ಧೌಷಧ

EGD

ಉಳುಕು ಕಡ್ಡಿ ಮದ್ದು ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್

ಪುದೀನಾಸು, ಬೊಂಬಾಯಿ ಮತ್ತು ಕಲ್ಕತ್ತ.

ಪ್ರಜಾಪ್ರಭುತ್ವ ನುತ್ತು ಎದುರು ಪಕ್ಷ

ಪ್ರತಿಯೊಂದು ಪಕ್ಷಕ್ಕೂ ಧ್ಯೇಯ ಧೋರಣೆಗಳು ಬೇಕು; ಅವನ್ನು ಸಾಧಿಸುವ ಕಾರ್ಯಕ್ರಮ ಬೇಕು. ಬರೀ ವಿರೋಧ ಕ್ಕಾಗಿ ವಿರೋಧಿಪಕ್ಷ ಬೇಕಾಗಿಲ್ಲ.

ಬರೆದವರ —ಶ್ರೀ ಕೆ. ಆರ್. ಆಚಾರ್, ಎಂ.ಎ.ಎಲ್ ಎಲ್-ಬಿ., ಮಂಗಳೂರು

ನಮ್ಮ ಸರಕಾರವನ್ನು ಪ್ರಜಾಪ್ರಭುತ್ವ ಎಂಬ ಹೇಳುವದಕ್ಕಿಂತಲೂ ಪ್ರಜಾ ಪ್ರತಿನಿಧಿ ಪ್ರಭುತ್ವವೆಂತಲೇ ಕರೆಯುವ ತುದು. ಪೂರ್ವ ಕಾಲದ ಗ್ರೀಕ್ ದೇಶ ದ ಪಟ್ಟಣ-ರಂತೆ ಅಥವಾ ಸಿಂಧು ನದಿ ತೀರದಲ್ಲಿ ಬಹಳ ಪೂರ್ವ ಕಾಲದಲ್ಲಿ ಪ್ರ ಜಾಪ್ರಭುತ್ವವೇ ಸ್ವಲ್ಪ ಕಾಲವಾದರೂ ಜಾರಿಯಲ್ಲಿದ್ದುದು ಚರಿತ್ರೆಯಿಂದ ತಿಳಿದು ಬರುತ್ತದೆ. ಸರಕಾರದ ಆಡಳಿತೆಯ ಮು ಖ್ಯಾಂಶವನ್ನು ಎಲ್ಲಾ ಪಟ್ಟಣಗರೂ ಕೂ ಡಿ ಮಹಾಸಭೆಯಲ್ಲಿ ನಿರ್ಣಯಿಸುತ್ತಿದ್ದ ರು. ರಾಷ್ಟ್ರವು (State) ಬಹಳ ಸಣ್ಣ ದಾಗಿತ್ತು. ಅಥೆನ್ಸಿನಂತಹ ಒಂದು ಪಟ್ಟ ಣ ಅಥವಾ ಅದಂ ಆಸುಪಾಸಿನ ಪ್ರದೇಶ ಗಳು ಸೇರಿದರೆ ಅದು ಒಂದು ಸಂಪೂರ್ಣ ಸ್ವಾತಂತ್ರ್ಯವಿದ್ದ ರಾಷ್ಟ್ರವಾಗಿತ್ತು. ಆಂ ಥಾ ರಾಜ್ಯಾಡಳಿತವನ್ನು ಎಲ್ಲಾ ಪ್ರಜೆಗ ಳ ಸಭೆಯಲ್ಲಿ ಕೂಡಿ ನಡೆಯುತ್ತಿದ್ದರು. ಂಥ ಸರಕಾರ ಕ್ರಮವಾಗಿ ನಡೆಯುವರೆ ವಿರೋಧ ಪಕ್ಷಗಳ ಅವಶ್ಯಕತೆ ಇರಲಿಲ್ಲ.

ಪ್ರಜಾಪ್ರತಿನಿಧಿ ಪ್ರಭುತ್ವ

ಆದರೆ ರಾಜ್ಯವು ವಿಸ್ತರಿಸಿಕೊಂಡು ಬಂದಂತೆ ಎಲ್ಲಾ ಪ್ರಜೆಗಳಿಗೆ ಸಭೆಯಲ್ಲಿ ಕೂಡಿಕೊಂಡು ಸರಕಾರವನ್ನು ನಡಿಸಲು ಅಸಾಧ್ಯವಾಯಿತು. ಒಂದೊಂದು ಪಟ್ಟ ಣ ಒಂದೊಂದು ರಾಜ್ಯವಾಗಿರಲು ಸಾಧ್ಯ ವಿಲ್ಲದೆ ಒಂದೊಂದು ದೇಶ ಒಂದೊಂದು ರಾಷ್ಟ್ರವಾಯಿತು (National State) ಪ್ರತಿ ಒಟ್ಟ ಪ್ರಜೆಗೂ ಸರಕಾರದ ಆಡಳಿ ತೆಯ ವಿಚಾರವನ್ನು ಚರ್ಚಿಸಲು ಒಂದು ಸ್ಥಳದಲ್ಲಿ ಕೂಡಲು ಅಸಾಧ್ಯವಾದ್ದರಿಂದ ಲೇ ಪ್ರಜೆಗಳು ಓಟನ್ನು ಕೊಟ್ಟು ಪ್ರತಿ ನಿಧಿಗಳನ್ನು ಆರಿಸಿ ವ ಸಂಪ್ರದಾಯ ಉಂ ಟಾಯಿತು. ಈ ಕ್ರಮವು ಇತರ ಎಲ್ಲಾ ದೇಶಗಳಿಗಿಂತಲೂ ಬಹಳ ಉತ್ಕೃಷ್ಟ ರೀ ತಿಯಲ್ಲಿ ಹುಟ್ಟಿ ಬೆಳೆದ್ದಿದಂದರೆ ನಮ್ಮನ್ನು 1917ನೇ ಆಗಸ್ಟ್ ತಾ 15ರ ವರೆಗೂ ಆಳಿದ ಬ್ರಿಟಿಷ್ ದ್ವೀಪಗಳಲ್ಲಿ ಪ್ರಜಾ ಪ್ರತಿನಿಧಿ ಸರಕಾರದ ಉತ್ಕೃವ.ವಾದ ಉದಾ ಹರಣೆ ಎಂದರೆ ಅತ್ಯಾಹತವಾಗಿ 1000 ವರ್ಷಗಳಿಗೂ ಮಿಕ್ಕಿ ಆಳ್ವಿ ನಡೆದುಬಂದ ಪ್ರಜಾಪ್ರತಿನಿಧಿ ಪ್ರಭುತ್ವ.

ಪಕ್ಷಗಳ ಸರಕಾರ (Party Government) ಪ್ರತಿ ಒಬ್ಬ ಪ್ರಜೆಗೆ ಸಭೆಯಲ್ಲಿ ಒಟ್ಟು ಕೂಡಿ ಚರ್ಚಿಸಲು ಅ ಸಾಧ್ಯವಾದ್ದರಿಂದ ಪ್ರತಿನಿಧಿಗಳನ್ನು ಆರಿ ಸಿ ಕಳುಹಿಸುವ ರಾಜಕೀಯಿಕ, ಅನಿವಾ ರ್ಯವಾಗಿ ಜನಿಸಿತು. ಪ್ರತಿನಿಧಿಗಳಾಗು ವವನು ಸರಕಾರದ ಮುಂದೆ ಬರಬಹುದಾ ದ ಮುಖ್ಯ ಪ್ರಶ್ನೆಗಳಿಗೆ ತನ್ನ ಅಭಿಪ್ರಾ ಯ ಏನೆಂಬುದನ್ನು ಜನರ ಮುಂದೆ ಇಡ ಲೇ ಬೇಕಾಯಿತು. ಇದರಿಂದ ರಾಜಕೀ ಯ ಪಕ್ಷಗಳ ಜನನವಾಯಿತು. ರಾಜ ಕೀಯದಲ್ಲಿ ಎಲ್ಲದಕ್ಕಿಂತಲೂ ಮುಖ್ಯ ವಿ ಭಾಗವೆಂದರೆ ವಿದೇಶ ಧೋರಣೆ. ಒಂದು ಉದಾಹರಣೆಯಾಗಿ ಈಗಿನ ಪರಿಸ್ಥಿತಿಯ ಲ್ಲಿ ತೆಗೆದುಕೊಳ್ಳುವದಿದ್ದರೆ, ನಮ್ಮ ಧೋ ರಣೆ ತಟಸ್ಥವಾಗಬೇಕು. ಅಥವಾ ರಷ್ಯ ದೊಡನೆ ಸ್ನೇಹ ಬೆಳೆಸಬೇಕೊ? ಅಲ್ಲ ಅ ಮೆಂಕದೊಡನೆ ಸಖ್ಯ ಮಾಡಿಕೊಳ್ಳಬೇ ಕೊ ಎಂಬ ಪ್ರಶ್ನೆ ಬರಬಹುದು. ಒಂ ದೊಂದು ಪಕ್ಷವೂ ಒಂದೊಂದು ಧೋರಣೆ ಯನ್ನು ಸ್ವೀಕರಿಸಬಹುದು. ಹಾಗೆಯೇ ದೇಶದ ಒಳ ಆಡಳಿತೆಯಲ್ಲಿಯೂ ಮು ಖ್ಯಾಂಗಗಳಲ್ಲಿ ಭಿನ್ನಾಭಿಪ್ರಾಯ ಉಂಟಾ ಗುತ್ತದೆ. ಇದರಿಂದಲೇ ಪಕ್ಷಗಳ ಉತ್ಪ ನ್ನವಾಗಿಯೂ ಪಕ್ಷದಲ್ಲಿ ಒಹುಮತಕ್ಕೆಂ ತ ಹೆಚ್ಚು ಸದಸ್ಯರು ಅರಿಸಿ ಬರುತ್ತಾರೊ ಅವರು ಸರಕಾರ ಎಂಟ್ಟುತ್ತಾರೆ. ಭಿನ್ನಾಭಿ ಪ್ರಾಯದ ಅಲ್ಪಸಂಖ್ಯಾಕರಾಗಿ ಆರಿಸಿ ಬಂದವರು ವಿರೋಧಿಗಳು ಯಾ ಕೇಳುವ ವರು ಆಗುತ್ತಾರೆ.

ವಿರೋಧ ಪಕ್ಷ

ಈ ವಿಚಾರವನ್ನು ಮನಸ್ಸಿಗಿ ವಿಮರ್ಶಿ ಸಿದರೆ ಬರೀ ವಿರೋಧ ಪಕ್ಷ ಎಂತ ಇಲ್ಲ ಎಂಬುದು ಸ್ಪಷ್ಟವಾಗುತ್ತೆ— ಯಾವ ಪ ಕ್ಷವೂ ಯಾವಾಗಲೂ ವಿರೋಧವಾಗಿಯೇ ನಿಲ್ಲಬೇಕೆಂತಿಲ್ಲ. ತನ್ನ ಧೋರಣೆಗೆ ಬಹು ಮತ ಸಿಕ್ಕಿದೊಡನೆ ಅದಕ್ಕೆ ಸರಕಾರ ಪ ಕ್ಷವಾಗುತ್ತೆ—ಅಲ್ಪಸಂಖ್ಯೆಯಲ್ಲಿ ಆರಿಸಿ ಬಂದೊಡನೆ ವಿರೋಧ (opposition) ಪಕ್ಷವಾಗುತ್ತೆ. ಬರೀ ವಿರೋಧಕ್ಕಾಗಿ ಪಕ್ಷದ ಆಗತ್ಯವಿಲ್ಲ. ಆದಕ್ಕೆ ಅರ್ಥವೂ ಇಲ್ಲ. ಚುನಾವಣೆಯ ಸಂದರ್ಭಗಳಲ್ಲಿ ಸರಕಾರಕ್ಕೆ ವಿರೋಧ ಪಕ್ಷ ಬೇಕು, ಅದ ಕ್ಕೋಸ್ಕರ ತಮಗೆ ಓಟು ಕೊಡಬೇಕೆಂತ ಜೇಳಿದ ಹುರಿಯಾಳೂ ಇದ್ದಾರೆ. ಆದರೆ ಪ್ರಜಾಪ್ರತಿನಿಧಿ ಪ್ರಭುತ್ವ ಜಾರಿಯಲ್ಲಿರು ವ ದೇಶಗಳಲ್ಲಿ ಇದಕ್ಕೆ ಅರ್ಥವೇ ಇಲ್ಲ. ಪ್ರತಿಯೊಂದು ಪಕ್ಷಕ್ಕೂ ಒಂದು ಧ್ಯೇಯ ಬೇಕು. ಅದನ್ನು ಸಾಧಿಸುವ ಕಾರ್ಯ ಕ್ರಮ ಬೇಕು. ತಮಗೆ ಬಹುಮತ ಸಿಕ್ಕಿ ದರೆ ಅವರು ಸರಕಾರ ಕಟ್ಟಿ ತಮ್ಮ ಧ್ಯೇ ಯವನ್ನು ಸಾಧಿಸಬೇಕು. ಈ ಸರಿಯಾ ದ ಕ್ರಮವನ್ನು ಆರಿಯದೆ ಕೇವಲ ವಿ ರೋಧಿಯಾಗುತ್ತೇನೆಂತ ಹೇಳುವದರಲ್ಲಿ ಹುರುಳಿಲ್ಲ. ಇಂಥಾ ಧೋರಣೆಯಿಂದ ದೇಶಕ್ಕೆ ಹಿತ ಆಗಲಾರದು. ನಮ್ಮ ದೇಶ ದಲ್ಲಿ ಪ್ರಜಾ ಸರಕಾರ ಮೆರೆಯಬೇಕಾದರೆ ಸರಿಯಾದ ತತ್ವವನ್ನು ಇಟ್ಟುಕೊಂತು ಅದನ್ನು ಸಾಧಿಸುವ ಕಾರ್ಯಕ್ರಮ ನಿಶ್ಚ ಯಿಸಿಕೊಂಡು ಪಕ್ಷಗಳು ಹುಟ್ಟಬೇಕು, ಬೆಳೆಯಬೇಕು. ಅವುಗಳು ಸಮಯ ಬಂ ದಂತೆ ಓಟಿಗಾಗಿ ತಮ್ಮ ಧ್ಯೇಯವನ್ನು ಬಿಟ್ಟು ಕೊಡಬಾರದು ಹಾಗೆ ಪಕ್ಷಗಳ ನ್ನು ಕಟ್ಟದರೇನೇ ಪ್ರಜಾಪ್ರತಿನಿಧಿ ಪ್ರ ಭುತ್ವ ಜಯಶೀಲವಾದೀತು. ನಮ್ಮ ಭಾ ಟನೆ ಫಲಕಾರಿಯಾದೀತು. ಈ ಕ್ರಮ ಸರಿಯಾದ ರಾಜಕೀಯ ಪಕ್ಷಗಳಿಗೆ ಹುಟ್ಟ ಬೆಳೆಯುವುದಕ್ಕೆ ಪ್ರತಿ ಒಬ್ಬರ ಸಹಾನು ಭೂತಿ ಕೋರಿಸುವದಲ್ಲದೆ ವಿರೋಧಾಭಿ ಪ್ರಾಯ ವಿರುವವರಿಗೂ ಕೂಡ ಪ್ರೋತ್ಸಾ ಹ ಕೊಡುವುದು ಅಗತ್ಯ

ಆನಂದ ಗ್ರಂಥಮಾಲಾ, ಹುಬ್ಬಳ್ಳಿ.

(ಸಂಪಾದಕರು: ಶ್ರೀ ಪಂ. ವೆಂಕೋಬಾಚಾರ್ಯ, ಬಿ. ಎ; ಬಿ. ಟಿ.)

ಒಂದು ವರುಷದಲ್ಲಿ ಸುಂದರ ನಾಲ್ಕು ಪುಸ್ತಕಗಳು

ಚಂದಾಹಣ:

ಸಾಮಾನ್ಯ ಪ್ರತಿಗಳು ರೂ ೫-೮-೦
ಉತ್ತಮ ಪ್ರತಿಗಳು (ಶಾಲೆ, ಕಾಲೇಜು ವಾಚನಾಲಯ) ರೂ. ೬-೮-೦

ಈ ವರುಷ ಪ್ರಕಟಿತ ಪುಸ್ತಕಗಳು:-

1 ಕಾಂತಂ ಶರಣ್ಯಾಕ್ಕಿಗಳು (ಶೃಂಗಾರ ಕಾದಂಬರಿ) ಸಾ. ಪ್ರತಿ ೧-೮-೦ ಉ. ಪ್ರತಿ ೨-೦-೦
2 ಇಮೆಲ್ (ಮೋಜಿನಾಸಾರ ಶೃಂಗಾರ ಕಾದಂಬರಿ) ಸಾ. ಪ್ರತಿ ೧-೧೩-೦ ಉ. ಪ್ರತಿ ೨-೮-೦

ಫೆಬ್ರುವರಿಯಲ್ಲಿ ಪ್ರಕಟವಾಗುವ ಪುಸ್ತಕಗಳು:-

3 ಸೈಮನ್ನನಕಂದೆ (ವಿನಿಧ ಕತೆಗಳು) ಸಾ. ಪ್ರತಿ ೧-೧೩-೦ ಉ ಪ್ರತಿ ೨-೮-೦
4 ಪೂರ್ಣಮಾ (ಸಂಸಾರ ಚಿತ್ರಗಳು) ಶ್ರೀ ಕೆ. ಸಿದ್ದಪ್ಪ, ಸಾ. ಪ್ರತಿ ೧.೮.೦ ಉ. ಪ್ರತಿ ೨.೪.೦

ಎಜಂಟರಿಗೆ ಧಾರಾಳವಾದ ಕಮಿಷನ್

೨೦೬೦ ಗಾಂಧೀ ಗಲ್ಲಿ ಹುಬ್ಬಳ್ಳಿ } ವ್ಯವಸ್ಥಾಪಕರು: ಆನಂದ ಗ್ರಂಥಮಾಲಾ.

ಹೈಕೋರ್ಟು ಶ್ರೀಮನ್ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ ಬಾರ್‌ಎಟ್‌ಲಾ ಆಂಬಳೆ ನರಸಿಂಹ ಪಂಡಿತರ ಮನೆತನ

ಎ. ರಾಮಸ್ವಾಮಿ ಅಯ್ಯಂಗಾರವರ

****ಸಂತಾನ ಸಿಂಧೂರ****

ಬಹಿಷ್ಠೆ ಸಂಬಂಧದ ಹೊಟ್ಟೆನೋವು ಉಂ ಟು ಮಕ್ಕಳಿಲ್ಲ, ಇಂಥವರಿಗೂ ಮತ್ತು ಬಹಿಷ್ಠೆ ಸಂಬಂಧದ ಹೊಟ್ಟೆನೋವಿನ ಜೊತೆಗೆ ತಲೆನೋವು, ನಡುಬೆಳ್ಳೆ, ಬೆನ್ನು ನೋವು, ಆಜೀರ್ಣ, ಕೆಮ್ಮು, ಸಿದ್ಧಾಭಂಗ, ಜಂಗುಷ್ಟೆ ಇತ್ಯಾದಿ ಗುಪ್ತವ್ಯಾಧಿಗಳಿಗೂ

ಗ್ಯಾರಂಟೀ ಔಷಧ-

ಎದ್ರಿರು—ಭವಾನಿ ಅಂಮ ಕೂಡು

1-2-4ನೇ ಎದ್ರಿಗಳಿಗೆ ಈ ಮೂಲಕ ತಿಳಿಸುವದೇನೆಂದರೆ

1ನೇ ಎದ್ರಿ ಭವಾನಿ ಅಂಮ ಹೊಸ ಮನೆ ನಡಸಿಂಗ ರಾಯರ ಹೆಂಡ್ತಿ, 2ನೇ ಎದ್ರಿ ರಾಜಾ ಬಾಯಿ ರಾಯರ್ಡ್ ಕಾಲಂ ಡಿಸ್ಟ್ರಿಕ್ಟ್ ಇನ್ಸ್‌ಪೆಕ್ಟರ್ ಪದ್ಮನಾಭಯ್ಯನ ಹೆಂಡ್ತಿ, 4ನೇ ಎದ್ರಿ-ಶಾಂತಾಬಾಯಿ ರಿಟಾರ್ಡ್ ಸಬ್ ರಿಜಿಸ್ಟ್ರಾರ್ ರಾಮಕೃಷ್ಣ ರಾಯರ ಹೆಂಡ್ತಿ -ದಿಜ್ಞಾಂಮ ಗ್ರಾಸೆಸ್ಸರು

ಮೇಲ್ಕಂಡ S. C 61/1945ನೇ ದಿಕ್ರಿಯ ಅಮಲ್ ಜಾರಿಯ ಬಗ್ಗೆ ಅರ್ಜಿದಾರನು ಮೇಲ್ಕಂಡ ಕೋರ್ಟಿನಲ್ಲಿ ಅರ್ಜಿಪಾಡಿಕೊಂಡಿದ್ದಾನೆ. ಆದುದರಿಂದ ಅಮಲ್‌ದಾರಿ ಬಾಕಿ ನಡಸಿಕೊಡುವದು ಎಂಬುದಕ್ಕೆ ಸಬಬು ತೋರಿಸಲಿಕ್ಕೆ ತಾರೀಕು 11-2-1952ಕ್ಕೆ ಮೇಲ್ಕಂಡ ಕೋರ್ಟು ಮುಂದೆ ನೀವು ಹಾಜರು ಆಗಬೇಕೆಂತ ಆದುದರಿಂದ ನಿಮಗೆ ನೋಟೀಸು ಕೊಡೋಣವಾಗುತ್ತದೆ.

B. Mahebala Holla,
Advocate for Petitioner
ಮೊಕ್ಕಾಂ ಕುಂದಾಪುರ ತಾ 23-1-52

75

ಅಂತರಂಗದ ಕನ್ನಡ ಕಾವೇಂಬರಿ, ನಾಟಕ, ಕವಿತೆ, ಚಿತ್ರ ಪ್ರಬಂಧ ಮೊದಲಾದ ನಾನಾ ಬಗೆಯ 75 ಪುಸ್ತಕಗಳನ್ನು ಒಟ್ಟಿಗೆ ರೂ 20ಕ್ಕೆ ಕೊಡಲಾಗುವುದು.

ವಿವರಕ್ಕೆ— ಅಂತರಂಗ ಆಫೀಸು, ಉಡುಪಿ, ಆಫೀಸು ನವಯುಗ ಬಿಲ್ಡಿಂಗ್ ಎದುರು, ಉಡುಪಿ.

ಲೋಕಾಂತ

ಇಜಿಪ್ತದಲ್ಲಿ ನಿಲಿಟರಿ ಚಟುವಟಿಕೆ

ಇಜಿಪ್ತದಲ್ಲಿ ಬ್ರಿಟಿಷ ವಿರೋಧಿ ಗಲಭೆಗಾರರ ಚಟುವಟಿಕೆಯು ಉಗ್ರ ರೂಪವನ್ನು ತಾಳಿದೆ ಬ್ರಿಟನ್ನಿನೊಂದಿಗೆ ರಾಜತೀಯ ಸಂಬಂಧವನ್ನು ಕಡಿದುಕೊಳ್ಳಲು ಇಜಿಪ್ತ ಮಂತ್ರಿ ಮಂಡಳ ನಿರ್ಧರಿಸಿದೆಯೆಂದು ತಿಳಿದುಬರುತ್ತದೆ. ೨೬ರಿಂದ ಪೋರ್ಟ್ ಸಯೀದ್‌ನಲ್ಲಿ ಕಾಯ್ದೆಯನ್ನು ಸಾರಲಾಗಿದ್ದು ಮುಖ್ಯ ಮಂತ್ರಿಗಳಾದ ನಹಾಸಪಾಶ ಅವರನ್ನು ವೀಲಿಟರಿ ಗವರ್ನರ ಜನರಲ್ಲರೆಂದು ನೇಮಿಸಲಾಗಿದೆ. ಪೋರ್ಟ್ ಸಯೀದ್‌ನಲ್ಲಿ ಬ್ರಿಟಿಷರು ಇಜಿಪ್ತಿಯನ್ನರ ವಿರುದ್ಧ ವ್ಯಕ್ತಿ ಭಟನೆ ವ್ಯಕ್ತಪಡಿಸಿದ್ದರೂ ಒಂದೇ ಸವನೆ ಅಶ್ರುವಾಣಕಾರಕ ಕೃತಿಗಳನ್ನೆಸಗುತ್ತಿರುವರು ಈ ಹೊಸಧಾಳಿಯಿಂದ ಈ ವರೆಗೆ ಸಹನೆ ತಾಳಿದ ಇಜಿಪ್ತಿಯನ್ನರು ತಮ್ಮ ರಾಷ್ಟ್ರೀಯ ಭಾವನೆಯನ್ನು ಇಂದು ವ್ಯಕ್ತಪಡಿಸುತ್ತಿರುವರು. ಕಿಡಿಗೇಡಿಗಳು ಮತ್ತು ವಿಧ್ವಂಸಕರು ಪರಿಸ್ಥಿತಿಯ ದುರ್ಲಾಭ ಪಡೆಯುತ್ತಿರುವರು. ಅವರ ಆಟಸ್ಫೋಟದಿಂದ ಹೀನಾಚಾರಗಳು ನಡೆಯುವ ಸಂಭವವಿದೆ. ಆದಕ್ಕಾಗಿ ಸರಕಾರವು ಶಾಂತಿ ಸುವ್ಯವಸ್ಥೆಯನ್ನು ಕಾಯಲು ದಂಡಿನ ಕಾಯ್ದೆಯನ್ನು ಸಾರಿರುವದು ಎಂದು ಹೇಳಲಾಗಿದೆ.

ನೇಪಾಳದಲ್ಲಿ ಶಾಂತ ವಾತಾವರಣ

ಈಚೆಗೆ ಕೆಲವು ದಿನಗಳ ಹಿಂದೆ ನೇಪಾಳದಲ್ಲಿ ಉಂಟಾದ ಅಶ್ರುವಾಣ ಗಲಭೆಯು ಈಗ ಸಂಪೂರ್ಣ ಹತೋಟಿಗೆ ಬಂದಿದ್ದು ರಾಜಧಾನಿಯಲ್ಲಿ ಶಾಂತ ನೆಲೆಸಿದೆಯೆಂದು ತಿಳಿದುಬರುತ್ತದೆ. ಭಂಡುಗಾರರ ಧುರೀಣರಾದ ಡಾ। ಕೆ. ಆಯ್-ಸಿಂಗರೂ ಅವರ ಸಂಗಡಿಗರೂ ಭೂಗತರಾಗಿರುವರೆಂದು ಹೇಳಲಾಗಿದೆ- ಅವರ ಶರಣಾಗತಿಗಾಗಿ ರಕ್ಷಣಾ ಶಾಖೆ ವಿಶೇಷ ಮುತುವರ್ಜಿ ವಹಿಸಿದೆ-

ಮುಂಬಯಿಯಲ್ಲಿ ಚಲಚಿತ್ರ ಮಹೋತ್ಸವ

ಅಂತರರಾಷ್ಟ್ರೀಯ ಚಲಚಿತ್ರ ಮಹೋತ್ಸವವು ಆ. ಭಾ. ಸಂಪ್ರ ಶಾಖಾ ಮಂತ್ರಿ ಆರ್. ಆರ್. ದಿವಾಕರರಿಂದ ಮುಂಬಯಿಯಲ್ಲಿ ದಿನಾಂಕ ೩೪ರಿಂದು ಉದ್ಘಾಟನೆಗೊಳ್ಳಲ್ಪಟ್ಟಿತು. ವಿಶ್ವದಲ್ಲೇ ಪ್ರಥಮವೂ ಅತ್ಯಂತ ಮಹತ್ವಪೂರ್ಣವೂ ಆದ ಉತ್ಸವಕ್ಕೆ ಅಮೆರಿಕಾ, ರಷ್ಯ, ಬ್ರಿಟನ್, ಫ್ರಾನ್ಸ್, ಜರ್ಮನಿ, ಆಸ್ಟ್ರೇಲಿಯ, ಪಾಕಿಸ್ತಾನ್ ಮುಂತಾದ ೭೮ ರಾಷ್ಟ್ರಗಳ ಪ್ರತಿನಿಧಿಗಳು ಆಗಮಿಸಿರುವರು. ಅಮೆರಿಕಾ, ಬ್ರಿಟನ್, ರಷ್ಯ, ಫ್ರಾನ್ಸ್ ಮುಂತಾದ ರಾಷ್ಟ್ರಗಳು ಪ್ರದರ್ಶನಾರ್ಥವಾಗಿ ಉತ್ಕೃಷ್ಟ ಚಿತ್ರಗಳನ್ನು ತಂದಿರುವವು. ಭಾರತವೂ ರಾಜಕಪೂರನ ಅವಾರಾ (ಹಿಂದಿ) ಅಮರ ಭೂಪಾಳಿ (ಮರಾಠಿ) ಬಾಬಲಾ (ಬಂಗಾಲಿ) ವಾತಾಪಿ ಭೈರವಿ (ತೆಲಗು) ಚಿತ್ರಗಳನ್ನು ಆರಿಸಿದೆ. ನಮ್ಮ ದೇಶದ

ಕೊರಡ್ಕಲ್ ಶ್ರೀನಿವಾಸರಾವ್
ವಿರಚಿತ
ಸಲಭದಲ್ಲಿ ಇಂಗ್ಲಿಷ್
ಆಂಗ್ಲ ಸ್ವಯಂಬೋಧಿನಿ.
ಬೆಲೆ ರೂ. 1 8 0
ನವಭಾರತ ಪುಸ್ತಕ ಭಂಡಾರ, ಉಡುಪಿ.

ನಾಲ್ಕು ಶಹರುಗಳಲ್ಲಿ ಬೇರೆ ಬೇರೆ ದಿನಗಳಲ್ಲಿ ಈ ಜಾತ್ರೆಯು ಜರಗುವದು. ಪ್ರಸಂಚದ ನಟಶ್ರೇಷ್ಠರೂ, ಚಿತ್ರ ತಯಾರಕರೂ, ನಿರ್ದೇಶಕರೂ ಈ ಸಮಾರಂಭಕ್ಕೆ ಆಗಮಿಸಿದ್ದು ಅವರು ಭಾಂಡದ ಕಲಾಪೂರ್ಣ ಪ್ರದೇಶಗಳನ್ನು ಸಂದರ್ಶಿಸುವದರ ಸಲುವಾಗಿ ಇನ್ನೂ ಮೂರು ತಾಲ್ಕು ವಾರ ಇಲ್ಲಿ ಉಳಿಯುವರು.

ಧಾರ್ಮಿಕ ಸಮಸ್ಯೆಯಿಂದ ದೇಶದ ಅಸ್ತಿತ್ವಕ್ಕೆ ಗಂಡಾಂತರ

ಭೂದಾನ ಯಜ್ಞವನ್ನು ಕೈಗೊಂಡಿರುವ ಆಚಾರ್ಯ ವಿನೋಬಾ ಭಾವೆಯವರು ಸಾರ್ವಜನಿಕ ಸಭೆಯಲ್ಲಿ ಮಾತನಾಡುತ್ತಾ "ಗಾಳಿ, ನೀರು ಮತ್ತು ಬೆಳಕುಗಳಂತೆ ಭೂಮಿಯೂ ದೇವದತ್ತವಾದುದು. ಅದು ಸಕಲರ ಹಿತಕ್ಕಾಗಿ ಇದೆ ಎಂಬುದನ್ನು ಜನರು ಅರಿತುಕೊಂಡೊಡನೆ ನನ್ನ ಬಂಧುಗಳ ಶುಶ್ರೂಷಣೆಗಾಗಿ ತಮ್ಮಿಂದಾದುದೆಲ್ಲವನ್ನು ಕೊಡಲು ಮುಂದೆ ಬರುವರು- ಜಮೀನ್ದಾರ ಮತ್ತು ಭೂಮಿಯಿಲ್ಲದವರ ಮ್ಹಾಲಕ ಮತ್ತು ಸೇವಕ ಇವರಲ್ಲಿಯ ತಾರತಮ್ಯದ ಸಮಸ್ಯೆಗಳು ಈಗಾಗಲೇ ದೇಶದಲ್ಲಿ ಇರುವ ಆನೇಕ ಸಾಮಾಜಿಕ ಮತ್ತು ಧಾರ್ಮಿಕ ಕ್ಲೇಶ ಸಮಸ್ಯೆಗಳೊಡನೆ ಕೂಡಿಕೊಂಡರೆ ದೇಶವು ಶುಂಡು ಶುಂಡಾಗಿ ಹೋಗುವದು ನಿಶ್ಚಿತ. ಆದುದರಿಂದ ಇಡೀ ದೇಶದ ಆರ್ಥಿಕ ರಚನೆಯನ್ನು ಬದಲಿಸಬೇಕಾಗಿದೆ. ಆದರೆ ಇದು ಬಲಿದಾನವಿಲ್ಲದೆ ಸಾಧ್ಯವಾಗದು. ಇದಕ್ಕಾಗಿ ವ್ಯಕ್ತಿಗತ ಸ್ವಾರ್ಥವನ್ನು ಮರೆತು ಸಮಾಜ ಮತ್ತು ದೇಶಗಳ ಸಾಮೂಹಿಕ ಕಲ್ಯಾಣದೃಷ್ಟಿಯ ಬರಬೇಕಾಗುವದು. ಪ್ರತಿಯೊಬ್ಬನೂ ತನ್ನ ಸಂಪತ್ತು ಬುದ್ಧಿ ಮೊದಲಾದವನ್ನು ದೇಶಕ್ಕಾಗಿ ಬೀರಲು ನಾನೇ ಸಂಚಾರ ಕೈಕೊಂಡಿದ್ದೇನೆ" ಎಂದು ಹೇಳಿದರು

೫೯ ವಯಸ್ಸಿನ ಜಯಪ್ರಕಾಶ ನಾರಾಯಣರ ಹೋಳಿಕೆ

ಅಖಿಲ ಭಾರತ ಕಮ್ಯೂನಿಸ್ಟ ಪಕ್ಷದ ಕಾರ್ಯದರ್ಶಿಗಳಾದ ಶ್ರೀ ಅಜಯ ಕುಮಾರ ಘೋಷರು ಸುದ್ದಿಗಾರರ ಸಭೆಯಲ್ಲಿ ಮಾತನಾಡುತ್ತಾ "ವಿಧಾನ ಸಭೆಗೆ ಆರಿಸಿ ಬಂದ ಸ್ಥಾನಬದ್ಧರ ಬಿಡುಗಡೆಗಾಗಿ ತಮ್ಮ ಪಕ್ಷವು ಚಳುವಳಿ ಪ್ರಾರಂಭಿಸುವದೆಂದೂ ಫೆಬ್ರುವರೀ 3ನೇ ದಿನಾಂಕ ಸ್ಥಾನಬದ್ಧರ ಬಿಡುಗಡೆ ದಿನವನ್ನಾಚರಿಸಲಾಗುವದೆಂದೂ ಆಂಧ್ರವು ಪ್ರತ್ಯೇಕ ಪ್ರಾಂತವಾದರೆ ಅಲ್ಲಿ ಕಮ್ಯೂನಿಸ್ಟ ಸರಕಾರ ನಿಶ್ಚಿತವೆಂದೂ ಹೇಳಿದರು-

ಘಟನೆಯನ್ನು ತಿದ್ದುವದು ನೈತಿಕ ಮಾರ್ಗವಲ್ಲ.

ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಪ್ರಧಾನ ಕಾರ್ಯದರ್ಶಿಗಳೂ ಮುಂಬೈ ರಾಜ್ಯದ ವಿಧಾನ ಸಭೆಯ ಸದಸ್ಯರೂ ಆದ ಶ್ರೀ. ಜಿ. ವಿ. ಹಳ್ಳಿಕೇರಿಯವರು ಚುನಾವಣೆಯಲ್ಲಿ ಪರಾಭವಗೊಂಡಿರುವ ಮುಂಬಯಿಯ ಗೃಹಸಚಿವ ಮುಂಬರಜಿ ದೇಸಾಯಿಯವರನ್ನು ಘಟನೆಯನ್ನು ತಿದ್ದಿ ಮಂತ್ರಿಪದವನ್ನು ಕಲ್ಪಿಸಿಕೊಡುವ ವಿಚಾರದಲ್ಲಿ ಟೈಮ್ಸ ಆಫ್ ಇಂಡಿಯದ ಪ್ರತಿನಿಧಿಗೆ ಕೊಟ್ಟ ಹೇಳಿಕೆಯು ಕಾಂಗ್ರೆಸ್ ಕಾರ್ಯಕರ್ತರಲ್ಲಿ ವಿವಂಚನೆಯನ್ನುಂಟುಮಾಡಿದೆ. ಈಗಾಗಲೇ ಕರ್ನಾಟಕದ ಜನರು ಪ್ರಮುಖರಾಂಗ್ರೆಸ್ಸಿಗರು ಇದು ಜಿ.ವಿ. ಹಳ್ಳಿಕೇರಿಯವರ ವೈಯಕ್ತಿಕ ಅಭಿಪ್ರಾಯವೇ ಹೊರತು ಕರ್ನಾಟಕಸ್ಥರ ಅಭಿಪ್ರಾಯವಾಗಲಾರದೆಂದು ಹೇಳಿದ್ದಾರೆ. ಶ್ರೀ ಜಿ. ವಿ. ಹಳ್ಳಿಕೇರಿಯವರು ಟೈಮ್ಸ ಆಫ್ ಇಂಡಿಯಕ್ಕೆ ಕೊಟ್ಟ ಹೇಳಿಕೆಯಾಂತಿದೆ

"ಪ್ರಜಾಸತ್ತಾತ್ಮಕ ಪಕ್ಷದ ಘಟನೆಯನ್ನು ಬೇಕಾದಾಗ ಮತ್ತು ಅವಸರದಲ್ಲಿ ಬದಲಿಸತಕ್ಕದಲ್ಲ ಏನಾದರೂ ಬದಲಾವಣೆಗಳನು ಮಾಡುವದಿದ್ದರೆ ಯೋಗ್ಯ ತತ್ವಗಳನ್ನು ಆಧಾರವಾಗಿಟ್ಟುಕೊಂಡು ಹಾಗೆ ಮಾಡಬೇಕು ವ್ಯಕ್ತಿಗಳಿಗಿಂತಲೂ ತತ್ವಗಳಿಗೆ ಹೆಚ್ಚು ಪ್ರಾಮುಖ್ಯವಿರುವದರಿಂದ ತತ್ವಗಳನ್ನು ಬಹಳ ಹೆಗುಂವಾಗಿ ಎಂದೂ ನೋಡಬಾರದು ಶ್ರೀ ಮುಂಬರಜಿ ದೇಸಾಯರ ಬಗ್ಗೆ ನನ್ನಲ್ಲಿ ಪೂಜ್ಯ ಭಾವನೆಗಳಿವೆ. ಅವರಿಗೆ ಚುನಾವಣೆಯಲ್ಲಿ ಸೋಲುಂಟಾಗಿದ್ದರಿಂದ ನನಗೆ ಅತೀವ ಕೆಡಕೆನಿಸಿದೆ. ಆದರೆ ನನ್ನಲ್ಲಿ ಓರ್ವ ವ್ಯಕ್ತಿಯ ಬಗ್ಗೆ ಎಷ್ಟೇ ಪೂಜ್ಯಭಾವನೆ ಆದರಾಭಿಮಾನಗಳಿದ್ದರೂ ಆ ವ್ಯಕ್ತಿಯನ್ನು ಬಿಟ್ಟುರಿ ಕೆಲಸವಾಗದೆಂಬ ವಿಚಾರವನ್ನು ತಲೆಯಲ್ಲಿಟ್ಟುಕೊಂಡು ಯಾವುದೇ ಕ್ರಮವನ್ನು ಕೈಕೊಳ್ಳುವುದು ಕಾಂಗ್ರೆಸ್ ಸಂಸ್ಥೆಗೂ ಶಾಸನ ಸಭೆಯ ಕಾಂಗ್ರೆಸ ಪಕ್ಷಕ್ಕೂ ಭೂಷಣವೆನಿಸುವುದಿಲ್ಲ. ಮಹಾತ್ಮಾ ಗಾಂಧಿಯವರು ಜೀವಂತವಿರುತ್ತಿದ್ದರೆ ಈ ಸೂಚನೆಗೆ ಎಂದೂ ಬೆಂಬಲ ಕೊಡುತ್ತಿರಲಿಲ್ಲ ಶ್ರೀ ಮುಂಬರಜಿ ದೇಸಾಯಿಯವರು ತೋರಿದ ಸೇವೆ-ತ್ಯಾಗಗಳ ಪಥದಲ್ಲಿ ಬೆಳೆದು ಬಂದಿರುವದರಿಂದ ಈ ಸೂಚನೆಗೆ ಅವರು ಸ್ವತಃ ಪುಷ್ಟಿಕೊಡುವುದಿಲ್ಲವೆಂದು ನನಗೆ ನಂಬಿಕೆಯಿದೆ. ಕಾಂಗ್ರೆಸ ಪಕ್ಷದಲ್ಲಿ ಧುರೀಣತ್ವದ ಹೊಣೆಯನ್ನು ನಿರ್ವಹಿಸಲು ಯೋಗ್ಯ ಜನರು ಯಾರೂ ಇಲ್ಲವೆಂದು ಹೇಳಲಾಗದು. ಸದಸ್ಯನೊಬ್ಬನನ್ನು ಪಕ್ಷದ ಧುರೀಣನನ್ನಾಗಿ ಆರಿಸಿದ ಪ್ರಸ್ತಾಪವು ಯಾವುದೇ ಪ್ರಜಾಸತ್ತಾತ್ಮಕ ಸಂಸ್ಥೆಯಲ್ಲಿ ಕಂಡು ಬರುವುದಿಲ್ಲ. ಕಾರಣ ಘಟನೆಯಲ್ಲಿ ತಿದ್ದುಪಡಿ ಮಾಡಿ ಇದನ್ನು ಸಾಧ್ಯವನ್ನಾಗಿ ಮಾಡಲು ಪ್ರಯತ್ನಿಸುವದು ವ್ಯರ್ಥ ಪ್ರಯತ್ನ ವಿರೋಧಿಗಳನ್ನಿಸುವದು."

ಝಾಂಡುರವರ ZANDU'S
ಕೇಸರಿ ಜೀವನ KESARI JIVAN
ವನ್ನು ಉಪಯೋಗಿಸಲು ಒತ್ತಾಯಿಸಿರಿ.
ಕೆಮ್ಮು, ನೆಗಡಿ, ಆಸ್ತಮ, ಧ್ವನಿ ಒಡೆಯುವಿಕೆ ಮೊದಲಾದುವುಗಳಿಗೆ ಅತ್ಯುತ್ತಮ ಔಷಧಿ.
ಕೇಸರಿ ಜೀವನವು ತಾರುಣ್ಯವನ್ನೂ, ನವಚೈತನ್ಯವನ್ನೂ ಉಂಟುಮಾಡಿ ದೇಹದ ಅಂಗಾಂಗಗಳನ್ನೂ ಪುಷ್ಟಿಯಾಗಿ ಮಾಡಬಲ್ಲುದು. ಮೆದುಳಿನ ನಿತ್ರಾಣವಿರುವ ಅಧ್ಯಾಪಕರಿಗೂ, ವಿದ್ಯಾರ್ಥಿಗಳಿಗೂ, ವಕೀಲರಿಗೂ, ಜಡ್ಜರಿಗೂ, ಹೆಚ್ಚಿಗೆ ಸರ್ವರಿಗೂ ಉತ್ತಮ ಪರಿಣಾಮಕಾರಿ ಔಷಧ.
ಕೇಸರಿ ಜೀವನ ದೊರಕುವ ಸ್ಥಳಗಳು:-
1. ಕೆಸರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್‌ಸ್ಟಿಟ್ಯೂಟ್,ಲಿ.,ಉಡುಪಿ,
2. ವಿ. ವಿ. ಶೆಣೈ, ಕೆಮಿಸ್ಟ್ಸ್, ಕಾರ್ಕಳ, 3. ಶಾ ಕಂಪೆನಿ, ಹಂಪನಕಟ್ಟೆ, ಮಂಗಳೂರು ಅಥವಾ ಕೆಳಗಿನ ಸೋಲ್ ಏಜಂಟರಲ್ಲಿ:-
ZANDU
ದಾಮೋದರ್ ಎಂಡ್ ಕೊ.
113 ನ್ಯಾಸಿಯಪ್ಪ ನಾಯಕರ್ ಸ್ಟ್ರೀಟ್, ಪಿ. ಟಿ ಮದ್ರಾಸು.


ಗೀತೆಯ ಸಮೂಲ ಭಾಷಾಂತರ
ತಿಳಿಗನ್ನಡದಲ್ಲಿ ಅನುಭವಸ್ಥರಿಂದ ಬರೆಯಲ್ಪಟ್ಟ ಇಂತಹ ಅನುವಾದ 'ಗೀತೆಯ ಕೈಗನ್ನಡಿ'ಯನ್ನು ಬಿಟ್ಟರೆ ಇನ್ನೊಂದಿಲ್ಲ. 'ಗೀತೆಯ ಕೈಗನ್ನಡಿ'ಯು ಹೊಸಕೆರೆ ಶ್ರೀ ಚಿದಂಬರಯ್ಯನವರ ಸರಳ ಭಾಷಾಂತರ. ಅತೀ ಅಗ್ಗವಾದ ಮತ್ತು ಪ್ರತಿಮನೆಯಲ್ಲೂ ಇರಬೇಕಾದ ಗೀತಾಪುಸ್ತಕ
ಬೆಲೆ: ಬರೇ 0-12-0 ಮಾತ್ರ.
ಪ್ರತಿಗಳು ನವಯುಗ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ
ನವಯುಗ ಪ್ರೆಸ್, ಉಡುಪಿ
ಇವರಿಗೆ ಬರೆಯಿರಿ-

ಚಂದಾ ವಿವರ
ವರ್ಷಕ್ಕೆ ರೂ. 5—12—0
6 ತಿಂಗಳಿಗೆ ರೂ. 3—0—0

ಗುರುವಾರ ಉಡುಪಿ, ೩೧-೧-೫೨

ಯಾವುದು ಮುಖ್ಯ ವ್ಯಕ್ತಿಯೋ—ತತ್ವವೋ?

ವ್ಯಕ್ತಿತ್ವಕ್ಕೆ ಹೆಚ್ಚು ಪ್ರಾಧಾನ್ಯ ಕೊಡಬೇಕೋ? ತತ್ವಕ್ಕೆ ಮಹತ್ವ ಕೊಡಬೇಕೋ ಎನುವ ವಿಚಾರ ಒಂದು ಸಮಸ್ಯೆಯೆ ಆಗಿದೆ. ಜೀವಂತ ಇರುವಾಗ-ಅನುಕೂಲಕ್ಕೆ ತಕ್ಕಂತೆ ನಾವು ಎರಡನ್ನೂ ಬಳಸಿಕೊಳ್ಳಬಹುದೆಂದು ಹಲವರು ಹೇಳುತ್ತಲಿದ್ದಾರೆ. ವ್ಯಕ್ತಿಗಿಂತಲೂ ತತ್ವವೇ ಪ್ರಧಾನವೆಂದು ಹೇಳುವದೂ ಉಂಟು! ಹುರಿಯಾಳುಗಳ ಆಯಿಕೆಯ ಸಂದರ್ಭದಲ್ಲೂ ಶ್ರೀ ನೆಹ್ರೂರವರು ಶ್ರೇಷ್ಠ ವ್ಯಕ್ತಿತ್ವ ಉಳ್ಳವನ್ನು ಕರೆದು ಕಾಂಗ್ರೆಸ್ ಟಿಕೇಟನ್ನು ಕೊಡಿರಿ ಎಂದದ್ದನ್ನು ನಾವಿಲ್ಲಿ ನೆನೆದುಕೊಳ್ಳಬೇಕಾಗಿದೆ. ಶ್ರೇಷ್ಠ ವ್ಯಕ್ತಿತ್ವವೆಂದರೆ ಸಜ್ಜಾರಿತ್ರಿ-ನೈತಿಕ ಜೀವನವಷ್ಟೇ ಅಲ್ಲ; ದೇಶೋನ್ನತಿಯ ವಿಚಾರದಲ್ಲಿ ಅವನೆಲ್ಲಿರುವ ಸದಸದ್ವಿವೇಚನೆಗಳ-ಉತ್ಕೃಷ್ಟವಾದ ಅನುಭವಗಳೂ ಮುಖ್ಯವೆಂಬುದೇ ಆಗಿದೆ. ಇಂತಹ ಪ್ರತಿಭಾವ್ವಿತ ವ್ಯಕ್ತಿಗಳು ನಮ್ಮಲ್ಲಿ ಕೆಲವೇ ಮಂದಿಯಿದ್ದಾರೆ.

ಚುನಾವಣಾ ಕಾಲದಲ್ಲಿ ನಮ್ಮ ನಾಯಕ ಪ್ರಧಾನಿಗಳು ಈ ಅಂಶವನ್ನು ಉದ್ದೇಶಿಸಿ ಮಾತಾಡಿದ್ದು ಈ ದೃಷ್ಟಿಯಿಂದಲೇ. ಆದರೆ ಸದ್ಯದ ಚುನಾವಣಾ ಫಲಿತಾಂಶವನ್ನು ಲಕ್ಷಿಸುವಾಗ ಈ ಮಹತ್ವಾಂಶದಲ್ಲಿ ಜನತೆ ಜಾಗ್ರತೆ ವಹಿಸಿಲ್ಲವೇನೋ ಎಂದು ಭಾಸವಾಗುತ್ತದೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಯಾವ ವ್ಯಕ್ತಿಗಳ ಪ್ರಧಾನ ಭೂಮಿಕೆ ಅವಶ್ಯವಿದೆಯೆಂಬುದನ್ನು ಅರಿತುಕೊಳ್ಳದೆ ಭಾವನಾತರವಶವಾಗಿ ಅಂತಹುದನ್ನು ಮೂಲೆ ಪಾಲು ಮಾಡುವ ಸಾಹಸ ಮಾಡಿದ್ದು ಕಂಡುಬರುತ್ತದೆ. ಪ್ರಸ್ತಾಪ ಗೆಲವಿನ ಉದ್ವೇಶದಿಂದ ರಾಷ್ಟ್ರದ ಪ್ರಶ್ನೆಯನ್ನು ಅಲಕ್ಷಿಸತಕ್ಕದ್ದಲ್ಲ. ಹೀಗಿದ್ದರೂ ಹಲವು ವ್ಯಕ್ತಿಗಳು ಚುನಾವಣಾರಂಗದಲ್ಲಿ ಪರಾಭವಗೊಂಡು ತಮ್ಮ ಅಮೂಲ್ಯ ಸೇವೆಯನ್ನು ಸಲ್ಲಿಸುವದು ಅಶಕ್ಯವಾಗಿದೆ. ರಾಜಕೀಯ ರಂಗದಲ್ಲಿ ವ್ಯಕ್ತಿವೈಶಿಷ್ಟ್ಯವನ್ನು ಒಪ್ಪುವದು ಇದು ವ್ಯಕ್ತಿಯ ಸೇವೆಯಲ್ಲ ನಮ್ಮ ಸೇವೆಯೆಂಬುದನ್ನು ಒಪ್ಪದಿರಲಾರದು.

ಈ ಚುನಾವಣೆ ಸುವ್ಯವಸ್ಥಿತ ರೀತಿಯಲ್ಲಿ ನಡೆಯಿತಾದರೂ- ಸಕಲ ಜನತಾಂಗಕ್ಕೆ ಸರ್ವಾನುಕೂಲತೆಗಳನ್ನು ಒದಗಿಸಿಕೊಟ್ಟಿತಾದರೂ- ಇದೊಂದು ಪರೀಕ್ಷೆ ಸ್ವತಂತ್ರ ಪ್ರಯೋಗವೆಂದೇ ನಾವು ಹೇಳಬೇಕಾಗಿದೆ. ಅವಶ್ಯವಿದ್ದರೂ- ರಾಜಕೀಯ ಜ್ಞಾನವಿಲ್ಲದವರೂ ಕೆಟ್ಟನಮತದಾರರಿಗಿಂತವರಿಂದ ಅದರಿಂದಾದ ಫಲಿತಾಂಶ ದೋಷಪೂರ್ಣವಾಗುವದು ಅನಿವಾರ್ಯ. ಈ ತತ್ವವನ್ನು ಒಂದಲ್ಲ ಒಂದು ರೀತಿಯಿಂದ ವಿಶಾಲ ಮನೋವೃತ್ತಿಯಿಂದ ತಿದ್ದಿಕೊಳುವಅವಶ್ಯಮತತ್ವವಾಗಿದೆ. ಇದು ಪ್ರಥಮಚುನಾವಣೆಯೆಂಬಂತೆ ವಯಂಬಯಿಯ ರಾಜ್ಯಶಾಸನ ಸಭೆಯಲ್ಲಿ ಚುನಾವಣೆಯಲ್ಲಿ ಪರಾಭವಗೊಂಡಿರುವ ಶ್ರೀ ಮುಂದ್ರಾರಜ ದೇಸಾಯಿಯವರಿಗೆ ಮಂತ್ರಿ ಪದವನ್ನು ಕಲ್ಪಿಸಿಕೊಡುವದರ ಸಲುವಾಗಿ ಘಟನೆಯನ್ನು ತಿದ್ದುವ ಯತ್ನ ನಡೆಸಲಾಗಿದೆ. ಈ ಪರಂಪರೆಯಿಂದ ಶ್ರೀ ಮುಂದ್ರಾರಜಿಯವರು ಮಂತ್ರಿಸ್ಥಾನಗಬಹುದು. ಒಬ್ಬ ವ್ಯಕ್ತಿಯನ್ನುಳಿಸುವದರ ಸಲುವಾಗಿ ತತ್ವವನ್ನು ಮರಿಯುವದೇ! ಇಂತಹ ಪ್ರವೃತ್ತಿಯಿಂದ ಚುನಾವಣೆಯ ಮೂಲತತ್ವ ಶಿಥಿಲಗೊಂಡಂತಾಗದೇ? ಎನುವ ಪ್ರಶ್ನೆಗಳು ಉದ್ಭವಿತವಾಗಿಲ್ಲ. ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಯವರು ಈ ಬಗ್ಗೆ ಟ್ರಾಮ್ಸ್ ಟಿಪ್ ಇಂಡಿಯಾದಲ್ಲಿ ಹೇಳಿಕೆ ಕೊಟ್ಟಿರುವರು. ಆ ಹೇಳಿಕೆಯು ಈ ಪತ್ರಿಕೆಯ ಇನ್ನೊಂದು ಭಾಗದಲ್ಲಿ ಪ್ರಕಟವಾಗಿದೆ. ಶ್ರೀಮಾನ್ ಹಳ್ಳಿಕೇರಿಯವರವಾದ ತಾತ್ವಿಕವಾಗಿ ಹೌದು. ಆದರೆ ಈ ಅಂತವನ್ನು ಭಾವನಾತರವಶರಾಗಿ ನೋಡದೆ ವಾಸ್ತವತೆಯ ಆಧಿನಿಂದಲೂ ನಾವು ವಿಮರ್ಶಿಸಬೇಕಾಗಿದೆ. ಮುಂಬಯಿ, ಮದ್ರಾಸ, ಮುಂತಾದ ಕಡೆಗಳಲ್ಲಿ ಒಳ್ಳೆಯ ಪ್ರಭಾವೀ ವ್ಯಕ್ತಿಗಳಿಗೆ ಸೋಲಾಗಿದ್ದು ಅವರಿಂದ ರಾಷ್ಟ್ರಜೀವನಮಹತ್ತರ ಅಮೂಲ್ಯ ಸಲಹೆಯನ್ನು ಪಡೆದುಕೊಳ್ಳುವದು ಕಷ್ಟಸಾಧ್ಯವಾಗಿದೆ.

ಈ ಚುನಾವಣೆಯಿಂದಾಗಿ ನಾವು ಕಲಿಯತಕ್ಕ ಅಂಶ ಬಹಳವಿದೆ. ಬಲಾಬಲದ ಸಂದ್ಯಪ್ಪೆ ಇದಲ್ಲವೆಂಬುದನ್ನು ನಾವು ಜ್ಞಾಪಿಸಿಕೊಳ್ಳಬೇಕು. ವಿದ್ಯೆ-ಬುದ್ಧಿ-ಸಂಸ್ಕೃತಿ-ರಾಜಕೀಯ ಅನುಭವಗಳಿಂದ ಸಮೃದ್ಧಿತವಾದ ಮತದಾನಗಳು ನೆಡೆದಾಗ ಯಾವ ತಪ್ಪು ನ್ಯಾಯವಾದಗಳೂ ಉಂಟಾಗಲಾರವು. ಆ ವರೆಗೆ ಇಂತಹ ಲೋಪದೋಷಗಳು ಅನಿವಾರ್ಯ. ಈ ಲೋಪದೋಷಗಳನ್ನು ನಿವಾರಿಸುವದರ ಸಲುವಾಗಿಯೂ ರಾಜ್ಯಸೂತ್ರದಲ್ಲಿ ಸುವ್ಯವಸ್ಥೆಯ ರೀತಿಯನ್ನು ಕೈಗೊಳ್ಳುವದಕ್ಕಾಗಿಯೂ ಪ್ರಗತಿಶೀಲ ಮಾರ್ಗವನ್ನನುಸರಿಸುವದು ಸೂಕ್ತವೇ ಆಗಿದೆ. ತತ್ವವೂ ಬೇಕು-ವ್ಯಕ್ತಿತ್ವವೂ ಬೇಕು- ಜೊತೆಯಲ್ಲಿ ವಾಸ್ತವತೆಯ ಪರಿಜ್ಞಾನ ಸದ್ಯದ ಸ್ಥಿತಿಗೆ ಮುಖ್ಯವಾದ ಅವಶ್ಯವೆನ್ನುತ್ತೇವೆ.

ಉಡುಪಿ

ಜನತಾರಾಜ್ಯ ದಿನಾಚರಣೆಯು- ಇದೇ ತಾ. 26ರಲ್ಲು ಉಡುಪಿ ಸರ್ಕಾರಿ ಕಾಂಗ್ರೆಸ್ ಕಮಿಟಿಯ ಆಶ್ರಯದಲ್ಲಿ ಜರಗಿತು. ಅದಿನ ಬೆಳಿಗ್ಗೆ ಎಂಟುಗಂಟೆಗೆ ಗಾಂಧಿ ಮೈದಾನದಲ್ಲಿ ಶ್ರೀ ಟಿ. ಎ. ಪಿ. ಸಿ. ಶಂಕರ ಸೆಟ್ಟಿ ಧ್ವಜಾರೋಹಣ ಮಾಡಿದರು. ಆನಂತರ ಧ್ವಜಾರೋಹಣವಾಯಿತು. ಸಂಜೆ ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿತು. ಡಾ। ಕೆ. ಎಲ್. ಭಕ್ತಾಳ್, ಡಾ। ಹಬ್ಬು ಎ. ಸುಬ್ಬ ಮತ್ತು ಶ್ರೀ ಪಿ. ಶೀನ ಸೆಟ್ಟರು ಪ್ರಜಾಸ್ವಭುತ್ವ, ಮತ್ತು ಜನರ ಹೊಣೆಗಾರಿಕೆಯ ಕುರಿತು ಭಾಷಣಮಾಡಿದರು. ಅಧ್ಯಕ್ಷರು ನೂತನ ರಾಷ್ಟ್ರಘಟನೆ, ರಾಷ್ಟ್ರಧ್ವಜ ಯಾವದೇ ಪಕ್ಷಪಂಗಡದ್ದಾಗಿದೆ ಸಮಸ್ತ ರಾಷ್ಟ್ರಕ್ಕೆ ಸಮಸ್ತ ಜನತೆಗೆ ಇರುವುದೆಂದೂ ಸರ್ವರೂ ಒಕ್ಕಟ್ಟಾಗಿ ರಾಷ್ಟ್ರೋನ್ನತಿಗಾಗಿ ದುಡಿಯಬೇಕೆಂದೂ ಹೇಳಿದರು.

ಪುರಂದರ ದಾಸರ ಪುಣ್ಯದಿನವನ್ನು- ಶ್ರೀ ಕೃಷ್ಣ ಮಠದಲ್ಲಿ ಇದೇ ತಾ. 24ರಂದ 26 ರತನಕ ಭಜನೆ, ಸಂಗೀತ, ಸಭೆ, ಭಾಷಣ, ಹರಿಕಥಾ ಕಾಲಕ್ಷೇಪ ಮೊದಲಾದ ಕಾರ್ಯಕ್ರಮಗಳಿಂದ ಆಚರಿಸಲಾಯಿತು. ಪುರಂದರ ದಾಸರಂತಹ ಮಹಾತ್ಮನ ಸ್ಮಾರಕವೊಂದನ್ನು ಉಡುಪಿಯಲ್ಲಿ ನಿರ್ಮಿಸಿಮಾಡುವುದು ಉಚಿತವೆಂದು ವಿದ್ವಾಂಸರುಗಳು ತಮ್ಮ ಭಾಷಣಗಳಲ್ಲಿ ಹೇಳಿದರು. ಶ್ರೀ ಹಂಡೆ ಶ್ರೀನಿವಾಸ ದಾಸರು ಧನ್ಯವಾದಗಳನ್ನರ್ಪಿಸಿದರು.

ಶ್ರೀ ಟಿ. ಎ. ಪೈಗಳಿಗೆ ಸಸ್ಯಾಶ್ರಿತ ಕೂಟಗಳು: ಇತ್ತೀಚೆಗೆಸ್ವರ್ಗೀಯ ಎಮ್. ಜಿ. ಎಮ್. ಕಾಲೇಜಿನಲ್ಲೂ ಡೋರ್ಮ್ ಹ್ಯಾಸ್ಟೆಲಿನಲ್ಲೂ, ಶಿರ್ವದಲ್ಲೂ ಅಲ್ಲದೆ ಇನ್ನಿತರ ಕಡೆಗಳಲ್ಲೂ ಯಶಸ್ವಿಯಾಗಿ ಜರಗಿದವು.

ದಿ ಕೆನರಾ ಬ್ಯಾಂಕಿಂಗ್ ಕೊಪೊರೇಶನ್—ಇದರ ಆಡಳಿತ ಮಂಡಳಿಯ ಅಧ್ಯಕ್ಷ ಮತ್ತು ಇತರ ಸಭಾಸದರು ಶಿವಂದಿ ವರ್ಗ ಕೂಡ್ಕಿ, ವ್ಯವಸಾಯ ನ್ಯಾಯವಿಧಾಯಕ ಸಭೆಯ ಸದಸ್ಯರಾಗಿ ಚುನಾಯಿತರಾದ-ಸರ್ವಿ ಬ್ಯಾಂಕಿನ ಡೈರೆಕ್ಟರ್ ಶ್ರೀ ವಿ. ವೈಕುಂಠ ಬಾಳಿಗರನ್ನೂ, ಉಡುಪಿಯ ಶ್ರೀ ಟಿ. ಎ. ಪೈಗಳನ್ನೂ, ಅಭಿನಂದಿಸುವ ಸಲುವಾಗಿ ತಾ. 27-1-52ರಲ್ಲಿ ಸತ್ಕಾರ ಕೂಟವನ್ನು ಜರಗಿಸಿದರು-ಬ್ಯಾಂಕಿನ ಅಧ್ಯಕ್ಷ ಡಾ। ಯು. ಶಾಂತರಾಮ ಪೈಗಳು ಅಧ್ಯಕ್ಷತೆ ವಹಿಸಿದ್ದರು. ಆಡಳಿತ ಮಂಡಳಿಯ ಸದಸ್ಯರ ಮತ್ತು ಶಿಬಂದಿ ವರ್ಗದವರ ಭಾಷಣಗಳಾಗಿ, ಜನರಲ್ ಮ್ಯಾನೇಜರ್ ಶ್ರೀ ಸಿ. ಎ ಆರ್. ಕಾಮತರ ಧನ್ಯವಾದಾರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

ಚಂದಾದಾರರಲ್ಲಿ—

ತಿರುಗಿ ಬರೆದಿರುವ ನೆನಪೋಲೆಯಂತೆ ದಯಮಾಡಿ ಚಂದಾಹಣವನ್ನು ಕಳಿಸಿಕೊಡುವಂತೆ ವಿನಂತಿ.

ಮೆನೇಜರ್.

NOTICE

In the Court of the Subordinate Judge of South Kanara

O. S. No. 181/1951

Between:

Seetharama Kekunnaya .... Plaintiff.

and

Pergadthi and others ... . Defendants.

To

1st defendent Pergadthi, daughter of Akku.

2nd deft. Monappa Rai, son of Pergadthi.

Both residing in Adhur village, Puttur Taluk.

Please take notice that the above suit filed by the plaintiff praying for judgment and decree directing that on deposit into Court of the amount that may be found due and payable to the mortgagee under the plaint mortgage deed dated 14-1-1893 executed by Shankar Banta in favour of Sripathy Kekunnaya and another, stands redeemed and directing the 7th defendant or such of the defendants as may be in possession thereof to deliver possession of the plaint A to C schedule properties to the plaintiff and that in case the defendants 15 to 19 pay half the amount so found due directing the partition of the A and C schedule properties into two shares and delivery of one such share to the plaintiff and the other moiety to the defendants 15 to 19 and also to receiver mesne profits from the 7th defendant or such of the defendants who claim to be in possession of the properties will come on for hearing at 11 A. M on the 3rd day of March 1952 in the above Court. You may appear on the said date in person or through a pleader failing which the same will be decided in your absence.

Mangalore, 28-1-1952.

M A. Kamath,
Vakil for Plaintiff.

NOTICE

In the Court of the District Munsiff of Coondapur.

O. P. 2/1952

1 Madivala Narain, 2 Subba 3 Lacaha and 4 Sheena, sons of Madivala sheshi Hengasu residing in Ampar village of Coondapur Taluk-Petitioners

No Respondents.

To whomsoever it may concern:

Notice is hereby given that the Petitioners moved this Court for the grant of a Succession Certificate to No. 1 of them for and on behalf of them all-of a Succession Certificate in respect of a pair of gold bangles which their brother, Madivala Badiya, since deceased, had pledged with the Coondapur Office of the Vijaya Bank Ltd. against Loan No. 334/1950 and that whoever wants to oppose the same may appear before this Court in person or by Pleader and be heard against the Petition at 11 A. M. on 13-2-1952.

(By Order of the Court)

S. N. Acharya,
Advocate.

Coondapur, 24-1-1952.

ಶಿರ್ವ—ತಾ 10, 1, 52ರಲ್ಲಿ ಇಲ್ಲಿಯ ಇಗರ್ಜಿ ಗುರುಗಳಾದ ಎಚ್. ಗೋನ್ಸಾಲ್ವೀಸರ ಸುವರ್ಣ ಸಿದ್ಧಿ ಪೂರ್ತಿ ಮಹೋತ್ಸವದ ಕಾಲದಲ್ಲಿ ಅವರ ಅಡಳಿತಗೊಳಪಟ್ಟ ರಾಲೆಗಳ ವರ್ಧಂತ್ಯುತ್ಸವವೂ ಮಾಂಡಿನ ಶಿರ್ವ ಫೇರಿಶಿನ ಜನರ ಮಾನಪತ್ರಾರ್ಪಣೆಯು ಬಹು ವಿಜೃಂಭಣೆಯಿಂದ ಜರಗಿತು. ಮೊದಲ ದಿನ ಉದುಪಿ ಮುನ್ಸೀಫರಾದ ಶ್ರೀ ಬಿ. ಬಿ. ಸಿ ಕುಲಾಸೋರವರೂ, ಮರುದಿನ ಕಾರ್ಕಳ ಇಗರ್ಜಿ ಗುರುಗಳಾದ ಶ್ರೀ ಎ. ಜೆ. ಡಿ ಸಿಲ್ವರವರೂ ಅಧ್ಯಕ್ಷತೆಯನ್ನು ವಹಿಸಿದ್ದರು. ಮೊದಲನೇ ದಿನದ ಅಧ್ಯಕ್ಷರು ತಮ್ಮ ಭಾಷಣದಲ್ಲಿ ಶಾಲೆಗಳ ಸರ್ವತೋಮುಖವಾದ ಅಭಿವೃದ್ಧಿಯನ್ನು ಪ್ರಶಂಸಿಸಿ ಮಾತಾಡಿದುದಲ್ಲದೆ, ಶ್ರೀಮತಿ ಕುಲಾಸೋರವರು ಅಟಪಾಠಗಳಲ್ಲಿ ಉತ್ತೀರ್ಣರಾದವರಿಗೆ ಬಹುಮಾನ ವಿತರಣೆಯನ್ನು ಮಾಡಿದರು. ಶಾಲಾ ಬಾಲಬಾಲಕಿಯರು ಯಕ್ಷಗಾನ, ನಾಟಕ, ನರ್ತನ ಮುಂತಾದ ವಿವಿಧ ವಿನೋದಾವಳಿಗಳು ಪ್ರೇಕ್ಷಣೀಯವಾಗಿ ಜರಗಿದುವು.

ತಾ. 20-1-52ರಲ್ಲಿ ಸಂಜೆಗೆ ಶಿರ್ವ ಫೇರಿಶಿನ ಸಾರ್ವಜನಿಕರ ಸಭೆಯು ಇಗರ್ಜಿ ವರಾಂಡದಲ್ಲಿ ಜರಗಿತು. ಅಧ್ಯಕ್ಷರಾದ ರೆ ಫಾ. ಸಿಲ್ವರು ರೆವರೆಂಡ್ ಗೋನ್ಸಾಲೀಸರ ಸಾಸ್ವರ್ಥಪರ ಸೇವೆಯನ್ನೂ ಶಿರ್ವ ಮತ್ತು ಇತರ ಕಡೆಗಳಲ್ಲಿ ಅವರು ಸಾಧಿಸಿದ ಮಹತ್ಕಾರ್ಯಗಳನ್ನೂ ವಿವರಿಸಿದರು. ಶ್ರೀಯುತ ಕುಷ್ಪಣ್ಣ ಚಾರ್ಯರು ಸಾರ್ವಜನಿಕರ ಪರವಾಗಿ ಮಾನಪತ್ರವನ್ನು ಅರ್ಪಿಸಿದರು. ಹಿರಿಯಗಳೂ, ಕ್ರೈಸ್ತರೂ ಹಲವಾರು ಕಾಣಿಕೆಗಳನ್ನು ಅರ್ಪಿಸಿದ್ದರು ಅದೇ ರಾತ್ರಿ ವಿವಿಧ ವಿನೋದಾವಳಿಗಳಿಂದ ಸಭೆಯು ಮುಕ್ತಾಯವಾಯ್ತು.

ತಾ. 21—1—52ರಲ್ಲಿ ಶಿರ್ವ ಇಗರ್ಜಿಯಲ್ಲಿ ದೊಡ್ಡ ಪೂಜೆಯು ಜರಗಿದ ಬಳಿಕ ಸ್ಕೌಟ್ ಮೇಸ್ಟರ್ ಹೈಸ್ಕೂಲಿನ ಹೋಲಿನಲ್ಲಿ ಸಭೆಯು ಗುರುಗಳ, ಕೈಲಿಚಿತ್ರ ಅನಾವರಣವು ಕುಂದಾಪುರದ ಫಾ. ವಿ. ಬಿ. ಕುಲಾಸೊರವರಿಂದ ನೆರವೇರಿಸಲ್ಪಟ್ಟಿತು. ಶಾಲಾ ಬಾಲ ಬಾಲಕಿಯರಿಗೂ, ಅಧ್ಯಾಪಕರಿಗೂ ಲಘುಪಹಾರಗಳು ಕೊಡಲ್ಪಟ್ಟವು.

ಪುತ್ತೂರು ಮತದಾರರಲ್ಲಿ—ಮದ್ರಾಸು ಶಾಸನ ಸಭೆಗೆ ಹರಿಜನರ ಪರವಾಗಿ ಕಾದಿಟ್ಟ ಸ್ಥಾನಕ್ಕೆ ಕಾಂಗ್ರೆಸ್ ಹುರಿಯಾಳಾಗಿ ನಿಂತ ತನ್ನನ್ನು ಪುತ್ತೂರು ಮತದಾರ ಕ್ಷೇತ್ರದ ಬಹುತೇಕ ಮತದಾರರು ಜಾತಿ ಮತ ಬೇಧ ಭಾವವನ್ನು ಮೂಲೆಗೊತ್ತಿ ಬಹುಮತದಿಂದ ತನ್ನನ್ನು ಆರಿಸಿಬರಕ್ಕಾಗಿ ಸರ್ವರಿಗೂ ತಾನು ಆಭಾರಿಯಾಗಿದ್ದೇನೆಂದು ಶ್ರೀ ಕೆ ಶುದ್ಧರ, ಎಮ್. ಎಲ್. ಎ ಅವರು ಈ ಮೂಲಕ ನಿವೇದಿಸಿಕೊಂಡಿದ್ದಾರೆ. ಅಲ್ಲದೆ ತಾವು ತನ್ನ ಶಕ್ತಿಯೂ ತನ್ನ ಸೇವೆ ಸದಾ ಸಲಿಸಲು ಪ್ರಯತ್ನಿಸುವೆನೆಂದು ಭರವಸೆಯನ್ನು ಕೂಡಾ ಈ ಮೂಲಕ ಕೊಟ್ಟಿರುತ್ತಾರೆ

ಮಣಿಪಾಲ—ಸ್ಥಳೀಯ ಹೈಸ್ಕೂಲಿನಲ್ಲಿ ಇದೇ ತಾ 26ರಲ್ಲು ಪ್ರಜಾರಾಜ್ಯ ದಿನಾಚರಣೆಯು ಶ್ರೀ ಉಪೇಂದ್ರ ಪೈಗಳವರ ಅಧ್ಯಕ್ಷತೆಯಲ್ಲಿ ಜರಗಿತು. ಬೆಳಿಗ್ಗೆ ಶ್ರೀಮತಿ ಬಾರ್ವತಿ ಬಾಯಿಯವರಿಂದ ಧ್ವಜಾರೋಹಣವಾಯಿತು. ನಂತರ ಸೇರಿದ ಸಭೆಯಲ್ಲಿ ಶ್ರೀಗಳಾದ ಯು. ಪುಂಡಲೀಕ ಶೆಣೈ, ಶ್ರೀಪತಿ ಆಚಾರ್ಯ, ಬಿ ರಘುರಾಮ ಹೆಗ್ಡೆ ಮೊದಲಾದವರ ಭಾಷಣಗಳಾದುವು.

ಮಂದಾರ್ತಿ—ಇಲ್ಲಿಯ ಶ್ರೀ ಚಂಡಿಕಾ ದುರ್ಗಾ ಪರಮೇಶ್ವರಿ ದೇವಸ್ಥಾನದಲ್ಲಿ ಕಾಲಂಪ್ರತಿ ಜರಗುವ ರಥೋತ್ಸವವು ತಾ 13 2, 52ನೆ ಬುಧವಾರ ದಿವಸ ಜರಗಲಿರುವುದು

ಕಾಲ್ತೋಡು—ಇಲ್ಲಿರಕ್ಕೆ ಬ್ರಾಂಚ್ ಸೋಸ್ತ ಅಫೀಸನ್ನು ರದ್ದು ಮಾಡಿ ಈ ಅಂಚೆ ಮನೆಗೆ ಸಂಬಂಧಿಸಿದ ಗ್ರಾಮಗಳಿಗೆ ಟಪ್ಪಾಲು ವಗೈರೆ ಬರ್ತ್ತಾಡೆ ಮಾಡಲಿಕ್ಕೆ ಒರ್ವ ಪೋಸ್ತುಮೇನ್ ನೇಮಕವಾಗಬೇಕಾಗಿಯೂ ಕಾಲ್ತೋಡು ಗ್ರಾಮದ ಬಾಕ್ಕಿದಾರರೊಬ್ಬರು ಬರೆಯುತ್ತಾರೆ.

ಬನ್ನಾಡಿ—ಬನ್ನಾಡಿ ಮತ್ತು ವಡ್ಡರ್ಸೆ ಗ್ರಾಮಗಳ ಸಾಕಾರ್ಯಕ್ಕಾಗಿ ಬನ್ನಾಡಿ ಪರಮಹಂಸ ಪ್ರಾಥ ಪ್ರಾಥಮಿಕ ಶಾಲೆಯ ಪಟಾರದಲ್ಲಿ ಬ್ರಾಂಚ ಪೋಸ್ಟಾಫೀಸೊಂದು ತೆರೆಯಲ್ಪಟ್ಟಿದೆ. ಈ ಎರಡು ಗ್ರಾಮಗಳವರು ಇನ್ನು ಮುಂದೆ ಸಾಲಿಗ್ರಾಮ ಪೋಸ್ಟು ಎಂಬುದರ ಬದಲಾಗಿ ಬನ್ನಾಡಿ ಪೋಸ್ಟು ಎಂದು ಬರೆಯಬೇಕಾಗಿದೆ.

ಕಂಡ್ಲೂರು—ಇಲ್ಲಿಯ ಬೋರ್ಡು (ಕನ್ನಡ) ಶಾಲೆಯಲ್ಲಿ ಇದೇ ತಾ. 16ರಲ್ಲು ಮುಂಡಳ್ಳಿಯ ದೀಕ್ಷಾ ಸ್ವೀಕಾರ ಸಮಾರಂಭವು ಡಾ। ಆರ್. ಎಸ್. ಉಪ್ಪೂರರು ಅವರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯ ಕ್ರಮಗಳೊಂದಿ. ಜರಗಿತು

ಮುಂಡ್ಕೂರು—ಸ್ಥಳೀಯ ಬೋಹಾ ಎ ಶಾಲೆಯ ಸ್ಕೌಟ್ಸ್ ಮತ್ತು ಕಬ್ಸ್ ರವರ ಶಿಬಿರಾಗ್ನಿಯೊಂದು ಇದೇ ತಾ 11ರ ಮುಂಡ್ಕೂರು ಮಂಗೇಶ ರಾಯರ ಅಧ್ಯಕ್ಷತೆಯಲ್ಲಿ ಜರಗಿತು

ಪಂಜ—ಇಲ್ಲಿಯ ಬೋರ್ಡ್ ಮಿಶ್ರ ಸ್ಕೂಲಿನ ಸಾಮಾರು 30 ಮಂದಿ ವಿದ್ಯಾರ್ಥಿಗಳು ತಮ್ಮ ಶಿಕ್ಷಕ ವೃಂದದವರೊಡನೆ ಕ್ಯೂಲಿಕ್ಕೆ ಪ್ರವಾಸಮಾಡಿ ಅಲ್ಲಿಯ ಜಾನುವಾರು ಕ್ಷೇತ್ರವನ್ನು ಸಂದರ್ಶಿಸಿ ಅಲ್ಲಿಯ ವಿವಿಧ ಚಟುವಟಿಕೆಗಳನ್ನು ಪರಿಶೀಲಿಸಿದರು. ಶ್ರೀಗಳಾದ ಜೆ. ಜನಾರ್ಧನಯ್ಯ ಮತ್ತು ಎಸ್. ಲಕ್ಷ್ಮೀನಾರಾಯಣ ರಾಯರು ಪ್ರವಾಸಿಕ ಊಟೋಪಚಾರಗಳ ವ್ಯವಸ್ಥೆ ನಡಾಡಿದ್ದರು.

ಉಡುಪಿ ಕ್ರಿಶ್ಚಿಯನ್ ಹೈಸ್ಕೂಲು ಹಳೇ ವಿದ್ಯಾರ್ಥಿ ಸಂಘ ಉಡುಪಿ.

ಉಡುಪಿ ಕ್ರಿಶ್ಚಿಯನ್ ಹೈಸ್ಕೂಲು ಹಳೆ ವಿದ್ಯಾರ್ಥಿ ಸಂಘದ ದಿನಾಚರಣೆಯು ಶ್ರೀ ಬಿ ಶೀನಪ್ಪ ಹೆಗ್ಡೆ, ಬಿ.ಎ ಬಿ ಎಲ್. ಇವರ ಅಧ್ಯಕ್ಷತೆಯಲ್ಲಿ ತಾ 11-2-1951ನೇ ಸೋಮವಾರ ದಿನ ಜರಗಲಿರುವುದು. ಹಳೇ ವಿದ್ಯಾರ್ಥಿ, ವಿದ್ಯಾರ್ಥಿನಿಯರೂ ಈ ದಿನ ಸೇರಿ ಬಂದು ಕಾರ್ಯಕಲಾಪಗಳಲ್ಲಿ ಭಾಗವಹಿಸಿ ಶಾಲೆಯ ಮೇಲಿನ ಪ್ರಾಮಾನುಭೂತಿಯನ್ನು ತೋರಿಸಬೇಕಾಗಿ ಕೇಳಿಕೊಳ್ಳುತ್ತೇವೆ.

ಈ ಸಂದರ್ಭದಲ್ಲಿ ನಡೆಯಲಿರುವ ಪಂದ್ಯಾಟಗಳಲ್ಲಿ ಭಾಗವಹಿಸಬೇಕಾಗಿಯೂ ವಿನಂತಿ.

ಎಸ್ಸೆಲ್ಸಿ ಮತ್ತು ಗೆಕೆಯಂದಿಂದ ಆ ದಿನ ರಾತ್ರಿ 'ಉಂಡಾಡಿ ಗುಂಡಿ' ಎಂಬ ಸಾಮಾಜಿಕ ನಾಟಕದ ಪ್ರದರ್ಶನವೂ ಇದೆ

ಈ ವರೆಗೆ ಹಳೇವಿದ್ಯಾರ್ಥಿ ಸಂಘದ ಮೆಂಬರ್‌ರಾಗದ ಹಳೇ ವಿದ್ಯಾರ್ಥಿಗಳು ಕೂಡಲೆ ಮೆಂಬರರಾಗಿ ಸಹಕರಿಸಬೇಕಾಗಿ ಕೋರುತ್ತೇವೆ. ಅಲ್ಲದೆ ಈ ವರ್ಷದ ಸದಸ್ಯತನದ ಚಂದಾಹಣವನ್ನು ಬಾಕಿಮಾಡಿಕೊಂಡವರು ಅದಷ್ಟು ಬೇಗನೆ ತಮ್ಮ ಹಣವನ್ನು ಪಾವತಿ ಮಾಡಬೇಕೆಂದು ಕೇಳಿಕೊಳ್ಳುತ್ತೇವೆ.

ಪಂದ್ಯಾಟಗಳಲ್ಲಿ ಭಾಗವಹಿಸಲಿಚ್ಛಿಸುವವರು ತಾ. 4-2 1952ರೊಳಗಾಗಿ ಸಂಘದ ಕಾರ್ಯದರ್ಶಿಗಳಿಗೆ ತಿಳಿಸಕ್ಕದ್ದು.

Dr P. G. Achar,
President
Dr. P. R. Nayak,
Vice. President
Dr. W. A. Suchitta,
Secretary

ತಾರೀಕು 30—1—52ರಿಂದ

ಲಾ ಜವಾಬ್

ರೆಹನ್, ಕುಲದೀಪಕೌರ, ರಣಧೀರ್, ಡೇವಿಡ್ ನಟಿಸಿರುವರು

ಅನಂತರ:

ಹವಾಲೋಗ್, ಭೀಮಸೇನ್, ಬಾಜಿ, ಕಾಲಿಬಾದಲ್, ದೀದರ್ ಇತ್ಯಾದಿ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ

ಸರ್ ಜೀವನ್ ಶಿಲಾಜಿತ್ ಲೇಹ್ಯ

ಶಿಲಾಜಿತ್ ಹಿಮಾಲಯ ಪರ್ವತದಿಂದ ತೆಗೆಯಲ್ಪಡುವಂಥ ಅಪೂರ್ವ ವಸ್ತು, ಔಷಧಿಗಳ ರಾಜ, ಶಿಲಾಜಿತ್ತನ್ನು ಮೂಲಿಕೆಗಳೊಡನೆ ಸೇರಿಸಿ ಲೇಹ್ಯ ಮಾಡಿದೆ.

ಇದರ ಸೇವನೆಯಿಂದ ದೇಹ ವಾರ್ಧ್ಯವೂ ಶಕ್ತಿಯೂ ಉಂಟಾಗುತ್ತದೆ ಮುಖ್ಯವಾಗಿ ಹೊಟ್ಟೆನೋವು, ಅನ್ನ ಸೇರದಿರುವಿಕೆ ಇವೇ ಮೊದಲಾದ ರೋಗಗಳಿಗೆ ಒಂದೆರಡು ದಿನಗಳಲ್ಲಿಯೇ ಗುಣಕೊಡಬಹುದಾದ ಔಷಧವಿದು ಕೆಮ್ಮು, ಬಾಸ, ದಮ್ಮು, ಮೂಲ, ಒಳಮೂಲ, ರಕ್ತಮೂಲ, ಬಹುಮೂತ್ರ, ಹೊಟ್ಟೆಯಲ್ಲಿ ಗಡ್ಡೆ ಇರುವಿಕೆ ಮತ್ತು ವಾಯುವಿನಿಂದ ಉಂಟಾಗತಕ್ಕ ಸರ್ವ ವ್ಯಾಧಿಗಳಿಗೂ ದಿವ್ಯೌಷಧ. ವಿದ್ಯಾರ್ಥಿಗಳು ಸೇವಿಸುವುದರಿಂದ ಜ್ಞಾಪಕಶಕ್ತಿಯೂ ಮತ್ತು ಚಟುವಟಿಕೆಯೂ ಹೆಚ್ಚುತ್ತೆ. ವೃದ್ಧರು ಸೇವಿಸುವುದರಿಂದ ಶಕ್ತಿಯನ್ನು ಹೆಚ್ಚಿಸಿ, ಧಾರ್ಢ್ಯವನ್ನುಂಟುಮಾಡುತ್ತೆ.

ಹೆಂಗಸರಿಗೆ— ಅಶ್ರಮ ಬಹಿಸ್ಟೆ, ಕೈಕಾಲು ಹಿಡಿತ, ಕೀಲುವಾಯು, ಶಕ್ತಕೂಲಿ ಮತ್ತು ಉಸ್ಣದಿಂದಾಗುವ ಇತರ ರೋಗಗಳಿಗೆ ದಿವ್ಯೌಷಧ ದುರ್ಬಲರಾಗಿ ಕೇವಲ ಕೃಶರಾಗಿರುವ ತಿಂಗಳಿಗೆ ಈ ಔಷಧವನ್ನು ಪ್ರತಿ ದಿನ ಬೆಳಿಗ್ಗೆ ಸಂಜೆ ಸೂಪ್ಪರೆ ಸ್ವಲ್ಪ ಕಾಲದಲ್ಲಿಯೇ ದೃಢಾಂಗರಾಗುವರು. ಹಣ ಮುಂಗಡ

ಲಘು ದಿನದ ಲೇಹ್ಯಕ್ಕೆ ರೂ ೫-೪-೦ (ಪೋಸ್ಟೇಜು ಮಾಫಿ)
೨೮ ದಿನದ ಲೇಹ್ಯಕ್ಕೆ ರೂ ೫-೪-೦ (ಪೋಸ್ಟೇಜು ಮಾಫಿ)

ಎಲ್ಲಾ ನೋವುಗಳಿಗೂ ಅದ್ಭುತಶಕ್ತ್ಯುಗುಣಕಾರಿ

ಮೆಂಥ್ಯಾಲ್ ಕೋನ್‌ಗಳು
(MENTHYAL CONES)

ಎಲ್ಲಾ ವಿಧವಾದ ಶೈತ್ಯದಿಂದಾಗಲೀ, ಉಷ್ಣದಿಂದಾಗಲೀ ಸಂಭವಿಸುವ ತಲೆ ನೋವು, ತಲೆತಿರುಗುವಿಕೆ, ಬುದ್ಧಿ ಮಾಂದ್ಯ, ಕಣ್ಣುರಿ, ದೇಹಾವ್ಯಂತ ಕೀಲುಗಳ ನೋವುವಾಯುನೋವು ಮತ್ತಾವ ವಿಧವಾದ ನರಗಳ ನೋವಿಗೂ ತಕ್ಷಣದಲ್ಲಿಯೇ ಗುಣವನ್ನು ಕೊಡುತ್ತದೆ ಕೋನು ೧೦೦೦ ಸಲ ಉಪಯೋಗಿಸಬಹುದು.



೧ ವ್ಯಾಕೆಟ್ ರೂ. ೩—೧೫—೦
೨ ವ್ಯಾಕೆಟ್ ರೂ ೬— ೮—೦
೫ ವ್ಯಾಕೆಟ್ ರೂ ೧೪— ೦ —೦
(ಪೋಸ್ಟೇಜ್ ಮಾಫಿ)

ನೀಲಿಗಿರಿ ಡಿಪೋ, ಅಕ್ಕಿಪೇಟೆ ಚೌಕ, ಬೆಂಗಳೂರ ಸಿಟಿ-

ಶುದ್ಧ ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪೋವಿನವರ್ನ ಕೇಳಿರಿ

ಉಡ್ಪಿ ಡಿ. ಮು. ಕೋರ್ಟಿನಲ್ಲಿ
S. E. P. No. 462/1951

A ವೆಂಕಟರಾವ್, ಕಿನ್ನಿ ಶೇಷಗಿರಿರಾಯರ ಮಗ, ಉಡ್ಪಿ, ಕಸಬಾ. —ಅರ್ಜಿದಾರ

ಮತ್ತು

1. ದುಗ್ಗಪ್ಪ ಸೆಟ್ಟಿ, 2 ಜಗನ್ನಾಥ ಸೆಟ್ಟಿ, ಚನ್ನಂಪು ಸೆಟ್ಟಿ ಮಕ್ಕಳು, ಆರಾಯ ಗ್ರಾಮದ ಅಲಂಜೆ, ಎದ್ರಿರು.

ಎದ್ರಿಯರ ಮೇಲೆ ವಿಷ್ಣು ಮೂರ್ತಿ ಭಟ್ಟು ಪಡೆದ ಮೇಲ್ಕಂಡ ಕೋರ್ಟು S C 257/49 ನೇ ಡಿಕ್ರಿಯನ್ನು ಅರ್ಜಿದಾರನು ಟ್ರಾನ್ಸ್‌ಫರ್ ಪಡೆದು ದಾಖಲು ಮಾಡಿದ ಮೇಲಿನ ಅಮಲಜ್ಜಾರಿಯು ಎದ್ರಿಯರ ನೋಟೀಸಿನ ಬಗ್ಗೆ ತಾ. 14-2-52ಕ್ಕೆ ಇಟ್ಟಿದೆ ಎದ್ರಿಯರು ಸದ್ರಿ ದಿವಸ ಪೂರ್ವಾಹ್ನ ಗಂಟೆ 10ಕ್ಕೆ ಸರಿಯಾಗಿ ಅಮಲಜ್ಜಾರಿಯಲ್ಲಿ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗಲಿಕ್ಕೆ ತಪ್ಪಿದರೆ ಎದ್ರಿಯರ ಗೈರುಹಾಜ್ರಿಯಿಂದ ಸದ್ರಿ ಅಮಲಜ್ಜಾರಿಯನ್ನು ವಿಕಪಕ್ಷವಾಗಿ ತೀರ್ಮಾನಿಸಲ್ಪಡುವುದು.

Gratian C. Rego,
Vakil for Petitioner,
ಉಡ್ಪಿ, ತಾ. 23-1-52.

ಬಾಲಚಂದ್ರು

ಶಿಕ್ಷಣ ಸಂಬಂಧವಾದ ಮಾಸಪತ್ರಿಕೆ
ಉಡುಪಿ
ಸ್ಥಾಪಕರು
ಶ್ರೀ ಉಳ್ಳಾಲ ಮಂಗೇಶರಾವ್,
ಬಿ. ಎ. ಎಲ್ ಟಿ
ಸಂಪಾದಕರು
ಕೆ ಆರ್ ಶೆಣೈ ಮತ್ತು ಕೆ ಎಚ್.ಶೆಟ್ಟಿ

ಉಪಾಧ್ಯಾಯರಿಗೂ ಉಪಾಧ್ಯಾಯನಿಯರಿಗೂ ಅತ್ಯಾವಶ್ಯಕವಾದ ಪತ್ರಿಕೆ
ವಾರ್ಷಿಕ ಚಂದಾ ರೂ 3-0-0
ಮೆನೇಜರ್,
ಬಾಲಚಂದ್ರ, ಉಡುಪಿ

ಮಂಗಳೂರು

ಸತ್ಕಾರ ಕೂಟ–ಸೈಂಟ್ ಎಲೋಸಿಯಸ್ ಕಾಲೇಜಿನ ಕಾರ್ಮರ್ಸ್ ಸಂಘದ ವಾರ್ಷಿಕೋತ್ಸವವು ಇದೇ ತಾ 22ರಲ್ಲು ಜರಗಿದಾಗ ಸಂಘದ ಸದಸ್ಯರು ನಾಡ್ರಾಸು ರಾಜ್ಯ ಶಾಸನ ಸಭೆಗೆ ಚುನಾವಣೆಯಾದ ಶ್ರೀ ಎಲ್. ಸಿ. ಡಾಯಿಸರನ್ನು ಸ್ವಾಗತಿಸಿ ಸತ್ಕರಿಸಿದರು ಸಂಘದ ಕಾರ್ಯದರ್ಶಿ ಶ್ರೀ ದಾನೋದರ ಪ್ರಭುಗಳು ವಂದಿಯನ್ನೀಡಿದರು. ಶ್ರೀ ಪಿ. ಪಿ. ವರ್ಗೀಸರು ಮಾತನಾಡಿದರು ಶ್ರೀ ಎಲ್. ಸಿ. ಡಾಯಿಸರು ಜಿಲ್ಲೆಗೂ ನಗರಕ್ಕೂ ಸಲ್ಲಿಸಿದ ಸೇವೆಯನ್ನು ಹೊಗಳಿ, ಅವರ ವಿಜಯಕ್ಕಾಗಿ ಅವರನ್ನು ಅಭಿನಂದಿಸಿದರು.

ಜಿಲ್ಲಾ ಆಹಾರೋತ್ಪತ್ತಿ ಕಮಿಟಿ ಸಭೆಯು ಇದೇ ತಾ. 23ರಂದು ಜಿಲ್ಲಾ ಕಲೆಕ್ಟರರ ಕಚೇರಿಯಲ್ಲಿ ಜಿಲ್ಲಾ ಆಹಾರ ಸರಬರಾಯಿ ಅಧಿಕಾರಿ ಶ್ರೀ ಬಾಲಾಜಿರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಜಿಲ್ಲೆಯಲ್ಲಿರುವ ಆಹಾರಧಾನ್ಯಗಳ ದಾಸ್ತಾನಿನ ವಿಚಾರವಿಕಿಸಲಾಯಿತು. 40 ಸಾವಿರ ಟನ್ ಸಂಗ್ರಹವಾಗಬೇಕೆಂದು ನಿರ್ಣಯವಾಗಿದ್ದರೂ ಈ ತನಕ 11 ಸಾವಿರ ಟನ್ ಅಕ್ಕಿ ಮಾತ್ರ ಸಂಗ್ರಹವಾಗಿದೆ ಎಂದೂ ಸಭೆಯ ಅವಗಾಹನೆಗೆ ತರಲಾಯಿತು. ದೈತರಿಗೆ ಪ್ರೋತ್ಸಾಹವೀಯುವುದಕ್ಕಾಗಿ ಕೊಳಕೆ ಬೆಳೆಯಿಂದ ಲೆವಿಯಿಂಕ ಅಕ್ಕಿಯನ್ನು ಸರಕಾರಕ್ಕೆ ಒಪ್ಪಿಸುವ ಅಗತ್ಯವಿಲ್ಲವೆಂದು ಜಾಹೀರು ಮಾಡಬೇಕೆಂದು ಡಾ। ಎಚ್. ಪಿ. ಆಡಪರ ಸೂಚನೆಯು ಸಭೆಯಲ್ಲಿ ಸ್ವೀಕರಿಸಲ್ಪಟ್ಟಿತು. ಕಳದ ತಿಂಗಳಲ್ಲಿ ಸುಮಾರು 46,000 ರೂಪಾಯಿ ಸೆಟ್ಟದ 11 ಕೆರೆ ಬಾವಿಗಳಿಗೆ ಸಂಬಂಧಿಸಿದ ಕೆಲಸಗಳನ್ನು ಮಂಜೂರು ಮಾಡಲಾಗಿದೆ ಎಂದು ಸಭೆಗೆ ತಿಳಿಸಲಾಯಿತು.

ಸಹಾಯಾರ್ಥ ಪ್ರದರ್ಶನ—ಮಂಗಳೂರಿನ ಬಿ. ಇ. ಎಮ್. ಹೈಸ್ಕೂಲಿನ ಸಹಾಯಾರ್ಥವಾಗಿ ಒಂದು ಚಲಿ ಕೈಗಾರಿಕೆ ಮತ್ತು ಕೌಶಲದಾಟಿಗಳ ಪ್ರದರ್ಶನವು ಇದೇ ತಾ. 24ರಂದು ಜಿಲ್ಲಾ ಕಲೆಕ್ಟರ್ ಶ್ರೀ ಎ. ಆರ್. ರಾಜಶೆಟ್ಟಿಂ, ಅವರಿಂದ ಉದ್ಘಾಟಿಸಲಾಯಿತು. ಶಾಲಾ ಮುಖ್ಯೋಪಾಧ್ಯಾಯ ಶ್ರೀ ಎಸ್. ಎ ಫರ್ನಾಡಿಸ್, ಅವರು ಸ್ವಾಗತ ಭಾಷಣ ಮಾಡಿದರು. ಶ್ರೀಗಳಾದ ಪಿ. ಆರ್. ಆರ್. ಪೂಂಜ ಮತ್ತು ಕೆ. ಸೂರ್ಯನಾರಾಯಣ ಆಸಿಗರು ಮಾತನಾಡಿದ ನಂತರ ಡಾ। ಬಿ. ಆರ್. ಹೆಗ್ಡೆಯವರು ಧನ್ಯವಾದಗಳನ್ನರ್ಪಿಸಿದರು.

ಮುನಿಸಿಪಲ್ ಕೌನ್ಸಿಲು ಸಭೆಯು ತಾ. 25ರಲ್ಲು ಸಂಜೆ ಉಪಾಧ್ಯಕ್ಷ ಶ್ರೀ ಬಿ. ಗಂಗಾಧರ ದಾಸರ ಅಧ್ಯಕ್ಷತೆಯಲ್ಲಿ ಜರಗಿತು. ಮಾರ್ಕೆಟುಗಳಲ್ಲಿರುವ ಅಂಗಡಿಗಳ ಬಾಡಿಗೆ ಮತ್ತು ಕುಂದಿಸುವ ಪೊರೆಗಳ ಸುಂಕದ ಕುರಿತು ಚರ್ಚೆ ನಡೆಯಿತು. ಬೆಂದೂರು ರಸ್ತೆಗೆ ತಾರು ಹಾಕಲು ರೂ. 24,900ನ್ನೂ ಮಹಾತ್ಮಾ ಗಾಂಧಿ ರಸ್ತೆಗೆ ತಾರು ಹಾಕಲು ರೂ. 49,700ನ್ನೂ ಮಂಜೂರು ಮಾಡಲಾಯಿತು. ನಗರ ಸಭೆಯ ನೌಕರರಿಗೆ ಪ್ರೊವಿಡೆಂಟ್ ಫಂಡಿನಲ್ಲಿ ಜಮೆಯಾದ ಹಣಕ್ಕೆ ಸೇಡಾ 2½ ದರದ ಬಡ್ಡಿ ಕೊಡುವ ನಿರ್ಣಯವಾಯಿತು.

ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿ ಯ ಕಾರ್ಯಕಾರೀ ಮಂಡಳಿಯ ಸಭೆಯು ಇದೇ ತಾ. 19ರಂದು ಉಪಾಧ್ಯಕ್ಷ ಡಾಯಿಸ. ಮಲ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಜಿಲ್ಲಾ ಕಾಂಗ್ರೆಸ್ ಕಮಿಟಿ ಅಧ್ಯಕ್ಷರ ರಾಜಿನಾಮೆ ಪರೀಕ್ಷಿಸಿ ಮತ್ತು ಹೊಸ ಅಧ್ಯಕ್ಷರ ಆಯ್ಕೆ ಮಾಡಲಾದ ವಿಷಯಗಳನ್ನು ಆಲೋಚಿಸುವರೆ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಮಹಾಸಭೆಯನ್ನು ತಾ. 9-2-52 ರಲ್ಲು ಅಪರಾಹ್ನ 4 ಗಂಟೆಗೆ ಕರೆಯಬೇಕೆಂದು ನಿರ್ಣಯಿಸಲಾಯಿತು. ಕುಂದಾಪುರ, ಬಂಟ್ವಾಳ, ಪಾಡಿಮಂಗಳೂರು ಸರ್ಕಲ್ ಕಾಂಗ್ರೆಸ್ ಕಮಿಟಿಗಳ ಅಧಿಕಾರಿಗಳ ಚುನಾವಣೆಯನ್ನು ಫೆಬ್ರವರಿ ತಾ. 8ರೊಳಗಾಗಿ ನಡೆಸುವರೆ ಅಧಿಕಾರಿಗಳ ನೇಮಕವಾಯಿತು. ಹಿಂದೀ ಪ್ರಚಾರರಾಷ್ಟ್ರ ದಿನವನ್ನೂ ಗಾಂಧಿ ನಿರ್ವಾಣ ದಿನವನ್ನೂ ಯೋಗ್ಯ ಕಾರ್ಯಕ್ರಮಗಳಿಂದ ಆಚರಿಸುವಂತೆ ಸರ್ಕಲ್ ಕಾಂಗ್ರೆಸ್ ಕಮಿಟಿಗಳ ಅವಗಾಹನೆಗೆ ಕಳಿಬೇಕೆಂದಾಯಿತು.

ಗಾಂಧೀಜಿಯವರ ನಿರ್ವಾಣ ಪ್ರಾಜೆಕ್ಟ್—ಅಖಿಲ ಭಾರತ ಚರಕಾ ಸಂಘದ ದ. ಕನ್ನಡ ಮತ್ತು ಕೊಡಗು ಶಾಖೆ, ಮಂಗಳೂರು. ಇದರ ವತಿಯಿಂದ ಗಾಂಧೀಜೀಯವರ ನಿರ್ವಾಣ ಪ್ರಕ್ಷಾಚರಣೆಯು ಬಂಟ್ವಾಳದಲ್ಲಿ ಇದೇ ತಾ. 30 ಮತ್ತು 31ರಲ್ಲು ನೂಲು, ಆಂಗಳ, ಬಜಾರ ಇತ್ಯಾದಿ ಸ್ವಚ್ಛತೆ, ಅಕ್ಷರಾಭ್ಯಾಸ ಸಾಮೂಹಿಕ ನೂಲುವುದು, ಸಂಜೆ ಸಾಮೂಹಿಕ ಪ್ರಾರ್ಥನೆ, ಸಭೆ ಭಾಷಣಗಳು ನೇರವೇರಿತು. ಫೆಬ್ರವರಿ ತಾ. 11ರಲ್ಲು ರಾಮಕುಂಜದಲ್ಲೂ ತಾ. 12ರಲ್ಲು ಉಪ್ಪಿನಂಗಡಿಯಲ್ಲೂ ಕಾರ್ಯಕ್ರಮಗಳು ಜರಗಲಿರುವುವು.

ದ. ಕ. ಜಿಲ್ಲಾ ತೆಂಗು ಮತ್ತು ಅಡಿಕೆ ಮಾರ್ಕೆಟ್ ಕಮಿಟಿ ಸಭೆಯು ಇದೇ ತಾ. 24ರಲ್ಲು ಶ್ರೀಯುತ. ನಾರಾಯಣ ಮಲ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಚಾಲ್ತಿ ವರ್ಷದ ಬಡೆಟ್ ಮಂಜೂರಾದ ಬಳಿಕ, ಕಳವಾರು ನಿವಾರಣೆ, ನೇಮಕ ಮೊದಲಾದುವುಗಳ ಬಗ್ಗೆ ಮೂರು ಉಪಸಮಿತಿಗಳ ನೇಮಕವಾಯಿತು. ತೆಂಗು, ಅಡಿಕೆ ಮೊದಲಾದುವನ್ನು ವಿಕ್ರಯಿಸಲು ಮಂಗಳೂರಲ್ಲಿ ಒಂದು ಬೆತ್ತ ಮಾರ್ಕೆಟ್ ಯಾರ್ಡನ್ನು ತೆರೆಯಬೇಕೆಂದು ನಿಶ್ಚಯಿಸಲಾಗಿ ಆ ಬಗ್ಗೆ ಸಾಧ್ಯಾಸಾಧ್ಯತೆಗಳನ್ನು ಮಾಡುವರೆ ಕಮಿಟಿ ಕಾರ್ಯದರ್ಶಿಗಳಿಗೆ ಅಧಿಕಾರವೀಯಲಾಯಿತು. ಈ ಸಭೆಗೆ ಕೊಯಮತ್ತೂರು ಸರ್ಕಲಿನ ಅಸಿಸ್ಟಾಂಟ್ ಮಾರ್ಕೆಟಿಂಗ್ ಅಧಿಕಾರಿಯು ಹಾಜರಿದ್ದರು.

ಸತ್ಕಾರ ಕೂಟ- ದ. ಕ. ಜಿಲ್ಲೆಯಿಂದ ಮದ್ರಾಸು ಎಸೆಂಬ್ಲಿಗೆ ಮತ್ತು ಪಾರ್ಲಿಮೆಂಟಿಗೆ ಚುನಾಯಿಸಲ್ಪಟ್ಟವರನ್ನೂ ಇದೇ ತಾ. 25ರಲ್ಲು ಕೆನರಾ ಹೈಸ್ಕೂಲ್ ಜಲೆ ವಿದ್ಯಾರ್ಥಿ ಸಂಘದವರು ಅಭಿನಂದಿಸಿದರು. ಶ್ರೀ ಕೆ. ಸದಾನಂದ ಹೆಗ್ಡೆ, ವಕೀಲರು, ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಉಪಾಹಾರ, ಮಾನಪತ್ರ ಸಮರ್ಪಣೆ, ಸಂಗೀತ ಕಾರ್ಯಕ್ರಮಗಳಿದ್ದುವು ಅಂದೇ ರಾತ್ರಿ ಕೆನರಾ ಚೇಂಬರ್ ಆಫ್ ಕಾಮರ್ಸ್ ನವರು ನೂತನ ಸಭಾ ಸದಸ್ಯರೆಲ್ಲರನ್ನೂ ಸಿ. ಪಿ. ಸಿ. ಅತಿಥಿ ಗೃಹಕ್ಕೆ ಉಪಾಹಾರಕ್ಕೆ ಸತ್ಕರಿಸಿದರು.

ಸಂತತಿ ಸಂಯಮನ ಯೋಜನೆಗೆ ನಿರೋಧ. ಕೌಟುಂಬಿಕ ಯೋಜನೆಯ ಹೆಸರಲ್ಲಿ ಭಾರತ ಸರಕಾರದವರು ಸಂತತಿ ಸಂಯಮನವನ್ನು ಉತ್ತೇಜಿಸುವ ಸಲುವಾಗಿ ಅಳವಡಿಸಿ 'ಕ್ಲಿನಿಕ್'ಗಳನ್ನು ತೆರೆದ ಯೋಜನೆ ಮಾಡುವುದನ್ನು ನಿಲ್ಲಿಸಿ, ಸೈಂಟ್ ಎಗ್ನೇಸ್ ಕೊಲೇಜಿನಲ್ಲಿ, ಎಗ್ನೇಸಿಯಸ್ ಎಸೋಸಿಯೇಶನಿನ ಆಶ್ರಯದಲ್ಲಿ ಸಾರ್ವಜನಿಕ ಸಭೆಯೊಂದು ಶ್ರೀಮತಿ ಎಫ್ ಡಿ' ಸೋಜರ ಅಧ್ಯಕ್ಷತೆಯಲ್ಲಿ ಜರಗಿತು. ರೆ। ಫಾ। ಜೆ. ವಿಡರ್ಮಾರ್, ಎಸ್. ಜೆ. ಅವರು ಮಾತನಾಡುತ್ತಾ ಈ ಯೋಜನೆಯನ್ನು ಕೈಕೊಳ್ಳುವುದು ಅತ್ಯಾವಶ್ಯಕವಾಗುವುದೆಂದರು. ಬಳಿಕ ಈ ಯೋಜನೆಯನ್ನು ಸರಕಾರವು ಜಾರಿಗೆ ತರಬಾರದೆಂದು ಕೇಳಿಕೊಳ್ಳುವ ನಿರ್ಣಯವಾಯಿತು.

ಕುಸ್ತಿ ಪಂದ್ಯಾಟ- ಮಂಗಳೂರಿನ ಬಿ. ಇ. ಎಮ್. ಬ್ರಾಹ್ಮಣ ಗರ್ಲ್ಸ್ ಸ್ಕೂಲಿನ ವಜ್ರಾದಲ್ಲಿ ಇದೇ ತಾ. 20ರಲ್ಲು ಎರಡು ಜೋಡಿ ಹವ್ಯಾಸಿಗಳ ಕುಸ್ತಿ ಪಂದ್ಯಾಟ ನಡೆಯಿತು ಮಂಗಳೂರಿನ ಶ್ರೀ ಎಮ್. ಭುಂಡೀಕ ಪ್ರಭುಗಳವರು, ಬೆಟಗೇರಿನ ಶ್ರೀ ಶಂಕರ ಪ್ರಸಾದರೊಂದಿಗೂ, ಮಲಬಾರಿನ 'ಇಲೆಕ್ಟ್ರಿಕ್' ಮಹಮ್ಮದನು ಫಲಿತಾಂಶ ಸಂಕಷ್ಟ ಸುದರ್ಶನನ್ನೂ ಕಾದಾಡಿದರು. ಶ್ರೀ ತೀರ್ಮಾನವಾಯಿತು.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ
O. S. 561/51

ವಾದಿ—ವಿನಾಸಕ್ಕ ಸೆಟ್ಟಿ ಕೊಡಾ
ಪ್ರತಿವಾದಿ—ಅಣ್ಣಯ್ಯ ಸೆಟ್ಟಿ ಸಜಾ

ಸದ್ರಿ ದಾವೆಯು 5ನೇ ಪ್ರತಿವಾದಿ ಮಂಜಯ್ಯ ಸೆಟ್ಟಿ I, 6ನೇ ಪ್ರತಿವಾದಿ ಜಲಜಾಕ್ಷಿ ಸೆಟ್ಟಿ I, 7ನೇ ಪದ್ಮಳ್ಳಿ ಸೆಟ್ಟಿ I, 8ನೇ ರಾಮಣ್ಣ ಸೆಟ್ಟಿ I, 9ನೇ ಪುಟ್ಟಕಾಂಬಿಕೆ ಸೆಟ್ಟಿ II ಕೊಡಾ 5 ಜನರಿಗೆ ಈ ಮೂಲಕ ತಿಳಿಯಪಡಿಸುವುದೇನಂದರೆ, ಯಜಮಾನ್ಯಿಂದ ಬಾಧ್ಯತೆಯಲಕು, ನಡೂರು ಗ್ರಾಮದಲ್ಲಿರುತ್ತದೆ

ಸಾದರೀಗ ತಾ. 29-9-37ರ 3(0-0 ಅಡಿನ ಬಾಬ್ತು ಬಹ ಅಸ್ಸಲ ಪ ಒಡ್ಡಿ ಕೊಡಾ ರೂಪ್ಯಾ 560 ಮತ್ತು ಕೋರ್ಟ್ ಖರ್ಚು ವಸೂಲ ಪಡೆದು ಬಾಯಿಸಿಕೊಳ್ಳಲು ಪಂಕ್ಷ ಮಾಡಿದ ನೋಟಿನ ದಾವೆ ತಾ 22 2 1952 ನೇ ದಿನ ಬೆಳಿಗ್ಗೆ 11ಗಂಟೆಗೆ ಮೇಲ್ಕಾಣಿಸಿದ ಕೋರ್ಟಿನಲ್ಲಿ ತಾವೇ ಯಾ ನಿಮ್ಮ ಪರವಾಗಿ ಯಾರಾದರೂ ಪ್ಲೀಡರನ್ನು ಈ ಮೂಲಕ ತಿಳಿಸಿರುವುದು.

B S. Shetty, B A.B.L
Vakil for Plaintiffs.
Coondapoor. 29-1-1952

ಕುಂದಾಪುರ ಡಿ. ಮು. ಕೋರ್ಟಿನಲ್ಲಿ
O-S.184/1951

ವಾದಿ—ಕಾನೇರಿ ಹೆಂಗ್ಸು
ಪ್ರತಿವಾದಿ—ರುಕ್ಕ್ಮಿತಂಗ್ಸು 2 ಮಾಹಾಲಿಂಗ

ಈ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿಸುವುದೇನೆಂದ್ರೆ:-

2ನೇ ಪ್ರತಿವಾದಿಯು ಬಾಬ್ತು ಎಲ್ಲಾ ಸಾಲಗಾರ ಪರವಾಗಿ ಸಹಾ ಮೇಲಿನ ದಾವೆಯನ್ನು ಮಾಡುವರೆ ವಾದಿಗೆ ಕೋರ್ಟಿನವರು ಪರ್ಮಿಶನ್ ಕೊಡಿಸಬೇಕೆಂತ ಅರ್ಜಿ ದಾಖಲು ಮಾಡಿಯಿದೆ ಆ ಕುರಿತು ಯಾರದ್ದಾದರೂ ಆಕ್ಷೇಪಣೆಯಿದ್ದರೆ ತಾ 18-2-1952ರ ಬೆಳಿಗ್ಗೆ 11ಘಂಟೆಗೆ ಮೇಲಿನ ಕೋರ್ಟಿನಲ್ಲಿ ಹಾಜರಾಗಿ ಜ್ಞಾಪೀರುಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿಯನ್ನು ಈ ಮೂಲಕ ತಿಳಿಸಿಯದೆ.

By order of the Court
Y. Tejappa Shetty,
Advocate for Plaintiff
Coondapur, 24-1-1952

ಮಿನೆರ್ವಾ ನಂಬ್ರ 431

ರೂಪಾಯಿ 60,000 ಪಡೆಯಿರಿ.

ಒಂದು ಪ್ರವೇಶಕ್ಕೆ 2 ರೂಪಾಯಿ.

ಪ್ರಥಮ ಇನಾಮು- ಸರ್ವಸಮ ರೂ. **40,000**

ಅಲ್ಲದೆ 1ನೇ ಇನಾಂ ಗೆದ್ದವರಿಗೆ ಒಂದು ರೇಡಿಯೊ

ದ್ವಿತೀಯ ಬಹುಮಾನ ಪ್ರಥಮನ ಎರಡು ಸಂಖ್ಯೆ ಸರಿಯಾದುದಕ್ಕೆ ರೂ **15,000**

ತೃತೀಯ ಬಹುಮಾನ-ಕಡೆಯ ಒಂದು ಸಂಖ್ಯೆ ಸರಿಯಾದುದಕ್ಕೆ ರೂ. **5,000**

ಉತ್ತರ ಸ್ವೀಕರಿಸುವ ಕೊನೆಯದಿನ 9-2-52.

ಅಪೇಕ್ಷಿಸಿದ್ದಲ್ಲಿ ನಿಬಂಧನೆ ದೊರಕುವುದು

		7		

ಚೌಕದಲ್ಲಿಯ ಕಡಗಳಲ್ಲಿಯ ಒಟ್ಟು ಸೊಕ್ಕವು 30 ಮೂವತ್ತು ಬರುವಂತೆ 6 ರಿಂದ 9ರ ವರೆಗಿನ ಅಂಕಿಗಳನ್ನೂ ಉಪಯೋಗಿಸಿರಿ. ಪ್ರತಿ ಅಂಕೆಯನ್ನು ಒಮ್ಮೆ ಮಾತ್ರ ಉಪಯೋಗಿಸುವದು. 7 ನಂಬ್ರದ ಸ್ಥಾನ ಬದಲಾಯಿಸಕೂಡದು.

ನಿಯಮಗಳು: ಹಾಲಿ ಕಾಗದದ ಮೇಲೆ ಬರೆದು ಎಸ್ಸು ಪ್ರವೇಶಗಳನ್ನು ಬೇಕಾದರೂ ರಿಜಿಸ್ಟರ್ಡ್ ಪೋಸ್ಟು ದ್ವಾರಾ ಕಳುಹಿಸಬಹುದು ಮನಿಆರ್ಡರ್ ರಶೀದಿಯನ್ನಾಗಲೀ, ಕ್ಯಾಸ್ ಮಾಡಿದ ಪೋಸ್ಟಲ್ ಆರ್ಡರನ್ನಾಗಲೀ ಉತ್ತರದೊಂದಿಗೆ ಕಳುಹಿಸತಕ್ಕದ್ದು. ಪ್ರತ್ಯೇಕ ಸಹಿ ಇಲ್ಲದೆ ಫಲಿತಾಂಶ ಅಪೇಕ್ಷಿಸುವವರು ಎರಡಾಣೆ ಟಪ್ಪಾಲು ಚೀಟು ಮುಂದಾಗಿ ಕಳುಹಿಸತಕ್ಕದ್ದು. ಉತ್ತರ ಕಳುಹಿಸತಕ್ಕ ವಿಳಾಸ

The Manager, **MINERVA PUZZLES (Govt. Regd.)**
MADURAI, S. India. (431-K)

ಮಿನೆರ್ವಾ ನಂಬ್ರ 425-c ಯ ಉತ್ತರ: 14—10—12—13—11 ಎಲ್ಲಾ ಸರಿಯಾದ ಉತ್ತರಕ್ಕೆ I ಬಹುಮಾನ ರೂ. 4025-8-0 ಪ್ರಥಮ 2ಅಂಕೆಗಳು ಸರಿಯಾದ ಉತ್ತರಕ್ಕೆ II ಬಹುಮಾನ ರೂ 2100-0-0 3ನೇ ಬಹುಮಾನ [ಕಡೆಯ ಅಂಕೆ ಸರಿಯಾಗಿದ್ದಕ್ಕೆ] ರೂ. 850-0-0

● ತೃಪ್ತಿಕರವಾದ ವಸತಿ — ಹಿತಕರವಾದ ಊಟ
● ರುಚಿಕರವಾದ ಉಪಾಹಾರ ಇವುಗಳಿಗೆ
ಉಡುಪಿಯ ಆದರ್ಶ ನಿಲಯವೆಂದರೆ
ವುಡ್ ಲೇಂಡ್ಸ್
ಊರ ಪರವೂರ ಸನ್ನಾನ್ಯ ಸೆಲ್ಸ್ಮನ್‌ಹೆಸ್ಸರಿಂದ ಮುಕ್ತಕಂಠದಿಂದ
ಹೊಗಳಿಸಿಕೊಂಡ ನವ್ಯ ಹೋಟೆಲಿಗೇ
ಎಂದೆಂದೂ ನಿಮ್ಮ ಸಂದರ್ಶನವೀಯಲು ಮರೆಯದಿರಿ.
ಯಾತ್ರಿಕರಿಗೂ, ಪ್ರಯಾಣಿಕರಿಗೂ ಸರ್ವ ಅನುಕೂಲತೆಯಾಗುವಂತೆ
ನಗರದ ಕೇಂದ್ರ ಭಾಗದಲ್ಲಿದೆ.
WOODLANDS
Highclass Boarding & Lodging, **UDIPI S Kanara**



[೩ನೇ ಪುಟದಿಂದ ಮುಂದರಿದ್ದು]

ಇಷ್ಟು ಬೇಗನೆ ಮುಗಿಯ ತ್ವರಿತದ ಅವಶ್ಯಕತೆಯನ್ನು ನೋಡುವಾಗ ಸ್ವಲ್ಪ ಸಂಕಷ್ಟ ಮಾಡುವದು ಸ್ವಾಭಾವಿಕ! ಆರ್ಥಿಕ ಸಹಾಯ ನೀಡಿ ತನ್ನ ಸ್ವಾರ್ಥ ಸಾಧಿಸಿಕೊಳ್ಳಬಹುದೆಂಬ ಇಂಧೆಯನ್ನಿಟ್ಟುಕೊಂಡೇ ಅಮೆರಿಕೆಯ ನಿಯೋಗವು ವಿ.ಕೆ. ಮತ್ತೆ ಭಾರತವನ್ನು ಸಂದರ್ಶಿಸುತ್ತಲಿದೆ.

ಆರ್ಥಿಕ ಸಹಾಯವನ್ನು ಹೇರುವ ನೆಪವಿಟ್ಟುಕೊಂಡು ಭಾರತವನ್ನು ಒಲಿಸಿಕೊಳ್ಳುವ ಯತ್ನ ಇಂದು ಕಡೆ ನಡೆಸಿದ ಹಾಗೆ– ಭಾರತ ಪಾಕಿಸ್ತಾನಗಳೊಳಗೆ ವೈಶಮ್ಯವನ್ನು ಬೆಳೆಸಿ ಇಬ್ಬರೂ ಅಂಗ್ಲೋ ಅಮೆರಿಕಾನರ ಆಶ್ರಯವನ್ನೇ ಹೊಂದಿಕೊಳ್ಳುವ ಹಾಗೆ ಅಂತಃಕಲಹದ ಬೀಜವನ್ನು ಬಿತ್ತಲಾಗಿದೆ. ಕಾಶ್ಮೀರ ಪ್ರಶ್ನೆಯಲ್ಲಿ ಡಾ| ಗ್ರಾಹ್ಯಾಮರಿಗೆ ಸದ್ಭಾವವಿರಬಹುದೆಂದು ನಾವು ಊಹಿಸಿದ್ದೆವು. ಮೇನ್ನೆ ಭದ್ರತಾ ಮಂಡಳವು ಪ್ರಕಟಿಸಿದ ಸೈನ್ಯೀಕರಣ ಯೋಜನೆಯನ್ನು ನೋಡಿದರೆ ಯಾರಿಗೆ ಸೋಜಿಗವಾಗಬೇಡ! ಎರಡು ಮೂರು ತಿಂಗಳ ಹಿಂದೆ ಅವರು ಹಾಡುತ್ತಿದ್ದರಾಗಮೇ ಬೇರೆ–ಇಂದು ಹಾಡುತ್ತಿರುವ ರಾಗವೇ ಬೇರೆ.

ಡಾ| ಗ್ರಾಹ್ಯಾಮರು ನವಂಬರ ತಿಂಗಳಲ್ಲಿ ಭಾರತ ಸರಕಾರಕ್ಕೆ ಸೈನ್ಯೀಕರಣದ ಒಗ್ಗೆ ಒಂದು ಯೋಜನೆಯನ್ನು ಕಳಿಸಿಕೊಟ್ಟಿದ್ದರು. ಆಯೋಜನೆಗೂ ಇಂದು ಭದ್ರತಾ ಮಂಡಲವಲ್ಲಿ ಪ್ರಸಿದ್ಧವಾದ ಯೋಜನೆಗೂ ತಲೆಬುಡವಿಲ್ಲ. ಈ ನವೀನ ಯೋಜನೆಯಲ್ಲಿ ಯದ್ಧ ವಿರಾಮ ಗಡಿಯ ಎರಡೂ ಬದಿಯಲ್ಲಿ ಇರಬೇಕಾದ ಸೈನ್ಯದ ಸಂಖ್ಯೆಯಲ್ಲಿ ಹೆಚ್ಚುಕಡಿಮೆಯಿಡೆ. ಪಾಕಿಸ್ತಾನದ ಕಡೆಗೆ ಪಾಕಿಸ್ತಾನ ಸೈನಿಕರು ಮತ್ತು ನಾಗರಿಕ ಸೈನ್ಯಕೂಡಿ ಒಟ್ಟು 7000 ಸೈನಿಕರಿರಬೇಕೆಂದೂ ಯುದ್ಧ ವಿರಾಮ ಗಡಿಯಿಂದಿಚೆಗೆ ಭಾರತದ 28000 ಸೈನಿಕರು ಸೈನ್ಯವಿರಬೇಕೆಂದು ಹೇಳಲಾಗಿದೆ. ಆದರೆ ಇಂದು ಪ್ರಸಿದ್ಧವಾದ ಯೋಜನೆಯಲ್ಲಿ ಪಾಕಿಸ್ತಾನ 10 ಸಾವಿರ ಸೈನ್ಯ ಭಾರತ 14 ಸಾವಿರ ಸೈನ್ಯ ಇರಬೇಕೆಂದು ಹೇಳಲಾಗಿದೆ. ಈ ಬದಲಾವಣೆಯು ತೀರ ವಿಚಿತ್ರ ತರದ್ದಾಗಿದ್ದು ನವಂಬರ ತಿಂಗಳಲ್ಲಿ ಇದನ್ನು ಭಾರತಕ್ಕೆ ಹೇಳಿಯೆ ಇಲ್ಲ. ಅಂತಲೇ ಭಾರತ ಸರಕಾರವಿಂದು ಪ್ರತಿಭಟನಾ ಪತ್ರವನ್ನು ಕಳಿಸಿರುವದು.

ವಸ್ತುತಃ ಅಂಗ್ಲೋ ಅಮೆರಿಕಾನರಿಗೆ ಈ ಅಂತಃಕಲಹವನ್ನು ಮತ್ತಷ್ಟು ದೀರ್ಘ ಕಾಲ ಬೆಳೆಸಿ ಪಾಕಿಸ್ತಾನದಲ್ಲೊಂದು ಯುದ್ಧ ಶಾಶ್ವತವನ್ನೇ ರಚಿಸುವದು ಬೇಕಾಗಿದೆ. ಭಾರತ ಪಾಕಿಸ್ತಾನಗಳೊಳಗಿರುವ ಈ ತಂಟೆಯು ಬಗೆಹರಿಯುವಂತಾದರೆ ಮತ್ತೆ ಅಂಗ್ಲೋ ಅಮೆರಿಕಾನರ ಹಂಗನ್ನು ತೊರೆದು ಈ ರಾಷ್ಟ್ರಗಳು ಬಾಳಬಹುದು. ಮುಂದಿನ ವರ್ಷ ವಿಶ್ವವಿದ ಪೂರ್ವ ಚಿಹ್ನೆಗಳು ಕಾಣುತ್ತಿರುವಾಗ ಈ ಯುದ್ಧ ಪ್ರಿಯರು ಶಾಂತಿಯ ಹೆಸರಲ್ಲಿ ಕಪಟ ನಾಟ್ಯಧಾರಿಗಳಾಗಿ ವರ್ತಿಸುತ್ತಾರೆಯೇ ಹೊರತು ಇತರ ರಾಷ್ಟ್ರಗಳ ಅಭಿವೃದ್ಧಿಯನ್ನು ಹಾರೈಸಲಾರರು! ಈ ಯೋಜನೆಯು ಪಾರ್ ಸರಕಾರಿಂದ ಪರವಾಗಿ ಇದ್ದಂತೆ ತೋರುವುದು. ಭಾರತವು ನಿರಂಕುಶವಾದ ಖಂಡಿತವೇ ಇದೆ. ಇದರಿಂದ ಮುಖ್ಯವಾಗಿ ಉದ್ಭವಿಸುವ ಸಮಸ್ಯೆಯೆಂದರೆ: ಭದ್ರತಾ ಮಂಡಳವು ನ್ಯಾಯ ಪಕ್ಷಪಾತಿಯಾಗಿ ವರ್ತಿಸದಿರೂ ಭಾರತವು ನಕಾರಾತ್ಮಕವಾದ ಧೋರಣೆಯನ್ನೇ ವಹಿಸುತ್ತಿದೆಂದು ಹೇಳಿ ಭಾರತ ಪಾಕಿಸ್ತಾನಗಳೊಳಗೆ ಇನ್ನಷ್ಟು ವೈಮನಸ್ಸು ಕುಟ್ಟುವಂತೆ ಮಾಡಿವದೇ ಆಗಿದೆ. ಅಂತೂ ಅಂಗ್ಲೋ ಅಮೆರಿಕಾನರಿಗೆ ಬೇಕಾಗಿರುವದೂ ಅಷ್ಟೇನೆ. ಉಭಯ ರಾಷ್ಟ್ರಗಳೊಗೆ ಅಂತಃಕಲಹ.

ನೋಟೀಸು

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

S. C. No- 225/1951

M. ಶೇಕರನ್ ನ್ಯಾರ—ವಾದಿ

ಕುಂಞಿ ಬಿಂಡನ್ ನಂಬ್ಯಾರ ಕೂಡಾ–

–ಪ್ರತಿವಾದಿರು.

To

D1 ಕುಂಞಿ ಬಿಂಡನ್ ನಂಬ್ಯಾರ್, ನಾರಂಪಟ್ಟೆ ಕವ್ವಾರ ನಂಬ್ಯಾರ್ರ ಆಳಿಯು ಮತ್ತು ಅಬ್ಬಿತಿ ಅಮ್ಮನ ಮಗ

D2 ಕುಟ್ಟಿಕೃಷ್ಣ ನಂಬ್ಯಾರ್, ಮಾಧವ ರಾಮನ್ ನಂಬ್ಯಾರ್ರ ಮಗನ ಅಬ್ಬಿತಿ ಅಮ್ಮನ ಮಗ, ಇಬ್ಬರೂ ಚಂಬನಾಡು ಗ್ರಾಮ ದಲ್ಲಿರುವವರು–

ಶಾ. 1 10-1948ರಷ್ಟು ಪ್ರತಿವಾದಿರು ವಾದಿಗೆ ರೂಪ್ಯ 200/-ಕ್ಕೆ ಬರೆಯಿಟ್ಟು ಪೆಕ್ರಿ ನೋಟಿನ ಅಸಲು ಬಡ್ಡಿ ಖರ್ಚಿನ ವಸೂಲಿಗೆ ವಾದಿಯು ದಾಕ್ಲು ಮಾಡಿದ ಸಲ್ಲಿ ವ್ಯಾಜ್ಯವು ತಾರೀಕು 8-2-1952ಕ್ಕೆ ತನ್ನಿಗೆ ಯಿಟ್ಟಿರುವ ಸಂಗ್ತಿ ಪ್ರತಿವಾದಿರಿಗೆ ಈ ಮೂಲಕ ತಿಳಿಸಿಣಾಗಿಯದೆ.

Sd/– **B S. Kakkilaya**

Advocate for Plffs.

KASARAGOD 18-1 52

ಬಿಳುಪುಸ್ರಾವ ನಿಂತಿತು

'ಕುಮಾರಿ' ದಿಲ್ಲಿಗಳನು ಉಪಯೋಗಿಸಿದರೆ ಹದಿವಯಸ್ಸಿನ ಬಿಳುಪುಸ್ರಾವವಾಗುವುದು. ಹಸಿರೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣವಾಗುವುದು ಖಂಡಿತ, ಯಾವ ಪಾಥಳಿಯೂ ಇಲ್ಲ. ಸಾಮಾನ್ಯ ಮುಂದಿಗೆ ಪಾತ್ರ ಗುಣವಾಗಿದೆ–ಬೆಲೆ, ರೂ. 3-1 ಸ್ಪೆಶಲ್ ರೂ. 5-ಅಧಿಕಾಧಿಕ ಸ್ಪೆಶಲ್ ರೂ. 8-[ವಿ. ಪಿ ಹನ್ನೆರಡಾಣೆ ಪ್ರತ್ಯೇಕ.]

Mrs. D. DEVEE, P. DS. (N. J.)

Tollygunge CALCUTTA,

ಸ್ವಾಸ್ಥ್ಯರು ಶಂಕರಂಪಿಸಿ, ಮಂಗಳೂರು

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ದೊರಕುವ ಏಕೈಕ ಯೂಚಿಲ್ಲದೆಯಾಗಿಯೂದೊರೆಯುತ್ತವೆ.

ಕಲ್ಕೂರ ವ್ಯಾಸರಾಜಾಚಾರ್ಯ,

ರಥಬೀದಿ, ಉಡುಪಿ

New Year Greetings,

to all our Policyholders, Agents, Medical Examiners and wellwishers for their Happiness and Prosperity.

KOCHIKAR BROTHERS LIMITED

CHIEF AGENTS,

The Bombay Life Assurance Co. Ltd.

OFFICES AT:–

Madras, Bombay, Bangalore. Coimbatore. Madura Trivandrum, Calicut, Mangalore & Udipi

---

Happy New-Year Greetings

We are glad to announce that 12,000 shares of our Bank of the total value of Rs 3 lacs recently floated have been over-subscribed. We are grateful to the public for the increased confidence they have reposed in us We assure that we will do our utmost to deserve this well-placed confidence.

THE VIJAYA BANK LTD.

ESTD. 1931. H. O. MANGALORE.

B. M. Shetty, B A, B L, Secretary.

P J. Shetty, M A B L. C.A I I B., Superintendent.

B Manjaya Hegde, Advocate. [President, District Board S. K.] Chairman of the Board of Directors.

ಸಂರಕ್ಷಣೆ ಹಾಗೂ ಸಂಚಯಕ್ಕೆ

ದಿ ನ್ಯೂ ಗಾರ್ಡಿಯನ್ ಆಫ್ ಇಂಡಿಯಾ

ಲೈಫ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಸ್ಥಾಪನೆ] ಹೆಡ್ ಆಫೀಸು: ಮದ್ರಾಸು. [1934

ವಿಚಾರಿಸಿರಿ

ಈ ಪ್ರಗತಿಪರ ಕಂಪೆನಿಯಲ್ಲೊಂದು ಪಾಲಿಸಿಯನ್ನು ಪಡೆಯುವುದು ಉತ್ತಮ ದರ್ಜೆಯ ಕೇವಲಾತ್; ಅಂತೆಯೇ ಈ ಸಂಸ್ಥೆಯ ಏಜನ್ಸಿ ಪಡೆಯುವುದು ಲಾಭದಾಯಕ ವ್ಯವಹಾರದ ಸಂಬಂಧ.

ಈ ಕಂಪೆನಿಯ ಪ್ರಾತಿನಿಧ್ಯ ಪಡೆಯಲು ಉತ್ಸಾಹೀ ಜನಪ್ರತಿನಿಧಿಗಳ ಅರ್ಜಿಗಳಿಗೆ ಸದಾ ಸುಸ್ವಾಗತ. ದಯಮಾಡಿ ಈ ವಿಳಾಸಕ್ಕೆ ಬರೆಯಿರಿ.

ದಿ. ಬ್ರಾಂಚ್ ಮೆನೇಜರ್;

ಡಾಯಮಂಡ್ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು, (ದ. ಕ.)



BALLBEARING

–THE LIFEBLOOD OF THE INDUSTRY!

Dealers in:

ROTARY OIL MILLS
FLOUR MILLS
BALL, ROLLER & THRUST BEARINGS

TELEGRAMS –'CHEAPTRADE'

A. RAMSON AND CO.

MISTRI BUILDING BALARAM ST. BOMBAY 7

ವ್ಯಾಪಾರದ ಜಯಲಾಭಕ್ಕೆ

ಜಾಹೀರಾತೂ ಒಂದು ಕಾರಣ

ಜಾಹೀರಾತಿಲ್ಲದೆ ನೀವು ಜಯವಡೆಯಲಾರಿರಿ.

(ತಾ. ೧೬-೧-೧೯೫೩ನೇ ಸಂಚಿಕೆಯಿಂದ ಮುಂದುವರಿದ್ದು)

ಬರ್ಲಿನ್ ನಗರವು ಬಹಳ ವಿಸ್ತಾರವಾದ ದ್ದು. ರಸ್ತೆಗಳು ಎಲ್ಲೆಲ್ಲೂ ಬಹಳ ಅಗಲ ವಾಗಿವೆ. ಸಿಟ್ಟಿಗೆ ಒಂದು ಕಡೆ ಮೇಲೆ ಹೇಳಿದ ಹಿಟ್ಲರನ Auto bahn ಎಂಬ ದೊಡ್ಡ ವಾರ್ಗ ಕೂಡಾ ಇದೆ. ಎರಡು ಬದಿಗಳಲ್ಲೂ 4-5 ಉಪ್ಪರಿಗೆಗಳ ಕಟ್ಟೋಣಗಳು ವಕ್ರ್ಯಾಂಶ್ರ (machinery), ಮಣ್ಣಿನ ಪಾತ್ರೆಗಳು (Pottery), ಬಿಯರ್ (Beer), ಪುಸ್ತಕಗಳ ತಯಾರಿ ಇವೇ ಮೊದಲಾದ ಎನೇಕ ಕೈ ಗಾರಿಕೆಗಳು. ಒಟ್ಟು ಜನಸಂಖ್ಯೆ 3 ಮಿಲಿಯ ಕ್ಕೂ ಜಾಸ್ತಿ. ಆದರಲ್ಲೂ 2 ಮಿಲಿಯ ಪಶ್ಚಿಮ ಬರ್ಲಿನಿನಲ್ಲಿ. 1 ಮಿಲಿಯ ಪೂರ್ವ ಬರ್ಲಿನಿನಲ್ಲಿ.

ಹೀಗೆ ನಗರವನ್ನು ತಿರುಗುವಾಗ ಮುಂಚಿನ ದಿನ ರಾತ್ರೆ ಹೋಗಿದ್ದ ವಿಶ್ವವಿದ್ಯಾಲಯಕ್ಕೆ ಪುನಃ ಹೋಗಿ ಅದನ್ನು ಸಂದರ್ಶಿಸಿದೆ. ಅದು ಜರ್ಮನಿಯಲ್ಲಿ ವಿಜ್ಞಾನ (Science) ಕಲಿಸಲಿಕ್ಕೆ ಬಹಳ ಉತ್ಕೃಷ್ಟ ಹಾಗೂ ಪ್ರಸಿದ್ಧವಾದ ಜರ್ಮನ್ ಪ್ರಭೃತಿಗಳಲ್ಲಿ ಇವನು. ನಾನು ಬೊಂಬಾಯಿಂದ ಲಂಡನಿಗೆ ಹೋಗುವಾಗ ನಾಡಕರ್ಣಿ ಎಂಬ ಯಂ ಎಸ್.ಸಿ (M S C.) ಪಾಸಾದ ಒಬ್ಬ ಗುಜರಾತಿ ವಿದ್ಯಾರ್ಥಿ ಅವನ ಖರ್ಚಿನಿಂದಲೇ ಆಕ್ಸ್ ಫರ್ಡಿಗೆ ಕಲಿಯಲಿಕ್ಕೆ ಹೋಗಿದ್ದ. ಅವನನ್ನು ಕಂಡು ಮಾತನಾಡಿದೆ. ಅವನಿಗೆ ಬಹಳ ಸಂತೋಷವಾಯಿತು. ಅಲ್ಲಿ ನಮ್ಮ ದೇಶದ ವಿದ್ಯಾರ್ಥಿ ಅವನು ಒಬ್ಬನೇ ಆದುದರಿಂದ ಅವನು ಬಹಳ ಬೇಸರದಲ್ಲಿ ಇದ್ದ. ಮಾತ್ರವಲ್ಲ, ಬರ್ಲಿನ್ ನಗರದ ಈಗಿನ ಪರಿಸ್ಥಿತಿಯಲ್ಲಿ ಅದ್ಭುತವು ಅಪಾಯಕರವೇ ರಷ್ಯಕ್ಕೂ ಮಿತ್ರರಾಜ್ಯಗಳಿಗೂ ಇರುವ ಈಗಿನ ವಿಕ್ಷಿಪ್ತ ಸ್ಥಿತಿಯಲ್ಲಿ ಅದು ಯಾವ ದಿನವೂ ರಷ್ಯದ ಸೈನ್ಯವು ಸಮುದ್ರದಂತೆ ಉಮ್ಮಳಿಸಿ ಬರಬಹುದು

ಹೀಗೆ ಸಾಯಂಕಾಲ 4 ಗಂಟೆ ವರೆಗೆ ನಗರವನ್ನು ಸಂದರ್ಶಿಸಿ ನನ್ನ ಮಾರ್ಗದರ್ಶಿ ವಿದ್ಯಾರ್ಥಿನಿಯು ಅವಳ ಮನೆಗೆ ಕರೆದೊಯ್ದು ಹೋದಳು. ಅಲ್ಲಿ ಅವಳ ತಾಯಿ ಮತ್ತು ಅಣ್ಣ ಮೊದಲ ಕಟ್ಟಿಗೆಯ ಒಂದು flat ನಲ್ಲಿ ಇದ್ದರು. ಅವರೆಲ್ಲೇ ಸ್ವಂತ ಮನೆ ಯುದ್ಧ ಕಾಲದಲ್ಲಿ ಸುಟ್ಟುಹೋಯಿತು. ಈಗ ಬಾಡಿಗೆಯಲ್ಲಿದ್ದಾರೆ. ತಾಯಿಗೆ ವೇಗ್ನರ್ (Wagner) ಕೆಲಸ. ಸುಮಾರು 45 ವರ್ಷ ಪ್ರಾಯ. ಅವಳ ಹಿರಿಯಣ್ಣ ಪಶ್ಚಿಮ ಜರ್ಮನಿಯ ಲಕ್ಸೆಂಬರ್ಗ್ ಊರಿನವರು ಗಂಡನು ಜೂ. ಆಗಿದ್ದು 8 ವರ್ಷಗಳ ಹಿಂದೆ ಕ್ಷಯದಿಂದ ಮೃತಪಟ್ಟನು. ಎರಡೇ ಮಕ್ಕಳು. ಹಿರಿಯವ ಅದೇ ತಂಗಿ ಕಲಿಯುವ ವಿಶ್ವವಿದ್ಯಾಲಯದಲ್ಲಿ ಗಾಯನದ ವಿದ್ಯಾರ್ಥಿ. ನುನೆಯುಲ್ಲಿ ಹುಟ್ಟಿದ ಜನರು. ಸ್ವಲ್ಪ ಸೊಕ್ಕಿದ್ದರೂ ಕಪ್ಪ ಜೀವನ. ಅಲ್ಲಿ ನಾವೆಲ್ಲರೂ ಫಲಾಹಾರ ಮಾಡಿ ಕೆಲವು ಸಮಯ ಸಂಭಾಷಿಸಿ ನನ್ನ ಹೊಟೇಲಿಗೆ ನಾನು ಹಿಂತಿರುಗಿ ಬಂದೆ. ಈಗಲೂ ಈ ವಿದ್ಯಾರ್ಥಿನಿಯಿಂದ ಬರ್ಲಿನಿನ ವಿಚಾರದ ಕಾಗದಗಳು ಬರುತ್ತವೆ.

ಸಾಯಂಕಾಲ ನನ್ನ ಹೊಟೇಲಿನಲ್ಲೇ ಇದ್ದೆ. ಈ ಪತ್ರ ಒಂದನ್ನು ಬರೆಯಲಿಕ್ಕೆ ಕೂತೆ. ಅನಂತ ನನ್ನ ಮುಂಚಿನ ದಿವಸದ ಮಿತ್ರನು ಬಂದು ಒಂದು ತಾಸು ಸಮಯ ಸಂಭಾಷಿಸಿದರು ಅವರು ಕೂಡಾ ಈಗಲೂ ನನಗೆ ಪತ್ರ ಬರೆಯುತ್ತಾರೆ.

ಆವರಿಂದ ನನಗೆ ತಿಳಿದ ವಿಷಯ ಸಾರಾಂಶ ಹೀಗೆನ್ನಬಹುದು. ಈ ಮುಂಚಿ ಕೋಲೋನ್ ವಿಷಯ ಬರೆದಂತೆ ಅಲ್ಲಿ ಕೂಡಾ ಜರ್ಮನರು ರಷ್ಯದವರನ್ನು ದ್ವೇಷಿಸುತ್ತಾರೆ. ರಷ್ಯನ್ ಸೈನ್ಯದವರು ಇಲ್ಲಿ ಪ್ರವೇಶಿಸಿದಾಗ ಹೆಚ್ಚಿನ ಲೂಟಮಾಡಿದರು. ಈಗಲೂ ಪೂರ್ವ ಬರ್ಲಿನ್ ಮತ್ತು ಪೂರ್ವ ಜರ್ಮನಿಯು ರ್ವಿ ಜರ್ಮನರಿಗೆ ಬಹಳ ಕಪ್ಪ. ಕೊಡುತ್ತಾರೆ. ಪೂರ್ವ ಬರ್ಲಿನಿನಿಂದ ನಿತ್ಯವು ಸಾವಿರಾರು ವಿದ್ಯಾರ್ಥಿಗಳು ಪಶ್ಚಿಮ ಬರ್ಲಿನಿಗೆ ಬಂದು ಹೋಗುವರು. ಅವರು ಕೂಡ ಕಮ್ಯೂನಿಸ್ಟ್ ಕ್ರಮಕ್ಕೆ ಮುಖಿಪಡುವುದಿಲ್ಲ. ಆದರೆ ಅಲ್ಲಿ ಅನೇಕರು ಈಗಲೂ ತಸ್ತಿ ಇಲ್ಲದೆ ನಿರಾಸನೆಯಲ್ಲಿರುವರು. ಈ ಬಗ್ಗೆ ಆಗಾಗ ಪಶ್ಚಿಮ ಬರ್ಲಿನಿನ ವಿದ್ಯಾರ್ಥಿಗಳು ಸಭೆ ಸೇರಿ ಪ್ರತಿಭಟಿಸಿದರು. ಪಶ್ಚಿಮ ಬರ್ಲಿನಿನವರಿಗೆ ಪೂರ್ವ ಅಲ್ಲಿಯ 7 ಮಾರ್ಕ್‌ಗೆ ಸರಿಸಾನ. ಜರ್ಮನ್ ಜನರು ಈ ವರೆಗೆ ಹೆಚ್ಚಾಗಿ ಮಿಲಿಟರಿ ಕ್ಲಾಸಿನವರ ಕೆಳಗಿದ್ದು ಬ್ರಿಟಿಷ್ ಜನರಂತೆ ಪ್ರಜಾಪ್ರಭುತ್ವದ ತಯಾರಿ ಯೂ ಸ್ವತಂತ್ರ್ಯ ಬುದ್ಧಿ ಅವರಲ್ಲಿ ಕಡಿಮೆ. ಆದರೆ ಈಗ ಅವರಲ್ಲಿ ಇದು ಸಾರು ಆಗಿಯಾದೆ ಯುದ್ಧವು ಎಷ್ಟು ಮಾತ್ರಕ್ಕೂ ಬೇಡ. ಅದಂ ಹಾನಿಯಾದ ಈಗಲೂ ಜರ್ಮನ್ ಜನರಿಂಗೆ ನರಳುತ್ತಿದೆ ಇಚ್ಛಯವರ ಸಹಾಯಕ್ಕೆ ಅಮೇರಿಕದ ಸರಕಾರವು ಹಡ ಸುರಿಸುತ್ತಿದೆ. ಮಿತ್ರರಾಜ್ಯಗಳು ಪಶ್ಚಿಮ ಬರ್ಲಿನಿನಿಂದ ಹೋದರೆ ಮರುದಿನವೇ ಪೂರ್ವದವರು ಅನ್ನು ಸ್ವಾಧೀನ ಪಡಿಸಿಕೊಳ್ಳುವರು. ಇನು ನಿಜ. ಯಾಕಂದರೆ ಅಂಗಡಿಗಳಲ್ಲಿ ಒಂದೇ ದರ ಚರ್ಚೆ ಇಲ್ಲ ಟೇಕ್ಸಿಗಳು ಅಗ್ಗ, ಪೇರಿಸಿನಂಕೆಮೇಕ್ಸಿಲ್ಲ. ಮತ್ತು ಲಂಡನಿನಂತೆ ಇನಾಮು ಕೂಡಾ ಕೇಳುವುದಿಲ್ಲ, ಅಪೇಕ್ಷಿಸುವುದೂ ಕೂಡಾ ಇಲ್ಲ.

ಮರುದಿನ ವಧ್ಯಾಹ್ನದ ವರೆಗೆ ನಾನೇ ಊರನ್ನು ತಿರುಗಿದೆ. ಅನಂತರ ಮಧ್ಯಾಹ್ನ ಹೊರಟು ಸುಮಾರು ೩೦೦ ಮೈಲು ದೂರಕ್ಕಿರುವ ಮ್ಯೂನಿಕ್ (Munich) ಪಟ್ಟಣಕ್ಕೆ ವಿಮಾನದಲ್ಲಿ ಬರಲಿಕ್ಕೆ ಮುಂಚೆಯೇ ನಿಶ್ಚಯಿಸಿದೆ. ಅದು ಪೇನ್ ಅಮೆರಿಕನ್ ಕಂಪೆನಿಯಲ್ಲಿ. ಆವರ ಸರ್ವಿಸ್ ಕೈದು ಮಾಡಿದೆ ಕಾರಣ ಅವರ ಪ್ರಯಾಣಕ್ಕೆಂದು ಎಯರ್ ಫ್ರಾನ್ಸಿಗೆ ಬದಲಿ ಮಾಡಿದ್ದಿರು. ಅಲ್ಲಿಗೆ ಹೋಗಿ ಹೊರಡುವ ಸಮಯ ವಗೈರೆ ತಿಳಿದೆ. ಸಾಯಂಕಾಲ ಟೆಂಪಲ್ ಹೋಫ್ (Temple Hof) ಎಂಬ ನಿಲ್ದಾಣಕ್ಕೆ ಟೇಕ್ಸಿನಲ್ಲಿ ಬಂದೆ ಇದು ಬರ್ಲಿನಿನ ಸವಿಸರ್. 3-4 ಮೈಲಿಗೆ ನಿಂತ್ಕಂಡು ಬರುವಂಗ ವಿಮಾನ ಮಳೆ ಮತ್ತು ಗಾಳಿ. 4½ ಗಂಟೆಗೆ ಹೊರಡಬೇಕಂಡ ವಿಮಾನವು 5½ಕ್ಕೆ ಹೊಂಟಿತು. ದಾರಿಯೆಲ್ಲ ಮೋಡ ಮತ್ತು ಹನಿ ದಿಂರಿಯೇ ಇಲ್ಲ ಕಾಣದು. ಗಂಟೆ 6½ಕ್ಕೆ ನ್ಯೂರೆಂಬರ್ಗ್ (Nuremburg) ಎಂಬ ಯುದ್ಧಕಾಲದ ಮಹತ್ವದ ಕಸ್ಟಿ ನಕ್ಕೆ ಸಡಿದ ಊರಿಗೆ ಬಂದಾಗ ಮಳೆ ನಿಂತಿತು. ಅಲ್ಲಿ ಸ್ವಲ್ಪ ಸುಮಾರು ೦½ ತಾಸು ಪಾಲು ಕೆಲವು ಇಳಿದುಕೆಲವರು ಪುನಃ ಪಶ್ಚಿಮ ಮ್ಯೂನಿಕಿಗೆ 8 ಗಂಟೆಗೆ ಮುಟ್ಟಿದೆವು ವಾರಿಯಲ್ಲೆಲ್ಲೂ ಟೆನ್ನಿಸ್ ಕಾರ್ಟುಗಳಿಗೆ ಫೂಮಿಯಲ್ಲಿ ಕಾಣ ತ್ತಿದ್ದವು.

ಮ್ಯೂನಿಕ್ ಗೆ ಬಂದು ಒಟ್ಟಿದ್ದ 4-5 ಮೆಲಿ ಪ್ರಯಾಣವು ಹೊತ್ತಾಗಿ ಹೆಚ್ಚಿದ ಹೆಲೋ ಹೋಟೇಲಿಂದ ಪೆಟಿಟ್ ಡ್ರೀ ಲೋ ವೆನ್ (Hotel Dret Loen) ಎಂಬಲ್ಲಿಗೆ ಬಂದೆ. ಚಲೋ ಊಟ, ಕೋಣೆ ಮತ್ತು ಬಿಡ್ರಿ. ಮ್ಯೂನಿಕಿನ ವಿಚಾರ ಮುಂದಿನ ಭಾಗದಲ್ಲಿ.

(ವಿಚಾರವಾಣಿ) ಕೆ. ಆರ್. ಕಾರಂತ್

ಪ್ರವಾಸಿಯ ಪತ್ರಗಳು ೨೨

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸವಿಾಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈಕರ್, ಶಯನ ಇವೆಲ್ಲವೂ ಉತ್ತಮ ವ್ಯವಸ್ಥೆ ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಜ್ಞಾಪಕರ ಅಡಿಗೆ,ತಿಂಡಿತಿನಸು, ಇವುಗಳ ರುಚಿಶುಚಿ ಹೇಳಬೇಕೆ?

ಪ್ರೋಪ್ರೈಟರ್:— ಕೆ. ವೆಂಕಟ್ರಮಣಯ್ಯ

For up-to-date Lodging & Boarding

ROYAL MAHAL,

UDIPI. S. Kanara.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೬ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹೆಕ್ಕಿ ಹಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು. ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಳಾಯವಾಗಿದ್ದರೆ,.... ಜಟ್ಟಿ ಬಿದ್ದಿದ್ದರೆ, ಉಷ್ಣದಿಂದ ಜೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಕೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಕೊಲಿಕಃಟು ಗರ್ಮಿಯಿಂದ ಗರ್ಭಕೋಶ ನಾಶಕೊಂಡಿದ್ದರೆ, ಸರಿಯಾಗಿ ಭೇದಿ ಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಜೀನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜ ವ್ರಮಾಣ ಔಷಧ ಅರ್ಧಪೋಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರಿ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರಿ ೬ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನುತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಪದಾರ್ಥ, ಉಂಬಳಕಾಯಿ, ಒಳ್ಳೆಡ್ಡೆ ಬಿಡಬೇಕು.

ದಾಖ್ಲು ೦ಕ್ಕೆ ೫ರೂ. ಪೋಸ್ಟ್ ಖರ್ಚು ೪ ಆಣೆ

ಬಿಹೆಂಟೆರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:—ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ಡಾವಣಗೇರಿ: ಡಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತ ಡಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮೂಲಕರ ವಿಳಾಸ

ಕೀವಜಸಿದ್ಧಪ್ಪ ಹಾಲಪ್ಪ ಡಾವಣಗೇರಿ,

ಆಯುರ್ವೇದ ಔಷಧಾಲಯ. ಗದಗ

ಮೂಲ್ಕಿ ಬೇಂಕ್,

ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 21 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು

The Moolky Bank Ltd.,

Moolky, S. K.

ಅಮೃತಾಂಜನ

ತಲೆನೋವಿನಿಂದ, ತಿರೋವಿಂದಿನಿಂದ, ಉಳುಕು ಸುಟ್ಟಿಗೆ, ಭುಜ ಹಲ್ಲು ನೋವಿನಿಗೆಳಿಗೂ, ಎದೆ ನೋವು,ಶಾಯಗಳು, ಜಾತುಕೊಳ್ಳುವುದು, ಚೇಳಿನಿಷಮುಂತಾದವು, ಪಕ್ಷವಾತ,ಮೊದಲಿವೆ. ನೋವಿನಲಾದ ಎಲ್ಲಾರೋಗಳಿಗೂ ನಿರ್ದಾಷಧ

REGD

ಹುಳು ಕಡ್ಡಿ

ಮದ್ದು

ನಮ್ಮಲ್ಲಿ

ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್

ಪುದರಾಸು, ಬೊಂಬಾಯಿ ಮತ್ತು ಕಲ್ಕತ್ತ.

ಕುಂದಾಪುರ ಡಿ ಮು. ಕೋರ್ಟಿನಲ್ಲಿ

R.I A 2492/51 O. S. 599/49

ಮೈಸಿನ್ ಸಾಹೇಬ—ವಾದಿ

ಹಳೆಯಮ್ಮ ಸಹಾ—ಪ್ರತಿವಾದಿಯು ಸದರಿ ವಾದಿಕಡೆಯಿಂದ ಈ ಮೂಲಕ ಜಾಬ್ತೀದ್ದು ಮಾಡಿಕೊಳ್ಳುವದೇನೆಂದರೆ:—

4 ಸೀತಾರಾಮನು, ಬೆಸ್ಸ ಸ್ವಾಮಿ ಪ್ರಭುಗಳ ತಿವಮೊಗ್ಗಾ ಹಿಸ್ಸಾ ಸೋಬದಲ್ಲಿರುವ ಮೆಲ್ಕಂಡ ನಂಬ್ರದ ಸೈವಲಾತಿಯ ಡಿಕ್ರೀಕೊಂಡ ವಾದಿ ಕೊಟ್ಟು ಅರ್ಜಿಯನ್ನು 18-2-52ಕ್ಕೆ ಅಪ್ಪೆರಿ ತನ್ನಿಗೆ ಯಬ್ಬಿಕ್ಕೆ ಕುರಿತು ನಿಮ್ಮಿದೇನಾದ್ರೂ ಅಕ್ಷೇಪಣೆಸ್ತಾ ತಿದ್ದಿದ್ದಿನ ಮೆಲ್ಕಂಡ ಕೋರ್ಟು ಮುತಕ್ಕೂ ಗ್ಯಾ ॥ಗಂಟೆಗೆ ಸ್ವತಹಾ ವ ವಕೀಲರ ಗುಮ್ಮ ರಾ ಹಾಜರಾಗಿ ಜ್ಞಾಪೀಸುಮಾಡಿಕೆ ಳಕ್ಕೆ ದ್ದು. ತಪ್ಪಿದ್ರೆ ನಾವು ಗೈರಿ ಹಾಜರಿಯಲ್ಲಿ ವಿಚಕ್ಷಣವಾಗಿ ಕೇಪರ್ಮನಿಸಲ್ಪಡಿಸಬಹುದು ಸಾಬ್ತಿ ವಾದಿಕಡೆಯ ಎಂದು ಈ ಮೂಲಕ ತಿಳಿಯಪಡ್ಸಿದೆ.

G Sanjiva Rao BA B.L

Pleader for Plaintiff

KUNDAPUR. Date 24 1 52

ಯಕ್ಷಗಾನ ಪ್ರಪಂಚದೆಲ್ಲೆಡೆ ಕ್ಯಾಂತಿಯನ್ನೆಬ್ಬಿಸಿದ ಕವಿಭೂಷಣ

ಶ್ರೀ ಕೆ ಪಿ ವೆಂಕಪ್ಪ ಶೆಟ್ಟಿ ರ

ನವೀನ ಯಕ್ಷಗಾನ ನಾಟಕಗಳು!

ಸಾಹಸ ಭೀಮ ವಿಜಯ 0 8 0

ಭಾರತದ ಗುರುಕುಲ 0-6 0

ಲತ್ತಪಗಡೆ 0-6-0

ಭರತೇಶ ದಿಗ್ವಿಜಯ 0-8-0

ಅಭ್ಯಾಸಿಗಳಿಗೆ ತಕ್ಕ ಪೂಚನೆಗಳವೆ

ಯಕ್ಷಗಾನ ಸ್ಪರ್ಧೆಗೆ ಅಂತರಂಗದ ಅಮೂಲ್ಯ ಕ್ಷಾಣಿಕ್ಕೆ!

ನವಭಾರತ ಪುಸ್ತಕಭಂಡಾರ

ಉಡುಪಿ.

ವಾರದ ಭವಿಷ್ಯ

ತಾರೀಕು 31-1-52 ರಿಂದ — ತಾರೀಕು 6-2-52 ವರೆಗೆ

ಮೇಷ:-ಅನೇಕ ಸಮಯದಿಂದ ಕಷ್ಟಪಟ್ಟನುಭವಿಸುತ್ತಿದ್ದ ನಿಮಗೆ ಇಂದಿಗ ಸಾಸಮಯವು ಪ್ರಾಪ್ತವಾಗಿರುವದು ನಿಮ್ಮ ಅಭೀಪ್ಸಗಳು ನಿರ್ವಿಘ್ನದಿಂದ ನೆರವೇರುವ ಪೂರ್ವಾರ್ಧ ಕಷ್ಟರಿಗಳ ಕಾರ್ಯಗಳಲ್ಲಿ ನಿಶ್ಚಯನೆನ ವಿಷಯ ಲಾಭವಿದೆ. ಆರ್ಥಿಕ ವಿಷಯವು ಸಂತೃಪ್ತಿಯಿಂದ ಮುಕ್ತರಾಗುವಿರಿ. ಗೃಹ ಕೃತ್ಯದ ಅವ್ಯವಸ್ಥೆಯಿಂದಲೂ ಆನಿರೀಕ್ಷಿತ ಪರ್ಯಟನದಿಂದಲೂ ಮನಸ್ಸಿಗೆ ನೆಮ್ಮದಿಯಿರದು. ತಾ 2-3-6 ಅನುಕೂಲ ದಿನಗಳು.

ವೃಷಭ:-ನಿಮ್ಮ ಕಾರ್ಯ ದುರಂಧರತೆಯನ್ನು ಕಂಡು ಪ್ರಬಲರಾದ ಶತ್ರುಗಳೂ ಇಂದು ನಿಮಗೆ ಶರಣು ಬರಲಿರುವರು, ಸಮಾಜದಲ್ಲಿ ಒಳ್ಳೆಯ ಸ್ಥಾನಮಾನ ಗೌರವಗಳನ್ನು ಸಂಪಾದಿಸುವಿರಿ. ವ್ಯಾಪಾರ ವ್ಯವಹಾರಗಳಲ್ಲಿ ಪ್ರಗತಿಯಿದೆ. ಆರೋಗ್ಯವು ಉತ್ತಮವಾಗಿರುವದು ನಿಮ್ಮನ್ನಾಶ್ರಯಿಸಿ ಕೊಂಡಿರತಕ್ಕ ಪರಿವಾರದವರಿಂದ ಕೆಲವೊಮ್ಮೆ ನಷ್ಟ ಕಷ್ಟಗಳೊದಗುವ ಸಂಭವವಿದೆ. ತಾ 31, 1, 4, 5ರಲ್ಲಿ ಸಾಲ ಇಷ್ಟಪಟ್ಟಿದ್ದಿ ಭೋಗ ಭೋಜನಗಳ ಪ್ರಾಪ್ತಿಯಿದೆ.

ಮಿಥುನ:-ಕಳೆದ ದಿನಗಳಷ್ಟು ಕಷ್ಟವು ಕಾಡಿಸದೇನಾರದಲ್ಲಿ ಬಂಧುವರ್ಗದವರ ನೆರವು ಲಭಿಸುವದು ಆಕಸ್ಮಿಕ ಧನಾಪ್ತಿಯೋಗವಿದೆ. ಸಂಸಾರದಲ್ಲಿ ಸಮುದ್ರದಲೆಗಳಂತೆ ಮೇಲಿಂದ ಮೇಲೆ ಕಷ್ಟ ಪರಂಪರೆಗಳು ಬರುವವು ಶತ್ರಾಪಿ ಸ್ತ್ರೀಯರಿಂದ ವಿಶೇಷ ಅನಿಷ್ಟಗಳಿಗವಕಾಶವಿದೆ. ಆರ್ಥಿಕ ಸಮಸ್ಯೆ ಪೀಡಿತರಾದ ನಿಮಗೆ ತಾ 31, 1, 2, 3, 6, ಈ ದಿನಗಳಲ್ಲಿ ಸ್ನೇಹಿತರ ಬಂಧುಬಿಂದಾಗಿ ಚಿಂತೆಯು ದೂರವಾಗಲಿದೆ.

ಕರ್ಕಟ:—ದಿನೇ ದಿನೇ ಸ್ವಾಭಾವಾಗುತ್ತಿದೆ ನಿಮ್ಮ ದೈವ. ಇಂದಿನ ನಿಮ್ಮ ಆದಾಯದ ಇಮ್ಮಡಿ ಖರ್ಚುಗಳೊದಗುವದರಿಂದ ಹಿರಿಯರ ಕೂಡಿ ಸಾಲಮಾಡುವ ಪ್ರಸಂಗ ಬರಲಿದೆ ಆಪ್ತೇಷ್ಟರೇ ನಿಮ್ಮನ್ನು ವಂಚಿಸುವರು ವ್ಯಾಪಾರ ವ್ಯವಹಾರಗಳಲ್ಲಿ ನಷ್ಟವುಂಟಾದೀತು. ಪರ್ಯಟನ ಆದರಕೂಲೆ ಇತ್ಯಾದಿಗಳಿಂದ ಪೀಡಿತರಾದ ನಿಮಗೆ ತಾ. 2ರಿಂದ 5ರ ವರೆಗಿನ ದಿನಗಳು ಸುಖಲಾಭ ಸಂತಸ ದಾಯಗಳಾಗಿವೆ-

ಸಿಂಹ—ನಿಮ್ಮ ಕಷ್ಟದ ದಿನಗಳು ದೂರವಾದವು. ಪ್ರತಿಯೊಂದು ಕಾರ್ಯದಲ್ಲೂ ನಿಮ್ಮ ನಿರೀಕ್ಷೆಗಿಂತ ಅಧಿಕವಾದ ಫಲವು ಲಭಿಸದು. ಪಾತ್ರವಲ್ಲ ನಷ್ಟವಾಪ ದ್ರವ್ಯಾದಿಗಳೂ ಪುನಃ ಕೈಗೇರುವವು. ಸ್ವಯಾರ್ಜಿತದಿಂದಾಗಿ ಜನತೆಯಲ್ಲಿ ಸ್ಥಾನಮಾನಗಳನ್ನು ಪಡೆವಿರಿ. ಉದ್ಯೋಗ ನೌಕರಿ ಮೊದಲಾದುವುಗಳಲ್ಲಿ ಪ್ರಗತಿಯುಂಟಾಗುವದು. ಇತ್ಯಾದಿ ಅಧಿಕ ಶುಭವಾಡಕ್ಕ ನಿಮ್ಮ ಕೈಯಲ್ಲಿ ಕಾಸು ಉಳಿಯಲಾರದು. ವಾರಾಂತ್ಯದ 3ದಿನಗಳು ಇಷ್ಟಸಾಧಕಗಳಾಗಿವೆ

ಕನ್ಯಾ—ದಿನೇ ದಿನೇ ನಿಮ್ಮ ಪರಿಸ್ಥಿತಿಯು ಕಠಿಣವಾಗುತ್ತಾ ಬರಲಿದೆ. ಹೆಚ್ಚಿನ ಕಾಲವನ್ನು ಮೂರ್ಖಾತಿಶಯಮಾಡಲ್ಲಿ ಕಳೆಯ ಬೇಕಾಗುವದು. ಸ್ವಜನರ ವಿಯೋಗವಾಗಲಿದೆ. ಸಂಸಾರದಲ್ಲಿ ಗಂಡಹೆಂಡಿರೊಳಾತಂದೆ ಮಕ್ಕಳೊಳಾ ನುತಭೇದದಿಂದಾಗಿ ಕಲಹವಾಗುವದು, ಶತ್ರುಗಳ ಉಸಟಳದಿಂದಾಗಿ ನಿಮ್ಮ ಹೆಚ್ಚಿನ ಬಯಕೆಯು ಸಿದ್ಧಿಸದು. ಅದೂ ಗುರುಗಳನುಗ್ರಹವು ಚೆನ್ನಾಗಿರುವುದರಿಂದ ತಾ. 31, 1, 6. ಈ ದಿನಗಳಲ್ಲಿ ಕೆಲವೊಂದು ಇಷ್ಟಾರ್ಥಗಳನ್ನು ಹೊಂದುವಿರಿ.

ತುಲಾ—ದಿನೆಯಾಪನೆಯು ವಂಚಿನಂತೆ ಕಷ್ಟವಾಗಲಾರದು. ವ್ಯಾಪಾರ ನೌಕರಿ ಮುಂತಾದವುಗಳಲ್ಲಿ ಶ್ರಮಕ್ಕುಚಿತವಾದ ಫಲಪ್ರಾಪ್ತಿಯಿದೆ. ಆದರೂ ಉತ್ಪತ್ತಿಗಿಂತ ವ್ಯಯವಿರುವುದರಿಂದ ಕಷ್ಟದಿಂದ ದಿನಗಳೆಯಬೇಕಾಗುವದು. ಪ್ರಯಾಣಕ್ಕೀ ಕಾಲವು ಹಿತವಲ್ಲ. ವಾಹನಾದಿಗಳ ಯಾನದಲ್ಲಿ ಅಪಾಯ ಸಂಭವಿಸೀತು. ಸದಾ ಮನೋರೋಗದಿಂದ ಪೀಡಿತರಾದ ನಿಮಗೆ ವಾರಾದಿಯ 3ದಿನಗಳು ಕೊಂಚ ಉತ್ತಮಗಳಾಗಿ ಪರಿಣಮಿಸಲಿವೆ.

ವೃಶ್ಚಿಕ— ನೌಕರಿ ಜನರು ಸ್ವಲ್ಪ ಜಾಗರೂಕತೆಯಿಂದಿರತಕ್ಕದ್ದು. ಕಾರಣ ಅಧಿಕಾರಿಗಳ ವಕ್ರ ದೃಷ್ಟಿಯು ನಿಮ್ಮ ಮೇಲಿ ಬೀಳಲಿದೆ ಒಳ್ಳದ ಗಂಡಸಿಗೆ ಮೊಸಂಬಿಸಲ್ಲಿ ಕಷ್ಟ ಬಂತೆಂಬ ಗಾದೆಯಂತೆ ನಿಮ್ಮ ಮೇಲೆ ಇಲ್ಲಸಲ್ಲದ ದೋಷಾರೋಪಣೆ ಮಾಡಲಿರುವರು. ಆರೋಗ್ಯ ಭಾಗದಲ್ಲೂ ಕೊಂಚ ಜಾಗರೂಕರಾಗಿರಿ. ಪಿತೃದೋಷಗಳೂ ನೇತ್ರಪೀಡೆಯೂ ಕಾಣಿಸಿಕೊಳ್ಳಲಿದೆ. ಇತರ ಭಾಗಗಳಲ್ಲೇನೂ ಕೊರತೆ ಕಾಣಸದು. ತಾ 2ರಿಂದ 5ರ ವರೆಗಿನ ದಿನಗಳು ಅತ್ಯುತ್ತಮವಿವೆ-

ಧನು—ನಿಮ್ಮ ದಿನಗಳೂ ದೂರವಾಗುತ್ತಾ ಬಂದವು. ಮನೋರೋಗದಿಂದ ಮುಕ್ತರಾಗುವಿರಿ. ಯಾವ ಉದ್ಯಮದಲ್ಲೂ ನಷ್ಟವುಂಟಾಗದು. ಪುತ್ರವಲ್ಲ ನಾನಾ ತೆರದಿಂದ ಧನಾಗಮವಾಗಲಿದೆ. ನಿಮ್ಮ ಸ್ವಂತ ಉಪಭೋಗಕ್ಕೆ ಏನೊಂದೂ ಕೊಂತೆ ಕಾಂಚನದು. ಆಂತೂ ಖರ್ಚಿನ ಸಲುವಾಗಿ ಹಿರಿಯರ ನ್ಯಾಶ್ರೈಸಬೇಕಾಗಿಲ್ಲವು. ಚಂಚಲವಾದ ನಿಮ್ಮ ಮನಸ್ಸನ್ನು ಬಿಗಿಹಿಡಿಯುವಿರಿ. ವಾರಾಂತ್ಯದ 3ದಿನಗಳಲ್ಲಿ ಭೋಗಲಾಭ, ವಿಜಯಗಳು ಲಭಿಸುವವು-

ಮಕರ—ಕುರುವಿನ ಮೇಲೆ ಬೊಕ್ಕೆಯಿದ್ದಂತೆ ಮೊದಲೇ ಕಷ್ಟಪರಂಪರೆಗಳಲ್ಲಿ ಸಿಲುಕಿ ಪೀಡಿಸುತ್ತಿದ್ದ ನಿಮಗೆ ಇಂದಿಗ ಜನದ್ರೋಹವು ಹೆಚ್ಚುತ್ತಾ ಬರಲಿದೆ. ಶತ್ರುಗಳ ಪೀಡೆಯಿಂದಾಗಿ ಕಾರ್ಯಗಳು ಅರ್ಧದಲ್ಲೇ ನಿಲ್ಲಲಿವೆ ದೇಹದಾರೋಗ್ಯವೂ ಸರಿಯಿರಲ್ಲದು. ಸ್ಥಾನಪಲ್ಲಟದ ಯೋಗವು ಕಾಣಿಸುವದು ಆಪ್ತೇಷ್ಟರೂ ನಿಮ್ಮನ್ನು ದೂರ ಮಾಡಲಿರುವರು. ಅಂತೂ ತಾ. 2, 3, 4, 5 ಈ ದಿನಗಳನ್ನು ಬಹಳ ಕಷ್ಟದಿಂದ ಕಳೆಯಬೇಕಾದೀತು-

ಕುಂಭ—ಇಂದು ನಿಮ್ಮ ಆರ್ಥಿಕ ಪರಿಸ್ಥಿತಿಯೇನೋ ಉತ್ತಮವಾಗಿದ್ದೀತು ಆದರೆ ಅತಿರ ಯಾವ ಭಾಗದಲ್ಲೂ ನಿಮಗೆ ಸುಖವಿರದು. ಹೆಂಡತಿ ಮಕ್ಕಳ ನಿರಂತರ ವ್ಯವಹಾರದಲ್ಲಿ ಕಲಹ ದೇಹದಲ್ಲಿ ದೌರ್ಬಲ್ಯ ಉದ್ಯೋಗದಲ್ಲಿ ನಿರಾಶೆ ಮುಂತಾದ ಕಷ್ಟ ಪರಂಪರೆಗಳು ಪ್ರಾಪ್ತವಾಗಿವೆ. ರಾಜಕೀಯ ರಂಗದಲ್ಲಿ ವಿರೋಧಿಗಳಿಂದ ಪರಾಭವವುಂಟಾದೀತು. ಇದ್ದುದರಲ್ಲಿ ತಾ. 2, 3, ಮಾತ್ರ ಕಿಂಚಿತ್ಸುಖದಾಯಿಯಾಗಿ ಪರಿಣಮಿಸೀತು.

ಮೀನ— ಸಾಂಸಾರಿಕ ತಾಪತ್ರಯಗಳಲ್ಲಿ ದಿನೇ ದಿನೇ ಹೆಚ್ಚುವವು. ಮಾತೃನಾಡಿದವರೊಡನೆ ಜಗಳವಾಗಲಿದ್ದು ಶತ್ರುಜನರ ಪೀಡೆಯಿಂದಾಗಿ ಧನಮಾನಗಳಿಗೆ ಧಕ್ಕೆಯಿದೆ. ಶರೀರದಲ್ಲಿ ಕಜ್ಜಿ, ಹುಣ್ಣು ಗಾಯು ಮೊದಲಾದುವುಗಳು ಕಾಣಿಸಿಕೊಳ್ಳುವವು. ಆರ್ಥಿಕ ವಿಕ್ಷಿಪ್ತನಿಂದಾಗಿ ದಿನಯಾಪನೆಯು ಅತೀವ ದುಸ್ತರವಾದೀತು. ನಿಮ್ಮಲ್ಲಿರತಕ್ಕ ಧೈರ್ಯ ಸಾಹಸಗಳು ಮಾಯವಾಗುವವು, ತಾ 31, 1, 4, 5 ಈ ದಿನಗಳಲ್ಲಿ ಆನಿಷ್ಟಗಳು ಸ್ವಲ್ಪ ಕಡಿಮೆಯಾಗಲಿವೆ.

ಹೊಸ ಹುರುಪಿಗೂ ನವಜೀವನಕ್ಕೂ ಮಾನಸಿಕ ಬಲ ಸಂವರ್ಧನೆಗೂ
ದೇಹ ದಾರ್ಢ್ಯತೆಗೂ ಶಕ್ತಿ ಸಾಮರ್ಥ್ಯಕ್ಕೂ

ಕಾಳಿಕಮಾಲಿ

ಭವನ ಪ್ರಾಶವನ್ನೇ

ಸದಾ ಸರ್ವದಾ ಉಪಯೋಗಿಸಿರಿ

ಹಿಮಾಲಯದ ತಪ್ಪಲಿನ ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ಹೆಸರಾಂತ ಆಯುರ್ವೇದೀಯ ದಿವ್ಯೌಷಧ. ಅಶಕ್ತ ನರಗಳಿಗೂ ಬಲಹೀನ ಎದೆಗುಂದಿಗೆಗೂ ಚಲೋ ಟಾನಿಕ್.

ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಹಾಗೂ ಮೈಸೂರು ಸ್ಟೇಟಿನ ಸ್ವಾಧಿಕಾರಿಗಳು:—
ಎಂ. ವಿನಾಯಕ ರಾವ್, ಬನ್ನಂಜೆ ರಸ್ತೆ, ಉಡುಪಿ, ದ. ಕ

ಬೆಲೆ: 2 ಪೌಂಡಿನ ಟಿನ್ನಿಗೆ ರೂ. 10—0-0 (ಅಂಚೆವೆಚ್ಚ ಪ್ರತ್ಯೇಕ)

AYURVEDIC PHARMACY
Baba kali Kamali-Wala RISHIKESH.

ಮೈಸೂರು ಶ್ರೀಮನ್ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ ಖಾಸ್ಮೈದ್ಯ
ಅಂಬಳೆ ನರಸಿಂಹ ಪಂಡಿತರ ಮನೆತನ
ವೈ ರಾಮಸ್ವಾಮಿ ಅಯ್ಯಂಗಾರವರ

****ಸಂತಾನ ಸಿಂಧೂರ****

ಬಹಿಷ್ಠೆ ಸಂಬಂಧದ ಹೊಟ್ಟೆನೋವು ಉಟು ಮಕ್ಕಳಿಲ್ಲ, ಇಂಥವರೂಗೂ ಮತ್ತು ಬಹಿಷ್ಠೆ ಸಂಬಂಧದ ಹೊಟ್ಟೆನೋವಿನ ಜೊತೆಗೆ ತಲೆನೋವು, ನಡುಕಿಕ್ಕೆ, ಬೆನ್ನು ನೋವು, ಆಜೀರ್ಣ, ಕೆಮ್ಮು, ಏದ್ರಾಧಿಂಗ್ಸೆ ಉಗುಪ್ಪೆ ಇತ್ಯಾದಿ ಗುಪ್ತವ್ಯಾಧಿಗಳಿಗೂ

ಗ್ಯಾರಂಟೀ ಔಷಧ.

ಮೂರು ದಿವಸಗಳಲ್ಲಿ ಈ ಹೊಟ್ಟೆನೋವು ಗುಣವಾಗಿ ಜಾಗ್ರತೆ ಸಂತಾನ ಫಲ ಬೇಕಾದರೆ ಮೊಲ್ಲಂಡೆ ಸಿದ್ಧೌಷಧಿ ಒಂದು ಸೆಟ್ ಅನುಪಾನ ಪತ್ರಿಕೆ ಮೇರೆ ಇಬ್ಬರೂ ಸೇವಿಸಿರಿ ಸಾಕು. ಶೋಧನವಾವ 15-16 ವರ್ಷ ಮಕ್ಕಳಿಲ್ಲದವರಿಗೂ ಮಕ್ಕಳಾಗಿವೆ. ಅನೇಕ ಪ್ರಶಂಸಾಪತ್ರಗಳನ್ನು ಪಡೆದಿದೆ.

ಕ್ರಯ:— ಒಂದುಸೆಟ್ 5ರೂ. ಪ್ಯಾಕಿಂಗ್ ಮತ್ತು ಟಪಾಲು ಖರ್ಚು 1ರೂ ವಿ. ಪಿ. ಇಲ್ಲ. ಕ್ಯಾಟಲಾಗ್ ಉಚಿತ 6ರೂ. ಮನಿ ಆರ್ಡರ್ ಮಾಡಿರಿ. ಕೂಡಿ ರಿಜಿಸ್ಟರ್ ಪಾರ್ಸಲ್ ರವಾನೆ.

ವಿಳಾಸ:—

ವೈ. ರಾಮಸ್ವಾಮಿ ಅಯ್ಯಂಗಾರ್ ಸನ್ಸ್,
1) ಅಂಬಳೆ ಪೋಸ್ಟು, ಯಳಂದೂರು ತಾಲೂಕು ಮೈಸೂರು ಡಿಸ್ಟ್ರಿಕ್ಟು.
ಅಥವಾ 269 ಸೋಡರ್ ಸ್ಟ್ರೀಟ್, ದಿವಾನ್ಸ್‌ರೋಡು, ಮೈಸೂರು.

"ಗೋಪಾಲ ಭೇಷಜಾಶ್ರಮ" ಮಂಗಳೂರು
(ಸ್ಥಾಪನೆ 1910)
ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಬಾಣಂತಿಯರ ಸಲು ವಾಗಿಯೇ ದೇಶ್ವಮತ್ತು ಪ್ರತ್ಯೇಕದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ ಅಲ್ಪ ಮೌಲ್ಯದಿಂದ ಬಡವರಿಗೂ, ಧಾರ್ಮ್ಯಶಾಲಿಗಳಿಗೂ ಸುಲಭವಾಗಿರುವುದು.

ಇವರ
ನವಜೀವಾತು
ಎಂಬ
ಸೂತಿಕಾ ರಸಾಯನ

ಹೆಚ್ಚಿನ ಮಾಹಿತಿಗೆ—ಡಾ! ಯಂ. ಸಿ. ಕಾಶ್ತ್ರೀ, ಯಲ್. ಐ
ಕೊಡಿಯಾಲಬೈಲ ಪೋಸ್ಟು, (ಮಂಗಳೂರು)
ಸ್ವಾಧಿಕಾರಿಗಳು:—ಡಾ! ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

— ಮಕ್ಕಳನ್ನು ಹಡೆಯುವುದು ಸಾಕು —

ಅರತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗೃಹಸ್ಥ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನೆ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಳಲಿಕೆಗು, ಸ್ವದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಖಚಿತವಾಗಿ ಸೇವಿಸಬೇಕು.

ಕಿಮ್ಮತ್ತು:—ಹೆರವೀಪಲ್ಲಿ ಖಡದೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟೇಜ್ ಚಾರ್ಜು ೧೫ ಆಣೆ.

ಹೂಲಕರು:—ಹಾಲಪ್ಪಾ ಶಕೇರಪ್ಪಾ ಹಾವಣಗೇರಿ

ಆಯುರ್ವೇದ ಔಷಧಾಲಯ ಗದಗ-ಸಿಟಿ.

ಶಾಖೆಯು:—ಹುಬ್ಬಳ್ಳಿ ಪಾರ್ಮಸಿ,—ಹುಬ್ಬಳ್ಳಿ, ಗಣಪತಿ ಬಾಗಲಕೋಟೆ ಧಾರವಾಡ ವಿಜಾಪುರ—ಹಾವೇರಿ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ಪಂಚಾಕ್ಷರೇಶ್ವರ ಮಾರ್ಕೆಟ್ ಹಾವಣಗೇರಿ—ಹಾವಣಗೇರಿ ಪ್ರೆಸ್ಸ್ ಲಿಮಿಟೆಡ್ ಕೆಮಿಸ್ಟ್ ಹಾವೇರಿ ಬ್ಯಾಂಡಿ

Edited, Printed & Published By K. H. Shetty at the Navayuga Press, Udipi, S. India.

Regd.No. M. 3618

LICENCE No. 31
Licensed to Post without Prepayment

ESTD. 1921 ಸ್ಥಾಪನೆ

7–2–1952

Founder: Sri A. B. Shetty,
Minister for Agriculture & Veterinary

ನವಯುಗ
ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ವಾರಪತ್ರಿಕೆ.

ಕೃಷಿಮಂತ್ರಿ ಶ್ರೀ ಎ.ಬಿ ಶೆಟ್ಟರಿಂದ ಸ್ಥಾಪಿತನಾದುದು.



ನವಯುಗ
ಉಡುಪಿ, ದ. ಕ

ವಾರ್ಷಿಕ ಚಂದಾ
ರೂ 5–12 ೦
6 ತಿಂಗಳಿಗೆ
ರೂ 3–0–0
ಬಿಡಿ ಪ್ರತಿಗೆ
0–2 0

ವರ್ಷ ೩ರಿ ವಾರ ೩೨ | NAVAYUGA WEEKLY Post Box No. 22 UDIPI. | Vol 3 ೬ No. 22

"ಜಗತ್ತಿನ ಪ್ರತಿಯೊಂದು ಚಳವಳಿಯೂ ಜುರುಸಿನ ಬಲದಿಂದಲೇ ವಿಜಯಿಯಾಗಿದೆ. ಹುರುಪು ಇಲ್ಲದೆ ಯಾವುದನ್ನೂ ಸಾಧಿಸಲು ಅಸಾಧ್ಯ."

ಭಾರತದ ಒಟ್ಟು 22 ಪ್ರಾಂತಗಳಲ್ಲಿ 13 ಪ್ರಾಂತಗಳಲ್ಲಿ ಕಾಂಗ್ರೆಸ್ ಅರಿಸಿಬಂದಿದ್ದು ಉಳಿದ ಪ್ರಾಂತಗಳಲ್ಲಿ ಅನಿಶ್ಚಿತತೆಯು ಕಂಡುಬಂದಿದೆ. ಉಳಿದ ಪ್ರಾಂತಗಳಲ್ಲಿ ಅಧಿಕಾರಾರೂಢ ಮಹತ್ತ್ವಾಕಾಂಕ್ಷೆ ಕಾಂಗ್ರೆಸೇತರ ಪಕ್ಷಗಳಲ್ಲಿ ಇರುವದನ್ನು ನಾವಿಂದು ನೋಡುತ್ತಲಿದ್ದೇವೆ. ಇದರಲ್ಲಿ ಮುಖ್ಯವಾಗಿ ತಿರುವಾಂಕೂರು ಕೊಚ್ಚಿನ ದಲ್ಲಿ ಕಾಂಗ್ರೆಸ್ಸೇತರ ಪಕ್ಷಗಳು ಸಂಶಿಷ್ಟತೆ ದಾಗೂ ನ್ಯಾಯ ಪಕ್ಷಪಾತ ಧೋರಣೆಯನ್ನು ವಹಿಸುವಂತಹ ಮಂತ್ರಿದ್ವಿಗಳಿಂದ ಕೂಡಿದ್ದಾಗಿದೆ. ಆದರೆ ಮದ್ರಾಸಿನ ಸ್ಥಿತಿ ಹಾಗಿಲ್ಲ. ಇಲ್ಲಿ ಒಂದು ರೀತಿಯ ಅರಾಜಕೀಯ ಸ್ಪರ್ಧೆಯುಂಟಾಗಿ ದೇಶದ ಹಿತ ಸಾಧನೆಯ ಮಾರ್ಗದಲ್ಲಿ ಇದು ದೊಡ್ಡ ಅತಂಕವಾಗಬಹುದೇನೋ! ಪಕ್ಷವಿಂಗಡಣೆಗಳು ಧ್ಯೇಯಧೋರಣೆಗಳ ಕರ್ತವ್ಯ ಪರಿಪಾಲನೆಯನ್ನು ಬಿಟ್ಟುಕೊಟ್ಟು ಅಧಿಕಾರಕ್ಕಾಗಿ ಹೆಂಬರಿಸುವಂತೆ ತೋರುತ್ತಿದೆ.

ಕಾಂಗ್ರೆಸ್ಸಿನ ನಂತರ ಸ್ವತಂತ್ರರೆನ್ನುವ ಬಿಟ್ಟರೆ ಕಮ್ಯೂನಿಸ್ಟರೇ ಅಧಿಕ ಸಂಖ್ಯೆಯಲ್ಲಿರುವವರು. ಚುನಾವಣಾ ರಂಗದಲ್ಲಿ ಅನೈತಿಕವಾದ ಮಾರ್ಗದಿಂದ ವೈತ್ರಿಯನ್ನು ಬೆಳೆಸಿಕೊಂಡ ಕೆ. ಎಂ. ಪಿ. ಯವರು ಇಲ್ಲಿಯೂ ಅಂದರೆ ಸರಕಾರ ರಚಿಸುವಲ್ಲಿ ಭುಜಕ್ಕೆ ಭುಜಕೊಟ್ಟು ಸಹಕರಿಸುವಂತಿದೆ. ಪ್ರಜಾಪಾರ್ಟಿಯು ಅಧ್ವರ್ಯರಾದ ಶ್ರೀ ಟಿ. ಪ್ರಕಾಶಮರು ಕಮ್ಯೂನಿಸ್ಟರೊಡನೆ ಮಾತುಕತೆ ನಡೆಸಿದ್ದು ಕಾಂಗ್ರೆಸ್ ಯಾವುದೇ ರೀತಿಯಲ್ಲಿ ಬರಬಾರದೆನ್ನುವ ಯತ್ನದಲ್ಲಿ ಅವರು ತೊಡಗಿರುವರು. ನ್ಯಾಯಃ ಇದಕ್ಕಿಂತ ದೊಡ್ಡ ರಾಜಕೀಯ ಆತ್ಮಹತ್ಯೆ ಬೇರೊಂದಿಲ್ಲ. ತಮ್ಮ ಜೀವನಾನವನ್ನು ಕಾಂಗ್ರೆಸ್ಸಿನ ಉಚ್ಚ ಆದರ್ಶಗಳ ಪರಿಪಾಲನೆಗೆ ಸವೆಯಿಸಿ ಈಗ ತದ್ವಿರುದ್ಧವಾದ ಧ್ಯೇಯಧೋರಣೆಗಳುಳ್ಳ ಕಮ್ಯುನ್ಸ್ಟ್ರವಾದೀ ಸಾಮ್ಯವಾದಿಗಳೊಡನೆ ಸರಕಾರ ರಚಿಸುವ ಸಾಹಸಕ್ಕೆ ಕೈಯೊಡ್ಡಿರುವದು ನಿಜವಾಗಿಯೂ ಶೋಚನೀಯ ಸಂಗತಿ!

ಕಮ್ಯೂನಿಸ್ಟರೊಡನೆ ಸಖ್ಯವನ್ನು ಬೆಳೆಸುವದಾಗಲೀ– ಹಿಂದಿನಂದ ಅವರಿಗೆ ಪ್ರೋತ್ಸಾಹಿಸುವದಾಗಲೀ ನೈತಿಕವಾಗಿ ಒಪ್ಪುದೆ? ಚುನಾವಣಾ ಮೈತ್ರಿಯೆಂಬುದು ಕೇವಲ ಗೆಲುವಿನ ಸಾಧನವೆಂಬದನ್ನು ನಾವು ಒಪ್ಪುವದಾದರೂ ಅ ಮೇಲೂ ವಿರುದ್ಧ ತತ್ವ– ವಿರುದ್ಧ ಸ್ವಧಾವಗಳ ಮೇಲೆ ಸರಕಾರ ಸ್ಥಾಪಿಸುವ ನಿರ್ಧಾರವನ್ನು ಹೇಗೆ ಒಪ್ಪಲು ಸಾಧ್ಯ? ಅಧಿನಾಯಕತ್ವವನ್ನು ಕಮ್ಯೂನಿಸ್ಟರಾದರೋ ತಮಗೆ ಮಂತ್ರಿ ಪದವಿ ಬೇಡ–ಅಧಿಕಾರ ಬೇಡ–ಕಾಂಗ್ರೆಸ್ಸೇತರ ಪಕ್ಷ ವಹಿಸುವ ಪಕ್ಷಕ್ಕೆ ತಮ್ಮ ಬೆಂಬಲವೆನ್ನುತ್ತಾರೆ. ಇದೂ ಒಂದು ವಿಚಿತ್ರ ಸಂಗತಿಯೆ! ಇವರಿಗೂ ಚಿತೆ ನೀರೀಕ್ಷಿಸುತ್ತಿರುವದನ್ನು ಕಾಣಬಹುದು. ಅಂಧ್ರದಲ್ಲಿ ಸಾಮ್ಯವಾದಿಗಳ ವರ್ಚಸ್ಸು ಅಧಿಕವಾಗಿದ್ದು ೫೦% ಪ್ರಾಂತ ಕೊಟ್ಟುಬಿಟ್ಟರೆ ಅಲ್ಲಿ ಕಮ್ಯೂನಿಸ್ಟ ಸರಕಾರ ಸ್ಥಾಪಿರುತ್ತೇವೆಯೆಂದು ಇದೇ ಧೋರಣರು ಹೇಳಿದ್ದುಂಟು! ಮಾತ್ರವಲ್ಲ, ಅಂಧ್ರ ಪ್ರಾಂತರಚನೆ ಶಿಫಾರಸ್ಸು ಕೈಗೊಳ್ಳಲಿ ಎನ್ನುವ ಪ್ರಾಂತೀಯ ಚಳುವಳಿಗೆ ಹಿಂದಿನಿಂದ ಈ ಸಾಮ್ಯವಾದಿಗಳು ಪುರಸ್ಕರ್ತರಾಗಿದ್ದಾರೆ. ಮಾತ್ರವಲ್ಲ ಅಂಧ್ರ ಪ್ರಾಂತರಚನೆ ಸಾಧ್ಯವೆಂದಾದಾಗ ಸಾಮ್ಯವಾದಿಗಳು ಸುಲಭವಾಗಿ ಅದನ್ನು ವಶಪಡಿಸಿಕೊಳ್ಳಬಹುದು. ಇದು ಭಾಷಾವಾರು ಪ್ರಾಂತರಚನೆ ವಿಚಾರದಲ್ಲಿ ಅತಿ ಮಹತ್ವದ ಸಂಗತಿ! ಮುಖ್ಯ ಗುಟ್ಟು ಯೋಜನೆ ಕೂಡಾ!

ಕಾಂಗ್ರೆಸ್ಸನ್ನು ವಿರೋಧಿಸುವಲ್ಲಿ ಪಕ್ಷಗಳು ವಹಿಸುತ್ತಿರುವ ಧೋರಣೆ ಪ್ರಜಾಪ್ರಭುತ್ವದ ವಿಶಿಷ್ಟ ವದ್ಧತಿಗೆ ಹೊಂದಿಕೆಯಾಗಿದೆಯೇ? ಎಂಬುದನ್ನು ಗಂಭೀರವಾಗಿ ಆಲೋಚಿಸ ಬೇಕು. ಕೇವಲ ಸರ್ಧೆ–ಮೇಲಾಟಗಳಿಂದ ಜನತೆಯನ್ನು ವಂಚಿಸಿ ಅಧಿಕಾರಾರೂಢವಾಗುವ ಈ ಅನೈಪ್ಟ ನಿಲುವಾಗಿಯೂ ಅರಾಜಕೀಯವಾದುದು! ಕಾಂಗ್ರೆಸ್ಸು ಮದ್ರಾಸು ಪ್ರಾಂತದಲ್ಲಿ ಅಧಿಕಾರವನ್ನು ಸ್ವಾಧಿಸುವಲ್ಲಿ ಒಂದು ವೇಳೆ ಯಶಗಳಿಸದೇ ಹೋದರೂ ಅತಾತ್ವಿಕವಾದ ಮಾರ್ಗದಿಂದ ಜನತೆಯನ್ನು ವಂಚಿಸುವ ಪ್ರಯತ್ನವನ್ನು ಮಾಡಲಿಲ್ಲ!

ಹೊಣೆಯರಿಯದವರು– ಅಧಿಕಾರ ಲಾಲಸೆಯುಳ್ಳವರನ್ನು ಅರಿಸಿದರೆ ತತ್ವ ಬಾಳುವುದಿಲ್ಲವೆನ್ನುವದಕ್ಕೆ ಇದು ಉತ್ತಮ ಉದಾಹರಣೆ! ಈ ಚುನಾವಣೆಯಿಂದ ನಾವು ಕಲಿಯಬೇಕಾದ ಮುಖ್ಯ ಪಾಠ

ಚುನಾವಣಾ ಪಾಠ

ಇದನ್ನು ರಾಜಕೀಯ ಧರ್ಮವೆಂದು ಹೇಗೆ ಕರೆಯಬಹುದು? ಇವೆಲ್ಲ ಹುಚ್ಚು ಮನಸ್ಸಿನ ಹತ್ತು ಮುಖಗಳು ಅಷ್ಟೆ!

ಕಾಂಗ್ರೆಸ್ಸಿನಲ್ಲಿದ್ದುಕೊಂಡು ಅನುಭವೀ ನಾಯಕರೆಂದೂ– ಪ್ರಜಾಪಾರ್ಟಿಯ ಶಕ್ತ ಬಹುತೇಕ ಕಾಂಗ್ರೆಸ್ಸಿನ ಶತ್ರುತ್ವಕ್ಕೆ ಹೋಲಿಕೆಯುಳ್ಳದೆಂದೂ ನಂಬಿ ನವ್ಮ ಜನ ಅವರಿಗೆ ಪ್ರೋತ್ಸಾಹ ನೀಡಿ ಕಳಿಸಿದ್ದರೆನ್ನುವದನ್ನು ಮರೆಯಬಾರದು. ಈ ದೃಷ್ಟಿಯಿಂದ ಪ್ರೋತ್ಸಾಹವನ್ನಿತ್ತವರು ನಮ್ಮ ದೇಶದ ಸಂಸ್ಕೃತಿಗೆ ಒಗ್ಗದ ಒಂದು ರಾಜಕೀಯ ಪಕ್ಷಕ್ಕೆ ಪ್ರತ್ಯಕ್ಷವಾಗಿ ಪ್ರೋತ್ಸಾಹವನ್ನೀಯುವದನ್ನು ಅವರೆಂದೂ ಸಹಿಸರು! ನಿಜವಾಗಿಯೂ ಇದು ವಂಚನೆಯ ಪರಮಾವಧಿ!

ಸ್ವಾಮಿ ಗೊತ್ತಿದೆ ತಮ್ಮ ಧ್ಯೇಯ ಧೋರಣೆಗಳೆಂದೂ ಬಾಳೆ ಬದುಕುವಂಥಲ್ಲವೆಂದು! ಧ್ಯೇಯಸಾಧನೆಗಾಗಿ ಹೋರಾಟ ನಡೆಸುವವರು ಕಾಂಗ್ರೆಸ್ಸೇತರ ಪಕ್ಷಗಳಿಗೆ ತಮ್ಮ ಹೈಕ್ಕೂರ್ವಕ ಬೆಂಬಲವೆಂದರೆ ತಮ್ಮ ವಾದ ಒತ್ತಟ್ಟಿಗೆ– ನಡತೆ ಒತ್ತಟ್ಟಿಗೆ ಎಂದ ಹಾಗೆಯೆ ಆಯಿತು. ಈ ವಾದ ದ ಅರ್ಧ ಪ್ರಜಾಪಾರ್ಟಿ ಅಧಿಕಾರ ವಹಿಸಿದರೆ ನಾವು ಅವರ ಬೆಂಬಲಿಗರಾಗಿ ಪ್ರೋತ್ಸಾಹಿಸುತ್ತೇವೆ ಎಂಬುದೇ. ಟಿ. ಪ್ರಕಾಶಮ್ಮಾರ್ಲ ನಡೆದ ಮಾತುಕತೆಗಳ ಮತಿತಾರ್ಥವೂ ಇಷ್ಟೇ!

ಒಂದು ಕಡೆ ಅಧಿಕಾರ ಬೇಡವೆನ್ನುವ ಈ ಸಾಮ್ಯವಾದಿಗಳು ಇನ್ನೊಂದು ಕಡೆ ಅಧಿಕಾರಕ್ಕಾಗಿ ಚಾತಕ ಪಕ್ಷಿಯಂತೆ

"ಸ್ವಾತಂತ್ರ್ಯವೆಂದರೆ ಹೊಡೆಗಾರಿಕೆ ಅದಕ್ಕೆ ಕಾಗಿಯೇ ಅದಕ್ಕೆ ಅನೇಕರು ಅಂಜುತ್ತಾರೆ."

Our Pigmy Deposit Scheme

..... brings our bank to your door. You may save as small a sum as annas two. Our collector will call on you every day to receive it.

At the rate of annas two per day you save Rs. 350/- in 7 years because we allow interest at 3½% per annum At the rate of Re. 1/- per day your Savings are Rs. 2,800/- in 7 years At the rate of Rs. 10/- it is Rs. 28,000/-. Come in to-day and join the band of **Prudent Prosperous Pigmy People.**

The Canara Industrial & Banking Syndicate Ltd.

Estd: 1925. H. O: UDIPI.

ಕೊರಡ್ಕಲ್ ಶ್ರೀನಿವಾಸರಾವ್
ವಿರಚಿತ
ಸಲಭದಲ್ಲಿ ಇಂಗ್ಲಿಷ್
ಲಂಗ್ಸ್ ಸ್ವಯಂಬೋಧಿನಿ.
ಬೆಲೆ ರೂ. 1 8 0
ನವಭಾರತ ಪುಸ್ತಕ ಭಂಡಾರ, ಉಡುಪಿ.

ಸಂಯುಕ್ತ ರಾಷ್ಟ್ರಗಳಲ್ಲಿ ಪ್ರಾಂತಗಳ ಮತ್ತು ರಾಷ್ಟ್ರಗಳ ಎರಡು ದೃಷ್ಟಿಯಿರುವುದರಿಂದ ಅಗತ್ಯವೆಂತ ಕಾಣುವುದು ಹೊರತು ಬೇರಾವ ಕಾರಣಗಳಿಂದಲೂ ಎರಡನೇ ಸಭೆಯು ಅಗತ್ಯವೆಂದು ಕಾಣುವದಿಲ್ಲ. ಅಮೇರಿಕದಲ್ಲಿ ಸಹಾ ನೀನೇ ಬಹಳ ತಂಟೆ ಮಾಡುವದಾಗಿದೆ ಎಂದು ರಾಬರ್ಟ್ಸನರು ಹೇಳಿ ಯಾವ ತರದ ಎರಡನೇ ಸಭೆಯಾದರೂ ಪ್ರತಿನಿಧಿ ಸರಕಾರವನ್ನು ವ್ಯರ್ಥಗೊಳಿಸುವದು ಖಚ್ಚಿತವಾದರೆ ಅನಾವಶ್ಯಕವೆಂದರು. ಒಂದನೇ ಸಭೆಯ ಸಂಸಮಾನ ಅಧಿಕಾರವಿಲ್ಲದೆ ಆ ಸಭೆಯಲ್ಲಿ ಮಂಜೂರಾದ ಮಸೂದೆಯನ್ನು ವಂಶೀಲಿಸಿ ಸರಿಪಡಿಸುವಂತೆ ಮಾಡುವದು ರಾಜಕೀಯ ತಜ್ಞರ ಯೋಗ್ಯತೆಯಲ್ಲಾಗದ ಕಾರ್ಯವೆಂದು ಗೋಲ್ಡವಿನ ಸ್ಮಿತ್ (Goldwin Smith) ಎಂಬವರು ಹೇಳಿರುವರು. ಎಲ್ಲಿ ಅಧಿಕಾರವಿದೆಯೋ ಅಲ್ಲಿಯೇ ವಿಮರ್ಶೆ ಮತ್ತು ವರಿಶೀಲನೆ ಮಾಡುವ ಶಕ್ತಿ ಇದೆ ಶಿವಾಯಿ ಒಲವಂತರನ್ನು ಬಲಹೀನರು ತಡೆಗಟ್ಟುವರು. ಜನರ ಉದ್ವೇಗ ಅಥವಾ ಅವಸರದ ಬೇಡವಾಬ್ದಾರೀ ಕಾರ್ಯಗಳನ್ನು ತಡೆಗಟ್ಟುವರೆ ಎರಡನೇ ಸಭೆಯನ್ನೆಂಟು ಮಾಡುವದಾಗಿದೆ. ಈ ಸಭೆಯನ್ನು ಜನರಿಂದ ಚುನಾಯಿತವಾಗಿಯಾಗಲೀ ಅರಸರಿಂದ ನೇಮಕವ ಗಿಯಾಗಲೀ ಉಂಟು ಮಾಡುವದಾದ್ದರಿಂದ ಯಾರ ಅಧಿಕಾರಕ್ಕೆ ಅಡ್ಡ ಬರಬೇಕೆಂತ ಉಂಟು ಮಾಡುವೆವೋ ಅವರಿಂದಲೇ ಸ್ಥಾಪಿತವಾಗುವದೆಂತಾದ ಮೇಲೆ ತಮಗೆ ಕಾಮೇ ಕೇಡು ಬರುವ ರೀತಿಯಲ್ಲಿ ವರ್ತಿಸಿ ಉಂಟು ಮಾಡವದಿಲ್ಲವೆಂದು ಲೋರ್ಡ್ ಸ್ಟೇನ್‌ಹೋಪರು (Lord Stanehope) ಹೇಳಿರುವರು

ರಾಬರ್ಟ್ಸನ್ನರ ಹೇಳ್ಕೆಗೆ ಉತ್ತರ ಕೊಡುವಾಗ ಹರ್ಡಮನ್ (Herdman) ಎಂಬವರು ಈ ರೀತಿ ನಾಗಾಲ್ಗಡ ಮಾಡಿದರು. ರಾಬರ್ಟ್ಸನ್ನರು ಫ್ರೆಂಚ್ ದೇಶದ ರಾಜನೀತಿ ಪ್ರವೀಣರಾದ ಎಬ್ಬಿ ಸೈಯಿ (Mons. Abbe Sieye's) ಎಂಬವರ ನುಡಿಯು ಅಜಂದ್ರಾಕ್ಯವೆಂದು ಹೇಳಿರುವರು. ಇದು ಸಹಜ. ಲೋಕದಲ್ಲಿ ಎಷ್ಟೋ ಕಂತೆ ಪುರಾಣ (Platitudes) ವಾಕ್ಯು ನಾಣ್ನುಡಿಗಳು ಹೀಗೆ ಬಾಳಿಕೊಂಡಿವೆ. ಕಾನ. ಅವರ ದಾರಿಯನ್ನೇ ಹಿಡಿದು ವಾದಿಸುವುದಾದರೆ ಹೀಗೆ ಹೇಳಬಹುದು- ರಾಬರ್ಟ್ಸನ್ನರು ನನ್ನ ಹೇಳಿಕೆಗೆ ಆಸ ಸರಿಸುವುದಾದರೆ ಅನಾವಶ್ಯಕ ಎಂದು ನನ್ನ ಹೇಳಿಕೆಗೆ ವಿರೋಧ ಸೂಚಿಸುವದಾದರೆ ತಂಟೆಕೋರರು ಆದ್ದರಿಂದ ಬೇಡ. ಈ ವಾದದಲ್ಲಿ ತಂಟೆ ಕೋರತನ ಮತ್ತು ಅನಾವಶ್ಯಕವೆಂಬುದನ್ನು ರುಜುಪಡಿಸುವುದೇ ಕೆಲಸವಾಗಿದೆ. ಎರಡನೇ ಸಭೆಯು ಲೋಕದ ರಾಷ್ಟ್ರಗಳಲ್ಲಿ ನಾನಾ ರೂಪಗಳಲ್ಲಿ ಜನ್ಮಕ್ಕೆ ಬಂದಿವೆ. ಅವುಗಳಿಂದ ಕೆಡಕು ಇರುವದಾದ್ರೆ ಹೀಗಾಗುತ್ತಿರಲಿಲ್ಲ. ಹೊಸತಾಗಿ ಸ್ಥಾಪಿತವಾದ ರಾಷ್ಟ್ರಗಳು ತಮ್ಮ ಭವಿತವ್ಯವು ತಮ್ಮ ಕೈಯಲ್ಲೇ ಇರುವಾಗ ಬೇಕುಬೇಕೆಂತ ಸ್ಥಾಪಿಸಿರುವವು ಪಾತ್ರವಷ್ಟಿ ಒಂದೇ ಸಭೆಯಿರುವ ಸರಕಾರಗಳ್ಳಿ ಅವಶ್ಯಪಟ್ಟು ಎಡನೇ ಸಭೆಯ

ಪ್ರಜಾಸತ್ತೆ

ಎರಡನೇ ಸಭೆ (Second Chamber)

ಅದರ ಅಧಿಕಾರ ಮತ್ತು ಆವಶ್ಯಕತೆ

[ಕಳೆದ ಸಂಚಿಕೆಯಿಂದ ಮುಂದುವರಿದುದು]

ನ್ನುಂಟು ಮಾಡಿರುವರು. ರಾಜಕೀಯ ವಿಚಾರಗಳೆಲ್ಲಾ ಪಂದ್ಯಾಟದಲ್ಲಿ ಹಗ್ಗದ ಎಳೆಬಾಟದಂತಿರುವದು(Tug of war) ಇತರ ರಾಷ್ಟ್ರಗಳು ಬರೀ ನಕಲು ತೆಗೆದು ಎರಡು ಸಭೆಗಳನ್ನುಂಟು ಮಾಡಿದರೆಂದು ಹೇಳಲು ಬರುವದಿಲ್ಲ. ರಾಷ್ಟ್ರರಾಷ್ಟ್ರಗಳಲ್ಲಿ ಆಡಳಿತೆಯ ಕ್ರಮಗಳಲ್ಲಿ ಬೇದಗಳು ಹಲವು ತರದಲ್ಲಿ ಕಂಡು ಬಂದಾಗ್ಯೂ ಇದೊಂದು ವಿಷಯದಲ್ಲಿ ಎಲ್ಲಾ ರಾಷ್ಟ್ರಗಳೂ ಒಂದೇ ದಾರಿ ಹಿಡಿಯಲು ನಿಜವಾದ ಮತ್ತು ಬಲವಾದ ಕಾರಣಗಳಿರಬೇಕು. ಜಿ. ಎಚ್. ಹಾರ್ಲಿ (G. H. Harley) ಎಂಬವರು ಇದೇ ರೈಯಿನ್ ಬೋ ಮಂಡಲಿ (Rainbow Circle) ಸಭೆಯಲ್ಲಿ ಎರಡನೆ ಸಭೆಯ ಅವಶ್ಯಕತೆಯ ಕುರಿತು ಮಾತನಾಡುತ್ತಾ, ಹೀಗೆ ಹೇಳಿರುವರು. ದೇಶಗಳಲ್ಲಿರುವ ನಾನಾ ಜಗೆಯ ಮತಬೇಧ, ತತ್ವಗಳ ಭೇದ ಮತ್ತು ಸ್ವಾರ್ಥಪರ ಶಕ್ತಿಗಳ ಒತ್ತಾಟ ಮತ್ತು ಎಳೆದಾಟದ ಪ್ರಶ್ನೆಪ್ಪವಾಗಿ (pull or play of interest) ಇದು ಸ್ಥಾಪಿತವಾದುದು. ಎಮರ್ಸನ್ (Emerson) ಎಂಬವರು ಹೇಳಿದ ಹಾಗೆ ಯಾವ ರಾಷ್ಟ್ರವು ವ್ಯವಹಾರದಲ್ಲಿ ಹೆಚ್ಚು ಮಗ್ನವಾಗಿರುವುದೋ ಆ ರಾಷ್ಟ್ರವು ಹೆಚ್ಚು ಮುಂದುವರಿದಿದೆ ಎನ್ನಬಹುದೆಂದಿರುವರು. ಆಧುನಿಕ ಕಾಲದಲ್ಲಿ ಸರಕಾರಗಳಿಗೆ ಈ ರೀತಿ ತುಂಬಾ ವ್ಯವಹಾರವಿರುವುದರಿಂದ ಪರಸ್ಪರ ವಿರೋಧ ಶಕ್ತಿಗಳೊಳಗೆ ನ್ಯಾಯವಾಗಿರುವರೆ ಮತ್ತು ಅವಸರದಿಂದುಂಟಾಗುವದನ್ನು ತಡೆಗಟ್ಟುವರೆ ಇನ್ನೊಂದು ಸಭೆಯ ಬೇಕೆಂತ ಕಂಡಿರುವರು. ಯಾವದಾದರೊಂದು ವಿಷಯಗಳ ಕುರಿತು ಆಲೋಚಿಸುವಾಗ ಎಲ್ಲರೂ ಒಂದೇ ಕ್ರಮದಲ್ಲಿ ಆಲೋಚಿಸುವದಿಲ್ಲ; ಒಡೆಯನು ಒಂದು ದೃಷ್ಟಿಯಿಂದ ನೋಡುವನು ಸೇವಕನು ಇನ್ನೊಂದು ದೃಷ್ಟಿಂದ ನೋಡುವನು ಒಡೆಯನ ಆಲೋಚನೆಯನ್ನು ಅನುಮೋದಿಸುವ ಸಭೆಯು ಸೇವಕನಿಗಾಗದು. ಮಿಲ್ (J. S- Mill) ಎಂಬವರು ಹೇಳಿದಂತೆ ಒಂದೆ ಸಭೆಯಿರುವಲ್ಲಿ ಯಾವಾಗಲೂ ಒಂದೇ ರೀತಿಯಲ್ಲಿ ಆಲೋಚಿಸಿ ತಮ್ಮ ಮತಕ್ಕೆ ಯಾವಾಗಲೂ ಜಯಸಿಕ್ಕುವದೆಂದು ನಿಶ್ಚಯವಾದಲ್ಲಿ ನಿರಂಕುಶ ಅಧಿಕಾರ ಸ್ಥಾಪನೆಯಾಗುವದು. ಇದೇ ಕಾರಣದಿಂದ ಸಾಮಾನ್ಯ ಕಾಲದ ರೋಮಿನವರು ಕಾನ್ಸಿಲರ ಅಧಿಕಾರವೆಂಬುದು ಒಂದೇ ವರ್ಷಕ್ಕೆ ಮಾತ್ರವಿರುವದಾದ್ರೂ ಇಬ್ಬರು ಕಾನ್ಸಿಲರು ಬೇಕೆಂತ ಮಾಡಿರುವರು. ಒಂದು ಗಾಡಿಯಲ್ಲಿ ಸರಿಧಾರ ಅಥವಾ ಸಮತೋಲನ ನಿಡುವರೆ ಬಾಕಿಮರವು (Counter-poise) ಹೇಗೆ ಅಗತ್ಯವೋ ಹಾಗೆಯೇ ರಾಜಕೀಯ ವಿಚಾರಗಳ ಎಳೆದಾಟದಲ್ಲಿ ಸಮತೋಲನ ಮಾಡುವ ಬಗ್ಗೆ ಎರಡು ಸಭೆಗಳು ಅಗತ್ಯವೆಂದು ಕಂಡಿರುವರು. ಶಾಂತ ರೀತಿಯ ಸಾವದಾನದ ಪುನರಾಲೋಚನೆಯಲ್ಲಿ ಸುರಕ್ಷಿತತೆ ಇದೆ; ಅವಸರದಿಂದಲೂ ಅಜಾಕುರ್ಯದಿಂದಲೂ ಆಗುವ ಮೂರ್ಖತೆಗಳನ್ನು ತಡೆಗಟ್ಟುವದು ಅಗತ್ಯ. ಪ್ರತಿನಿಧಿಗಳು ಅಧಿಕಾರ ಬಲದಿಂದ ಮಾಡಿದ ತೀರ್ಮಾನವನ್ನು ಶಾಂತಚಿತ್ತದಿಂದ ಸಮಾಧಾನದಲ್ಲಿರುವ ಇನ್ನೊಂದು ಸಭೆಯ ಪರಿಶೀಲನೆಗೆ ಒಪ್ಪಿಸುವದು (Appeal from Philip drunk to Philip sober) ಲೇಸು. ಇವುಗಳಿಗೆಲ್ಲಾ ಅನಂದಿಯಿಂದಲೂ ಇದ್ದ ಆಧಾರಗಳೆಂದು ನಾವು ಒಪ್ಪುವದಾದರೂ ಆ ಉಪ್ಪು ತನ್ನ ಸಾರ ಮತ್ತು ಸತ್ವವನ್ನು ಕಳಕೊಂಡಿರುವದು. (The Solt has lost its savour) ಇದನ್ನೆಲ್ಲಾ ಪರಾಲೋಚಿಸುವುದಕ್ಕಿಂತ ಚರಿತ್ರೆಯನ್ನು ಮತ್ತು ಅನುಭವವನ್ನು ನೋಡುವುದು ಒಳ್ಳೆದು- ಅದ್ವೈತ ದೇಶಗಳಾ ರೀ ಸಂಯುಕ್ತ ರಾಷ್ಟ್ರಗಳೀ (Unitary or Federal States) ಎರಡು ಸಭೆಗಳ ಅಗತ್ಯತೆಯನ್ನು ಮನಗಂಡಿರುವವು- ಗ್ರೀಕ್ ದೇಶವೊಂದನ್ನು ಬಿಟ್ಟು ಉಳಿದ ರಾಷ್ಟ್ರಗಳೆಲ್ಲಾ ಎರಡು ಸಭೆಗಳನ್ನು ರಚಿಸಿರುವವು-(Constitutional Govt) ರಾಜ್ಯ ಶಾಸನವು ಬರಹಮೂಲಕವಿದ್ದಲ್ಲಿ ಬೇಕೆಂತಾದ ಮೇಲೆ ಪದ್ಧತಿಯಂತೆ ನಡೆಯುವ ಸರಕಾರಗಳಿಗೆ (Conventional Goverment) ಆ ಅಗತ್ಯ- ಹಾಗಿಲ್ಲದಿದ್ದರೆ ಶಾಸನ ಸಭೆಯವರೂ ನಿತ್ಯಗಟ್ಟಲೆ ವ್ಯವಹಾರದ ಇತರ ಸಣ್ಣ ಸಣ್ಣ ನಿಯಮಗಳಂತೆ ರಾಜ್ಯ ಘಟನೆಯನ್ನು ಬಹು ಸುಲಭದಿಂದ ಬದಲಾಯಿಸುವರು- ಯಾವ ರಾಷ್ಟ್ರದಲ್ಲಾದರೂ ಯಾರ ಮಸೂದೆಯಾದರೂ ಸಭೆಯ ಮುಂದೆ ಬರುವಾಗ ಇದ್ದಂತೇ ಮಂಜೂರಾಗಲಿಲ್ಲ- ಎಷ್ಟೋ ಬದಲಾವಣೆಗಳಾಗುತ್ತವೆ.

(ಮುಂದಿರುವುದು)

—ಸಿ ವಿಜ್. ಪೆಟ್ಟ್, ಬಿ. ಎ.

ರಾಮತೀರ್ಥ ಬ್ರಾಹ್ಮಿ ತೈಲ

ಸ್ಪೆಶಲ್ ನಂ. ೧] [ಮೆದಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬಕ್ಕೆ ವಾಸಿಯಾಗುತ್ತದೆ. ಕೂದಲು ಕಪ್ಪಾಗುತ್ತದೆ. ಬೆಳೆಯುತ್ತವೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತವೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿನ ಕ್ರಯಃ ದೊಡ್ಡ ಬಾಟ್ಲಿಗೆ ರೂ 3—8—0
ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಜಿ. ಐ. ಪಿ.) ಮುಂಬಯಿ, ೧೪

"ನಿಮ್ಮ ಕಂಪೆನಿಯಲ್ಲಿ ವಿಮಾ ಪತ್ರದಾರರ ಹಿತಗಳಿಗೆ ಭದ್ರತೆ ತುಂಬಾ ಇರುವುದಲ್ಲದೆ ಅವರಿಗೆ ಹೆಚ್ಚಿನ ಪ್ರಮಾಣದಲ್ಲಿ ಲಾಭವೂ ಸಿಗುವುದು."

—ಶ್ರೀ ಕೆ ಎ. ಪೆಂಡಿಕ್, B SC, F. I. A.
(ಸಲಹೆಗಾರ ವಿಮಾಗಣಕರು)

"ಕೆನರಾ ಮ್ಯೂಚುವಲ್" ಕಂಪೆನಿಯ ಎಲ್ಲ ವ್ಯವಹಾರಗಳು ಹೀಗೆ ಚಿಲೋವಾಗಿ ನಡೆಸಲ್ಪಡುವುದರಿಂದ ಈ ಕಂಪೆನಿಯು ಜನರ ವಿಶ್ವಾಸಾದರಗಳಿಗೆ ಪಾತ್ರವಾಗಿದೆ. ಕಂಪೆನಿಯ ಚತುರ್ಥ ವಿಮಾಗಣನೆ (Valuation)ಯಂತೆ, ಆಜೀವ (Whole Life) ಮತ್ತು ಉಂಬಳಿ (Endowment) ವಿಮೆಗಳಿಗೆ ಕ್ರಮವಾಗಿ ಸಾಲಿಯಾನ ಸಾವಿರಕ್ಕೆ ರೂ. 12 ಮತ್ತು ರೂ 9ರಂತೆ ಬೋನಸು ಹಂಚಲಾಗುವುದು. ಇದೇ ದರದಲ್ಲಿ ನಡುಗಾಲದ (Interim) ಬೋನಸನ್ನು ಸಹ ಇಡಲಾಗಿದೆ.

— ದಿ ಕೆನರಾ ಮ್ಯೂಚುವಲ್ —
ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,
ಸ್ಥಧಾನ ಕಾರ್ಯಾಲಯಃ ಉಡುಪಿ, ದ. ಭಾರತ.

ಕವಿರಾಜ ಯನ್. ಯನ್. ಸೇನರ

ಶಾಸ್ತ್ರೀಯ ಔಷಧಿಗಳು ಈಗಲೇ ಬಂದಿವೆ

ಬ್ರಹ್ ಅಮೃತಬಳ್ಳಿ ಕಷಾಯ
ಪ್ರಸೂತ್ಯಾರಿಷ್ಟ
ಕಸ್ತೂರಿ ಕಲ್ಪ ರಸಾಯನ
ನೇತ್ರಬಿಂದು
ಕರ್ಪೂರಾರಿಷ್ಟ
ದುರ್ಗಾ ಪುನರ್ನವಾಸವ
ಬಾಸಾರಿಷ್ಟ
ಕುಂಕುಮಾಸವ
ಮೃಗಾಂಕ ದ್ರಾವ
ದರವನ್ನು ವಿಚಾರಿಸುವದು.

ಏಜಂರ್ಸ:—
ಶಾ ಕಂಪೆನಿ, ಮಂಗಳೂರು ನಂ. 1

ತಿರುವಾಂಕೂರು ಕೊಚ್ಚಿನಲ್ಲಿ ಕಮ್ಯೂನಿಸ್ಟ್ ಸರಕಾರವೇ?

ಅಲ್ಲಿನ ಚುನಾವಣೆಗಳ ಹಿನ್ನೆಲೆ ಮತ್ತು ವಿಹಂಗಮ ನೋಟ.

ಭಾರತದಲ್ಲಿ ಮಹಾಚುನಾವಣೆಗಳು ಪ್ರಾರಂಭವಾದುದರ ಎರಡನೆಯ ಕ್ಷೇತ್ರ ತಿರುವಾಂಕೂರು–ಕೊಚ್ಚಿನ್. ಹೊಂಬತ್ತು ಲಕ್ಷ ಪ್ರಜಾಸಂಖ್ಯೆ ಇರುವ ಈ ಪ್ರಾಂತೀಯ ವಿಧಾಯಕ ಸಭೆಗೆ ಇರುವ ೧೩೮ ಸ್ಥಾನಗಳಲ್ಲಿ ಇಳ ಪಾತ್ರ ಕಾಂಗ್ರೆಸ್ಸಿಗೆ ದೊರೆತಿದೆ. ಹೆಚ್ಚು ಮಂದಿ ವಿದ್ಯಾವಂತರು ಇರುವ ಈ ಕ್ಷೇತ್ರದಲ್ಲಿ ಕಾಂಗ್ರೆಸ್ಸನ್ನು ಬಿಟ್ಟರೆ ಎರಡನೆಯ ಪ್ರಬಲ ಪಕ್ಷ ಕಮ್ಯೂನಿಸ್ಟರದು ಅವರಿಗೆ (ಇದರಲ್ಲಿ ಇತರ ವಾಮ ಪಕ್ಷಗಳೂ ಸೇರಿವೆ) ಒಟ್ಟು ೩೨ ಸ್ಥಾನ ದೊರೆತಿದೆ. ಅದರಿಂದ ಈ ಕ್ಷೇತ್ರದಲ್ಲಿ ನಡೆದಿರುವ ಮಹಾಚುನಾವಣೆಯನ್ನು ಅವಲೋಕಿಸಿದರೆ ಅನೇಕ ಉಪಯುಕ್ತ ಅಂಶಗಳು ಗೋಚರಿಸುತ್ತವೆ.

ಕಾಂಗ್ರೆಸ್ಸಿನ ಬಲ ಕಮ್ಮಿಯಾದುದಕ್ಕೆ ಕಾರಣ

ಸರ್ ಸಿ. ಪಿ. ರಾಮಸ್ವಾಮಿ ಅಯ್ಯರರವರ ಅಡಳಿತ ಕೊನೆಗೊಂಡು ಕಾಂಗ್ರೆಸ ಸರ್ಕಾರ ಇಲ್ಲಿ ಸ್ಥಾಪಿತವಾದಂದಿನಿಂದ ಇದು ವರೆಗೆ ಅಡಳಿತದಲ್ಲಿ [ಇತರ ಕಡೆಗಳಂತೆಯೇ] ಅವ್ಯವಸ್ಥೆ ತಲೆ ಹಾಕಿದೆ. ಬೇರಾದವರಿಗೆ ನಾನಾ ರೀತಿಯ ಕೆಲಸ ಮಾಡಿಕೊಡುವುದು, ಲಂಚ, ರುಸುವತ್ತುಗಳಿಗೆ ಕಡಿವಾಣವೇನೂ ಇಲ್ಲ. ಇದಲ್ಲದೆ ಹಿಂದೂ-ಕ್ರಿಶ್ಚಿಯನ್ ಜಾತಿ ವೈಮನಸ್ಸುಗಳು ಬೇರೆ. ಹೀಗಾಗಿ ಈ ಚುನಾವಣೆಗಳಲ್ಲಿ ಕಾಂಗ್ರೆಸ್ಸು ಕೇವಲ ಳಪ ಸಾಧಾರಣ ಸ್ಥಾನಗಳಿಸಿದೆ ಕಮ್ಯೂನಿಸ್ಟರು ತಮ್ಮ ಪ್ರಚಾರ ಬಲದಿಂದ ೩೫ ಸ್ಥಾನ ಗಳಿಸಿದ್ದಾರೆ ದೊಡ್ಡ ಕೈಗಾರಿಕೆಗಳಾಗಲೀ ವಿಶೇಷ ಇಲ್ಲದೆ, ವ್ಯವಸಾಯವೇ ಮುಖ್ಯ ಜೀವನೋಪಾಯವಾಗಿರುವ ಈ ಕ್ಷೇತ್ರದಲ್ಲಿ ಕಮ್ಯೂನಿಸ್ಟರಿಗೆ ಹೇಗೆ ಪ್ರಾಬಲ್ಯ ಸಿಕ್ಕಿತೆಂದರೆ ಆಶ್ಚರ್ಯವಾಗದಿರಲಾರದು. ಆದರೆ ಕೃಷಿಗಾರರಿಗೆ, ಕೆಲಸಗಾರರಿಗೆ ಭೂಮಿಯು ಬಿಟ್ಟು ಸಿಗುವುದೆಂದು ಕಮ್ಯೂನಿಸ್ಟರು ಆಸೆ ಹುಟ್ಟಿಸಿದ್ದಾರೆ ಅಲ್ಲದೆ ಅವರ ಪಕ್ಷದ ಪ್ರಚಾರದಂತೆ ಭೂಸ್ವರ್ಗ ಪ್ರಜೆಗಳಿಗೆ ದೊರೆಯುವುದೆಂದಿದ್ದಾರೆ. ಪ್ರಜೆಗಳಿಗೆ ಈಗಿನ ಸರಕಾರದಲ್ಲಿ ಬೇಸರ ಹುಟ್ಟಿರುವುದಲ್ಲದೆ ಬೇರೆ ಸರಕಾರ ಬರಲೆಂಬ ನಿಶ್ಚಯದಿಂದ ಕಮ್ಯೂನಿಸ್ಟರಿಗೆ ಓಟು ಕೊಟ್ಟಿದ್ದಾರೆ ಸೋಷಿಯಲಿಸ್ಟರು ತಮಗೇ ಹೆಚ್ಚು ಸ್ಥಾನಗಳು ಸಿಗುವುದೆಂದು ನಂಬಿದ್ದರು. ಶ್ರೀ ಆಯ್ಯಪ್ರಕಾಶರಂತೂ ಸೋಷಿಯಲಿಸ್ಟರು ಪ್ರಥಮತಃ ತಮ್ಮ ಸರಕಾರವನ್ನು ತಿರುವಾಂಕೂರು–ಕೊಚ್ಚಿನಲ್ಲಿ ಸ್ಥಾಪಿತವಾಗುವುದೆಂದು ಕನಸು ಕಂಡಿದ್ದರು. ಈಗ ಅವರಿಗೆ ೧೫ ಸ್ಥಾನ ಮಾತ್ರ ಸಿಕ್ಕಿದೆ. ಕಮ್ಯೂನಿಸ್ಟ್ ಪಕ್ಷವನ್ನು ಈ ಕ್ಷೇತ್ರದಲ್ಲಿ ಅಹಿಸ್ಸಂರಿಸಿದ್ದರಿಂದ ಆ ಪಕ್ಷದವರು, ಕ್ರಾಂತಿಕಾರ ಸೋಷಿಯಲಿಸ್ಟರೂ, ಇತರ ವಾಮ ಪಕ್ಷೀಯರು ಸೇರಿ 'ಐಕ್ಯ ಮುನ್ನಣಿ' ಎಂಬ ಪಕ್ಷದ ಹೆಸರಿನಲ್ಲಿ ಸ್ಪರ್ಧಿಸಿ ೩೫ ಸ್ಥಾನ ಗಳಿಸಿದ್ದಾರೆ. ಹಲವು ಕಮ್ಯೂನಿಸ್ಟ್ ಬೆಂಬಲುಳ್ಳ ಸ್ವತಂತ್ರರೂ ಸ್ಪರ್ಧಿಸಿ ವಿಜಯಗಳಾಗಿದ್ದಾರೆ.

ತಿರುವಾಂಕೂರಿನ ತಮಿಳು ಜನರಿರುವ ಪ್ರದೇಶಗಳು ತಮಿಳು ನಾಡು ಕಾಂಗ್ರೆಸ್ಸಿಗೇ ಸೇರಬೇಕೆಂಬ ಆಸೆಯನ್ನು ಸ್ಥಳೀಯ ಕಾಂಗ್ರೆಸ್ಸು ತಳ್ಳಿಹಾಕಿದುದರಿಂದ ಆ ಪ್ರದೇಶದ ಜನಗಳು ತಿರುವಾಂಕೂರು ತಮಿಳು ನಾಡು ಕಾಂಗ್ರೆಸ್ ಸ್ಥಾಪಿಸಿ ತಮ್ಮ ಪಕ್ಷದ ಉಮೇದುವಾರರನ್ನು ನಿಲ್ಲಿಸಿ ಅಸಾಧಾರಣ ಸ್ಥಾನಗಳನ್ನು ಗಳಿಸಿದ್ದಾರೆ. ಅಲ್ಲದೆ ಕೊಚ್ಚಿನ್ ತಿರುವಾಂಕೂರು ಕೊಚ್ಚಿನ್ ಸಂಸ್ಥಾನದಿಂದ ಬೇರೆ ಚಳುವಳಿ ಹುಟ್ಟಿಸಿ ಆ ಧ್ಯೇಯದ ಮೇಲೆ ಹುರಿಯಾಳುಗಳನ್ನು ನಿಲ್ಲಿಸಿದ ಕೊಚಿನ್ ಪಾರ್ಟಿಯವರು ಒಂದು ಸ್ಥಾನವನ್ನು ಮಾತ್ರ ಗಳಿಸಿದ್ದಾರೆ.

ಪಾರ್ಟಿಯ ಬಲಾಬಲಗಳು ಹೀಗಿರುವಾಗ ಇಲ್ಲಿ ಯಾವ ರೀತಿಯ ಸರ್ಕಾರ ಬರುವುದೆಂಬ ಕುತೂಹಲ ಯಾರಿಗಾದರೂ ಉಂಟಾಗದಿರದು ಸ್ವಲ್ಪಕಾಲ ಇಲ್ಲಿ ವಕ್ಷಗಳ ತಿಕ್ಕಾಟದಿಂದ ಯಾವ ಪಕ್ಷವೂ ಅಡಳಿತವನ್ನು ವಹಿಸಿಕೊಳ್ಳಲು ಸಮರ್ಥವಾಗಿಲಾರದೆಂದೂ ಭಾರತ ಸರ್ಕಾರವು ಅಡಳಿತವನ್ನು ವಹಿಸಿಕೊಂಡು ಸೈಸೂರಿನ ಮಾಜಿ ದಿವಾನರಾದ ಸರ್ ಮಿರ್ಜಾ ಇಸ್ಮೈಲ್‌ರವರನ್ನು ಕಮಿಷನರನ್ನಾಗಿ ನೇಮಿಸುವುದೆಂದೂ ವದಂತಿ ಹಬ್ಬಿದ್ದಿತು. ಈಗ ವದಂತಿಯ ಪ್ರಾಬಲ್ಯ ಅಷ್ಟಿಲ್ಲ ಕಮಿಷನರರ ಅಡಳಿತವೂ ಸುಗಮವಾಗಿ ನೆರವೇರಲು ಹಲವಾರು ತೊಂದರೆಗಳಿರುವಾಗ ಈ ಪ್ರಕ್ಷುಬ್ಧ ವಾತಾವರಣದಲ್ಲಿ ಅದು ಸೂಕ್ತವಾಗಿರಲಾರದೆಂದು ಜನಗಳಿಗೆ ಶಂಕೆಯಿದೆ.

ಕಾಂಗ್ರೆಸ್ಸನ್ನು ಬಿಟ್ಟರೆ.....

ಕಾಂಗ್ರೆಸ್ಸನ್ನು ಬಿಟ್ಟು ಮಿಕ್ಕ ಯಾವ ಪಕ್ಷವೂ ಸರ್ಕಾರದ ಅಡಳಿತ ನಡೆಸಲಾರದೆಂದು ಇಂದಿನ ಮುಖ್ಯಮಂತ್ರಿ ಶ್ರೀ ಕೇಶವನ್ ತಿಳಿಸಿದ್ದಾರೆ. ಸೋಷಿಯಲಿಸ್ಟ್ ಮುಖಂಡರಾದ ಶ್ರೀ ಪಟ್ಟಂತಾನು ಪಿಳ್ಳೈಯವರು [ನಾಜೀ ಮುಖ್ಯಮಂತ್ರಿ, ಮತ್ತು ಕಾಂಗ್ರೆಸ್ಸಿನ ಮಾಜೀ ಅಧ್ಯಕ್ಷರು] ಕಾಂಗ್ರೆಸ್ಸಿಗೆ ವಿರೋಧವಾಗಿ ಇತರ ಪಂಗಡಗಳೊಡನೆ ಸೇರಿ ಸರ್ಕಾರ ರಚಿಸುವ ಯೋಜನೆ ತಮ್ಮ ಪಕ್ಷಕ್ಕೆ ಇಷ್ಟವೆಂದೂ ತಿಳಿಸಿದ್ದಾರೆ. ಅಲ್ಲದೆ ಇನ್ನು ಆರು ತಿಂಗಳಲ್ಲಿ ಪುನಃ ಚುನಾವಣೆಗಳು ಆಗುವುದೆಂದು ಮುನ್ನುಡಿದಿದ್ದಾರೆ. ಕಮ್ಯೂನಿಸ್ಟರೂ ಇದನ್ನೇ ಸೇರುವ ಪ್ರಶ್ನೆಯೇ ಇಲ್ಲವೆಂದು ತಿಳಿಸಿದ್ದಾರೆ. ಇದರಿಂದ ಕಾಂಗ್ರೆಸ್ ಅಲ್ಲದೆ ಇತರ ಪಕ್ಷಗಳೂ ಸೇರಿ ಸರ್ಕಾರ ರಚಿಸುವ ಸಾಧ್ಯತೆ ಇಲ್ಲದಾಗಿದೆ.

ಪುನಃ ಚುನಾವಣೆಗಳನ್ನು ನಡೆಸುವುದೆಂದರೆ ವಿಪರೀತ ಖರ್ಚು. ಶ್ರಮವೂ ಆಗುವುದಲ್ಲದೆ ರಾಜಕೀಯ ಪಕ್ಷಗಳಿಗೆ ಒಂದು ಧಕ್ಕೆ ಇಲ್ಲದಾಗುತ್ತದೆ. ಕಾಂಗ್ರೆಸ್ಸು ಸುವ್ಯವಸ್ಥಿತ ರೀತಿಯಲ್ಲಿ ಪ್ರಚಾರ ಕೈಗೊಂಡಿದ್ದರೆ ಕೆಲವು ಸ್ಥಾನಗಳನ್ನು ಗಳಿಸಬಹುದಾಗಿತ್ತು. ಅಲ್ಲದೆ ಸ್ವತಂತ್ರರು ಬಂದಿರುವ ಅನೇಕ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಉಮೇದುವಾರರುಗಳು ಹೆಚ್ಚು ಬಹುವತದಿಂದ ಸೋಲಿಸಲ್ಪಟ್ಟಿದ್ದಾರೆ. ಪ್ರಭಾವಯುತ ಸ್ವತಂತ್ರ ವ್ಯಕ್ತಿಗಳಿಗೆ ಕಾಂಗ್ರೆಸ್ ಬೆಂಬಲ ಕೊಡಿದ್ದರೆ ಓಟುಗಳು ಹಂಚಿ ಹೋಗಿ ವುದೂ ಚಿಟ್ಟು ಕಾಂಗ್ರೆಸ್ ಬೆಂಬಲಿಗರೇ ಬಹುಮತ ಸಿಗುವ ಸಂಭವ ಇರುತ್ತಿತ್ತು. ಈಗ ಒಬ್ಬೊಬ್ಬರು ಸ್ವತಂತ್ರರು ಕಾಂಗ್ರೆಸ್ಸಿಗೆ ಸೇರಿದರೂ ಹೆಲವರು ವಾಮ ಪಕ್ಷಕ್ಕೆ ಸೇರುವ ಸಾಧ್ಯತೆ ಇದೆ. ಕಾಂಗ್ರೆಸ್ ಒಂದನ್ನೇ ತೆಗೆದುಕೊಂಡರೆ ಅದಕ್ಕೆ ಬಹುಮತ ಇಲ್ಲ. ಕಾಂಗ್ರೆಸ್, ತಮಿಳುನಾಡು ಕಾಂಗ್ರೆಸ್, ಹೆಲವು ಸ್ವತಂತ್ರರು ಇಷ್ಟನ್ನಾದರೂ ಸೇರಿಸಿಕೊಂಡರೆ ಅರ್ಧದಷ್ಟು ಬಹುಮತ ಕಾಂಗ್ರೆಸ್ಸಿಗೇ ದೊರೆಯುತ್ತದೆ.

ಈಗ ಕಾಂಗ್ರೆಸ್, ಕಮ್ಯೂನಿಸ್ಟ್, ಸೋಷಿಯಲಿಸ್ಟ್, ತಮಿಳುನಾಡು ಕಾಂಗ್ರೆಸ್ ಎಲ್ಲರೂ ಸಮಾಲೋಚನೆ ನಡೆಸುತ್ತಾ ಪಾರ್ಟಿ ಸಭೆ, ವರ್ಕಿಂಗ್ ಕಮಿಟಿ ಸಭೆಗಳನ್ನು ನಡೆಸುತ್ತಾ ಒಬ್ಬರು ಮತ್ತೊಬ್ಬರನ್ನು ಬುಟ್ಟಿಗೆ ಹಾಕಿಕೊಳ್ಳಲು ಯೋಚಿಸುತ್ತಿದ್ದಾರೆ.

[ಶ್ರೀ ಉಮೂನಂವರ ಅಭಿಪ್ರಾಯದಿಂದ]



ಝಂಡುರವರ **ZANDU'S**

ಕೇಸರಿ ಜೀವನ **KESARI JIVAN**

ವನ್ನು ಉಪಯೋಗಿಸಲು ಒತ್ತಾಯಿಸಿರಿ.

ಕೆಮ್ಮು, ನೆಗಡಿ, ಆಸ್ತಮ, ಧ್ವನಿ ಒಡೆಯುವಿಕೆ ಮೊದಲಾದುವುಗಳಿಗೆ ಅತ್ಯುತ್ತಮ ಔಷಧಿ.

ಕೇಸರಿ ಜೀವನವು ಕಾರುಣ್ಯವನ್ನೂ, ನವಚೈತನ್ಯವನ್ನೂ ಉಂಟು ಮಾಡಿ ದೇಹದ ಅಂಗಾಂಗಗಳನ್ನೂ ಪುಷ್ಟಿಯಾಗಿ ಮಾಡಬಲ್ಲುದು. ಮೆದುಳಿನ ನಿಶ್ಶಾಣವಿರುವ ಅಧ್ಯಾಪಕರಿಗೂ, ವಿದ್ಯಾರ್ಥಿಗಳಿಗೂ, ವಕೀಲರಿಗೂ, ಡಕ್ಟರಿಗೂ, ಹೆಚ್ಚಿಗೆ ಸರ್ವರಿಗೂ ಉತ್ತಮ ಪರಿಣಾಮಕಾರಿ ಔಷಧ.

ಕೇಸರಿ ಜೀವನ ದೊರಕುವ ಸ್ಥಳಗಳು:-

1. ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್‌ಸ್ಟ್ರುಮೆಂಟ್ಸ್, ಲಿ., ಉಡುಪಿ,
2 ವಿ. ವಿ. ಶೆಣೈ, ಕೆಮಿಸ್ಟ್ಸ್, ಕಾರ್ಕಳ, 3. ಪೈ ಕಂಪೆನಿ, ಹಂಪನಕಟ್ಟೆ, ಮಂಗಳೂರು ಅಥವಾ ಕೆಳಗಿನ ಸೋಲ್ ಏಜಂಟರಲ್ಲಿ:-

ZANDU

ದಾಮೋದರ್ ಎಂಡ್ ಕೊ.
115 ನ್ಯಾನಿಯಪ್ಪ ನಾಯಕನ್ ಸ್ಟ್ರೀಟ್,
ಪಿ. ಟಿ ಮದ್ರಾಸು.

75

ಅಂತರಂಗದ ಕಥೆ, ಕಾದಂಬರಿ, ನಾಟಕ, ಕವಿತೆ, ಚಿತ್ರ ಪ್ರಬಂಧ ಮೊದಲಾದ ನಾನಾ ಬಗೆಯ 75 ಪುಸ್ತಕಗಳನ್ನು ಒಟ್ಟಿಗೆ ರೂ 20ಕ್ಕೆ ಕೊಡಲಾಗುವುದು

ಒಲವಿನ ಅಂತರಂಗ ಅಭಿನವ ಉಡುಪಿ, ಆಧುನಿಕ ನವಭಾರತ ಬುಕ್ ಸೆಂಟರ್ ಉಡುಪಿ

ಯುದ್ಧಾಸಕ್ತ ಬ್ರಿಟನು

ಚರ್ಚಿಲ್ಲ ಸರಕಾರದ ಸದ್ಯದ ಘೋರ ನೆಯನ್ನು ಲಕ್ಷಿಸುವಾಗ ಕಮ್ಯೂನಿಸ್ಟ್ ಮೆದ ವಿಮುಖ ಪುರಸ್ಕರ್ತರೇ ಇವರಾಗ ಬಹುದೆಂದು ಊಹಿಸಲೆಡೆಯಿದೆ. ಮೂರ ನೆ ಮಹಾಯುದ್ಧದ ಭೀತಿ—ಅತಿಪ್ರಸರ ಣ—ಆರ್ಥಿಕ ಮುಗ್ಗಟ್ಟು ಈ ಮೂರು ಗಂಡಾಂತರಗಳಿಂದ ಬ್ರಿಟನು ತತ್ತರಿಸು ವ ವೇಳೆ ಚರ್ಚಿಲ್ ಸರಕಾರ ಅಧಿಕಾರ ವನ್ನು ವಹಿಸಿಕೊಂಡಿತು ದ್ವಿತೀಯ ಮ ಹಾ ಯುದ್ಧದಿಂದ ಹೀನಾಯವಾದ ಜನ ಜೀವನಮಟ್ಟವನ್ನು ಉನ್ನತ ಸ್ಥಿತಿಗೆ ತರ ಲು ಕೂಲಿಕಾರ ಪಕ್ಷವು ಸಮರ್ಥವಾಗದೆ ಹೋದರೂ ತನ್ನ ಶಕ್ತಿ ಮೀರಿ ದುಡಿದಿದೆ ಯೆಂಬುದನ್ನು ಮರೆಯಬಾಗದು. ಆದರೆ ಸದ್ಯ ಚರ್ಚಿಲ್ ಸರಕಾರದ ಚರ್ಯನೆ ತಪ್ಪಿ ದುದ್ದಾಗಿದೆ. ಮೊನ್ನೆ ಕಾಮನ್ಸ ಸಭೆಯ ಲ್ಲಿ ಆರ್ಥಿಕ ಮಂತ್ರಿಗಳಾದ ಕಾನ್ಸರ್ವೇ ಟಿವ್ ಪಕ್ಷದ ಆರ್ಥಿಕ ಘೋರಣೆಯನ್ನು ವ್ಯಕ್ತಪಡಿಸಿದರು. ಆರ್ಥಿಕ ಬಿಕ್ಕಟ್ಟನ್ನು ತಡೆಯುವದಕ್ಕಾಗಿ ರಾಷ್ಟ್ರದ ಆರೋಗ್ಯ ಕಾಪಿಯ ನೆಚ್ಚದಲ್ಲಿ ಸುಮಾರು 20 ದಶ ಲಕ್ಷ ಪೌಂಡುಗಳ ಕಡಿತನನ್ನುಂಟು ಮಾಡಿರುವದಾಗಿ ಆರ್ಥಿಕ ಮಂತ್ರಿಗಳು ಸಾರಿದರು ಹೊರದೇಶದಿಂದ ಆಮದು ಮಾಡಿಕೊಳ್ಳುವ ವಸ್ತುಗಳ ಮೇಲೆ ವಿಶೇ ಷ ಕರಭಾರವನ್ನು ಹೊರಿಸಿದ್ದು ಮಾತ್ರ ವಲ್ಲದೆ ಅದಮ್ಯ ಖಚಿಸ್ಸಾರ ಹಾಕಬೇಕೆಂದೂ ಅವರು ಹೇಳಿದ್ದಾರಂ. ಮಾತ್ರವಲ್ಲ ಕ ರಭಾರ ವಿಶೇಷವಾಗಿರುವದರಿಂದ ಆಯಾತ ವು ಕಡಿಮೆಯಾಗುವದು ಸ್ವಾಭಾವಿಕ! ಆ ರ್ಥಿಕ ಮುಗ್ಗಟ್ಟನ್ನು ಎದುರಿಸುವಲ್ಲಿ ದೂ ರ ದೃಷ್ಟಿ ಸರಿಯೇ. ಆದರೆ ಈ ಉಳಿತಾಯವು ದೇಶದ ಅಭಿವೃದ್ಧಿ ಗೆ ಸಲ್ಲುತ್ತಿಲ್ಲವೆಂಬುದು ಈಗ ಸ್ಪಷ್ಟವಾ ಗುತ್ತಲಿದೆ. ಬ್ರಿಟನ್ ಸೈನ್ಯ ಸಂಖ್ಯೆಯ ನ್ನು ವಿಕಕಾಲದಲ್ಲಿ ಅಸಂವಿತವಾಗಿ ಬೆಳೆ ಸಿ ಯುದ್ಧಕ್ಕೆ ಕಾಲು ಕೆದರುವಂತಿದೆ. ಜ ನರ ಆರೋಗ್ಯ ರಕ್ಷಣೆಗಾಗಿರುವ ಹಣವ ನ್ನು ಯುದ್ಧಾತಿಗೆ ಬಳಸಲಾಗಿದೆ- ಅಂ ದ ಮೇಲೆ ಜನಜೀವನಕ್ಕೆ ಇದರಿಂದ ಲಾ ಭವಾಗಿತೆನ್ನುವದು ಕಲ್ಪನೆಯ ಮಾತೇ ಸರಿ. ಈ ಘೋರಣೆಯಂತೆ ಮುಂಬರುವ ತಿಂಗಳಲ್ಲಿ ಸುಮಾರು 10 ಸಾವಿರ ಸರ ಕಾರೀ ನೌಕರರನ್ನು ಮನೆಗೆ ಕಳಿಸಬೇಕಾ ಗುವದೆಂದು ಅರ್ಥಸಚಿವ ಒಟ್ಟರರು ಹೇ ಳುವರು- ಇದು ಒಂದು ರೀತಿಯಲ್ಲಿ ಕ ಮ್ಯೂನಿಸ್ಟ ನಿರ್ಮಾಣ ಕಾರ್ಯವಾದೀ ತೇನೋ ಎನಿಸುವದು, ಮಾತ್ರವಲ್ಲ ಕ ನ್ಸರ್ವೇಟಿವ್ ಪಕ್ಷದ ಯುದ್ಧಾಸಕ್ತಿಯಿಂ ದಾಗಿ ಕೂಲಿಕಾರ ಪಕ್ಷ ಗಳಿಸಿಕೊಂಡ ಪ್ರಗತಿ—ಹಾಗೂ ಜನತೆಯ ಪ್ರೀತಿಯ ನ್ನು ಗಳಿಸುವದು ಶಕ್ಯವಿಲ್ಲವೆಂದೂ ಅರ್ಥ ವಾಗುವದು.

ಇಜಿಪ್ತದಲ್ಲಿ ಶಾಂತ ಪರಿಸ್ಥಿತಿ

ಈಜಿಪ್ತದ ಹೊಸ ಮುಖ್ಯ ಮಂತ್ರಿ ಅಲಿ ಮೆಹ ಪಾಶಾರವರು ಬ್ರಿಟನು ಮ ತ್ತು ಇಜಿಪ್ತಗಳೊಳಗಣ ದ್ವೇಷ ಸಾಧನೆ ಯ ಹಿಂಸಾತ್ಮಕ ಕೃತಿಗಳನ್ನ ತಡೆಗಟ್ಟುವು ದಕ್ಕೆ ಶಾಂತಿಯುತ ಮಾರ್ಗವನ್ನನುಸರಿ ಸುವ ಘೋಷಣೆಯನ್ನು ವಹಿಸಿದ್ದಾರೆ. ಉಪಿಪ್ತದಲ್ಲಿ ಶಾಂತ ಸುವ್ಯವಸ್ಥೆಯನ್ನು ಕಾಯ್ದುಕೊಳ್ಳಲು ಪಾಶಾರವರ ಮಂತ್ರಿ ಮಂಡಳವು ಒಳಗೆಲವಾಗಿ ಶ್ರಮಿಸುತ್ತಲಿದೆ. ಮಧ್ಯಸೂರ್ವ ಸಂರಕ್ಷಣೆ ಒಡಂಬಡಿಕೆ ಯಾಗಬೇಕೆಂದು ಸೂಚಿಸಿರುವ ಅಮೆ ರಿಕೆ, ಫ್ರಾನ್ಸ್, ತುರ್ಕಿ ಮತ್ತು ಬ್ರಿಟನುಗಳ ರಾಯಭಾರಿಗಳನ್ನು ಹೊಸ ಮುಖ್ಯ ಮಂತ್ರಿಗಳು ಕಂಡು ಸಮಾ ಲೋಚನೆ ನಡೆಸಿದ್ದರು. ಸಂ. ಸಂಸ್ಥೆಯ ವ್ಯಾಪೇತಿಕ ತಳಹದಿಯ ಮೇಲೆ ತನ್ನ ಯ ಬಗ್ಗಾಗಿ ಭೀಕರ ಸೈನ್ಯ ಸಂಗ್ರಹವ ನ್ನು ಬ್ರಿಟನು ಒಂದುಕಡೆ ಸಮರ್ಥಿಸಿ ದೆ. ಬ್ರಿಟನ್ನು ಯಾವ ಮೂಲಭೂತ ಪ್ರ ಶ್ನೆಯನ್ನು ಬಿಟ್ಟು ಕೊಡುವುದಿಲ್ಲವೆಂದು ಹೇಳುತ್ತಲೇ ಆ ಪ್ರಶ್ನೆಗಾಗಿಯೆ ಇಜಿ ಪ್ತವು ಕ್ರಾಂತಿಯನ್ನೆಬ್ಬಿಸಿತು. ವಿದೇಶೀ

ಲೋಕಾವಲೋಕನ

ಸಂರಕ್ಷಣೆಯ ಬಗ್ಗೆ ವ್ಯವಸ್ಥೆ ಮಾಡಿಕೊ ಳ್ಳಲು ಪ್ರತಿಯೊಂದು ರಾಷ್ಟ್ರಕ್ಕೆ ಹಕ್ಕು ಇರುವುದನ್ನು ಮಾನ್ಯಮಾಡುತ್ತಿದ್ದು ಮ ಧ್ಯಪೂರ್ವ ಸಂರಕ್ಷಣ ಸಂಸ್ಥೆಯಾದರೂ ಇದಕ್ಕನುಗುಣವಾಗಿದೆಂದು ಬ್ರಿಟನು, ಅ ಮೆರಿಕಾ, ತುರ್ಕಿ ಮತ್ತು ಫ್ರಾನ್ಸ್‌ಗಳು ಹೇಳುತ್ತಿವೆಯಾದರೂ 1936 ರಲ್ಲಾದ ಇಜಿಪ್ತ ಬ್ರಿಟನ್ ಒಪ್ಪಂದದ ಕಟ್ಟಾನಿಟ್ಟಿನ ಕುರಿತು ಅವೇನನ್ನೂ ಹೇಳುತ್ತಿಲ್ಲ. ಈ ಸಂಬಂಧವನ್ನು ಇಜಿಪ್ತವು ಸಂಪೂರ್ಣ ಕಡಿದುಕೊಂಡಿದ್ದು ಇದುವೆ ಇಜಿಪ್ತದ ಸ್ವಾತಂತ್ರ್ಯ ಸಮರದ ಮೂಲ ತಳಹದಿ ಯಾಗಿರುತ್ತದೆ ಪಾಶಾರವರು ಶಾಂತಿಯು ತ ಮಾರ್ಗವನ್ನು ಪೇಕ್ಷಿಸಿ ಬೇರೆ ಬೇರೆ ರಾ ಷ್ಟ್ರಗಳ ಪ್ರತಿನಿಧಿಗಳೊಡನೆ ಮಾತುಕತೆ ನಡೆಸಿರುವರು. ಬ್ರಿಟನು ಮುಂದಿ ಮಾಡಿ ರುವ ಸೂಚನೆಯನ್ನು ವಿಚಾರಿಸಲು ಇ ಜಿಪ್ತ ಸಿದ್ಧವಿದೆಂದೂ ಹೇಳಿರುವರು. ಆದ ರೆ ಬ್ರಿಟನಿದ ವಿದೇಶಾಂಗ ಮಂತ್ರಿಯು, ಇಜಿಪ್ತಕ್ಕೆ ಹೊಸ ಸೂಚನೆಯನ್ನು ಮಾ ಡುವದಾದರೂ ಮೂಲಭೂತ ಪ್ರಶ್ನೆಯು ನ್ನು ಅದು ಬಿಟ್ಟು ಕೊಡಲಾರನೆಂದು' ಹೇ ಳಿರುವನು. ಮಾತ್ರವಲ್ಲ ಸುಯೇಜ ಕಾಲು ವೆಯಲ್ಲಿಯ ತಮ್ಮ ಅಸ್ತಿವಾರದ ಭದ್ರತೆ ಯಂ ಬಂಧಮುಕ್ತತೆಗಾಗಿ ಇತ್ತೀಚೆಗೆ ಅ ಲ್ಲಿ ನಡೆದ ಹೋರಾಟವೇ ಅದಕ್ಕೆ ಸಾಕ್ಷಿ. ಸದ್ಯ ಮುಖ್ಯ ಮಂತ್ರಿಗಳಾದ ಅಲಿವೆ ಹ್ ಪಾಶಾರವರು ಜನತೆಯ ಒಲವನ್ನು ಹಿಡಿದು ಮಾತಾ ಡುತ್ತಿರುವರೋ— ಇಲ್ಲ ಬ್ರಿಟನ್ನಿದ ಪರ ವಾಗಿ ಮಾತನ್ನಾಡತ್ತಿರುವರೋ ಎಂಬು ದು ಅರ್ಥವಾಗುತ್ತಿಲ್ಲ- ಅತ್ತ ಕೆರೆ ಇತ್ತ ಬಾವಿ ಎನ್ನುವಂತಹ ಸ್ಥಿತಿ ಇದರಿಂದ ಪಾ ಶಾರವರಿಗೆ ಪ್ರಾಪ್ತವಾಗಿದೆ. ಅಂತೂ ಈ ನೀರೀಕ್ಷಯಲ್ಲಿ ಒಂದು ಕುತೂಹಲವಿದೆ. ಸದ್ಯ ಸುಯೇಜ ಕಾಲುವೆಯ ಸ್ಥಿತಿ ಶಾಂ ತಪೂರ್ಣವಾಗಿದ್ದರೆ ಅದಕ್ಕೆ ಈ ನೀರೀಕ್ಷೆ ಯೇ ಮೂಲ ಕಾರಣವಾಗಿದೆನ್ನಬೇಕು. ಮುಂದಿನ ನಿರ್ಧಾರವನ್ನು ಹೊಂದಿಕೊಂ ಡು ಈ ಶಾಂತಿ ಶಾಶ್ವತವಾಗಲೂ ಬಹು ದು; ಸಂಪೂರ್ಣ ನಾಶವಾಗಲೂ ಬಹುದು!

ಗ್ರಾಹ್ಯಾಮರಿಗಿನ್ನೊಂದು ಸಂದರ್ಭ

ಅಂಗ್ಲೋ ಅಮೆರಿಕಾನರಿಗೆ ಭಾರತ ಮತ್ತು ಪಾಕಿಸ್ತಾನಗಳನ್ನು ತಮ್ಮ ಹಿಂಗಿ ನಷ್ಟಟ್ಟುಕೊಂಡು ಉಭಯ ರಾಷ್ಟ್ರಗಳ ಆಂತರಿಕ ವ್ಯವಹಾರವನ್ನು ಕೆಡಿಸುವದ ಕ್ಕೆ ಭದ್ರತಾ ಮಂಡಳವೊಂದು ಹೊಸ ಗ್ರಹಿಸಿ! ಡಾ। ಗ್ರಾಹ್ಯಾಮರು ತಿರುಗಿ ಭಾರತಕ್ಕೆ ತೇಲಿ ಉಭಯ ರಾಷ್ಟ್ರಗಳೊಡನೆ ವಿಚಾರ ವಿನಿಮಯ ನಡೆಸಿ ಮತ್ತೆ ಮಾರ್ಚ ತಿಂಗಳ ಪೊದಲಿಗೆ ಭದ್ರತಾ ಮಂಡಳಕ್ಕೆ ವರದಿ ಒಪ್ಪಿಸಕ್ಕಿದ್ದೆಂದು ಬ್ರಿಟಿಷ ಪ್ರತಿನಿಧಿ ಹೇಳಿದ್ದನ್ನು ಸಂ. ರಾ. ಸಂಘವು ಅಂಗೀಕರಿಸಿದೆ. ಇದು ಗ್ರಾಹ್ಯಾ ಮಂಗೆ ಲಭ್ಯವಾಗಿರುವ ಮೂರನೇ ಸಂಧಿ! ಮತ್ತೆ ಮತ್ತೆ ಇಂತಹ ನಿಯೋಗ ಬಂದು ಪರಿಸ್ಥಿತಿಯನ್ನವಲೋಕಿಸುವದನ್ನು ಉ ಭಯ ರಾಷ್ಟ್ರಗಳೂ ಸಮ್ಮತಿಸ ತ್ತಿವೆ. ಆದರೆ ಕಳೆದ ನಾಲ್ಕು ವರ್ಷ ಗಳಿಂದ ಬಂದ ನಿಯೋಗ ಸಾಧಿಸಿದ್ದೇನೆಂ ಬದನ್ನು ಲಕ್ಷಿಸಿದರೆ ನಮ್ಮ ಆಶ್ವಾಸನಕ್ಕ ಪಾರವೇ ಇಲ್ಲವೆಂದಾಗುವದು. ಮುಂಬ್ಯ ತೊಡಕಾಗಿ ನಿಂತಿರುವ ಸೈನ್ಯೀಕರಣ ಪ್ರಶ್ನೆಯಲ್ಲಿ ಸಂ. ರಾ. ಸಂಘ ಹಾಗೂ ಡಾ।ಗ್ರಾಹ್ಯಾಮರು ಪಕ್ಷಪಾತ ನಡೆಸಿದ್ದು ರಿ ಡೇವರ್ಸರ ಯೋಜನೆಯಂತೆ ಭಾರತ ಪಾಕಿಸ್ತಾನಗಳ ಸೈನ್ಯ ವಿಸರ್ಜನೆಯು ಅ ಸಾಧ್ಯವೇ ಸರಿ. ಮಾತ್ರವಲ್ಲ ಯೋಜನೆ ಕೇವಲ ಕಲ್ಪಿತ ಕಪೋಲ! ಭಾರತಕ್ಕೆ ಈ ವಿಚಾರ ತಿಳಿಸಿದ್ದೇ ಇಲ್ಲ. ಗ್ರಾಹ್ಯಾಮರಾದರೋ ತಾವು ಹಿಂದೆ ಹೇಳಿದ್ದನ್ನು ನೆ ನಪಿನಲ್ಲಿಟ್ಟುಕೊಂಡು ವರ್ತಿಸುವವರಾಗಿ ಲ್ಲ. ಮುಂದೆ ಇವರು ಭಾರತವನ್ನು ಸಂದ ರ್ಶಿಸುವಂತೆ ಮಾಡುವ ಸೂಚನೆಯಾ ದೂ ಏನಿಲ್ಲ! ನಿಃಸೈನ್ಯೀಕರಣ ವಿಚಾರ ದಲ್ಲಿ ಡೇವರ್ಸರ ಘೋರಣೆಯನ್ನೇ ಎತ್ತಿ ಹಿಡಿದು ಮತಗಣನೆ ನಡೆಯಬೇಕೆಂದು ಕೇಳಬಹುದು. ಇದನ್ನು ಭಾರತ ಒಪ್ಪ ವಂತಿಲ್ಲ; ಪಾಕಿಸ್ತಾನ ಒಪ್ಪುವ ಸಂಭವ ಹೆಚ್ಚು ಏಕೆಂದರೆ ಡೇವರ್ಸರ ಲೆಕ್ಕಾಚಾ ರದಂತೆ ಪಾಕ್ ಸೈನ್ಯ ಹೆಚ್ಚಿ ಬಲಶಾಲಿ ಯಾಗಬಹುದು ಅಂತೂ ಮಾರ್ಚಿನ ತ ನಕ ಸಂ. ರಾ. ಸಂಘದ ಆದೇಶದಂತೆ ಗ್ರಾ ಹ್ಯಾಮರು ಭಾರತ-ಪಾಕಿಸ್ತಾನ ಸಂಚಾ ರ ಕೈಗೊಳ್ಳಬಹುದು ಆದರೆ ಇದರ ಫಲ ತಾಂಶ ಈ ಹಿಂದಿಗಿಂತಲೂ ಉಶ್ಕೃಷ್ಟ ವಾಗಿದ್ದೀತೆಂದು ಊಹಿಸುವದಸಾಧ್ಯ!

ಅಭಿನಂದನೆ



ಕಳೆದ ಮಹಾಚುನಾವಣೆಯಲ್ಲಿ ಮದ್ರಾಸು ಎಸೆಂಬ್ಲಿಗೆ ಬ್ರಹ್ಮಾವರ ಮತದಾರ ಕ್ಷೇತ್ರದಿಂದ ನಾನು ಬಹುಮತದಿಂದ ಆರಿಸಿಬಂದಿರುತ್ತೇನೆ ಸದ್ರಿ ಚುನಾವಣೆಯಲ್ಲಿ ಪ್ರತ್ಯಕ್ಷವಾಗಿಯಾಗಲೀ ಅಪ್ರತ್ಯಕ್ಷವಾಗಿಯಾಗಲೀ ನನಗೆ ಸಹಾಯ ಮಾಡಿದ ಎಲ್ಲಾ ಮತ ದಾರರಿಗೂ ನನ್ನ ಹೃತ್ಪೂರ್ವಕ ವಂದನೆಗಳನ್ನರ್ಪಿಸುತ್ತೇನೆ.

ಪ್ರಜಾಪಕ್ಷದ ಧ್ಯೇಯ ಘೋರ ತೆಗಳಲ್ಲಿ ನನಗೆ ನನ್ನಿಂದ ಸಾಧ್ಯ ವಾದ ಸೇವೆಯನ್ನು ಎಲ್ಲಾ ಜನ ತೆಗೆ ಸಲ್ಲಿಸುವ ಉತ್ಕಟೇಚ್ಛೆ ನನ ಗಿದೆ. ಆ ಬಗ್ಗೆ ಮತದಾರರು ಸಂ ಪರ್ಕವನ್ನು ಯಾವಾಗಲೂ ಇಟ್ಟು ಕೊಂಡು ಅವರ ಸಂಕಷ್ಟ ನಿವಾರಣೆಗಾಗಿ ನಿರಂತರವೂ ದುಡಿಯುತ್ತೇನೆಂಬ ಭರ ವಸೆಯನ್ನೀಯುತ್ತೇನೆ.

ನನ್ನ ಬಗ್ಗೆ ಅತ್ಯಂತ ಶ್ರಮವಹಿಸಿ ದುಡಿದ ಎಲ್ಲಾ ಸಹಾಯ ಕರನ್ನೂ, ಮತ ದಾರರನ್ನೂ ಅವರ್ತನಿ ಹೋಗಿ ಸಾಧ್ಯವಿದ್ದಷ್ಟು ಸ್ವತಹ ಮಾತಾಡಬೇಕೆಂಬ ತವ ಕವಿದೆ. ಆದರೆ ಎಲ್ಲರನ್ನೂ ನೋಡುವುದು ಅಸಾಧ್ಯ. ಆ ಬಗ್ಗೆ ಯಾರೂ ಬೇಸ ರಿಸದೆ ನನ್ನ ಧನ್ಯವಾದಗಳನ್ನು ಈ ಮೂಲಕ ಸ್ವೀಕರಿಸಬೇಕಾಗಿ ವಿನಂತಿ

ಕುಂದಾಪುರ,
ತಾ. 28-1-52

ಎಸ್. ಎಸ್. ಕೊಳ್ಳಿಬೈಲ್.
B Sc, L.L.B.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ
ಕ್ರಮ ನಂಬ್ರ 613/1951
ವಾದಿ—ನಾರಾಯಣ ಭಟ್ಟ

ಪ್ರತಿವಾದಿ—ಸುಬ್ಬಣ್ಣ ಆಗ್ರಾಣ ಶ್ರೀನಿವಾಸ ಆಗ್ರಾಣಯ ಮಂಗ ಮೈಸೂರು ಪ್ರೊವಿನ್ಸ್ ತಂಕರೆಯಲ್ಲಿ ಹೊಟೇಲ್ ಕೀಪರನಾಗಿರುತ್ತಾನೆ

ಸದ್ರಿ ಸುಬ್ಬಣ್ಣ ಆಗ್ರಾಣರಿಗೆ ತಿಳಿಸುವದೇನಂದ್ರೆ—

ಸದ್ರಿ ವಾದಿಗೆ ಪ್ರತಿವಾದಿಯು ತಾರೀಕು 28-5-1951 ರಲ್ಲಾ ರೂ. 742-0-0 ಕ್ಕೆ ರಿಜಿಸ್ಟ್ರಿ ನಿಶಿ ಬರಸಿಕೊಟ್ಟ ಡಿಮಾಂಡ್‌ನೋಟಿನ ಹಣ ಬಡ್ಡಿ ಕೂಡಾ ರೂ. 771-14-6 ನ್ನು ಬರಮಾಡಿಕೊಳ್ಳುವರೆ ಸದ್ರಿ ವಾದಿಯು ಸದ್ರಿ ಪ್ರತಿವಾದಿ ಮೇಲೆ ಮೇಲ್ಕಂಡ ಕೋರ್ಟಿನಲ್ಲಿ ದಾವಾ ದಾಖಲು ಮಾಡಿದ್ದಾನೆ ಸದ್ರಿ ಧಾವೆ ತಾ. 19-2-52 ಕ್ಕೆ ಕಸ್ಟಗೆ ಯಿಡಲಾಗಿರುತ್ತದೆ. ಆ ಕಾರಣ ಆ ಕ್ಷೇಪಣೆ ಯಿದ್ದರೆ ಸದ್ರಿ ದಿವಸ ಪೂರ್ವಾಹ್ನ ಗಂಟೆ 11ಕ್ಕೆ ಖಾ ಜರಾಗಿ ಜಾಹೀರು ಮಾಡಕ್ಕಿದ್ದು ತಪ್ಪಿದರೆ ಸದ್ರಿ ಪ್ರತಿವಾದಿಯನ್ನು ಎಕ್ಪಪಾರ್ಟಿ ಮಾಡಿ ಸದ್ರಿ ದಾವೆ ತೀರ್ಮಾನಿಸೋಣವಾದೀತೆಂತ ಈ ಮೂಲಕ ತಿಳಿಸೋಣವಾಗಿರುತ್ತದೆ.

M. M. Hebbar,
Advocate for Plaintiff.
ಮೊಕ್ತಾಂ ಕುಂದಾಪುರ ತಾ. 29-1-1952

46 YEARS OF UNIFORM SERVICE TO ONE AND ALL

Whether you be a small account-holder or a big one,
We serve you all alike
and
it's our earnest wish that you should feel quite at ease when you bank with us.

BETTER BANK WITH

THE CANARA BANKING CORPORATION LIMITED.

Estd.: 1906 H. O.: UDIPI (S. I.)

ನವಯುಗ

ಚಂದಾ ವಿವರ
ವರ್ಷಕ್ಕೆ ರೂ. 5—12—0
6 ತಿಂಗಳಿಗೆ ರೂ. 3—0—0

ಗುರುವಾರ ಉಡುಪಿ, ೭-೨-'೫೨

ಮುಂದೇನು?

ಮದ್ರಾಸು ನ್ಯಾಯ ವಿಧಾಯಕ ಸಭೆಯ 375 ಸೀಟುಗಳಲ್ಲಿ 370 ಚುನಾವಣಾ ಫಲಿತಾಂಶ ಈಗಾಗಲೇ ತಿಳಿದು ಬಂದಿರುವುದು. ಈ ಫಲಿತಾಂಶದ ಮೇರೆಗೆ ಇತರ ಎಲ್ಲಾ ಪಕ್ಷಗಳಿಗಿಂತ ಕಾಂಗ್ರೆಸ್ಸೇ ಹೆಚ್ಚಿನ ಸ್ಥಾನಗಳನ್ನು ಗಳಿಸಿಕೊಂಡಿದೆ. ಆದರೆ ಒಂಟಿಯಾಗಿ ಸರಕಾರ ರಚನೆ ಮಾಡುವಷ್ಟರ ಬಹುಮತ ಮಾತ್ರ ಗಳಿಸಿಕೊಂಡಿಲ್ಲ ಇನ್ನೂ ಸುಮಾರು 36 ಸೀಟುಗಳು ಕಾಂಗ್ರೆಸ್ಸಿಗೆ ದೊರೆಯುತ್ತಿದ್ದರೆ ಸರಕಾರ ನಿರ್ಮಾಣದ ಅರ್ಹತೆಯನ್ನು ಕಾಂಗ್ರೆಸ್ಸು ಪಡೆಯುತ್ತಿತ್ತು. ಆದರೆ ಅಂತಹ ಅಲ್ಪ ಬಹುಮತದಿಂದ ಹೊಡಿದ ಸರಕಾರ ಎಷ್ಟರ ಮಟ್ಟಿಗೆ ಬಲವಾದ ಮತ್ತು ಸ್ಥಿರವಾದ ಸರಕಾರವಾಗುತ್ತಿತ್ತು, ಅಂತಹ ಅಸ್ಥಿರತೆಯಿಂದ ಯಾವ ಜನೋಪಕಾರೀ ಉದಾತ್ತ ಕಾರ್ಯಕ್ರಮಗಳನ್ನು ಆ ಸರಕಾರ ಕೈಗೆಳ್ಳಲು ಸಾಧ್ಯವಾಗುತ್ತಿತ್ತು ಎಂಬುದಿದ್ದಿ ಅನಗತ್ಯ. ಪ್ರಸ್ತುತ ಮಾತ್ರ ಕಾಂಗ್ರೆಸ್ಸಿಗೆ ಅಲ್ಪ ಬಹುಮತಕ್ಕೂ ಕೊರತೆಯಾಗಿರುವ ಕಾರಣ, ಇತರ ಪಕ್ಷಗಳು ವೈಯಕ್ತಿಕವಾಗಿ ಕಾಂಗ್ರೆಸ್ಸಿಗಿಂತಲೂ ಅತೀವ ಕಡಿಮೆ ಸ್ಥಾನಗಳನ್ನು ಪಡೆದಿರುವ ಕಾರಣ, ಫಿಜ್ಜೆಳ ಬಹುಮತದೊಂದಿಗೆ ಯಾವ ಒಂದೊಂದು ಪಕ್ಷಕ್ಕೂ ಸರಕಾರದ ಹೊಣೆಗಾರಿಕೆಯನ್ನು ಹೊರದಂತಾಗಿದೆ.

ಇದಕ್ಕೆ ಕಾಂಗ್ರೆಸ್ ವಿರೋಧಿಗಳು ಕಾಂಗ್ರೆಸ್ ಸರಕಾರ ಆಳೆದ ಏದು ವರುಷಗಳಲ್ಲಿ ಮಾಡಿರುತ್ತಿದ್ದ ಶತಾಪರಾಧಗಳೇ ಕಾರಣವೆಂದೂ ಹೇಳುತ್ತಿದ್ದಾರೆ. ಕಾಂಗ್ರೆಸ್ ಸರಕಾರ ಅಂತಹ ದೋಷದೋಷವನ್ನು ಮಾಡಿಲ್ಲ; ಅಥವಾ ಜನರಿಗೆ ಅಹಿತವನ್ನು ಬಗೆದಿರುವುದಿಲ್ಲ ಕಾಂಗ್ರೆಸ್ ಮಂತ್ರಿ ಮಂಡಲ ಅಥವಾ ಕಾಂಗ್ರೆಸ್ ಪಕ್ಷ ಮಾಡಿರಬಹುದಾದ ಅಪರಾಧವೆಂದರೆ ಜನಸಾಮಾನ್ಯರಿಗೆ ಹಿತವನ್ನುಂಟು ಮಾಡಬೇಕೆಂದು ಮಧ್ಯವಾನ ನಿರೋಧ ಕಾನೂನನ್ನು ತಂದು, ಆದರಿಂದುಂಟಾದ ನಷ್ಟದ ಬಡತನಗಳಿಗೆ ಮಾರಾಟ ತೆರಿಗೆಯೇ ಮೊದಲಾದ ತೆರಿಗೆಗಳನ್ನು ಹೊರಿಸಿ, ಇತ್ತ ಬಡ ಕುಡುಕನನ್ನೂ ಬೈಸಿಕ್ಕಿ, ಅತ್ತ ತೆರಿಗೆ ತೆರುವ ಧನಿಕನನ್ನೂ ಅಸಮಾಧಾನಗೊಳ್ಳಿಸಿಕೊಂಡಿದುದು. ಇದೇ ರೀತಿ ಮದ್ರಾಸಿನಲ್ಲಿ ಜಾರಿಗೆ ತಂದ ಅನೇಕ ಕಾನೂನುಗಳು ವಾಸ್ತವಿಕವಾಗಿ ಜನರ ಅಭ್ಯುದಯಕ್ಕಾಗಿ ಮಾಡಿದವುಗಳಾದರೂ, ಕಾರ್ಯರೂಪಗಳಲ್ಲಿ ಅವುಗಳು ಹಲವರಿಗೆ ಪ್ರತಿಕೂಲವಾಗಿಯೇ ಪರಿಣಮಿಸಿದುದರಲ್ಲಿ ಆಶ್ಚರ್ಯವಿಲ್ಲ. ಮಂತ್ರಿಮಂಡಲ ಇಂತಹ ಸುಧಾರಣೆಯ ಕಾರ್ಯಕ್ರಮವನ್ನು ಕೈಗೊಳ್ಳದಿದ್ದರೆ ಜಗಲೂ ಅದು ಬೇಕೆನ್ನುವ ಹಂಬಲದಲ್ಲಿರುವವಂ ಟೀಕೆಗೆ ಒಳಗಾಗದೇ ಕಿತ್ತು. ಅಂತೂ, ಒಂದೇ ಮಾತಿನಲ್ಲಿ ಹೇಳುವುದಾದರೆ, ಕಾಂಗ್ರೆಸ್ಸಿನ ಅನಿರೀಕ್ಷಿತ ಸೋಲಿಗೆ ಕಾಂಗ್ರೆಸ್ ಸರಕಾರ ಮಾಡಿದ ಅಪರಾಧ ಕಾರಣವಲ್ಲ; ಬಹುಸಂಖ್ಯಾತ್ಮಕ ಕಾಂಗ್ರೆಸ್ ವಿರೋಧಿ ಪಕ್ಷಗಳು ನಾನಾ ರೀತಿಯಲ್ಲಿ ಒನ್ನೆ ಬಟ್ಟೆ, ಕಳ್ಳ ಸರಾಯಿ, ಚಿಕ್ಕ ಪುಟ್ಟ ಅಧಿಕಾರಿಗಳ ನಡತೆ, ನಿಯಂತ್ರಣದ ಕುರಿತು ಕಾಂಗ್ರೆಸ್ಸಿನ ಮೇಲೆ ಆಪಪ್ರಚಾರ ಮಾಡಿದ.ದಲ್ಲದೆ, ಸುಳ್ಳು ಆಶ್ವಾಸನೆಗಳನ್ನು ಕೊಟ್ಟು ದೇಶಕಾರಣವೆನ್ನ ಬೇಕು. ಇಂತಹ ಸುಳ್ಳು ಅಪಪ್ರಚಾರವನ್ನು ಅಥವಾ ಪೊಳ್ಳು ಆಶ್ವಾಸನೆಗಳನ್ನು ಅಲ್ಲಗಳೆಯಲು ಕಾಂಗ್ರೆಸ್ಸು ಪಕ್ಷ ಸಮರ್ಥ ಕಾರ್ಯಕ್ರಮವನ್ನು ಹೊಡದಿದ್ದುದು ಮಾಡಾಪರಾಧ ಇದನ್ನು ತಿಂದೇ ಕಾಂಗ್ರೆಸ್ ಅಧ್ಯಕ್ಷ ಜವಾಹರಲಾಲ್ ನೆಹರುಗಳು "ಕಾಂಗ್ರೆಸ್ ಕಾರ್ಯಕ್ರಮವನ್ನು ಭರದಿಂದ ಸಾಗಿಸಿರಿ; ಜನತೆಯೊಂದಿಗೆ ಸಂಪರ್ಕ ಬೆಳೆಸಿರಿ" ಎಂಬ ಸಲಹೆಯನ್ನು ಥಿಲ್ಲಿಗೆ ತೆರಳಿದ ವರಾಜಕ ಮಂತ್ರಿಗಳಿಗೆ ಕೊಡಲು ಕಾರಣವಾಯಿತು.

ಈಗಿನ ಅನಿಶ್ಚಿತ ವಾತಾವರಣಕ್ಕೆ ಕಾಂಗ್ರೆಸ್ ವಿರೋಧಿ ಪಕ್ಷಗಳು ಹೇಗೆ ಹೊಣೆಯೋ, ಹಾಗೆಯೇ ಅವುಗಳಲ್ಲಿ ವಿಶ್ವಾಸವಿಟ್ಟು ಮತಕೊಟ್ಟ ಜನತೆಯೂ ಜವಾಬ್ದಾರರು ಒಲವಾದ ಮತ್ತು ಸ್ಥಿರವಾದ ಉತ್ತಮ ಸರಕಾರವಿಲ್ಲದಿರುವಲ್ಲಿ ಪ್ರಾಂತ್ಯದ ಏಳಿಗೆ, ಜನರ ಅಭಿವೃದ್ಧಿ ಯಾದರೂ ಹೇಗಾಗಬೇಕು? ಪಕ್ಷ ಪ್ರತಿಪಕ್ಷಗಳೊಳಗೆ ತಾತ್ಕಾಲಿಕ ಒಪ್ಪಂದದೊಡನೆ ಯಾವುದಾದರೊಂದು ಸರಕಾರ ನಿರ್ಮಾಣವಾಗಬಹುದೊ, ಅಥವಾ ಯಾದವ ಕುಲದಂತೆ ಉಂಬಳಿ ಬೀಳಬಹುದೊ ಎಂದು ಹೇಳುವಂತಿಲ್ಲ. ಆದುರಿಂದ ಕೇಂದ್ರದ ಕಾಂಗ್ರೆಸಿನ ಕಾರ್ಯಕಾರೀ ಸಮಿತಿಯ ಬಹುಮತವಿಲ್ಲದ ಪ್ರಾಂತ್ಯಗಳಲ್ಲಿ ಕಾಂಗ್ರೆಸ್ ಪ್ರಸ್ತುತ ಸಂಕಾರ ರಚನೆಗೆ ಅವಸರ ಮಾಡಕೂಡದು' ಎಂಬ ನಿರ್ಣಯ ಸ್ತುತ್ಯಾರ್ಹವಾದುದು. ವಿರೋಧಿ ಪಕ್ಷಗಳೆಲ್ಲಾ ಪರಸ್ಪರ ಒಪ್ಪಂದದ ಪ್ರಯತ್ನ ಮಾಡಿ ಕೈತಪ್ಪಿಹೋದರೆ; ಆಗ ಇದ್ದುದರಲ್ಲಿ ಹೆಚ್ಚಿನ ಸ್ಥಾನಗಳನ್ನು ಪಡಕೊಂಡಿರುವ ಕಾಂಗ್ರೆಸ್ ಇತರ ಯಾವುದಾದರೂ ಪಕ್ಷದೊಂದಿಗೆ ಸಖ್ಯಕೆಳಸಿ ಸರಕಾರ ಹೂಡುವುದರಲ್ಲಿ ಗಂಭೀರತೆ ಇದೆ, ನ್ಯಾಯವಿದೆ.

ಅದೇ ರೀತಿ ಹೊಸ ಮಂತ್ರಿ ಮಂಡಲದಲ್ಲಿ ಚು.ನಾವಣೆಯಲ್ಲಿ ಸೋತ ಹಳೆಯ ಮಂತ್ರಿಗಳನ್ನು ಹಿಂಬಾಗಿಲಿನಿಂದ ತಂದು ಅವನದಲ್ಲಿ ವಿಧಿವ.ತ ಹಂಚಿಕೆಯೂ ಉಚಿತವಲ್ಲ. ಇದನ್ನು ಕಾರ್ಯಕಾರೀ ಸಮಿತಿ ಸಮ್ಮತಿಸುವುದಿಲ್ಲವೆಂಬ ಸೂಚನೆ ಇದೆ. ಇದೊಂದು ಸಂತೋಷದಾಯಕವಾದ ಸಂಗತಿ. ಮಂತ್ರಿಗಳಲ್ಲಿ ಅನೇಕರು ಸೋಲಲು ಅವರ ಅಡಳಿತೆಯಲ್ಲವೆ ಇನ್ನೂ ಅನೇಕ ಬಲವಾದ ಕಾರಣಗಳಿರಬಹುದು. ಆದರೆ ಅವರು ತಿಂತ ಮತದಾನ ಕ್ಷೇತ್ರದಲ್ಲಿ ಅವರ ಮೇಲೆ ಅವಿಶ್ವಾಸ ಪ್ರದರ್ಶನವಾದ ಮೇಲೆ, ಪುನಃ ಚುನಾವಣೆಯಲ್ಲಿ ಗೆಲ್ಲುವ ತನಕ ಅವರು ಮಂತ್ರಿ ಮಂಡಲದಲ್ಲಿ ಇರುವುದು ಅನುಚಿತ ಹಾಗೂ ಅನಗತ್ಯವೆನ್ನ ಬೇಕು.

ಅಭಿನಂದನೆ

ಮದ್ರಾಸು ಲೆಜಿಸ್ಲೇಟಿವ್ ಎಸೆಂಬ್ಲಿಯ 375 ಸ್ಥಾನಗಳಲ್ಲಿ 369ರ ಚುನಾವಣಾ ಫಲಿತಾಂಶವು ಈಗಾಗಲೇ ಸಾರ್ವಜನ್ನಿಸಿದೆ. ದಕ್ಷಿಣ ಕನ್ನಡವು ಕಾಂಗ್ರೆಸ್ ಉಮೇದ್ವಾರರು ಸ್ಪರ್ಧಿಸಿ ಗೆದ್ದ ಸಂಖ್ಯಾ ಪ್ರಮಾಣದಲ್ಲಿ ಪ್ರಥಮ ಸ್ಥಾನವನ್ನು ಗಳಿಸಿದೆ. ತಿರುನೆಲ್ವೇಲಿಯು 17 ಸ್ಥಾನಗಳಲ್ಲಿ 13 ನ್ನು ಕಾಂಗ್ರೆಸ್ ಹುರಿಯಾಳುಗಳು ಜಯಿಸಿ ದುದರಿಂದ ದ್ವಿತೀಯ ಸ್ಥಾನವನ್ನು ಪಡೆದಿದೆ. ಮದ್ರಾಸು ಸ್ಟೇಟ್ ಎಸೆಂಬ್ಲಿಗೂ ಡಿಲ್ಲಿಯ ಪಾರ್ಲಿಮೆಂಟಿಗೂ ಚುನಾವಣೆಯಲ್ಲಿ ಗೆದ್ದ ಕಾಂಗ್ರೆಸ್ ಉಮೇದ್ವಾರರು ತಮಗೆ ಬೆಂಬಲವಿತ್ತ ಸಮಸ್ತ ವೋಟುದಾರರಿಗೂ ಅತ್ಯಂತ ಕೃತಜ್ಞರಾಗಿರುತ್ತಾರೆ. ದುರಾದೃಷ್ಟವಶಾತ್ ನಾವು ಪ್ರಾರ್ಥಿಸಿದ ಇತರ ಹಲವು ಕಡೆಗಳಲ್ಲಿ ಪ್ರತಿಕೂಲ ಫಲಿತಾಂಶವನ್ನು ಕಾಣುತ್ತಿರುವಾಗ ದಕ್ಷಿಣ ಕನ್ನಡದಲ್ಲಿ ಕಾಂಗ್ರೆಸ್ ಪಕ್ಷವು ಪಡೆದ ಇಷ್ಟೊಂದು ಯಶವು ಪ್ರಾಂತ್ಯದ ಬೇರೆ ಬೇರೆ ಭಾಗಗಳ ಕಾಂಗ್ರೆಸ್ ಧುರೀಣರ ಶ್ಲಾಘನೆಗೆ ಅರ್ಹವಾಗಿದೆ. ಈ ಸಂದರ್ಭದಲ್ಲಿ ಕಾರ್ಕಳ ಕ್ಷೇತ್ರದಲ್ಲಿ ನನಗಾಗಿ ಪ್ರೀತಿಪೂರ್ವಕ ಕೆಲಸ ಮಾಡಿದ ಹಾಗೂ ವೋಟುಗಳನ್ನಿತ್ತು ಪ್ರೋತ್ಸಾಹಿಸಿದ ಸರ್ವರಿಗೂ ನಾನು ನಿಮ್ಮ ಅಮೂಲ್ಯ ಪತ್ರಿಕೆಯ ಮೂಲಕ ನನ್ನ ಅಭಿನಂದನೆಗಳನ್ನು ಅರ್ಪಿಸುತ್ತೇನೆ.

ಎ ಬಿ. ಶೆಟ್ಟಿ.

ಮದ್ರಾಸ್, 4-2-52

ಉಡುಪಿ

ನಗರ ಸಭೆಯು—ಈಚೆಗೆ ನಗರ ಸಭಾಧ್ಯಕ್ಷ ಶ್ರೀ ಯು. ಎಸ್ ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿದಾಗ ಶ್ರೀಮತಿ ಲೀಲಾಬಾಯಿ ಕಾಮತರು ಸದಸ್ಯತನವನ್ನು ಊರ್ಜಿತಗೊಳಿಸಲಾಯಿತು ಇದೇ ತಾ. 10ರಲ್ಲಿ ಉಡುಪಿ ಮುನಿಸಿಪಲ್ ಬಂಗ್ಲೆಯ ವಠಾರದಲ್ಲಿ ಒಂದು ದಿನದ ಜಾನುವಾರು ಪ್ರದರ್ಶನ ನಡೆಸಲು ಕಾನ್ಸಿಲಿನ ಒಪ್ಪಿಗೆ ಕೊಡಲಾಯಿತು.

ಬಾಪೂಜಿ ಪುಣ್ಯದಿನಾಚರಣೆಯು: ಉಡುಪಿ ಕಾಂಗ್ರೆಸ್ ಕಛೇರಿಯಲ್ಲಿ ಸಾಮೂಹಿಕ ಚರ್ಕಾಸೂಲಿಕೆ, ಪ್ರಾರ್ಥನೆ ಭಜನೆ, ಕಾರ್ಯಕ್ರಮಗಳಿಂದ ಜರಗಿತು.

ಹಿಂದೀ ಪ್ರೇಮಿ ಮಂಡಳಿ—ಜನ ದಾದರೊಂದು ಪಕ್ಷದೊಂದಿಗೆ ಸಖ್ಯಕೆಳಸಿ ಸರಕಾರ ಹೂಡುವುದರಲ್ಲಿ ಗಂಭೀರತೆ ಇದೆ, ನ್ಯಾಯವಿದೆ.

ಅದೇ ರೀತಿ ಹೊಸ ಮಂತ್ರಿ ಮಂಡಲದಲ್ಲಿ ಚು.ನಾವಣೆಯಲ್ಲಿ ಸೋತ ಹಳೆಯ ಮಂತ್ರಿಗಳನ್ನು ಹಿಂಬಾಗಿಲಿನಿಂದ ತಂದು ಅವನದಲ್ಲಿ ವಿಧಿವ.ತ ಹಂಚಿಕೆಯೂ ಉಚಿತವಲ್ಲ. ಇದನ್ನು ಕಾರ್ಯಕಾರೀ ಸಮಿತಿ ಸಮ್ಮತಿಸುವುದಿಲ್ಲವೆಂಬ ಸೂಚನೆ ಇದೆ. ಇದೊಂದು ಸಂತೋಷದಾಯಕವಾದ ಸಂಗತಿ. ಮಂತ್ರಿಗಳಲ್ಲಿ ಅನೇಕರು ಸೋಲಲು ಅವರ ಅಡಳಿತೆಯಲ್ಲವೆ ಇನ್ನೂ ಅನೇಕ ಬಲವಾದ ಕಾರಣಗಳಿರಬಹುದು. ಆದರೆ ಅವರು ತಿಂತ ಮತದಾನ ಕ್ಷೇತ್ರದಲ್ಲಿ ಅವರ ಮೇಲೆ ಅವಿಶ್ವಾಸ ಪ್ರದರ್ಶನವಾದ ಮೇಲೆ, ಪುನಃ ಚುನಾವಣೆಯಲ್ಲಿ ಗೆಲ್ಲುವ ತನಕ ಅವರು ಮಂತ್ರಿ ಮಂಡಲದಲ್ಲಿ ಇರುವುದು ಅನುಚಿತ ಹಾಗೂ ಅನಗತ್ಯವೆನ್ನ ಬೇಕು.

ಅಭಿನಂದನೆ

ಮದ್ರಾಸು ಲೆಜಿಸ್ಲೇಟಿವ್ ಎಸೆಂಬ್ಲಿಯ 375 ಸ್ಥಾನಗಳಲ್ಲಿ 369ರ ಚುನಾವಣಾ ಫಲಿತಾಂಶವು ಈಗಾಗಲೇ ಸಾರ್ವಜನ್ನಿಸಿದೆ. ದಕ್ಷಿಣ ಕನ್ನಡವು ಕಾಂಗ್ರೆಸ್ ಉಮೇದ್ವಾರರು ಸ್ಪರ್ಧಿಸಿ ಗೆದ್ದ ಸಂಖ್ಯಾ ಪ್ರಮಾಣದಲ್ಲಿ ಪ್ರಥಮ ಸ್ಥಾನವನ್ನು ಗಳಿಸಿದೆ. ತಿರುನೆಲ್ವೇಲಿಯು 17 ಸ್ಥಾನಗಳಲ್ಲಿ 13 ನ್ನು ಕಾಂಗ್ರೆಸ್ ಹುರಿಯಾಳುಗಳು ಜಯಿಸಿ ದುದರಿಂದ ದ್ವಿತೀಯ ಸ್ಥಾನವನ್ನು ಪಡೆದಿದೆ. ಮದ್ರಾಸು ಸ್ಟೇಟ್ ಎಸೆಂಬ್ಲಿಗೂ ಡಿಲ್ಲಿಯ ಪಾರ್ಲಿಮೆಂಟಿಗೂ ಚುನಾವಣೆಯಲ್ಲಿ ಗೆದ್ದ ಕಾಂಗ್ರೆಸ್ ಉಮೇದ್ವಾರರು ತಮಗೆ ಬೆಂಬಲವಿತ್ತ ಸಮಸ್ತ ವೋಟುದಾರರಿಗೂ ಅತ್ಯಂತ ಕೃತಜ್ಞರಾಗಿರುತ್ತಾರೆ. ದುರಾದೃಷ್ಟವಶಾತ್ ನಾವು ಪ್ರಾರ್ಥಿಸಿದ ಇತರ ಹಲವು ಕಡೆಗಳಲ್ಲಿ ಪ್ರತಿಕೂಲ ಫಲಿತಾಂಶವನ್ನು ಕಾಣುತ್ತಿರುವಾಗ ದಕ್ಷಿಣ ಕನ್ನಡದಲ್ಲಿ ಕಾಂಗ್ರೆಸ್ ಪಕ್ಷವು ಪಡೆದ ಇಷ್ಟೊಂದು ಯಶವು ಪ್ರಾಂತ್ಯದ ಬೇರೆ ಬೇರೆ ಭಾಗಗಳ ಕಾಂಗ್ರೆಸ್ ಧುರೀಣರ ಶ್ಲಾಘನೆಗೆ ಅರ್ಹವಾಗಿದೆ. ಈ ಸಂದರ್ಭದಲ್ಲಿ ಕಾರ್ಕಳ ಕ್ಷೇತ್ರದಲ್ಲಿ ನನಗಾಗಿ ಪ್ರೀತಿಪೂರ್ವಕ ಕೆಲಸ ಮಾಡಿದ ಹಾಗೂ ವೋಟುಗಳನ್ನಿತ್ತು ಪ್ರೋತ್ಸಾಹಿಸಿದ ಸರ್ವರಿಗೂ ನಾನು ನಿಮ್ಮ ಅಮೂಲ್ಯ ಪತ್ರಿಕೆಯ ಮೂಲಕ ನನ್ನ ಅಭಿನಂದನೆಗಳನ್ನು ಅರ್ಪಿಸುತ್ತೇನೆ.

ಎ ಬಿ. ಶೆಟ್ಟಿ.

ಮದ್ರಾಸ್, 4-2-52

ದರಂ 27ರಂದು 'ಮುಕುಂದ ನಿವಾಸ'ದಲ್ಲಿ ನೇಲ್ಲಂಡ ಮಂಡಳಿಯೊಂದರ ಉದ್ಘಾಟನಾ ಕಾರ್ಯವು ಶ್ರೀಮತಿ ಸುನಿತ್ರಾ ಆರ್. ಶೆಯವರಿಂದ ಜರಗಿತು. ಡಾ॥ ಮೂಧವ ಪೈಗಳು ಅಧ್ಯಕ್ಷ ಸ್ಥಾನವನ್ನು ವಹಿಸಿದ್ದರು. ಶ್ರೀಮತಿ ರೋಹಿಣಿ ಬ್ಯಾಶೆಟ್ಟಿಯವರು ಅಧಿತಿಗಳನ್ನು ಸ್ವಾಗತಿಸಿ ಹಿಂದೀ ಪ್ರೇಮಿ ಮಂಡಳಿಯ ಉದ್ದೇಶ ಧ್ಯೇಯಗಳನ್ನು ವಿವರಿಸಿದರು ಉದ್ಘಾಟನೆಯಾದಬಳಿಕ ಎಸ್.ಜಿ.ಎಸ್. ಕಾಲೇಜಿನ ಹಿಂದಿ ಪ್ರೊಫೆಸರರಾದ ಶ್ರೀಯುತ ಪಡಿಕಲ್ ಮತ್ತು ಅದೇ ಕಾಲೇಜಿನ ಸ್ಪಿನಿಪಾಲರಾದ ಶ್ರೀಯುತ ಎಜ್. ಸುಂದರ ರಾಯರು ಈ ಕಾರ್ಯವನ್ನು ಶ್ಲಾಘಿಸಿ ಭಾಷಣ ಮಾಡಿದರು. ಅಧ್ಯಕ್ಷರು ಈ ಮಂಡಳಿಯನ್ನು ಹುರಿಸುತ್ತ ಇದರ ಕಾರ್ಯಕಲಾಪಗಳಿಂದ ಊರ ಜನರಿಗೆ ಹಿಂದಿ ಕಲಿಕೆ ತನ್ಮೂಲಕ ಹಿಂದೀ ಪ್ರಚಾರವು ಸಾಂಗವಾಗಿ ನೆರವೇರುವಂತಾಗಲಿ ಎಂದರು. ಅನಂತರ ಹಿಂದಿ ಭಾಷೆಯಲ್ಲಿ 'ಅವಕುಲ್' ಎಂಬ ನಾಟಕವೂ ಇನ್ನಿತರ ವಿನೋದಾವಕಗಳೂ ಆಯ ಸಂದರ್ಭೋಚಿತವಾಗಿ ಆಡಿತೋರಿಸಲ್ಪಟ್ಟವು ಶ್ರೀಮತಿ ಪದ್ಮಾಬಾಯಿಯವರ ಧನ್ಯವಾದದೊಂದಿಗೆ ಸಭೆಯು ಮುಕ್ತಾಯವಾಯಿತು.

ಕಸ್ತೂರಿ ಬಾ ಮೆಡಿಕಲ್ ಕಾಲೇಜು ವಿಷಯೋಗ ಮಂಡಳಿಯ ಅಗಮನ

ಕಸ್ತೂರಿ ಬಾ ಮೆಡಿಕಲ್ ಕಾಲೇಜಿನ ಅಂಗೀಕಾರದ ಪ್ರಶ್ನೆಯ ತನಕೆಗಾಗಿ ಕರ್ನಾಟಕ ವಿಶ್ವವಿದ್ಯಾಲಯದ ನಿಯೋಗಮಂಡಳಿಯೊಂದು ಇದೇ ತಾ. 2ರಂದು ಉಡುಪಿಗೆ ಆಗಮಿಸಿತು. ಎಕೆಡಮಿ ಆಫ್ ಜನರಲ್ ಎಜ್ಯುಕೇಶನ್ ನವರ ಪತಿಯಲ್ಲಿ ನಡೆದ ಸರ್ಕಾರ ಕೂಟದಲ್ಲಿ ಡಾ॥ ಟಿ. ಮೂಧವ ಪೈಗಳು ಸ್ವಾಗತ ಭಾಷಣ ಮಾಡಿದ ಬಳಿಕ ಶ್ರೀ ಆರೂರು ಲಕ್ಷ್ಮೀನಾರಾಯಣ ರಾಯರಿಂದ ನಿಯೋಗ ಮಂಡಲಕ್ಕೆಂದು ನಿವೇದನಾ ಪತ್ರ ಅರ್ಪಿಸಲ್ಪಟ್ಟಿತು.

ನಿವೇದನಾ ಪತ್ರದಲ್ಲಿ ವೈದ್ಯಕೀಯ ಹಾಗೂ ವೈದ್ಯಕೀಯ ಶಿಕ್ಷಣ ಕಾಲೇಜುಗಳ ಅಭಾವವಿರುವುದು ಕೊರತೆಯನ್ನು ವಿವರಿಸಿ, ಎಕೆಡಮಿಯಂತಹ ಸಾರ್ವಜನಿಕ ಸಂಸ್ಥೆಗಳು ಈ ಬಿಕ್ಕಟ್ಟನ್ನು ಪರಿಹರಿಸುವಲ್ಲಿ ಪ್ರಯತ್ನಿಸುವುದು ಅಗತ್ಯವೆಂದು ನಮೂದಿಸಲಾಗಿತ್ತು. ಅಲ್ಲದೆ ಹೊಸತಾಗಿ ಒನ್ನೆತ್ತಿದ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಪ್ರತಿಷ್ಠಾಮಿ ಹಳೆಯ ಸಂಪ್ರದಾಯಗಳ ಅತಂಕವಿಲ್ಲದಿರುವುದರಿಂದ, ಎಲ್ಲರ ಮಿಯವರು ಮುಂದಿಟ್ಟ ಪ್ರಾಯೋಗಿಕ ಯೋಜನೆಗಳನ್ನು ಕೇವಲ ಯೋಗ್ಯತೆ ಮತ್ತು ಅರ್ಹತೆಯ ದೃಷ್ಟಿಯಲ್ಲೇ ಪರ್ಯಾಲೋಚಿಸಲು ಸಾಧ್ಯವಿದೆ ಎಂದು ಅರಿಸಿ, ದಕ್ಷಿಣಕನ್ನಡಕ್ಕೊಂದು ಮೆಡಿಕಲ್ ಕಾಲೇಜು ಬಹು ಬೇಗ ಬರುವಂತಾಗಲಿ, ಅಖಿಲ ಕರ್ನಾಟಕದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಉದ್ಘೋಷಣೆಯಂದ ವೈದ್ಯೋಗಿಕ ವಿದ್ಯೆಯು ಪ್ರಸರಿಸುವಂತಾಗಲಿ ಎಂದು ಹಾರೈಕೆ ಅದಷ್ಟಕ್ಕೆ ಅಡಕವಾಗಿತ್ತು.

ಮಂಡಳಿಯ ಪರವಾಗಿ ಶ್ರೀಯುತ ಒಲವಂತ ರಾವ್ ಪೈತಾಂಬರು ತಾವು ಮತ್ತು ಕನ್ನ ಇತರ ಸದ್ಗೃಹಸ್ಥರು ಈ ಪ್ರಶ್ನೆಗೆ ತಮ್ಮ ಸಾಧ್ಯ ಸಹಾನುಭೂತಿಯನ್ನು ತೋರಿಸುವುದಾಗಿ ಆಶ್ವಾಸನೆ ಇತ್ತರು. ಕರ್ನಾಟಕ ಪ್ರಾಂತ್ಯ ರಚನೆಯ ಅಗತ್ಯತೆ ಅದರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಹೆಮ್ಮೆಯ ಸ್ಥಾನಮಾನ, ವೈದ್ಯೋಗಿಕ ಕಾಲೇಜನ್ನು ಹುಬ್ಬಳ್ಳಿಯಲ್ಲಿ ತೆರೆಯಲು ನಡೆದ ಪ್ರಯತ್ನ, ಕರ್ನಾಟಕ ವಿಶ್ವವಿದ್ಯಾಲಯದ ಸ್ಥಾಪನೆಯ ಹಿನ್ನೆಲೆ ಮೊದಲಾದ ವಿಷಯಗಳನ್ನು ವಿವರವಾಗಿ ವಿವರಿಸಿ ಎಕೆಡಮಿಯವರು ಕೈಕೊಂಡ ವಿದ್ಯಾ ಪ್ರಚಾರದ ಕಾರ್ಯವನ್ನು ಶ್ಲಾಘಿಸಿ, ದಕ್ಷಿಣ ಕನ್ನಡಿಗರು ಜಾಣರು, ವಿವೇಕಿಗಳೂ ಪ್ರಗತಿಶೀಲರೂ ಎಂದು ಕೊಂಡಾಡಿದರು. ಮುಂದಿರುವ ಪ್ರಶ್ನೆಯಷ್ಟೆ ಕೇವಲ ಆರ್ಥಿಕ ಮಾತ್ರ. ಯೋಗ್ಯತೆಯ ಮಟ್ಟದಲ್ಲೇ ವಿಚಾರವಿನಿಮಯ ಮಾಡಲಾಗುವುದೆಂದು ಆಶ್ವಾಸನ ಇತ್ತರು. ಬಂದ ಪ್ರತಿನಿಧಿಗಳಿಗೆ ಮಾಡಿದ ಹೋಲ್ಡ

ಬೊಂಬಾಯಿ ಸರಕಾರ ಮದ್ರಾಸ್ ಸರಕಾರ ವನ್ನು ಸಾಂತ್ವನಕ್ಕಾಗಿ ಕೇಳಿದರೂ ಕೇಳಬಹುದು, ಆದರೆ ಮದ್ರಾಸು ವಿಶ್ವವಿದ್ಯಾಲಯವನ್ನು ಕೇಳುವ ಅಗತ್ಯವಿಲ್ಲವೆಂದರು ಡಾ। ಕೊಪ್ಪೀಕರರು ಸಾಧ್ಯವಿರುವುದನ್ನು ಮಾಡುವು ದಾಗಿ ತಿಳಿಸಿದರು.

ಡಾಕ್ಟರ್ ಮಾಧವ ಪೈಗಳು ಧನ್ಯವಾದವ ನ್ನಿತ್ತ ಬಳಿಕ, ನಯೋಗ ಮಂಡಲ ಮಣಿಪಾ ಲದ ತೆರಳಿ ಅಲ್ಲಿ ಬೇರೆ ಬೇರೆ ಆಸ್ಪತ್ರೆಗಳನ್ನು ಸಂದ ರ್ಶಿಸಿ ದಕ್ಷಿಣಕನ್ನಡ ಮೆಡಿಕಲ್ ಎಸೋಸಿ ಯೇಶನ್‌ನ ಅಧಿಕೃತ ಸ್ವೀಕರಿಸಿ ಉಡುಪಿಗೆ ಹಿಂದೆ ಬಂದಿತು. ಇಲ್ಲಿಯ ಆಸ್ಪತ್ರೆಗಳನ್ನೂ ಸಂದರ್ಶಿಸಿ, ಮಲ್ಪೆ ಬಂದರಕ್ಕೆ ಬೇಟಿ ಕೊಟ್ಟು ಬೇಕಾದ ಅನುಭವ, ವಿವರಗಳನ್ನು ಪಡೆ ಕೊಂಡು ತಾರೀಕು 5ರಂದು ಹಿಂದೆ ತೆರಳಿ ತು. ನಯೋಗ ಮಂಡಲದಲ್ಲಿ ಶ್ರೀ ಬಲವಂತ ರಾವ್ ದಾತಾರ್, ಡಾ। ಕೊಪ್ಪೀಕರ್, ಡಾ। ಜೋಶಿ, ಡಾ। ಜೀಂಗೆ ಈ ನಾಲ್ವರಿದ್ದರು.

ಅಭಿನಂದನಾ ಸಭೆ–ಉಡುಪಿ ತಾಲೂಕು ಬಾಸಗಿ ಶಾಲೆಗಳ ಮನೇಜರರ ಸಂಘದ ಅಧ್ಯಕ್ಷ ಶ್ರೀ ಟಿ. ಆನಂತ ಪೈಗಳು ಮದ್ರಾಸು ಶಾಸನ ಸಭೆಗೆ ಆರಿಸಲ್ಪಟ್ಟ ಸಂತೋಷಾರ್ಥವಾಗಿ ತಾ. 27-1-52ರಂದು ಸದ್ರಿ ಸಂಘದ ಮಹಾ ಸಭೆಯು ಶ್ರೀ ಶ್ರೀಪತಿ ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿ, ಶ್ರೀ ಪೈಗ ಳನ್ನು ಅಭಿನಂದಿಸಲಾಯಿತು. ಶ್ರೀಗಳಾದ ಕೆ. ಜನಾರ್ದನ ನ್ಯಾಕ್, ಕುರಾಲು ಗೋಪಾಲ ಪಯ್ಯ ಶೆಟ್ಟರಿಂದ ಸಂದರ್ಭೋಚಿತ ಭಾಷಣ ಗಳಾದುವು. ಶ್ರೀ ಪೈಗಳು ಉತ್ತರಿಸಿದ ಬಳಿಕ ಡಾ। ಮಾಧವ ಪೈ ಹಾಗೂ, ಅಧ್ಯಕ್ಷರ ಭಾಷ ಣ ಉಪಾಹಾರದೊಂದಿಗೆ ಸಭಾಂಕ್ಯವಾ ಯಿತು.

ಶ್ರೀ ಮಧ್ವರಾಘ್ವಾಂತ ಸಂವರ್ಧಕ ಸಭೆಯು–ಈ ಬಾರಿ ಉಡುಪಿಯಲ್ಲಿ ಪರ್ಯಾಯ ಶ್ರೀ ಪೇಜಾವರ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಶ್ರೀ ಭಂಡಾರಕೇರಿ ಮಠದ ಶ್ರೀ ಪಾದಂಗಳವರ ವ್ಯವಸ್ಥಾಪಕತ್ವದಲ್ಲಿ ಕಳೆದ ವಾರ ಶ್ರೀ ಕೃಷ್ಣ ಮಠದ ವಸಂತ ಮಹಲಿನಲ್ಲಿ ಅರಂಭವಾದುದು ಇದೇ ತಾ. 4ರಂದು ಯಶಸ್ವಿಯಾಗಿ ಕೊನೆಗೊಂಡಿತು. ಕರ್ನಾಟಕದ ಬೇರೆಬೇರೆ ಭಾಗಗಳಿಂದ ವಿದ್ವಾಂಸರು ಬಂದಿದ್ದು ಮಧ್ವಮತ ಮಹತ್ವದ ಕುರಿತು ಉಪನ್ಯಾಸಗಳನ್ನಿತ್ತರು. ಹರಿಕಥಾ ಕಾಲಕ್ಷೇಪಗಳೂ ಇದ್ದುವು. ಪಂಡಿತರೆಲ್ಲರಿಗೂ ಸಂಭಾವನೆ ಕೊಡಲಾಯಿತು. ಭಂಡಾರಕೇರಿ ಸ್ವಾಮಿಗಳವರು ತಮ್ಮ ಉಪನ್ಯಾಸಗಳಲ್ಲಿ ಮಧ್ವಮತ ಸರ್ವೋತ್ತಮವೆಂದು ಆಧಾರ ಕೊಟ್ಟು ಹೇಳಿದರು. ಸಭಾಧ್ಯಕ್ಷ ಸ್ವಾಮಿಗಳ ವರು ಸಭಾಂತ್ಯ ಮನೋವೃತ್ತಿಯಿಂದ ತಮ್ಮ ಭಾಷಣಗಳನ್ನು ಸೂಡುತ್ತಾ ಜನಜಾಗೃತಿಯನ್ನುಂಟು ಮಾಡಿದರು. ಕೊನೆಯ ದಿನದ ಸಭೆಗೆ ಹಾಜರಿದ್ದ ಶ್ರೀ ಬಲವಂತ ರಾವ್ ದಾತಾರರವರು ಧರ್ಮಾಧಿಕಾರಿಗಳ ಕರ್ತವ್ಯ ಮೊದಲಾದ ವಿಷಯಗಳನ್ನೆತ್ತಿ ಮಾತನಾಡಿ ಸೀರಾಧಿಕಾರಿಗಳಿಂದ ಲೋಕಕಲ್ಯಾಣವಾಗ ತಕ್ಕುದಿದೆ ಎಂದರು.

ಹರಿಕಥಾ ಸಪ್ತಾಹ–ಶ್ರೀ ಮದನೇಶ್ವರ ದೇವರ ಸನ್ನಿಧಿಯಲ್ಲಿ ಇದೇ ತಾ. 7 ರಿಂದ 13ರ ತನಕ ದಿನಾಲೂ ರಾತ್ರಿ 9ರಿಂದ 11½ ಗಂಟೆ ವರೆಗೆ ಬೆಂಗಳೂರಿನ ಪ್ರಸಿದ್ಧ ಕೀರ್ತನಕಾರರಾದ ಶ್ರೀ ಗೋಪಾಲ ದಾಸರಿಂದ ಹರಿಕಥಾ ಕಾಲಕ್ಷೇಪದ ಸಪ್ತಾಹವು ಜರಗಲಿ ರುವುದು. ಸಹೃದಯರು ಉದಾರಸಹಾಯ ವನ್ನಿತ್ತು ಸಹಕರಿಸಬೇಕಾಗಿ ಭಕ್ತಮಂಡಳಿಯ ವ್ಯವಸ್ಥಾಪಕರು ವಿನಂತಿಯಿದೆ.

ಬಾಪೂಜಿ ಶ್ರದ್ಧಾಂಜಲಿ ಸಭೆಯು ಉಡುಪಿ ಕರಾಯ ಮಂಡಲದ ನೇತೃತ್ವದಲ್ಲಿ ಇದೇ ತಾ. 12ರಂದು ನೆರವೇಗಲಿದೆ. ಅಂದು ಸಂಜೆ ೪ರಿಂದ ಸಾರ್ವಜನಿಕ ಇತರರೂ ಸೇರಿ ಕಾಲ್ನಡಿಗೆಯಿಂದ 7ಗಂಟೆಗೆ ಪಡುಪಾರ್ಶ್ವ ದಲ್ಲಿ ತಲ್ಪಿ, ಸಮುದ್ರ ಸ್ನಾನ ಕಿರಿಯ ಮಠಾ ನಸೂತ್ರಯಜ್ಞ ನಡೆದು ಸೂತ್ರಾಂಜಲಿ ಅರ್ಪಣೆ ಮತ್ತು ಪ್ರಾರ್ಥನಾ ಕಾರ್ಯಕ್ರಮ ನಡೆಯಲಿದೆ.

ವಿವಾಹ ಸಮಾರಂಭ–ಶ್ರೀ ಕಲ್ಯಾಣಿ ಶೇಷಗಿರಿ ರಾಯರ ಪುತ್ರಿ ಸೌ। ಯಶೋಧೆಯನ್ನು ಮಂಗಳೂರಿನ ವಕೀಲರ್ ಯು. ಸಿ. ಎಸ್. ಭಟ್ಟರ ಪುತ್ರರಾಗಿರುವ ಕೃಷ್ಣ ಭಟ್ಟರು ಕಳೆದ ತಾ. 31ರಲ್ಲು ಸಂಜೆ, ಸಧುವಿನ ಅಜ್ಜ ರಕಾಡು ನಿವಾಸದಲ್ಲಿ ವಿವಾಹವಾದರು.

ಇದೇ ತಾ. 1ರಲ್ಲು ತೋನ್ಸೆ ಮಹಾಬಲ ಹೆಗ್ಡೆ ರ ಪುತ್ರ ಶ್ರೀ ಚಂದ್ರಶೇಖರ ಹೆಗ್ಡೆಯವರು ಕಡೆಕಾರು ಶ್ರೀ ಭೂಪಯ್ಯ ಶೆಟ್ಟಿ ಪುತ್ರಿ ಶ್ರೀಮತಿ ಶಾಂಭವಿಯನ್ನು ಅಂಬ್ಲಾಡಿ ಶಾಲೆಯಲ್ಲಿ ವಿವಾಹವಾದರು.

ಮಂಗಳೂರು

ದ. ಕ. ಜಿಲ್ಲಾ ಬೋರ್ಡು ಸಭೆ ಯು ಕಳೆದ ತಾ. 28ರಂದು ಶ್ರೀ ಡಿ. ಮಂಜಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿ 1951-52ನೆ ವರ್ಷದ ಸುಧಾರಿಸಿದ ಮುಂಗಡ ಪತ್ರವನ್ನು 1952-53ನೆ ವರ್ಷದ ಅಂದಾಜು ಪತ್ರವನ್ನು ಪರಿಶೀಲಿಸಿ ಮಂಜೂರು ಮಾಡಿತು. [ವಿವರವನ್ನು ಮುಂದಿನ ಸಂಚಿಕೆಯಲ್ಲಿ ಕೊಡಲಾಗುವುದು] ವಿಟ್ಲದಿಂದ ಎಲಿಮೆಂಟರಿ ಶಾಲೆಯನ್ನು ಹಾಗೂ ಎ ಶಾಲೆಯನ್ನಾಗಿ ಮಾಡಬೇಕೆಂದು ಮತ್ತು ಮಾರ್ಗದರ್ಶಿ ಬೋರ್ಡಿಗೆ ಎ ಶಾಲೆಯನ್ನು ಪುನಃ ತೆರೆಯಬೇಕೆಂಬ ನಿರ್ಣಯಗಳಾದುವು.

ದ. ಕ. ಜಿಲ್ಲೆಗೆ ಪ್ರತ್ಯೇಕ ಯೋಜನೆ ಅವಶ್ಯವೆಂದು ಶ್ರೀ ಟಿ. ಎ. ಪೈ ಗಳು ಕಳೆದ ತಾ. 31ರಂದು ಮಂಗಳೂರು ಗವರ್ನಮೆಂಟ್ ಕಾಲೇಜು ಕಮರ್ಸ್ ವಿಭಾಗದ ಸಭೆಯಲ್ಲಿ ಪಂಚವಾರ್ಷಿಕ ಯೋಜನೆಯ ಕುರಿತು ಭಾಷಣ ಮಾಡುತ್ತ ಹೇಳಿದರು. ಪ್ರಿನ್ಸಿಪಾಲ್ ಟಿ. ಬಿ. ಹಾಸಿಮ್, ಅವರು ಅಧ್ಯಕ್ಷತೆ ವಹಿಸಿದ್ದು ಶ್ರೀ ಪೈಗಳ ಅಭಿಪ್ರಾಯವನ್ನು ಪುಷ್ಟೀಕರಿಸಿ ಮಾತನಾಡಿದರು. ಕಮರ್ಸ್ ಸಂಘದ ಕಾರ್ಯದರ್ಶಿಯು. ಎ. ಮಲ್ಯರು ಧನ್ಯವಾದಗಳನ್ನರ್ಪಿಸಿದರು.

ಕರ್ನಾಟಕ ಯುನಿವರ್ಸಿಟಿ ಕಮಿಶನಿನ ಆಗಮನ ಉಡುಪಿಯ ಡಾ। ಟಿ ಮಾಧವ ಪೈಯವರಿಂದ ಪ್ರೇರಿತವಾದ ಕಸ್ತೂರ್‌ಬಾ ಮೆಡಿಕಲ್ ಕಾಲೇಜಿನ ಸ್ಥಾಪನೆಯ ಸಾಧ್ಯಸಾಧ್ಯತೆಗಳನ್ನು ಪರಿಶೀಲಿಸಲು ಕರ್ನಾಟಕ ಯುನಿವರ್ಸಿಟಿಯವರಿಂದ ನಿಯೋಜಿಸಲ್ಪಟ್ಟ "ಯುನಿವರ್ಸಿಟಿ ಕಮಿಶನ್ ಇದೇ ತಾ. 3ರಂದು 4 ಗಂಟೆಗೆ ಉಡುಪಿಯಿಂದ ಇಲ್ಲಿಗೆ ತಲ್ಪಿತು. ಇಂಡಿಯನ್ ಮೆಡಿಕಲ್ ಎಸೋಸಿಯೇಶನಿನ ದ. ಕ. ಜಿಲ್ಲಾ ಶಾಖಾ ಅಧ್ಯಕ್ಷ ಹಾಗೂ ಕಾರ್ಯದರ್ಶಿಯು ಕಮಿಶನ್ ಸದಸ್ಯರನ್ನು ಸ್ವಾಗತಿಸಿದರು. ಈ ಸದಸ್ಯರು ಕಾರ್ಯಕ್ರಮದಂತೆ ನಗರದ ಫಾದರ್ ಮುಲ್ಲರ್ಸ್, ಸರಕಾರಿ ಪೆನ್ಸಾಕ್ ಮತ್ತು ಲೇಡಿಗೋಶನ್ಸ್ ಆಸ್ಪತ್ರೆಗಳನ್ನೂ, ಸ್ಕೌಟ್ ಎಸೋಸಿಯೆಸ್ ಕಾಲೇಜನ್ನು ಸಂದರ್ಶಿಸಿ ಮೊಸ್ಕುಲರ್ ಕಟ್ಟಡದಲ್ಲಿ ಸೇರಿದ ಸಭೆಗೆ ಆಗಮಿಸಿದರು. ಲಭ್ಯ ಅಭಿಪ್ರಾಯವಾದ ನಂತರ ಸಭಾರಂಭದಲ್ಲಿ ಡಾ। ಟಿ. ಮಾಧವ ಪೈಗಳು ಕಮಿಶನಿನ ಸದಸ್ಯರ ಪರಿಚಯ ಮಾಡಿಕೊಟ್ಟರು.

ಇಂಡಿಯನ್ ಮೆಡಿಕಲ್ ಎಸೋಸಿಯೇಶನಿನ ಜಿಲ್ಲಾ ಶಾಖೆಯ ಅಧ್ಯಕ್ಷ ಡಾ. ಎ. ಎಫ್. ಕ್ರೊಲೊ ಅವರು ಮಾತನಾಡುತ್ತಾ ಕರ್ನಾಟಕಕ್ಕೆ ಒಂದು ಮೆಡಿಕಲ್ ಕಾಲೇಜು ಅವಶ್ಯವಿದೆ ಎಂದೂ ಅದನ್ನು ನಮ್ಮ ಜಿಲ್ಲೆಯಲ್ಲೇ ಸ್ಥಾಪಿಸುವುದು ಅವಶ್ಯವೆಂದೂ ನಮ್ಮ ಜಿಲ್ಲೆಯ ಎಷ್ಟೋ ವಿದ್ಯಾರ್ಥಿಗಳು ತಮಗೆ ಮೆಡಿಕಲ್ ಕಾಲೇಜುಗಳಿಗೆ ಪ್ರವೇಶ ಸಿಗದೆ ನೊಂದವರಾಗಿ ಜೀವನದಲ್ಲಿ ಹಿಗುಪ್ಪೆಗೊಂಡವರಾಗಿರುತ್ತಾರೆಂದೂ ಹೇಳಿ ನಮ್ಮ ಜಿಲ್ಲೆಯ ಹಾಗೂ ಕರ್ನಾಟಕದ ಶಾಸನ ಸಭಾ ಮತ್ತು ಪ್ರಜಾ ಪ್ರತಿನಿಧಿ ಸಭೆಯ ಸದಸ್ಯರು ಸ್ವಲ್ಪ ಪ್ರಯತ್ನ ಮಾಡಿದ್ದಲ್ಲಿ ಅದು ಸಾಧ್ಯವೆಂದರು. ಬಳಿಕ ಡಾ। [ಕುಮಾರಿ] ಲಿಡಿಯಾ ಕುಲಾಸೊ ಅವರು ಮಾತನಾಡುತ್ತಾ, ದಕ್ಷಿಣಕನ್ನಡದ ಜನರ ಯೋಗ್ಯತೆಯು ವಿಶ್ವವನ್ನೇ ಬೆರಗುಗೊಳಿಸುವಂತೆ ಮಾಡಿದ. ಅಂತರ್ರಾಷ್ಟ್ರೀಯ ನ್ಯಾಯಾಲಯಕ್ಕೆ ಶ್ರೀ ಬಿ. ನರಸಿಂಗ ರಾಯರ ಆಯ್ಕೆ ಇದಕ್ಕೆ ಒಂದು ನಿದರ್ಶನ. ನಮ್ಮ ಜಿಲ್ಲೆಯ ವೈದ್ಯರು ಭಾರತದ ಹಾಗೂ ಜಗತ್ತಿನ ಬೇರೆ ಬೇರೆ ಭಾಗಗಳಲ್ಲಿ ವೈದ್ಯಾಧಿಕಾರಿಗಳಾಗಿರುವದು, ಹಾಗೂ ನಮ್ಮ ಜಿಲ್ಲೆಯಲ್ಲೇ ಎಷ್ಟೋ ರೋಗಿಗಳ ಕುರಿತು ವಿಶೇಷ ಜ್ಞಾನವಿರುವ ವೈದ್ಯರಿರುವುದು ಮತ್ತೊಂದು ನಿದರ್ಶನವೆಂದು ಹೇಳಿ ಈವರೆಗೆದಕ್ಷಿಣಕನ್ನಡಕ್ಕೆ ಅಲಕ್ಷಿಸಲ್ಪಟ್ಟದ್ದೂ ಇನ್ನಾದರೂ ಯೋಗ್ಯ ಪ್ರತಿನಿಧಿ ಪಡೆಯಲಿ ನಮ್ಮ ವಿದ್ಯಾರ್ಥಿಗಳಿಗೆ ವೈದ್ಯಕೀಯಧಲ್ಲಿ ಕರಿಕೆ ಸಿಗುವಂತೆ ಈ ಜಿಲ್ಲೆಯಲ್ಲೊಂದು ಮೆಡಿಕಲ್ ಕಾಲೇಜು ಸ್ಥಾಪನೆಯಾಗಲಿ, ಈ ಬಗ್ಗೆ ಕಮಿಶನು ತನ್ನ ಕೈಲಾದುದನ್ನು ಮಾಡಲಿ ಎಂದು ಹಾರೈಸಿದರು. ಬಳಿಕ ಶ್ರೀ ಕೆ. ಬಿ. ಜಿನರಾಜ ಹೆಗ್ಡೆಯವರು ಮಾತನಾಡಿ ಮೆಡಿಕಲ್ ಕಾಲೇಜಿನ ಅವಶ್ಯಕತೆಯನ್ನು ಒತ್ತಿ ಹೇಳಿದರು.

ಕಮಿಶನಿನ ಅಧ್ಯಕ್ಷ ಶ್ರೀ ದಾತಾರರು ಉತ್ತರ ಕೊಡುತ್ತಾ, ಮೆಡಿಕಲ್ ಕಾಲೇಜೊಂದನ್ನು ಸ್ಥಾಪಿಸುವಾಗ ಮುಂದೆ ಬರಬಹುದಾದ ಕಷ್ಟ, ಅಡಚಣೆಗಳ ಕಡೆಗೆ ಸಭೆಯ ಗಮನವನ್ನು ಸೆಳೆದರು. ಕೊನೆಗೆ ಎಲ್ಲರೂ ಒಗ್ಗಟ್ಟಾಗಿ ಕಮಿಶನಿಗೆ ಬೆಂಬಲ ಕೊಟ್ಟಲ್ಲಿ ಕರ್ನಾಟಕದಲ್ಲಿ ಒಂದು ಮೆಡಿಕಲ್ ಕಾಲೇಜು ಉಂಟು ಮಾಡಲು ತಾವು ಕೈಲಾದುದನ್ನು ನೂಡುವ ನೆಂದರು. ಕಮಿಶನಿನ ಹಿರೇ ಸದಸ್ಯ ಡಾ। ಕೊಪ್ಪೀಕರರು ಮಾತನಾಡಿ ಕಾಲೇಜಿಗೆ ಬೇಕಾದ ಉಪಾಧ್ಯಾಯರು, ಅವರ ಯೋಗ್ಯತೆ ವಿದ್ಯಾರ್ಥಿಗಳಿಗೆ ಸಿಗಬೇಕಾದ ಸಲಕರಣೆ, ಆಸ್ಪತ್ರೆಗಳ ಅವಶ್ಯಕತೆ ಇತ್ಯಾದಿಗಳ ಕುರಿತು ಮಾತನಾಡುತ್ತಾ–ಸ್ಥಳದ ಕುರಿತು ಒಂದು ನಿರ್ಧಾರವಾದಲ್ಲಿ ಬರುವ ಶಾಲಾ ವರ್ಷದಲ್ಲೇ ಒಂದು ಮೆಡಿಕಲ್ ಕಾಲೇಜು ತೆರೆಯಲು ಸಾಧ್ಯವಿದೆ ಎಂದರು. ಶ್ರೀ ವೈಕುಂಠ ಬಾಳಿಗರು ಮಾತನಾಡಿದ ನಂತರ ಡಾ। ಉಮೇಶರಾಯರು ಧನ್ಯವಾದಗಳನ್ನರ್ಪಿಸಿದರು.

ಹೊಸ್ಟೆಲ್ ದಿನಾಚರಣೆ ಬಂಟರ ಯಾನೆ ನಾಡವರ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದ ದಿನಾಚರಣೆಯು ಕಳೆದ ತಾ 27ರಂದು ಸಂಜೆ ಬಲ್ಲಾಳ ಕಲೆಕ್ಟರರ ಅಧ್ಯಕ್ಷತೆಯಲ್ಲಿ ನಡೆಯಿತು ವಂದಿವಾಚನ, ಬಹುಮಾನ ವಿತರಣೆವಾದ ಮೇಲೆ ಶ್ರೀ ಜಯರಾಮ ಶೆಟ್ಟರು ಸ್ವಸ್ತಿವಾಚನ ಮಾಡಿದರು. ವಿದ್ಯಾರ್ಥಿ ಭವನದ ಕಾರ್ಯದರ್ಶಿಯಿಂದ ಆದಕ್ಕೆ ಉತ್ತರವಿತ್ತರು. ಅಧ್ಯಕ್ಷರು ಮಾತನಾಡುತ್ತಾ ಇಂತಹ ಸಂಘ ಸಂಸ್ಥೆಗಳು ಸಾಮಾಜಿಕ ಏಳ್ಗೆಯ ಕುರಿತು ಆಸ್ಥೆ ವಹಿಸಿ ದುಡಿದು, ಜಿಲ್ಲೆಯ ಹಾಗೂ ಸಮಗ್ರ ದೇಶದ ಆರ್ಥಿಕ ಬುರವಸ್ಥೆಯನ್ನು ಸುಧಾರಿಸಲು ಕೈಲಾದ ಯತ್ನ ನಡೆಸಬೇಕೆಂದು ಹೇಳಿದರು. ವಂದನಾರ್ಪಣೆಯಾದ ಬಳಿಕ ನಡೆದ ವಿವಿಧ ಮನೋರಂಜನೆಗಳಲ್ಲಿ ಶ್ರೀಯು. ಎ. ಮುಲ್ಕರ ವಾಯಲಿನ್ ವಾದನ, 'ಜನಾವಳಿ ಆರ್ಥಾತ್ ಬನಾವಳಿ' ಪ್ರಹಸನ, ನೃತ್ಯಗಳು, 'ಮೆಚ್ಚಿದಿ ಮದಿಮೆ' ಉತ್ತಮವಿದ್ದವು.

ಪ್ರಜಾಪ್ರಭುತ್ವ ದಿನಾಚರಣೆಯು ಕಳೆದ ತಾ. 26ರಂದು ಜರಗಿತು. ಬೆಳಿಗ್ಗೆ ೯ಂದ್ರ ವ್ಯೆದಾನಿನಲ್ಲಿ ಜಿಲ್ಲಾ ಕಲೆಕ್ಟರರಿಂದ ಧ್ವಜವಂದನೆಯಾಯಿತು. ಸಂಜೆ ಶ್ರೀ ಬಿ. ಬಿ. ಶೆಟ್ಟಿ ಅಧ್ಯಕ್ಷತೆಯಲ್ಲಿ ಸಭೆ ಜರಗಿತು. ಸ್ಪರ್ಧೆಗಳಲ್ಲಿ ಗೆದ್ದವರಿಗೆ ಬಹುಮಾನವಿತರಣೆಯಾದನಂತರ ಶ್ರೀಗಳಾದ ಬಿ. ವೈಕುಂಠ ಬಾಳಿಗ, ಜನಾರ್ದ ನ. ಎಮ್. ಇದಿನಬ್ಬ, ಕೆ. ಕೃಷ್ಣರಾವ್ ಮತ್ತು ಎಸ್. ಎಸ್. ಶೆಟ್ಟಿಯವರು ಕಾಲೋಚಿತ ಮಾತುಗಳನ್ನಾಡಿದರು.

ರಾಜಕಪೂರರ— **ಬಸಾರ್ತ್**

ನರ್ಗಿಸ್—ರಾಜ ಕಪೂರ್, ಪ್ರೇಮನಾಥ್—ನಿಮ್ಮಿ,

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ

ತಾರೀಕು 8—2—52ರಿಂದ

ಮುಂದಿನ ಚಿತ್ರ: ಕಿಶೋರ್ ಸಾಹು ನಿರ್ಮಿತ

ಜನ್ಮಾಷ್ಟಮಿ

UDIPI MUNICIPALITY

NOTICE.

Is hereby given that the right of collecting fees in the Municipal Markets, Cart stands, Jutka stand, Mutton stalls and Slaughter house for the year 1952-53 will be sold by public auction by the Commissioner Udipi Municipality on Friday the 15th Feb, 1952 at 3 P. M. in the Municipal Office, Udipi. The sale is subject to the rules in force.

Further particulars or information may be obtained from the Municipal Office, Udipi on all working days during office hours.

(Sd.) **A. S. D'Souza,**
Commissioner.

Municipal office, Udipi.
Dated 4-2-52.

ಉಡುಪಿ ಮುನಿಸಿಪಾಲಿಟಿ

ನೋಟೀಸು

ಈ ಮೂಲಕ ತಿಳಿಯಪಡಿಸುವುದೇನೆಂದರೆ 1952-53ನೇ ವರ್ಷದಲ್ಲಿ ಉಡುಪಿ ಮುನಿಸಿಪಾಲಿಟಿಯ ಅಡಳಿತಕ್ಕೆ ಒಳಪಟ್ಟ ಮಾರ್ಕೆಟ್ ಟಿಗಳು, ಗಾಡಿ ಚೌಕ, ಜಟ್ಕಾ ಚೌಕ, ಮಟನ್ ಸ್ಟೊಲ್ಸ್ ಮತ್ತು ಪಧಾ ಗೃಹದಲ್ಲಿ ವರ್ಷಾವಧಿ ಹರಾಜು ಮಾಡುವ ಹಕ್ಕನ್ನು ಮುನಿಸಿಪಲ್ ಕಮಿಶನರ್‌ರವರು ತಾರೀಕು 15-2-52ನೇ ಶುಕ್ರವಾರ ಅಪರಾಹ್ನ ಗಂಟೆ 3ಕ್ಕೆ ಮುನಿಸಿಪಲ್ ಆಫೀಸಿನಲ್ಲಿ, ಆ ಕುರಿತು ಜಾರಿಯಲ್ಲಿರತಕ್ಕ ನಿಯಮಗಳನುಸಾರವಾಗಿ ಬಹಿರಂಗವಾಗಿ ಏಲಂ ಮೂಲಕ ಮಾರಾಟ ಮಾಡುವರು.

ಈ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಆ ಕಛೇರಿ ಸಮಯ ಮುನಿಸಿಪಲ್ ಆಫೀಸಿಗೆ ಬಂದು ತಿಳಿದುಕೊಳ್ಳಬಹುದು.

(Sd) **A. S. D'Souza,**
ಕಮಿಶನರ್

ಮುನಿಸಿಪಲ್ ಆಫೀಸು, ಉಡುಪಿ.
ತಾರೀಕು 4-2-52.

ಮದ್ರಾಸ್ ಮಂತ್ರಿ ಮಂಡಲವು ರಾಜೀನಾಮೆ ಕೊಡಲಿರುವುದೆಂದೂ ಗವರ್ನರರು ಅಡಳಿತ ವಹಿಸಿಕೊಳ್ಳಬಹುದೆಂದೂ ತಿಳಿದುಬರುತ್ತದೆ.

ಶೆಂಕ ಎಮ್ಮೆಗಳು– 26-1-52ರಲ್ಲಿ ಶ್ರೀ ವೈ ಶಂತಿರಾಜಯ್ಯನವರ ನೇತೃತ್ವದ ಕ್ಲೂ, 27-1-52ರಲ್ಲಿ ಶ್ರೀ ನಡಿಗುತ್ತು ನಾರಾಯಣ ಸೆಟ್ಟಿ ಅಧ್ಯಕ್ಷತೆಯಲ್ಲೂ ಶ್ರೀ ನಾಲಕ್ತಾಯ ಮಂದಿರದ ವರಾಂದಲ್ಲಿ ಶ್ರೀ ಎನ್. ವಿ. ಸುಬ್ರಾಯನವರ ಮತ್ತು ಕರ್ನಾಟಕ ವೀರ ವ್ಯಾಯಾಮ ಮಂದಿರದ ತರುಣರ ಅದ್ಭುತವಾದ ವ್ಯಾಯಾಮ ಪ್ರದರ್ಶನವೂ ವಿವಿಧ ಕಾರ್ಯಕ್ರಮಗಳೂ ನಡೆದುವು. ಪ್ರದರ್ಶನಕಾರರಿಗೆ ಪಾರಿತೋಷಕಗಳನ್ನು ಕೊಡುವ ವ್ಯವಸ್ಥೆಯನ್ನು ಶ್ರೀ ವೈ. ಬಾಬು ಸೆಟ್ಟಿ ಮಾಡಿಯುವುದು ಸ್ತುತ್ಯವಾಗಿದೆ.

ಶಿರ್ವ– ಪಂಚಾಯತ ಬೋರ್ಡಿನ ಸಾಮಾನ್ಯ ಸಭೆಯು ಶ್ರೀ ಯಸ್. ಅಂತಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ತಾ 28-1-52ರಲ್ಲಿ ಕುದಿ ಶಿರ್ವಾ ಬೋಳಂಜಲೆ ಕೋಡಿಗೊಂದು ಸಂಕ ನಿರ್ಮಿಸುವ, ಮಾರ್ಕೆಟ್ ರೈನ್ ಕಟ್ಟಿಸುವುದನ್ನು ಕಟ್ಟಿಸುವ, ಶಿರ್ವಾ ಸಬ್ ಪೋಸ್ಟ್ ಆಫೀಸಿನಲ್ಲಿ ತಂತಿ ಟೆಲಿಗ್ರಾಫ್ ಶಾಖೆಯನ್ನು ಬೇಗನೆ ತೆರೆಯುವಂತೆ ಸರಕಾರವನ್ನು ಒತ್ತಾಯಪಡಿಸುವ, ಶಿರ್ವಾ ಕ್ರೈಂದು ಸಬ್ ಎಜಿಸ್ಟ್ರೇಶನ್ ಆಫೀಸನ್ನು ತೆರೆಯುವಂತೆ ಸರಕಾರವನ್ನು ವಿನಂತಿಸಿಕೊಳ್ಳುವ ಮೊದಲಾದ ನಿರ್ಣಯಗಳಾದುವು.

ಕುಂಬಳೆ– ದ. ಕ. ಜಿಲ್ಲೆಯ ದಕ್ಷಿಣ ಭಾಗದಿಂದ ಮೊದಲ ಸಭೆಗೆ ಕಾಂಗ್ರೆಸ್ ಕಡೆಯಿಂದ ಆಯ್ಕೆಮಟ್ಟ ಶ್ರೀ ವೆಂಕಪ್ಪಗೌ ಶಿವರಾವ್ ಮತ್ತು ಕಾಸರಗೋಡು ಕ್ಷೇತ್ರದ ಜನಾಬ್ ಎಮ್. ಎಸ್. ಮೊಗ್ರಾಲ್, ಅವರಿಬ್ಬರು ಯಶಸ್ವಿಯಾದ ಬಗ್ಗೆ ಅವರನ್ನು ಅಭಿನಂದಿಸುವ ಸಭೆಯು ತಾ. 19ರಂದು ಜರಗಿತು.

ಹರಿಜನ್ ದಿನಾಚರಣೆ ಸಂಬಂಧವಾಗಿ ತಾ. 20ರಂದು ಹರಿಜನ್ ವೆಲ್ಫೇರ್ ಶಾಲೆಯಲ್ಲಿ ರವಿನ್ಯೂ ಇನ್‌ಸ್ಪೆಕ್ಟರ್ ಜನಾಬ್ ಶುಕ್ಕಬ್ಬ ಸಾಹೇಬರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ನೇರಲಾಯಿತು. ಶ್ರೀ ಯು. ಅನಂದ ಮುಂತಾದವರು ಸಂದರ್ಭೋಚಿತ ಭಾಷಣ ಕೊಟ್ಟರು.

ತಿಮ್ಮಣ್ಣ ಕುದ್ರು– ಕೋಸ್ಟಲ್ ರೋಪಣ ಸೊಸ್ಯಾಟಿಯವರು ಕಳದ ತಾ. 26ರಂದು ಪ್ರಜಾಸ್ಫುಟ್ಟ ದಿನವನ್ನಾಚರಿಸಿದರು. ಬೆಳಿಗ್ಗೆ ಸೊಸ್ಯಾಟಿಯ ವರಾಂದಲ್ಲಿ ಶ್ರೀ ಟಿ. ಶ್ರೀನಿವಾಸ ರಾವ್ B. A. B. T. ಯವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ನೇರಿ ಧ್ವಜಾರೋಹಣವನ್ನು ಮಾಡಲಾಯಿತು. ಅಧ್ಯಕ್ಷರೂ, ಸಭಿಕರಲ್ಲಿ ಟಿ. ವಿ. ಹುಸೇನ್, ಶ್ರೀ ಟಿ. ಗೋವಿಂದ ಉಡ್ಡ, ಮತ್ತು ಮಿಸ್ ಟಿ. ಮೊದಲಾದವರು ಭಾಷಣಗಳನ್ನು ಕೊಟ್ಟರು.

ಕೊಡವೂರು– ಶ್ರೀ ಶಂಕರನಾರಾಯಣ ದೇವಸ್ಥಾನದ ಕಾಲಾವಧಿ ಉತ್ಸವವು ತಾ. 7-2-52ಕ್ಕೆ ಪ್ರಾರಂಭವಾಗಿ 11-2-52 ಧ್ವಜಾರೋಹಣ ಮತ್ತು ದೊಡ್ಡ ರಂಗಪೂಜಾ. 13-2-52ಕ್ಕೆ ಮಹಾರಥೋತ್ಸವ 14-2-52ಕ್ಕೆ ಅವಭೃತ ಕಟ್ಟೆ ಪೂಜಾ, ಧ್ವಜಾವರೋಹಣಗಳೊಂದಿಗೆ ಕೊನೆಗೊಳ್ಳುವುದು ಎಂದು ದೇವಸ್ಥಾನದ ಟ್ರಸ್ಟಿ ಡಾ। ಕೆ. ಎಲ್. ಪೈತಾಳರು ತಿಳಿಸುತ್ತಾರೆ.

ಮಡಂತ್ಯಾರು– ಇಂಡಿಯನ್ ಗಾರ್ಡಿಯನ್ ಏಂಜಲ್ಸ್ ಹಾಯರ್ ಎಲಿಮೆಂಟರಿ ಶಾಲೆಯ ವರ್ಧಂತ್ಯುತ್ಸವವು ಜನವರಿ 26 ರಂದು ಶ್ರೀ ವಿದ್ವಾನ್ ಎಸ್ವಿನ್ ಡಿಸೋಜರ ಅಧ್ಯಕ್ಷತೆಯಲ್ಲಿ ಜರಗಿತು. ಕುಳು, ಕೊಂಕಣಿ, ಕನ್ನಡ ನಾಟಕಗಳೂ, ಲೇಜಿಮ್, ಕುಮ್ಮಿ ಮುಂತಾದ ಅಭಿನಯಗಳೂ ಅಭಿನಯಿಸಲ್ಪಟ್ಟವು. ವರ್ಧಂತಿಯ ಹಿಂದಿನ ದಿನ, ಪಂದ್ಯಾಟಗಳನ್ನೂ ಸ್ಪರ್ಧೆಗಳನ್ನೂ ನಡೆಯಿಸಿ ಮಕ್ಕಳಿಗೆ ಉಪಹಾರ ಕೂಟವನ್ನೂ ಏರ್ಪಡಿಸಲಾಗಿತ್ತು.

ಬ್ರಹ್ಮಾವರ– ಶ್ರೀ ಪಿ. ವೈ. ರಾಮಂಜ ಗುರುಕಳ್‌ರವರ ಪದ್ಮಪುರ ಎಂಬ ನೂತನ ಚಿತ್ರಶಾಲೆ ಮಂದಿರದ ಪ್ರವೇಶೋತ್ಸವವು ತಾ. 31-1-52ರಲ್ಲಿ ಬಾಳೆಕುದ್ರು ಮಠಾಧೀಶರಾದ ಶ್ರೀ ಶ್ರೀ ಆನಂದಾಶ್ರಮ ಸ್ವಾಮಿಗಳವರಿಂದ ನೆರವೇರಿಸಲ್ಪಟ್ಟಿತು. ಶ್ರೀಗಳಾದ ಟಿ ಎನ್. ಕೇಳು ನಂದಿಯಾರ್, ಬಿ. ಡಿ. ಅಂತಯ್ಯ ಸೆಟ್ಟಿ, ಬಿ. ವಿಠ್ಠಲ್ ಸೆಟ್ಟಿ ಮೊದಲಾದವರು ಸಂದರ್ಭೋಚಿತ ಭಾಷಣ ವಿತ್ತರು. ಸ್ವಾಮಿಗಳ ಭಾಷಣ, ಉಪಹಾರ ದೊಂದಿಗೆ ಸಭಾಂತ್ಯವಾಯಿತು.

ಪ್ರಜಾರಾಜ್ಯ ದಿನಾಚರಣೆಯು ಬ್ರಹ್ಮಾವರದಲ್ಲಿ ಕಳದ ತಾ. 26ರಲ್ಲಿ ಸರ್ವಲಾ ಕಾಂಗ್ರೆಸ್ ಕಮಿಟಿಯ ನೇತೃತ್ವದಲ್ಲಿ ಬೇಗ್ಗೆ ಡಾ। ಕೆ. ನಾರಾಯಣ ಪೈಗಳಿಂದ ಧ್ವಜವಂದನೆ, ಸಂಜೆ ಶ್ರೀ ಟಿ. ಗೋಪಾಲ ಪೈಗಳ ಅಧ್ಯಕ್ಷತೆಯಲ್ಲಿ ಸಭೆ, ಭಾಷಣಗಳಿಂದ ನೆರವೇರಿತು.

ಪೆರ್ಡೂರ್.– ಕಳದ ತಾ 26ರಲ್ಲು ಬಿ. ಇ. ಎಮ್ ಮತ್ತು ಎ. ಬಿ ಟಿ. ಶಾಲೆಗಳಲ್ಲಿ ಪ್ರಜಾಪ್ರಭುತ್ವ ದಿನಾಚರಣೆಯು ವಿವಿಧ ಕಾರ್ಯಕ್ರಮಗಳಿಂದ ನೆರವೇರಿತು ರಾತ್ರಿ ಟಿ. ರಾಮಕೃಷ್ಣ ಅಡಿಗರ ಅಧ್ಯಕ್ಷತೆಯಲ್ಲಿ ಸುಂದರ ದಾಸರ ದಿನಾಚರಣೆಯು ಭಾಷಣ ಕೀರ್ತನ ಹರಿಕತೆ ಮೊದಲಾದ ಕಾರ್ಯಕ್ರಮಗಳಿಂದ ಜರಗಿಸಲ್ಪಟ್ಟಿತು.

ಪಡುಕೋಣೆ– ಕಳದ ತಾ. 24ರಲ್ಲು ಬೋರ್ಡು ಎಲಿಮೆಂಟರಿ ಶಾಲೆಯಲ್ಲಿ ಶ್ರೀ ಕೆ. ಸಾಂಕಸ್ಪ ಗಾಡಿಗನ್ನು ಬೀಳ್ಕೊಡುವ ಸಮಾರಂಭವು ಪಟೇಲ್ ಶ್ರೀ ರಾಮಕೃಷ್ಣ ಹೆಬ್ಬಾರರ ಅಧ್ಯಕ್ಷತೆಯಲ್ಲಿ ಜರಗಿ, ಶ್ರೀಗಳಾದ ವಿ. ಆರ್. ಹೆಬ್ಬಾರ್, ಎಮ್. ಎಸ್. ರಾವ್, ಮೊದಲಾದವರ ಭಾಷಣಗಳಾದುವು.

ಯೆಳಜಿತ್– ಕಾ-25 ಲು ಬೈಂದೂರು ವಿವಿಜನಲ್ ರೆವಿನ್ಯೂ ಇನ್ಸ್‌ಪೆಕ್ಟರರ ನೇತೃತ್ವದಲ್ಲಿ 'ಗಣಪತಿ ನಾಟಕಾಲಯ' ತೆರೆಯಲಾಯಿತು. ಶ್ರೀಗಳಾದ ನರಸಿಂಹ ಶ್ಯಾನುಭೋಗ, ದೇವಣ್ಣ ಶ್ಯಾನುಭೋಗ ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು.

ಕುರುಳಾಲು– ಉಡುಪಿ ವಿಧಾನಕ್ಷೇತ್ರದಿಂದ ಎಸೆಂಬ್ಲಿಗೆ ಪ್ರತಿನಿಧಿಯಾಗಿ ಆರಿಸಲ್ಪಟ್ಟ ಶ್ರೀ ಟಿ. ಅನಂತ ಪೈಯವರಿಗೆ ಸತ್ಕಾರ ಕೂಟವೊಂದು ತಾ. 2-2-52ರಲ್ಲು ಕುಂಜಾರು ಹಾ ಎ ಶಾಲೆಯಲ್ಲಿ ಶ್ರೀ ಕೌಲಗಿ ಶೇಷಾಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಸಭೆಗೆ ಶ್ರೀಯುತ ಟಿ ಎ. ಪೈಯವರು ಕೂಡಾ ಹಲವು ಮಂದಿ ಮಹಿಳೆಯರು ಬಂದಿದ್ದರು. ಬಾಲಿಕೆಯರಿಂದ ಸ್ವಾಗತ ಹಾಡು, ಹಾರಲ್ಪಟ್ಟ ಬಳಿಕ ಶ್ರೀಯುತರುಗಳಾದ ಕುರುಕಾಲ ಗಣಪಯ್ಯ ಶೆಟ್ಟಿ, ಎ. ಜೆ ಅಲ್ಬೆ, ಹೆಲ್ತ್ ಇನ್ಸ್‌ಪೆಕ್ಟರ್ ವೇಣು ಗೋಪಾಲರಾವ್, ಡಾ। ಶೇಷ ರಾವ್, ಕಟಪಾಡಿ ಮುದ್ದು ಸುವರ್ಣರು ಶ್ರೀಯುತ ಪೈಗಳ ಯೋಗ್ಯತೆಯ ಗುಣಗಾನವನ್ನು ಮಾಡಿದ್ದಲ್ಲದೆ, ಸರಕಾರದ ಹಲವು ಯೋಜನೆಗಳೊಂದಿಗೆ ಬಡಜನತೆಯ ಹಾಲಾಹವಾಲೆಗಳನ್ನು ನುಂಡಾಗಿ ನಿವಾರಿಸುವರೆ ಸಾಧ್ಯವಿದ್ದ ಪ್ರಯತ್ನಗಳನ್ನು ಮಾಡುವಂತೆ ವಿನಂತಿಸಿ ಭಾಷಣಗಳನ್ನಿತ್ತರು. ಶ್ರೀಯುತ ಪೈಗಳು ತಾನು ಅಗಾಗ್ಗೆ ಮಹಾಜನರ ಸಲಹೆಗಳನ್ನು ಪಡೆಯುತ್ತಾ ಜಿಲ್ಲೆಯ ಅಭಿವೃದ್ಧಿಗೂ ಜನತೆಯ ಸೇವೆಗೂ ಕೈಲಾದ ಪ್ರಯತ್ನವನ್ನು ಮಾಡುತ್ತೇನೆಂದು ಆಶ್ವಾಸನ ರೂಪವಾದ ಭಾಷಣವನ್ನಿತ್ತರು. ಆ ಪೈಸರು ಶ್ರೀಯುತ ಪೈಗಳಿಗೆ ಅಭಿನಂದನೆಗಳ ಪೂರಿತ ಸುರಸ ಭಾಷಣವನ್ನಿತ್ತ ಬಳಿಕ ಸಭಾ ಕಾರ್ಯಕ್ರಮವೊಡನೆ ಸಭೆಯು ಮುಕ್ತಾಯವಾಯಿತು.

ಹೊಸದುರ್ಗದ ಚುನಾವಣಾ ಫಲಿತಾಂಶ:–ಹೊಸದುರ್ಗ ಕ್ಷೇತ್ರದಿಂದ ತಾ. ಏರಂದು ಮತದಾನವಾಯ್ತು. ತಾ. ೪ರಂದು ೦೮ರ ನಿರ್ಗ ಅಧಿಕಾರಿ ಶ್ರೀ ಬಿ.ಎನ್. ಹೆಗ್ಡೆಯವರು ಮತಗಣನೆ ಮಾಡಿದ್ದಲ್ಲಿ ಪ್ರಜಾ-ಕಮ್ಯೂನಿಸ್ಟ್ ಒಕ್ಕೂಟದ ಪುರಿಯಾಳು ಶ್ರೀ ಮೇಲತ್ತ್ ನಾರಾಯಣನ್ ನಂಬಿಯಾರ್‌ರವರು ಜಯಸಿದ್ದಾಗಿ ಪ್ರಸ್ತಾಪಿಸಿದರು.

ಒಟ್ಟು ಮತದಾರರು 80235ರಲ್ಲಿ 59884 ಜನರು ಮತದಾನ ಮಾಡಿದ್ದರು. ಶ್ರೀ ಮೇಲತ್ತ್ ನಾರಾಯಣನ್ ನಂಬಿಯಾರ್ [ಪ್ರಜಾ-ಕಮ್ಯೂ ಐಕ್ಯ ಒಕ್ಕೂಟ] 22671 ಮತಗಳೂ. ಶ್ರೀ ಎಂ. ಕೆ. ನಂಬಿಯಾರ್ (ಕಾಂಗ್ರೆಸ್) 17917 ಮತಗಳೂ. ಶ್ರೀ ಸಿ. ಯು. ಪಿ. ನಾಯರ್ [ಸೋಶ್ಯಲಿಸ್ಟ್] 10055 ಮತಗಳೂ, ಜನಾಬ್ ಎಚ್. ಚಿಂತಾಣಿ [ಸ್ವತಂತ್ರ] 9211 ಮತಗಳೂ ಸಿಕ್ಕಿದ್ದವು. 30 ಮತಗಳು ಅಸಾಗಿದ್ದವು.

ಕರ್ನಾಟಕ ಯುವಕ ನಾಟಕ ಸಭಾ, ಮಂಬಯಿ– ಇವರು ಶ್ರೀ. ಎಸ್. ಎನ್. ಜೋಶಿ ಇವರಿಂದ ಬರೆಯಲ್ಪಟ್ಟ "ಸಂಸಾರ ಸಾಗರ" ಎಂಬ ಸಾಮಾಜಿಕ ಕನ್ನಡ ನಾಟಕವನ್ನು ತಾ. 16-2-52ನೇ ಶನಿವಾರ ರಾತ್ರಿ ಘಂಟೆ 7-30 ಕ್ಕೆ ಪರೇಲ್ ಟ್ರಾಮ್ ಜಂಕ್ಷನ ಒಳಿಯಲ್ಲಿರುವ ದಾಮೋದರ್ ಥಾಕರ್ಸಿ ಹೈಸ್ಕೂಲಿನಲ್ಲಿ ಅಭಿನಯಿಸಲಿದ್ದಾರೆ. ಮುಂಬಾಯಿ ಕನ್ನಡ ಬಂಧುಭಗಿನಿಯರು ಪ್ರೋತ್ಸಾಹಿಸಬೇಕಾಗಿ ವಿನಂತಿಸಲಾಗಿದೆ.

ಚಂದಾದಾರರಲ್ಲಿ—

ತಿರುಗಿ ಬರೆದಿರುವ ನೆನಪೋಲೆಯಂತೆ ದಯಮಾಡಿ ಚಂದಾಹಣವನ್ನು ಕಳಿಸಿಕೊಡುವಂತೆ ವಿನಂತಿ

ಮೆನೇಜರ್

ಪಂಚಾಯತ ಬೋರ್ಡು, ಗ್ರಾಮ ಕಮಿಟಿ, ಶಾಲಾ ಕೊಲೇಜು ಮೊದಲಾದುವುಗಳ

ಲೈಬ್ರೆರಿಗಳಿಗೆ

ಬೇಕಾಗುವ ಕರ್ನಾಟಕದ ಎಲ್ಲಾ ಭಾಗಗಳ ಕನ್ನಡ ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ.

ವಿಚಾರಿಸಿ:—

ನವಭಾರತಪುಸ್ತಕಭಂಡಾರಉಡುಪಿ.

ಆವಶ್ಯವುಳ್ಳ ಎಲ್ಲಾ ಮಾಹಿತಿಯನ್ನೊಳಗೊಂಡ ಉತ್ತಮತರದ

ಮಂಗ್ಗಿ ಪುಸ್ತಕಗಳು

ಚೆಲ್ಲಪಿಲ್ಲಿಯಾಗಿಯೂ ರಮ್ಯಾಗಿಯೂ ದೊರೆಯುತ್ತವೆ.

ಬೆಲೆ: 0—1—0

ವ್ಯಾಪಾರಿಗಳಿಗೆ ಧಾರಾಳ ಕಮಿಶನ್ ಇದೆ

ನವಯುಗ ಪ್ರೆಸ್, ಉಡುಪಿ.

Happy New-Year Greetings

We are glad to announce that 12,000 shares of our Bank of the total value of Rs 3 lacs recently floated have been over-subscribed. We are grateful to the public for the increased confidence they have reposed in us We assure that we will do our utmost to deserve this well-placed confidence.

THE VIJAYA BANK LTD.

Estt '1931. H. O **MANGALORE.**

B. M. Shetty, B. A. B. L. Secretary.

P J Shetty, M A B L. G A I I B, Superintendent.

B Manjaya Hegde, Advocate.
[President, District Board S. K.]
Chairman of the Board of Directors

For Protection and Provision

Consult

The New Guardian of India Life Insurance Co., Ltd.

Estd] Head office: **MADRAS** [1934

A Policy in this Progressive Life Office is good investment; its Agency is valuable business connection.

Applications for representation are invited from influential persons.

Please apply to:

The Branch Manager,
Diamond Building, Hampankatta,
MANGALORE, S. K.

For energetic and active living, for your mental and physical vigour and strength,

Always Use

KALI KAMALI

Chyavanprash.

A renowned Ayurvedic Medicine, prepared from rare Himalayan herbs and minerals. Useful fore men, women and Children alike. An ideal tonic for weak nerves and heart

Price per tin containing 80 tolas Rs. 10-0 0 Postage extra.

Stockist for South & N. Kanara & Mysore state. { **M. Vinayaka Rao,** Bannanje Road, Udipi. S K

AYURVEDIC PHARMACY

Baba kali Kamali-Wala RISHIKESH

ಕಬರಿ ಮಲೆ ಧುರಂತ

ತಿರುವಾಂಕೂರಿನ ಪ್ರಸಿದ್ಧ ಯಾತ್ರಾಸ್ಥಳವಾದ ಶಬರಿ ಮಲೆಯಲ್ಲಿ, ಮಕರ ಸಂಕ್ರಮಣ ಸಂಬಂಧವಾದ ಜಾತ್ರೆಗೆ ಧರ್ಮದಸ್ಥ ದೇವಾಲಯದ ವತಿಯಿಂದ ಸುಮಾರು ಎರಡು ಲಕ್ಷ ಜನರು ನೇರಿದರಲು, ಕರದ ತಾ. 15ನೆ ಆಪರಾಹ್ನ, ಒಂದು ಛಿದಿನೆ ಹೊಡೆದ ಬೆಂಕಿಯು ದೇವಾಲಯದ ಬಳಿಯ ಸಿಡಿಮದ್ದಿನ ಉಗ್ರಾಣಕ್ಕೆ ಹಾರಿ ಅತಿ ಭಯಂಕರ ಸ್ಫೋಟನವಾಯಿತು. ಕ್ಷಣಮಾತ್ರದಲ್ಲಿ ನೂರಾರು ಮನೆ ಕಟ್ಟಡಗಳು ನುಚ್ಚುನೂರಾಗಿ ವಂತಾಯಿತು. ಸಾಹಿರಾರು ಜನರಿಗೆ ಜಖಂ ಉಂಟಾಯಿತು; ಸುಮಾರು 33 ಮಂದಿ ಮಡಿದು ಬಿದ್ದರು ಸುಮಾರು ಐನ್ನು ಮೈಲು ದೂರದ ವರೆಗೆ ಕಾಡು, ಗುಡ್ಡ; ಅಸ್ಪತ್ರೆಯ ಸಹಾಯವು ಕೂಡಲೇ ಒದಗುವದೂ ಕಷ್ಟ ವಾಯಿತು. ಬೆಂಕಿಯಿಂದ ನೆಯ್ ಸುಟ್ಟು ಬೊಬ್ಬಿಡುತ್ತಿರುವವರನ್ನು ಇತರ ಜನರು ಹೇಗೂ ಉಪಚರಿಸಿ, ದೇವಾಲಯದಲ್ಲಿ ದೀಪವು ರಿಸಲು ತಂದ ಕುಪ್ಪ ಹಚ್ಚಿದರು. ಕೆಲವರ ಚರ್ಮ ಒಡೆದು ಮಾಂಸ ಹೊರಗೆ ಬಂದಿತ್ತೆಂದೂ ತುಂಡಾದ ಎಲುವುಗಳ ನೋಟವು ಅತಿ ಭಯಾನಕವಾಗಿತ್ತೆಂದೂ, ಅದ್ದಂದೋದಿ ಸುರಕ್ಷಿತರಾದ ಯಾತ್ರಾರ್ಥಿಗಳು ವರ್ಣಿಸಿದಾರು. ಶಬರಿಮಲೆ ದೇವಾಲಯಕ್ಕೆ ಮಾತ್ರ ಯಾವ ಹಾನಿಯೂ ತಗಲಲಿಲ್ಲ. ಕಳೆದ ವರ್ಷ, ಯಾರೋ ದುಷ್ಕರು ಈ ದೇವಾಲಯವನ್ನು ಹಾಳುಗೆಡವಿದ್ದರು. ಅದನ್ನು ಜೀರ್ಣೋದ್ಧಾರ ಮಾಡಿದ್ದರು.

ಸ್ವೀಕಾರ

ಸ್ವಾಮಿ ವಿವೇಕಾನಂದ (ಜೀವನ ಚರಿತ್ರೆ) ಲೇಖಕರು ಕೃಷ್ಣಕುಮಾರ್, ಪ್ರಕಾಶಕರು ವಿವೇಕ ಪಬ್ಲಿಕೇಶನ್ಸ್, ಬೆಂಗಳೂರು. ಬೆಲೆ ರೂ. 1-0-0

ಮಹಾ ಬ್ರಾಹ್ಮಣ—(ಕಥೆ) ದೇವದು ಬರೆದಿದ್ದು, ಪ್ರಕಾಶಕರು ಆನಂದ ಬ್ರದರ್ಸ್ ಬೆಂಗಳೂರು 2, ಬೆಲೆ ರೂ. 5-8-0

ಸನತಿ-(ಕಾದಂಬರಿ) ಲೇಖಕರು: ರಾ. ವೆಂ. ಶ್ರೀನಿವಾಸ, ಬೆಲೆ ರೂ. 1-12-0, ಪ್ರಕಾಶಕರು-ಆನಂದ ಬ್ರದರ್ಸ್ ಬೆಂಗಳೂರು 2.

ಮದಾಂಬಾವರಿ — (ಕಾದಂಬರಿ) ಮೂಲ ಲೇಖಕರು ಗಸ್ಟಾವ್ ಫ್ಲಾಬೋ, ಅನುವಾದಕರು, ಕ. ರಾ. ನು. ಪ್ರಕಾಶಕರು ಆನಂದ ಬ್ರದರ್ಸ್, ಬೆಂಗಳೂರು 2, ಬೆಲೆ ರೂ. 2-12-0

ಶಾಸ್ತ್ರಸಿದ್ಧ ಶ್ರೀ ಕೃಷ್ಣ ಪಂಚಾಂಗ ಶ್ರೀಗಳಾದ ಶ್ರೀಂ ಕೃಷ್ಣ ಬಸ್ಸಿಂತಾಯ ವಿದ್ವಾಂ ಮತ್ತು ಮಂಗಳೂರು ರಾಮಚಂದ್ರಾಚಾರ್ಯ ಇವರಿಂದ ಸಂಪಾದಿಸಲ್ಪಟ್ಟ ನಂದನ ಸಂವತ್ಸರದ [1952-53] ಪಂಚಾಂಗ ಬೆಲೆ 0-6-0.

ವಿಶೇಷ ಸಂಚಿಕೆಗಳು

ನವಭಾರತ ಪ್ರಜಾಪ್ರಭುತ್ವ ಸಂಚಿಕೆ:-ಸಂಪಾದಕರು- ಶ್ರೀ ವಿ. ಎಸ್. ಕುಡ್ವರು, ಕುಡೆ. ಅಕಾಂದ 32 ಪುಟಗಳು ಬೆಲೆ 0-3-0 ಹಲವಾರು ಉತ್ತಮ ಲೇಖನ, ಚಿತ್ರಗಳಿಂದ ಸಂಚಿಕೆಯು ಉತ್ತಮವಾಗಿದೆ.

ಸರ್ವೋದಯ ಪ್ರಜಾ-ಪ್ರಭುತ್ವ ಸಂಚಿಕೆ—ಸಂಪಾದಕರು ಶ್ರೀ ಎನ್. ಎಸ್. ಕಲ್ಲೆ, ಫ್ಲಾಸ್ಟಾನ್ ಸೈಜಿನ 32ಪುಟಗಳು, ಬೆಲೆ 0-3-0 ಕೆಲವು ಲೇಖನ, ಕವನ, ಚಿತ್ರಗಳಿಂದ ಸಂಚಿಕೆ ಸಂಗ್ರಾಹ್ಯವಾಗಿದೆ.

ಯುಗಪುರುಷ ಪರ್ಯಾಯ ಸಂಚಿಕೆ—ಸಂಪಾದಕರು ಶ್ರೀಗಳಾದ ಕೆ. ಎ. ಉಡುಪ ಮತ್ತು ಎಸ್. ಎಲ್. ಎನ್. ಭಟ್ಟ, ಫ್ಲಾಸ್ಟಾನ್ ಸೈಜಿನ 60ಪುಟಗಳು ಬೆಲೆ 0-8-0 ಸಂಚಿಕೆಯು ಹಲವಾರು ಲೇಖನ ಕವನ, ಹಂಟಿಗಳಿಂದ ಕೂಡಿದ್ದು ಪ್ರತಿಯೊಬ್ಬರೂ ಓದಕಕ್ಕುದಾಗಿದೆ. ಅಂತರಂಗದಂತೆ ಬಹಿರಂಗವೂ ಮುದ್ದಾಗಿದೆ.

ಇತ್ತೀಚೆಗೆ ನ್ಯೂಸ್‌ಪ್ರಿಂಟ್ ಕಾಗದದ ಕೃಯವು ವಿಪರೀತವಾಗಿ ಏರಿದ್ದರೂ [ಯುದ್ಧ ಪೂರ್ವಕ್ಕಿಂತ ಸುಮಾರು 7-8 ಪಾಲು] ವಿಶೇಷ ಸಂಚಿಕೆಗಳನ್ನು ಹೊರಡಿಸಿದ ಮಂಗಳೂರಿನ ಪತ್ರಿಕೆಗಳ ಸಂಚಾಲಕರು ಅಭಿನಂದನೀಯರು.



UDIPI MUNICIPALITY

TENDER NOTICE

Fresh sealed tenders will be received by the undersigned at the Municipal Office, Udipi upto 4 P. M on 11-2-52 for the following work:

Name of the work	Estimate	Tender Deposit
Putting up 5 compost cisterns measuring 10′ × 6′ × 3½′ each & a thatched shed of 20′ × 10′	Rs. 2000/-	Rs. 100/-

Any further information required may be obtained from the Municipal Office during office hours on working days.

Municipal Office, Udipi,
Dt- 1—2—1952.

A S. D'Souza,
Commissioner.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ್ ಕಂಟ್ರೋಲ್** ರೋಗ ಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಜಲ್ಲದೆ ಸ್ತ್ರೀಯರ ಬಳಕೆರಿಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಖಿನ್ನೀರಿನಲ್ಲಿ ಸೇವಿಸಬೇಕು.

ಪತ್ಯ:—ಹಪ್ಪಳವನ್ನು ಕಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟೇಜ್ ಚಾರ್ಜು ೧೫ ಆಣೆ.

ಹೂಲಕರು:—ಹಾಳಪ್ಪಾ ಫಕೀರಪ್ಪಾ ಹಾವಣಗೇರಿ

ಆಯುರ್ವೇದ ಔಷಧಾಲಯ ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಶಾಮಣ್ಣ,—ಹುಬ್ಬಳ್ಳಿ, ಗಡಗ, ಬಾಗಲಕೋಟೆ ಧಾರವಾಡ ವಿಜಾಪುರ— ಹಾವಪ್ಪ ಸಿದ್ಧಪ್ಪಂಗಾಪ್ಪ ಧೂರವಾಡಕರ ರಾಜಾಪುರ ಸಂಜುಡೇಶ್ವರ ಮೂರ್ತಿ ಹಾವಣಗೇರಿ ಹಾ-ಹಾಗೇರಿ:—ಚಂದಿಷಗೇರಿ ಶ್ರೀನ್ಸ್ ಆರ್ ಎಲ್ ಕಮಲಾಪುರ ,ಕೆಮಿಸ್ಟ್, ಹಾವೇರಿ ಬ್ಯಾಡಗಿ

"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಬಾಣಂತಿಯರ ಸಲುವಾಗಿಯೇ ದೇಶ್ಯಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ದೋಷಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಧಾಗ್ಯಕಾಲಿಗಳಿಗೂ ಸುಲಭವಾಗಿರುವುದು.

ಇವರ
ನವಜೀವಾಮೃತ
ಎಂಬ
ಸೂತಿಕಾ ರಸಾಯನ

ಹೆಚ್ಚಿನ ವಿವರಗಳಿಗೆ—ಡಾ। ಯಂ. ವಿ. ಶಾಸ್ತ್ರೀ, ಎಲ್. ಐ
ಕೊಡಿಯಾಲಬೈಲ ಪೋಸ್ಟು, (ಮಂಗಳೂರು)
ಸ್ವಾಧಿಸ್ಥರು:—ಡಾ। ಬಿ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

S. C. No- 748/1951

ವಾದಿ—ಅಂತೈ ಸೆಟ್ಟಿ, ಹಾಡಿಮನೆ ದಾರಮ್ಮ ಸೆಟ್ತಿ ಮಗ, ಸಂಬ್ರ 39ನೇ ಹೊಸಾಳ ಗ್ರಾಮದವನು.

ಪ್ರತಿವಾದಿ—ಮಂಜಯ್ಯ ಸೆಟ್ಟಿ, ಮೇಲಮನೆ ವೆಂಕಪ್ಪ ಸೆಟ್ಟಿರ ಆಳಿಯ, ಯಡಾರು ಕುಸ್ಯಾಡಿ ಗ್ರಾಮದವನು.

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವದೇನೆಂದರೆ

ವಾದಿಯು ವಾದಿಯಾಗಿ ಮೇಲಿನ ಪ್ರತಿವಾದಿಯು ತಾರೀಕು 28-9-1948ರಲ್ಲಿ ರೂಪ್ಯಾ 50-0-0ಕ್ಕೆ ಬರಕೊಟ್ಟ ದಿವಾಣಾದು ನೋಟಿನ ಬಾಬ್ತು ಹಣ ಬಡ್ಡಿ ಕೂಡಾ ರುಪ್ಯಾ 58-3-6 ನ್ನು ಬರಪಡಿಕೊಳ್ಳುವರೆ ಪ್ರತಿವಾದಿಯ ಮೇಲೆ ದಾಖ್ಲು ಮಾಡಿದ ಮೇಲಿನ ದಾವೆಯು ತಾರೀಕು 19-2-1952ಕ್ಕೆ ಸದ್ರಿ ಕೋರ್ಟಿನಲ್ಲಿ ತಕ್ಕಾಗಿ ಯಿದೋಗಾಗಿಯಾದೆ. ಆ ಕಾರಣ ಅಕ್ಷೇಪಣೆಗಳಿದ್ದರೆ ತಪ್ಪದಿವ್ಸ ಮುಜ್ಜರು ಕೋರ್ಟಿನಲ್ಲಿ ಜ್ಞಾಪಿಸಲು ಮಾಡಿಕೊಳ್ಳಕ್ಕದ್ದು ಯೆಂಬ ಸಂಗ್ತಿ ಈ ಮೂಲಕ ತಿಳಿಯಪಡಿಸುತ್ತದೆ.

Kolkebail Soorappa Shetty,
Advocate for pleff

ಮೊಕ್ಕಾಂ ಕುಂದಾಪುರ ತಾ. 31-1-1952

ಮೂತ್ರಸ್ರಾವ ನಿಲ್ಲಿತು

ಚಿಕ್ಕಮಕ್ಕಳು ಹಿಡ್ಡಿಗಳನ್ನು ಉಪಯೋಗಿಸಿದರೆ ಹದಿಹರೆಯ ಹುಡುಗ-ಹುಡುಗಿಯರು, ಹಣ್ಣುಮುದುಕರು ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧೆಗಳೂ ಇಲ್ಲ. ಸಾಹಿರಾರು ಮಂದಿಗೆ ಪ್ರಾಪ್ತಿ ಗುಣವಾಗಿದೆ—ಬೆಲೆ; ರೂ. 3-1 ಸ್ಪೆಶಲ್ ರೂ. 5- ಅಧಿಕಾಧಿಕ ಸ್ಪೆಶಲ್ ರೂ. 8-[ವಿ. ಪಿ ಹಣ್ಣೆರಡಾಣೆ ಪ್ರತ್ಯೇಕ.]

Mrs. P. DEVEE, F. D8. (N. J.)
Tollygunge CALCUTTA.

ಪ್ರಾಪ್ತಿಸ್ಥರು ಶಕ್ತಿಕಾಂಪನಿ, ಮಂಗಳೂರು

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ಕಾಸ್ಯ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಿಪೇರಿ ಆಗಿ ಯೂಚಿಲ್ಲದೆಯಾಗಿಯೂ ದೊರೆಯುತ್ತವೆ.

ಕಲ್ಕಂಜೆ ವ್ಯಾಸಾಚಾರ್ಯ,
ರೆಥಬೀದಿ, ಉಡುಪಿ

ಪ್ರವಾಸಿಯ ಪತ್ರಗಳು ೨೩

ಕೋಲೋನ್ ನಗರವು ಈ ಮುಂಚೆ ನಾನು ಪ್ರಸ್ತಾಪಿಸಿದ್ದ ದೊಡ್ಡ ರ್ಯಾನ್ (Rhine) ನದಿಯ ಎರಡೂ ದಡದಲ್ಲಿರುವುದು. ಅದು ಜರ್ಮನಿಯ ಪಶ್ಚಿಮ ಭಾಗದಲ್ಲಿದೆ. ನದಿಯು ಇಲ್ಲಿ ಬಹಳ ಅಗಲ. ಅಂದರೆ ಸುಮಾರು ಒಂದು ಫರ್ಲಾಂಗ್ ಅಗಬಹುದು ನದಿಯ ಮೇಲೆ ರೈಲಿನ ದೊಡ್ಡ ಸಂಕ ಒಂದು ಕಡೆಯಲ್ಲಿ. ರಸ್ತೆ ಇರುವ ಸಂಕ ಇನ್ನೊಂದು ಕಡೆಯಲ್ಲಿ. ನಗರವನ್ನು 2ನೇ ಅದಿಕ್ಯವಾರ ಬೆಳಗ್ಗೆ ಸುಮಾರು 3 ತಾಸು ಸಮಯ ಸಂಚರಿಸಿದೆ. ಬಹು ದೊಡ್ಡ ಪಟ್ಟಣ. ಯೂಡಿಕೋಲೋನ್ (Eau-de-Cologne) ಎಂಬ ಪರಿಮಳ ದ್ರವ್ಯದ ಹೆಸರು ವಾಡಿಕರು ಕೇಳರಬಹುದು. ಅದರ ಹೆಸರು ಈ ನಗರದಿಂದಲೇ ಇದರ ಜನಸಂಖ್ಯೆ 5 ಲಕ್ಷ. ಇದ್ದಿ ವಸ್ತ್ರ ಬಟ್ಟೆ ಮತ್ತು ಉಣ್ಣೆ ವಸ್ತ್ರಗಳ ಕಾರ್ಖಾನೆಗಳು ಮೆಶಿನ್‌ಗಳು (ಯಂತ್ರಗಳು) ಪಿಂಗಾಣಿ (Porcelain) ಮೊದಲಾದ ಅನೇಕ ಕರದ ಸಾಮಾನುಗಳ ತೈಯಾರಿಕೆಗಳವೆ ಎಲ್ಲದಕ್ಕೂ ಪ್ರಸಿದ್ಧ ಇದ್ದಿ ಇರುವ ಕೆಥೊಲಿಕರ ಇಗರ್ಜಿ. ಜರ್ಮನಿಯು ಈ ಪ್ರದೇಶದಲ್ಲಿ ಕೆಥೊಲಿಕರು ಬಹುಸಂಖ್ಯಾತರು. ಈ ಇಗರ್ಜಿಯು ನಾನು ಈ ವರೆಗೆ ನೋಡಿದ ಎಲ್ಲಾ ಇಗರ್ಜಿಗಳಲ್ಲಿ ದೊಡ್ಡದು. ಅದರ ಅಂಗ ಒಡಿಯಲ್ಲಿ ನನ್ನ ಮಧುರ ವಿಮಾನಾಶ್ರಿ ದೇವಸ್ಥಾನದಂತೆ ಕೆಲವು ಅಂಗಡಿಗಳನ್ನು ಕಟ್ಟಿ ಅವರ ಚಂದದನ್ನು ತೆಡಿಸಿದ್ದಾರೆ. ಕಳೆದ ಯುದ್ಧ ಕಾಲದಲ್ಲಿ ಈ ನಗರಕ್ಕೆ ಸಾವಿರಾರು ಬೋಂಬುಗಳು ದಿನಸಕ್ಕೆ ಬಿದ್ದುಕಟ್ಟಿಡ್ರೋಣಗಳು ಸೇಕಡಾ 80ರಷ್ಟು ಪುಡಿ ಪುಡಿ ಆಗಿವೆ. ಈ ಇಗರ್ಜಿಗೆ ಕೂಡಾ ಬೋಂಬ್ ಬಿದ್ದು ಅದು ಇದೀ ಕೆಳಗೆ ಬೀಳದಿದ್ದರೂ ಅರ್ಧ ಬೀಳುವಂತಿದ್ದು ಅಲ್ಲಲ್ಲಿ ಕಲ್ಲಿನ ಕಂಬಗಳನ್ನಿಟ್ಟು ತಡೆದಿದ್ದಾರೆ. ಉಳಿದ ಅರ್ಧದಲ್ಲಿ ಇಗರ್ಜಿಯನ್ನು ಉಪಯೋಗಿಸುತ್ತಾರೆ. ನಾನು ಹೋದ ದಿನ ಅದಿಕ್ಯವಾರ ಬೆಳಿಗ್ಗೆ ಅದ ಕಾರಣ ಒಳಕ್ಕೆ 500 ಜನರಿದ್ದು ಪಾದ್ರಿಗಳ ಧರ್ಮಭೋದನೆಯು ಉತ್ಸಾಹದಿಂದ ನಡೆಯುತ್ತಿತ್ತು. ಜನರು ತಿಳಿಗೊಟ್ಟು ಸಶ್ರದ್ಧವಾಗಿ ಕೇಳುತ್ತಿದ್ದರು. ಜರ್ಮನ್ ಭಾಷೆಯೇ ಅನೇಕ ಕಠಿಣವಾದ ಸ್ವರಗಳಿಂದ ಕೂಡಿದ ಕಾರಣದಿಂದಲೋ ಅಥವಾ ಆ ಪಾದ್ರಿಗಳು ಕೈಹಾರಿಸಿ ಬಹು ಜೋರಿನಿಂದ ಹೇಳುವ ರೀತಿಯಿಂದಲೋ ಉಪನ್ಯಾಸವು ವಾಚಕಿಯ ಭಾಷಣದಂತೆ ನನಗೆ ಕಂಡಿತು. ಆ ಪ್ರಚ್ಛಿದ್ಧ "ಕ್ರಿಸ್ತರು" ಎಂಬ ಪದವು ಇದ್ದುದರಿಂದ ನಿಜವಾಗಿಯೂ ಅದು ಧರ್ಮ ಭೋದನೆಯೇ ಆಗಿರಬೇಕು. ಜರ್ಮನಿಯು ಈ ಅಂಶವನ್ನು ಈಗಲೂ ವಿಶ್ವರಾಜ್ಯಗಳ [Allies] ಸ್ವಾಧೀನವಿದ್ದ ಕಾರಣ ಈಗ ಇಲ್ಲಿ ಬೆಲ್ಜಿಯನ್ ಸೈನ್ಯವಿದೆ. ಈ ಇಗರ್ಜಿ ಎದುರು ನಾನು ಕೆಲವು ಸಮಯ ತಾಗ ಟೆನ್ನಿಸ್ ಇಂಗ್ಲಿಷ್ ಭಾಷೆ ಮಾತಾಡುವ ಒಬ್ಬ ಜರ್ಮನರು ನನಗೆ ಸಿಕ್ಕಿ ಜರ್ಮನಿಯ ಈಗಿನ ಸ್ಥಿತಿಗತಿಯ ವಿಷಯ ಸಂಭಾಷಣೆ ಮಾಡಿದರು. ರಷ್ಯದವರ ಮೇಲೆ ಅವರು ಬಹಳ ವಿರೋಧವಾಗಿದ್ದರು. ಅವರ ಸಂಭಾಷಣೆಯ ಸಾರಾಂಶ "ರಷ್ಯದವರು ಮನುಷ್ಯರಲ್ಲ; ಅವರು ಮೃಗಗಳು [beasts] ಕಳೆದ ಯುದ್ಧ ಕಾಲದಲ್ಲಿ ರಷ್ಯದ ಕೈಗೆ ಸಿಕ್ಕಿದ 1½ ಮಿಲಿಯ ಜರ್ಮನ ಸೈನ್ಯದವರ ಗತಿ ಈಗಲೂ ನನಗೆ ತಿಳಿದಿಲ್ಲ. ಅವರಲ್ಲಿ ಅನೇಕರು ಬಲಾತ್ಕಾರದಲ್ಲಿ ಗುಲಾಮರಾಗಿ ರಷ್ಯದಲ್ಲಿ ಕೆಲಸಮಾಡುತ್ತಿದ್ದಾರೆ ಅನೇಕರು ಸತ್ತರು ಅವರ ಪತ್ತೆಯೇ ಇಲ್ಲ ಈ ನಗರಕ್ಕೆ 1200 ಸಾರಿ ಬೋಂಬು ಬಿತ್ತು. 10,000 ಮನೆಗಳು [ಮೂರರಲ್ಲಿ ಎರಡಂಶ] ಇಲ್ಲಿ ಪುಡಿಯಾಯವು ಇಲ್ಲಿಯ ಜನರು ಪುನಃ "ಫ್ಯಾಸಿಸ್ಟ್" ತತ್ವಕ್ಕೆ ಸೇರಲಿಕ್ಕಿಲ್ಲ 1ನೇ ಮಹಾಯುದ್ಧದ ವರ್ಸಾಲ್ ಒಪ್ಪಂದದ ವಿಪರೀತ ಅನ್ಯಾಯದಿಂದ ಜರ್ಮನಿಯ ಜನರು ಹಿಟ್ಲರನ ಕಡೆಗೆ ಸೇರಿದರು". ಯುದ್ಧ ಕಾಲದಲ್ಲಿ ಇಲ್ಲಿ ಆಹಾರವಿಲ್ಲದೇ ಮಕ್ಕಳು ಅಬಲರಾಗಿ ಕಾಲು ಸಾಧಾರವಾಗಿ ನಡೆಯುವುದನ್ನು ಕಂಡೆ.

ಇಗರ್ಜಿಯ ಸಮೀಪವೇ ರ್ಯಾನ್ ನದಿ ಪರಿಯಂತ್ರದ ಅದರಲ್ಲಿ ಅನೇಕ ಸಣ್ಣ ಸಣ್ಣ ಸ್ಟೀಮರುಗಳು ದಡದಿಂದ ಪ್ರಯಾಣಕರನ್ನು ತೆಗೆದುಕೊಂಡು ಹೋಗುತ್ತಿದ್ದುವು ಸಮಿಪ ನಾನು ಮೇಲೆ ಬರೆದ ರೈಲುಹೋಗುವ ಸಂಕ ಇಗರ್ಜಿ, ನದಿ ಮತ್ತು ಬಿದ್ದ ಮನೆಗಳ ಫೊಟೋ ನಾನು ತೆಗೆದೆ ಈ ಊರಿನಲ್ಲಿ ಇನ್ನೂ ಕೆಲವು ಸಮಯ ಕಳೆಯಬಹುದಿತ್ತು. ಆದರೆ ಮಧ್ಯಾಹ್ನ ಗಂಟೆ 2ಕ್ಕೆ ಇಲ್ಲಿಂದ ಸುಮಾರು 300 ಮೈಲು ದೂರವಿರುವ ಬರ್ಲಿನ್ ನಗರಕ್ಕೆ ವಿಮಾನ ಮೂಲಕ ಹೋಗುವುದನ್ನು ಮುಂಚೆಯೇ ನಿಶ್ಚೈಸಿದಂತೆ ಗಂಟೆ 10-30ಕ್ಕೆ ನಗರವನ್ನು ಬಸ್ ಮೂಲಕ ಬಿಡಬೇಕಾಯಿತು ಇಲ್ಲಿನ ವಿಮಾನ ಹೊರಡುವ ನಿಲ್ದಾಣವು [Air-Port] ಸುಮಾರು 15 ಮೈಲು ದೂರ. ಹೋಗುವಾಗ ಕೆಲವು ದೂರ ಹಿಟ್ಲರನು ಮಾಡಿಸಿದ ಬಹಳ ಅಗಲವಾದ [Auto-bahn] ಎಂಬ ಸಿಮೆಂಟು ರಸ್ತೆಯಲ್ಲೇ ನಮ್ಮ ಬಸ್ಸು ಹೋಯಿತು ಈ ರಸ್ತೆಯು ಅವನು ಜರ್ಮನಿಯು ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಸಾವಿರ ಮೈಲಿಗೂ ಮಿಕ್ಕಿ ಮಾಡಿಸಿದ್ದನು. ಅದರ ಅಗಲ 100 ಗಜಕ್ಕೂ ಮಿಕ್ಕಿಬಹುದು ಒಂದು ಬದಿ ಹೋಗಲಿಕ್ಕೆ. ಇನ್ನೊಂದು ಬದಿ ಬರಲಿಕ್ಕೆ. ಮಧ್ಯ ಹುಲ್ಲು ಬೆಳೆದ ಜಾಗ.

ಸರಿಯಾಗಿ 12 ಗಂಟೆ ಮಧ್ಯಾಹ್ನಕ್ಕೆ ನಮ್ಮ ವಿಮಾನವು ಹೊರಟಿತು. ಇಲ್ಲಿಂದ ದಿನ ನಿತ್ಯ ಅನೇಕ ಜರ್ಮನ್ ಗಂಡಸರು ಮತ್ತು ಹೆಂಗಸರು ಬರ್ಲಿನ್ ಪಟ್ಟಣದಲ್ಲಿರುವ ತಮ್ಮ ನೆಂಟರಿಷ್ಟರನ್ನು ನೋಡಲಿಕ್ಕೆ ವಿಮಾನದ ಮೂಲಕವೇ ಹೋಗುವರು. ಇದರ ಕಾರಣವೇನೆಂದರೆ ಬರ್ಲಿನ್ ಜರ್ಮನಿಯ ಪೂರ್ವ ಉತ್ತರ ಭಾಗದಲ್ಲಿದ್ದು ಅದರ ಸುತ್ತಲೂ ಇರುವ ಪ್ರದೇಶವು ಈಗಲೂ ರಷ್ಯದ ಸೈನ್ಯದ ಆಧೀನವಿರುತ್ತದೆ. ಬರ್ಲಿನ್ ಪೈಕಿ ಪೂರ್ವಭಾಗ ರಷ್ಯದವರ ಕೈಯಲ್ಲೂ ಪಶ್ಚಿಮ ಭಾಗ ವಿಶ್ವರಾಜ್ಯಗಳಾದ ಬ್ರಿಟಿಷ್, ಫ್ರೆಂಚ್ ಮತ್ತು ಅಮೇರಿಕ ಈ ಮೂವರ ಕೈಯಲ್ಲೂ ಇದೆ ಹೀಗಿರುವಲ್ಲಿ ರೈಲಲ್ಲಿ ಈ ಜನರು, ಅಂದರೆ ಪಶ್ಚಿಮ ಮತ್ತು ದಕ್ಷಿಣ ಜರ್ಮನಿಯಲ್ಲಿರುವ ಜನರು ಹೋದರೆ ಅವರ ಹಾಸ್ತುವನ್ನು ತ್ರಿಪಕ್ಷದವರ ಕೈಯಲ್ಲಿರುವ ರೈಲಲ್ಲಿ ಹೋಗಬೇಕು ಹೀಗೆ ಹೋದಾಗ ಅನೇಕರನ್ನು ಅವರು ಹಿಡಿದು ಸೆರೆಮನೆಯಲ್ಲಿಟ್ಟಿರುವರಂತೆ ಅದಕ್ಕೆ ಹೆದರಿ ಬರ್ಲಿನ್‌ನಲ್ಲಿ ಇರುವ

ವಾರದ ಭವಿಷ್ಯ

ತಾರೀಕು 7-2-52 ರಿಂದ — ತಾರೀಕು 13-2-52 ವರೆಗೆ

ಮೇಷ—ಮನೋರೋಗಗಳು ಮಾಯವಾಗುವವು. ನಿಮ್ಮ ಪ್ರಯತ್ನಕ್ಕೆ ತಕ್ಕುದಾದ ಫಲಪ್ರಾಪ್ತಿಯಿವೆ. ಹಣದ ಅಡಚಣೆಯಿಂದ ಮುಕ್ತರಾಗಿ ಹಿಂದಿನ ಸಾಲ ಕಡಗ ಅನ್ನು ಕೂಡ ತೀರಿಸುವಿರಿ. ಶತ್ರುಜೀವಿಗಳಿಗೂ ವೈದ್ಯವ್ಯಾಪಾರಿಗಳಿಗೂ ಕಾಲವು ಅನುಕೂಲವಿಲ್ಲ. ಅಕಸ್ಮಿಕ ಪ್ರವಾಸದಿಂದ ನಿರೀಕ್ಷಿಸಿದುದಕ್ಕಿಂತ ಅಧಿಕ ವ್ಯಯಾನಾದೀತು. ಸತಿಪತಿಯರೊಳು ಮನಸ್ತಾಪ ಹುಟ್ಟಲಿದೆ. ವಾರಾಂತ್ಯದ 2 ದಿನಗಳು ಸುಬಲಾಧ ವಿಜಯದಾಯಿಗಳಾಗಿವೆ.

ವೃಷಭ— ಹೊರರ ಸಹಾಯವನ್ನು ಯಾಚಿಸದೆ ಧೈರ್ಯದಿಂದ ಮುಂದುಹೋಗಿರಿ. ನಿಮ್ಮ ಇಷ್ಟದಂತೆ ಕಾರ್ಯವು ಸಿದ್ಧಿಸಲಿದೆ. ಶತ್ರು ಜನರು ಮಿತ್ರರಾಗುವರು. ಖರ್ಚಿಗೆ ತಕ್ಕಷ್ಟು ಆದಾಯವಿರುವುದರಿಂದ ಹೊಸ ಬಿಕ್ಕಟ್ಟುಂಟಾಗದು. ಸಮಾಜದಲ್ಲಿ ಗೌರವಸ್ಥಾನವನ್ನು ಪಡೆವಿರಿ. ಲೇಸಾದೀತು ನಿಮಿತ್ತ ಕೆಲವೊಮ್ಮೆ ಕಲಹ ಸಂಭವಿಸಲಿದೆ ಸೇವಕರು ಮಕ್ಕಳು ಮೊದಲಾದವರು ನಿಮ್ಮ ಆಜ್ಞೆಯನ್ನು ತಿಕ್ರಮಿಸಲಿರುವರು. ತಾ. 9, 10 ರಲ್ಲಿ ನಿಮ್ಮ ಮನೋರಥವು ಫಲಿಸಲಿದೆ.

ಮಿಥುನ— ಬುಧನೋರ್ವನನ್ನುಳಿದು ಮಿಕ್ಕೆಲ್ಲಾ ಗ್ರಹರೂ ಸದ್ಯ ನಿಮಗೆ ಪ್ರತಿಕೂಲರಿರುವುದರಿಂದ ನಾನಾ ತರದ ವಿಘ್ನ ರಂಪರೆಗಳು ಮೇಲಿಂದ ಮೇಲೆ ಬರಲಿವೆ. ತಕ್ಕು ಜನರು ಪ್ರತೀಕಾರಸ್ವರಾಗುವರು. ಆಕ್ಸ್ಮಿಯರು ಮತ್ತು ಸತಿ ಸುತರಿಂದ ವಿರಹವುಂಟಾಗಲಿದ್ದು ಮನಸ್ತಾಪರೋ ಹೆದರಿದ ಹುಲ್ಲೆಯಂತೆ ಚಂಚಲವಾಗುವದು. ವ್ಯಾಪಾರ ವ್ಯವಹಾರಗಳಲ್ಲಿ ನಷ್ಟವಧಿಕವಾಗುವದು. ತಾ. 9, 10 ಈ ದಿನಗಳಲ್ಲಿ ಧನಮಾನಗಳಿಗಾಗಿ ಹಾನಿ ಸಂಭವಿಸೀತು.

ಕರ್ಕಾಟ— ಅನೇಕ ಸಮಯದಿಂದ ಸುಖಲೋಲುಪರಾಗಿ ವಿಹರಿಸುತ್ತಿದ್ದ ನಿಮಗೆ ಈ ವಾರವು ಸ್ವಲ್ಪ ಕಷ್ಟದಾಯಿಯಾಗಿ ಪರಿಣಮಿಸಲಿದೆ. ದುರ್ಜನರ ಸಹವಾಸದಿಂದ ಕಷ್ಟಪರಂಪರೆಗಳು ಪ್ರಾಪ್ತವಾಗುವವು. ಆರೋಗ್ಯವು ಕೂಡ ಸರಿಯಾಗಿರಲ್ಲದು. ಆದರೂ ಗುರ್ವನುಗ್ರಹವು ನಿಮಗೆ ಉತ್ತಮವಿರುವುದರಿಂದ ತಾ. 9, 10 ಈ ದಿನಗಳಲ್ಲಿ ಸಾಂಸಾರಿಕ ಸುಖ ಮಿತ್ರಜನರ ನೆರವು ಬಂಧುಗಳ ಸಹಕಾರವು ಲಭಿಸುವದು.

ಸಿಂಹ— ಗುರುಬಿಸ್ಯಾನಂತರ ಸುಖಂ ಎಂಬ ನಾಣ್ಣುಡಿಯಂತೆ ಹಲವು ಕಾಲದಿಂದ ಕ್ಲೇಶದುಃಖಗಳನ್ನನುಭವಿಸಿದ ನಿಮಗೀ ವಾರವು ಸುಖಶಾತಸದಾಯಿಯಾಗಿ ಪರಿಣಮಿಸಲಿದೆ. ನಿಮ್ಮ ಪ್ರತಿಯೊಂದು ಕೃತಿಯೂ ಸಫಲವಾಗುವದು. ಸಮಾಜದಲ್ಲಿ ಸ್ಥಾನಮಾನಗಳನ್ನು ಪಡೆವಿರಿ. ನೀಚ ಜನರಿಂದ ಧನಾಗಮವಾಗುವದು. ನಿಮ್ಮದ್ಯೋಗಿಗಳೂ ಕೂಡ ಸದುದ್ಯಮದಲ್ಲಿ ಕಾಲ ಕಳೆವರು. ತಾ. 7, 8, 11, 12, 13 ಈ ದಿನಗಳು ಇಷ್ಟ ಸಾಧಕಗಳಾಗಿವೆ.

ಕನ್ಯಾ— ನಿಮ್ಮ ಪಾರ್ಶ್ವ ವೆಚ್ಚಗಳು ಉತ್ಪತ್ತಿಯ ದ್ವಿಗುಣವಿರುವುದರಿಂದ ದಿನ ಯಾಪನೆಯು ಕಷ್ಟವಾದೀತು. ರಾಜಕೀಯ ಜನರ ಪೀಡೆಗೊಳಗಾಗುವಿರಿ. ಪಿತೃದೋಷ ವಿಕಾರದಿಂದಾಗಿ ಆರೋಗ್ಯವೂ ಕೆಡಲಿದೆ. ಸಂಸಾರದಲ್ಲಿ ಇಲ್ಲಸಲ್ಲದ ಕಲಹಗಳುದ್ಭವಿಸುವವು. ಸ್ವಜನವಿರಹ ಪ್ರವಾಸಗಳಿಂದ ಸಂತ ಪ್ತರಾದ ನಿಮಗೆ ವಾರದಿಯ 4 ದಿನಗಳು ಸ್ವಲ್ಪಸುಖ ನೆಮ್ಮದಿಯನ್ನೀಯುವವು.

ತುಲಾ— ಕಳೆದ ವಂಕ್ಯೆಂತ ಈ ವಾರವು ನಿಮ್ಮ ಭಾಗ್ಯಕ್ಕೆ ಸ್ವಲ್ಪ ಉತ್ತಮವಿರುವದು. ಬಂಧು ಜನರ ಸಹಕಾರದಿಂದಾಗಿ ಕಲಹೊಂದು ಕಾರ್ಯಗಳು ನಿಮ್ಮಂತೆ ಕೊನೆಹೊಂದಲಿವೆ. ಆದರೆ ವಿರೋಧಿಗಳು ನಾನಾ ತೆರನಾಗಿ ಪೀಡಿಸುವರು. ಅನಿರೀಕ್ಷಿತವಾದ ಅನರ್ಥಗಳು ಪ್ರಾಪ್ತವಾಗಲಿವೆ. ನೌಕರ ವ್ಯಾಪಾರಾದಿಗಳಲ್ಲಿ ಶ್ರಮಕ್ಕೆ ತಕ್ಕ ಫಲ ಲಭಿಸುವದು. ವಾರಾಂತ್ಯದ 5 ದಿನಗಳು ಹೆಚ್ಚು ನಂಶ ಅನುಕೂಲವಿರುವವು

ವೃಶ್ಚಿಕ— ರಕ್ತ ಭೃತ್ಯಾದಿ ಗೃಹಪಂಚಾರಗಳಲ್ಲಿ ಏನೊಂದೂ ಕೊರತೆಯಿರಲಾರದು. ಪ್ರತಿಯೊಂದೂ ಕಾರ್ಯಗಳಲ್ಲೂ ಫಲವು ನಿರೀಕ್ಷೆಗಿಂತಲೂ ಅಧಿಕ ಲಭಿಸಲಿದೆ. ವಿದ್ಯೋಪಜೀವಿಗಳಿಗೂ ಸೇವಕ ವರ್ಗದವರಿಗೂ ಸ್ವಕಾರ್ಯದಲ್ಲಿ ಅಧಿಕ ಫಲಪ್ರಾಪ್ತಿಯಿದೆ. ಪಿತೃದೋಷದಿಂದ ಆರೋಗ್ಯಕ್ಕೆ ಸ್ವಲ್ಪ ಧಕ್ಕೆ ತಗಲೀತು, ನಿದ್ರಾಭಾವ ದುಃಸ್ವಪ್ನಾದಿಗಳೂ ಕಾಣಿಸುವವು. ಸಾಂಸಾರಿಕ ತಾಪತ್ರಯಗಳಿಂದ ಮುಕ್ತರಾದ ನಿಮಗೆ ವಾರಾಂತ್ಯದ 3ದಿನಗಳು ಸುಖಕರವಾಗಿ ಪರಿಣಮಿಸಲಿವೆ.

ಧನು—ಸುಖದ: ಲಾಭನಷ್ಟಗಳು ನಿಮಗೀವಾರದಲ್ಲಿ ಸಮಾನವಾಗಿವೆ. ಆತ್ಮೋಪಭೋಗಕ್ಕೆ ಬೇಕಾದ ವಸ್ತುವಡವೆಗಳು ಅನಾಯಾಸದಿಂದ ಲಭಿಸುವವು. ಜನರಿಂದ ಗೌರವಾದರಗಳೂ ಹಲವಾರು ತೆರದಿಂದ ಧನಲಾಭವೂ ಆಗಲಿದೆ. ಆದರೆ ಬಂಧು ವರ್ಗದವರಿಂದುಂಟಾದ ಮನಸ್ತಾಪವು ನಿಮ್ಮ ಮನೋರೋಗವನ್ನು ಹೆಚ್ಚಿಸಲಿದೆ. ಅಪ್ರೇಕ್ಷರಲ್ಲೂ ಅವಿಶ್ವಾಸವುಂಟಾಗುವದು. ವಾರಾಂತ್ಯದ 4 ದಿನಗಳು ಧನಮಾನ ವಸನದಾಯಿಗಳಾಗಿವೆ.

ಮಕರ— ನಿಮ್ಮ ಅದೃಷ್ಟವಿಂದೀಗ ಬಹಳ ಕೆಟ್ಟಿರುವದು. ಅಪಜೈವೂ ಕೂಡ ವ್ಯಯವಾಗಿ ದಿನದ ಖರ್ಚಿಗಾಗಿ ಹೊರರ ಕೂಡಿ ಸಾಲ ಮಾಡುವ ಪ್ರಸಂಗ ಬರಲಿದೆ. ಧರ್ಮಕರ್ಮಗಳಲ್ಲಿ ಅನಾದರ ಗುರುಹಿರಿಯರಲ್ಲಿ ತಿರಸ್ಕಾರ ಬುದ್ಧಿಯು ಹೆಚ್ಚುವದು. ಹೃದ್ರೋಗದಿಂದ ಸದಾ ಪೀಡಿತರಾಗುವಿರಿ. ಸ್ವಾನ ಚಲನೆ ಕಾರ್ಯಹಾನಿ ಇತ್ಯಾದಿಗಳಿಂದ ದುಃಖಿತರಾದ ನಿಮಗೆ ತಾ. 7, 8, 9, 10 ಈ ದಿನಗಳಲ್ಲಿ ದೀದ ದುನಸ್ಸುಗಳಿಗೆ ಸ್ವಲ್ಪ ಸುಖ ನೆಮ್ಮದಿ ದೊರಕೀತು.

ಕುಂಭ— ಈ ವಾರವು ನಿಮಗೆ ಹಿಂದಿನಂತೆ ಹಿಚ್ಚಿನ ಅನುಕೂಲವಾಗಿಲ್ಲವು. ಅದಾಯಕ್ಕಿಂತ ಅಧಿಕ ವ್ಯಯವಾಗುವದು. ವಾತ ಪಿತ್ತಕಫ ಪ್ರಕೋಪದಿಂದ ದೇಹದಲ್ಲಿ ಅನಾರೋಗ್ಯವು ತಲೆದೋರೀತು. ವಾತ್ಸಲ್ಯದಲ್ಲಿ ಧಾರ್ಬಲ್ಯವೂ ಹೆಚ್ಚುವಿದೆ. ಗೃಹಚ್ಛಿದ್ರಗಳಿಂದಾಗಿ ಮನೆಯಲ್ಲಿ ಅವ್ಯವಸ್ಥೆಯುಂಟಾಗಲಿದೆ. ಆದರೂ ವ್ಯಾಪಾರ ವ್ಯವಹಾರ ಉದ್ಯೋಗಾದಿಗಳಲ್ಲಿ ಫಲಪ್ರಾಪ್ತಿಯು ತೃಪ್ತಿಕರವಾಗಿರುವದು. ವಾರಾಂತ್ಯದ 5ದಿನಗಳು ಸ್ವಲ್ಪ ಉತ್ತಮವಿರುವವು.

ಮೀನ— ಯಾವೊಂದು ಉದ್ಯಮವನ್ನೂ ಸಾಧಿಸಲು ನಿಮ್ಮಲ್ಲಿ ಸಾಕಷ್ಟು ಧೈರ್ಯ ಸಾಹಸಗಳಿಲ್ಲವು. ವಿಶೇಷತ: ಶತ್ರುಜನರಿಂದ ಹಲವಾರು ತೆರದ ಪೀಡೆಗಳೂ ಸಂಭವಿಸಲಿವೆ ಶ್ರಮಜೀವಿಗಳಿಗೂ ವ್ಯಾಪಾರಿಗಳಿಗೂ ದಿನಯಾಪನೆಯು ಕಷ್ಟಸಾಧ್ಯವಾದೀತು. ಆದರೂ ನಿಮ್ಮ ಪ್ರಯತ್ನಕ್ಕೆ ತಕ್ಕುದಾದ ಫಲವು ಲಭಿಸಲಿದೆ. ಮಿತ್ರಜನರ ನೆರವು ಸಾಕಷ್ಟಿರುವುದು. ವಾರಾಂತ್ಯದ 3ದಿನಗಳಲ್ಲಿ ಗೃಹಸುಖ ಯಾನಮಾನಗಳು ಲಭಿಸುವವು-

---

● ತೃಪ್ತಿಕರವಾದ ವಸತಿ — ಹಿತಕರವಾದ ಊಟ

● ರುಚಿಕರವಾದ ಉಸಾಹಾರ ಇವುಗಳಿಗೆ

ಉಡುಪಿಯ ಆದರ್ಶ ನಿಲಯವೆಂದರೆ

ವುಡ್ ಲೇಂಡ್ಸ್

ಊರ ಪರವೂರ ಸನ್ಯಾನ್ಯ ಸದ್ಭಹಸ್ಥರಿಂದ ಮುಕ್ತಕಂಠದಿಂದ ಹೊಗಳಿಸಿಕೊಂಡ ನವ್ಯ ಹೋಟೆಲಿಗೇ

ಎಂದೆಂದೂ ನಿಮ್ಮ ಸಂದರ್ಶನವೀಯಲು ಮರೆಯದಿರಿ.

ಯಾತ್ರಿಕರಿಗೂ, ಪ್ರಯಾಣಿಕರಿಗೂ ಸರ್ವ ಅನುಕೂಲತೆಯಾಗುವಂತೆ

ನಗರದ ಕೇಂದ್ರ ಭಾಗದಲ್ಲಿದೆ.

WOODLANDS

Highclass Boarding & Lodging, **UDIPI S. Kanara**

ಸರ್ ಜೀವನ್ ಶಿಲಾಜಿತ್ ಲೇಹ್ಯ

ಶಿಲಾಜಿತ್ ಹಿಮಪಾಲಯ ಸರ್ವತದಿಂದ ತೆಗೆಯಲ್ಪಡುವಂಥ ಅಪೂರ್ವ ವಸ್ತು, ಔಷಧಿಗಳ ರಾಜ; ಶಿಲಾಜಿತ್ತನ್ನು ಮೂಲಿಕೆಗಳೊಡನೆ ಸೇರಿಸಿ ಲೇಹ್ಯ ಮಾಡಿದೆ.



ಇದರ ಸೇವನೆಯಿಂದ ದೇಹ ಪುಷ್ಟಿಯೂ ಶಕ್ತಿಯೂ ಉಂಟಾಗುತ್ತದೆ. ಮುಖ್ಯವಾಗಿ ಹೊಟ್ಟೆನೋವು, ಅನ್ನ ಸೇರದಿರುವಿಕೆ ಇವೇ ಮೊದಲಾದ ರೋಗಗಳಿಗೆ ಒಂದೆರಡು ದಿನಗಳಲ್ಲಿಯೇ ಗುಣಕೊಡತಕ್ಕ ಔಷಧವಿದು ಕೆಮ್ಮು, ಬಾಸ, ಪಮ್ಮು, ಮೂಲ ಒಳಮೂಲ, ರಕ್ತಮೂಲ, ಬಸುಪು ಮೂತ್ರ, ಹೊಟ್ಟೆಯಲ್ಲಿ ಗಡ್ಡೆಇರುವಿಕೆ ಮತ್ತು ವಾಯುವಿನಿಂದ ಉಂಟಾಗತಕ್ಕ ಸರ್ವ ವ್ಯಾಧಿಗಳಿಗೂ ದಿವ್ಯೌಷಧ. ವಿದ್ಯಾರ್ಥಿಗಳು ಸೇವಿಸುವುದರಿಂದ ಜ್ಞಾಪಕಶಕ್ತಿಯೂ ಮತ್ತು ಚಟುವಟಿಕೆಯೂ ಹೆಚ್ಚುತ್ತೆ. ವೃದ್ಧರು ಸೇವಿಸುವುದರಿಂದ ಶಕ್ತಿಯನ್ನು ಹೆಚ್ಚಿಸಿ; ಧಾರ್ಢ್ಯವನ್ನುಂಟುಮಾಡುತ್ತೆ.

ಹೆಂಗಸರಿಗೆ—ಅಕ್ಕಮ ಬಹಿಷ್ಪೆ, ಕೈಕಾಲು ಹಿಡಿತ, ಕೀಲುವಾಯು, ಪಕ್ಕಶೂಲೆ ಮತ್ತು ಉಷ್ಣದಿಂದಾಗುವ ಇತರ ರೋಗಗಳಿಗೆ ದಿವ್ಯೌಷಧ. ದುರ್ಬಲರಾಗಿ ಕೇವಲ ಕೃಶರಾಗಿರುವ ತಿರುಗಳಿಗೆ ಈ ಔಷಧದನ್ನು ಪ್ರತಿ ಬೇಗ್ಗೆ, ಸಂಜೆ ಕೊಟ್ಟರೆ ಸ್ವಲ್ಪ ಕಾಲದಲ್ಲಿಯೇ ದೃಢಾಂಗರಾಗುವರು. ಹೀಗೆ ಮುಂಗಡ.

ಳಳ ದಿನದ ಲೇಹ್ಯಕ್ಕೆ ರೂ. ೫-೪-೦ (ಪೋಸ್ಟೇಜು ಮಾಫಿ)

೨೨ ದಿನದ ಲೇಹ್ಯಕ್ಕೆ ರೂ ೩-೪-೦ (ಪೋಸ್ಟೇಜು ಮಾಫಿ)

ಎಲ್ಲಾನೋವುಗಳಿಗೂ ಅದ್ಭುತಶಕ್ತಿಪ್ಪ ಗುಣಕಾರಿ:

ಮೆಂಥ್ಯಾಲ್ ಕೋನ್‌ಗಳು

(MENTHYAL CONES)

ಎಲ್ಲಾ ವಿಧವಾದ ಶೈತ್ಯದಿಂದಾಗಲೀ, ಉಷ್ಣದಿಂದಾಗಲೀ ಸಂಭವಿಸುವ ತಲೆ ನೋವು, ತಲೆತಿರುಗುವಿಕೆ, ಬುದ್ಧಿ ಮಾಂದ್ಯ, ಕಣ್ಣುರಿ, ದೇಹಾಧ್ಯಂತ ಕೀಲುಗಳ ನೋವುವಾಯುನೊವು ಮತ್ತಿತ್ಯಾದ ವಿಧವಾದ ನರಗಳ ನೋವಿಗೂ ತಕ್ಷಣದಲ್ಲಿಯೇ ಗುಣವನ್ನು ಕೊಡುತ್ತದೆ. ೧ ಕೋನು ೧೦೦೦ ಸಲ ಉಪಯೋಗಿಸಬಹುದು.

೧ ಪ್ಯಾಕೆಟ್ ರೂ. ೩—೧೫—೦

೨ ಪ್ಯಾಕೆಟ್ ರೂ. ೬—೮—೦

೫ ಪ್ಯಾಕೆಟ್ ರೂ. ೯—೦—೦

(ಪೋಸ್ಟೇಜ್ ಮಾಫಿ)

ನೀಲಿಗಿರಿ ಡಿಪೋ, ಅಕ್ಕಿಪೇಟೆ ಚೌಕ, ಬೆಂಗಳೂರು ಸಿಟಿ-

ಕುದ್ದ ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪೋದಿನಲ್ಲಿ ಕೇಳಿ

ಮೈಸೂರು ಶ್ರೀಮನ್ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ ಖಾಸ್‌ವೈದ್ಯ ಅಂಬಳೆ ನರಸಿಂಹ ಪಂಡಿತರ ಮನೆತನ

ಎ ರಾಮಸ್ವಾಮಿ ಅಯ್ಯಂಗಾರವರ

ಸಂತಾನ ಸಿಂಧೂರ

ಬಹಿಷ್ಕೆ ಸಂಬಂಧದ ಹೊಟ್ಟೆನೋವು ಉಂಟು. ಮಕ್ಕಳಿಲ್ಲ, ಇಂಥವರಿಗೂ ಮತ್ತು ಬಹಿಷ್ಕೆ ಸಂಬಂಧದ ಹೊಟ್ಟೆನೋವಿನ ಜೊತೆಗೆ ತಲೆನೋವು, ನಡುಕಳಿಕೆ, ಬೆನ್ನು ನೋವು, ಆಡೀರ್ಣ, ಕೆಮ್ಮು, ಸಿದ್ರಾಭಂಗ, ಜುಗುಪ್ಸೆ ಇತ್ಯಾದಿ ಗುಪ್ತವ್ಯಾಧಿಗಳಿಗೂ

ಗ್ಯಾರಂಟೀ ಔಷಧ.

ಮೂರು ದಿನಪಗಳಲ್ಲಿ ಈ ಹೊಟ್ಟೆನೋವು ಗುಣವಾಗಿ ಜಾಗ್ರತೆ ಸಂತಾನ ಫಲ ಬೇಕಾದರೆ ಮೇಲ್ಕಂಡ ಸಿಬ್ಬಾಷಧಿ ಒಂದು ಸೆಟ್ ಅನುಪಾನ ಪತ್ರಿಕೆ ಮೇರೆ ಇಲ್ಲದೂ ಸೇವಿಸಿ ೦ ಸಾಕು. ಶೋಭನವಾದ 15-16 ವರ್ಷ ಮಕ್ಕಳಿಲ್ಲದವರೂ ಮಕ್ಕಳಾಗಿವೆ. ಅನೇಕ ಪ್ರಶಂಸಾಪತ್ರಗಳನ್ನು ಪಡೆದಿದೆ.

ಕ್ರಯ:— ಒಂದುಸೆಟ್ 5ರೂ. ಪ್ಯಾಕಿಂಗ್ ಮತ್ತು ಟಪಾಲು ಖರ್ಚು 1ರೂ ವಿ. ಪಿ. ಇಲ್ಲ. ಕ್ಯಾಟಲಾಗ್ ಉಚಿತ 6ರೂ. ಮನಿ ಆರ್ಡರ್ ಮಾಡಿರಿ. ಕೂಡ್ಲ ರಜಿಸ್ಟರ್ ಪಾರ್ಸಲ್ ರವಾನೆ.

ವಿಳಾಸ:—

ಎ. ರಾಮಸ್ವಾಮಿ ಅಯ್ಯಂಗಾರ್ ಸನ್ಸ್,

1) ಅಂಬಳೆ ಪೋಸ್ಟು, ಯಳಂದೂರು ತಾ ಲೂಕು ಮೈಸೂರು ಡಿಸ್ಟ್ರಿಕ್ಟ್.

ಅಥವಾ 269 ಸೋನಾರ್ ಸ್ಟ್ರೀಟ್, ದಿವಾನ್ಸ್‌ರೋಡು, ಮೈಸೂರು.

Edited, Printed & Published By K. H. Shetty at the Navayuga Press, Udipi, S India.

Regd.No. M. 3618

LICENCE No. 31
Licensed to Post without Prepayment

ESTD. 1921 ಸ್ಥಾಪನೆ

14—2—1952

Founder: Sri A. B. Shetty,
Minister for Agriculture & Veterinary

ನವಯುಗ
ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ವಾರಪತ್ರಿಕೆ.

ಕೃಷಿಮಂತ್ರಿ ಶ್ರೀ.ಎ.ಬಿ ಶೆಟ್ಟರಿಂದ ಸ್ಥಾಪಿತವಾದುದು.



ನವಯುಗ
ಉಡುಪಿ, ದ.ಕ.

ವಾರ್ಷಿಕ ಚಂದಾ
ರೂ. 5-12-0
6 ತಿಂಗಳಿಗೆ
ರೂ. 3-0-0
ಬಿಡಿ ಪ್ರತಿಗೆ
0-2 0

ವರ್ಷ ೩ರಿ ವಾರ ೨೩

NAVAYUGA WEEKLY Post Box No. 22 UDIPI.

Vol 3 : No. 23

"ಧನವಂತರು ತನ್ನ ಅಸ್ತಿಪಾಸ್ತಿಗಳನ್ನು ಸ್ವಂತ ಸುಖಭೋಗಾಭಿಲಾಷೆಗಳಿಗಾಗಿ ಉಪಯೋಗಿಸುವರೋ, ಸ್ವಾರ್ಥತ್ಯಾಗಿಗಳಾಗಿ ಜನಸೇವೆಗಾಗಿ ಬಳಸುವರೋ ಎಂಬುದನ್ನು ದೇವರು ಪರೀಕ್ಷಿಸುತ್ತಿದ್ದಾನೆ"

ಸೇವೆ ಮತ್ತು ಅಧಿಕಾರ

"ಹಸಿ ನೀರುಗಳಂತೆ ಭೂಮಿಯನ್ನು ದೇವರು ಜನಸಮೂಹಕ್ಕಾಗಿ ದಯಪಾಲಿಸಿದ್ದಾನೆ-ಭೂಮಾತೆಗೆ ಸರ್ವರೂ ಮಕ್ಕಳು"

ದೇಶದ ಸ್ವಾತಂತ್ರ್ಯಕ್ಕಾಗಿ ತಮ್ಮ ಆಯುಷ್ಯಾಸುಲನ್ನು ಕಳೆದು ಶ್ರೇಷ್ಠ ನಾಯಕರು-ಇಲ್ಲವೆ ದೇಶ ಸೇವಕರು ಆಗಿರುವರು. ಅವರಲ್ಲಿ ಹಲವರುಮಂತ್ರಿಗಳೋ-ಇನ್ನಿತರಅಧಿಕಾರಿಗಳೋ ಆಗಿದ್ದಾರೆ. ಇಪ್ಪತ್ತೀರ್ಘ ಕಾಲ ಅವರು ದೇಶಕ್ಕಾಗಿ ಸಲ್ಲಿಸಿದ ಸೇವೆ ಅತ್ಯಮೂಲ್ಯವಾದುದು. ಅಧಿಕಾರ ಪ್ರಾಪ್ತವಾದ ಮೇಲಾದರೂ ಅವರೇನೂ ಸಮಿಗಳಾಗಿರುವದಿಲ್ಲ! ತನ್ನ ತಮ್ಮ ಕಾರ್ಯಗಳಲ್ಲಿ ಜಾಗ್ರತೆ ವಹಿಸಿ ರಾಜ್ಯ ಭಾರವನ್ನು ವಹಿಸುತ್ತಲಿದ್ದಾರೆ. ಜನದ ದೃಷ್ಟಿಯಲ್ಲಿ ಇವರು ಅಧಿಕಾರಿಗಳು ಎನುವ ಒಂದು ಕ್ರೂರ ಕಲ್ಪನೆ ಯಾವ ಕಾರಣದ ಮೇಲೋ ಏನೋ ಬೆಳೆದು ಬಂದಿದೆ.

ಸೇವಕನಾಗಿರುವವನು ಅಧಿಕಾರಿಗಿಂತ ತುಸು ಭಿನ್ನ. ಸೇವಕ ವಸ್ತುತೀತ-ಜಾತ್ಯತೀತ ವ್ಯಕ್ತಿಯಾಗಿದ್ದುಕೊಂಡು ತನ್ನ ಕೈಲಾದ ಸೇವೆ ಸಲ್ಲಿಸುವನು ಒಂದು ವೇಳೆ ತನ್ನ ಕಾರ್ಯ ಫಲಿಸದೆ ಹೋದರೆ ಅದರ ಬಗ್ಗೆ ಯಾರೂ ತಕರಾರು ಎತ್ತಲು ಸಾಧ್ಯವಿಲ್ಲ. ಅಂತಹ ಹೊಣೆಯನ್ನು ಅವನು ಹೊರುವದೂ ಇಲ್ಲ; ಜನತೆಯಾದರೂ ಅವನ ಮೇಲೆ ಹೇರುವದಿಲ್ಲ. ಆದರೆ ಅಧಿಕಾರಿಯ ಮಟ್ಟಿಗೆ ಹಾಗಲ್ಲ. ಅಧಿಕಾರಿ ಎಂದರೆ ವಿಶಿಷ್ಟವಾದ ಒಂದು ಹಂಗಡದ ಪ್ರತಿನಿಧಿ ಎನ್ನುವ ಕಲ್ಪನೆ ನಮ್ಮಲ್ಲಿ ಬೇರೂರಿಬಿಟ್ಟಿದೆ. ಯಾವ ಪಕ್ಷವೇ ಆಳಲಿ; ಯಾವ ಪಕ್ಷದ್ಯಾರೆ ಅಧಿಕಾರವಿರಲಿ-ಸರಕಾರ ವಿರಲಿ- ರಾಜ್ಯಭಾರ ಕೃಮದಂತೆ ತನ್ನ ಕರ್ತವ್ಯವನ್ನು ನಡೆಸುವದು ಪ್ರತಿಯೊಬ್ಬ ಅಧಿಕಾರಿಯ ಕರ್ತವ್ಯವಾಗಿರುತ್ತದೆ. ತನ್ನ ಪಾಲಿನ ಕರ್ತವ್ಯವನ್ನು ಒಳ್ಳೆಯ ಪ್ರಾಮಾಣಿಕತನದಿಂದಲೂ ದಕ್ಷತೆಯಿಂದಲೂ ನಡೆಸುವದು ಮುಖ್ಯವಾಗಿದೆ. ಇದು ಆತನ ಉದ್ಯೋಗವೆಂದು ನಾವು ಹೇಳುವದಾದರೂ ಇದರಲ್ಲೂ ಕರ್ತವ್ಯನಿಷ್ಠೆಯೆಂಬುದು ಒಂದು ಒಗೆಯೇ ಎನ್ನಬೇಕು. ತನ್ನ ಅಧಿಕಾರ ಸೇವೆಯನ್ನು ಮೀರಿ ಸ್ವಾರ್ಥ— ಜಾತೀಯತೆ- ಪಕ್ಷಪಕ್ಷಪಾತ ನಡೆಸಿದರೆ ಸಾರ್ವಜನಿಕರಿಗೆ ಅವನಿಗೆ ಕೇಡು ಬಗೆದಂತಾಗುತ್ತದೆ. ಏಕೆಂದರೆ ಅವನು ಅಧಿಕಾರಿಯಾಗಿ ಕಂಡರೂ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಜನತೆಯ ನೆನ್ನು ಸೇವಕನೇ ಆಗಿರುವನು. ಅವನು ಅಧಿಕಾರ ವಹಿಸಿರುವದು ಜನತೆಯ ಹಿತಕ್ಕಾಗಿಯೇ ಹೊರತು ದಬ್ಬಾಳಿಕೆ ನಡೆಸುವುದಕ್ಕಾಗಲೀ- ಹಿಂಸೆ ಕೊಡುವದಕ್ಕಾಗಲೀ ಅಲ್ಲ! ಇದನ್ನು ಅಧಿಕಾರ ವರ್ಗದಲ್ಲಿರುವ ಸಾರ್ವಜನಿಕರೂ ಜೆನ್ನಾಗಿ ಅಂಕಿಕೊಳ್ಳಬೇಕಾಗಿದೆ ಏಕೆಂದರೆ ಇಂದೂ ಎರಡೂ ಬಗೆಯ ಚಿತ್ರಗಳು ನಮಗೆ ಕಾಣಸಿಗುವದುಂಟು!

ಅಧಿಕಾರಿಯು ತನ್ನ ಕಾರ್ಯಕ್ಷೇತ್ರದಲ್ಲಿ ಒಂದು ಬಗೆಯ ಶಿಸ್ತು ಕಟ್ಟುಪಾಡಿಗೆ ಬದ್ಧನಾಗಿರುತ್ತಾನೆ. ಇದನ್ನು ಮೀರಿ ಆತ ವ್ಯವಹರಿಸುವುದು ಸರಿಯಲ್ಲ. ಹಲವು ವೇಳೆ ಇಂತಹ ಕಟ್ಟನ್ನು ಮುರಿಯುವ ಸಂದರ್ಭಗಳು ಬಂದಿದರೂ ಆತನು ತನ್ನ ನಿರ್ಧಾರವನ್ನು ಬದಲಿಸುವಂತಿಲ್ಲ. ನ್ಯಾಯದಾನ ಮಾಡುವದಾಗಲೀ- ಇಬ್ಬರೂ ಒಂದೇ ವಿಷಯದ ಮೇಲೆ ಸ್ಪರ್ಧೆಗೆ ನಿಂತಾಗ ಅಂತಹದರಲ್ಲಿ ನ್ಯಾಯಪಕ್ಷಪಾತಿಯಾಗಿ ಯಾರಾದರೂ ಒಬ್ಬನ ಕೇಳಿಕೆಯನ್ನು ಮನ್ನಿಸುವದಾಗಲೀ ಆವನ ಕರ್ತವ್ಯ. ಇಂತಹ ಅಧಿಕಾರ ಧರ್ಮವನ್ನು ಸಾರ್ವಜನಿಕರಾದ ನಾವು ಮೆಚ್ಚಬೇಕಾಗಿದೆ. ಸರ್ಕಾರಿಗೂ ಸಮ್ಮತವಾಗುವಂತೆಯೂ—ಮೆಚ್ಚಿಸುವಂತೆಯೂ ಅವನು ಯತ್ನಿಸುವದು ಸಾಧ್ಯವಿಲ್ಲ. ತನ್ನ ಕರ್ತವ್ಯವನ್ನು ಪರಿಪಾಲಿಸುವದಷ್ಟೇ ಅವನ ಕರ್ತವ್ಯ! ನಮಗೆ ಬೇಕಾದ ಕಾರ್ಯ ಅವನಿಂದ ನಮಗೆ ಆಗದೆ ಹೋದರೆ ಅದಂಲಿ ಕಾಯದೆ ದೋಷವಿದೆಯೋ ಎಂದು ಮೊದಲು ನೋಡಿಕೊಳ್ಳಬೇಕು. ತಮಗೆ ಆಗಿಲ್ಲವೆಂಬ ಒಂದೇ ಕಾರಣದ ಮೇಲೆ ಅಧಿಕಾರದ ದುರುಪಯೋಗ ಜನತೆಯಾಬರೆದು. ಸ್ವಾರ್ಥದ ಆಶೆ ಎರಡು ಕಡೆಯಲ್ಲೂ ನಾಶವಾಗಬೇಕು. ಅಂದಾದೀನೇ ಪರಸ್ಪರ ವಿಶ್ವಾಸ ಬೆಳೆಯುವದು. ಅಧಿಕಾರ ಹಾಗೂ ಸೇವೆಯ ಕುರಿತು ತಪ್ಪು ಕಲ್ಪನೆ ಉಳಿಯಲಾರದು.

ಅಧಿಕಾರಿಗಳನ್ನೂ-ಅಧಿಕಾರೇತರ ಸಾರ್ವಜನಿಕ ಸೇವಾತತ್ಪರರನ್ನೂ ಹೋಲಿಸಬಹುದುಂಟು! ಆಚಾರ್ಯ ವಿನೋಬಾ ಭಾವೆಯವರಂತೆ ಮಂತ್ರಿಗಳು ಪಾದ ಸಂಚಾರಿಗಳಾಗಿ ದೇಶ ಸೇವೆ ಮಾಡಲಿ. ಗಾಂಧಿಗಳ ಹಾಗೆ ಹಳ್ಳಿಯಲ್ಲಿ ಸಂಚರಿಸಲಿ ಎಂದು ಆದೇಶವನ್ನೀಯುವವರಿದ್ದಾರೆ. ಮಾತ್ರವಲ್ಲ ಮಂತ್ರಿಗಳೆಂದರೆ ಜನರ ಹಿತಶತ್ರುಗಳೆನುವ ಭಾವನೆಯೂ ಉಂಟು! ಇಂತಹ ಸಂದರ್ಭದಲ್ಲಿ ನಾವು ವಿಚಾರದ ಕಣ್ಣನ್ನು ತೆರೆದುಬೇಕಾಗುವುದು. ಮೊದಲೇ ಹೇಳಿದ ಹಾಗೆ ಅಧಿಕಾರ ಬೇರೆ ಸೇವೆ ಬೇರೆ ಎನುವದನ್ನು ಇಲ್ಲಿ ಒಪ್ಪಲೇ ಬೇಕಾಗುವದು. ಅಧಿಕಾರವು ಸಾರ್ವಜನಿಕ ಸೇವೆಯೇ ಆದರೂ ವಿರ್ದಿಷ್ಟವಾದ ಒಂದು ಪದ್ಧತಿ ಹಾಗೂ ಸಂಪ್ರದಾಯಕ್ಕೆ ಸಂಯಾಗಿ ನಡೆದು ಕೊಳ್ಳುವುದು ಅನಿವಾರ್ಯ! ಮಾತ್ರವಲ್ಲ ಶಿಸ್ತು ಸಂಘಟನೆ- ಸಂಕಾರದ ಗೌವಕ್ಕರ್ಹವಾದ ಗಾಂಭೀರ್ಯವು ಇರುವದು ಅಧಿಕಾರದ ಮದಮೂ ಅಲ್ಲ; ಅಹಂಕಾರವೂ ಅಲ್ಲ; ಅದೊಂದು ವಿಶಿಷ್ಟ ನೀತಿಯೇ ಸರಿ! ಅಧಿಕಾರೇತರ ವ್ಯಕ್ತಿ ಸಾರ್ವಜನಿಕರಲ್ಲಿ ಬೆರೆತ ಹಾಗೆ ಅಧಿಕಾರಿಯಿಂ ಇಲ್ಲನೆ ಸರಕಾರ ಒಳ್ಳೆ ವ್ಯಕ್ತಿ ಸಂಪರ್ಕ ಬೆಳೆಸಲಾರ. ಹೀಗೆ ಅಧಿಕಾರ ಕ್ಕೂ ಸೇವೆಗೂ ನಡುವೆ ಜನತೆ ಮತ್ತು ಅಧಿಕಾರಿಗಳು ಪರಸ್ಪರ ಒಬ್ಬರನ್ನೊಬ್ಬರು ಅರಿತುಕೊಂಡು ಮುಂದೆ ಸಾಗುವ ಶ್ರೇಷ್ಠ ಸಂಬಂಧವಿದೆ. ಪ್ರಜಾಪ್ರಭುತ್ವ ಈ ರಾಷ್ಟ್ರಗಳಲ್ಲಿ ಇದು ಅತ್ಯಂತ ಪ್ರಶಸ್ತವಾದ್ದು. ನಮ್ಮ ದೇಶದ ಮಟ್ಟಿಗಂತೂ ಈ ಅವಶ್ಯಕತೆ ಇನ್ನೂ ಹೆಚ್ಚಲ್ಲವೇ?

Our Pigmy Deposit Scheme

..... brings our bank to your door. You may save as small a sum as annas two Our collector will call on you every day to receive it.

At the rate of annas two per day you save Rs. 550/- in 7 years because we allow interest at 3½% per annum At the rate of Re. 1/- per day your Savings are Rs 2,800/- in 7 years At the rate of Rs. 10/- it is Rs. 28,000/-. Come in to-day and join the band of **Prudent Prosperous Pigmy People.**

The Canara Industrial & Banking Syndicate Ltd.

Estd: 1925. H. O: UDIPI.

ಪ್ರಜಾಸತ್ತ್ವ

ಎರಡನೇ ಸಭೆ (Second Chamber)

ಬೇರೆ ಬೇರೆ ರಾಷ್ಟ್ರಗಳ ಚುನಾವಣಾ ರೀತಿ.

[ಕಳೆದ ಸಂಚಿಕೆಯಿಂದ ಮುಂದುವರಿದುದು]

ಲೋಕದಲ್ಲಿ ಅನೇಕ ಜನರು ವ್ಯವಹಾರದಲ್ಲಿ ಒದ್ದಾಡಿ ವಯಸ್ಸು ಎರಿ ಯುವ ಕರಂತೆ ಧೈರ್ಯ ಮತ್ತು ಹುರುಪಿಲ್ಲದೆ ಮಾತನಾಡುವರೆ ವಾಗ್ಜ್ಞಾನವು ಕಡಮೆ ಯಾಗಿ ಹುರಿಯಾಳುಗಳಾಗಿ ನಿಂತು ಜನರ ಮನವೊಲಿಸಲು ಚಮತ್ಕಾರ ಕಡಮೆ ಯಾಗಿ ಪ್ರತಿನಿಧಿ ಸಭೆಯ ಚುನಾವಣೆಗೆ ನಿಲ್ಲಲಾರರು. ಅಂಥವರ ಅನುಭವ ಮತ್ತು ವೇದಾ ಶಕ್ತಿಯನ್ನು ಉಪಯೋಗಕ್ಕೆ ಬರುವಂತೆ ಮಾಡುವರೆ ಇನ್ನೊಂದು ಸಭೆಯಲ್ಲಿ ಬರುವಂತೆ ಮಾಡುವದು ಒಳ್ಳೆದು. ಸ್ವಲ್ಪ ಮತದಾರರಿಂದ ಹೆಚ್ಚು ಒತ್ತಾಟವಿಲ್ಲದ ಕ್ಷೇತ್ರದಿಂದ ಚುನಾಯಿತರಾಗಲು ಅಂಥವರಿಗೆ ಎಡೆ ಇದೆ. ಎರಡನೇ ಸಭೆಯೆಂಬುದು ತಜ್ಞರ ಒಂದು ಕೊಟವಾದರೆ ಸಾಲದು. ಸಾರ್ವಜನಿಕ ವಿಚಾರದಲ್ಲಿ ಚೆನ್ನಾಗಿ ಅನುಭವವುಳ್ಳವರೂ ಮತ್ತು ರಾಜಕೀಯ ಸ್ಪೃಶ್ಯಗಳನ್ನು ವ್ಯಾವಹಾರಿಕದೃಷ್ಟಿಯಲ್ಲಿ ಶುದ್ಧಾರಿಸುವ ಆರ್ಹತೆಯುಳ್ಳವರಾಗಬೇಕು. ಸಾರ್ವಜನಿಕರಿಂದ ನೇರವಾಗಿ ಚುನಾಯಿತವಾದ ಸಭೆಯು ಒಂದನೆ ಮನೆಯ ನಕಲಾಗುವದಾದ್ದರಿಂದ ನೇರವಲ್ಲದ ಚುನಾವಣೆ ಉತ್ತಮವೆನ್ನುವರು. ಜನರು ತಪ್ಪುಮಾಡುವದಿಲ್ಲ ವಾದರೆ ಪ್ರತಿನಿಧಿ ಸಭೆ ಸಾರ್ವಗದಲ್ಲೇ ನಡೆಯುವದಾದರೆ ಜನಮತದಂತೆ ಕಾರ್ಯವಸಗುವದಾದರೆ ಒಂದೇ ಸಭೆಯೇ ಸಾಕು. ಒಂದೇ ಸಭೆಯೆಂದುಂಟಾಗುವ ಕೆಡಕು ಎರಡನೇ ಸಭೆಯ ಕಡೆಯಿಂದ ಬರುವ ಹಾನಿಗಿಂತ ಕಡಮೆ ಎಂದಾದರೆ ಎರಡನೇ ಸಭೆಯು ಅನಗತ್ಯ. ಆದರೆ ಲೋಕದ ವ್ಯವಹಾರವು ಹೀಗಿಲ್ಲ. ಪ್ರತಿನಿಧಿ ಸಭೆಯು ತಪ್ಪು ತಿದ್ದುವರಿ ಇನ್ನೊಂದು ಸಭೆಯ ಬೇಕು.

ಎರಡನೇ ಸಭೆಯನ್ನು ಒಂದೊಂದು ರಾಷ್ಟ್ರದಲ್ಲಿ ಒಂದೊಂದು ಬಗೆಯಲ್ಲಿ ರಚಿಸಿರುವರು. ಫೆಡರಲ್ ರಾಷ್ಟ್ರಗಳಲ್ಲಿ ಅನೇಕ ಸ್ವಾಂತಗಳ ಪುನಾಗಿ ಉಂಟುಮಾಡಿರುವರು. ಕೆಲವು ಕಡೆಗಳಲ್ಲಿ ಪ್ರಾಂತಗಳ ಸರಕಾರಿಗಳೇ ಚುನಾಯಿಸಿ ಕಳುಹಿಸುವವು. ಪ್ರಾಂತಗಳ ಜಗ್ಗಾಗಿ ಇರುವುದರಿಂದ ಇದಕ್ಕೆ ಮಾನ್ಯತೆ ಇದೆ. ಸ್ವಿಜರ್‌ಲೇಂಡು ಮತ್ತು ಅಮೇರಿಕದಲ್ಲಿ ಆಸ್ಟ್ರೇಲಿಯಾ ಮತ್ತು ಇಂಡಿಯಾದಲ್ಲಿ ಪ್ರಾಂತಗಳ ವರವಾಗಿ ಇವೆ. ಏಕ್ಯೀಭೂತ ರಾಷ್ಟ್ರದಲ್ಲಿ (Unitary state) ನಾಲ್ಕು ವಿಧದಿಂದ ರಚಿಸುವರು. 1 ಮುಖ್ಯ ಕಾರ್ಯಸ್ಥನು ತನಗೆ ಬೇಕಾದವರನ್ನು ನೇಮಿಸುವದು. 2 ಹೀಗೆ ನೇಮಕವಾಗುವದಾದರೂ ಇಂತಿಷ್ಟೇ ಪ್ರಾಯ ಮತ್ತು ಇಂಥಾವರ್ಗದವರೇ ಆಗಬೇಕೆಂದು ಶರತ ಇಡುವರು. 3 ಸ್ಥಳೀಯ ಸರಕಾರ ಮತ್ತು ಸಂಸ್ಥೆ ಅಂದ್ರೆ ಚುನಾವಣೆ ಸಂಘ (Electoral College) ಗಳಿಂದ ಚುನಾಯಿತವಾಗುವರು. ಇದಕ್ಕೆ ಎರಡನೇ ತರಗತಿಯ ಚುನಾವಣೆ (Popular election in the second degree) ಎನ್ನುವರು. ಚುನಾಯಿಸುವ ಮತದಾರರು ಮೊದಲು ಸಾರ್ವಜನಿಕ ಮತದಾರರಿಂದ ಚುನಾಯಿತರಾದ ಕಾರಣ ಇದಕ್ಕೆ ನೇರವಲ್ಲದ ಚುನಾವಣೆ ಎಂತ ಹೇಳುವರು. (Indirect election) 4. ಒಂದನೇ ಸಭೆಗೆ ಪ್ರತಿನಿಧಿಗಳನ್ನು ಚುನಾಯಿಸುವ ರೀತಿಯಂತೆಯೇ ಚುನಾಯಿಸುವರು. ಆದರೆ ಎರಡನೇ ಸಭೆಯ ಸದಸ್ಯರು ಕಡಿಮೆಯಾದ್ದರಿಂದ ಚುನಾವಣಾ ಕ್ಷೇತ್ರವು ಸ್ವಲ್ಪ ದೊಡ್ಡದಾಗಿರುವುದು. ಆಸ್ಟ್ರೇಲಿಯ ಅಮೇರಿಕ ಮತ್ತು ಇಂಡಿಯಾದಲ್ಲಿ ಸಹಾ ಹೀಗೆ ಮಾಡಿರುವರು– ಮೇಲೆ ಹೇಳಿದ ಕಾರಣಗಳೇದಲ್ಲದೆ ಎರಡನೇ ಸಭೆಯನ್ನು ಇನ್ನೊಂದು ನಮೂನೆಯಲ್ಲಿ ಜನನಕ್ಕೆ ತರುವರು. ಇದು ವೃತ್ತಿ ಮತ್ತು ಉದ್ಯೋಗಗಳ ಪರವಾಗಿ ಚುನಾಯಿತವಾಗುವದಾಗಿದೆ. ಈ ಕ್ರಮ ಪ್ರಕಾರ ಪ್ರತಿಯೊಬ್ಬನಿಗೂ ಎರಡು ಓಟುಗಳಿರುವವು. ಒಂದು ಆತನ ವಾಸಸ್ಥಾನದ ಬಗ್ಗೆ ಇನ್ನೊಂದು ಆತನ ವೃತ್ತಿಯ ಬಗ್ಗೆ ಇರುವದು. ಇದಕ್ಕೆ ವೃತ್ತಿಯ ಪ್ರಾತಿನಿಧ್ಯ ವೆನ್ನುವರು (Functional representation).

ತಡೆಗಟ್ಟುವ ಅಧಿಕಾರವಿರುವ ಎರಡನೆ ಸಭೆಯೆಂಬುದು ಬರೀ ನಕಾರಾತ್ಮಕವಾಗಿರುವದು. ಹಳೆ ಸಾಂಪ್ರದಾಯ ಮತ್ತು ಪದ್ಧತಿಗೆ ಕಟ್ಟು ಬದ್ದ ಕಟ್ಟುಪ್ಪಣೆ ಮಾಡುವದು. ಸುಧಾರಣೆಗಳಾಗದಂತೆ ಅಡ್ಡ ಬರುವದು ಸ್ವಾರ್ಥದೃಷ್ಟಿಯಿಂದ ಸಭೆಯನ್ನು ಕೆಲವರು ವಶಪಡಿಸಿಕೊಳ್ಳುವರು. ಉಪಯೋಗದ ಕಾರ್ಯಕ್ಕಿಂತ ಹಾಳು ಮಾಡುವ ದಾರಿಯನ್ನೇ ಹಿಡಿಯುವವು. ವಿಶಾಲ ದೃಷ್ಟಿಯ ಬದಲಿಗೆ ಪಕ್ಷ ದೃಷ್ಟಿ ಮತ್ತು ಸಂಕುಚಿತ ಬುದ್ಧಿಯನ್ನು ತೋರುವವು. ಯಾವ ರಾಜಕೀಯ ಸಂಸ್ಥೆಗಾದರೂ ಒಂದು ನಿಶ್ಚಿತ ಧೋರಣೆ ಬೇಕು. ಸರಿಯಾದ ಎರಡನೆ ಸಭೆಯೆಂಬುದು ಜನರ ಪುನರಾಲೋಚನೆಯನ್ನು ದೃಢೀಕರಿಸುವ ಸಭೆಯಾಗಬೇಕು. ಅಮೇರಿಕ ಆಸ್ಟ್ರೇಲಿಯ, ಸ್ವಿಜರ್‌ಲೇಂಡು ಮತ್ತು ಇಂಡಿಯಾದಲ್ಲಿ ಪ್ರಾಂತಗಳ ಬಗ್ಗಾಗಿರುವುದರಿಂದ ಅವುಗಳು ಸ್ವಲ್ಪ ಮಾಡುವದಾದರೂ ಇರುವಿಕೆಗೆ ಕಾರಣವಿದೆ ಒಂದೇ ತರದ ಮತದಾರರಿಂದ ಚುನಾಯಿತವಾದ ಸಂಸಮಾನ ಅಧಿಕಾರವಿರುವ ಎರಡು ನ್ಯಾಯ ಸಭೆಗಳು ಬೇಕೆಂತಿಲ್ಲ. ಹೀಗಿದ್ದಲ್ಲಿ ಅದು ಒಂದನೆ ಮನೆಯಷ್ಟೆ ಅಧಿಕಾರವಾಣಿಯಿಂದ ಮಾತನಾಡುವದು, ಆದರಷ್ಟೆ ಗೌರವ ಮತ್ತು ಪ್ರಾತಿನಿಧ್ಯ ಪಡೆಯುವದು. ಇದರಿಂದ ಅವುಗಳೊಳಗೆ ಸ್ಪರ್ಧೆಯುಂಟಾಗಿ ವಿರೋಧ ಭಾವ ತಾಳುವವು. ಅಲ್ಲದೆ ಎರಡೂ ಮನೆಗಳಿಗೂ ಒಂದೇ ಸಮಯ ಚುನಾವಣೆಯಾಗುವದಾದರೆ ಒಂದೇ ರಾಜಕೀಯ ಪಕ್ಷವು ಬಹು ಮತದಿಂದ ಬರುವಲ್ಲಿ ಒಂದನೇ ಸಭೆಯ ತೀವ್ರತೆಯನ್ನು ತಡೆಯಲು ಪ್ರಯೋಜನವಾಗಲಾರದು. ಇವುಗಳ ಪೈಕಿ ಯಾವದಾದರೊಂದು ಕಡೆಗೆ ಚುನಾಯಿತವಾದರೆ ಹಾಗೆ ಕಡೆಗೆ ಬಂದವರು ತಾವೇ ಜನಮತವನ್ನು ಪ್ರತಿಬಿಂಬಿಸುವರೆಂದು ಹೆಮ್ಮೆಪಡುವರು.

ಕಾರ್ಯಕಾರೀ ಮಂಡಲಿಯವರಿಂದ ನೇಮಕವಾಗುವ ಸದಸ್ಯರಿರುವ ಎರಡನೆ ಮನೆಯು ಹೆಚ್ಚು ಗೌರವವನ್ನು ಪಡೆಯಲಾರದು. ಸದಸ್ಯರನ್ನು ಹೆಚ್ಚಾಗಿ ಪಕ್ಷಗಳ ಪರವಾಗಿ ಅವುಗಳ ಪ್ರಯೋಜನಕ್ಕಾಗಿ ನೇಮಿಸುವದಾಗಿದೆ. ಕೆನಡಾ ವ. ಹೊರತು ಇತರ ದೇಶಗಳಲ್ಲಿ ಹೀಗೆ ನೇಮಿಸುವದು. ಬಹು ಪಕ್ಷ ಪಡೆಯುವರೆ ಮಾತ್ರವಲ್ಲ ವಾದುದರಿಂದ ಹಿತಚಿಂತಕರು ಚುನಾವಣಾ ರಂಗದಲ್ಲಿ ಮತದಾರರ ಮನವೊಲಿಸಲು ಉದಾರೀನರೂ ಚೈತನ್ಯ ಕಡಮೆಯಾದವರೂ ಸಂತೋಷದಿಂದ ಈ ಗೌರವಸ್ಥಾನವನ್ನು ಅಲಂಕರಿಸುವರು. ಕೆಲವು ದೇಶಗಳಲ್ಲಿ ರಾಜಕೀಯ ವಿಚಾರಗಳಲ್ಲಿ ಗುಪ್ತ ಕೆಲಸ (Secret Service) ವನ್ನಾದವರಿಗೆ ಮತ್ತು ಪಕ್ಷದಲ್ಲಿ ಉದಾರ ಧನ ಸಹಾಯ ಮಾಡಿದವರಿಗೆ ಈ ಮನೆಯಲ್ಲಿ ಸ್ಥಾನ ಕೊಡುವರು. ಮತಕಟ್ಟಿನ ಮತದಾರರಿಂದ (Restricted franchise) ಚುನಾಯಿತವಾಗುವ ಸಭೆಯು ವರ್ಗದವರ ಪರವಾಗಿದ್ದೇನೆಂದು ಭಾವಿಸಿ ಜನಾಭಿಪ್ರಾಯಕ್ಕೆ ವಿರೋಧವಾಗಿ ನಿಲ್ಲುವ ವದ್ಧತಿಯನ್ನೆನುಸರಿಸುವವು. ಸ್ವಿಜರ್‌ಲೇನಲ್ಲಿ ಚುನಾವಣಾ ಸಂಘಗಳಿಂದ ಆರಿಸಿ ಬಂದ ಎರಡನೆ ಮನೆಯು ಉಚ್ಚ ಸ್ಥಾನ ಪಡೆದಿರುವದಾದೂ ಚುನಾವಣಾ ಸಂಘಗಳಿಗೆ ಚುನಾವಣೆಯಲ್ಲಿ ರಾಜಕೀಯ ಪಕ್ಷಗಳ ಕೈವಾಡ ಇದ್ದೇ ಇದೆ. ಯಾವ ಕ್ರಮದಲ್ಲಿ ಎರಡನೇ ಸಭೆಯ ಸದಸ್ಯರನ್ನು ಆರಿಸುವದಾದರೂ ನ್ಯೂನತೆ ಇದ್ದೇ ಇದೆ. ಈ ಕಾರಣದಿಂದ ಎರಡನೆ ಮನೆಯು ಅನಗತ್ಯವೆಂದು ಹೇಳಲು ಬರುವುದಿಲ್ಲ. ಆದರೆ ಒಂದನೆ ಮನೆಯು ತಪ್ಪು ಮಾಡದ ಇರುವದು ಅಪೂರ್ವವೆಂದು ಹೇಳಬೇಕು. ನಾವು ಈ ನ್ಯೂನತೆಗಳ ಕಡೆಗೆ ಲಕ್ಷ್ಯವಿಡುವ ಬದಲಿಗೆ ಎರಡನೆ ಮನೆಯ ಸ್ಥಿರಂದ್ದೆಲ್ಲ ಒಂದೇ ಮನೆಯು ಜನ್ಮ ತೀವ್ರತೆಯಿಂದ ಕೆಡಕನ್ನುಂಟುಮಾಡಿ ಸಂಭವ ಜಾಸ್ತಿ ಎಂಬುದನ್ನು ವಿಚಾರಿಸಬಾರದು. ಒಂದನೆ ಮನೆಯು ಉದ್ವೇಗವನ್ನು ತಡೆಗಟ್ಟಿ ಪುನರಾಲೋಚನೆಯಿಂದ ಜನಮತವನ್ನು ಪ್ರತಿಬಿಂಬಿಸುವ ಎಂದರೆ ಮನೆಯು ಅಗತ್ಯವೆಂತ ಪ್ರಜಾಮತ ಸರಕಾರವು ಮುಂದುವರಿದ ರಾಷ್ಟ್ರಗಳಲ್ಲಿ ಕಂಡಿಯವರು. —ಸಿ. ಎಚ್. ಸೆಟ್ಟಿ, ಬಿ.ಎ

[ಮುಂದಕ್ಕೆ ಮುಂದುವರಿಯುವದು]

ರಾಮತೀರ್ಥ ಬ್ರಾಹ್ಮಿ ತೈಲ

ಸ್ಪೆಶಲ್ ನಂ. ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತಿದೆ, ಬಕ್ಕೆ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತವೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತವೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿನ ಕ್ರಯಃ ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾವರ್ (ಜಿ. ಐ. ಪಿ.) ಮುಂಬಯಿ, ೧೪

"ನಿಮ್ಮ ಕಂಪೆನಿಯಲ್ಲಿ ವಿನಾಶ ಪತ್ರದಾರರ ಹಿತಗಳಿಗೆ ಭದ್ರತೆ ತುಂಬಾ ಇರುವುದಲ್ಲದೆ ಅವರಿಗೆ ಹೆಚ್ಚಿನ ಪ್ರಮಾಣದಲ್ಲಿ ಲಾಭವೂ ಸಿಗುವುದು."

—ಶ್ರೀ ಕೆ ಎ. ಪಂಡಿತ್, B. SC, F. I. A
(ಸಲಹೆಗಾರ ವಿಮಾಗಣಕರು)

"ಕೆನರಾ ಮ್ಯೂಚುವಲ್" ಕಂಪೆನಿಯ ಎಲ್ಲ ವ್ಯವಹಾರಗಳು ಹೀಗೆ ಚೆಲೋದಾಗಿ ನಡೆಸಲ್ಪಡುವುದರಿಂದ ಈ ಕಂಪೆನಿಯು ಜನರ ವಿಶ್ವಾಸಾದರಗಳಿಗೆ ಪಾತ್ರವಾಗಿದೆ. ಕಂಪೆನಿಯ ಚತುರ್ಥ ವಿಮಾಗಣನೆ (Valuation)ಯಂತೆ, ಆಜೀವ (Whole Life) ಮತ್ತು ಉಂಬಳಿ (Endowment) ವಿಮೆಗಳಿಗೆ ಕ್ರಮವಾಗಿ ಸಾಲಿಯಾನ ಸಾವಿರಕ್ಕೆ ರೂ. 12 ಮತ್ತು ರೂ. 9ರಂತೆ ಬೋನಸು ಸಂಚಲಾಗುವುದು. ಇದೇ ದರವಲ್ಲಿ ನಡುಗಾಲದ (Interim) ಬೋನಸನ್ನು ಸಹ ಇಡಲಾಗಿದೆ.

— ದಿ ಕೆನರಾ ಮ್ಯೂಚುವಲ್ —
ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,
ಪ್ರಧಾನ ಕಾರ್ಯಾಲಯಃ ಉಡುಪಿ, ದ. ಭಾರತ.

ಕವಿರಾಜ ಯನ್. ಯನ್. ಸೇನರ

ಶಾಸ್ತ್ರೀಯ ಔಷಧಿಗಳು ಈಗಲೇ ಬಂದಿವೆ

ಬ್ರಾ ಅಮೃತಬಳ್ಳಿ ಕಷಾಯ
ಪ್ರಸೂತಾರಿಷ್ಟ
ಕಸ್ತೂರಿ ಕಲ್ಪ ರಸಾಯನ
ನೇತ್ರಬಿಂಧು
ಕಪೆ ರಿಷ್ಟ
ದುರ್ಗಾ ಪುನರ್ನವಾಸವ
ಬಾಸಾರಿಷ್ಟ
ಕುಂಕುಮಾಸವ
ವ್ಯಗ್ರಂಕ ದ್ರಾವ
ದರವನ್ನು ವಿಚಾರಿಸುವದು.

ವಿಳಾಸ:—
ಶಾ. ಕಂಪೆನಿ, ಮಂಗಳೂರು ನಂ. 1

ಆರನೇ ಜಾರ್ಜರ ಮರಣ-ಎಲಿಜಬೆತ್ತಳಿಗೆ ರಾಣಿ ಪಟ್ಟ

ಇಂಗ್ಲೆಂಡಿನ ಆರನೇ ಜಾರ್ಜರು ಕಳೆದ ವಾರ ಕಾರೋನರ್ ಧ್ಯಂಬ ಸಿಂ ಎಂಬ ರೋಗದಿಂದ ವಿಧಿವಶರಾದರು. ಈ ಬಗೆಗೆ ಹಲವು ಕಾಲಗಳಿಂದ ಅವರು ಕ್ಷಯ ರೋಗದಿಂದ ಒಳಬಳ್ತಿದ್ದು ಅಗಾಗ್ಗೆ ಶಸ್ತ್ರಪ್ರಯೋಗ ನಡೆಸಲಾಗಿತ್ತು. ದಿನಾಂಕ 6ರಂದ ಮುಂಜಾನೆ ನಿದ್ರೆಯಲ್ಲಿರುವಾಗಲೇ ಅವರ ಪ್ರಾಣೋತ್ಕ್ರಮಣವಾಯಿತೆಂದು ಹೇಳಲಾಗಿದೆ. ಜಾರ್ಜರಿಗೆ ಸುಮಾರು ಕಾಲಕ್ಕೆ 56 ವರ್ಷ ವ್ಯಯಿಸಿ ಆಳರು. ಶಾಂತ ವಿನೋವೃತ್ತಿಯವರಾಗಿದ್ದು ಸದಾ ಲೋಕದ ಜನದ ಹಿತಚಿಂತಕರಾಗಿದ್ದರು. 1936ರಲ್ಲಿ ಅವರ ಸಹೋದರರಾದ ಎಂಟನೇ ಎಡ್ವರ್ಡರು ಸಿಂಹಾಸನ ತ್ಯಾಗ ಮಾಡಿದ್ದರಿಂದ ಅಕಸ್ಮಿಕವಾಗಿ ಈ ಪಟ್ಟವಂಗೆ ಪ್ರಾಪ್ತವಾಯಿತು. ಸದಾ ತಾನೊಬ್ಬ ಸಾಮಾನ್ಯ ಮನುಷ್ಯನೆಂದು ಅವರು ಹೇಳುತ್ತಿದ್ದರು. ಪ್ರಜೆಗಳ ಕಷ್ಟ ಸಂಕಷ್ಟಗಳಲ್ಲಿ ತಾನು ತಾದಾತ್ಮ್ಯ ಹೊಂದಿದ ಹಾಗೆ ಆಳರಸರ ಮೇಲೂ ಜನತೆಗೆ ಅಪಾರವಾದ ವಿಶ್ವಾಸ-ಭಕ್ತಿ ಭಾವವಿತ್ತು! ಅಂಸೊತ್ತಗೆಯನ್ನು ಕಿಕ್ಕೊಗಿಯವ ಸಂಸ್ಥಿತಿ ಎಲ್ಲೆಡೆಯಲ್ಲೂ ಉಂಟಾಗಿದ್ದರೂ ಬ್ರಿಟನ್ನಿನ ಜನತೆ ಒಂದು ಸಾಪರ ವರ್ಷದ ಹಿಂದಿನ ಸಂಪ್ರದಾಯವನ್ನೇ ನಂಬಿಕೊಂಡಿದೆ.

ಸಂಪ್ರದಾಯಾನುಸಾರವಾಗಿ ಆರನೇ ಜಾರ್ಜರ ನಿಧನದಿಂದ ರಾಜಕುಮಾರಿ ಎಲಿಜಾಬೆತ್ಥಳಿಗೆ ರಾಣಿಪಟ್ಟದ ಹಕ್ಕು ಪ್ರಾಪ್ತವಾಗುವದು ಅನಿವಾರ್ಯವಾಗಿದ್ದು ಎಲಿಜಾಬೆತ್ಥ ರಾಣಿಯವರು ಪ್ರವಾಸ ಯಾತ್ರೆಯಲ್ಲಿದ್ದರು. ಸುದ್ದಿ ಮುಟ್ಟಿದಾಗಲೇ 4000 ಪೌಂಡ್ ವೈಲು

ಬ್ರಿಟನ್ನಿನ ಹೊಸ ರಾಣಿಯೂದ ಎಂಡಿನೇ ಎಲಿಜಾಬೆಥ್ ಮತ್ತು ಅವಳ ಗಂಡ ಎಡಿನಬರ್ಗ್ ಡ್ಯೂಕ್.

ದೂರದಿಂದ ಇಂಗ್ಲೆಂಡಿಗೆ ಬರಬೇಕಾಯಿತು. ಪ್ರೀವಿ ಕೌನ್ಸಿಲ ಸಭೆಸೇರಿ ಎಲಿಜಾ ಬೇಥಳನ್ನು ರಾಣಿಯನ್ನಾಗಿ ಘೋಷಿಸಿ ನಿಷ್ಠೆಯನ್ನು ಪ್ರದರ್ಶಿಸುವ ಘೋಷಣೆಯನ್ನು ಹೊರಡಿಸಲಾಯಿತು. ಸೇಂಟ್ ಜೆಮ್ಸ್ ಅರಮನೆಯ ಬಂಗಾರ ಸಿಂಹಾಸನದ ಕೋಣೆಯಲ್ಲಿ ಈ ಕುಮಾರಿಯವು ಜರಗಿ ರಾಣಿ ಎಲಿಜಾ ಬೇಥಳು "ನನ್ನ ಪೂಜ್ಯ ತಂದೆಯವರ ದಿವ್ಯ ಸೇವಾಧರ್ಮದ ವಾರಸ್ವನ್ನು ನಾನು ತೀಡುವೆನು. ಮತ್ತು ನನ್ನ ತಂದೆಯವರಂತೆ ಘಟನಾತ್ಮಕ ಸರಕಾರವನ್ನು ಎತ್ತಿ ಹಿಡಿಯುವೆನೆಲ್ಲದೆ ನನ್ನ ಪ್ರಜೆಗಳ ಸುಖ ಶಾಂತಿಗಳಿಗಾಗಿ ಹೆಣಗುವೆನು. ನನ್ನೀ ಚಿಕ್ಕ ವಯಸ್ಸಿನಲ್ಲಿಯೇ ನನ್ನಮೇಲೆ ಬಿದ್ದಿರುವ ಈ ಮಹತ್ವದ ಹೊಣೆಯನ್ನು ನಿರ್ವಹಿಸಲು ನನಗೆ ಶಕ್ತಿ ಕೊಡಲೆಂದು ಪರಮಾತ್ಮನನ್ನು ಪ್ರಾರ್ಥಿಸುವೆ ॥ ಎಂದಳು ಅರಸು ಸತ್ತ ನಿಮಿತ್ತ ಹಾರಿಸಲಾದ 56 ಗುಂಡಿನ ಜೊತೆ ರಾಣಿ ಪಟ್ಟವೇರಿದ 21 ಗುಂಡುಗಳೂ ಹಾರಿದವು! ರಾಜಲೀವಿಯು ಕಹಳೆಗಳು ಮೊಳಗಿದವು. ಒಂದು ಸಾವಿರ ವರ್ಷಗಳಿಂದ ನಡೆದುಬಂದ ಶಿಷ್ಟಾಚಾರಗಳು ಪಾಲಿಸಲ್ಪಟ್ಟವು.

ಅರಸರ ಮರಣದ ಬಗ್ಗೆ ಎಲ್ಲೆಡೆಯಲ್ಲೂ ಶೋಕ ಕಂಬನಿಗಳಾದವು. ಭಾರತ ಸರಕಾರವೂ ಹನ್ನೆರಂದು ದಿನದ ಸೂತಕ ದಿನಾಚರಣೆಯನ್ನು ಕೈಗೊಂಡಿದೆ ರಾಣಿ ಎಲಿಜಾಬೇಥ ಪಟ್ಟಾರೋಹಣಕಾಲದಲ್ಲಿ ರಾಜಧಾನಿಯಲ್ಲೂ ಸೈನ್ಯ ರಾಣಿಗಳಲ್ಲಿಯೂ ತೋಪುಗಳನ್ನು ಹಾರಿಸಲಾಯಿತು. ದಿನಾಂಕ 15ರಂದು ಅರಸರ ಅಂತ್ಯ ಕ್ರಿಯೆಯು ಜರಗುವದು ಆ ದಿನ ಭಾರತದಲ್ಲೆಲ್ಲಾ ರಜದಿನವೆಂದು ಸಾರಲಾಗಿದೆ. ಭಾರತಕ್ಕೆ ಸ್ವಾತಂತ್ರ್ಯ ಪ್ರಾಪ್ತವಾದದ್ದು ಆರನೆಯ ಅರಸರ ಕಾಲದಲ್ಲಿಯೇ ಆದುದರಿಂದ ಭಾರತದ ಜನತೆಯು ಅವರನ್ನು ಹೃತ್ಪೂರ್ವಕವಾಗಿ ನೆನೆಸುವದರಲ್ಲಿ ಸಂದೇಹವೇ ಇಲ್ಲ! ಪದ್ಯ ಭಾರತ ಪ್ರಜಾಸಮ್ಮುಖ್ಯ ರಾಷ್ಟ್ರವಾಗಿರುವದಾದರೂ ರಾಮನ ವೆಲ್ಫಿನಲ್ಲಿರಲು ನಿರ್ಧರಿಸಿ ಇಂಗ್ಲೆಂಡಿನ ಅರಸನ್ನೇ ಕಾಮನವೆಲ್ತಿನ ಮುಖ್ಯಸ್ಥನೆಂದು ಒಪ್ಪಿಕೊಂಡಿದೆ ಅಂತಲೇ ಇಂಗ್ಲೆಂಡಿನ ಜನತೆಯ ದುಃಖದೊತನೆ ಭಾರತವೂ ಸಮಭಾಗಿಯಾಗಿದೆ.

ಕುಮಾರ ಸ್ವಾಮಿ ರಾಜಾರಿಗೆ ಧುರೀಣತ್ವ?

ಮದ್ರಾಸ ಶಾಸನ ಸಭೆಯ ಘಟಕಾಂಶವು ಒಂದೆರಡು ಸ್ಥಳಗಳನ್ನು ಬಿಟ್ಟು ಮಿಕ್ಕೆಲ್ಲ ತಿಳಿದಿದೆ 373ರಲ್ಲಿ 152 ಕಾಂಗ್ರೆಸಿಗೆ ಸ್ಥಾನಗಳು ಪ್ರಾಪ್ತವಾಗಿದ್ದು ತನ್ನ ಪಕ್ಷದ ಸರಕಾರ ಸ್ಥಾಪಿಸಲು ಇನ್ನು 36ಸ್ಥಳಗಳು ಬೇಕಾಗಿವೆ. ಕಾಂಗ್ರೆಸ್ಸಿನ ನಂತರ ಹೆಚ್ಚು ಬಲವುಳ್ಳ ಪಕ್ಷವೆಂದರೆ ಕಮ್ಯೂನಿಸ್ಟರದು. ಕಮ್ಯೂನಿಸ್ಟರಿಗೆ ಒಟ್ಟು 59ಸ್ಥಳಗಳು ದೊರಕಿವೆ. ಮೂರನೆಯದಾಗಿ ಕಿ. ವು. ಪ್ರಜಾಪಕ್ಷದವರಿಗೆ 35ಸ್ಥಳಗಳು ದೊರಕಿವೆ. ಹೀಗೆ ಇನ್ನು ಬೇರೆ ಬೇರೆ ಪಕ್ಷಗಳಲ್ಲಿ ಅಲ್ಪ ಸ್ವಲ್ಪ ಸ್ಥಾನಗಳು ಹಂಚಿಹೋಗಿವೆ ಅರ್ಧ ಮಧ್ಯವಾದ ಈ ಫಲಿತಾಂಶದಿಂದ ಮದ್ರಾಸ ಮಂತ್ರಿಮಂಡಳದ ರಚನೆಯು ಪ್ರಶ್ನೆ ತುಸು ಜಂಘಲದ್ದಾಗಿದೆ. ಮದ್ರಾಸದ ಹಿಂದಿನ ಮಂತ್ರಿಗಳಲ್ಲಿ ಬಹುಮಂದಿ ಚುನಾವಣೆಯಲ್ಲಿ ಪರಾಭೂತರಾಗಿರುವರು. ಎಲ್ಲದಕ್ಕಿಂತಲೂ ಆಶ್ಚರ್ಯಕರವಾಗಿರುವದು ಸಂಗತಿಯೆಂದರೆ ಎಲ್ಲ ಪಕ್ಷದ ಮುಖಂಡರಿಗೆ ಸೋಲು ಪ್ರಾಪ್ತವಾದುದು. ಕಾಂಗ್ರೆಸ್ಸಿನಲ್ಲಿಯೂ ಕುಮಾರ ಸ್ವಾಮಿ ರಾಜರೇ ಅಧಿಯಾಗಿ ಮತ್ತೆನ್ನೆದು ಮಂತ್ರಿಗಳು ಪರಾಜಯ ಹೊಂದಿರುವದು ಮಾತ್ರವಲ್ಲದೆ ಕೇಂದ್ರ ರೈಲ್ವೆ ಶಾಖಾ ಮಂತ್ರಿ ಶ್ರೀ ಸಂತಾನಂರವರೂ ಸೋತರುವರು. ಪ್ರಜಾಪಕ್ಷದ ಅಧ್ವರ್ಯರುಗಳಾದ ಟಿ. ಪ್ರಕಾಶಂರು ಇಡುಗಂಟೇ ಕಳಕೊಳ್ಳುವಂತಾಯಿತು. ಕೃಷಿಕ ಲೋಕ ಪಕ್ಷದ ಮುಖಂಡ ಪ್ರೊ| ಎನ್. ಜಿ. ರಂಗಾ ಕಮ್ಯೂನಿಷ್ಟ ಧುರೀಣ ಮೋಹನ ಕುಮಾರ ಮಂಗಲಂ ದಲಿತ ವರ್ಗದ ಧುರೀಣ ಎನ್. ಶಿವರಾಜ ಇವರೆಲ್ಲ ಪರಾಜಿತರಾಗಿರುವರು.

ಪರಾಭೂತ ಮಂತ್ರಿಗಳೇ ಇನ್ನೂ 6 ತಿಂಗಳ ಕಾಲ ಮಂತ್ರಿಗಳಾಗುಳಿಯಬಹುದೆಂಬ ಊಹಾ ಪೋಹೆ ಎದ್ದಿತ್ತು. ಆದರೆ ಕೇಂದ್ರದಿಂದ ವರಾಜಿತ ಮಂತ್ರಿಗಳು ರಾಜೀನಾಮೆಯನ್ನಿಯಬೇಕೆಂಬ ಆದೇಶ ಬಂದಿದ್ದರಿಂದ ಅದೀಗ ಇಲ್ಲವೆಂದಾಯಿತು.

ಪ್ರಸ್ತುತ ಮದ್ರಾಸದ ರಾಜಕೀಯ ಇನ್ನೊಂದು ಹೊಸರೂಪ ತಾಳಿವೆ ಹಿಂದಿನ ಮಂತ್ರಿಮಂಡಲದವರಾಭೂತಮಂತ್ರಿಗಳಾದ ತಮ್ಮ ರಾಜೀನಾಮೆಯನ್ನು ಸಲ್ಲಿಸಿರುವರು. ಕುಮಾರಸ್ವಾಮಿರಾಜರ ಹೊರತು ಇನ್ನುಳಿದೆಲ್ಲರಾಜೀನಾಮೆಯನ್ನು ಸ್ವೀಕೃತವಾಗಿದೆ. ಗವರ್ನರ್ ಆಡಳಿತದ ಬದಲಾಗಿ ಇಲ್ಲಿನ ರಾಜಕೀಯ ಸ್ಥಿತಿ ಸುಧಾರಿಸುವ ವರೆಗೆ ಜೋಡಾಸನ ಸರಕಾರ ಸ್ಥಾಪಿಸುವದೆಂದು ನಿಶ್ಚಯವಾಗಿದೆ. ಅನಿಶ್ಚಿತತೆಯ ಈ ಸನ್ನಿವೇಶದಲ್ಲಿ ಸಂಭವಾದ ಮಾರ್ಗವೆಂದರೂ ಎನಬಹುದು. ಹಿಂದಿನ ಮಂತ್ರಿಮಂಡಲಗಳಾಗಿರುವ ಕುಮಾರ ಸ್ವಾಮಿ ರಾಜರನ್ನೇ ಈ ಜೋಡಾಸನ ಸರಕಾರದ ಎಂದಾಳುಗಳನ್ನಾಗಿ ಕೇಳಿಕೊಳ್ಳಲಾಗಿದೆ. ಹನ್ನೆರಂವರ್ಷಗಳಿಂದ ಶಾಸನ ಸಭೆಯಲ್ಲಿದ್ದೂ ಐದು ವರ್ಷಗಳಿಂದ ಮಂತ್ರಿಗಳಾಗಿದ್ದು ಅನುಭವ ಪಡೆದಿರುವ ಹಲವು ಮಂತ್ರಿಗಳು ತಿರುಗಿ ಆರಿಸಿ ಒಂದಿದ್ದಾರೆ. ಅವರಲ್ಲೇ ಒಬ್ಬನನ್ನು ಧುರೀಣನನ್ನಾ ಅಂಗಿಕರಿಸಿತ್ತೇ? ಎಂಬ ಪ್ರಶ್ನೆ ಮೂಡುವದು ಸ್ವಾಭಾವಿಕ.

ನೋಟೀಸು

ಕುಂದಾಪುರ ಡಿ.ಮು. ಕೋರ್ಟಿನಲ್ಲಿ

O. S. 132/1951

ವಾದಿ—ವೆಂಕಟ

ಪ್ರತಿವಾದಿ—1 ಕೋಡಿ ಹರ್ನ್ ಸಾಹೇಬ, 2 ಪಳ್ಳಿ ಬ್ಯಾರಿ, 3 ಹಮ್ಮದ್ ಬ್ಯಾರಿ, 4 ಹಮ್ಮದ್ ಬ್ಯಾರಿ, 5 ಹಮ್ಮದ್ ಬ್ಯಾರಿ, 6 ಇಸೂಬ್ ಬ್ಯಾರಿ, 7 ಅಚ್ಚಮ್ಮ, 8 ಮೈದಿನ್ ಬ್ಯಾರಿ, 9 ಸಾಬನ್ ಬ್ಯಾರಿ, 10 ಫಕ್ರುದ್ದಿನ್ ಸಾಹೇಬ

ಶಿವಮೊಗ್ಗಾ ಡಿಸ್ಟ್ರಿಕ್ಟ್ ಬಿಂಧ್ಯ ಪೇಟೆಯಲ್ಲಿರುವ ಮೈದಿನ್ ಕುಟ್ಟಿ ಬ್ಯಾರಿ ಮಗಳು ಆಚ್ಚಮ್ಮಾದಿ | ಪ್ರತ್ಯವಾದಿ ಮಕ್ಕಳು ಮೈದಿನ್ ಬ್ಯಾರಿ 1, ಸಾಬನ್ ಬ್ಯಾರಿ 1, ಗಂಗೊಳ್ಳಿ ಗ್ರಾಮದಲ್ಲಿರುವ ಮಹಮ್ಮದ್ ಸಾಹೇಬರ ಮಗ ಫಕ್ರುದ್ದಿನ್ ಸಾಹೇಬ 1, ಕೊಡಾ ಪ್ರತಿವಾದಿಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ

ದಾನಾ ಆಸ್ತಿ ಸ್ವಾಧೀನತೆ ಬಗ್ಗೂ, ಗೇಣಿ ಬಾಕಿ ವಸೂಲು ಬಗ್ಗೂ ವಾದಿಯು ಪ್ರತಿವಾದಿಗಳ ಮೇಲೆ ದಾಖಲು ಮಾಡಿದ ಮೇಲಿನ ದಾವೆಯು ತಾ. 19-2-52ಕ್ಕೆ ಮೇಲಿನ ಕೋರ್ಟಿನಲ್ಲಿ ತನ್ನಿಗೆ ಇಟ್ಟುಕೊಂಡಿದೆ. ಆ ಕಾರಣ ಏನಾದರೂ ಆಕ್ಷೇಪಣೆಗಳಿದ್ದಲ್ಲಿ ಸದ್ರಿದಿವ್ಸ ಹಗಲಾಗಂಟೆ 11ಕ್ಕೆ ಮೇಲಿನ ಕೋರ್ಟಿಗೆ ಮುಂದೆ ಹಾಜರಾಗಿ ಜ್ಞಾಪೀಸು ಮಾಡಿಕೊಳ್ಳತಕ್ಕದ್ದು. ಎಂಬ ಸಂಗ್ತಿ ಈ ಮೂಲಕ ತಿಳಿಯಪಡಿಸಿರುತ್ತದೆ.

N. S. Parameshwariah,
Advocate for Plff
Coondapoor, Date 3-2-52

ಝಂಡುರವರ **ZANDU'S**

ಕೇಸರಿ ಜೀವನ **KESARI JIVAN**

ವನ್ನು ಉಪಯೋಗಿಸಲು ಒತ್ತಾಯಿಸಿರಿ.

ಕೆಮ್ಮು, ನೆಗಡಿ, ಆಸ್ತಮ, ಧ್ವನಿ ಒಡೆಯುವಿಕೆ ಮೊದಲಾದುವುಗಳಿಗೆ ಅತ್ಯುತ್ತಮ ಔಷಧಿ

ಕೇಸರಿ ಜೀವನವು ತಾರುಣ್ಯವನ್ನೂ, ನವಚೈತನ್ಯವನ್ನೂ ಉಂಟುಮಾಡಿ ದೇಹದ ಅಂಗಾಂಗಗಳನ್ನೂ ಪುಷ್ಟಿಯಾಗಿ ಮಾಡಬಲ್ಲುದು ಮೆದುಳಿನ ನಿತ್ರಾಣವಿರುವ ಅಧ್ಯಾಪಕರಿಗೂ, ವಿದ್ಯಾರ್ಥಿಗಳಿಗೂ, ವಕೀಲರಿಗೂ, ಜಡ್ಡರಿಗೂ, ಹೆಚ್ಚಿಗೆ ಸರ್ವರಿಗೂ ಉತ್ತಮ ಪರಿಣಾಮಕಾರಿ ಔಷಧ.

ಕೇಸರಿ ಜೀವನ ದೊರಕುವ ಸ್ಥಳಗಳು :-

1. ಕೆನರಾ ಮೆಡಿಕಲ್ ಎಂಡ್ ಜನರಲ್ ಇನ್‌ಸ್ಟಿಟ್ಯೂಟ್, ಲಿ, ಉಡುಪಿ,
2 ವಿ. ವಿ ಶೆಣೈ, ಕೆಮಿಸ್ಟ್, ಕಾರ್ಕಳ, ೨ ಶಾ ಕಂಪೆನಿ, ಹೊಂಬನಕಟ್ಟೆ, ಮಂಗಳೂರು ಅಥವಾ ಕೆಳಗಿನ ಸೋಲ್ ಏಜಂಟರಲ್ಲಿ –

ZANDU

ದಾವೋದರ್ ಎಂಡ್ ಕೊ.
113 ನ್ಯಾಯಿಯಪ್ಪ ನಾಯಕನ್ ಸ್ಟ್ರೀಟ್,
ಪಿ. ಟಿ ಮದ್ರಾಸು

ವಾರದ ಸುದ್ದಿ

ಆಂಗ್ಲೋ ಇಂಡಿಪ್ಸ್ ಮಾತುಕತೆಯಲ್ಲಿ ಪ್ರಗತಿ

ಆಂಗ್ಲೋ ಇಂಡಿಯನ್ ಶಂಟಿಯನ್ನು ಜಗೆ ಹೆರಿಸಲು ಮಾತುಕತೆ ಪ್ರಾರಂಭಿಸುವದಕ್ಕಾಗಿ ಬ್ರಿಟನ್ನು ಔಪಚಾರಿಕವಾಗಿ ಪ್ರತಿನಿಧಿಸುವವೆಂದು ಅಧಿಕೃತವಾಗಿ ತಿಳಿದು ಬಂದಿರುವದು.

ಇಟಲಿ ರಕ್ಷಿಯಗಳೊಳಗೆ ಮತಭೇದ

ಸಂ. ರಾ. ಸಂಸ್ಥೆಯಲ್ಲಿ ಇಟಲಿಗೆ ಪ್ರವೇಶ ಸಿಗದಂತೆ ರಷಿಯವು ಮೇಲಿಂದ ಮೇಲೆ ತನ್ನ ಪ್ರತಿಬಂಧಾಧಿಕಾರವನ್ನು ಪ್ರಯೋಗಿಸುವದರ ಬಗ್ಗೆ ನಿವೇದಿಸಿ ವ್ಯಕ್ತ ಮಾಡುವ ಸಲುವಾಗಿ ಇಟಲಿಯು ನಿನ್ನೆಯ ದಿವ. ಶಾಂತಿ ಒಡಂಬಡಿಕೆಯನ್ವಯ ತಾನು ರಚಿಸುವ ಬಗ್ಗೆ ಪೂರ್ವಸಭೆಯಾದ ಕಾರಣಗಳನ್ನು ಕದ್ದು ಗೊಳಿಸಿದೆಂದು ತಿಳಿಯುತ್ತದೆ.

ಅಮೆರಿಕೆ ಸಂಗ್ರಹಿಸಿದ ಅಣು ಬಾಂಬುಗಳೆಷ್ಟು?

1945ರಲ್ಲಿ ಜಪಾನಾಕ್ರಮಣದ ಮೇಲೆ ಪ್ರಯೋಗಿಸಿದಂಥ 1000ಕ್ಕಿಂತ ಹೆಚ್ಚು ಅಣುಬಾಂಬುಗಳು ಅಮೆರಿಕೆಯು ಇಳಿ ಇರಬಹುದೆಂದು ಅಣುಶಕ್ತಿ ಸಂಶೋಧನ ಪಜ್ಞರಾದ ಡಾ. ರಾಲ್ಫಿಲ್ಬರ್ಟ್ ಇವರು ಕಾರ್ಲಿಯಸ್ ಎಂಬ ಪತ್ರಿಕೆಯಲ್ಲಿ ಬರೆದಿರುವರು.

ಪಂಜಾಬದಲ್ಲಿ ರಾಷ್ಟ್ರಾಧ್ಯಕ್ಷರ ಆಳಿಕೆ

ಪಂಜಾಬದಲ್ಲಿ ಚುನಾವಣೆಗಳು ಇನ್ನು ಸ್ವಲ್ಪವೇ ದಿನಗಳಲ್ಲಿ ಮುಗಿಯಲಿವೆ. ಲಬಳಿಕ ಭಟ್ಟಿನಾತ್ಮಕ ವಿಧಾನವು ಪ್ರಸ್ತಾಪಿಸಲ್ಪಟ್ಟು ಆ ಮೇಲೆ ಮತ್ತೆರಡು ತಿಂಗಳ ಕಾಲ ಕಳೆಯುವದರಿಂದ ಅಲ್ಲಿಯ ವರೆಗೆ ರಾಷ್ಟ್ರಾಧ್ಯಕ್ಷರ ಆಳಿಕೆಯೇ ಇರಬೇಕೆಂಬುದಾಗಿ ಪಾರ್ಲಿಮೆಂಟು ಸೂಚನೆಯನ್ನು ಅಂಗೀಕರಿಸಿತು.

ಮುಂಬಯಿ ನೂತನ ಮಂತ್ರಿಮಂಡಳ

ಮುಂಬಯಿ ಹೊಸ ಕಾಂಗ್ರೆಸ್ ಶಾಸನ ಸಭಾ ಪಕ್ಷವು ಎಪ್ರಿಲ್ ಮೊದಲ ವಾರದಲ್ಲಿ ಕೂಡಿ ಹೊಸ ಮಂತ್ರಿಮಂಡಲದಲ್ಲಿ ಯಾರು ಯಾರಿರಬೇಕೆಂಬುದನ್ನು ನಿರ್ಧರಿಸಲಿರುವದು. ಮಂತ್ರಿಗಳ ಹೊರತು ಉಪಮಂತ್ರಿಗಳ ಸಂಖ್ಯೆ ಹಿಂದಿನಿಂತ ಹೆಚ್ಚಾಗಬಹುದೆಂದು ಹೇಳಲಾಗಿದೆ.

ಕಾಂಗ್ರೇಸ ಧುರೀಣರಲ್ಲಿ ತಿಸ್ಸಿನ ಅವಶ್ಯಕತೆ

ಕಾಂಗ್ರೆಸ್ ಅಧ್ಯಕ್ಷ ನೆಹರೂರವರು ಲೋಕಸಭೆಯ ಕೊನೆಯ ಅಧಿವೇಶನದಲ್ಲಿ "ಸದ್ಯದ ಚುನಾವಣೆಗಳ ಮೂಲಕ ಕಾಂಗ್ರೆಸ ಧುರೀಣರಲ್ಲಿ ಹೆಚ್ಚಿನ ತಿಸ್ಸು ಇರಬೇಕಾದುದು ಅಗತ್ಯವಾಗಿದೆ ಎಂಬುದು ಕಂಡು ಬಂದಿದೆ. ಶಾಸನ ಸಭೆಯ ಧುರೀಣರ ಆಯ್ಕೆ ಸರ್ವಾನುಮತದಿಂದಾಗುವದು ಅವಶ್ಯವಿದೆ. ವಿರುದ್ಧಾಭಿಪ್ರಾಯಗಳು ಮತ್ತು ಪಂಗಡ ಸ್ಪರ್ಧೆಗಳು ಕಂಡು ಬರಬಾರದು" ಎಂದಿರುವರು.

ದೇಶಮುಖರ ಲಂಡನ ಯಾತ್ರೆ

ಭಾರತದ ಆರ್ಥಮಂತ್ರಿ ಬ್ರಿಟಿಶ ಆರ್ಥಮಂತ್ರಿ ಬಟ್ಲರರೊಡನೆ ಸ್ಟರ್ಲಿಂಗ ಪ್ರದೇಶ ಆರ್ಥಿಕ ಪ್ರಶ್ನೆಯ ಕುರಿತು ಚರ್ಚೆ ನಡೆಸಿ ಭಾರತಕ್ಕೆ ಹೊರಟಿರುವರು. ಇನ್ನೂ ಹೆಚ್ಚಾಗಿ ಭಾರತಕ್ಕೆ ಸಾಲ ಕೊಡುವ ಧೋರಣ–ಸರಕಾರದ ವೆಚ್ಚದ ಮೇಲೆ ಕಡಿತ, ದೀರ್ಘಾವಧಿಯಲ್ಲಿ ಸಾಲ ಪಡೆಯುವಿಕೆ ಅಧಿಕ ನಿರ್ಯಾತ ಉತ್ಪನ್ನ ಮತ್ತು ಆಮದಾತ ಕಡಿತ ಇವುಗಳ ಮೂಲಕ ಆತಿ ಪ್ರಸರಣವನ್ನು ತಡೆಗಟ್ಟುವ ಸಂಬಂಧದಲ್ಲಿ ಮಾತುಕತೆಗಳು ನಡೆದುವೆಂದು ಗೊತ್ತಾಗಿದೆ.

'ಬಿ' ಪ್ರಾಂತದಲ್ಲಿ ಉಪದೇಶಕರ ನೇಮಕ

'ಬಿ' ವಿಧಾನದ ಪ್ರಾಂತಗಳಲ್ಲಿ ಉಪದೇಶಕರನ್ನು ನೇಮಿಸಲು ಭಾರತ ಸರಕಾರವು ನಿರ್ಧರಿಸಿದೆಯೆಂದು ತಿಳಿಯುತ್ತದೆ. ಇವರು ಸಲಹೆಗಾರರು ಇಲ್ಲವೆ ಪ್ರದೇಶಿಕ ಕಮಿಶನರರು ಮಾಡುತ್ತಿದ್ದ ಕೆಲಸವನ್ನೇ ಮಾಡುವರು.

ಮದ್ರಾಸದಲ್ಲಿ ಪ್ರಜಾಪಕ್ಷ

ಮದ್ರಾಸ ಶಾಸನ ಸಭೆಯ ಶ್ರೀ ವಿ. ಪ್ರ. ಪಕ್ಷದ ಸದಸ್ಯರ ನಿಲುಮೆಯ ಬಗ್ಗೆ ಪ್ರಸ್ತಾಪಿಸುತ್ತಾ ಆಚಾರ್ಯ ಕೃಪಲಾನಿಯವರು "ಕೃಷಕ ಮಜದೂರ ಪ್ರಜಾ ಪಕ್ಷವು ಇನ್ನೂ ಬಾಲ್ಯ ದೆಸೆಯಲ್ಲಿರುವದರಿಂದ ಮದ್ರಾಸ ಶಾಸನ ಸಭೆಯಲ್ಲಿ ಆದೇ ವಿರೋಧಿಪಕ್ಷವಾಗಿರಲು ಬಯಸುವದು" ಎಂದರು.

17410 ಜನರು ಆದಾಯ ಕರ ತಪ್ಪಿಸಿದರು.

1951ನೇ ಡಿಸೆಂಬರ 31ರ ವರೆಗೆ 17410 ಜನರು ಆದಾಯ ಕರವನ್ನು ತಪ್ಪಿಸಿ ಉಳಿದ ಹಣದ ವಿವರಗಳನ್ನು ತಾವಾಗಿಯೇ ತಿಳಿಸಿರುವರು. ಈ ಹಣವು ಒಟ್ಟಿಗೆ ಸುಮಾರು 62 ಕೋಟಿಯೊಗುವದೆಂದು ತಿಳಿಯುತ್ತದೆ.

ಮುಂದಿನ ರಾಷ್ಟ್ರಾಧ್ಯಕ್ಷರಾರು?

ಮುಂದಿನ ರಾಷ್ಟ್ರಾಧ್ಯಕ್ಷರಾರಾಗಬಹುದೆಂಬ ಬಗ್ಗೆ ದಿಲ್ಲಿಯ ಕಾಂಗ್ರೆಸ್ ಕಾರ್ಯಕರ್ತರಲ್ಲಿ ಚರ್ಚೆ ನಡೆದಿದೆ. ಅಂತರ್ಗದಲ್ಲಿ ಒಂದು ಬಗೆಯ ಭಿನ್ನಾಭಿಪ್ರಾಯ ಹಾಗೂ ಸ್ಪರ್ಧೆಯ ಸುದ್ದಿ ಕೇಳಿ ಬರುತ್ತಿದೆಯಾದರೂ ಡಾ. ರಾಜೇಂದ್ರ ಪ್ರಸಾದರೇ ತಿರುಗಿ ರಾಷ್ಟ್ರಾಧ್ಯಕ್ಷರಾಗಿ ಬರುವ ಸಂಭವ ಹೆಚ್ಚೆಂದು ತೋರುವದು. ಸೂಚಿತವಾಗಿರುವ ಇನ್ನೆರಡು ಹೆಸರುಗಳೆಂದರೆ ಮೌಲಾನಾ ಅಬ್ದುಲ್ ಕಲಾಂ ಆಜಾದ್, ಡಾ. ರಾಧಾಕೃಷ್ಣನ್.

ಲಂಚಪ್ರತಿಬಂಧ ಕಾಯಿದೆಗೆ ಜೀವದಾನ

1947ರಲ್ಲಿ ಲಂಚಗುಳಿತನ ಪ್ರತಿಬಂಧಕ ಕಾಯದೆಯಲ್ಲಿ ಸರಕಾರಿ ನೌಕರರ ಅಪರಾಧಿತದುರ್ವರ್ತನೆಯಿಂಬ ಹೊಸ ಭಾಗವನ್ನು ಸೇರಿಸಿ ನಿರಂತರ ಲಂಚಗುಳಿಯಿದ್ದವನನ್ನು ಅಪರಾಧಿಯೆಂದು ಗಣಿಸಬೇಕೆಂದು ವಿಧಿಸಿ ಆದರ ಅವಧಿಯನ್ನು ೨ ವರ್ಷ ನಿಶ್ಚಯಿಸಲಾಗಿತ್ತು. ಸದ್ಯ ಇದರ ಅವಧಿಯು ತೀರಿದ್ದು ಸರಕಾರದವರು ಲಂಚಗುಳಿತನದ ಇತೀ ಪ್ರಶ್ನೆಯ ಸಂಬಂಧದಲ್ಲಿ ವಿಚಾರ ಮಾಡಲು ಸಮಿತಿಯನ್ನು ನೇಮಿಸಿದ್ದರು. ಆ ಸಮಿತಿಯು ಸರಕಾರಿ ನೌಕರರ ಕ್ರಿಮಿನಲ್ ದುರ್ವರ್ತನೆಗೆ ಸಂಬಂಧಿಸಿದ ಭಾಗದ ಅವಧಿಯನ್ನು ಮತ್ತೆ 5 ವರ್ಷ ಬೆಳೆಸಲು ಸೂಚಿಸಿದ್ದರಿಂದ ಸರಕಾರವು ಆ ಸೂಚನೆಯನ್ನು ಮನ್ನಿಸಿರುವುದು.

ಡಾಂಗೆಯವರು ನುತ್ತೆ ಸ್ಪರ್ಧಿಸುವರು?

ಕಮ್ಯುನಿಸ್ಟ ಧುರೀಣರಾದ ಎಸ್. ಎ. ಡಾಂಗೆಯವರನ್ನು ತೆಲಂಗಣ ಭಾಗದಿಂದ ಪುನಃ ಲೋಕ ಸಭೆಗೆ ನಿಲ್ಲಿಸಲಾಗುವದೆಂದು ಹೈದರಾಬಾದ ಕಮ್ಯುನಿಸ್ಟ ಧುರೀಣರಿಂದ ರವಿನಾರಾಯಣ ರೆಡ್ಡಿಯವರು ಪತ್ರಿಕಾ ಪರಿಷತ್ತಿನಲ್ಲಿ ತಿಳಿಸಿರುವರು.

ನ್ಯೂಯಾರ್ಕ್ ಪತ್ರಿಕೆಯ ಬುದ್ಧಿವಾದ

ನ್ಯೂಯಾರ್ಕದ, ನ್ಯೂಯಾರ್ಕ ಟೈಮ್ಸ್ ಪತ್ರಿಕೆಯು ಭಾರತದ ಚುನಾವಣೆಗಳ ವಿಚಾರವಸ್ತು ಬರೆಯುತ್ತ "ಭಾರತದ ಚುನಾವಣೆಗಳು ಪ್ರಜಾಪ್ರಭುತ್ವದ ಕಾರ್ಯಾಚರಣೆಯಲ್ಲಿ ಒಂದು ಉತ್ತಮ ಉದಾಹರಣೆಯಾಗಿದೆ. ವಿಶಿಯದಲ್ಲಿರುವ ಪ್ರಜಾ ಪ್ರಭುತ್ವ ಆಡಳಿತಗಳಲ್ಲಿ ಭಾರತವೇ ಶ್ರೇಷ್ಠವಾಗಿದೆ. ತಮ್ಮ ದೇಶದಲ್ಲಿ "ಇಂಥ ಎಚ್ಚರಿಕೆ ಬಂದಿರುವದು ಶ್ರೀ ನೆಹರು ಮತ್ತು ಅವರ ಅನುಯಾಯಿಗಳಿಗೆ ಹಿತವಾದಾಯಕವಾಗಬಹುದು. ಭಾರತವು ಸ್ವತಂತ್ರವಾಗಿರಬೇಕೆಂದಿದ್ದರೆ ಅದು ಪಾಶ್ಚಿಮಾತ್ಯ ಪ್ರಭುತ್ವ ರಾಷ್ಟ್ರಗಳ ಕುಟುಂಬದಲ್ಲಿದ್ದುದರಿಂದ ಮಾತ್ರವೇ ಸಾಧ್ಯ ಎಂಬ ಮಾತು ಅವರಿಗೆ ಮನವರಿಕೆಯಾಗಬಹುದು ಎಂದು ಹೇಳಿದೆ.

14 ಜನರು ಅಗ್ನಿನಾರಾಯಣನಿಗೆ ಆಹುತಿಯಾದರು

ಕರ್ನೂಲಿನಿಂದ 90 ಮೈಲು ದೂರದ ಅಬ್ಬಲ್ಲಪುರಂ ಎಂಬಲ್ಲಿ ಎರಡು ಪಂಗಡಗಳೊಳಗೆ ಏಕಾಏಕಿಯುಂಟಾಗಿ ಒಬ್ಬನ ಸತ್ತು ಇನ್ನೈವರಿಗೆ ಗಾಯವಾಯಿತು. ಒಬ್ಬನು ಸತ್ತು ಇಬ್ಬರು ಗಾಯಗೊಂಡ ಈ ಸ್ಥಿತಿಯನ್ನು ಲಕ್ಷಿಸಿ ಒಂದು ಪಂಗಡದವರು ಒಂದು ಮನೆಯಲ್ಲಿ ಅಡಗಿಕೊಂಡರು. ವಿರುದ್ಧ ಪಕ್ಷದವರು ಆ ಮನೆಗೆ ಹೊರಗಿನಿಂದ ಬೆಂಕಿ ಹಾಕಿ ಬಿಮನೆಷ್ಟೆ ಸುಟ್ಟು ಬೆಂಕಿಕೊಟ್ಟು ಬಿಟ್ಟರು. ಕಕ್ಷಲವಾಗಿ ಮನೆಯೊಳಗಿನ 14 ಜನರು ಭಸ್ಮೀಭೂತರಾದರು.

Happy New-Year Greetings

We are glad to announce that 12,000 shares of our Bank of the total value of Rs 3 lacs recently floated have been over-subscribed. We are grateful to the public for the increased confidence they have reposed in us We assure that we will do our utmost to deserve this well-placed confidence.

THE VIJAYA BANK LTD.

ESTD 1931. H O MANGALORE.

B. M. Shetty, B A B L. Secretary.

P J. Shetty, M A B L. O A I I B, Superintendent.

B Manjaya Hegde, Advocate.
[President, District Board S. K.]
Chairman of the Board of Directors.

ಸಂರಕ್ಷಣೆ ಹಾಗೂ ಸಂಚಯಕ್ಕೆ

ದಿ ನ್ಯೂ ಗಾರ್ಡಿಯನ್ ಓಫ್ ಇಂಡಿಯಾ
ಲೈಫ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.
ಸ್ಥಾಪನೆ] ಹೆಡ್ ಆಫೀಸು: ಮದ್ರಾಸು. [1934

ವಿಚಾರಿಸಿರಿ

ಈ ಪ್ರಗತಿಪರ ಕಂಪೆನಿಯಲ್ಲೊಂದು ಪಾಲಿಸಿಯನ್ನು ಪಡೆಯುವುದು ಉತ್ತಮ ದರ್ಜೆಯ ಕೀವಣಾಸ; ಅಂತೆಯೇ ಈ ಸಂಸ್ಥೆಯ ಏಜನ್ಸಿ ಪಡೆಯುವುದು ಲಾಭ್ಯ ದಾಯಕ ವೃವಹಾರದ ಸಂಬಂಧ.

ಈ ಕಂಪೆನಿಯ ಪ್ರತಿನಿಧಿ ಪಡೆಯಲು ಉತ್ಸಾಹೀ ಜನಪ್ರೀತ ವ್ಯಕ್ತಿಗಳ ಅರ್ಜಿಗಳಿಗೆ ಸದಾ ಸುಸ್ವಾಗತ. ದಯಮಾಡಿ ಈ ವಿಳಾಸಕ್ಕೆ ಬರೆಯಿರಿ.

ವಿ. ಬ್ರಾಂಚ್ ಮೆನೇಜರ್;
ಡಾಯಮಂಡ್ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು, (ದ. ಕ.)



BALLBEARING
—THE LIFEBLOOD OF THE INDUSTRY!

Dealers in:
ROTARY OIL MILLS
FLOUR MILLS
BALL, ROLLER & THRUST BEARINGS

TELEGRAMS—'CHEAPTRADE'

A. RAMSON AND CO.
68 MISTRI BUILDING BALARAM ST. BOMBAY 1

ಸರ್ವರಿಗೂ ಸರ್ವಸಮ ರೀತಿಯಲ್ಲಿ ಸೇವೆ ಸಲ್ಲಿಸಿದ 46 ವರುಷಗಳ

ನೀವು ಸಣ್ಣ ಖಾತೆದಾರರಿರಬಹುದು ಅಥವಾ ದೊಡ್ಡ ಖಾತೆದಾರರಿರಬಹುದು
ನಾವಾದರೋ ಸರ್ವರಿಗೂ ಏಕತ್ರ ದೃಷ್ಟಿಯ ಲ್ಲಿಂದೇ ಸೇವೆಸಲ್ಲಿಸ ತ್ತೇವೆ.
ಮತ್ತು ತಾವೆಲ್ಲರೂ ನಮ್ಮೊಡನೆ ಬೇಂಕ್ ವ್ಯವಹಾರ ನಡೆಸುವಾಗ
ತಾವು ತೃಪ್ತಿಪಟ್ಟು ಹರ್ಷಚಿತ್ತರಾಗಬೇಕೆಂಬುದೇ ನಮ್ಮ ಹಿರಿಯಾಸೆ.
ಆದುದರಿಂದಲೇ

ದಿ ಕೆನರಾ ಬೇಂಕಿಂಗ್ ಕೋರ್ಪರೇಶನ್ ಲಿಮಿಟೆಡ್

ಇವರ ಕೂಡೆ ಬೇಂಕಿಂಗ್ ವ್ಯವಹಾರ ನಡೆಸುವುದು ಉತ್ತಮ.
ಸ್ಥಾಪನೆ: 1906] ಹೆಡ್ ಆಫೀಸು. ಉಡುಪಿ (ದ. ಭಾ.)

ನವಯುಗ

ಚಂದಾ ವಿವರ
ವರ್ಷಕ್ಕೆ ರೂ. 5—12—0
6 ತಿಂಗಳಿಗೆ ರೂ. 3—0—0

ಗುರುವಾರ ಉಡುಪಿ, ೧೪-೨-೧೯೫೩

ಭಾರತ ಚಲಚಿತ್ರೋತ್ಸವ

ಮುಂಬಯಿ ಮದ್ರಾಸ ಮುಂತಾದ ಕಡೆಗಳಲ್ಲಿ ಒಂದು ವಾರದ ಕೆಳಗೆ ಚಲಚ್ಚಿತ್ರೋತ್ಸವವನ್ನು ಭಾರತ ಸರಕಾರ ನೆರವೇರಿಸಿತು. ಈ ಸಮಾರಂಭಕ್ಕೆ ಅಮೆರಿಕಾ, ಇಂಗ್ಲಂಡ, ರಶಿಯ, ಫ್ರಾನ್ಸ್, ಇಟಲಿ, ಜರ್ಮನಿ ಮುಂತಾದ 23 ರಾಷ್ಟ್ರಗಳ ದಿಗ್ದರ್ಶಕರೂ ಹಂಚಿಕೆಗಾರರೂ, ನಟರೂ ಆಗಮಿಸಿದ್ದರು. ಇಡಿಯ ಏಶಿಯದಲ್ಲೇ ಪ್ರಥಮ ಹಾಗೂ ವೈಭವ ಪೂರ್ಣವಾದ ಉತ್ಸವವೆಂದು ಹೆಳಲಾಗಿದೆ. ಸಿನೆಮಾ ಪ್ರಪಂಚದಲ್ಲಿ ಅಮೆರಿಕೆಯನ್ನು ಬಿಟ್ಟರೆ ಭಾರತಕ್ಕೇನೇ ಪ್ರಥಮ ಸ್ಥಾನ ಸಲ್ಲುವದು. ಭಾರತದ ಹಲವಾರು ಉದ್ಯಮಗಳಲ್ಲಿ ಚಲನಚಿತ್ರವು ಅತ್ಯಂತ ಪ್ರಧಾನವಾದ್ದಾಗಿರುತ್ತದೆ. ಕೀರಕ ಹಣ ವ್ಯಯಿಸಿ ಸಾರ್ವಜನಿಕ ಜೀವನದ ಮೇಲೆ ಒಳ್ಳೆ ಪರಿಣಾಮವನ್ನುಂಟು ಮಾಡಬಲ್ಲ ಈ ಉದ್ಯಮವನ್ನು ಊರ್ಜಿತಗೊಳಿಸುವುದೂ, ಸುಧಾರಣೆ ಹೊಂದುವಂತೆ ಮಾಡುವದೂ ಅತೀ ಅವಶ್ಯವಾಗಿದೆ. ನವ್ಯ ದೇಶದಲ್ಲಿ ದಿನದಿಂದ ದಿನಕ್ಕೆ ಚಲಚಿತ್ರಗಳೇನೋ ಹೆಚ್ಚಾಗಿ ಬರುತ್ತಿವೆ. ಆದರೆ ಅವುಗಳು ಬಹುತೇಕ ಸರಿಯಾದ ದಿಗ್ದರ್ಶನವಿಲ್ಲದೆ ಜನತೆಯ ವನಸ್ಸಿನ ಮೇಲೆ ವಿಶೇಷ ಪರಿಣಾಮ ಮಾಡಿದಂತಿಲ್ಲ. ತಾಂತ್ರಿಕವಾಗಿ ನಮ್ಮಲ್ಲನೇಕ ಸುಧಾರಣೆಗಳಾಗಿರುವದಾದರೂ ವಿದೇಶೀಯರ ಚಿತ್ರದ ಹೋಲಿಕೆಯೊಂದಿಗೆ ನಮ್ಮ ಪ್ರಗತಿ ಸಾಲದೆಂದು ತೋರುವದೆ. ಅಮೆರಿಕಾ ಹಾಗೂ ಇಂಗ್ಲಂಡದ ಚಲಚಿತ್ರಗಳು ನವ್ಯ ರಂಗಭೂಮಿಯಲ್ಲಿ ಜನತೆಯನ್ನಾಕರ್ಷಿಸುತ್ತಿರುವದನ್ನು ನಾವು ಲಕ್ಷ್ಯದಲ್ಲಿಟ್ಟುಕೊಳ್ಳಬೇಕು. ಆ ಚಿತ್ರಗಳಿಗಾಗಿ ಆ ರಿಸುವ ಕಥೆ–ಸಂವಿಧಾನ ತಾಂತ್ರಿಕ ತಜ್ಞತೆ ಇವುಗಳು ಅತ್ಯಂತ ಪ್ರಮುಖ್ಯವಾಗಿವೆ. ನವೀನವಾದ ಮಾರ್ಗವನ್ನು ತೋರಿಸುತ್ತಿರುವವರಲ್ಲಿ ಹೋಲಿವುಡ್ಡಿನ ವರೇ ಅಗ್ರಗಣ್ಯರು. ಭಾರತದ ಅನೇಕ ದಿಗ್ದರ್ಶಕರೂ ನಟರೂ ಹೋಲಿವುಡ್ಡಿಗೆ ತೆರಳಿ ಅಲ್ಲಿನ ಪರಿಚಯವನ್ನು ಮಾಡಿಕೊಂಡು ಬಂದದ್ದುಂಟು. ಇಂತಹ ಅಭ್ಯಾಸಗಳಿಂದ–ಚಿಸುಕರಣೆಯಿಂದ– ಅನೇಕ ಚಿತ್ರಗಳಲ್ಲಿ ಪ್ರಗತಿಪರ ಛೋಟೆ ಎಪಿಸಿದ್ದು ಕಂಡು ಬರುತ್ತದೆ.

ಭಾರತದ ಪ್ರಧಾನ ಕೇಂದ್ರಗಳಲ್ಲಿ ಜರಗಿಸಲ್ಪಡುವ ಈ ಉತ್ಸವದಲ್ಲಿ ನಮ್ಮಲ್ಲಿಯ ಕಲಾವಿದರೂ ದಿಗ್ದರ್ಶಕರೂ— ಪ್ರಕಾಶಕರೂ- ವಿದೇಶೀಯ ಚಿತ್ರಗಳೊಂದಿಗೆ ಜಗತ್ಪ್ರಸಿದ್ಧರಾದ ತಜ್ಞರೊಡನೆಯೂ ಸಮಾಲೋಚನೆ ನಡೆಸಿ ವು ಸುಯೋಗವು ಒದಗಿತು. ಅಮೆರಿಕಾ, ರಶಿಯಾ, ಫ್ರಾನ್ಸ್ ಮುಂತಾದ ರಾಷ್ಟ್ರಗಳು ತಮ್ಮ ಅಮೂಲ್ಯ ಕೃತಿಯನ್ನು ಪ್ರದರ್ಶನ ಮಾಡಿದವು. ಭಾರತವೂ ಬೇರೆಬೇರೆ ಭಾಷೆಗಳ ನಾಲ್ಕು ಚಿತ್ರಗಳನ್ನು ಪ್ರದರ್ಶಿಸಿದೆ. ಭಾರತದಲ್ಲಿಯ ಪ್ರಧಾನ ಉದ್ಯಮವಾದ ಚಲಚ್ಚಿತ್ರದ ಸರ್ವಾಂಗೀಣ ಉನ್ನತಿಯನ್ನು ಕೈಗೊಳ್ಳಲು ಇದೀಗ ಸರಿಯಾದ ಸಮಯವಾಗಿದೆ. ವಿದೇಶೀಯ ತಜ್ಞರೊಡನೆ ಚಲಚ್ಚಿತ್ರೋದ್ಯಮದ ಪ್ರಗತಿಯ ಖಗ್ಗೆ ಸಲತೆಯನ್ನು ಪಡೆಯಬಹುದು.

ಚಲಚ್ಚಿತ್ರ ತಯಾರಿಕೆಯಲ್ಲಿ ಭಾರತವು ಪ್ರಧಾನ ಭೂಮಿಕೆಯನ್ನು ಪಡೆಯುವದಾದರೂ ರಂಗ ಮಂಟಪದ ಮೇಲೆ ಬಂದ ಎಲ್ಲ ಚಿತ್ರಗಳೂ ಕಲಾಪೂರ್ಣವಾಗಿಲ್ಲ. ಮಾತ್ರವಲ್ಲ ಆರ್ಥಿಕ ಲಾಭದ ದೃಷ್ಟಿಯಿಂದ ಕಾಲ್ಪನಿಕವೂ ಅಭಾಸಪೂರ್ಣವೂ- ಆದ ಕಿಚ್ಚು ಕತೆಗಳನ್ನು ಆರಿಸಿಕೊಳ್ಳುವ ಪದ್ಧತಿ ಇನ್ನೂ ಉಳಿದಿದೆ. ಈಚೆಗೆ ರಂಗದ ಮೇಲೆ ಬಂದ ಚಿತ್ರಗಳಲ್ಲಿ ಸೇಕಡಾ 70 ಯಾ 80 ಪ್ರತಿಶತ ಸಿನೆಮಾಕತೆ ಪ್ರೇಮ ದಾಹದಿಂದ ತೊಳಲಾಡುವಂತಹದ್ದಾಗಿರುತ್ತವೆ. ಕಲೆ, ಜ್ಞಾನ ಸಂಪತ್ತಿಗೆ ಆಗರವಾದ ಭಾರತದಲ್ಲಿ ಸುಸಂಸ್ಕೃತವಾದ ಚಿತ್ರಗಳು ಮೂಡದಿಯೆಂದು ಹೇಳಲು ಕೋಜನೀಯವೆನ್ನಿಸದೀತು. ಸಿನೇಮಾ ನೋಡುವ ಜನಕ್ಕೆ ಗಂಭೀರ ದೃಶ್ಯಗಳು ಸೇರುವುದಿಲ್ಲವೆಂಬ ವಾದವೂ ಇದೆ. ಆದರೆ ಕೇಳ್ವಟ್ಟದ ಹಾಸ್ಯ ಕಾವುಸೂರಿತ ಪ್ರೇಮಗಳಿಂದ ಅಂತಹ ಜನರ ಜಿಭುಯಿಯನ್ನು ಮತ್ತಷ್ಟು ಕಡಿಯುವ ಸಾಹಸವನ್ನು ಚಲಚಿತ್ರಗಳು ಮಾಡಲು ಸಾಧ್ಯವೇ? ನವ್ಯ ನಾಡಿನ ವೈಭವ–ಚಾಂತ್ರಿಕ ಹಿನ್ನೆಲೆ—ಜನತೆಯ ಸಂಸ್ಕೃತಿ ಇವಿಷ್ಟು ಆ ಚಿತ್ರಗಳಲ್ಲಿ ಕಾಣಿಸಲು ಸಾಧ್ಯವಿಲ್ಲವೇ?

ಭಾರತದ ಪ್ರಧಾನ ಕೇಂದ್ರಗಳಲ್ಲಿ ಜರಗಿದ ಈ ಉತ್ಸವದಿಂದ ನೂತನ ನಾಗರಿಕರಾಗಬೇಕೆನ್ನುವದರ ಜೊತೆಗೆ ಚಲಚಿತ್ರ ಉದ್ಯಮಗಾರರ ಮತ್ತು ಪ್ರದರ್ಶಕರ ಕರ್ತವ್ಯಕರ್ತವ್ಯಗಳೂ ಪರಿಹಾರವಾಗಿದೆಯೆಂಬುದನ್ನು ಮರೆಯಲಾಗದು. ಚಲನಚಿತ್ರ ಜನಜೀವನವನ್ನು ಚಿತ್ರಿಸುವದು ಮಾತ್ರವಲ್ಲದೆ ಶೈಕ್ಷಣಿಕ ಬೌದ್ಧಿಕ ಮಾರ್ಗದರ್ಶನವನ್ನೂ ಮಾಡುವದು. ಅಮೂಲ್ಯ ಚಿತ್ರಗಳು ತೆರೆಯ ಮೇಲೆ ಬಂದು ಜನತೆಯಲ್ಲಿ ಜ್ಞಾನವಿಕಸವನ್ನುಂಟು ಮಾಡಲಿ!—ಕಲಾಭಿವೃದ್ಧಿಯನ್ನು ಬೆಚ್ಚಿಸುವಂತಾಗಲೆಂದು ನಾವು ಹಾರೈಸುವುದು ಸೂಕ್ತವೇ ಆಗಿದೆ. ಭಾರತ ಸರಕಾರವು ಪ್ರಪಂಚದ ಬೇರೆ ಬೇರೆ ಕಡೆಯ ಕಲಾ ಭಿಜ್ಞಾನವನ್ನು ಕರೆಸಿಕೊಂಡು, ಅಕ್ಯಂತ ವೈಭವಪೂರ್ಣವಾದ ಚಲಚ್ಚಿತ್ರೋತ್ಸವವನ್ನು ನಡೆಸಿದುದು ಅಭಿನಂದನೀಯವಾಗಿದೆ.

ಉಡುಪಿ

ಶಾಲಾ ವರ್ಧಂತಿ ಉಡುಪಿ ಕೃಷ್ಣಿಯರ್ ಹೈಸ್ಕೂಲಿನ ವರ್ಧಂತಿ ಸಮಾರಂಭವು ಇದೇ ತಾ. 9ರಂದು ಜಿಲ್ಲಾ ಕಲೆಕ್ಟರ್ ಶ್ರೀ ಎ. ಆರ್. ರಾಜಗೋಪಾಲ್, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರಂಭಿಸಲಾದ ಬಳಿಕ ಹೆಡ್ಮಾಸ್ಟರ್ ಶ್ರೀ ಎಸ್. ಎನ್. ಮಯ್ಯ ಸರು ಶಾಲಾ ವರದಿಯನ್ನೊಪ್ಪಿಸಿದರು. ಈ ಶಾಲೆಯಿಂದ ಹೊರಬಿದ್ದ ವಿದ್ಯಾರ್ಥಿಯೂ ಕಾರ್ಕಳದ ಬೋಧಿ ಹೈಸ್ಕೂಲಿನ ಹೆಡ್ಮಾಸ್ಟರರೂ ಆದ ಶ್ರೀ ವಿ. ಶ್ಯಾಮರಾಯ ಶೆಟ್ಟಿಯವರು ಶಾಲಾಸ್ಥಿತಿ ಗತಿಯ ವರ್ಣನೆಯನ್ನು ಇಂಗ್ಲಿಷಿನಲ್ಲೂ ಕನ್ನಡದಲ್ಲೂ ಕರ್ಣಾನಂದಕರವಾಗಿ ಮಾಡಿದರು. ಬಹುಮಾನ ವಿತರಣೆಯಾದ ನಂತರ ಅಧ್ಯಕ್ಷರು ಶಾಲೆಯ ವಿವಿಧ ಚಟುವಟಿಕೆಗಳನ್ನು ಕೊಂಡಾಡಿ ಶಾಲೆಯು ಉತ್ತರೋತ್ತರ ಅಭಿವೃದ್ಧಿಯನ್ನು ಹಾರೈಸಿದರು. ಬಳಿಕ ವಿವಿಧ ವಿನೋದಾವಳಿಗಳಾದುವು.

ಜಾನ ವಾರು ಪ್ರಚಿಕರ್ಷನ–ಉಡುಪಿ ಮುನಿಸಿಪಲ್ ಪ್ರಯಾಣಿಕರ ಬಂಗ್ಲೆಯಲ್ಲಿ ಇದೇ ತಾ. 10ರಂದು ಅಪರಾಹ್ನ ಜಾನುವಾರು ಪ್ರದರ್ಶನ ನಡೆಯಿತು. ಜಿಲ್ಲಾ ಕಲೆಕ್ಟರ ಶ್ರೀ ಎ. ಆರ್. ರಾಜರತ್ನಂ, ಅವರು ಪ್ರದರ್ಶನವನ್ನು ತೆರೆಯುತ್ತಾ ಜಾನುವಾರು ಸಂಪತ್ತಿನ ಮಹತ್ವವನ್ನು ವಿವರಿಸಿದರು. ಬಹುಮಾನ ವಿತರಣ ಸಮಾರಂಭವು ಶ್ರೀ ಶ್ರೀಪತಿ ಆಡಾಯರ ಅಧ್ಯಕ್ಷತೆಯಲ್ಲಿ ಜರುಗಿತು. ಶ್ರೀಗಳಾದ ಕುರ್ಕಾಲು ಗಣಪಯ್ಯ ಶೆಟ್ಟಿ, ಜಿಲ್ಲಾ ವೆಟರ್ನರಿ ಆಫೀಸರ್ ಮೊದಲಾದವರು ಉತ್ತಮ ದನ, ಎಮ್ಮೆ, ಕೋಣ ಮೊದಲಾದುವನ್ನು ಯೋಗ್ಯ ರೀತಿಯಲ್ಲಿ ಸಾಕುವಿಕೆಯ ಅವಶ್ಯಕತೆ ಮತ್ತು ಇಂತಹ ಪ್ರದರ್ಶನಗಳಿಂದ ಆಗುವ ಪ್ರಯೋಜನ ಇತ್ಯಾದಿ ವಿಷಯಗಳನ್ನೆತ್ತಿ ವಿವರಿಸಿದರು. ಶ್ರೀಮತಿ ಮನೋರಮಾ ಆಚಾರ್ಯರು ಬಹುಮಾನ ವಿತರಣೆ ಮಾಡಿದರು. ಕಮಿಟಿ ಜತೆ ಕಾರ್ಯದರ್ಶಿ ಶ್ರೀ ಗೆ. ನರಹರಿ ಕಾಮತರು ಧನ್ಯವಾದಗಳನ್ನರ್ಪಿಸಿದರು.

ಫೆನ್ಸಿ ಸೇಲ್ ಉದ್ಘಾಟನ— ಬಾಸೆಲ್ ಮಿಶನ್ ಆಸ್ಪತ್ರೆಯಲ್ಲಿ ಇದೇ ತಾ 9 ರಂದು ಬೆಳಿಗ್ಗೆ ಅಲ್ಲಿಯ ಶಿಬಂದಿಯಿಂದ ಏರ್ಪಡಿಸಲಾದ ಫೆನ್ಸಿ ಸೇಲನ್ನು ಶ್ರೀಮತಿ ಎ. ಆರ್. ರಾಜರತ್ನಂ, ಅವರು ಉದ್ಘಾಟಿಸಿದರು.

ಮಿಶನ್ ಆಸ್ಪತ್ರೆಯಲ್ಲಿ ಗಂಡಸರಿಗೆ ಪ್ರತ್ಯೇಕ ಕಟ್ಟಡ ವ್ಯವಸ್ಥೆ— ಉಡುಪಿಯ ಮಿಶನ್ ಆಸ್ಪತ್ರೆಯಲ್ಲಿ ಈ ತನಕ ಹೆಂಗಸರಿಗೆ ಮಾತ್ರ ಚಿಕಿತ್ಸೆಗಾಗಿ ಉಳಕೊಳ್ಳುವ ಸೌಕರ್ಯವಿತ್ತು. ಈ ಸೌಕರ್ಯವು ಗಂಡಸರು ದೊಗಿಗಳಿಗೂ ಸಿಕ್ಕಲು ಅನುಕೂಲವಾಗುವಂತೆ ಈಗೆಗೆ ಹೊಸ ಕಟ್ಟಡ ಪೊಂದುಕಟ್ಟಲಾಗಿತ್ತು. ಅದರ ಪ್ರಾರಂಭೋತ್ಸವವನ್ನು ಇದೇ ತಾ 10ರಂದು ಸಂಜೆ ಜಿಲ್ಲಾ ಕಲೆಕ್ಟರ್ ಶ್ರೀ ಎ. ಆರ್. ರಾಜರತ್ನಂ ಅವರು ನೆರವೇರಿಸಿದರು. ಆಸ್ಪತ್ರೆಯ ಲೇಡಿ ಡಾಕ್ಟರ್ (ಮಿಸ್) ಲೊಂಬಾರ್ಡ್ ಅವರು ಸ್ವಾಗತವಿತ್ತು ಕೆಲವು ಮಾತುಗಳನ್ನಾಡುತ್ತಾ ಹೊಸತಾಗಿ ಕಟ್ಟಲಾದ ಈ ಕಟ್ಟಡಕ್ಕೆ ವಿದ್ಯುದ್ದೀಪಗಳ ಸೌಕರ್ಯ ಇತ್ಯಾದಿ ಕೆಲವು ಅತ್ಯಾವಶ್ಯಕ ಕೆಲಸಗಳಾಗಲು ಬಾಕಿಯಿವೆ ಎಂದೂ ಮಹಾಜನರು ಈ ಕುರಿತು ಸಹಾಯ ನೀಡಿ ದೇವರ ಪ್ರೀತಿಗೆ ಪಾತ್ರರಾಗಬೇಕೆಂದರು. ಡಾ. ಪಿ. ಆರ್. ನಾಯಕ್, ಡಾ। ಉಮೇಶ ರಾವ್ ಮೊದಲಾದವರು ಡಾ। ಲೊಂಬಾರ್ಡ್, ಅವರ ಜನಪ್ರಿಯತೆಯ ನೈತ್ಕೆ ವರ್ಣಿಸಿದರು. ಉದ್ಘಾಟಕರು ತಮ್ಮ ಆಶಾಕ್ತಾಯ ಭಾಷಣದಲ್ಲಿ ವಿಸರಿಗೆ ವಿದ್ಯಾಕ್ಷೇತ್ರದಲ್ಲೂ, ನೈಸರ್ಗಿಕ ಕ್ಷೇತ್ರದಲ್ಲೂ ಜನಸೇವಾ ದೃಷ್ಟಿಯಿಂದ ಮಾಡುತ್ತಿರುವ ಕಾರ್ಯಗಳು ಅಭಿನಂದನೀಯವೆಂದೂ ಈ ಆಸ್ಪತ್ರೆಯು ಉಡುಪಿಗೂ, ಜಿಲ್ಲೆಗೂ, ಭೂಷಣಪ್ರಾಯವಾಗಿರುವುದೆಂದೂ ಹೇಳಿ, ಶುಭವನ್ನು ಕೋರಿದರು.

ರಾಷ್ಟ್ರೀಯ ಉಳಿತಾಯ ಸಪ್ತಾಹ ಪ್ರಾರಂಭೋತ್ಸವವನ್ನು ಜಿಲ್ಲಾ ಕಲೆಕ್ಟರ ಶ್ರೀ ಎ. ಆರ್. ರಾಜರತ್ನಂ, ಅವರು ದೋರ್ಸ್ ಹೈಸ್ಕೂಲಿನ ಜನತಾ ಮಂದಿರದಲ್ಲಿ ನೆರವೇರಿಸಿ ಬೇರೆ ಕಾರ್ಯಕ್ರಮಕ್ಕಾಗಿ ಹೊರಟುಹೋಗಬೇಕಾದುದರಿಂದ ಅಧ್ಯಕ್ಷತೆಯನ್ನು ಶ್ರೀ ಶ್ರೀಪತಿ ಆಡಾಯರಿಗೆ ಬಿಟ್ಟುಕೊಟ್ಟರು. ರಾಷ್ಟ್ರೀಯ ಉಳಿತಾಯ

ಚಲಚಿತ್ರ ಉದ್ಯಮಗಾರರ ಮತ್ತು ಪ್ರದರ್ಶಕರ ಕರ್ತವ್ಯಕರ್ತವ್ಯಗಳೂ ಪರಿಹಾರವಾಗಿದೆಯೆಂಬುದನ್ನು ಮರೆಯಲಾಗದು. ಚಲನಚಿತ್ರ ಜನಜೀವನವನ್ನು ಚಿತ್ರಿಸುವದು ಮಾತ್ರವಲ್ಲದೆ ಶೈಕ್ಷಣಿಕ ಬೌದ್ಧಿಕ ಮಾರ್ಗದರ್ಶನವನ್ನೂ ಮಾಡುವದು. ಅಮೂಲ್ಯ ಚಿತ್ರಗಳು ತೆರೆಯ ಮೇಲೆ ಬಂದು ಜನತೆಯಲ್ಲಿ ಜ್ಞಾನವಿಕಸವನ್ನುಂಟು ಮಾಡಲಿ!—ಕಲಾಭಿವೃದ್ಧಿಯನ್ನು ಬೆಚ್ಚಿಸುವಂತಾಗಲೆಂದು ನಾವು ಹಾರೈಸುವುದು ಸೂಕ್ತವೇ ಆಗಿದೆ. ಭಾರತ ಸರಕಾರವು ಪ್ರಪಂಚದ ಬೇರೆ ಬೇರೆ ಕಡೆಯ ಕಲಾಭಿಜ್ಞಾನವನ್ನು ಕರೆಸಿಕೊಂಡು, ಅತ್ಯಂತ ವೈಭವಪೂರ್ಣವಾದ ಚಲಚ್ಚಿತ್ರೋತ್ಸವವನ್ನು ನಡೆಸಿದುದು ಅಭಿನಂದನೀಯವಾಗಿದೆ.

ನಡೆಯುವ ಚಿತ್ರ–
ಕಿಶೋರ್ ಸಾಹು ನಿರ್ಮಿಸಿದ
ಶ್ರೀ ಕೃಷ್ಣ ಜನ್ಮಾಷ್ಟಮಿ
ನಿರ್ಮಲಾ, ಶೋಭನಾ ಸಮರ್ಥ ಮೊದಲಾದವರು
ಅನಂತರ- ನವರಂಗ್‌ನವರ
ಬಾಜೆ
ಗೀತಾಬಾಲಿ, ದೇವಆನಂದ್, ಮೊದಲಾದವರು.
ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ
O. P. No. 2/1951
R. I. A. No 119/1952

1. ಯಶೋದೆಮ್ಮ, ಗುರುರಾಜಾಚಾರ್ಯರ ವಿಧವೆ, 2. ವಿಠಲಾಚಾರ್ಯ, 3. ರಾಜಗೋಪಾಲಾಚಾರ್ಯ, 4. ಶ್ರೀಪತಿ ಆಚಾರ್ಯ 5. ಶ್ರೀನಿವಾಸ ಆಚಾರ್ಯ, ಗುರುರಾಜಾಚಾರ್ಯರ ಮಕ್ಕಳು, ಮಜ್ಜನರ್ತ್ರು, ಕ್ಷೇಮವಂತರಳು ಕಾಯ್ರಿ, 1ನೇ ಅರ್ಜಿದಾರರು, ಉದ್ಯೋಗ – – ಅರ್ಜಿದಾರರು.

ಈ ಮೂಲಕ ಸರ್ವ ಜನರಿಗೂ ತಿಳಿಯಪಡಿಸುವುದೇನಂದ್ರೆ:-

1ನೇ ಅರ್ಜಿದಾರಳ ಗಂಡ ಮಿಳ್ಳ ಅರ್ಜಿದಾರರು ತಾ 9-11-1950ರಲ್ಲಿ ಉಡ್ಪಿತಾಲೂಕು ಕೋರ್ಟ್ಗಳಾಡಿ ಗ್ರಾಮದ ಸರ್ವೆ ನಂಬ್ರ ೧೫೫ನ್ನು ಮೃತಪಟ್ಟ-ಗುರುರಾಜಾಚಾರ್ಯರಿಗೆ-ಮೇಲ್ಕಂಡ ಅರ್ಜಿಯಲ್ಲಿ ಕಾಣಿಸಿದಂತೆ ಬರಬೇಕಾದ ಸಾಲ ಪತ್ರಗಳಿಗಳನ್ನು ವಸೂಲು ಮಾಡುವರೆ ಅರ್ಜಿದಾರರೇ ಹಕ್ಕುದಾರರೆಂತಲೂ, ಆ ಬಗ್ಗೆ ಅರ್ಜಿದಾರರ ಗೋಸ್ಕರ 1ನೇ ಅರ್ಜಿದಾರಳ ಹೆಸರಿಗೆ ಸರ್ಟಿಫಿಕೇಟು ಕೊಡಿಸಬೇಕಾಗಿಯೂ ಅರ್ಜಿ ಕೊಟ್ಟ ರುಜುವಾದರಿಂದ ಆ ವಿಷಯದಲ್ಲಿ ಆಕ್ಷೇಪವುಳ್ಳವರು ತಾ 5-3-1952ನೇ ದಿನ್ನ ಬೆಳಿಗ್ಗೆ 10 ಗಂಟೆಗೆ ಮೇಲ್ಕಂಡ ಕೋರ್ಟು ಮುಂದೆ ಸ್ವತಾ ವ ವಕೀಲರ ದ್ವಾರಾಗಾಗಲೀ ಹಾಜರಾಗಿ ಆ ವರೆಗೆ ಇವರ ಅರ್ಜಿಕೆಗಳನ್ನು ತಿಳಿಯಪಡಿಸಿ ನಿರ್ಣಯ ಮಾಡಿಕೊಳ್ಳಬಹುದು.

P. V. Acharya
Vakil for petitioners.
ಉಡ್ಪಿ ತಾ 9-2-1952

ಯೋಜನೆಯು ಅವಶ್ಯಕತೆ, ಇದರಿಂದ ಜನ ಸಾಮಾನ್ಯರಿಗಾಗುವ ಪ್ರಯೋಜನಾದಿಗಳನ್ನು ವಿವರಿಸಿ ಶ್ರೀ ಮುಂಡಲೀಕ ಶೆಣೈ, ಶ್ರೀ ಸುಬ್ರಾಯ ಭಾಷಣಗಳನ್ನು ಬಳಿಕ ಅಧ್ಯಕ್ಷರ ಮಾತುಗಳಾಗಿ ವ್ಯವಸ್ಥಾಪಕರಾದ ತಹಸೀಲ್ದಾರ್ ಶ್ರೀ. ಕೆ. ವೆಂಕಪ್ಪನವರು ಧನ್ಯವಾದಗಳನ್ನರ್ಪಿಸಿದರು.

ಕೆಡಿಯೊಳಿ ಶಾಲಾ ವರ್ಧಂತಿಯ ಸಂ ಇದೇ ತಾ. 10ರಂದು ಉಡುಪಿ ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಎಚ್. ಸುಂದರರಾಯರ ಅಧ್ಯಕ್ಷತೆಯಲ್ಲಿ ಜರಗಿತು. ವಿದ್ಯಾರ್ಥಿನಿ, ಶಾಲಾ ವರದಿ ವಾಚನ, ಬಹುಮಾನ ವಿತರಣೆಗಳಾದ ನಂತರ ಶ್ರೀ ಎಸ್. ಎಸ್. ಕಲ್ಮಾಡಿಯವರು ಸ್ವಸ್ತಿವಾಚನ ಮಾಡಿದರು. ಅಧ್ಯಕ್ಷರ ಮನನೀಯ ಭಾಷಣಾನಂತರ ಬಳಿಕ ನೃತ್ಯ, ನಾಟಕ, ಪ್ರಹಸನ ಮೊದಲಾದ ಕಾರ್ಯಕ್ರಮಗಳಾದುವು. ಶಾಲಾ ಮುಖ್ಯೋಪಾಧ್ಯಾಯ ಶ್ರೀ ವಿ. ಶ್ರೀನಿವಾಸ ಭಟ್ಟರು ಧನ್ಯವಾದಗಳನರ್ಪಿಸಿದರು.

ದಕ್ಷಿಣಕೊರಿಯ ನಿರ್ಣಯ—ಇದೇ ತಾ. 9ರಲ್ಲಿ ಸಂಜೆ ಚೇರ್‌ಮೆನ್ ಶ್ರೀ ಯು. ಎಸ್. ನಾಯ್ಕರ ಅಧ್ಯಕ್ಷತೆಯಲ್ಲಿ ಕೂಡಿದ ಉಡುಪಿ ಮುನಿಸಿಪಲ್ ಕೌನ್ಸಿಲು ಸಭೆಯಲ್ಲಿ ಆರನೇ ಜಾರ್ಜರ ನಿಧನದ ಬಗ್ಗೆ ದುಃಖ ಸೂಚಿಸುವ ನಿರ್ಣಯವಾಯಿತು. ಶಿವಬೀಡಿನಿಂದ ಕಲ್ಸಂಕ, ಕಡಿಯಾಳಿ ಮಾರ್ಗವಾಗಿ ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜಿನ ವರೆಗಿನ ರಸ್ತೆಗೆ ದಿನಕ್ಕೆ ಎರಡಾವರ್ತಿ ನೀರು ಹಾಕಬೇಕೆಂದು ನಿರ್ಣಯವಾಯಿತು.

ಹಳೆವಿದ್ಯಾರ್ಥಿ ಸಂಘದ ದಿನಾಚರಣೆ—ಉಡುಪಿ ಕ್ರಿಶ್ಚಿಯನ್ ಹೈಸ್ಕೂಲಿನ ಹಳೆವಿದ್ಯಾರ್ಥಿ ಸಂಘದ ದಿನಾಚರಣೆಯು ಇದೇ ತಾ. 11ರಲ್ಲು ಸಂಜೆ ಶಾಲಾ ವಠಾರದಲ್ಲಿ ವಕೀಲ್ ಶ್ರೀ ಬಿ. ಶೀನಪ್ಪ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು. ರಾತ್ರಿ ಅಂಡಾಡಮಿ ಗುಂಡ್ ಎಂಬ ಪ್ರೇಕ್ಷಣೀಯ ಕನ್ನಡ ನಾಟಕವು ಎಸ್ಸಲ್ ಗೆಳೆಯ ಕೂಟದವರಿಂದ ಅಭಿನಯಿಸಲ್ಪಟ್ಟಿತು.

ನೇತಾಜಿಸ್ ಹಾರ್ಬರ್ ಬೋರ್ಡಿ ನ ಸದಸ್ಯರಾದ ಶ್ರೀಯುತ ಎಮ್. ಎ. ಮಾಸ್ತರ್‌ರವರು ದಿನಾಂಕ 8ರಂದು ಬೊಂಬಾಯಿಯಿಂದ ಸ್ವದೇಶಕ್ಕೆ ಮಂಗಳೂರಿಗೆ ಪ್ರಯಾಣ ಬೆಳಸುತ್ತಿದ್ದಾಗ, ಶ್ರೀಯುತ ಟಿ. ಎ. ಪೈ ಗಳು ಅವರನ್ನು ಮಲ್ಪೆಯಲ್ಲಿ ಬೆಟ್ಟಿಯಾಗಿ ಮೋಟರ್ ಲಾಂಚಿನಲ್ಲಿ ಮಲ್ಪೆ ಬಂದರದ ಸ್ವೀಕರಿಕ ಅನುಕೂಲತೆಗಳನ್ನು ಪ್ರತ್ಯಕ್ಷವಾಗಿ ವಿವರಿಸಿ ಕೋರಿಸಿದರು, ಮತ್ತು ಕಜ್ಜರ ಸಮಿತಿಯ ವರದಿಯನ್ನೂ ವಿವರಿಸಿ ಹೇಳಿದರು. ಶ್ರೀಯುತ ಮಾಸ್ತರರು ಬೇಕಾದ ಮಾಹಿತಿಯನ್ನು ಪಡೆಕೊಂಡು ಪ್ರಬುದ್ಧ ಬಂದರವಾಗಲು ಮಲ್ಪೆಯೇ ಅರ್ಹತೆ ಮತ್ತು ಜೋಗ್ಯತೆಯನ್ನು ಪಡೆದಿರುವುದಾಗಿ ಅಭಿಪ್ರಾಯಪಟ್ಟರೆಂದು ತಿಳಿದು ಬರುತ್ತದೆ.

ಕಟ್ಟಿಗೆಯ ಅಭಾವ ಮತ್ತು ಕೃಯದ ಏರಿಕೆ—ಮರವಟ್ಟು ಮತ್ತು ಕಟ್ಟಿಗೆಯ ಸಾಗಾಟಕ್ಕೆ ಜಿಲ್ಲಾ ಫೊರೆಸ್ಟ್ ಆಫೀಸರರ ಒಪ್ಪಿಗೆ ಬೇಕೆಂದು ಇತ್ತೀಚೆಗೆ ನಿರ್ಬಂಧವೊಂದನ್ನು ಹೇಂಡುವರ ಪಂಡಾಮವಾಗಿ ಅರಂಭದಲ್ಲಿ ಕಟ್ಟಿಗೆಯ ಸಾಗಾಟವೇ ನಿಂತು ಹೋಗಿತ್ತು. ಆನಂತರ ಕೆಲವು ಮಂದಿ ವ್ಯಾಪಾರಿಗಳು ಪ್ರಯತ್ನಪಟ್ಟು ಆಫೀಸರರ ಒಪ್ಪಿಗೆ ಪಡೆದು ಕಟ್ಟಿಗೆ ಬರುವಂತಾದರೂ ಕ್ರಯ ವಿಪರೀತವಾಗಿದೆ. ಇದರಿಂದ ಜನರ ಗೋಳು ಹೆಚ್ಚಾಗಿದೆ. ಪರ್ಮಿಟಿಗಾಗಿ ಅರ್ಜಿ ಹಾಕಿದರೂ, ಕೆಳ ಆಫೀಸರರಿಂದ ಅದು ಸಿಫಾರಸು ಹೊಂದಿ ಹೋದರೂ ಡೀಪೋ ಆಫೀಸಿನಲ್ಲಿ ಅದು ಅಡಿಗೆದೀಳ್ತಿದೆಯ ಎಂಬ ಅರ್ಜಿದಾರನ ದ ಧೇಟಿಯಾಗದೆ ಪರ್ಮಿಟು ಸಿಗುವುದೇ ಇಲ್ಲವೆಂಬ ವದಂತಿ ಇದೆ. ಕೆಲವರು ನಿರಾಶರಾಗಿ ಕಟ್ಟಿಗೆ ವ್ಯಾಪಾರವನ್ನೇ ಬಿಟ್ಟುದುಂಟಂತೆ. ಇನ್ನು ಕೆಲವರು ಮಂಗಳೂರು ವರೆಗೂ ಹೋಗಿ ಆಫೀಸಿನವರ ಒಲವನ್ನು ಸಂಪಾದಿಸಿ ಪರ್ಮಿಟು ಪಡೆಕೊಂಡು ಬರುತ್ತಿದ್ದಾರಂತೆ ಹೀಗಾಗಿ ಕೆಲವರೇ ಕಟ್ಟಿಗೆ ವ್ಯಾಪಾರ ಮಾಡುವಂತಾಗಿರುವುದರಿಂದಲೂ ಹೊರ್ಪೈಕಡಿಮೆಯಾಗಿ ಬೇಡಿಕೆ ಹೆಚ್ಚಾದುದರಿಂದಲೂ ಕಟ್ಟಿಗೆಯ ಕ್ರಯವು ಜನಸಾಮಾನ್ಯರನ್ನು ಗೋಳಿಡಿಸುವಂತಾಗಿದೆ. ಇನ್ನಾದರೂ ಡಿ। ಸೋ। ಆಫೀಸರರು ಪರ್ಮಿಟುಗಳು ಸಕಾಲದಲ್ಲಿ ಜನರಿಗಾಗುವಂತೆ ನೋಡುವರೆ? ಸಂಬಂಧಪಟ್ಟವರು ಈ ಕುರಿತು ಕಕ್ಕ ನಿಗಾ ಕೊಡುವರೆ?

ಗ್ರಾಮಾಭಿವೃದ್ಧಿ—1952ನೇ ಇಸವಿ ಜನವರಿ ತಿಂಗಳಲ್ಲಿ ಗ್ರಾಮಾಭಿವೃದ್ಧಿ ಕ್ಷೇತ್ರಗಳಲ್ಲಿ ಜರಗಿದ ಮುಖ್ಯ ಕೆಲಸಗಳ ಸಾರಾಂಶ.

ಅರು ಉತ್ಪಮ ಜಾತಿಯ ಕೋಳಿಗಳು ಅರ್ಧ ದರಕ್ಕೆ ಕೊಡಲ್ಪಟ್ಟವು. ಎರಡು ಎತ್ತಿ ಜಾಗೆಯು ಸಮತಟ್ಟು ಮಾಡಲ್ಪಟ್ಟಿತು. ಒಂದು ಸ್ಟಾಟು ದಳವು ಸ್ಥಾಪಿಸಲ್ಪಟ್ಟಿದೆ. ಮೂಲ್ಕಿ ಫಿಶ್ಕಾದ ಎಂಂಜೆಯಲ್ಲಿ ಒಂದು ಗ್ರಾಮ ಸೇವಾ ಸಂಘವು ಸ್ಥಾಪಿಸಲ್ಪಟ್ಟಿದೆ. 5 ಫರ್ಲಾಂಗು ಮಾರ್ಗದ ಕೆಲಸವು ಮುಗಿಸಲ್ಪಟ್ಟಿದೆ. ನಾರಾಯಣ ಮಂಗಲದ ನಾಟಕ ಸಂಘದವರು ಒಂದು ನಾಟಕವನ್ನು ಪ್ರದರ್ಶಿಸಿ ಸಿಕ್ಕಿದ ಹಣವನ್ನು ಕೋರ್ ಅಭಿವೃದ್ಧಿಗೋಸ್ಕರ ಕೊಟ್ಟುರುತ್ತಾರೆ.

ಮುಂಡ್ಕೂರು—ಇದೇ ತಾ. 7ರಲ್ಲಿ ಕುಂಬಳೆ ರೂರಲ್ ವೆಲ್‌ಫೇರ್ ಆಫೀಸರ್ ಶ್ರೀ ಕೆ. ಎಮ್. ಬಾಬು ಸೆಟ್ಟಿ ಮತ್ತು ಮುದ್ರಾಸು ಸರಕಾರದ ಗ್ರಾಮಾಭಿವೃದ್ಧಿ ಡೈರೆಕ್ಟರ್ ಶ್ರೀ ಜಿ. ವೆಂಕಟಾಚಲಪತಿ- ಇವರಿಗೆ ಮುಂಡ್ಕೂರು ಗ್ರಾಮ ಸೇವಾ ಸಂಘ ಮತ್ತು ಪಂಚಾಯತ್ ಬೋರ್ಡಿನ ಪರವಾಗಿ ಮಾನಪತ್ರ ಅರ್ಪಿಸಲಾಯಿತು. ನೇತ್ರಾವತಿ, ಸಂಕ್ರಕ್ಕಿ ಪ್ರಸ್ಕೈ, ಹೈಸ್ಕೂಲು ಮೊದಲಾದ ಅವಶ್ಯಕತೆಗಳು ಮಾನಪತ್ರದಲ್ಲಿ ಸೂಚಿಸಲಾಗಿತ್ತು.

ಮಂಗಳೂರು—'ಸೋನ್ಸ್ ನರ್ಸರಿ ಗಾರ್ಡನ್ಸ್'ನ ಸಂಸ್ಥಾಪಕರೂ, ಜನಪ್ರೀತ ಹಾಗೂ ಸರಳ ಆದರ್ಶ ವ್ಯಕ್ತಿಯೂ ಆದ ಶ್ರೀ ಜಿ. ಜ. ಸೋನ್ಸರು ಇದೇ ತಾ. 12ರಿ 72ನೇ ವಯಸ್ಸಿನಲ್ಲಿ ಹೃದಯ ವಿದ್ರೋಗದಿಂದ ನಿಧನಹೊಂದಿದುದು ಶೋಚನೀಯವಿದೆ. ನಮ್ಮ ಜಿಲ್ಲೆಯಲ್ಲಿ ನರ್ಸರಿಯ ಕೆಲಸವನ್ನು ಪ್ರಥಮವಾಗಿ ಸ್ಥಾಪಿಸಿ ಅನೇಕ ಪ್ರದರ್ಶನಗಳಲ್ಲಿ ಪ್ರಶಂಸೆಯನ್ನು ಪಡೆದವರವರು. ಮೃತರಲ್ಲದೇ ಉಚ್ಚಿಲ ರಾಷ್ಟ್ರಪ್ರೇಮಿಯೂ ಕೃಷಿ ಕೈಗಾರಿಕೆಗಳಲ್ಲಿ ನಿಷ್ಣಾತರೂ ಆಗಿದ್ದರು.

UDIPI MUNICIPALITY

NOTIFICATION

Sealed quotations will be received by the undersigned up to 4 P M on 28-2-52 for the supply of petrol and lubricants required for the use of Municipal lorries for 1952-53.

Particulars as to the conditions of contract may be obtained from the Municipal office during office hours on working days.

Municipal office, Udipi, Date 9—2—52.

A S. D'Souza, Commissioner.

THE CATHOLIC BANK LTD., UDIPI

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ಮೇಲ್ಕಾಣಿಸಿದ ಬೇಂಕಿನಿಂದ ಚಿನ್ನಾಭರಣಗಳ ಮೇಲೆ ಪಡೆದ ಸಾಲದ ಮೊಬಲಗನ್ನಾಗಲೀ ಯಾ ಆದಕ್ಕಾಗುವ ಈ ತನಕದ ಬಡ್ಡಿಯನ್ನಾಗಲೀ ಕೊಡದೆ ಇರುವುದರಿಂದಲೂ ಅಲ್ಲದೆ ಕ್ರಮವಾದ ರಿಜಿಸ್ಟರ್ಡ್ ನೋಟೀಸು ಕೊಟ್ಟಿದ್ದಕ್ಕೆ 3, 5, 6, 9, 10 ಆಸಾಮಿಗಳು ವಿಳಾಸದಲ್ಲಿ ಇಲ್ಲವೆಂಬುದಾಗಿಯೂ ಕೊಟ್ಟ ನೋಟೀಸು ವಾಪಾಸು ಬಂದಿರುವುದರಿಂದಲೂ, 1, 2, 4, 7, 8, 12 ಆಸಾಮಿಗಳು ರಿಜಿಸ್ಟರ್ಡ್ ನೋಟೀಸು ಪಡಕೊಂಡು ಅವರವರ ನಗಗಳನ್ನು ಬಿಡಿಸಿಕೊಂಡು ಹೋಗದಿರುವುದರಿಂದಲೂ ಮತ್ತು 11ನೇ ಆಸಾಮಿಯು ಮೃತಪಟ್ಟಿದ್ದಾರೆಂದು ನೋಟೀಸು ವಾಪಾಸು ಬಂದಿರುವುದರಿಂದಲೂ, ಸದರಿಯವರಿಗೆ ಯಾ ಸದರಿಯವರ ವಾರೀಸುದಾರರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಸದರಿಯವರು, ಈಡಿಟ್ಟ ನಗಗಳನ್ನು ಇದೇ ತಿಂಗಳ ತಾರೀಕು 25-2-1952ರ ಒಳಗೆ ಬಿಡಿಸಿಕೊಂಡು ಹೋಗದಿದ್ದಪಕ್ಷಕ್ಕೆ ತಾರೀಕು 26-2-1952ರಲ್ಲಿ ಮಂಗಳವಾರ ಗಂಟೆ 3 P.M. ಕ್ಕೆ ಯಾ ಬ್ಯಾಂಕಿಗೆ ಯುಕ್ತ ಕಂಡ ಇತ್ಯರ ದಿನಗಳಲ್ಲಿ ಪುನಃ ನೋಟೀಸು ಕೊಡದೆ ಬ್ಯಾಂಕಿನ ವಠಾರದಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು.

ನಂ.	ತಾರೀಕು	J.L. No. & Date	Name of the borrower	Principal with int. up to 31-12-51 Rs. As.
1	22-11-'49	25/ 976	K. ನರಸಿಂಹಯ್ಯ, S/o ಕಾಳಪ್ಪಯ್ಯ, ಕೊರಂಗರಪಾಡಿ, ಉದಿಯಾವರ ಪೋಸ್ಟ್.	11- 7
2	1-12-'49	25/1045	B. ಆನಂದ ಶೆಟ್ಟಿ, S/o ಜಗನ್ನಾಥ ಶೆಟ್ಟಿ, ತಿಪಳ್ಳಿ ಗ್ರಾಮ, ಬಡ್ಡಾರ ಉಡುಪಿ ಪೋಸ್ಟ್	28- 2
3	5-12-'49	25/1068	U. ಮಂಜುನಾಥ ಬಾಳಿಗ, S/o ವೆಂಕಟ್ರಾಯ ಬಾಳಿಗ ಅಜ್ಜರಕಾಡು, ಉಡುಪಿ ಪೋಸ್ಟ್	176- 5
4	12-12-'49	25/1117	ಅಜೀಜ್ ಅಮದ್, S/o ಹಾಜಿ ಅಬ್ದುಲ್ ರಜಾಕ್ ಸಹೇಬ್, ಉಡುಪಿ ಪೋಸ್ಟ್	135- 1
5	12-12-'49	25/1126	ಫಕೀರ್ ಸಹೇಬ್ S/o ಮೂದುಮ್ ಸಹೇಬ್ ಉದಿಯಾವರ ಪೋಸ್ಟ್	12-12
6	19-12-'49	25/1174	B. ರಾಮರಾಜ S/o ಮಾಸಪ್ಪಯ್ಯ ಕ್ಲಾರ್ಕ್ ಪೈ ಪ್ರಿಂಟಿಂಗ್ ಆಫೀಸು ಉಡುಪಿ	18- 9
7	19-12-'49	25/1176	ಸೇಕ್ ಹುಸೇನ್ ಸಹೇಬ್ S/o ಮಸಿನ್ ಸಹೇಬ್ ಕಿನ್ನಿಮೂಲ್ಕಿ ಉಡುಪಿ ಪೋಸ್ಟ್	72- 1
8	20-12-'49	25/1178	K. ರಾಮ ಸೆಟ್ಟಿಗಾರ C/o ನರಹರಿ ನಾಯಕ್‌ಗಜಾನನದೀಪರ್ಸ್ 102 Medow street, Bombay	20- 8
9	28-12-'49	25/1240	M. ಬೋಜ ಸೆಟ್ಟಿ S/o ತಿಂಮಯ್ಯ ಸೆಟ್ಟಿ ಮರ್ಡೂರುಬೆಳ್ಳೆ ಪೋಸ್ಟ್	74-12
10	16- 1-'50	26/ 118	ಸೇಕ್ ಅಮದ್ ಸಹೇಬ್ S/o ದಾದಾ ಸಹೇಬ್ ಬಡಗಬೆಟ್ಟು ಉಡುಪಿ ಪೋಸ್ಟ್	12- 7
11	23- 1-'50	26/ 172	ಕೊರಗ ಪೂಜಾರಿ S/o ಗೋವಿಂದ ಪೂಜಾರಿ ಕಡೆಕಾರು ಪೋಸ್ಟ್ ದ. ಕ.	24- 5
12	12- 1-'50	26/ 94	ಸ್ಯಾಮುಸ್ ಸಾಲಿನ್ಸ್ S/o ಗಾಬ್ರಿಯೇಲ್ ಸಾಲಿನ್ಸ್ ಕಲ್ಯಾಣಿ ಗ್ರಾಮ, ಮಣಿಪುರ ಪೋಸ್ಟ್	233- 3

ಉಡುಪಿ
ತಾ. 12—2—1952

V. Andrade, Agent.

ಮೈಸೂರು ಎಸೆಂಬ್ಲಿಗೆ ದ. ಕ ಜಿಲ್ಲೆಯವರ ಚುನಾವಣೆ

ದ. ಕ. ಜಿಲ್ಲೆಯಲ್ಲಿ ಜನ್ಮತಾಳಿ ಭದ್ರಾವತಿಯಲ್ಲಿ ನೆಲೆಸಿ ಕಾಂಗ್ರೆಸ್ ಚಳವಳಿಯಲ್ಲಿ ಭಾಗವಹಿಸಿ, ಅಲ್ಲಿಯ ಜನಾದರವನ್ನು ಗಳಿಸಿದ ಶ್ರೀ ಬಿ. ಮಾಧವ ಆಚಾರ್ಯರು ಮೈಸೂರು ಎಸೆಂಬ್ಲಿಗೆ ಭದ್ರಾವತಿ ಕ್ಷೇತ್ರದಿಂದ ಸದಸ್ಯರಾಗಿ ಆಯ್ಕೆಪಟ್ಟಿರುವರು. ಮೈಸೂರು ಸ್ಟೇಟಿನ ಹಲವಾರು ಸಾರ್ವಜನಿಕ ಸಂಘ ಸಂಸ್ಥೆಗಳಲ್ಲಿ ಶ್ರೀ ಆಚಾರ್ಯರು ದುಡಿಯುತ್ತಿರುವರು. ಶ್ರೀಯುತರು ಕುಂದಾಪುರ ತಾಲೂಕಿನ ಕೋಟೇಶ್ವರದ ನೆರೆಗ್ರಾಮವಾದ ಬೀಜಾಡಿಯವರು. ಇವರು ಭದ್ರಾವತಿ ಟೌನ್ ಮುನ್ಸಿಪಲ್ ಕೌನ್ಸಿಲಿನ ಅಧ್ಯಕ್ಷರಾಗಿ ಸಲವು ನಗರ ಹಿತಕಾರ್ಯಗಳನ್ನು ಮಾಡಿರುತ್ತಾರೆ.

ಕೊರಡ್ಕಲ್ ಶ್ರೀನಿವಾಸರಾವ್ ವಿರಚಿತ

ಸುಲಭದಲ್ಲಿ ಇಂಗ್ಲಿಷ್

ಆಂಗ್ಲ ಸ್ವಯಂಬೋಧಿನಿ.

ಬೆಲೆ ರೂ. 1 8 0

ನವಭಾರತ ಪುಸ್ತಕ ಭಾಂಡಾರ, ಉಡುಪಿ

75

ಅಂತರಂಗದ ಕಥೆ, ಕಾದಂಬರಿ, ನಾಟಕ, ಕವಿತೆ, ಚಿತ್ರ ಪ್ರಬಂಧ ಮೊದಲಾದ ನಾನಾ ಬಗೆಯ 75 ಪುಸ್ತಕಗಳನ್ನು ಒಟ್ಟಿಗೆ ರೂ 20ಕ್ಕೆ ಕೊಡಲಾಗುವುದು ಕಟಲಾಗಿಗೆ ಬರೆಯಿರಿ:—ಅಂತರಂಗ ಆಫೀಸು ಉಡುಪಿ, ಅಥವಾ ನವಭಾರತ ಬುಕ್ ಡಿಪೊ, ಉಡುಪಿ



ಮಂಗಳೂರು

ಶ್ರೀ ಎಮ್.-ಎ ಮಾಸ್ಟರರು—ಪಾಶ್ಚಿಮಾತ್ಯ ಬಂದರ ಸಮಿತಿಯ ಸದಸ್ಯರೂ ಬೊಂಬಾಯಿ ನೇವಿಗೇಶನ್ ಕಂಪನಿಯ ಡೈರೆಕ್ಟರರೂ ಆದ ಶ್ರೀ ಎಮ್. ಎ. ಮಾಸ್ಟರರು ಇದೇ ತಾ. ೫ರಂದು ಮಂಗಳೂರಿಗೆ ಬಂದರು. ಇವರಿಗೆ ಬಂದರಿನ ಸಂಘಟಿತವರು ಅವರನ್ನು ಸ್ವಾಗತಿಸಿ ಸತ್ಕರಿಸಿದರು. ಸಂಘದ ಅಧ್ಯಕ್ಷ ಶ್ರೀ ಎ. ಅನಂತನಾಥ ರಾಯರು ಮಂಗಳೂರು ಬಂದರಿನ ಅಭಿವೃದ್ಧಿ ವಿಚಾರವಾಗಿ ಕೆಲವು ಹಿತವಚನಹೇಳಬೇಕೆಂದು ಪೂರ್ವ ಅತಿಥಿಯನ್ನು ಕೋರಿಕೊಂಡರು. ಬಂದರಿನ ಅಭಿವೃದ್ಧಿಗೆ, ನೌಕಾ ಸಂಚಾರಕ್ಕೆ ಅನುಕೂಲ, ಅಳವಿಯ ಆಳ, ಕಾಲುವೆಯ ಅನುಕೂಲ, ಬಂದರಿನ ವಿಸ್ತರಣೆಗೆ ಅನುಕೂಲ ವ್ಯಾಪಾರ ಕೈಗಾರಿಕೆ ಇತ್ಯಾದಿಗಳೆಲ್ಲ ಮುಖ್ಯವಾಗಿರಬೇಕೆಂದೂ ಪಶ್ಚಿಮ ಕರಾವಳಿ ಬಂದರ ಸಮಿತಿಯು ಪುಲ್ಲೆಯನ್ನು ದೊಡ್ಡ ಬಂದರಿಗೆ ಆರಿಸಿದ ರೂ ಕೊನೆಯ ತೀರ್ಮಾನ ಸರಕಾರದ್ದಾಗಿದೆ ಎಂದು ತಿಳಿಸಿದರು.

ಕನ್ನಡದ ಸಂತ ಕವಿಗಳು—ವಿಶ್ವ ವಿದ್ಯಾನಿಲಯದ ವಿಸ್ತರಣ ಸಮಿತಿಯ ಆಶ್ರಯದಲ್ಲಿ ಇದೇ ತಾ ೪ರಂದು ಸಂಜೆ ಸ್ಥಳೀಯ ಗವರ್ನಮೆಂಟ್ ಕಾಲೇಜಿನಲ್ಲಿ ಜರಗಿದ ಸಭೆಯಲ್ಲಿ ಶ್ರೀ ಪದುಕೋಣೆ ರಮಾನಂದ ರಾಯರು 'ಕನ್ನಡದ ಸಂತ ಕವಿಗಳು ಎಂಬ ವಿಚಾರವಾಗಿ ಭೋಧಪ್ರದವಾದ ಭಾಷಣಮಾಡಿದರು. ಅವರು ದಾಸ ಪರಂಪರೆಯನ್ನು ವಿವರಿಸುತ್ತ ನರಹರಿತೀರ್ಥರು, ಶ್ರೀ ಪಾದರಾಯರು ವ್ಯಾಸರಾಯ ಸ್ವಾಮಿಗಳವರು, ಪುರಂದರ ದಾಸರು, ಕನಕ ದಾಸರು, ವಾದಿರಾಜ ಸ್ವಾಮಿಗಳು- ಇವರೇ ಮೊದಲಾದವರ ಹೆಸರಾಟ ಜೀವನ ವಿಶೇಷಗಳನ್ನು ಕುರಿತು ಮೇಲೆ ಅವರು ಸಾರಿದ ಧರ್ಮ ಸಾಹಿತ್ಯಕ್ಕೆ ಸಲ್ಲಿಸಿದ ಕಾಣಿಕೆ-ಇತ್ಯಾದಿಗಳನ್ನು ವಿವರಿಸಿದರು. ಸಮಿತಿಯ ಅಧ್ಯಕ್ಷರಾದ ಪ್ರೊ ಎಮ್. ಪಿ. ಪಡಿಯಣ್ಣಯ್ಯನವರೂ ಕೊನೆಯಲ್ಲಿ ಮಾತನಾಡಿದರು.

ಸಂಗೀತ ಕಚೇರಿ—ಗವಾಯಿ ಗಂಧರ್ವರ ಶಿಷ್ಯರಾದ ಶ್ರೀ ಭೀಮಸೇನ ಜೋಶಿಯವರು ಮಂಗಳೂರಿಗೆ ಬಂದಿದ್ದು ಇದೇ ತಾ ೬ರಂದು ರಾತ್ರಿ ಶ್ರೀ ವೆಂಕಟೇಶಮಂಟಪದಲ್ಲಿ ಸಭೆಯಲ್ಲಿ ಅವರ ಸಂಗೀತ ಕಚೇರಿ ಜರಗಿತು.

ಮಂಗಳೂರಿಗೊಂದು ಟ್ರೇಡ್ ಸ್ಕೂಲ್—ಜಿ ಕ. ಜಿಲ್ಲಾ ಬೋರ್ಡಿನ ಸಭೆಯೊಂದು ಈಚೆಗೆ ಶ್ರೀ ಬಿ. ಮಂಜಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಮದ್ರಾಸಿನ ಇಂಡಸ್ಟ್ರೀಸ್ ಮತ್ತು ಕಾಮರ್ಸ್ ಇದರ ಜೊಯಿಂಟ್ ಡೈರೆಕ್ಟರರಿಂದ ಜಿಲ್ಲಾ ಬೋರ್ಡಿಗೆ ರೂ. 1,50,000 ಮಂಜೂರು ಮಾಡಿದರೆ ಅದು ತನ್ನ ಆಡಳಿತದಲ್ಲಿ ಒಂದು ಟ್ರೇಡ್ ಶಾಲೆಯನ್ನು ನಡೆಸಿವರೆ ಸಿದ್ಧವಿದೆಯೇ? ಎಂಬ ಪತ್ರವ ಕುರಿತು ವಿಚಾರಿಸಲಾಯಿತು. ಮೇಲೆ ಸೂಚಿಸಿದ ಒಟ್ಟೊಡರೆ ಲಕ್ಷ ರೂಪಾಯಿಯಲ್ಲಿ ಅರ್ಧದಷ್ಟು ಸರಕಾರದ ಕಡೆಯಿಂದ ಗ್ರಾಂಟು ರೂಪದಲ್ಲಿ ಬೊರೆಯುವುದು. ಉಳಿದ ಅರ್ಧದಷ್ಟನ್ನು ಸರಕಾರದಿಂದ ಸಾಲದ ಮೂಲಕ ಪಡೆಯುವುದೆಂದು ತೀರ್ಮಾನವಾಗಿ ಆ ಬಗ್ಗೆ ಸರಕಾರಕ್ಕೆ ಶಾಲಕ್ಕಾಗಿ ಅರ್ಜಿ ಮಾಡುವ ನಿರ್ಣಯವಾಯಿತು

ಶ್ರೀಮತಿ ಕಲ್ಯಾಣಿ, ಶ್ರೀಮತಿ ಕಲ್ಯಾಣಿ ಡಿ. ಸೆಟ್ಟಿ, ಡಾ। ಕೆ. ಬಿ. ಸೆಟ್ಟಿ ಯು। ಎಫ್. ಎ. ಸುಂದರ್ ಮತ್ತು ಶ್ರೀ ಬಿ. ಭಾಸ್ಕರ್ಯ ಇವರನ್ನೊಳಗೊಂಡ ಸಮಿತಿಯೊಂದು ರಚಿಸಲ್ಪಟ್ಟು, ಜಿಲ್ಲಾ ಬೋರ್ಡಿನ ಹಾಲನ್ನು ಜಿಲ್ಲಾ ಬೋರ್ಡಿಗೆ ಸಂಬಂಧಪಟ್ಟ ಕಾರ್ಯಕ್ಷಮತೆಗಳಿಗೆ ಉಪಯೋಗಕ್ಕೆ ಕೊಡುವುದರ ಕುರಿತು ನಿಯಮ ವಿಧಿಗಳನ್ನು ರಚಿಸುವ ಕಾರ್ಯಭಾರ ಆ ಸಮಿತಿಗೆ ಒಪ್ಪಿಸಲ್ಪಟ್ಟಿತು.

ತಾಸನ ಸಭಾಸದಸ್ಯರಿಗೆ ಸತ್ಕಾರ—ಕನ್ನಡದ ಹಿಂದುಳಿದ ಸಂಘಾದ ಸೇವೆಯ ದೃಷ್ಟಿ ಇತ್ತೀಚೆಗೆ ಹಿಂದುಳಿದ ವರ್ಗಗಳವರಾಗಿ ಕಾಂಗ್ರೆಸ್ ಉಮೇದ್ವಾರರಾಗಿ ಚುನಾವಣೆಯಲ್ಲಿ ಗೆದ್ದಿರುವ ಶ್ರೀಗಳಾದ ಎಸ್. ಎಸ್. ಸಾರ್ವಜ ಮತ್ತು ಕೆ. ಮೊಳಹಳ್ಳಿಯವರನ್ನು ಗೌರವಿಸುವ ಸತ್ಕಾರಕೂಟವು ಶ್ರೀ ಎಮ್. ಗಿರಿಯಪ್ಪನವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎ. ಕೆ ಸೇವಕರು ಸ್ವಾಗತ ಮಾತುಗಳನ್ನಾಡಿದ ಬಳಿಕ ಶ್ರೀಗಳಾದ ಎಮ್. ಆರ್. ಚಂದಪ್ಪ, ಬಿ. ಆರ್. ಕರ್ಕೇರ, ಎಚ್. ಮೋನಪ್ಪ ಶಿಂಗಣ್ಣಾಯ, ಅಪ್ಪಯ್ಯ ಬೇಲ ಗದ್ದೆ, ಜೆ. ಎ. ಪುತ್ರನ್, ಬಿ. ಗಣೇಶ, ಎ. ಡಿ. ಬಂಗೇರ ಮೊದಲಾದವರು ಮಾತನಾಡಿದರು ಮಾನ್ಯ ಅತಿಥಿಗಳು ಸದುಕ್ತರವಿತ್ತ ಬಳಿಕ ಶ್ರೀ ರಾಮನವರು ಧನ್ಯವಾದಗಳನ್ನರ್ಪಿಸಿದರು. ಕೊನೆಯಲ್ಲಿ ಶ್ರೀಗಳಾದ ಎಮ್. ಚಂದಪ್ಪ ಮತ್ತು ಬಿ. ಕೆ. ರಾಘಪ್ಪನವರ ಸಂಗೀತ ಕಾರ್ಯಕ್ರಮ ನಡೆಯಿತು.

ಶಿಶುವಿಹಾರ ಮಂದಿರ ಪ್ರವೇಶೋತ್ಸವ—ಜಪಿಲ ಧಾರ್ಮಿಕ ಮಹಿಳಾ ಸಂಘಸ್ಥರ ಜಿಲ್ಲಾ ಶಾಖೆಯಾದ ಧರ್ಮಸ್ಥಳ ಮಹಿಳಾ ಸಮಾಜದವರು ತಮ್ಮ ಜೆಪ್ಪು ಶಿಶು ವಿಹಾರ ಕ್ಕಾಗಿ ಸುಮಾರು ಹದಿನಾಲ್ಕು ಸಾವಿರ ರೂ ಬಾಡು ವೆಚ್ಚ ಮಾಡಿ ಕಟ್ಟಿಸಿದ ಸ್ವಂತ ಮಂದಿರ ಪ್ರವೇಶೋತ್ಸವವು ಕಳೆದ ತಾ. 29ರಂದು ಸಂಜೆ ಜಿಲ್ಲಾ ಕಲೆಕ್ಟರ್ ಶ್ರೀ ಎ. ಆರ್. ರಾಜಲಕ್ಷ್ಮಿಯವರ ಅಧ್ಯಕ್ಷತೆಯಲ್ಲಿ ಶ್ರೀ. ಎಲ್ ಸಿ ಪಾಯಿಸರ ಹಸ್ತದಿಂದ ಜರಗಿತು. ಸ್ವಾರ್ಥವೆ, ಸ್ವಾಗತ ಗೀತೆಗಳಾದ ಬಳಿಕ ಜೊತೆ ಕಾರ್ಯದರ್ಶಿ ಶ್ರೀಮತಿ ಎಮ್. ಕಾರಂತಾಲ್ಕಾರರು ಧರ್ಮಸ್ಥ ಸಮಾಜವು ಈ ವರೆಗೆ ಸಲ್ಲಿಸಿದ ಸೇವೆಯು ಪರಿಚಯ ಮಾಡಿ ಕೊಟ್ಟು, ಅನ್ಯರ ಶಬ್ದದಷ್ಟಿದ್ದ ಶಿಶು ವಿಹಾರವಿಂದು ಉದಾರಿಗಳ ನೆರವಿನಿಂದ ಸ್ವಂತ ಮುಂದಿರದಲ್ಲಿ ನಿಲ್ಲುವಂತಾಯಿತೆಂದು ತಿಳಿಸಿ ತಮಗೆ ನೆರವಾದವರಿಗೆಲ್ಲ ವಂದನೆಗಳನ್ನು ಸಲ್ಲಿಸಿದರು.

ಅನಂತರ ಮದ್ರಾಸು ರೇಸಿಂಗ್ ಶಿಷ್ಟಾಚಾರದ ಡೆಪ್ಯೂಟಿ ಡೈರೆಕ್ಟರ್ ಡಾ। ಎಮ್. ಡಿ. ಪಾಲಂದವರು ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಶಿಶು ರಕ್ಷಣೆಯನ್ನು ಯಾವ ರೀತಿಯಲ್ಲಿ ಮಾಡುತ್ತಿದ್ದಾರೆಂಬುದನ್ನು ವಿವರಿಸಿ, ಮಂಗಳೂರಿನ ಧರ್ಮಸ್ಥ ಸಮಾಜದವರ ಕೆಲಸವನ್ನು ಶ್ಲಾಘಿಸಿದರು. ಶ್ರೀ ಎಮ್ ಗಿರಿಯಪ್ಪನವರು ನಂತರ ಮಾತನಾಡುತ್ತಾ ಬಡಿಸ್ಥ ಸಮಾಜದ ಕಾರ್ಯಕರ್ತರು, ಮುಖ್ಯವಾಗಿ ಜೊತೆ ಕಾರ್ಯದರ್ಶಿಗಳು ಎಲ್ಲರ ಪ್ರಶಂಸೆಗೂ ಪಾತ್ರರಾಗಿದ್ದಾರೆಂದು ತಿಳಿಸಿ ಶಿಶು ವಿಹಾರಕ್ಕೆ ಶುಭವನ್ನು ಕೋರಿದರು ಬಳಿಕ ಶ್ರೀ ಎಲ್ ಸಿ ಪಾಯಿಸರು ನಗರ ಸಭಾಧ್ಯಕ್ಷನಾದ ತಾನು ಇಂತಹ ಅಮೂಲ್ಯ ಸೇವೆ ಸಲ್ಲಿಸುವ ಈ ಸಮಾಜವನ್ನು ಎಲ್ಲರಿಗಿಂತಲೂ ಅರಂಭಿಕ ಶ್ರೇಣಿಯೆಂದು, ಅ ಮೇಲೆ ಮುಂದಿರದ ಜಾಗಿಲು ತೆರೆದು ರಾಷ್ಟ್ರಗೀತೆಯೊಂದಿಗೆ ಪ್ರವೇಶ ವಾಯಿತು. ಜೊತೆ ಕಾರ್ಯದರ್ಶಿ ಶ್ರೀಮತಿ ಕೆ.ಲಲ್ಯಾಣಿ ವಿಡ್ಡಿಯವರು ಅಭಿನಂದಿಸಿದರು.

ಕುಂಬಳೆ—ಇಲ್ಲಿನ ಕೇಂದ್ರದ ಉಪಾಧ್ಯಾಯರ ಸಭೆಯು ತಾ. ೯ರಂದು ಇಚ್ಛಂಪಾಡಿ ಹಯರ್ ಎಲಿಮೆಂಟರಿ ಶಾಲೆಯಲ್ಲಿ ಶಾಸ್ತ್ರಗೋದು ಶ್ರೀಯುತ ಶಾಲಾ ಪರೀಕ್ಷಾಧಿಕಾರಿ ಶ್ರೀ ಪಿ ಚಂದ್ರ ಶೇಖರ ರಾಯರ ಅಧ್ಯಕ್ಷತೆಯಲ್ಲಿ ಜರಗಿದಾಗ ಅರನೇ ಜಾರ್ಜ್ ಅರಸರ ಸಧನದ ಕುರಿತು ಮೌನ ಪ್ರಾರ್ಥನೆ ನಡೆಸಲಾಯ್ತು. ಶ್ರೀ ಟಿ. ವಿ.ಎಂ. ಮಯ್ಯರು ವರದಿಯನ್ನೋದಿದರು. ಶ್ರೀಯುತರಾದ ನಾರಾಯಣ ರಾವ್, ಮುದ್ರಪ್ಪ ಮಾಧ್ಯಸ್ಥ, ಗುತ್ತಪ್ಪ ಭಂಡಾರಿ, ರಾಮಯ್ಯ ಶೆಟ್ಟಿ, ಶ್ರೀನಿವಾಸ ರಾವ್ ಇವರೆಲ್ಲಾ ಪಾಠ, ಭಾಷಣ, ಪ್ರತ್ಯಕ್ಷ ಕೆಲಸ, ಸಾಹಿತ್ಯ ವಾಚನ, ವಾರ್ತಾ ಸಂಗ್ರಹವನ್ನು ತಿಳಿಸುವುದು ಕೂಡಾ ನಡೆಸಿದರು.

ಮಾಯೆ ಪಾಡಿ—ಉಚ್ಚಾದಿ ಕರದೇಶು ಶಾಲೆಯ ವರ್ಷಂತ್ಯೋತ್ಸವವು ತಾ. ೭ಕ್ಕೆ ನಿಶ್ಚಯಿಸಿದ್ದು, ಅರನೇ ಜಾರ್ಜ್ ಸಾರ್ವಭೌಮರ ನಧನದಿಂದಾಗಿ ತಾ. ೮ರಂದು, ಬಳಿಕ ನಾದಿ ಶಿಕ್ಷಣದ ಡಿಪ್ಯೂಟಿ ಡೈರೆಕ್ಟರ್ ಶ್ರೀ. ಎಂ. ಡಿ. ಪೋಳ್ದಾಸರ ಅಧ್ಯಕ್ಷತೆಯಲ್ಲಿ ಅಭಿನೀಕರಿಸಲಾಯ್ತು. ಶ್ರೀ ಕಂಳದಾರಾಯ ಇ ಜೋಯಿಸರು ಸ್ವಾಗತ ಭಾಷಣ ಮಾಡಿದರು. ಶ್ರೀ ರಾಮಕೃಷ್ಣ ಶೆಟ್ಟಿಯು ಶಾಲಾ ವರದಿಯನ್ನೋದಿದರು. ಬಳಿಕ ವಿಶೇಷ ಅನಿಸ್ಟಾಂಟ್ ವಿದ್ಯಾ ಅಧಿಕಾರಿ ಶ್ರೀ ಮಹಾಬಲ ಯವರೂ ಭಾಷಣವನ್ನಿತ್ತರು. ಮಾಡಿದ ಪಾಠ ಮಕ್ಕಳ, ಕರದೇಶು ವಿದ್ಯಾರ್ಥಿಗಳೂ, ತುಳು, ಕನ್ನಡ, ಹಿಂದಿ ಈ ಭಾಷೆಗಳಲ್ಲಿ ನಾಟಕವನ್ನು ಅಭಿನಯಿಸಿದರು. ಸದ್ರಿ ವಿಷಯದ ಮಾದ್ರಾಸಿನ ರೂರಲ್ ವೆಲ್ಫೇರ್ ಡೈರೆಕ್ಟರ್ ಶ್ರೀ ವೆಂಕಟಾಚಲಪತಿಯವರೂ ಸದ್ರಿ ಶಾಲೆಯನ್ನು ಸಂದರ್ಶಿಸಿದರು.

ಚಂದಾದಾರರಲ್ಲಿ—

ತಿರುಗಿ ಬರೆದಿರುವ ನೆನಪೋಲೆಯಂತೆ ವಿಷಯವಾಗಿ ಚಂದಾಹಣವನ್ನು ಕಳುಹಿಸಿಕೊಡುವಂತೆ ವಿನಂತಿ.

ಮೆನೇಜರ್.

ಎಮ್. ಸಿ ನಂಬ್ರ 178 ಪ್ರಥಮ ಇನಾಮು-ಸರ್ವಸಮ ರೂ 75,000

ರೂ. 95,000 ಗೆಲ್ಲಿರಿ

ದ್ವಿತೀಯ ಬಹುಮಾನ ಪ್ರಥಮ ಎರಡು ಸಂಪೈ ಸರಿಯಾದುದಕ್ಕೆ ರೂ 15,000
ತೃತೀಯ ಬಹುಮಾನ-ಪ್ರಥಮ ಒಂದು ಸಂಪೈ ಸರಿಯಾದುದಕ್ಕೆ ರೂ. 5,000

ಅತ್ಯಧಿಕ ಪ್ರವೇಶಗಳನ್ನು ಕಳುಹಿಸುವವರಿಗೆ ವಿಶೇಷ ಬಹುಮಾನ ರೂ 1000
ಒಂದು ಪ್ರವೇಶಕ್ಕೆ 1 ರೂಪಾಯಿ. 24 ಪ್ರವೇಶಗಳಿಗೆ ರೂ. 20; ಅತ್ತರ ಸ್ವೀಕರಿಸುವ ಕೊನೆಯದಿನ 27-2-52.

ಅಪೇಕ್ಷಿಸಿದ್ದಲ್ಲಿ ಪ್ರವೇಶದೊಡನೆ ದೊರಕುವುದು ಬೌಳದಲ್ಲಿಯು ಕೌಂಟರ್‌ಗಳಲ್ಲಿಯು ಒಟ್ಟು ಹೊತ್ತು 34; ಮೂವತ್ತನಾಲ್ಕು ಬರುವಂತೆ 7 ರಿಂದ 10ರ ವರೆಗಿನ ಅಂಕೆಗಳನ್ನೂ ಉಪಯೋಗಿಸಿ. ಪ್ರತಿ ಅಂಕೆಯನ್ನು ಒಮ್ಮೆ ಮಾತ್ರ ಉಪಯೋಗಿಸುವುದು

ನಿಯಮಗಳು: ಖಾಲಿ ಕಾಗದದ ಮೇಲೆ ಬರೆದು ಎಷ್ಟು ಪ್ರವೇಶಗಳನ್ನು ಬೇಕಾದರೂ ರಿಜಿಸ್ಟರ್ಡ್ ಪೋಸ್ಟ್ ದ್ವಾರಾ ಕಳುಹಿಸಬಹುದು ಮನಿಆರ್ಡರ್ ರಶೀದಿಯನ್ನಾಗಲೀ, ಕ್ಯಾಸ್ ಮಾಡಿದ ಪೋಸ್ಟರ್ ಆರ್ಡರನ್ನಾಗಲೀ ಉತ್ತರದೊಂದಿಗೆ ಕಳುಹಿಸಕ್ಕದ್ದು ಪತ್ರವ್ಯವಹಾರ ಇಂಗ್ಲಿಷಿನಲ್ಲಿಯೇ ಫಲಿತಾಂಶ ಅಪೇಕ್ಷಿಸುವವರು ಎರಡಾಣೆ ಟಪ್ಪಾಲು ಚೀಟು ಮುಂದಾಗಿ ಕಳುಹಿಸಕಕ್ಕದ್ದು ಉತ್ತರ ಕಳುಹಿಸಕಕ್ಕ ವಿಳಾಸ

The Manager, **Moorthy Concerns (Govt. Regd)**
(178) MADURAI, S. I.

ಎಮ್. ಸಿ ನಂಬ್ರ 164 D ಯ ಉತ್ತರ: 6-5-8-7ಈ ಸ್ಪರ್ಧೆಯಲ್ಲಿ ಎಲ್ಲಾ ಸರಿಯಾದ ಉತ್ತರ ಬಂದಿಲ್ಲ. ಪ್ರಥಮ 2ಕಂಟೆಗಳು ಸರಿಯಾದ ಉತ್ತರಕ್ಕೆ I ಬಹುಮಾನ ರೂ 17547-5-0 2ನೇ ಬಹುಮಾನ [ಪ್ರಥಮ ಅಂಕೆಸರಿಸಮ್ಮಲ್ಕೆ] ರೂ 11422 6-0, 3ನೇ ಬಹುಮಾನ ರೂ. 5961—4—0

ಮೈಸೂರು ಶ್ರೀಮನ್ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ ಖಾಸ್ಮೈದ್ಯ
ಅಂಬಳೆ ನರಸಿಂಹ ಪಂಡಿತರ ಮನೆಯ ಎ ರಂಗಸ್ವಾಮಿ ಅಯ್ಯಂಗಾರವರ

****ಸಂತಾನ ಸಿಂಧೂರ****

ಬಹಿಷ್ಠೆ ಸಂಬಂಧದ ಹೊಟ್ಟೆನೋವು ಉಂಟು ಮಕ್ಕಳಲ್ಲಿ, ಇಂಥವರಿಗೂ ಮತ್ತು ಬಹಿಷ್ಠೆ ಸಂಬಂಧದ ಹೊಟ್ಟೆನೋವಿನಿಂದಿಹರಿಗೆ ತಲೆನೋವು, ನಿಶ್ಯಕ್ತಿಕಳ, ಬೆನ್ನುನೋವು, ಅಜೀರ್ಣ, ಕೆಮ್ಮು, ಸದ್ರಾಳಿಂಗ, ಜಂಗುಷ್ಟೆ ಇತ್ಯಾದಿ ಗುಪ್ತವ್ಯಾಧಿಗಳಿಗೂ ಗ್ಯಾರಂಟೀ ವಿಷಧ-

ಮೂರು ದಿವಸಗಳಲ್ಲಿ ಈ ಹೊಟ್ಟೆನೋವು ಗುಣವಾಗಿ ಜಾಗ್ರತೆ ಸಂತಾನ ಫಲ ಬೇಕಾದರೆ ಮೇಲ್ಕಂಡ ಸಿದ್ಧೌಷಧಿ ಒಂದು ಸೆಟ್ ಅನುಪಾನ ಪತ್ರಿಕೆ ಮೇರೆ ಇಲ್ಲ ಸೇವಿಸಿರಿ ಸಾಕು. ಶೋಧನವೆಚ 15-16 ವರ್ಷ ಮಕ್ಕಳಿಲ್ಲದವರಿಗೂ ಮಕ್ಕಳಾಗಿವೆ. ಅನೇಕ ಪ್ರಶಂಸಾಪತ್ರಗಳನ್ನು ಪಡೆದಿದೆ.

ಕ್ರಯ:—ಒಂದುಸೆಟ್ 5ರೂ. ಪ್ಯಾಕಿಂಗ್ ಮತ್ತು ಟಪಾಲು ಸರ್ಚು 1ರೂ ವಿ. ಪಿ. ಇಲ್ಲ ಕ್ಯಾಟಲಾಗ್ ಉಚಿತ 6ರೂ. ಮನಿಆರ್ಡರ್ ಮಾಡಿರಿ. ಕೂಡ್ಲೆ ರಿಜಿಸ್ಟರ್ ಪಾರ್ಸಲ್ ರವಾನೆ.

ವಿಳಾಸ:—**A. R. ವಿಶ್ವೇಶ್ವರಯ್ಯ (ಎ. ರಾಮಸ್ವಾಮಿ ಅಯ್ಯರ್ ಸನ್,)**
Prop: **ಸಂತಾನ ಸಿಂಧೂರ**
ಅಂಬಳೆ ಪೋಸ್ಟು, ಯಳಂದೂರು ತಾಲೂಕು ಮೈಸೂರು ಡಿಸ್ಟ್ರಿಕ್ಟ್.
ಮೈಸೂರು ಶಾಖೆ: 269 ಸೋನಾರ್ ಸ್ಟ್ರೀಟ್, ದಿವಾನ್ಸ್‌ರೋಡು, ಮೈಸೂರು.

"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಭಾರತ ಸರಕಾರವು ಅ. ಭಾ. ರೈಲ್ವೆ ಯನ್ನು ರಾಷ್ಟ್ರೀಕರಣ ಮಾಡಿ ಈ ನಾಲ್ಕು ವರ್ಷಗಳಲ್ಲಿ ಅದ್ಭುತವಾದ ಪ್ರಗತಿ ಯನ್ನು ಸಾಧಿಸಿದೆ. ಇಷ್ಟು ದೊಡ್ಡ ಉದ್ಯಮವಾಗಲೀ– ಲಾಭವಾಗಲೀ ಇನ್ನಾವ ರಾಷ್ಟ್ರೀಕರಣದಿಂದ ಭಾರತ ಸರಕಾರಕ್ಕೆ ಪ್ರಾಪ್ತವಾಗದೆ ಹೋದರೂ ಕಾರ್ಯವ ನ್ನು ದಕ್ಷತೆಯಿದ್ದರೆ ಯಾವ ಉದ್ಯಮವ ನ್ನೂ ಸುಸೂತ್ರ ಜರಗಿಸಬಹುದೆನ್ನುವ ದಕ್ಕೆ ಇದು ಉತ್ತಮ ಉದಾಹರಣೆ. ನಾ ಲ್ಕು ವರ್ಷಗಳಲ್ಲಿ ಸಾಧಿಸಿದ ಪ್ರಗತಿಯೇ ನೆಂಬುದು ರೈಲ್ವೆ ಮಂಡಳಿ ವರದಿಯಿಂ ದ ಗೊತ್ತಾಗುತ್ತದೆ. ವರ್ಷವರ್ಷಕ್ಕೆ ರೈಲ್ವೆ ಇಲಾಖೆಯು ಅಭಿವೃದ್ಧಿಯನ್ನು ಕೊಂಡುತ್ತ ಬಂದಿದೆ. ಕೆಲಸಗಾರರ ಶು ಶ್ರೂಷೆಯು ಅತ್ಯಂತ ತೃಪ್ತಿಕರವಿದ್ದರೂ ಯುದ್ಧಾವಸಾನ ಪೂರ್ವದಲ್ಲಿ ಸರಬಾಜುವಾ ದಿಗಳು ಕೆಲಸಗಾರರನ್ನು ಮೇಷ್ಟರ ಹೊ ತುಬಂತೆ ಪ್ರೇರೇಪಿಸಿದ್ದರು. ಭಾರತ ಸರ ಕಾರವು ನೀಡಿದ ಸಹಕಾರವನ್ನು ಕೆಲಸ ಗಾರ ಜನ ಕೃತಜ್ಞತಾಪೂರ್ವಕ ಸ್ಮರಿಸಿ ದ್ದರಿಂದಲೂ– ರೈಲ್ವೆಯ ಸದ್ಯದ ಪರಿಸ್ಥಿತಿ ಯನ್ನು ವಲೋಕಿಸಿ ವರ್ತಿಸಿದ್ದರಿಂದಲೂ ಸರಬಾಜುವಾದಿಗಳ ಸಂಪಿನ ಸಂಘಟನೆ ಮುರಿದು ಬಿದ್ದಂತಾಯಿತು. ಭಾರತ ಸರ ಕಾರವಾದರೋ ವರ್ಷವರ್ಷಕ್ಕೆ ಹೊಸ ಹೊಸ ಯಂತ್ರಗಳನ್ನು ತಯಾರಿಸುವ ದೂ– ವ್ಯಾಗನುಗಳನ್ನು ಕೂಡಿಸುವು ದೂ ನೂತನ ಮಾರ್ಗಗಳನ್ನು ನಿರ್ಮಿಸಿ ಹಿಡಿಯುವು ದೂ — ಇವೇ ಮೊದಲಾದ ಕಾರ್ಯಗಳನ್ನು ಕೈಗೊಂಡಿ ದ್ದು ಇದರಿಂದಾಗಿ ಅನೇಕ ಜನರಿಗೆ ನೌಕರಿ ಪ್ರಾಪ್ತವಾಗಿದೆ.

ಭಾರತದ ಎಲ್ಲ ರೈಲ್ವೆಗಳ ಒಟ್ಟು ಬಂಡವಲಗಳು ರೂ. 839.17 ಕೋಟಿ ಗಳಾಗಿದ್ದುವೆ. ಇದರಲ್ಲಿ 827.04 ಕೋಟಿ ರೂ. ಭಾರತ ಸರಕಾರದ್ದಿದ್ದು 11.13 ಕೋಟಿ ರೂ.ಗಳು ಸಂಸ್ಥಾನ– ಕಂಪೆನಿ ಹಾಗೂ ಜಿಲ್ಲಾ ಬೋರ್ಡುಗ ಳಿಂದ ಕೊಡಿಸಿದ್ದಾಗಿರುತ್ತದೆ. 1950-51 ರಲ್ಲಿ ರೈಲ್ವೆಗಳಿಗೆ ತಗಲಿದ ಒಟ್ಟು 25.60 ಕೋಟಿ ರೂ. ಗಳ ವೆಚ್ಚದಲ್ಲಿ ಸಂಸ್ಥಾನ ರೈಲ್ವೆಗಳಿಗೆ 25.41 ಕೋಟಿ ರೂ. ವೆಚ್ಚ ವಾಗಿದೆ. ಇದರಲ್ಲಿ ಈಗಿರುವ ರೈಲ್ವೆ ಮಾ ರ್ಗಗಳಿಗಾಗಿ 22-17 ಕೋಟಿ ರೂ.ಗಳು ಮತ್ತು ಹೊಸದಾಗಿ ಪ್ರಾರಂಭವಾದ ರೈ ಲ್ವೆಗಳಿಗೆ 3.24 ಕೋಟಿ ರೂ.ಗಳ ವೆಚ್ಚ ತಗಲಿದೆ. ಈ ವರ್ಷದಲ್ಲಿ 95 ಮೈಲುಗಳ ಷ್ಟು ಹೊಸದಾಗಿ ರೈಲ್ವೆ ಮಾರ್ಗವನ್ನು ಹಾಕಲಾಗಿದೆಯಲ್ಲದೆ 204 ಮೈಲು ರೈ ಲ್ವೆ ಹಾಕಲು ಮಂಜೂರಿಯೂ ದೊರೆ ತಿದೆ.

1950-1951ರಲ್ಲಿ ಭಾರತ ರೈಲ್ವೆಗಳಿ ಗೆ ಸುಮಾರು 15 ಕೋಟಿ ರೂಪಾಯಿ ಉಳಿತಾಯವಾಗಿದೆಂದು ತಿಳಿದು ಬರುತ್ತ ದೆ. ಮೇಲಿನ ಸುಧಾರಣೆಗಳನ್ನು ಮಾಡಿಯೂ ಇಷ್ಟು ಉಳಿತಾಯವಾಗಿರು ತ್ತದೆ. 1950-51ರಲ್ಲಿ ಪ್ರಯಾಣಿಕರ ಓಡಾಟ-ಸರಕುಗಳ ಸಾಗಾಟವೂ ಹೆಚ್ಚಾ ಗಿದೆಂಬ ದೂ ಸಹಜವಾದ ಮಾತೇ. ಆದ ರ ಜೊತೆಗೆ ಪ್ರಯಾಣಿಕರ ಪ್ರಯಾಣ ಸೌಕರ್ಯದ ಕಡೆಗೆ ಹೆಚ್ಚಿನ ಗಮನವನ್ನೆನ್ನೀ ಯಲಾಗಿದೆ. ಬೆಂಗಳೂರಿನ ಹಿಂದೂಸ್ತಾ ನ ವಿಮಾನ ಕಂಪೆನಿಯಲ್ಲಿ ಸಂಪೂರ್ಣ ಉಕ್ಕಿನಿಂದ 8ನೇ ತಂಗಡಿಯ 63 ಪ್ರ ಯಾಣಿಕರ ಡಬ್ಬಿಗಳನ್ನು ತಯಾರಿಸಿ ಓ ಡಾಟದಲ್ಲಿ ತಂದದ್ದಾಗಿದೆ. 1939ರ ಮಾದರಿಯ ಪ್ರಯಾಣಿಕರ ಡಬ್ಬಿಗಳಿಗೆ ಲ್ಲ ವಿದ್ಯುತ್ ಬೀಸಣಿಗೆಗಳನ್ನು ಒದಗಿಸ ಲಾಗಿದ್ದು ಇವುಗಳಲ್ಲಿ 200 ಡಬ್ಬಿಗಳನ್ನು ಓಡಾಟದಲ್ಲಿ ತಂದಾಗಿದೆ. ಕಳೆದ ವರ್ಷ ದಲ್ಲಿ 896166 ಜನ ನೌಕರರಿದ್ದರು. ಈ ವರ್ಷದಲ್ಲಿ ಅವರ ಸಂಖ್ಯೆಯು 919747ಕ್ಕೇರಿದೆ. ರೈಲ್ವೆ ಮಾರ್ಗ ಯಾತ್ರವದಕ್ಕಾಗಿಯೂ ಮತ್ತೂ ಇತರ ಕಟ್ಟಡದ ಕೆಲಸಗಳಿಗಾಗಿ ನೇಮಕಮಾಡಿ ದವರ ಅಂಕಿಸಂಖ್ಯೆಯು ಇದರ ಹೊರ ತಾಗಿ ಬೇರೆಯೆ ಇದೆ. ಈ ಮೊದಲು ಅ ಸ್ತಿತ್ವದಲ್ಲಿದ್ದ ಒಂಭತ್ತು ರೈಲ್ವೆಗಳಿಗೆ ಪು ರ್ಣಸ್ಥಗಾರರು ಕೊಟ್ಟ ತರ್ಪಿನಂತೆ ನಡೆ ದುಕೊಂಡದ್ದರಿಂದ ರೈಲ್ವೆ ನೌಕರರ ಸಂ ಖ್ಯೆಯು ಈ ವರ್ಷದಲ್ಲಿ ಹೆಚ್ಚಿದೆಂದೂ ತಿಳಿದು ಬರುತ್ತದೆ.

ಮೇಲಿನ ಅಂಕಸಂಖ್ಯೆಗಳಿಂದ ವರ್ಷವ ರ್ಷಕ್ಕೆ ಉಜ್ಜ್ವಲ್ಯವು ಸ್ಥಿತಿಯನ್ನು ಹೊಂ ದುತ್ತಿರುವದು ಕಂಡುಬರುತ್ತದೆ. ಕಳೆದ ವ ರ್ಷ ವಿಧ್ವಂಸಕೃತಿಗಳಿಂದ ಅಥವಾ ಇನ್ನಿ ತರ ಅವಘಾತದಿಂದ ಹಿಂದಿನವರ್ಷದಲ್ಲಾ ದಷ್ಟು ಹಾನಿ ರೈಲ್ವೆಗಳಿಗಾಗಿಲ್ಲ. ಇದಕ್ಕೆ ರೈಲ್ವೆ ಇಲಾಖೆಯವರು ಮುಂಜಾಗ್ರತೆ ವ ಹಿಸಿದ್ದೇ ಕಾರಣವಾಗಿರುತ್ತದೆ. ಸ್ವಾತಂ ತ್ರ್ಯಪೂರ್ವದಲ್ಲಿ ರೈಲ್ವೆಯಿಂದ ಬರುತ ಹ. ದಾದ ಲಾಭಗಳೆಲ್ಲವೂ ವಿದೇಶೀಯ ಬಂಡವಳಗಾರರಿಗೆ ದೊರಕುತ್ತಿದ್ದು ಅದರ ಲಾಭಾಂಶದಲ್ಲಿ ಸ್ವಲ್ಪವೂ ರೈಲ್ವೆ ಉದ್ಯ ಮಕ್ಕೆ ಬೀಳುತ್ತಿರಲಿಲ್ಲ. ಭಾರತ ಸರಕಾರ ವು ತನ್ನ ಹತೋಟಿಗೆ ತೆಗೆದುಕೊಂಡ ಮೇಲೆ ರೈಲ್ವೆಯ ಸಂಪತ್ತು ಹೆಚ್ಚುವದು ಮಾತ್ರವಲ್ಲದೆ ನೂತನ ರೈಲ್ವೆ ಮಾರ್ಗಗ ಳ ರಚನೆ-- ರೈಲ್ವೆಗಳಲ್ಲಿ ಪ್ರಯಾಣಿಕರಿ ಗೆ ಯೋಗ್ಯ ಸೌಕರ್ಯಗಳ ವಿಚಾರಣೆ-- ಕೆಲಸಗಾರರಿಗೆ ತೃಪ್ತಿಕರವಾದ ಶುಶ್ರೂ ಷೆ ಮತ್ತು ಯೋಗ್ಯ ಮಟ್ಟದ ಜೀವನ ಸೌಕರ್ಯಗಳನ್ನು ಒದಗಿಸಿ ಕೊಡಲಾಗಿ ದೆ. ಹೆಚ್ಚು ಹೆಚ್ಚು ಜನರು ಈ ಉದ್ಯೋ ಗದಲ್ಲಿ ನಿರತರಾಗಿರುವದು ರಾಷ್ಟ್ರೀಕರಣ ದ ಇನ್ನೊಂದು ಮುಖ್ಯ ಸಾಧನೆಯೆಂದು ಹೇಳಬೇಕು ರೈಲ್ವೆ ಪ್ರಗತಿ ಸಾಧನೆಯಲ್ಲಿ ಭಾರತ ಸರಕಾರವು ವಹಿಸಿದ ಧೋರ ಣೆಯು ಶ್ಲಾಘನೀಯವಾಗಿದೆ. ಮಾತ್ರವ ಲ್ಲ ಮಂಡಿನ ರಾಷ್ಟ್ರೀಕರಣ ವಿಚಾರಗಳ ಗೆಲ್ಲ ಇದು ಮಾದರಿಯಾಗಿದೆ. ನಾಲ್ಕುವ ರ್ಷಗಳಲ್ಲಿ ರೈಲ್ವೆ ಇಲಾಖೆಯು ಪ್ರಗತಿಗೆ ಪಾತ್ರವೂ ಸರ್ವತೋಮುಖವಾದ ಯಶಸ್ಸಿ ಗೆ ಕಾರಣರಾದ ಸಾರಿಗೆ ಮಂತ್ರಿ ಶ್ರೀ ಸಂ ತಾನಂರವರ ಕಾರ್ಯದಕ್ಷತೆಯನ್ನು ಈ ಸಂದರ್ಭದಲ್ಲಿ ಅವಶ್ಯವಾಗಿ ನೆನೆಯ ಬೇಕಾಗಿದೆ

ಪಶ್ಚಿಮ ಕರಾವಳಿಯಲ್ಲಿ ಪ್ರಬುದ್ಧ ಬಂದರ

ಕೇಂದ್ರ ಸರಕಾರ ನಿಯಮಿಸಿದ ಪಶ್ಚಿ ಮ ಕರಾವಳಿಯ ಪ್ರಬುದ್ಧ ಬಂದರ ಸಮಿ ತಿಯು ತಜ್ಞರನ್ನೊಳಗೊಂಡಿದ್ದು ಕಾರವಾ ರ, ಭಟ್ಕಳ, ಮಲ್ಪೆ, ಮಂಗ್ಳೂರು ಬಂದ ರಗಳನ್ನು ಸ್ವತಃ ಪರೀಕ್ಷಿಸಿ, ಅನುಭವ ಪೂರ್ವಕವಾದ ವಿಮರ್ಶೆಯಿಂದ ಕಡಿಮೆ ಖರ್ಚಿನಲ್ಲಿ ಹೆಚ್ಚಿನ ಪ್ರಯೋಜನ ಕೊಡ ಬಲ್ಲ ಬಂದರನೇ ನೈಸರ್ಗಿಕ ಅನುಕೂಲತೆ ಗಳುಳವ ಮಲ್ಪೆ ಅದನ್ನೇ ಪ್ರಬುದ್ಧ ಬಂ ದರವನ್ನಾಗಿ ಮಾಡಬೇಕೆಂದು ಶಿಫಾರಸು ಮಾಡಿರುತ್ತದೆ. ಇದೇ ಸಮಿತಿಯು ಕಾಂ ಡ್ಲಾವನ್ನು ಪ್ರಬುದ್ಧ ಬಂದರವನ್ನಾಗಿ ಮಾ ಡಬೇಕೆಂದು ಅಭಿಪ್ರಾಯ ಪಟ್ಟಿದುದನ್ನು ಸರಕಾರ ಮನ್ನಿಸಿ ಕಾರ್ಯತೊಡಗಿತು. ಮಲ್ಪೆಯ ಕುರಿತು ಬರೆದ ವರದಿ ಇನ್ನೂ ಸರಕಾರ ಪರಿಶೀಲಿಸಿರುವುದಿಲ್ಲ- ಇದಕ್ಕೆ ಪ್ರಕೃತದ ಹಣದ ಅಡಚಣೆಯು ಒಂದು ಕಾರಣವಾಗಿರಬಹುದು ಆದರೆ ಮುಖ್ಯ ವಾಗಿ ತಜ್ಞರ ಸಮಿತಿಯು ತಿರಸ್ಕರಿಸಿದ ಮಂಗ್ಳೂರನ್ನೇ ಕೇಂದ್ರವೂ ಪ್ರಬುದ್ಧ ಬಂದರವನ್ನಾಗಿ ಮಾಡಬೇಕೆಂಬ ಮಂ ಗ್ಳೂರು ಅಭಿಮಾನಿಗಳ ಚಳವಳಿ, ರೈವಾ ಡನೇ ಈ ಶಿಫಾರಸು ಶೀಘ್ರದಲ್ಲೇ ಕೈಗೂಡ ದಂತೆ ಮಾಡಿರಬೇಕೆಂದು ಊಹಿಸಬಹು ದು. ಜಲ್ಲೆಯ ಪುರೋಭಿವೃದ್ಧಿಯ ದೃಷ್ಟಿಯಿಂದ ಬಂದರದ ಹಿಂದಿನ ಪ್ರಾಂ ತದ ಬೇವೆಣಿಗೆ, ಅನುಕೂಲತೆಗಾಗಿ ಮಂ ಗ್ಳೂರು–ಮಲ್ಪೆ ಎಂಬ ವಾದವಿವಾದ ನಿಲ್ಲ ಬೇಕು. ಪ್ರಬುದ್ಧ ಬಂದರದ ಯೋಜನೆ ಯಲ್ಲಿಕೋಟ್ಯಾಂತರರೂಪಾಯಿ ವ್ಯಯವಾ ಗಬೇಕಾಗುವುದು. ಇಷ್ಟೊಂದು ಹಣವನ್ನು ಸುರಿಸಬೇಕಾದರೆ ಇಂದು ನಾಳೆಯ ಪ್ರ ಶ್ನೆಯನ್ನು ಹಿಡಿದೇ ಕರ್ತವ್ಯ ಮಾಡ ಬೇಕಾಗಿದೆ. ಸ್ವಾತಂತ್ರ್ಯಪೂರ್ವದಲ್ಲಿ ರೈಲ್ವೆಯಿಂದ ಬರುತ್ತಿದ್ದ ಲಾಭಗಳೆಲ್ಲವೂ ವಿದೇಶೀಯ ಬಂಡವಳಗಾರರಿಗೆ ದೊರಕುತ್ತಿದ್ದು ಅದರ ಲಾಭಾಂಶದಲ್ಲಿ ಸ್ವಲ್ಪವೂ ರೈಲ್ವೆ ಉದ್ಯಮಕ್ಕೆ ಬೀಳುತ್ತಿರಲಿಲ್ಲ. ಭಾರತ ಸರಕಾರವು ತನ್ನ ಹತೋಟಿಗೆ ತೆಗೆದುಕೊಂಡ ಮೇಲೆ ರೈಲ್ವೆಯ ಸಂಪತ್ತು ಹೆಚ್ಚುವದು ಮಾತ್ರವಲ್ಲದೆ ನೂತನ ರೈಲ್ವೆ ಮಾರ್ಗಗ ಳ ರಚನೆ-- ರೈಲ್ವೆಗಳಲ್ಲಿ ಪ್ರಯಾಣಿಕರಿ ಗೆ ಯೋಗ್ಯ ಸೌಕರ್ಯಗಳ ವಿಚಾರಣೆ-- ಕೆಲಸಗಾರರಿಗೆ ತೃಪ್ತಿಕರವಾದ ಶುಶ್ರೂ ಷೆ ಮತ್ತು ಯೋಗ್ಯ ಮಟ್ಟದ ಜೀವನ ಸೌಕರ್ಯಗಳನ್ನು ಒದಗಿಸಿ ಕೊಡಲಾಗಿ ದೆ. ಹೆಚ್ಚು ಹೆಚ್ಚು ಜನರು ಈ ಉದ್ಯೋ ಗದಲ್ಲಿ ನಿರತರಾಗಿರುವದು ರಾಷ್ಟ್ರೀಕರಣ ದ ಇನ್ನೊಂದು ಮುಖ್ಯ ಸಾಧನೆಯೆಂದು ಹೇಳಬೇಕು ರೈಲ್ವೆ ಪ್ರಗತಿ ಸಾಧನೆಯಲ್ಲಿ ಭಾರತ ಸರಕಾರವು ವಹಿಸಿದ ಧೋರ ಣೆಯು ಶ್ಲಾಘನೀಯವಾಗಿದೆ. ಮಾತ್ರವ ಲ್ಲ ಮಂಡಿನ ರಾಷ್ಟ್ರೀಕರಣ ವಿಚಾರಗಳ ಗೆಲ್ಲ ಇದು ಮಾದರಿಯಾಗಿದೆ. ನಾಲ್ಕುವ ರ್ಷಗಳಲ್ಲಿ ರೈಲ್ವೆ ಇಲಾಖೆಯು ಪ್ರಗತಿಗೆ ಪಾತ್ರವೂ ಸರ್ವತೋಮುಖವಾದ ಯಶಸ್ಸಿ ಗೆ ಕಾರಣರಾದ ಸಾರಿಗೆ ಮಂತ್ರಿ ಶ್ರೀ ಸಂ ತಾನಂರವರ ಕಾರ್ಯದಕ್ಷತೆಯನ್ನು ಈ ಸಂದರ್ಭದಲ್ಲಿ ಅವಶ್ಯವಾಗಿ ನೆನೆಯ ಬೇಕಾಗಿದೆ

ಪಶ್ಚಿಮ ಕರಾವಳಿಯಲ್ಲಿ ಪ್ರಬುದ್ಧ ಬಂದರ

ಕೇಂದ್ರ ಸರಕಾರ ನಿಯಮಿಸಿದ ಪಶ್ಚಿ ಮ ಕರಾವಳಿಯ ಪ್ರಬುದ್ಧ ಬಂದರ ಸಮಿ ತಿಯು ತಜ್ಞರನ್ನೊಳಗೊಂಡಿದ್ದು ಕಾರವಾ ರ, ಭಟ್ಕಳ, ಮಲ್ಪೆ, ಮಂಗ್ಳೂರು ಬಂದ ರಗಳನ್ನು ಸ್ವತಃ ಪರೀಕ್ಷಿಸಿ, ಅನುಭವ ಪೂರ್ವಕವಾದ ವಿಮರ್ಶೆಯಿಂದ ಕಡಿಮೆ ಖರ್ಚಿನಲ್ಲಿ ಹೆಚ್ಚಿನ ಪ್ರಯೋಜನ ಕೊಡ ಬಲ್ಲ ಬಂದರನೇ ನೈಸರ್ಗಿಕ ಅನುಕೂಲತೆ ಗಳುಳವ ಮಲ್ಪೆ ಅದನ್ನೇ ಪ್ರಬುದ್ಧ ಬಂ ದರವನ್ನಾಗಿ ಮಾಡಬೇಕೆಂದು ಶಿಫಾರಸು ಮಾಡಿರುತ್ತದೆ. ಇದೇ ಸಮಿತಿಯು ಕಾಂ ಡ್ಲಾವನ್ನು ಪ್ರಬುದ್ಧ ಬಂದರವನ್ನಾಗಿ ಮಾ ಡಬೇಕೆಂದು ಅಭಿಪ್ರಾಯ ಪಟ್ಟಿದುದನ್ನು ಸರಕಾರ ಮನ್ನಿಸಿ ಕಾರ್ಯತೊಡಗಿತು. ಮಲ್ಪೆಯ ಕುರಿತು ಬರೆದ ವರದಿ ಇನ್ನೂ ಸರಕಾರ ಪರಿಶೀಲಿಸಿರುವುದಿಲ್ಲ- ಇದಕ್ಕೆ ಪ್ರಕೃತದ ಹಣದ ಅಡಚಣೆಯು ಒಂದು ಕಾರಣವಾಗಿರಬಹುದು ಆದರೆ ಮುಖ್ಯ ವಾಗಿ ತಜ್ಞರ ಸಮಿತಿಯು ತಿರಸ್ಕರಿಸಿದ ಮಂಗ್ಳೂರನ್ನೇ ಕೇಂದ್ರವೂ ಪ್ರಬುದ್ಧ ಬಂದರವನ್ನಾಗಿ ಮಾಡಬೇಕೆಂಬ ಮಂ ಗ್ಳೂರು ಅಭಿಮಾನಿಗಳ ಚಳವಳಿ, ರೈವಾ ಡನೇ ಈ ಶಿಫಾರಸು ಶೀಘ್ರದಲ್ಲೇ ಕೈಗೂ ಡದಂತೆ ಮಾಡಿರಬೇಕೆಂದು ಊಹಿಸಬಹು ದು. ಜಲ್ಲೆಯ ಪುರೋಭಿವೃದ್ಧಿಯ ದೃಷ್ಟಿಯಿಂದ ಬಂದರದ ಹಿಂದಿನ ಪ್ರಾಂ ತದ ಬೇವೆಣಿಗೆ, ಅನುಕೂಲತೆಗಾಗಿ ಮಂ ಗ್ಳೂರು–ಮಲ್ಪೆ ಎಂಬ ವಾದವಿವಾದ ನಿಲ್ಲ ಬೇಕು. ಪ್ರಬುದ್ಧ ಬಂದರದ ಯೋಜನೆ ಯಲ್ಲಿಕೋಟ್ಯಾಂತರರೂಪಾಯಿ ವ್ಯಯವಾ ಗಬೇಕಾಗುವುದು. ಇಷ್ಟೊಂದು ಹಣವನ್ನು ಸುರಿಸಬೇಕಾದರೆ ಇಂದು ನಾಳೆಯ ಪ್ರ ಶ್ನೆಯನ್ನು ಹಿಡಿದೇ ಕರ್ತವ್ಯ ಮಾಡ ಬೇಕಾಗಿದೆ. ಯಾವ ಒಂಬದ ಆಯ ಕೆಯಿಂದ ಮುಂದಿನ ಹೆತ್ತಿಪ್ಪತ್ತು ವರ್ಷಗಳಲ್ಲಿ ಅತೀ ಹೆಚ್ಚಿನ ಪ್ರಯೋಜನ ಪಡೆಯಬಹುದೋ ಆ ಬಂದರದ ಅಭಿವೃದ್ಧಿಗಾಗಿ ಹಣ ವ್ಯಯವಾಗಬೇಕು. ಸರ್ವ ವಿಧ ದ ಪರಿಶೀಲನೆಯಿಂದ ಮಲ್ಪೆಯೇ ಅಂತ ಹ ಅಭಿವೃದ್ಧಿಗೆ ಯೋಗ್ಯವಾದುದು ಎಂದು ಸ್ಪಷ್ಟವಾದ ಅಭಿಪ್ರಾಯವಿರುವಾಗ, ಇನ್ನೂ ಇನ್ನೂ ಆನಗತ್ಯ ಶೋಧನೆ, ಪರಿಶೋಧನೆಯಲ್ಲಿ ಸರಕಾರ ಸಮಯ ಕ ಳೆಯದೆ ಈಗಲೇ ನಿರ್ಣಯಕ್ಕೆ ಬರುವು ದು ಉಚಿತ ಮತ್ತು ಅತ್ಯಾವಶ್ಯಕ. ಇಂ ತಹ ನಿಶ್ಚಿತ ನಿರ್ಣಯಕ್ಕೆ ಬರುವ ಮೊದ ಲು ಹುಸಿನ--ಮಂಗ್ಳೂರು ರೈಲ್ವೆ ಹಾಕು ವ ಅಥವಾ ಮಂಗ್ಳೂರನ್ನು ಸರ್ವ ಋತು ಗಳ ಬಂದರವನ್ನಾಗಿ ಮಾಡುವ ಯಾವು ದೇ ಕೆಲಸವನ್ನು ಕೈಗೊಳ್ಳಬಾರದು. ಆದ ರೆ ಅಷ್ಟರೊಳಗೆ ಮಂಗ್ಳೂರಿಂದ ಉಡುಪಿ ಗೆ ರೈಲು ಹಾಕಿಸಬಹುದು. ಏಕೆಂದರೆ ಇದೊಂದು ಸರ್ವಸಮ್ಮತವಾದ ಕೆಲಸ; ಭಿನ್ನಾಭಿಪ್ರಾಯವಿರದ ಕಾರ್ಯಕ್ರಮ.

1952ರಲ್ಲಿ 12 ಲಕ್ಷ ಟನ್ ಉಕ್ಕಿನ ಉತ್ಪತ್ತಿಯ ನಿರೀಕ್ಷೆ—ಇಂಡಿಯಾ ಸರ ಕಾರದ ಆಹಾರ ಮಂತ್ರಿ ಶ್ರೀ ಕೆ. ಎಮ್. ಮುನ್ಶಿಯವರು ಇದೇ ತಾ. 16ರಲ್ಲು ಲ ಕ್ನೌ ಕಬ್ಬು ಸಂಶೋಧನ ಇನ್ಸ್ಟಿಟ್ಯೂಟಿ ನ ಕಂಚು ಸ್ಥಾಪನೆ ಮಾಡುತ್ತಾ ಚಾಲ್ತಿ ವರುಷದಲ್ಲಿ ಹಿಂದುಸ್ಥಾನದಲ್ಲಿ 12 ಲಕ್ಷ ಟನ್ ಸಕ್ಕರೆ ತಯಾರಾಗುವುದೆಂದು ಹೇ ಳಿದರು. ಪ್ಲಾನಿಂಗ್ ಕಮಿಶನಿನವರು ಸೂ ಚಿಸಿದ ಮಿತಿಯಂತೆ ಹಿಂದುಸ್ಥಾನದಲ್ಲಿ ಸ ರಾಸರಿ 15 ಲಕ್ಷ ಟನ್ ಸಕ್ಕರೆ ಉತ್ಪತ್ತಿ ಯಾಗಲು ಶಕ್ಯವಿದೆವೆಂದರು. ಸಕ್ಕರೆ ಉತ್ಪತ್ತಿ ಜಾಸ್ತಿಯಾಗಲು ಕಬ್ಬಿನ ಬೆಳೆ ಯ ಸಂಶೋಧನೆಯು ಚುರುಕಿನಿಂದ ನ ಡೆಯಬೇಕು ಮತ್ತು ಕಡಿಮೆ ವೆಚ್ಚದಿಂದ ಸಕ್ಕರೆ ತಯಾರಿಕೆಯ ರೀತಿ ವಿಧಾನಗಳ ನ್ನು ಕಂಡುಹಿಡಿಯಬೇಕೆಂದರು.

ತೀ ಕಾಮರಾಜ ನಾಡರರ ಸಲಹೆ

ತಮಿಳುನಾಡು ಪ್ರದೇಶ ಕಾಂಗ್ರೆಸ್ ಸ ಮಿತಿಯ ಅಧ್ಯಕ್ಷರಾದ ಶ್ರೀ ಕಾಮರಾಜ ನಾಡರರು ತಾವು ತಮ್ಮ ಅಧ್ಯಕ್ಷಸ್ಥಾನಕ್ಕೆ ರಾಜೀನಾಮೆ ಕೊಡಲು ಸಿದ್ಧರಿರುವುದಾಗಿ

ನಮ್ಮ ಚಂದಾ ದಾರರಲ್ಲಿ ಇನ್ನೊಮ್ಮೆ ವಿನಂತಿ

ನಮ್ಮ ಚಂದಾ ದಾರರೊಡನೆ ನಾವು ಈಗಾಗಲೇ ಹಲವುಬಾರಿ ಕಳಕಳಿಯ ವಿ ನಂತಿ ಮಾಡಿಕೊಂಡಿದ್ದೇವೆ. ಪ್ರತ್ಯೇಕ ಪ ತ್ರಗಳನ್ನು ಬರಕೊಂಡಿದ್ದೇವೆ. ಆದರೂ ಹೆಚ್ಚಿನವರು ತಮ್ಮ ಚಂದಾ ಹಣವನ್ನು ಕಳಿಸಲಿಲ್ಲವೆಂಬುದಕ್ಕಾಗಿ ಅತ್ಯಂತ ವಿಶಾ ದ ಪಡುತ್ತೇವೆ. ನಾವು ಆಗಾಗ್ಗೆ ಬರೆಯು ವುದರಿಂದ ನನುಗೂ ಶ್ರಮ ಮತ್ತು ನಷ್ಟ. ಚಂದಾದಾರರಿಗೂ ಬೇಸರಕ್ಕೆ ಕಾರಣ ಆದುದರಿಂದ ನಮ್ಮ ಚಂದಾದಾರ ಬಂಧು ಗಳು ಪತ್ರಿಕೋದ್ಯಮದ ವಿಶೇಷ ಹೊಣೆ ಮತ್ತು ಪ್ರಯಾಸಗಳನ್ನು ಮನಗಂಡು ಇದು ಕನ್ನಡಕ್ಕಾಗಿ ತಮ್ಮ ಸೇವೆಯೆಂ ದಾಗಲೀ ನವಯುಗಕ್ಕೆ ಸಹಾಯವೆಂದಾ ಗಲೀ ತಮ್ಮ ತಮ್ಮ ಚಂದಾ ಹಣವನ್ನು ನಯಮಾಡಿ ಕೂಡಲೇ ಕಳುಹಿಸಕೊಟ್ಟು ನಮ್ಮೊಡನೆಸಹಕರಿಸಬೇಕಾಗಿ ತಿರುತಿರುಗಿ ವಿನಂತಿಸುತ್ತೇವೆ. ವಿ ಪಿ. ಮಾಡಬೇಕೆಂ ದಿದ್ದರೆ ದಯವಿಟ್ಟು. ಹಾಗೆಯೇ ತಿಳಿಸು ವುದು. ಪತ್ರಿಕೆ ಬೇಡವೆಂದಿರುವವರೂ ಖಾತೆಯನ್ನು ಕಳುಹಿಸಿಕೊಟ್ಟು ಹಾಗೆ ಯೇ ತಿಳಿಸಬಹುದು.

ಮೆನೇಜರ್.

ಮದ್ರಾಸಿನಲ್ಲಿ ಕಾಂಗ್ರೆಸ್ ಸರಕಾರ?

ತಾ. 17ರಲ್ಲು ನೇರಿದ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಹೇಳಿದರು. ಕಾಂಗ್ರೆಸ್ ಸಂಸ್ಥೆಗಳನ್ನು ಬಲವಂತವಾಗಿ ಮಾಡುವ ಕ್ರಮವು ನಾಡಿನ ಎಲ್ಲಾ ಜಿಲ್ಲಾ, ತಾಲೂಕು ಸಮಿತಿಗಳ ಅಧಿಕಾರಿಗಳು ರಾಜೀನಾಮೆ ಕೊಡುವುದು ಯುಕ್ತವೆಂದು ಶ್ರೀ ನಾಡರರು ಹೇಳಿದರೆಂದು ವರದಿಯಾಗಿದೆ

ಮದ್ರಾಸಿನಲ್ಲಿ ಕಾಂಗ್ರೆಸ್ ಸರಕಾರ?

ಮದ್ರಾಸಿನಲ್ಲಿ ಕಾಂಗ್ರೆಸ್ ಸರಕಾರ ಏರ್ಪಡಿಸುವಂತಾಗಬೇಕು. ವಿರೋಧಿ ಪಕ್ಷಗಳು ಮಂತ್ರಿಮಂಡಲ ರಚಿಸುವುದು ಅಸಾಧ್ಯ. ಕಮ್ಯೂನಿಸ್ಟರ ಪ್ರೇರಣೆಯಿಂದಂತೂ ಸರಕಾರ ರಚಿಸುವುದು ಕಷ್ಟ ಸಾಧ್ಯ. ಕಾಂಗ್ರೆಸು ದೇರೆ ದಾರಿಯನ್ನು ಹಿಡಿದಲ್ಲಿ ಅದು ಜನರ ಹಿತಸಾಧಿಸಿದಂತಾಗುವುದಿಲ್ಲ. ಮಾತ್ರವಲ್ಲ ಅದು ತನ್ನ ವರ್ಚಸ್ಸನ್ನೂ ಕಳಕೊಳ್ಳಬೇಕಾದೀತು ಎಂದು ಇದೇ ತಾ. 17ರಲ್ಲಿ ತನ್ನಂಪೇಟೆಯಲ್ಲಿ ಜರುಗಿದ ತಮಿಳುನಾಡು ಕಾಂಗ್ರೆಸ್ ಕಾರ್ಯಕರ್ತರ ಪರಿಷತ್ತು ಅಭಿಪ್ರಾಯಪಟ್ಟಿರುತ್ತದೆ. ತಮಿಳ್‌ನಾಡು ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಶ್ರೀ. ಕಾಮರಾಜ ನಾಡರರು ಪರಿಷತ್ತಿನ ಅಧ್ಯಕ್ಷರಾಗಿದ್ದು ಕಾಂಗ್ರೆಸ್ ವರಿಷ್ಠರೊಡನೆ ವಿಚಾರವಿನಿಮಯ ಮಾಡಿಕೊಂಡ. ಕಾಂಗ್ರೆಸು ಸರಕಾರ ರಚನೆಯ ಕುರಿತು ಚರ್ಚಿಸಬೇಕೆಂದರು.

ಕಾಂಗ್ರೆಸು ಕಾರ್ಯಕರ್ತರ ಸಂಖ್ಯೆ ಬೆಳೆಯಬೇಕು. ಸಂಬಳದ ಕೆಲಸಗಾರರನ್ನು ಕೂಡಾ ನೇಮಕ ಮಾಡಿ ಕಾಂಗ್ರೆಸು ಹೆಚ್ಚು ಹೆಚ್ಚು ಕೆಲಸ ಸಾಗಿಸಬೇಕಾಗಬೇಕೆಂದೂ ಪರಿಷತ್ತಿನಲ್ಲಿ ನಿರ್ಣಯ ಮಾಡಲಾಯಿತು.

ಚುನಾವಣೆಗಳಿಗಾಗಿ ಸರಕಾರಕ್ಕೆ 10 ಕೋಟಿ ರೂಪಾಯಿ ಖರ್ಚು

ಚುನಾವಣೆಗಳ ಚೀಫ್ ಕಮಿಶನರ್ ಶ್ರೀ ಸುಕುಮಾರ ಸೇನರು ದಿಲ್ಲಿಯ ಪತ್ರಿಕೋದ್ಯಮಿಗಳಿಗಿತ್ತ ಸಂದರ್ಶನದಲ್ಲಿ ಸದ್ಯ ನಡೆದಿರುವ ಚುನಾವಣೆಗಳ ಬಗ್ಗೆ ಕೇಂದ್ರ ಸರಕಾರಕ್ಕೆ ಒಟ್ಟು 10ಕೋಟಿ ರೂಪಾಯಿ ಖರ್ಚಾಗಿದೆ ಎಂದೂ ಪ್ರತಿ ಮತದಾರನಿಗೆ ನಾಲ್ಕಾಣೆ ಆಗಿರಬಹುದೆಂದೂ ತಿಳಿಸಿದರು.

ಪ್ರಾಥಮಿಕ ಅಂದಾಜಿನಂತೆ ಒಟ್ಟು 17½ಕೋಟಿ ಜನರಿಗೆ ಮತದಾನದ ಹಕ್ಕು ಇದ್ದು ಅವರಲ್ಲಿ ಸೇಕಡಾ 85ಕ್ಕಿಂತಲೂ ಹೆಚ್ಚು ಮಂದಿ ಅನಕ್ಷರಸ್ಥರಿದ್ದರು. ಸರಾಸರಿ 40ರಿಂದ 60ರಷ್ಟು ಮಟ್ಟಿಗೆ ಎಲ್ಲೆಡೆಗಳಲ್ಲೂ ಮತದಾನವಾಗಿರುವದು. ಕೆಲವು ಸ್ಥಳಗಳಲ್ಲಿ ಮತದಾನ ಮಾಡಿದವರಲ್ಲಿ ಹೆಂಗಸರ ಸಂಖ್ಯೆಯೇ ಜಾಸ್ತಿಯಾಗಿತ್ತು. ನಾಮಪತ್ರ ಸ್ವೀಕಾರಕ್ಕೆ ನೇಮಿಸಲ್ಪಟ್ಟ ಕೊನೆಯ ದಿನವು ದಾಟಿದ ಮೇಲೆ ಕಾಯಿದೆ ಪ್ರಕಾರ ಐವತ್ತು ರೂಪಾಯಿಗಳಂತೆ ದಂಡ ತೆತ್ತು 757 ಉಮೇದ್ವಾರರು ಅರ್ಜಿ ಸಲ್ಲಿಸಿದರು. ಈ ದಂಡದಿಂದ ಸರಕಾರಕ್ಕೆ ಸಾಲ್ವತ್ತು ಸಾವಿರ ರೂಪಾಯಿಗಳು ದೊರೆತವು. ಸಲ್ಲಿಸಿದ ಅರ್ಜಿಗಳಲ್ಲಿ ಸಾಲ್ವತ್ತು ಮೂರು ಅರ್ಜಿಗಳು ಅಸ್ವೀಕೃತವಾದುವು. ಮತದಾರ ಕ್ಷೇತ್ರ ವಿಧಾನ ಜನಿಗೆ 8 ಕಿಂಗಳು ಹಿಡಿದರೂ ಅದಿನ್ನೂ ಸ್ಥಿರಪಡಿಸಲಾಗುವುದಿಲ್ಲ. ಮತದಾರರ ಯಾದಿಯು ಇನ್ನು ಸುಮಾರು ಐದು ವರುಷಗಳಿಗಾಗಿ ಸಂಪೂರ್ಣ ವಿಶೇಷವಾಗಿ ಮಾಡಲಾಗುವುದೆಂದೂ ಹೇಳಿದರು.

ಮದ್ರಾಸು ಲೆಜಿಸ್ಲೇಟಿವ್ ಕೌನ್ಸಿಲಿಗೆ

ಪಶ್ಚಿಮ ಕರಾವಳಿ ಸ್ಥಳೀಯ ಸಂಸ್ಥೆಗಳ (ಜಿಲ್ಲಾ ಬೋರ್ಡ್, ನಗರ ಸಭೆ ಮತ್ತು ಮೇಜರ್ ಪಂಚಾಯತ ಬೋರ್ಡಿಗೆ) ಮತದಾರ ಸಂಘದಿಂದ ಸದಸ್ಯರೊಬ್ಬರನ್ನು ಆರಿಸಬೇಕಾಗಿದ್ದು ಅದಕ್ಕೆ ಮಂಗಳೂರಿನ ವಕೀಲ್ ಶ್ರೀ ಎಸ್. ಸಂಜೀವಯ್ಯನವರು ಕಾಂಗ್ರೆಸ್ ಹುರಿಯಾಳುಗಳಾಗಿದ್ದಾರೆ. ಕುಂದಾಪುರದ ಶ್ರೀ ಸರ್ವೋತ್ತಮ ಪೈಗಳು ಇನ್ನೊಬ್ಬ ಸ್ವತಂತ್ರ ಉಮೇದ್ವಾರರೆಂದೂ ತಿಳಿದುಬರುತ್ತದೆ.

ಜಾರ್ಜರ ಅಂತಿಮ ಸಂಸ್ಕಾರ

ವಿಂಡ್ಸರಿನಲ್ಲಿ ತಾ. 15ರಲ್ಲಿ ಸೈಂಟ್ ಜೋರ್ಜ್ ದೇವಾಲಯದಲ್ಲಿ ನಿಶ್ಶಬ್ದ ವಾತಾವರಣದಲ್ಲಿ ಅರಸನೇ ಜಾರ್ಜರ ಅಂತಿಮ ಸಂಸ್ಕಾರವು ನೆರವೇರಿತು. ಎಲಿಜಬೆತ್ ರಾಣಿಯವರು ವಿರೂಪಿನ ಶಬ್ದಿಯಲ್ಲಿ ತಂಬಿಸಿಕೊಟ್ಟ ಮಣ್ಣನ್ನು ಸದೂಫಿಯ ಮೇಲೆ ಎರಚಿದರು. ಬ್ರಿಟಿಷ್ ಚರ್ಚಿನ ಪರಮ ಧರ್ಮ ಗುರುಗಳಾದ ಕೇಂಟರ್‌ಬರಿಯ ಆರ್ಚ್ ಬಿಷಪರು 'ಮಣ್ಣಿನಲ್ಲಿ ಮಣ್ಣು, ಬೂದಿಯಲ್ಲಿ ಬೂದಿ, ದೂಳಿನಲ್ಲಿ ದೂಳು' ಎಂದು ಸರ್ವಸಾಮಾನ್ಯ ಮನುಷ್ಯನ ಅಂತ್ಯ ಸಂಸ್ಕಾರಕ್ಕೆ ಪರಿಸಿವ ವಚನಗಳಿಂದ ಅಂತ್ಯ ವಿಧಿಗಳನ್ನು ತೀರಿಸಿದರು ರಾಜೋಚಿತ ವೈಭವಗಳೆಲ್ಲ ಮೆರವಣಿಗೆ, ಮಿಲಿಯಾಂತರ ಜನರ ಶೃದ್ಧಾಂಜಲಿ ಇಂದು ಅಂತಿಮ ಯಾತ್ರೆಯೂ ಅಭೂತಪೂರ್ವ ಸಾಂಭ್ರಮದಿಂದ ಜರಗಿತು. ಇದರ ವರದಿಯನ್ನು 45 ಭಾಷೆಗಳಲ್ಲಿ ಜಗತ್ತಿಗೆಲ್ಲಾ ಸಾರಲಾಯಿತು.

ಗಂಗಮ್ಮ ಗೌರಮ್ಮರ ನಿಧನ—

ಅಖಿಲ ಜಗತ್ತಿನ ಪ್ರಾರ್ಥನೆಯ ಅವಳಿಜವಳಿ ಅಪೂರ್ವ ಸಹೋದರಿಗಳಾದ ಗಂಗಮ್ಮ ಗೌರಮ್ಮರು ಇದೇ ತಾ 17ನೇ ಬೆಳಿಗ್ಗೆ ಬೆಂಗಳೂರಿನಲ್ಲಿ ನಿಧನಗೊಂಡರು. ಜನನ ಕಾಲದಲ್ಲೇ ಇಬ್ಬರ ದೇಹಗಳೂ ಒಂದಕ್ಕೊಂದು ಅಂಟಿಕೊಂಡಿದ್ದು ಅದನ್ನು ಬೇರ್ಪಡಿಸಲು ಅಸಾಧ್ಯವೆನಿಸಿತ್ತು. ಹಲವು ದೇಶಗಳಲ್ಲಿ ಅವರು ಸಂಚರಿಸಿ ಪ್ರದರ್ಶಿಸಲ್ಪಟ್ಟಿದ್ದಾರೆ. ಪ್ರೇಕ್ಷಕರು ಅವರನ್ನು ನೋಡಿ ಆಶ್ಚರ್ಯ ಗೊಂಡಿದ್ದಾರೆ. ಒಬ್ಬರಿಗೆ ಏಕಾದರ್ಶ ಕಾಹಿಲೆ ಬಂದರೆ ಅದಂ ಪರಿಣಾಮ ಇನ್ನೊಬ್ಬರಿಗೂ ಆಗುವುದಿತ್ತು. ಮೂರು ತಿಂಗಳಂದ ಗಂಗಮ್ಮನಿಗೆ ಪಾರ್ಶ್ವವಾಯು ಬೇನೆಯತ್ತು ಅವಳ ಪ್ರಾಣ ಹೋದ ಮೇಲೆ ಶಸ್ತ್ರ ಚಿಕಿತ್ಸೆ ಮಾಡಿ ತನ್ನನ್ನು ಪ್ರತ್ಯೇಕಿಸಬಹುದೆಂದು ಗೌರಮ್ಮ ಆಪೇಕ್ಷಿಸಿದ್ದರೂ ಅರ್ಧ ಭಿಂಟಿಯಲ್ಲೇ ಅವಳೂ ನಿಧನಗೊಂಡಳು.

ವಿಮಾನ ಅವಘಡ

ಮದ್ರಾಸಿನಿಂದ ಹೊರಟ ವಿಮಾನವೊಂದು ತಾ. 20ರಲ್ಲಿ ನಾಗಪುರದಲ್ಲಿ ಅವಘಡಕ್ಕೊಳಗಾಗಿ 3 ಜನರು ಸತ್ತರು. ಎರಡೂ 14 ಜನರು ವಿಶೇಷ ಪಾನಿಗೊಳಗಾಗಿರುವರೆಂದೂ ತಿಳಿಯುತ್ತದೆ.

ಉಡುಪಿ

ಸರಿಯಾಸರಿಗೆ ಪ್ರಶಸ್ತಿ ಪತ್ರ—

ಬೆಂಗಳೂರಿನ ಹಂದಾನಂತ್ಯಂ ಮೊದಲಾದ ಬಿರುದಾಂಕಿತ ಶ್ರೀ ಗೋಪಾಲದಾಸರಿಗೆ ಉಡುಪಿಯ ದುಶಾಧಿಪತಿಗಳ ಹಾಗೂ ಭಂಡಾರಕೇರಿ ಮತ್ತು ಭೀಮನ ಕಟ್ಟೆ ಮಠಗಳ ಧರ್ಮಾಧಿಕಾರಿಗಳ ಪತಿಯಿಂದ ದಿನಾಂಕ 10 ರಂದು ರಾತ್ರಿ ಶ್ರೀ ಮದನಂತೇಶ್ವರ ದೇವಸ್ಥಾನದಲ್ಲಿ ಪ್ರಶಸ್ತಿ ಪತ್ರವೊಂದು ಕೊಡಲಾಯಿತು. ಶ್ರೀ ದಾಸರು ಒಂದು ವಾರದ ತನಕ ಶ್ರೀ ದೇವಳದಲ್ಲಿ ಹರಿಕಥಾ ಸಪ್ತಾಹವನ್ನು ಜರಗಿಸಿದ್ದರು.

ಅ. ಕ. ಜ್ಯೋತಿಷಿಗಳ ಚತುರ್ಥ ಸಮ್ಮೇಳನವು

ಉಡುಪಿ ಶ್ರೀ ಕೃಷ್ಣ ಮಠದ ವಸಂತ ಮಹಲಿನಲ್ಲಿ ಕಳೆದ ವಾರ ಶ್ರೀ ಭಂಡಾರಿ ಕೆರೆ ಮಠದ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಜರಗಿತು. ಕರ್ನಾಟಕದ ಜ್ಯೋತಿಷಿಗಳೆಲ್ಲರೂ ಬಂದಿದ್ದರು. ಸಮ್ಮೇಳನದಲ್ಲಿ ಈ ಕೆಳಗಿನ ನಿರ್ಣಯಗಳು ಪಾಸಾದುವು- | ಉಡುಪಿಯಲ್ಲಿ ಕಯಾತಾಗುತ್ತಿರುವ ಅರ್ಯ ಭಟೀಯ ಸಿದ್ಧಾಂತಾನುಸಾರಿ ಕೇರಳ ನೂತನ ಗಣಿತಾನುಸಾರಿ ಪಂಚಾಂಗವನ್ನು ಶಾಸ್ತ್ರಸಿದ್ಧ ಪಂಚಾಂಗ ಕರ್ತರು ದೂಷಿಸುವುದು ಸರಿಯಲ್ಲ, 2 ಪಾಣಸ್ಯಧಿರಸಕ್ಷಯುನೆಂಬ ನಿಯಮವು ಕೇವಲ ಮಧ್ಯಗ್ರಹಾತಿಕ್ರಿಯಾಸ್ಪಷ್ಟ ಮಾತ್ರ ಸರ್ವದಾ ಏಕರೀತಿ ಇರುತ್ತದೆಯೆ, ಮಂದಾದಿ ಇವರ ಫಲ ಸಂಸ್ಕೃತ ತಿಥಿಗಳಲ್ಲಿ ಈ ನಿಯಮವು ಸರ್ವದಾ ಇರುವುದಿಲ್ಲ 3 ಪಾಶ್ಚಿಮಾತ್ಯರೇ ಮೊದಲಾದ ಸದೀನರಿಂದ ತಯಾರಿಸಿರುವ ಯಾವದೇ ತಾರಾ ಪಂಚಾಂಗೋಪದೋಗಿ ದೃಕ್ಸಿದ್ಧ ಗಣಿತವು ವೇದಾಂತವೆಂದಾಗಲೀ ಸಿದ್ಧಾಂತವೆಂದಾಗಲೀ, ಶಾಸ್ತ್ರವೆಂದಾಗಲೀ ಹೇಳಿಸಿಕೊಳ್ಳಲಾಗುವುದಿಲ್ಲ 4 ಜ್ಯೋತಿಃಶಾಸ್ತ್ರ ಧರ್ಮ ಶಾಸ್ತ್ರಗಳಿಗೆ ಪರಸ್ಪರ ವಿರೋಧವಾದ ಉಂಟಾದಲ್ಲಿ ಧರ್ಮ ಶಾಸ್ತ್ರವೇ ಧರ್ಮ ಕರ್ಮಾಚರಣೆಯಲ್ಲಿ ಪ್ರಮಾಣವು. ಸಮ್ಮೇಳನಾನಂತರ ಉಡುಪಿಯಲ್ಲೊಂದು ಅದರ ಶಾಖೆ ತೆರೆಯಲ್ಪಟ್ಟು ಅಧಿಕಾರಿಗಳ ಆಯ್ಕೆ ನಡೆಯಿತು.

ಗವರ್ನಮೆಂಟ್ ಹಾಗೂ ಎ. ಟ್ರೈನಿಂಗ್ ಶಾಲಾ ವರ್ಧಂತಿ ಸಮಾರಂಭವು—

ಇದೇ ತಾ 16ರಲ್ಲು ಸಂಜೆ ಡಿಸ್ಟ್ರಿಕ್ಟ್ ಎಜ್ಯುಕೇಶನಲ್ ಆಫೀಸರ್ ಶ್ರೀ ಟಿ ರಾಘವನ್ ನಾಯರರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರ್ಥನೆಯಾದ ನಂತರ ಹೆಡ್ಮಾಸ್ಟರ್ ಶ್ರೀ ಯು. ಕೃಷ್ಣರಾಯರು ಶಾಲಾ ವರದಿಯನ್ನೋದಿದರು. ಸ್ವಾಗತಾಚನ, ಬಹುಮಾನ ವಿತರಣೆಗಳಾಗಿ ಅಧ್ಯಕ್ಷರ ಭಾಷಣವಾಯಿತು. 'ವೀರ ಕನಾಲ' ಎಂಬ ಕನ್ನಡ ನಾಟಕ, 'ತಾಮ್ರಧ್ವಜ'ವೆಂಬ ಯಕ್ಷಗಾನ ನಾಟಕ ಮತ್ತಿತರ ವಿನೋದಾವಕಾಶಗಳಾಗಿ ಕಾರ್ಯಕ್ರಮ ಕೊನೆಗೊಂಡಿತು. ಆ ದಿನ ಬೇಗ್ಗೆ ವಿಚಿತ್ರವೇಷ ಸ್ಪರ್ಧೆ, ಉಪಾಹಾರ ಕಾರ್ಯಕ್ರಮಗಳಿದ್ದುವು.

ಇದೇ ಕಾಲೆಯ ಹಳೆ ವಿದ್ಯಾರ್ಥಿ ಸಂಘದ ವರ್ಧಂತ್ಯುತ್ಸವವು ಮರುದಿನ ಶಾಲಾ ಡಿಪ್ಯುಟಿ ಇನ್ಸ್‌ಪೆಕ್ಟರ್ ಶ್ರೀ ಎಚ್. ವೆಂಕಟ್ರಾಯ ಗಡಿಯೂರರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ಜರಗಿತು.

ಉಡುಪಿ ಟೈಲರ್ಸ್ ಸಂಘದ ಮಹಾಸಭೆಯು—

ತಾ. 18ರಲ್ಲು ಬೇಗ್ಗೆ ಶ್ರೀ ಕೆ. ವಾಸು ಅವರ ಅಧ್ಯಕ್ಷತೆಯಲ್ಲಿ ಜರಗಿತು. ಗತವರುಷದ ವರದಿವಾಚನವಾದ ನಂತರ ಹೊಸ ವರುಷದ ಕಾರ್ಯನಿರ್ವಾಹಕ ಮಂಡಳಿಯ ಸದಸ್ಯರು ಚುನಾವಣೆಯಿತ್ತರು.

ದಿನ ಚರಣೆ—

ತಾ 12ನೆ ಗೆ ಪೂಜ್ಯ ಗಾಂಧೀಜಿಯ ಶ್ರದ್ಧಾದಿನಾಚರಣೆ ಸಂಬಂಧವಾಗಿ ಸ್ಥಳೀಯ ಶಾಲೆಯ ವಿದ್ಯಾರ್ಥಿಗಳಿಗೆ ಪ್ರಾತಃ ಪಥಸಂಚಲನೆ [ಪರೇಡ್] ಪೂಜ್ಯರಿಗೆ ನಮನ, ಭಜನೆ, ಪ್ರಾರ್ಥನೆಗಳನ್ನು ಜರಗಿಸಿದರು. ಮತ್ತು 22 ಅಡಿ ಕೃಷ್ಣಾಕ ಸೂಲನ್ನು ಸೂತ್ರಾಂಜಲಿಯಾಗಿ ಅರ್ಪಿಸಿದರು. ಅದು ಸಾಯಂಕಾಲ ಕತ್ತಲೆಯ ಮುಂತಲದಲ್ಲಿಯೂ ಸೂತ್ರಯಜ್ಞ ಜರಗಿಸಲಾಯಿತು

ಹಂಗಾರ ಕಟ್ಟೆ:—

ಬೋರ್ಡ್ ಮಿಡಲ್ ಎಲಿಮೆಂಟರಿ ಶಾಲಾ ಹಳೇ ವಿದ್ಯಾರ್ಥಿ ಸಂಘದ ವರ್ಧಂತಿ ತಾ. 19-2-52ರಲ್ಲಿ ಶ್ರೀ ಎಚ್. ನರಸಿಂಹ R. D. O. ಕುಂದಾಪುರ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಬಿ. ರಾಮಣ್ಣ ಶೆಟ್ಟಿ ವರದಿ ವಾಚನ ಶ್ರೀ ಎ. ಜಿ. ಅಲ್ಬುಕರ್ಕ್ ಸ್ವಾಗತವಾದನ ಮಾಡಿದರು. ಶ್ರೀ ನೇರಂಕಿ ವೆಂಕಟ್ರಮಣ ಭಟ್ಟ, ಡಾ। ಕಲ್ಕೂರ ಡಾ। ಹಿರಿಯಣ್ಣ ಶೆಟ್ಟಿ ಮೊದಲಾದವರು ಸಂದರ್ಭೋಚಿತ ಭಾಷಣಗಳಿಂದ ಜನಶ್ರೀ ನಾಟಕ, ವಿಧವಿಧ ನೃತ್ಯ, ಯಕ್ಷಗಾನ ನಾಟಕಗಳಾದುವು.

"ನಿಮ್ಮ ಕಂಪೆನಿಯಲ್ಲಿ ವಿಮಾ ಪತ್ರದಾರರ ಹಿತಗಳಿಗೆ ಭದ್ರತೆ ತುಂಬಾ ಇರುವುದಲ್ಲದೆ ಅವರಿಗೆ ಹೆಚ್ಚಿನ ಪ್ರಮಾಣದಲ್ಲಿ ಲಾಭವೂ ಸಿಗುವುದು."

—ಶ್ರೀ ಕೆ. ಎ. ಪೂಡಿತ್, B. SC, F. I. A.
(ಸಲಹೆಗಾರ ವಿಮಾಗಣಕರು)

"ಕೆನರಾ ಮ್ಯೂಚುವಲ್" ಕಂಪೆನಿಯ ಎಲ್ಲ ವ್ಯವಹಾರಗಳು ಹೀಗೆ ಜೆಲೋದಾಗಿ ನಡೆಸಲ್ಪಡುವುದರಿಂದ ಈ ಕಂಪೆನಿಯು ಜನರ ವಿಶ್ವಾಸಾದರಗಳಿಗೆ ಪಾತ್ರವಾಗಿದೆ. ಕಂಪೆನಿಯ ಚತುರ್ಥ ವಿಮಾಗಣನೆ (Valuation)ಯಂತೆ ಆಜೀವ (Whole Life) ಮತ್ತು ಉಂಬಳ (Endowment) ವಿಮೆಗಳಿಗೆ ಕ್ರಮವಾಗಿ ಸಾಲಿಯಾನ ಸಾವಿರಕ್ಕೆ ರೂ. 12 ಮತ್ತು ರೂ. ೨೮ರಂತೆ ಬೋನಸು ಹಂಚಲಾಗುವುದು. ಇದೇ ದರದಲ್ಲಿ ನಡುಗಾಲದ (Interim) ಬೋನಸನ್ನು ಸಹ ಇಡಲಾಗಿದೆ.

— ದಿ ಕೆನರಾ ಮ್ಯೂಚುವಲ್ —

ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.

ನಡೆಯುವ ಚಿತ್ರ—

"ಬಾಜಿ"

ದೇವಾನಂದ್, ಗೀತಾಬಾಲಿ, ಕೆ. ಎನ್. ಸಿಂಗ್.

ಮುಂದಿನ ಚಿತ್ರ

ಕಾಲೇ ಬಾದಲ್

ಪಾತ್ರವರ್ಗ: ನಜ್ಮಾ ಜಹನ್ಸ್, ವಿಜಾನಾ, ಜೀವನ್, ಶ್ಯಾಮ್, ಗೋವಿಂ, ಮೊದಲಾದವರು.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ

ಪಡುಕೊಣೆ—ಇದೇ ತಾ 15ರಲ್ಲು ಇಲ್ಲಿಯ ಬೋರ್ಡು ಎಲಿಮೆಂಟರಿ ಶಾಲೆಯ ಹೊಸ ಕಟ್ಟಡ ಪ್ರವೇಶೋತ್ಸವವು ಶ್ರೀ ಪೈ. ಮಂಜಯ್ಯ ಸೆಟ್ಟರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ಜರಗಿತು. ಪ್ರಾರ್ಥನೆಯಾದ ಬಳಿಕ ಶಾಲಾ ಹೆಡ್ಮಾಸ್ಟರ್ ಶ್ರೀ ಎಮ್. ಶಿವರಾಮು ಹೆಗ್ಡೆಯವರು ಶಾಲಾ ವರದಿಯ ವ್ಯೋದಿದರು. ಶ್ರೀಗಳಾದ ಎಮ್. ವಿಶ್ವೇಶ್ವರಯ್ಯ, ಎಮ್. ಶಂಕರ ನಾರಾಯಣ ರಾವ್ ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು. ಅಧ್ಯಕ್ಷರು ಹಿಕೋತ್ಕೃಗಳಾಗಿ ಧನ್ಯವಾರ್ಪಣೆಯೊಂದಿಗೆ ಸಭೆ ಕೊನೆಗೊಂಡಿತು. ಶಾಲಾ ಮಕ್ಕಳಿಗೆ ತಿಂಡಿಹಂಚಲಾಯಿತು.

ಕಂಬಳೆ—ಇದೇ ತಾ. 11ರಲ್ಲು ಮಂಗಳೂರು ಪ್ರೋಸ್ಪಲ್ ಇನ್ಸ್‌ಪೆಕ್ಟರ್ ಶ್ರೀ ಇ. ಪಿ. ಮಾಧವನ್ ನಾಯರರು ಮೊಗ್ರಾಲ್ ಕೇಂದ್ರದಲ್ಲೊಂದು ಬ್ರಾಂಚ್ ಪೋಸ್ಟಾಫೀಸನ್ನು ತೆರೆದರು.

ಗುಡಿ ಕೈಗಾರಿಕೆ ಫೆಡರೇಶನ—ಡೈರೆಕ್ಟರರ ಸಭೆಯು ಇದೇ ತಾ 15ರಲ್ಲು ಶ್ರೀ ಎ. ಸಿ. ಭಂಡಾರಿಗಳ ಅಧ್ಯಕ್ಷತೆಯಲ್ಲಿ ಜರಗಿತು. ಗುಡಿ ಕೈಗಾರಿಕೆಗೆ ಅಗತ್ಯವಸ್ತುಗಳನ್ನು ಮಾರಾಟದ ಬಗ್ಗೆ ಬೇರೆ ಕಡೆಗಳಿಂದ ತರಿಸುವ ವಿಷಯ ಕೈಗಾರಿಕೆಯವರೊಡನೆ ಪತ್ರ ವ್ಯವಹಾರ ಮಾಡಬೇಕೆಂದಾಯಿತು.

ಬೋಳದ ಕೊರಗರ ಕೊಲೆನಿಯಲ್ಲಿ—ಹೊಸತಾಗಿ ಕಟ್ಟಿಸಿದ ಮನೆಗಳ ತರಿಯುವಿಕೆಯನ್ನು ಜಿಲ್ಲಾ ಕಲೆಕ್ಟರ್ ಶ್ರೀ ಎ. ಆರ್. ರಾಜಪ್ಪನವರು ನೆರವೇರಿಸಿದರು. ಪುದ್ರಾಸಿನ ಒನೆರಿ ಹರಿಜನ ವೆಲ್‌ಫೇರ್ ಡ್ಯಾರೆಕ್ಟರ್ ಶ್ರೀ ಭಾಸ್ಕರ ಆಯ್ಯಂಗಾರರು ಈ ಕಾಲದಲ್ಲಿ ಹಾಜರಿದ್ದರು.

ಮುಂಬೈ— ಮೆಡಿಲಿನ್ ಗರ್ಲ್ಸ್ ಹೈಸ್ಕೂಲಿನ ವರ್ಧಂತ್ಯುತ್ಸವವು ದಿನಾಂಕ 10ರಂದು ಶ್ರೀ ಟಿ. ಎ. ಪೈ, ಎಮ್. ಎಲ್. ಎ. ಇವರ ಅಧ್ಯಕ್ಷತೆಯಲ್ಲಿ ಜರಗಿತು. ವರದಿ ವಾಚನದ ಬಳಿಕ ಅಧ್ಯಕ್ಷರು ತನ್ನ ಭಾಷಣದಲ್ಲಿ ಹೆಮ್ಮಕ್ಕಳಿಗೆ ಶಾಲೆಗಳಲ್ಲಿ ಕೈಗಾರಿಕೆಯ ಕೆಲಸಗಳನ್ನು ಕಲಿಸುವುದರಿಂದ ಪುಷ್ಕಳ ವರ್ಗದ ಅನೇಕ ಕುಟುಂಬಗಳಿಗೆ ಮುಂದೊಂದು ಉಪ ಆದಾಯ ಒಳ್ಪವಾದಂತಾಗುವುದು; ಇಂತಹ ಸಾಮಾನುಗಳನ್ನು ಸರಕಾರವೇ ನಿಶ್ಚಿತ ಬೆಲೆಗೆ ಕೊಂಡುಕೊಂಡು ಉತ್ತೇಜಿಸಬೇಕೆಂಥೂ ಸೂಚಿಸಿದರು. ಆಲ್ಲದೆ ಹೆಮ್ಮಕ್ಕಳಿಗೆ ವಿದ್ಯೆ ಕಲಿಸುವುದರಿಂದ ಮನೆ ಮಕ್ಕಳಲ್ಲದೆ ಇಡೀ ಕುಟುಂಬವೇ ವಿದ್ಯಾವಂತರಾಗಲೂ ಅನುಕೂಲವಾಗುವುದೆಂದು ಬೋಧಪ್ರದ ಭಾಷಣಕೊಟ್ಟರು. ಮಕ್ಕಳ ಚಟುವಟಿಕೆಗಳೊಂದಿಗೆ ಉತ್ಸವ ಯಶಸ್ವಿಯಾಗಿ ಕೊನೆಗೊಂಡಿತು.

ಬ್ರಹ್ಮಾವರ—ಇಲ್ಲಿ ಇದೇ ತಾ. 14 ರಂದು ಎನೆಂಬ್ಲಿಗೆ ಆರಿಸಲ್ಪಟ್ಟ ಶ್ರೀ ಟಿ. ಎ. ಪೈಗಳಿಗೆ ಒಂದು ಸತ್ಕಾರ ಕೂಟವನ್ನು ಶ್ರೀ ಆರೂರು ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾಗಿತ್ತು. ಆ ಸಮಯ ಶ್ರೀ ಪೈಗಳಿಗೆ ಒಪ್ಪಿಸಿದ ಮನವಿಯಲ್ಲಿ ಬ್ರಹ್ಮಾವರಕ್ಕೊಂದು ಹೈಸ್ಕೂಲಿನ ಅವಶ್ಯಕತೆ; ಅಲ್ಲಿಯ ವೈದ್ಯಕೀಯ ಕೊಂಠಯೇ ಮೊದಲಾದ ವಿಷಯಗಳು ನಮೂದಿಸಲ್ಪಟ್ಟಿದ್ದುವು. ಶ್ರೀ ಪೈಗಳು ಬ್ರಹ್ಮಾವರದಲ್ಲಿ ಕೊಂಗ್ರೆಸ್ ಉಮೇದ್ವಾರಿಗಳು ಭರಾಭದಗೊಂಡು ದಕ್ಕೆ ಪಶ್ಚಾತ್ತಾಪಪಟ್ಟದ್ದಲ್ಲದೆ ಅಲ್ಲಿಯ ಅವಶ್ಯಕತೆಗಳ ಪೂರೈಕೆಯ ಪ್ರಯತ್ನದಲ್ಲಿ ಅಪೇಕ್ಷಿತ ಪ್ರತಿನಿಧಿಗಳೊಂದಿಗೆ ಸಹಕರಿಸುವುದಾಗಿ ಆಶ್ವಾಸನೆ ಇತ್ತರು. ಜೋಗಿನಿಂದ ವಿದ್ಯುಚ್ಛಕ್ತಿ ಸರಬರಾಯಿ, ಮಲ್ಪೆ ಪ್ರಬುದ್ಧ ಬಂದರದ ಯೋಜನೆಗಳಂತೆ ಬ್ರಹ್ಮಾವರವನ್ನು ಹಾದು ಹೋಗುವ ರೈಲ್ವೆ ಅನುಕೂಲತೆಯಿಂದ ಈ ಊರಿಗೆ ದೊರೆಯುವ ಪ್ರಯೋಜನಾಭಿವೃದ್ಧಿಯನ್ನು ವಿವರಿಸಿ, ಅಪ್ಪಿಲ್ಲಿಯ ಅಸ್ತ್ರೆ ಅನುಕೂಲತೆಯ ಬೇಡಿಕೆಯನ್ನು ಸರಕಾರದ ಮುಂದಿರಿಸುವುದಾಗಿ ಹೇಳಿದರು. ಊರ ಸದ್ಗೃಹಸ್ಥರು ಸಾಹಸಪಡಾದಿ ಹೈಸ್ಕೂಲನ್ನು ಸಜ್ಜುಗೊಳಿಸಿದರೆ ಹಲವು ಬೋರ್ಡಿನವರು ಅದನ್ನು ನಡೆಯಿಸಿ ಸಹಕರಿಸಬಹುದು ಎಂದೂ ಅಭಿಪ್ರಾಯಪಟ್ಟರು. ಸಭಾಸದರ ಹಾಗೂ ಅಧ್ಯಕ್ಷರ ಭಾಷಣಗಳಾಗಿ ಸಭಾರ್ಯವಾಯಿತು.

ಮಲ್ಪೆಯಲ್ಲಿ ಪುರಜನರ ಸಭೆ—ಮಲ್ಪೆ ಪಂಚಾಯತ್ ಬೋರ್ಡು ಅಧ್ಯಕ್ಷರಾದ ಶಂಕರ ನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ನಡೆದ ಪುರಜನರ ಸಭೆಯಲ್ಲಿ ತಜ್ಞರ ಸಮಿತಿಯ ಶಿಫಾರಸಿನಂತೆ ನೇಶನಲ್ ಹಾರ್ಬರ್ ಬೋರ್ಡಿನವರು ಮಲ್ಪೆಯನ್ನೇ ಪ್ರಬುದ್ಧ ಬಂದರವನ್ನಾಗಿ ಮಾಡಬೇಕೆಂದೂ, ಬದ್ಧಾವತಿಯಿಂದ ಮಲ್ಪೆಗೂ, ಮಲ್ಪೆಯಿಂದ ಮಂಗಳೂರಿಗೂ, ರೈಲು ಹಾಕಿಸಬೇಕೆಂದೂ ಆರ್ಥಿಕ ಮುಗ್ಗಟ್ಟಿನಿಂದ ಈ ಯೋಜನೆಯನ್ನು ಈಗ ಪೂರ್ಣಗೊಳಿಸಲು ಸಾಧ್ಯವಿಲ್ಲದಿರುವದಲ್ಲಿ ತಜ್ಞರ ಸಮಿತಿಯ ಶಿಫಾರಸಿಗೆ ವ್ಯತಿರಿಕ್ತವಾಗಿ ಯಂತ್ರವೆದೇ ಕೆಲಸವನ್ನು ಸರಕಾರವಾಗಲೀ ಹಾರ್ಬರ್ ಬೋರ್ಡಿನವರಾಗಲೀ ಮಾಡುವಂತಾಗಿ ಬಾರದೆಂದೂ ಅತ್ಯಾಯ ಪೂರ್ವಕ ಗೊತ್ತುವಳಿಗಳು ಸರ್ವಾನು ಮತದಿಂದ ಪಾಸಾದುವು ಅತೀ ದೊಡ್ಡ ನಿಷ್ಠಿನ ವ್ಯವಸಾಯ ಕ್ಷೇತ್ರವೆನಿಸಿದ ಮಲ್ಪೆಯಲ್ಲಿ ಖಾಸಿನ ದಾಸ್ತಾನು ಆಫೀಸಾಗಲಿ ಅನುಕೂಲವಾದ ಮಂಗಳೂರಿನದಲ್ಲಿದೆ ಇಲ್ಲೂ ಪ್ರತ್ಯೇಕ ಸೌಕರ್ಯವನ್ನು ಒದಗಿಸಬೇಕೆಂದೂ, ಈ ವಿಚಾರದಲ್ಲಿ ಈ ಭಾಗದ ಸಾರ್ವಿಸೆಂಟ್ ಸದಸ್ಯರಾದ ಶ್ರೀನಿವಾಸ ಮಲ್ಯರೂ, ಎಸೆಂಬ್ಲಿ ಸದಸ್ಯರಾದ ಟಿ. ಎ ಪೈಗಳೂ, ಕೂಡಲೇ ಪ್ರಯತ್ನಿಸಬೇಕೆಂದೂ ನಿರ್ಣಯಗಳಾದುವು. ಉಡುಪಿಯಿಂದ ಬೇಗನೇ ಮಲ್ಪೆಗೆ ವಿದ್ಯುಚ್ಛಕ್ತಿಯನ್ನು ವಿಸ್ತರಿಸಲು ಅನುಕೂಲತೆಯಿರುವುದರಿಂದ ಏಜೆಂಟ್ಸೀಂಟ್‌ನ್ನು ಮಲ್ಪೆಯಲ್ಲಿರಿಸುವ ಕುರಿತು ಶ್ರೀ ಪೈಗಳು ಯತ್ನಿಸುತ್ತಿರುವರಾಗಿ ತಿಳಿದು ಬರತ್ತದೆ.

ಇದೇ ತಾ 17ರಂದು ಮಲ್ಪೆ ಹೈಸ್ಕೂಲು ಕಮಿಟಿಯವರು ಇದೇ ವರುಷದಿಂದ ಮಲ್ಪೆ ಫಿಶರೀಸ್ ಶಾಲೆಯಲ್ಲಿ ನಾಲ್ಕನೇಯ ಫಾರ್ಮನ್ನು ತೆರೆಯುವಂತೆಯೂ ಶಾಲೆಯಲ್ಲಿ ಖಾಸಿನ ವ್ಯವಸಾಯದ ಕುರಿತು ಶಾಸ್ತ್ರೀಯ ಶಿಕ್ಷಣದ ವ್ಯವಸ್ಥೆ ಮಾಡುವಂತೆಯೂ ಶಾಲಾ ವಿಸ್ತರಣೆಗೆ ಮಂಜೂರಾತಿ ಕೊಡುವಂತೆಯೂ ಸರಕಾರದ ಫಿಶರೀಸ್ ಇಲಾಖೆಯವರನ್ನು ಪ್ರತ್ಯಾಯಿಸಿ ಸಹಕರಿಸಬೇಕೆಂದು ಶ್ರೀ ಟಿ. ಎ. ಪೈಗಳನ್ನು ಕೇಳಿಕೊಂಡಾಗ ಶ್ರೀ ಪೈಗಳು ಸಾಧ್ಯವಾದ ಪ್ರಯತ್ನ ಮಾಡುವುದಾಗಿ ಹೇಳಿದರು.

ಬಾರಕೂರು—ತಾ. 15-2-52ರಂದು ಇಲ್ಲಿ ಸಬ್ ಪೋಸ್ಟ ಆಫೀಸ್ ತೆರೆಯಲ್ಪಟ್ಟಿತು. ಪೋಸ್ಟಲ್ ಇನ್ಸ್‌ಪೆಕ್ಟರ್ ಶ್ರೀ ಎಚ್ ಆರ್. ಹೆಬ್ಬಾರರೂ ಹಾಜರಿದ್ದರು. ಹಳ್ಳಿಗಳ ಪ್ರಾಮುಖ್ಯ ಕೇಂದ್ರವಾದ ಬಾರಕೂರಲ್ಲಿ ಸರ್ಕಾರೀ ಕಂಠಿಕಚೇರಿಯೂ ತೆರೆಯಲ್ಪಡುವಂತಾಗಲೆಂದು ಊರವರ ಹಾರೈಕೆ ಇದೆ

ಸಕಲ ಪುಸ್ತಕ ಭಂಡಾರಗಳಿಗೆ ಬೇಕಾಗುವ ಸರ್ವವಿಧದ ಪುಸ್ತಕಗಳು!

ಕಥೆ, ಕಾದಂಬರಿ, ನಾಟಕ, ಕವಿತೆ, ಚಿತ್ರ, ಪ್ರಬಂಧ ಮೊದಲಾದ ನಾನಾ ಬಗೆಯ ಅಮೂಲ್ಯ ಕೃತಿಗಳು!

ಅಂತರಂಗದ ಪ್ರಕಟಣೆಗಳು:

ಪಿರುದಾವಳಿ	0	3	0
ಹೈದರಾಬಾದ್ ವಿಜಯ	0	4	0
ಗಾಡಿಯ ಗಾಂಧಿ	0	3	0
ಶಾಂತಿಯ ಮಡಿಲಿನಲ್ಲಿ	0	3	0
ಬಲಿಪೀಠದಲ್ಲಿ	0	5	0
ಆಗಲಿದ ಅಕ್ಕ ಸರೋಜಿನಿ	0	3	0
ತನ್ನ ಹೆಂಡತಿ	0	3	0
ಪುಣ್ಯಫಲ	0	4	0
ಸಾಹಿದಾರಿ	0	3	0
ಸುಕಾಂತ	0	3	0
ಗಂಜಮುಖಿ	0	4	0
ಚಾತೀಭೂತಕ್ಕೆ ಬಲಿ	0	3	0
ಜನಸೇವೆಯ ನೋಡಿನಲ್ಲಿ	0	3	0
ನಾ ಕಂಡ ಭವಳು	0	3	0
ತ್ರಿವೇಣಿ	0	3	0
ಪಿಲುಜಾನಿ	0	4	0
ಬಾಡಿಗೆಯ ಮನೆ	0	3	0
ಭರ್ಜಮಾನಕಾಲವ ನಾಲ್ವರು ಮಹಾನುಭಾವರು	0	4	0
ದೇವರ ನಾಮ ಸುತ್ತು ಸಾಧನೆ	0	3	0
ಎರಡು ಕತೆಗಳು	0	3	0
ಸದಸ-ವಿರಸ	0	3	0
ಹೃದಯೇಶ್ವರಿ	0	4	0
ವಿವಿಧ ವಿಷಯ ಕೋಶ ಭಾಗ೧,೨	0	6	0
ನುಡಿಮುತ್ತುಗಳು ೧, ೨, ೩	0	12	0
ಕುಲವಿಲ್ಲದ ಹೆಣ್ಣು	1	8	0
ತವರು ಮನೆಯಿಂದ	0	4	0
ಭಾಗ್ಯಲಕ್ಷ್ಮಿ	1	4	0
ಯುಗಸಾಧನೆ	0	8	0
ಸ್ತ್ರೀ ಹೃದಯ	0	4	0
ದ್ವೇಷ	0	3	0
ಎರಡು ವಿಕಾಂಕ ನಾಟಿಕಗಳು	0	4	0
ಪ್ರಜಾಪ್ರಭುತ್ವವನ್ನು ಕುರಿತು	0	8	0
ಕಲಾವಿದನ ದಿನಚರಿ	0	3	0
ಆಧುನಿಕ ಭಾರತ	0	4	0
ಕಾಲವೇ ಬದಲಾಗಿದೆ	0	4	0
ಭಾರತದ ಸಾಹಿತ್ಯ ಕಲೆಗಳು	0	4	0
ಸ್ವೀಸ್ವಾತಂತ್ರ್ಯ ಬೇಕೇ?	0	4	0
ಹೆಂಬಲೆ	0	4	0
ಭಾರತಚಕ್ರದ ಅಂಬೇಬೇಟುಗಳು	0	3	0
ಶ್ರಿಕೂಲ	0	5	0
ಪುಸ್ತಕಪುರಾಣ	0	4	0
ಹಳ್ಳಿಯಲ್ಲಿ ನಡೆದ ನಾಟಕ	0	3	0
ನೆರೆಯ ಗಾಂಧಾರ	0	3	0
ಮಾತೃನಯುಗದ ಮಹಾಪ್ರಭಾವ	0	3	0
ವಿಜ್ಞಾನದ ಬೆಳಕಿಗೆ	0	4	0
ಡಾ। ಹರ್ಡೀಕರ್	0	5	0
ತೆರೆಗಿನ ತವರು	0	6	0
ಪ್ರಾಯಶ್ಚಿತ್ತ	0	3	0
ಪ್ರಭು	0	3	0
ಶವಗಳ ಸಾಗಾಟ	0	12	0
ಸ್ವಪ್ನಲೋಕ	0	6	0
ಮೈಸೆಯೂರಿನಮಹಾಜೀವಿಗಳು	0	5	0
ಘಂಟಮಾರಾ ಉಭಾಗಗಳು ಮಾರ್ಪಾಟು	2	0	0
ಭಾರತದ ರಾಷ್ಟ್ರಗೀತ	0	4	0
ನಮ್ಮ ಬಹು ದೊಡ್ಡ ಶತ್ರು	0	4	0
ಕೈಲಾಸ	0	3	0
ಜ್ಯೋತಿ	0	4	0
ಕತ್ತು ಕೊಯ್ದವರಾರು?	0	5	0
ಸಮಾಜದ ಅಗ್ನಿಕುಂಡ	0	4	0
ಬೆಳ್ಳಿಹಬ್ಬ	0	4	0
ಉಷಾ	0	4	0
ವಿಧಿಲೀಲೆ	0	4	0
ಪರಮಾಣು ಪ್ರಪಂಚ	0	4	0
ಪ್ರತಿ ವಿನೋದ ಕತೆಗಳು	0	12	0
ಸಾಹಸ ಭೀಮ ವಿಜಯ	0	8	0
ಭಾರತದ ಗುರುಕುಲ	0	6	0
ಲಕ್ಷ್ಮಣಗೆಡೆ	0	6	0
ಭರತೇಶ ದಿಗ್ವಿಜಯ	0	8	0
ಮನೋಪದೇಶ	0	8	0
ಜೀವನ ಕಲೆ	0	10	5
ಸೇವಾಪಥ	0	8	0

ಕಿರಿಯರಪ್ರಪಂಚದ ಪ್ರಕಟಣೆಗಳು:

ಸ್ವತಂತ್ರ ಜೀವನೋಪಾಯ	0	3	0
ಸಂಶಯ ಪಿಶಾಚಿ	0	10	0
ನಾಡಕತೆಗಳು	0	4	0
ಕುಲಲಜ	0	7	0
ರಾನ್ಸಾಮ್ಯಾಜ್ಞ	1	8	0
ಮಕ್ಕುಬನ	3	0	0
ಮುಂದಿನ ದೇವರು	0	4	0
ವೈಭಾರಾಣಿ ಯಾರು	1	4	0
ಹೆಂಡ್ರಿ ಗಂಡನಾದರೆ	0	4	0
ಪುರುಷ ವಧು	0	4	0
ಸನ್ಯಾಸಿಯರು ನೋಡಿನಲ್ಲಿ	0	10	0
ನಂದಾದೀಪ	1	0	0
ದೇಶಭಕ್ತ	1	8	0
ಸ್ನೇಹವಿಜಯ	1	0	0
ಪ್ರಕಾಶ	2	8	0
ಮೊರು ಪ್ರಪಂಚಗಳು	1	0	0
ಅನ್ನದೇವರು ಕತೆಗಳು	1	0	0
ಭಾರತದಲ್ಲಿ ಜಾತಿಭೇದ	1	0	0
ಗಿಷ್ಟುವಿನ ವಿಶಾಪರಾಧಗಳು	0	12	0
ಆಕಾಶ ಗಂಗೆ	2	4	0
ಸ್ವಾತಂತ್ರ್ಯವೀರ ಸಾವರಕರರು	1	4	0
ಜೀವನ ಸಂಗ್ರಾಮ	1	8	0
ಕದಂಬ	1	4	0
ಕವಿತಾಕಾಮಿನಿ	2	0	0
ಸ್ವರಾಜ್ಯ ವಿಜಯ	0	8	0
ಸಪ್ತಸಾಗರ	0	12	0
ಜಮೀನ್ದಾರ	1	12	0
ಮನೆಮದ್ದು	2	0	0

ಇಪ್ಪೇ ಅಲ್ಲ-ಸಮಗ್ರ ಕರ್ನಾಟಕದ ಇನ್ನೆಷ್ಟೋ ಪುಸ್ತಕಗಳು ದೊರೆಯುತ್ತವೆ.

ವಿಚಾರಿಸಿದ್ದಲ್ಲಿ ಕೆಟಲಾಗನ್ನು ಕಳಿಸಬಹುದು.

ವಿಳಾಸ:

ನವಧಾರತ ಬುಕ್ ಡಿಪೊ, ಉಡುಪಿ.
ನವಯುಗ ಪ್ರೆಸ್, ಉಡುಪಿ.
(ಗ್ರಾಹಕರಿಗೆ ವಿಶೇಷ ಸವಲತ್ತುಗಳವೆ.)

ಮದ್ರಾಸಿನ ಪಬ್ಲಿಕ್ ಇನ್‌ಸ್ಟ್ರಕ್ಷನ್ ಡೈರೆಕ್ಟರರಿಂದ ನವಯುಗ ವಾರಪತ್ರಿಕೆಯು ಸೆಕೆಂಡರಿ ಶಾಲೆಗಳ ಉಪಯೋಗಾರ್ಥವಾಗಿ ಮಂಜೂರಾತಿ ಪಡೆದಿರುವುದರಿಂದ ಎಲ್ಲಾ ಸೆಕೆಂಡರಿ ಶಾಲೆಗಳು ಅದನ್ನು ತರಿಸಿಕೊಳ್ಳಬಹುದಾಗಿದೆ.

ಐದು ವರುಷಗಳ ಗ್ಯಾರಂಟಿ – 18ಕ್ಯಾರಟ್ ರೋಲ್ಡ್ ಗೋಲ್ಡ್ ಆಭರಣಗಳು. ಉದ್ದ ಚೈನಿಗೆ ರೂ. 5- ಚಿಕ್ಕ ಚೈನಿಗೆ ರೂ. 4- ತಂಜಾವೂರು ಬಳೆಗಳ ಸೆಟ್ಟಿಗೆ ರೂ. 7, ಹೊಸ ಪ್ಯಾಶನಿನ ಉಂಗುರಕ್ಕೆ ರೂ. 3-

Dogulva Traders
West Vadmapokki Street, MADURAI

ಬರ್ಫ್ ಕಂಟ್ರೋಲ್ ಸುಲಭ ಸಾಧ್ಯವಿದೆ. ಅಶಾಯುವಿಲ್ಲ, 100% ಜುಬ್ರಿ ಗಂಡಸರಿಗೆ ರೂ. 3-8 0 ಹೆಂಗಸರಿಗೆ ರೂ. 5-8-0

PERUMAL TRADERS
Near Y- M- C. A- Madurai

ಶಾಲೆ, ಕಾಲೇಜುಗಳಿಗೂ ಸಹಕಾರಿ ಸಂಘ, ಮುನ್ಸಿಫ್ ಕೋರ್ಟುಗಳಿಗೂ ಕೃಷಿಕ, ವರ್ಗದವರು, ವ್ಯಾಪಾರಿಗಳಿಗೂ ಬೇಕಾಗುವ ಉತ್ತಮ ಕಾಗದದಲ್ಲಿ ತಯಾರಿಸಿದೆ

ತರತರದ ಫಾರ್ಮುಗಳು, ರಶೀದಿ ಪುಸ್ತಕಗಳು, ಎಕೌಂಟ್ ಪುಸ್ತಕಗಳು, ಮಾಗ್ಗಿ ಪುಸ್ತಕಗಳು ದೊರೆಯುತ್ತವೆ.

ನವಯುಗ ಪ್ರೆಸ್, ಉಡುಪಿ.

ಮಂಗಳೂರು

ಮಗ್ಗದ ನೂಲಿನ ವಿತರಣೆ—ಜನವರಿ 1952ರ ಕೈಮಗ್ಗದ ನೂಲಿನ ಕೋಟಾದ ವಿತರಣೆಯು ಜನವರಿ ಮತ್ತು ಫೆಬ್ರವರಿ ತಿಂಗಳುಗಳಲ್ಲಿ ನಡೆಯುವುದು. ಜಿಲ್ಲೆಯ ಪಾಲಿನ ನೂಲು ಇನ್ನೂ ಬಂದಿಲ್ಲವಾದುದರಿಂದ ಬಂದಂತೆ ವಿತರಣೆಯಾಗುವುದು ಎಂದು ಜವುಳಿ ನಿಯಂತ್ರಣಾಧಿಕಾರಿಗಳು ತಿಳಿಸುತ್ತಾರೆ.

ಸೌತ್ ಕೆನರಾ ಟ್ರೇಡ್ ಯೂನಿಯನ್ ಸಭೆಯು ಈಚೆಗೆ ಜರಗಿ ಜಿಲ್ಲಾ ಮಜೂರರ ನಾಲ್ಕನೆ ಸಮ್ಮೇಳನವನ್ನು ಮಂಗಳೂರಲ್ಲಿ ಕರೆಯಲು ನಿರ್ಧಾರವಾಯಿತು.

ಅತ್ತಾವರ ಗ್ರಾಮ ಸಮಿತಿ—ಇದೇ ತಾ. 10ರಲ್ಲಿ ಶ್ರೀ ಎಸ್ಸೆ. ಅಮ್ಮಣವರ ಅಧ್ಯಕ್ಷತೆಯಲ್ಲಿ ಅತ್ತಾವರ ಗ್ರಾಮಸ್ವರಾಜ್ಯ ಸಭೆ ಸೇರಿ ಗ್ರಾಮ ಸಮಿತಿ ರಚಿಸಲಾಯಿತು. ಶ್ರೀಗಳಾದ ಕೆ. ಎಸ್ಸೆ. ಆಳ್ವ, ಎ. ಕೆ ನಾರಾಯಣ, ನಾಗೇಶ, ಉಮಾಶಂಕರ್ ಮೊದಲಾದವರು ಗ್ರಾಮ ಸಮಿತಿಯ ಅವಶ್ಯಕತೆ ಹಾಗೂ ಅದರ ಚಟುವಟಿಕೆಗಳು ಹೇಗಿರಬೇಕೆಂಬ ವಿಷಯಗಳಲ್ಲಿ ಮಾತನಾಡಿದರು.

ದ. ಕ. ಒಟೋನೊಬೈಲ್ ವರ್ಕರ್ಸ್ ಯೂನಿಯನ್ ಮಹಾಸಭೆಯು ತಾ. 3ರಂದು ಶ್ರೀ ಮಾದವನವರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯಕಾರಿ ಮಂಡಳಿಯಲ್ಲಿ ಶ್ರೀಗಳಾದ ಬಿ. ಜಿ. ನೆಟ್ಟಿ, ಅಧ್ಯಕ್ಷ, ಬಿ. ಪಿ. ಕಕ್ಕಿಲ್ಲಾಯ, ಉಪಾಧ್ಯಕ್ಷ, ಮೊಹಮ್ಮದ್ ಬಾವಾ, ಕಾರ್ಯದರ್ಶಿ, ಎ ಕೆ. ನಾರಾಯಣ, ಜತೆಕಾರ್ಯದರ್ಶಿ, ಎಚ್. ಪಿ. ಭಂಡಾರಿ, ಕೋಶಾಧಿಕಾರಿಗಳಾಗಿ ಇರುವರು.

ರಾಷ್ಟ್ರೀಯ ಉಳಿತಾಯ ಪತ್ರದ ಉದ್ಘಾಟನೆಯು ಇದೇ ತಾ. 10ರಂದು ಸಂಜೆ ಮಂಗಳೂರಿನ ಗಣಪತಿ ಶಾಲೆಯಲ್ಲಿ ಜರಗಿದ ಸಭೆಯಲ್ಲಿ ಶ್ರೀ ಪಿ. ಎಸ್. ತಿಮ್ಮಪ್ಪ ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೆ. ಕೆ. ಪೈಯವರು ರಾಷ್ಟ್ರೀಯ ಉಳಿತಾಯ ಯೋಜನೆಯ ಕುರಿತು ವಿವರಿಸಿದರು. ಶ್ರೀ ಬಿ. ಎಸ್. ಪಾಲರು ಧನ್ಯವಾದಗಳನ್ನರ್ಪಿಸಿದರು.

'ಭೂರಹಿತರಲ್ಲಿ ಯೋಜನೆಗಳು' ಎಂಬ ವಿಷಯವಾಗಿ ಇದೇ ತಾ. 11ರಲ್ಲಿ ಸಂಜೆ ಸ್ಥಳೀಯ ಗವರ್ನಮೆಂಟ್ ಕಾಲೇಜಿನಲ್ಲಿ ಶ್ರೀ ಕೆ. ಡಿ. ದಾಮೋದರ ನಾಯರ್ ಅವರು ಭಾಷಣವಿತ್ತರು. ನಮ್ಮ ದೇಶದಲ್ಲಿ ಯೋಜನೆಗಳ ಅವಶ್ಯಕತೆಯನ್ನು ಅವರು ವಿವರಿಸಿದರಲ್ಲದೆ ಭಾರತ ಸರಕಾರದ ಪಂಚವಾರ್ಷಿಕ ಯೋಜನೆಯನ್ನು ವಿವರಿಸಿದರು. ಬಳಿಕ ಜಿ ಎಮ್ಸೆ. ಐ. ಹಶೀಮಿಯವರು ಮುಕ್ತಾಯ ಭಾಷಣ ಮಾಡಿದರು. ಈ ಸಭೆಯು ವಿಶ್ವವಿದ್ಯಾನಿಲಯ ವಿಸ್ತರಣ ಸಮಿತಿಯ ಆಶ್ರಯದಲ್ಲಿ ನಡೆದುದಾಗಿದೆ.

ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿಯು 1951ರಲ್ಲಿ ರೂಪಾಯಿ 31,08,500 ಮೌಲ್ಯದ ಹೊಸ ವಿಮೆಯನ್ನು ಪೂರ್ಣಗೊಳಿಸಿದೆ ಎಂದು ತಿಳಿಯಲು ಆತ್ಮಾನಂದವಾಗುತ್ತದೆ. ಕಳದ ವರುಷದಲ್ಲಿ ಈ ಕಂಪೆನಿಯು ರೂ 31,03,000 ಮೌಲ್ಯದ ವಿಮೆಯನ್ನು ಪೂರ್ಣಗೊಳಿಸಿತ್ತು.

ವಿಮಾನ ನಿಲ್ದಾಣ—ಮಂಗಳೂರು ವಿಮಾನ ನಿಲ್ದಾಣ [ಬಜ್ಪೆ]ದ ಕೆಲಸವು ಇದೇ ಆಕ್ಟೋಬರ್ ತಿಂಗಳೊಳಗೆ ಪೂರ್ಣಗೊಂಡು ಕ್ರಮವಾದ ವಿಮಾನ ಸರ್ವಿಸು ಆರಂಭವಾಗುವುದೆಂದು ತಿಳಿಯಲಾಗಿದೆ.

ಶ್ರೀ ಎಸ್. ಎನ್. ಹೊಳ್ಳರ ನಮ್ರ ವಿನಂತಿ—ಮೊದಲು ಪ್ರಸಿದ್ಧ ಕಮ್ಯುನಿಸ್ಟ್ ಕಾರ್ಯಕರ್ತರಾಗಿದ್ದ ಶ್ರೀ ಎಸ್. ಎನ್. ಹೊಳ್ಳರು ಪ್ರಜಾರಾಜ್ಯ ದಿನಾಚರಣೆಯ ಸಂದರ್ಭದಲ್ಲಿ ಮಹಾ ಜನರ ಮುಂದಿಡಲು ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಗಳಿಗೆ ಕಡ್ಡಾ ನೂರು ಬೈಲಿಖಿಂದ ಹಿಂದು ಹೇಳಿಕೆಯನ್ನು ಕಳುಹಿಸಿದ್ದರು. ಅದರಲ್ಲಿ ಅವರು ಹೇಳಿದ ಪ್ರಾಮುಖ್ಯ ಸಂಗತಿಗಳು ಹೀಗಿವೆ. 'ರಾಷ್ಟ್ರೀಯ ಸ್ವಾತಂತ್ರ್ಯಕ್ಕಾಗಿ ಜರಗಿದ ನಮ್ಮ ದೇಶದ ಮಹಾ ಆಂದೋಲನದಲ್ಲಿ ಇತರ ಕಾಂಗ್ರೆಸಿಗರೊಂದಿಗಿದ್ದು ತಾನು ಹಲವು ವರ್ಷ ಕ್ರಿಕರಣ ಪೂರ್ವಕವಾಗಿ ದೇಶದ ಹಾಗೂ ಮಹಾಜನರ ಸೇವೆಮಾಡುತ್ತೇನೆ. ಕದರೆ 1945ರಲ್ಲಿ ಜೈಲಿಖಿಂದ ಹೊರಬಂದ ನಂತರ ಕಮ್ಯುನಿಸ್ಟ್ ಪಾರ್ಟಿ ಕಾರ್ಯಕರ್ತನಾಗಿ ದುಡಿದಿದೆನು. ಈಗ ಬೇರೆಲ್ಲ ಪಾರ್ಟಿಗಳ ವಿಚಾರದಲ್ಲಿ ಕಮ್ಯುನಿಸ್ಟ್ ಪಾರ್ಟಿ ವಿಚಾರದಲ್ಲಿ ಕೂಡಾ ನಮ್ಮ ಕಾಂಗ್ರೆಸ್ ಅಧ್ಯಕ್ಷ ಶ್ರೀ ಪಂಡಿತ ಜವಾಹರಲಾಲ ನೆಹರೂ ಅವರ ಅಭಿಪ್ರಾಯವನ್ನು ನಾನು ಸಂಪೂರ್ಣ ಒಪ್ಪುತ್ತೇನೆ. ಮತ್ತವಲ್ಲ, ಪ್ರಸಕ್ತ ಕಾಂಗ್ರೆಸನ್ನು ಸೇರಿಕೊಂಡು ಕನ್ಯೂಲಕ ಕಾಂಗ್ರೆಸ್ ಸಂಸ್ಥೆಯ ಶಿಸ್ತಿನಂತೆ ಸಂಸ್ಥೆಯವರು ತನಗೆ ವಹಿಸಿಕೊಡುವ ಯಾವುದೇ ಜವಾಬ್ದಾರಿಯನ್ನು ಜನತೆಯ ಪರವಾಗಿ ಶಿರಸಾವಹಿಸಿ ಕಾಂಗ್ರೆಸಿನ ಪೂರ್ಣ ಸಮಯದ ಕಾರ್ಯಕರ್ತನಾಗಿ ದುಡಿಯಬೇಕೆಂದು ನಿರ್ಧರಿಸಿದ್ದೇನೆ. ನನ್ನ ಈ ಪವಿತ್ರ ನಿರ್ಧಾರಕ್ಕೆ ಅಸ್ತುಕೊಟ್ಟು ಮಾನ್ಯ ಮಹಾಜನತೆಯವರು ತನಗೆ ಅಭೀವಾದ ಕೊಡಬೇಕಾಗಿ ಜನತೆಯವರನ್ನು ತಾನು ಅತಿ ವಿನಯ ಪೂರ್ವಕ ಪ್ರಾರ್ಥಿಸುತ್ತೇನೆ

ಐಕ್ಯರಂಗ—ಇದೇ ತಾ 11ರಲ್ಲಿ ಕಾಂಗ್ರೆಸನ್ನೀದ ಪಕ್ಷಗಳ ನೇತೃತ್ವದಲ್ಲಿ ಸಭೆಯೊಂದು ಶ್ರೀ ಕೆ. ಡಿ. ಜಿನರಾಜ ಹೆಗ್ಡೆಯವರ ಸಭಾಧ್ಯಕ್ಷತೆಯಲ್ಲಿ ಜರಗಿತು ಡಾ| ಎವ್ಸೆ. ಎಸ್. ಎ ಶರ್ಮ, ಎ. ಶಾಂತಾರಾಮ ಸೈ, ಎಸ್. ಗೋಪಾಲಸಾಲಿನ್ನ ಮೊದಲಾದವರು ಚುನಾವಣೆಯಲ್ಲಿ ಅದ ಕೆಲವೊಂದು ತಕರಾರುಗಳು, ನಡುಗಾಲ ಸರಕಾರದ ಅನೌಚಿತ್ಯಾದಿಗಳನ್ನು ವಿವರಿಸಿದರು. ಅಧ್ಯಕ್ಷರು ಕಾಂಗ್ರೆಸಿಗರಲ್ಲದ ಪ್ರತಿನಿಧಿಗಳು ಆಹಾರ ನಿಯಂತ್ರಣ, ಭಾಷಾವಾರು ಪ್ರಾಂತ ಮುಂತಾದ ಕೆಲವೇ ಪ್ರಾಮುಖ್ಯ ವಿಚಾರಗಳಲ್ಲಿ ಎಲ್ಲ ಪಕ್ಷಗಳೂ ಒಪ್ಪಬಹುದಾದ ಕಾರ್ಯಕ್ರಮ ರಚಿಸಿ ಅದರಂತೆ ವರ್ತಿಸುವ ಸರಕಾರ ರಚಿಸಬೇಕೆಂದರು ಹಾಗೆಯೇ ನಿರ್ಣಯವೂ ಆಯಿತು.

ಜಿಲ್ಲಾ ಕಾಂಗ್ರೆಸ್ ಕಮಿಟಿ ಮಹಾಸಭೆಯು ದಿನಾಂಕ 9ರಂದು ಡಾ| ಯಂ. ಪಿ. ಮಲ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಜಿಲ್ಲಾ ಕಾಂಗ್ರೆಸ್ ಕಮಿಟಿ ಅಧ್ಯಕ್ಷರ ರಾಜೀನಾಮೆ ಸ್ವೀಕರಿಸುವ ಕುರಿತು ಚರ್ಚೆ ನಡೆದು ಆ ವಿಷಯವನ್ನು ಮುಂದೆ ಹಾಕಲಾಯಿತು ಇದೀ ಜಿಲ್ಲೆಯಲ್ಲಿ ಸರ್ಕಲ್ ಕಾಂಗ್ರೆಸ್ ಕಮಿಟಿಗಳ ಬದಲಿಗೆ ತಾಲೂಕು ಕಾಂಗ್ರೆಸ್ ಕಮಿಟಿಗಳನ್ನೂ ರಚಿಸಬೇಕೆಂದಾಯಿತು. ಜಿಲ್ಲಾ ಕಾಂಗ್ರೆಸ್ ಕಮಿಟಿಯ ಮಹಾಸಭೆಗಳನ್ನು ಬೇರೆ ಬೇರೆ ತಾಲೂಕು ಕೇಂದ್ರಗಳಲ್ಲಿ ಜರಗಿಸಲು ಆಕ್ಷೇಪವಿಲ್ಲವೆಂದಾಯಿತು. ಲೆವಿ ಸಂಬಂಧವಾಗಿ ಜಿಲ್ಲೆಯ ಬೇರೆ ಬೇರೆ ಭಾಗಗಳ ಕೃಷಿಕರಿಗೆ ಉಂಟಾಗುತ್ತಿರುವ ಸಂಕಷ್ಟ ಮತ್ತು ಪೀಡೆಯ ಕುರಿತು ದೀರ್ಘ ಚರ್ಚೆ ನಡೆಯಿತು ಈ ಸಂಬಂಧ ಜಿಲ್ಲಾ ಕಲೆಕ್ಟರರನ್ನು ಕಂಡು ವಿದ್ಯಮಾನಗಳನ್ನು ತಿಳಿಸುವರೆ ಕಮಿಟಿಯೊಂದು ರಚನೆಯಾಯಿತು. ಈ ಸಭೆಯಲ್ಲಿ, ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಾರ್ಯಕಾರಿ ಸಮಿತಿಯ ಸದಸ್ಯರಾದ ಉಪ್ಪಿನಂಗಡಿ ಜನಾರ್ದನ ಹೆಗ್ಡೆ ಮತ್ತು ಸಂಜೀವ ಹೆಗ್ಡೆಯವರು ಕಮಿಟಿಯಿಂದ ಹಾಸಿಗೆ ಹಿಡಿದು ಬಹಳ ಕಷ್ಟದಲ್ಲಿರುವುದರಿಂದ ಅವರ ಸಹಾಯಾರ್ಥವಾಗಿ ನಿಧಿ ಸಂಗ್ರಹ ಮಾಡಲಾಯಿತು.



ಕವಿರಾಜ ಯನ್. ಯನ್. ಸೇನರ
ಶಾಸ್ತ್ರೀಯ ಔಷಧಿಗಳು
ಈಗಲೇ ಬಂದಿವೆ

ಬ್ರತ್ ಅಮೃತಬಳ್ಳಿ ಕಷಾಯ
ಪ್ರಸೂತಾರಿಷ್ಟ
ಕಸ್ತೂರಿ ಕಲ್ಪ ರಸಾಯನ
ನೇತ್ರಬಿಂದು
ಕಪೂರ್ಣಾರಿಷ್ಟ
ದುರ್ಗಾ ಪುನರ್ನವಾಸವ
ದಾಸಾರಿಷ್ಟ
ಕುಂಕುಮಾಸವ
ಮೃಗಾಂಕ ದ್ರಾವ
ದರವನ್ನು ವಿಚಾರಿಸುವದು.
ವಿಳಾಸ:—
ಶಾ. ಕಂಪೆನಿ, ಮಂಗಳೂರು ನಂ. 1



ಬೇಂಕಿಂಗ್ ಸಂಬಂಧದ ಎಲ್ಲಾ ಸಮಸ್ಯೆಗಳಿಗೆ
ದಿ ವಿಜಯಾ ಬೇಂಕ್ ಲಿಮಿಟೆಡ್
ಇವರ ಸಲಹೆ ಕೇಳಿರಿ

ಹೆಡ್ ಆಫೀಸು : : : : ಮಂಗಳೂರು

ಮಂಡಿಕೇರಿಯಲ್ಲಿ ಒಂದು ಶಾಖೆಯೂ ಬೊಂಬಾಯಿಯಲ್ಲಿ ಒಂದು ಶಾಖೆಯೂ ಜಿಲ್ಲೆಯೊಳಗೆ ಹಲವು ಶಾಖೆಗಳೂ ಇವೆ.

ನಿರಮು ರೇವಣಾತಿಗಳ ಮೇಲೆ ಆಕರ್ಷಕವಾದ ದರದ ಬಡ್ಡಿಯು ಕೊಡಲ್ಪಡುವುದು.	ಕ್ಯುದಾದ ಜವಾಬ್ದಾರಿಗಳ ಮೇಲೆ ಸುಲಭವಾದ ಶರ್ತಗಳಲ್ಲಿ ಸಾಲಗಳು ಕೊಡಲ್ಪಡುವುವು.

ಸಾಲಿಯನ್ ಸೇಕಡಾ 4½ರ ಬಡ್ಡಿ ಗಳಿಸುವ ಮೂರು ವರ್ಷದ ಅವಧಿಯ ವಿಜಯಾ ಕೇಶ್ ಸರ್ಟಿಫಿಕೇಟುಗಳ ಮೇಲೆ

ಹಣವನ್ನು ಹಾಕಿರಿ

THE VIJAYA BANK, LTD.,

ಬಿ. ಮಂಜಯ್ಯ ಹೆಗ್ಗಡೆ,
(ದ. ಕ. ಜಿಲ್ಲಾ ಬೋರ್ಡ್ ಪ್ರೆಸಿಡೆಂಟ್
ಶೈರೆಕ್ಟರ್ ಬೋರ್ಡಿನ ಅಧ್ಯಕ್ಷರು.

ಶ್ರೀಮತಿ ಸುಶೀಲಾ ಪಿ. ಆಳ್ವರ ನಿಧನ—ಪ್ರಸಿದ್ಧ ಶ್ರೀಕ್ಟ್ ಅಟಗಾರರೂ ಇಲೆಕ್ಟ್ರಿಕಲ್ ಇಂಜಿನಿಯರೂ ಆದ ಶ್ರೀ ಪಿ. ಅಳ್ವರ ಧರ್ಮಪತ್ನಿ ಶ್ರೀಮತಿ ಸುಶೀಲಾ ಪಿ. ಅಳ್ವರು ಇದೇ ತಾ. 9ರಲ್ಲಿ ಪ್ರಸೂತಿಯಿಂದ ಮುಂಬೈಯಲ್ಲಿ ಶಿಶುವಿನೊಂದಿಗೆ ಅಕಾಲ ಮೃತ್ಯುವಶವಾದರೆಂಬ ಅತ್ಯಂತ ಶೋಕದ ಸುದ್ದಿ ಬಂದಿದೆ. ಶ್ರೀಮತಿಯವರು ಡಾ| ಎಸ್. ರಾಮಾಂಡ ಶೆಟ್ಟಿ ಪುತ್ತಿಯಿದ್ದು ಬಂಟರಲ್ಲಿ ವಿಶೇಷ ವ್ಯಾಸಂಗ ಪಡೆದಿರುವೆ. ತನ್ನ ಸೌಜನ್ಯಾದಿ ಗುಣನಡತೆಗಳಿಂದ ಸರ್ವರ ಪ್ರೀತಿವಿಶ್ವಾಸಗಳಿಗೆ ಪಾತ್ರರಾಗಿದ್ದ ಮಹಿಳಾಮಣಿ. ವಿವಾಹವಾದ ಒಂದೇ ವರುಷದೊಳಗೆ ಅಕಾಲ ಮೃತ್ಯುವಿಗೆ ಶರಣ್ಣಾದುದು ಬಹು ಶೋಚನೀಯ. ಮೃತರ ಅಪಾರ ದುಃಖೀ ಬಂಧುಬಳಗದವರೊಂದಿಗೆ ಸಹಾನುಭಾವಪಡುತ್ತೇವೆ.

ಮಧ್ವಾಸಿನಲ್ಲಿ ಮಧ್ವನವಮಿ ಮಹೋತ್ಸವ—ಮಧ್ವಾಸು ಮಧ್ವಪರಂಪರೆಯ ಕಡೆಯಿಂದ ಪರ್ಯಾಯಪ್ರತಿಯೂ ನತೆದು ಬರುವ ಶ್ರೀ ಮಧ್ವನವಮಿ ಮಹೋತ್ಸವವು ಈ ಬಾರಿ ಶ್ರೀ ಕೆ. ಸೀತಾರಾಮ ರಾಯರ ನಾಸಪ್ರಸಾದದಲ್ಲಿ ಯಶಸ್ವಿಯಾಗಿ ಜರಗಿತು. ಮೈಸೂರಿನ ಶ್ರೀ ಬಿ. ನಾಗೇಶರಾಯರೂ ಉಡುಪಿಯ ಶ್ರೀ ಎ. ಸೀತಾರಾಮಾಚಾರ್ಯರೂ ಈ ಉತ್ಸವಕ್ಕೆ ವಿಶೇಷತಃ ಆಗಮಿಸಿದ್ದರು. ಡಾ| ಯು. ರಾಮರಾವ್ ಮೊದಲಾದ ಮಧ್ವಾಸಿನ ಮೊಧ್ವ ಮುಖಂಡರೂ ಉತ್ಸವದಲ್ಲಿ ಭಾಗವಹಿಸಿದ್ದರು. ಶ್ರೀ ಪಿ ಪಿ. ಆಚಾರ್ಯರು ಶ್ರೀ ಮನ್ಮಧ್ವ ವಿಜಯ ಪ್ರವಚನ ನಡೆಸಿದರು. ಮಧ್ವನವಮಿ ದಿನ ವಿಶೇಷ ಪೂಜಾ ಸಂತರ್ಪಣಾದಿಗಳಾದುವು ರಾತ್ರಿ ಶ್ರೀ ಮಧ್ವಾಚಾರ್ಯರ ಭಾವಚಿತ್ರ ಮೆರವಣಿಗೆ ನಡೆಯಿತು. ಮಧ್ವಶಾಸ್ತ್ರಾ ಕುರಿತು ಉಪನ್ಯಾಸಗಳಾದುವು ಉತ್ಸವ ಮೊಂಬತ್ತಿಯ ಕಾರ್ಯದರ್ಶಿ ಶ್ರೀ ಪಿ ರಾಘವೇಂದ್ರಾಚಾರ್ಯರು ಧನ್ಯವಾದಗಳನ್ನರ್ಪಿಸಿದರು.

ಸಾದರ ಸ್ವೀಕಾರ

ಉಡುಪಿಯ ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟು ತನ್ನ ಪ್ರಗತಿಪರ ಧೋರಣೆಯಿಂದ ಅಖಿಲ ಕರ್ನಾಟಕದ ಹೆಸರಾಂತ ಬೇಂಕಿಂಗ್ ಸಂಸ್ಥೆಗಳಲ್ಲಿ ಪ್ರಸಿದ್ಧವಾಗಿದೆ. ಈ ಬ್ಯಾಂಕು 1950ನೆ ಇಸವಿ ಅಕ್ಟೋಬರದಲ್ಲಿ ಮದ್ರಾಸಿನ 'ಸ್ವದೇಶ ಮಿತ್ರನ್' ಪತ್ರಿಕಾ ಸಂಪಾದಕರೂ ರಿಜರ್ವ್ ಬ್ಯಾಂಕ್ ಡೈರೆಕ್ಟರರೂ ಆದ ಶ್ರೀ ಸಿ. ಆರ್ ಶ್ರೀನಿವಾಸನ್ ಅವರ ಅಧ್ಯಕ್ಷತೆಯಲ್ಲಿ ತನ್ನ ರಜತೋತ್ಸವವನ್ನು ಮಹಾ ವೈಭವದಿಂದ ಜರಗಿಸಿತು. The Canara Industrial & Banking Syndicate Ltd. 1925 to 1950 ಈ ವಂದಿಯಲ್ಲಿರುವಷ್ಟೇ ತೋತ್ಸವ ಕಾಲದಲ್ಲಿ ಮಹನೀಯರುಗಳು ಮಾಡಿದ ಭಾಷಣ ಮತ್ತಿತರ ಚಟುವಟಿಕೆಗಳು ಅಡಕವಾಗಿವೆ. ಅಲ್ಲದೆ ಬ್ರಿಟ್ಟಿನ ವೆಸ್ಟ್‌ಮಿನಿಸ್ಟರ್ ಬೇಂಕಿನ ಆರ್ಥಿಕ ಅಧಿಜ್ಞಾನ ಪಾಟಿಯರ ಶ್ರೀ ವಿಲಿಯಮ್ ಜೇವೀಸರ ಮತ್ತು ಶ್ರೀ ಎಚ್. ನರಹರಿ ರಾಯರ ವಿಚಾರಪೂರಿತ ಲೇಖನಗಳನ್ನೂ ಪತ್ರಿಕೆಗಳ ಅಭಿಪ್ರಾಯವನ್ನೂ ಈ ವಂದಿಯಲ್ಲಿ ಕಾಣಬಹುದು. 'They wish us well' ಎಂಬ ನಾಮಕರಣದಿಂದಲೆ ಬಂದ ಹಲವಾರು ಶುಭಸಂದೇಶಗಳ ಸಂಗ್ರಹವೂ ಹಸ್ತಗತವಾಗಿದೆ. ಪ್ರಗತಿಪಥದಲ್ಲಿ ಮುನ್ನಡೆಯುತ್ತಿರುವ ಈ ಬ್ಯಾಂಕಿಗೆ ಉತ್ತರೋತ್ತರ ಅಭಿವೃದ್ಧಿಯನ್ನು ಬಯಸುವೆವು.

ಶ್ರೀ ಶಂಕರ ಜಯಂತೀ ಸಭಾ

ವಂದಿ—ಶ್ರೀ ಬಾಳೇ ಕುದೂರು ಶ್ರೀ ಮಠದಲ್ಲಿ ಕಳದ ಏಪ್ರಿಲ್ ೨೮ರಂದು ನಡೆದು ಬಂದ ಶ್ರೀ ಶಂಕರ ಜಯಂತೀ ಸಭೆಯ ಪಂಚಮಾಧಿವೇಶನದ ವಂದಿ ನಮ್ಮಹಸ್ತಗತವಾಗಿದೆ. ವೇದಾಂತ ತತ್ವವನ್ನು ಪ್ರಚಾರಪಡಿಸುವುದು, ವರ್ಣಾಶ್ರಮ ಧರ್ಮಗಳನ್ನು ಪರಿಪಾಲಿಸುವುದು, ಸಂಸ್ಕೃತ ಪಂಡಿತರಿಂದ ಆಗಾಗ ಧಾರ್ಮಿಕ ವಿಷಯವಾಗಿ ಉಪನ್ಯಾಸ ಮಾಡಿಸುವುದು, ಶಂಕರ ಗ್ರಂಥಿಕ ಭಂಡಾರವನ್ನು

ಮೈಸೂರು ಎಸೆಂಟ್ರಿಗೆ ಭದ್ರಾವತಿಯಿಂದ
ಚುನಾಯಿಸಲ್ಪಟ್ಟಿರುವ
ದಕ್ಷಿಣಕನ್ನಡಿಗರಾದ
ಶ್ರೀ ಬಿ. ಮಾಧವ ಆಚಾರ್ಯರು

ಅಭಿವೃದ್ಧಿಗೊಳಿಸುವುದು, ಆರ್ಷೇಯ ವಿದ್ಯೆಗೆ ಪ್ರೋತ್ಸಾಹವೀಯುವುದು, ಆರ್ಷೇಯ ಹಾಗೂ ಧಾರ್ಮಿಕ ವಿಷಯಕ ಚರ್ಚಾಕೂಟಗಳನ್ನೇರ್ಪಡಿಸುವುದು, ಇವೇ ಮೊದಲಾದುವು ಈ ಸಭಾಸ್ಥಾಪಕರ ಸದುದ್ದೇಶವಿದೆ. ಇಂತಹ ಸದುದ್ದೇಶಗಳಿಗೆ ಧನಸಾಧಿವಾನಿಗಳು ಕೂಡುಗೈಯಿಂದ ಸಹಕಾರ ನೀಡುವುದು ಅತ್ಯಗತ್ಯವಿದೆ ಈ ವರುಷವೂ ತಾ. 28-4-52 ಮತ್ತು 29-4-52ರಲ್ಲಿ ಶ್ರೀ ಮಠದ ಶ್ರೀ ಪುರಂದರಾಶ್ರಮ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಶ್ರೀ ಶಂಕರ ಜಯಂತೀ ಸಭೆಯು ಜರಗಲಿರುವುದು ವಿದ್ಯಾರ್ಥಿಗಳಿಗೆ ಪರೀಕ್ಷೆ, ಧಾರ್ಮಿಕ ಉಪನ್ಯಾಸಗಳು, ಹರಿಕಥಾ ಕಾಲಕ್ಷೇಪ ಮೊದಲಾದ ಕಾರ್ಯಕ್ರಮವಾಗಿವೆ. ಬ್ರಹ್ಮಸೂತ್ರ ಶಂಕರ ಭಾಷ್ಯವನ್ನು ಪುಸ್ತಕದ ಸಹಾಯವಿಲ್ಲದೆ ಪರೀಕ್ಷಾರ್ಥಕರ ಮನಪೊಪ್ಪುವ ರೀತಿಯಲ್ಲಿ ಪರೀಕ್ಷೆ ಕೊಡುವಕ್ಕೆ ವಿದ್ಯಾರ್ಥಿಗೆ ಒಂದುನೂರು ರೂಪಾಯಿಗಳ ವಿಶೇಷ ಬಹುಮಾನ ಕೊಡುವ ವಿಚಾರವು ಮಾಡಲಾಗಿದೆ.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ್ ಕಂಟ್ರೋಲ್** ರೋಗ ಗ್ರಸ್ತ ತೊಜ್ಜು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಳಿಕರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಖಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರಿವೀನಲ್ಲಿ ಖಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೫ ಆಣೆ.

ಪೂರಲಕರು:—ಹಾಲಪ್ಪಾ ಹಕೀರಪ್ಪಾ ಚಾವಣಗೇರಿ

ಆಯುರ್ವೇದ ಔಷಧಾಲಯ ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ ಬಾಗಲಕೋಟೆ ಧಾರವಾಡ ವಿಜಾಪುರ— ಬಾನಸ್ಪ ಸಿದ್ಧಲಿಂಗಸ್ವ ಧಾರವಾಡಕರ ರಿಪ್ರಾಪುರ ನಂಜುಂಡೇಶ್ವರ ಮೂರ್ತಿ ಚಾವಣಗೇರಿ ಚಾವಣಗೇರಿ:—ಚಾವಣಗೇರಿ ಪ್ರಿಂಟ್ಸ್ ಆರ್ ಎಸ್ ಕರವಲಾಷಾ ,ಕಿಮಿಸ್ಸ, ಚಾವಣೇರಿ ಬ್ಯಾಂಕಿಗಿ

"ಗೋಪಾಲ ಔಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಬಾಣಂತಿಯರ ಸಲುವಾಗಿಯೇ ವೈಶಿಷ್ಟ್ಯವುಳ್ಳ ಪ್ರಕೃತದ ದೇಹಸ್ಥಿತಿಯನ್ನು ನಿರ್ಣಯಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಇವರ
ನವಜೀವಾತು
ಎಂಬ
ಸೂತಿಕಾ ರಸಾಯನ



ಹೆಚ್ಚಿನ ಸೂಚನೆಗೆ—ಡಾ! ಯಂ. ಸಿ. ಶಾಸ್ತ್ರೀ, ಯಲ್. ವಿ.
ಕೊಡಿಯಾಲಬೈಲ ಪೋಸ್ಟು, (ಮಂಗಳೂರು)

ಸ್ಥಾನಿಕರು:—ಡಾ! ವಿ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

UDIPI MUNICIPALITY
Tender Notice

Sealed tenders will be received by the undersigned upto 4 p. m. on 28-2-52 for ordinary kerosene and petromax Street lighting for the year 1952-53 Any particulars as to the conditions of contract may be obtained from the Munic al Office Udipi during office hours on working days.

Municipal office. Udipi.
Dated: 11-2-1952

(Sd.) A S D'Souza,
Commissioner

ಮೈಸೂರು ಶ್ರೀಮನ್ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ ಖಾಸ್ವೈದ್ಯ ಅಂಬಳೆ ನರಸಿಂಹ ಪಂಡಿತರ ಮನೆತನ ಎ ರಾಮಸ್ವಾಮಿ ಅಯ್ಯಂಗಾರವರ

****ಸಂತಾನ ಸಿಂಧೂರ****

ಬಹಿಷ್ಠೆ ಸಂಬಂಧದ ಹೊಟ್ಟೆನೋವು ಉಂಟು ಮಕ್ಕಳಿಲ್ಲ, ಇಂಥವರಿಗೂ ಮತ್ತು ಬಹಿಷ್ಠೆ ಸಂಬಂಧದ ಹೊಟ್ಟೆನೋವಿನಜೊತೆಗೆ ಕಲೆನೋವು, ನಡುಶಕ್ತಿಕ್ಷಯ,ಬೆನ್ನುನೋವು, ಆಜೀರ್ಣ, ಕೆಮ್ಮು, ಏದ್ರಾಭಂಗ, ಜುಗುಪ್ಸೆ ಇತ್ಯಾದಿ ಗುಪ್ತವ್ಯಾಧಿಗಳಿಗೂ ಗ್ಯಾರಂಟೀ ಔಷಧ.

ಮೂರು ದಿವಸಗಳಲ್ಲಿ ಈ ಹೊಟ್ಟೆನೋವು ಗುಣವಾಗಿ ಜಾಗ್ರತೆ ಸಂತಾನ ಫಲ ಬೇಕಾದರೆ ಮೇಲ್ಕಂಡ ಸಿದ್ಧೌಷಧಿ ಒಂದು ಸೆಟ್ ಅನುಪಾನ ಪತ್ರಿಕೆ ಮೇರೆ ಇಬ್ಬರೂ ಸೇವಿಸಿರಿ ಸಾಕು. ಶೋಧನವೆಷ್ಟು 15 16 ವರ್ಷ ಮಕ್ಕಳಿಲ್ಲದವರಿಗೂ ಮಕ್ಕಳಾಗಿವೆ. ಅನೇಕ ಪ್ರಶಂಸಾಪತ್ರಗಳನ್ನು ಪಡೆದಿದೆ.

ಕ್ರಯ:—ಒಂದುಸೆಟ್ 5ರೂ. ಪ್ಯಾಕಿಂಗ್ ಮತ್ತು ಟಪಾಲು ಖರ್ಚು 1ರೂ ಪಿ. ಪಿ. ಇಲ್ಲ. ಕ್ಯಾಟಲಾಗ್ ಉಚಿತ 6ರೂ. ಮನಿಆರ್ಡರ್ ಮಾಡಿರಿ. ಕೂಡ್ಲೆ ರಿಜಿಸ್ಟರ್ ಪಾರ್ಸಲ್ ರವಾನೆ.

ವಿಳಾಸ:—**A R. ವಿಶ್ವೇಶ್ವರಯ್ಯ (ಎ ರಾಮಸ್ವಾಮಿ ಅಯ್ಯಂಗಾರ್ ಸನ್,)**
Prop. ಸಂತಾನ ಸಿಂಧೂರ
ಅಂಬಳೆ ಪೋಸ್ಟು, ಯಳಂದೂರು ತಾಲೂಕು ಮೈಸೂರು ಡಿಸ್ಟ್ರಿಕ್ಟ್.
ಮೈಸೂರು ಬಾಜಿ: 269 ಸೋನಾರ್ ಸ್ಟ್ರೀಟ್, ದಿವಾನ್ಸ್‌ಪೋಡು, ಮೈಸೂರು.

For energetic and active living, for your mental and physical vigour and strength,

Always Use

KALI KAMALI'S

Chyavanprash.

A renowned Ayurvedic Medicine, prepared from rare Himalayan herbs and minerals. Useful fore men, women and Children alike. An ideal tonic for weak nerves and heart
Price per tin containing 80 tolas Rs. 10-0-0 Postage extra

Stockist for South & N. Kanara & Mysore state { **M. Vinayaka Rao,** Bannanje Road, Udipi. S. K

AYURVEDIC PHARMACY
Baba kali Kamali-Wala RISHIKESH.

ಕಾಮುಕಳಾ ಶಾಸ್ತ್ರ

ಇದರಲ್ಲಿ ಸ್ತ್ರೀವಶೀಕರಣ, ಪುರುಷ ವಶೀಕರಣ, ದಂಪತಿಗಳು ಕೂಡುವಿಕೆ, ಮಕ್ಕಳ ಭವಿಷ್ಯ, ಚಿದ್ರಳಿಕೆಯ ಸ್ಥಾನಗಳು, ಇತ್ಯಾದಿಗಳಾ ವಿಷಯಗಳಿರುತ್ತವೆ. ಬೆಲೆ 1-8-0.

ಬರೆಯಿರಿ:—ಶ್ರೀ ರುದ್ರವಿಲಾಸ ಪಬ್ಲಿಷಿಂಗ್ ಹೌಸ್, ಗದಗ-ಸಿಟಿ

For Protection and Provision
Consult
The New Guardian of India Life Insurance Co., Ltd.
Estd] Head office: **MADRAS** [1934

A Policy in this Progressive Life Office is good investment; its Agency is valuable business connection.

Applications for representation are invited from influential persons.

Please apply to:
The Branch Manager,
Diamond Building, Hampankatta,
MANGALORE, S. K.

ಈ ರೈಲು ತರುಗಾಟ ಬಹಳ ರಮ್ಯವಾದ ಪ್ರದೇಶದಲ್ಲಿತ್ತು. ನನ್ನೊಟ್ಟಿಗೆ ರೈಲುಕೋಣೆಯಲ್ಲಿ ಇಬ್ಬರು ಅಮೇರಿಕದ ಸೈನ್ಯವಿಮಾನದಲ್ಲಿ ಕೆಲಸಮಾಡುತ್ತಿದ್ದ ಮತ್ತು ಸ್ವಿಸರ್ ಲೇಂಡಿನ ತಿರುಗಾಟಕ್ಕೆ ಹೊರಟ ಅಧಿಕಾರಿಗಳು ಮತ್ತು ಅವರ ಪೈಕಿ ಒಬ್ಬರ ಪೆಂಡತಿ ಕೂಡಾ ಇದ್ದುದರಿಂದ ಕಾಲವು ಬಹಳ ಸಂತೋಷದಿಂದ ಕಳೆಯಿತು. ಈ ಹುಡುಗಿಗೆ ಸುಮಾರು 20-22ವರ್ಷ ಪ್ರಾಯ. ಅವಳು ಮ್ಯುನಿಕಿನ ನಿವಾಸಿಯಂದು ಹೆಳಿಯವಳು. ನಾವು ಪ್ರಯಾಣ ಮಾಡಿದ ಮುಂಜಿನ ದಿನವೇ ಅವಳಿಗೆ ಲಕ್ಷ್ಮವಾದದ್ದು. ನಾವೆಲ್ಲರೂ

[ನೇ ಪುಟದಿಂದ ಮುಂದುವರಿದುದು]

ಹುವ ರೀತಿ ವಂಚಿಸಿದುವರೆ ನೇಮಕಪಟ್ಟ ಬ್ರೈಸ್ ಸಮಿತಿಯವರು (Bryce Committee) ತಮ್ಮ ವರದಿಯಲ್ಲಿ ಈ ರೀತಿ ಸೂಚಿಸಿರುವರು- "ಎರಡನೇ ಮನೆಯು ಒಂದನೆ ಮನೆಯ ಹಲಸವಾನ ಹಕ್ಕನ್ನದ್ದಾಗಬಾರದು. ಮತ್ತದು ಒಂದನೆ ಮನೆಯನ್ನು ವಿರೋಧಿಸಿ ಇದಿರಾಡುವ ಸಭೆಯೊಗಬಾರದು. ಮುಖ್ಯವಾಗಿ ಹಣದ ವಿಷಯದಲ್ಲಿ ಒಂದನೆಮನೆಯ ಸರಿಸಮಾನ ಹಕ್ಕಿರಬಾರದು. ಸಾರ್ವಜನಿಕರ ಮನೆದ ಒಲವನ್ನೂ ಮತವನ್ನೂ ತಿಳಿಯುವ ಉದ್ದೇಶದಿಂದಿರಬೇಕು. ಜನರಿಗೆ ತಾವೂ ಜವಾಬ್ದಾರರು ಎಂದು ತಿಳಿದು ಅವರ ಮತಕ್ಕೆ ವಿರೋಧವಾಗಿ ಹೋಗದೆ ಅದಕ್ಕೆ ಪುರಸ್ಕಾರ ಕೊಡಬೇಕು. ಪ್ರತಿನಿಧಿ ಸಭೆಗೂ ಮತದಾರರಿಗೂ ಮಧ್ಯಸ್ಥಂಭಗಿದ್ದು ಪ್ರತಿನಿಧಿಗಳು ಜನಮತವನ್ನು ಅಲಕ್ಷ್ಯಮಾಡಿದರೆ ಅಥವಾ ಅದಕ್ಕೆ ವಿರೋಧವಾಗಿ ವರ್ತಿಸಿದರೆ ಎರಡನೆ ಮನೆಯವರು ಮತದಾರರ ಮಂದಾಳುಗಳಾಗಿರಬೇಕು. ಪ್ರತಿನಿಧಿ ಸಭೆಯವರ ಅಜಾಗರೂಕತೆಯಿಂದ ಅಥವಾ ದುರಾಗ್ರಹದಿಂದ ಹದಗೆಟ್ಟು ನಡೆಯಬಾರದೆಂಬ ಅಡ್ಡಿಲ್ಲದೇ ಕು. ಮೇಲಣ ಕಾರಣಗಳಿಂದ ಶಾಸನ ಸಭೆಯ ಪ್ರಕಿಯೊಂದು ಮಸೂದೆ ಮತ್ತು ರವು ಒಂದನೆ ಸಭೆಯವರಿಗಿಂತ ಹೆಚ್ಚು ತಿಳುವಳಿಕೆಯುಳ್ಳ ಅಥವಾ ಅವರಷ್ಟೇ ತಿಳುವಳಿಕೆಯುಳ್ಳ ಇನ್ನೊಂದು ಸಭೆಯು ಪರೀಕ್ಷಣೆಗೆ ಒಳಪಡುವುದು ಉತ್ತಮವೆಂದು ಅನಾಮವದಾದ್ದರಿಂದ ಇದೇ ಉದ್ದೇಶವನ್ನು ಸಾಧಿಸುವ ಬಗ್ಗಿಗಿ ಲೋಕದಲ್ಲಿ ಎರಡನೇ ಶಾಸನ ಸಭೆಯನ್ನು ಸ್ಥಾಪಿಸಿರುವರು. ರಾಜಕೀಯ ಚಿದುರಂಗದ ಆಟದಲ್ಲಿ ಆನೆ ಅಥವಾ ಕುದುರೆಯನ್ನು ಉಪಯೋಗಿಸುವ ರೀತಿಯಲ್ಲಿ ಮಂದಗತಿ ವರ್ಗದವರು, ವ್ಯಾಪಿನೆ ಪದ್ಧತಿ ಅನುಸರಿಸಿ ಸುಧಾರಣೆಗಳಿಗೆ ವಿರೋಧವಾಗಿರುವವರು ಈ ಎರಡನೆ ಮನೆಯನ್ನು ಉದಾರ ಮನಸ್ಸಿನ ತೀವ್ರ ಗಾಮಿಗಳ ಸುದಾರಣೆಗಳಿಗೆ ಅಡ್ಡಬರುವಂತೆ ಉಪಯೋಗಿಸುವರು. ಅನೇಕ ರಾಷ್ಟ್ರಗಳಲ್ಲಿ ವಿದೇಶ ಪೋಣೆಯ ಕುರಿತು ಇದೊಂದು ಗಂಭೀರ ಚರ್ಚೆ ನಾಯುವ ಸಭೆಯಾಗಿರುವದು.| ಒಂದನೆ ಶಾಸನ ಸಭೆಯು ಯುದ್ಧ ಅಥವಾ ಬೇರೆ ಮಹತ್ವದ ವಿಷಯಗಳ ಕುರಿತು ಗಾಡವಾದ ದಿಂಘ್ರಾಲೋಚನೆಯಲ್ಲಿ ಮಗ್ನವಾಗಿರುವಾಗ ಇತರ ವಿಷಯಗಳ ಕಡೆಗೆ ಮನಕೊಡುವರೆ ಹುರುಸೊತ್ತು ಮತ್ತು ಸಾವಕಾಶವಿಲ್ಲದಿರುವಾಗ ಈ ಸಭೆಯು ಅವುಗಳ ಕುರಿತು ವಿಚಾರಣೆ ಮಾಡಬಹುದು."

— ಸಿ. ಎಚ್. ಸೆಟ್ಟಿ. ಬಿ. ಎ.

ಪ್ರವಾಸಿಯ ಪತ್ರಗಳು ೨೬

[ಕಳೆದ ಸಂಚಿಕೆಯಿಂದ ಮುಂದುವರಿದುದು]

ಒಟ್ಟಿಗೆ ನಾಯಂಕಾಲ 8 ಘಂಟೆಯ ವರೆಗೆ ಇದ್ದ ಕಾರಣ ಅನೇಕ ವಿಷಯ ಸಂಭಾಷಣೆ ಮಾಡಿದೆವು.

ರೈಲು ಪಶ್ಚಿಮದಿಂದ ಪೂರ್ವಕ್ಕೆ ಬಹಳ ವೇಗದಿಂದ ಚಲಿಸುತ್ತಿತ್ತು. ಊರು ಬಹಳ ಹಸುರು. ನಮ್ಮ ಮಂಗಳೂರು ಮೊದಲಯ ಹಂಚು ಹಾಕಿದ ಸಣ್ಣ ಸಣ್ಣ ಮನೆಗಳು. ಅವುಗಳ ಸುತ್ತ ಸಣ್ಣ ಹೂವಿನ ತೋಟಗಳು. ಭೂಮಿಯು ಹೆಚ್ಚಾಗಿ ಗುಡ್ಡಪ್ರದೇಶ. ಪ್ಯಾನ್ ಮತ್ತು ಬರ್ಚ್ ಇರುವ ಹಸಿರಾದ ಕಾಡುಗಳು. ಅಲ್ಲಲ್ಲಿ ಆಕಾರ್ಷಣೆಗೆಳೆಯುವ ಸಣ್ಣ ಸಣ್ಣ ಊರು. ಅವುಗಳಲ್ಲಿ ಮುಖ್ಯ ಕೈಟ್ರೋಣಮೆಂದರೆ ಇಗರ್ಜಿ. ರಮ್ಯವಾದ ಇಳಿ ಜಾರಿನ ಭೂಮಿ (sloping plains). ಅವುಗಳ ಮೇಲೆ ಬೆಳೆಯುವ ಹಸುರಾದ ಗೋಧಿ ಸೈರು. ಒಂದು ನೀರಿನ ತೋಡಿನ ಬದಿ ಹಳೇ ನೀಲವಾದ ಇಜಾರು ಧರಿಸಿದ ಒಬ್ಬ ಕೃಷಿಗಾರ ಹಾರೆಯಿಂದ ಅಗೆಯುತ್ತಿದ್ದ. ಸಮಿಪದಲ್ಲಿ ಸುಮಾರು 20ಅಡಿ ಆಗಲದ ದಿಳಿ ನೀರಿನ ನೀರು ಹರಿಯುವ ತೋಡು. ಅದರ ನೀರು ಕರಗಿದ ಹಿಮುಗಡ್ಡೆಯ ತುಂಡುಗಳಿದ್ದ ಕಾರಣ ದೀಕ್ಷ ವರ್ಣ.

ನಂತರ ಭಾನ್‌ಸ್ಟೈಗ್ (Bahnsteig) ಎಂಬ ಸಣ್ಣ ಒಂದು ಪಟ್ಟಣ ಆಲ್ಲಿ ಯುದ್ಧ ಕಾಲದಲ್ಲಿ ಜನರು ಅಡಗಿ ಕೊತ್ತುಕೊಳ್ಳಲಿಕ್ಕೆ ಕಟ್ಟಿದ್ದ ಅರ್ಧಚಂದ್ರಾಕಾರದ ಸುಮಾರು 60 ಫೀಟ್ ಆಗಲದ ಸಿಮೆಂಟಿನ ಮಾಡು (Dug Out). ಊರಿನ ದನಗಳು ಚೆನ್ನಾಗಿ ತಿಂದು ಕೊಬ್ಬಿದ್ದವು ಬಣ್ಣಕಲ್ಲು. ಮಧ್ಯ ಮಧ್ಯ ದಿಳಿ ಪಟ್ಟಿ (Stripes). ಅನೇಕ ಕಡುಗಳು ಕೂಡಾ ಅಲ್ಲಲ್ಲಿ ಬೆನ್ನಾಗಿ ಬೆಳೆದ ಮುಳಿಯನ್ನು ರೈತರು ಕತ್ತರಿಸಿ ಒಣಗಿಸುತ್ತಿದ್ದರು. ಇದನ್ನು ನಂತರ ಮಾಡಿಯಾಗಿ ಕಟ್ಟಿ ಜಳಿಗಾಲದಲ್ಲಿ ಜಾನುವಾರಿಗೆ ತಿನ್ನಲಿಕ್ಕೆ ಪಾಸ್ತಾನು ಮಾಡುತ್ತಾರೆ. ಅಲ್ಲಲ್ಲಿ ಮರಗಳನ್ನು ಕಡಿದು ಕಟ್ಟಗೆಗೆ ಪಾಸ್ತಾನು ಮಾಡುತ್ತಿದ್ದರು.

ನಾವು ಹೀಗೆಯೇ ಊರೂರು ದಾಟಿ ರೈಲು ಚಲಿಸುತ್ತಿದ್ದಾಗ ಆ ಸೈನ್ಯದ ಅಧಿಕಾರಿಗಳು ಹೇಳಿದ ಭಾಷಣದ ಸಾರಾಂಶ: ಇಲ್ಲಿಯ ಜರ್ಮನ್ ಜನರು ದೇಶ ಸ್ವಾಧೀನವಿರುವ ಅಮೇರಿಕದ ಸೈನ್ಯದ ಜನರೊಡನೆ ಸಹಕರಿಸುತ್ತಾರೆ. ಕೈಗಾರಿಕೆಯ ಊರಲ್ಲಿ ಯುದ್ಧವಾದರೆ ವಿಪರೀತ ಕೆಲಸವಿಲ್ಲದಿರುವಿಕೆ (terrible unemployment). ಏಕೆಂದರೆ ಕಾರ್ಖಾನೆ ಬಿದ್ದರೆ ಕೆಲಸವಿಲ್ಲ. ಅದಕ್ಕೆ ಕೆಲಸ ಮಾಡಲಿಕ್ಕೆ ಬೇಕಾದ ಮೂಲಪದಾರ್ಥಗಳು (Raw-Materials) ಬರುವುದಿಲ್ಲ. ಕಾರ್ಖಾನೆ ನಡೆಯುವುದಿಲ್ಲ ಜನರಿಗೆ ಊಟಕ್ಕಿಲ್ಲ. ಕೃಷಿ ಆದರೆ ಹಾಗಲ್ಲ. ಕಳದ ಯುದ್ಧಕಾಲದಲ್ಲಿ ಯುದ್ಧ ನಡೆಯುತ್ತಿದ್ದ ಒಂದು ಕಡೆಯಿಂದ ಇನ್ನೊಂದು ಕಡೆಗೆ ಗುಂಡು ಹಾರಿಸುವಾಗ ಕೂಡಾ ಹೇಗೆ ಫ್ರೆಯರ್‌ದಿಂದ ಜರ್ಮನ್ ರೈತರು ಭೂಮಿಯನ್ನು ಉಳುತ್ತಿದ್ದರು ಎಂಬುದನ್ನೂ ಅವರು ವಿವರಿಸಿದರು. ಈಗ ಅಲ್ಲಿರುವ ಅಮೇರಿಕದ ಸೈನ್ಯದ ವಿಭಾಗೆ ಅಲ್ಲಿರುವ ದೇಶಕುಗಳಲ್ಲಿ ಇದ್ದ ದೊಡ್ಡವರ ಹಡವನ್ನು ಹಿಡಿದರಂತೆ(frozen). ಅಲ್ಲದೆ ಈಗ ಅಲ್ಲಿ ತಯಾರಾಗುವ ಅನೇಕ ಕೈಗಾರಿಕೆ ವಸ್ತುಗಳನ್ನು ನಿಯಂತ್ರಣದ ಬೆಲೆಗೆ ಸರಕೊಂಡು ಪರದೇಶಕ್ಕೆ ಕಳುಹಿಸಿ ಅಲ್ಲಿ ಮಾರಿ ಅದರ ಮುನಾಫೆಯನ್ನು ತೆಗೆದುಕೊಳ್ಳುತ್ತಾರೆ. ಹೀಗೆ ಅಲ್ಲಿ ತಯಾರಾಗುವ ಕೆಮಿಂಕಾ, ವಿಜ್ಞಾನ ಯಂತ್ರಗಳು (Scientific-Instruments) ಮೊದಲಾದ ಅನೇಕ ವಸ್ತುಗಳನ್ನು ಅಲ್ಲಿಯ ಸರಕಾರ ಪಡೆದು ಅಮೇರಿಕದವರಿಗೆ ಕೊಡಬೇಕು. ಬೇರೆ ಕಡೆ ಮಿತ್ರ ಸೈನ್ಯವಿರುವ ಜರ್ಮನ್ ಭಾಗಗಳಲ್ಲಿ ಕೂಡಾ ಹೀಗೆಯೇ. ಆದ ಕಾರಣ ಇವಕ್ಕೆಲ್ಲಾ ಮುಂಚಿಗಿಂತ ಕೈಯ ಹಾಸ್ತು. ಹಾಗೆ ಬರ್ಲಿನಿನಲ್ಲಿ ನಾನು ಒಂದು ರೂಪಿಪ್ಪೇಕ್ಸ್ ಕೆಮರಾ ಕೇಳಿದಾಗ ಅದರ ಕ್ರಯ 500 ಮಾರ್ಕ್ಸ್ (550 ರೂಪಾಯಿ) ಆದು ಕೂಡಾ ಆ ಅಂಗಡಿಗೆ ತಿಂಗಳಿಗೆ ಒಂದು ಮಾತ್ರ ವಸ್ತು ಬಹುದು. ಜಾತಿ ಎಲ್ಲ ಪ್ರದೇಶಕ್ಕೆ ವಾಲಂಟಿಕೈ ಅವಮದು ವಷ್ಟು. ಯುದ್ಧದ ಮುಂಜಿ ಆದ ಮೂರನೆ ಒಂದು ಅಂಶ ಕ್ರಯ.

ಹೀಗೆಯೇ ಸಂಭಾಷಣೆ ಮಾಡಿ ಮುಂದ ಮುಂದಕ್ಕೆ ನಮ್ಮ ರೈಲು ಚಲಿಸಿತು. ಈ ಊರುಗಳಲ್ಲಿ ಇನ್ನಾಂತಿನಂತೆ ಭೂಮಿಯಿಂದ ಭೂಮಿಗೆ ಮಧ್ಯ ಬೇಲಿಯಿಲ್ಲ ಅದಕ್ಕೆ ಕಾರಣ ಜಾನುವಾರು ಬಿಡುವುದಿಲ್ಲ. ಪಾಸಿಯಲ್ಲಿ ಕಟ್ಟಿಯೇ ಸಾಕುವುದಾಗಿ ಕಾಣುತ್ತದೆ.

ಘಂಟೆ 2-45ಕ್ಕೆ ಕೆಂಪ್ಟನ್‌ಲೆಗ್ಗ್ (Kempten Legge) ಎಂಬ ಪಟ್ಟಣ ಬಂತು. 3-15ಕ್ಕೆ ಹೆಚ್ಚಿನ ಪರ್ವತ ಇರುವ ಗುಡ್ಡ ಪ್ರದೇಶ. ಪರ್ವತದ ಮೇಲೆ ದಿಳಿ ಹಿಮಗೆಡ್ಡೆ. ಅಲ್ಲಲ್ಲಿ ಸರೋವರ [Lakes]. ಘಂಟೆ 4 ಕ್ಕೆ ರೈಲು ಗುಡ್ಡೆಯಿಂದ ಇಳಿತ. ಸೈನ್ಯ ಕಾಡುಗಳು ಅಲ್ಲಲ್ಲಿ. ರೈಲುದಾರಿಯು ಬದಿ ಕೃಷಿ. ಹೆಂಗಸರು ಗಂಡಸರು ಗದ್ದೆಯಲ್ಲಿ ಕೆಲಸ ಮಾಡುತ್ತಿರುವರು. 2 ಹುಡುಗರು, ಒಬ್ಬನಿಗೆ ಕಾಲಲ್ಲಿ ಜೋಡಿಲ್ಲ. ಈ ಚಳಿ ದೇಶದಲ್ಲಿ ಅದು ಬಡತನ ಕಾಣಿಸುತ್ತದೆ. ಭೂಮಿಯಲ್ಲಿ ಕೆಲಸಮಾಡುವ ಕೆಂಪು ವರ್ಣದ ಹೆಂಗಸರು ಅವರ ಮೇಲೆ ಬಿನ್ನಾಭರಣ ಇಲ್ಲ. ಕಪ್ಪು ಗೌನ್. ಈಗ ನಾವು ಮ್ಯೂನಿಕಿನಿಂದ 151 ಕಿಲೋಮೀಟರ್ಸ್ ದೂರವಿದ್ದೆವು. 1ನ್ನೆಲಿಗೆ 161 ಕಿಲೋಮೀಟರು.

ಘಂಟೆ 4-20ಕ್ಕೆ ಜರ್ಮನಿಯ ಗಡಿಗೆ ಸವಿಪವಾಗಿ ಲಿಂಡನ್ ಹೋಫ್ (Linden-Hof) ಎಂಬ ಪಟ್ಟಣ. ರೈಲ್ವೆ ಸ್ಟೇಷನಿಗೆ ತಾಗಿ ಕಾನ್ಸೆನ್ಸ್ಸ್ ಎಂಬ ಬಹು ದೊಡ್ಡ ಸರೋವರ [Lake Constance]. ರೈಲುದಾರಿ ಅದರ ಮಧ್ಯ ಇದೆ. ರೈಲು ಕೆಲವು ಕಾಲ ಅಲ್ಲಿ ನಿಂತು ಪುನಹಾ ಹಿಂದೆ ಬಂದು ಸ್ವಿಟ್ಸರ್‌ಲೆಂಡಿನ ಗಡಿ ಒಳಕ್ಕೆ ಸೇರಿತು.

[ವಿಚಾರವಾಣಿ] —ಕೆ. ಆರ್. ಕಾರಂತ.

ಉಡುಪಿಗೆ ಹೋಗಬೇಕೆ! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ವಿಶ್ರಾಂ, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿಶುಚಿ ಹೇಳಬೇಕೆ?

ಪ್ರೊಪ್ರೈಟರ್:—ಕೆ. ವೆಂಕಟ್ರಮಣಾಧಿಟ್ಟಾಯ

For up-to-date Lodging & Boarding

ROYAL MAHAL,

UDIPI. S. Kanara.

ಗೊನೋರಿಯಾ ಹರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಉರುತ್ತಿದ್ದರೆ, ಧೋರಕರೆಳ್ಳ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,....ಚುಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೀರು ಇಳಿದಿದ್ದರೆ, ಉಚ್ಚುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ತೂಲಿ, ಅರ್ಧಾಂಗ ವಾಯು ನಡೆನೋಯುವದು ಸ್ತ್ರೀಯರ ದಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕಟ್ಟು ಗರ್ಭಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಛೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ದೀನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧಕೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹೆಸರುಕಾಳು, ಕೊಬ್ಬರಿಎಳನೀರು, ಒಳ್ಳೆಣ್ಣೆ ಬಿಡಬೇಕು.

ದಾಮ್ಲಿ ಒಂಕ್ಕೆ ೫ರೂ. ಪೋಸ್ಟ್ ಚಾರ್ಜ್ ೧ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ಡಾವಣಗೇರಿ: ಡಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ಡಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ

ರೇವಣಸಿದ್ಧಪ್ಪ ಹಾಲಪ್ಪ ಡಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ-

ವಿವಿಧ ವಾರ್ತೆಗಳು



ಸಾವಸ್ತ್ರ ವಿಧದ ಬೆಲ್ಲ, ತಾಮ್ರ ಹಿತ್ತಾಳೆ, ಕಂಚು, ಮೊದಲಾದುವುಗಳ ವಿವಿಧ ವಾರ್ತೆಗಳೂ ಸಮಸ್ತ ರೀತಿಯ ರಮ್ಯ ಆಸಯಾಚಿಲ್ಲರೆಯಾಗಿಯಾಪಾರಿಯನ್ನು ತ್ತವೆ.

ಕಲ್ಯಾಣಿ ವ್ಯಾಸಾಚಾರ್ಯ,
ರಥಬೀದಿ, ಉಡುಪಿ

ಉಡುಗೊರೆ

ನಿಮಗೆ ಯಾರಿಗಾದರೂ ಯಾವ ಸಂದರ್ಭದಲ್ಲಾದರೂ ಉಡುಗೊರೆಗಳನ್ನು ಕೊಡುವ ಸಂದರ್ಭಬಂದಾಗ-

ನೆನಪಿನಲ್ಲಿರಲಿ-

ಉತ್ತಮ ಪುಸ್ತಕಗಳೇ
ಉತ್ತಮ ಉಡುಗೊರೆಗಳು.

ಬೇಕಾದ ಪುಸ್ತಕಗಳು
ಸಿಗುವಲ್ಲಿ ಪುಸ್ತಕಭಂಡಾರವಿದ್ದಲ್ಲಿವೆ.

ವಾರದ ಭವಿಷ್ಯ

ತಾರೀಕು 21-2-52 ರಿಂದ | ತಾರೀಕು 27-2-52 ವರೆಗೆ

ಮೇಷಃ—ಮನೆಯಲ್ಲಿನ ಅವ್ಯವಸ್ಥೆಯಿಂದಾಗಿ ನಿಮ್ಮ ಕನಸುಗಳಿಗೆ ಸುಖ ನೆಮ್ಮದಿಗಳಿರವು. ಕಷ್ಟಪಟ್ಟು ದುಡಿದ ಹಣವು ದಿನಾಂತ್ಯದಲ್ಲಿ ಬರಿದಾಗುವದು. ಕೈಹಿಡಿದಾಕೆಯು ಜಗಳ ಗಂಟುಬೀಳುವಳು. ಗುರುಹಿರಿಯರ ಆಗ್ರಹಕ್ಕೆ ಸಿಲುಕುವಿರಿ. ಕಾಯಕಸ್ಥೆ ಜೀವಿಗಳು ಹೆಚ್ಚಿನ ಫಲವನ್ನು ಪಡೆಸರು ವಾರದ ಅರ್ಧಂತ ದಿನಗಳನ್ನು ಬಿಟ್ಟು ಉಳಿದ ದಿನಗಳಲ್ಲಿ ನಿಮ್ಮ ಇಷ್ಟಾರ್ಥವು ಬಂಧು ಜನರ ನೆರವಿನಿಂದಾಗಿ ನೆರವೇರಲಿದೆ.

ವೃಷಭಃ— ಶನೈಶ್ಚರನೆಬ್ಬನ್ನುಳಿದು ಮಿಕ್ಕೆಲ್ಲಾ ಗ್ರಹರ ಅನುಗ್ರಹವು ದೊರೆತಿರುವದು ನಿಮಗೀವಾರದಲ್ಲಿ. ಆದ ಕಾರಣ ನಿಮ್ಮ ಇಷ್ಟಾರ್ಥ ಸಿದ್ಧಿಗೊಸ್ಕರ ಇಂದೇ ಪ್ರಯತ್ನಿಸಿರಿ. ನಿಮ್ಮ ಬಯಕೆಯು ಏನೊಂದು ವಿಘ್ನ ವಿಘ್ನಾರಗಳಿಲ್ಲದೆ ನಿರಾತಂಕವಾಗಿ ನೆರವೇರುವದು ಸಾರ್ವಜನಿಕ ರಾಜಕೀಯ ಕ್ಷೇತ್ರದಲ್ಲಿ ವಿಜಯ (ಶ್ರೀ)ಯು ನಿಮ್ಮ ಪಾಲಿಗೆ ಕಟ್ಟಿಟ್ಟ ಗಂಟಿನಂತಿರುವದು. ವಾರಾಂತ್ಯದ 3 ದಿನಗಳು ಅತೀವ ಪ್ರಶಸ್ತವಿದೆ.

ಮಿಥುನಃ—ಉದ್ಯೋಗಂ ಪುರುಷ ಲಕ್ಷಣಂ ॥ ಎಂಬ ಗಾದೆಯಂತೆ ಕಾರ್ಯವನ್ನು ಮಾಡುವದು ನಿಮ್ಮ ಕರ್ತವ್ಯವು. ಫಲಾಫಲಗಳು ದೈವಾ ಯುಕ್ತವಾದವುಗಳು ಈ ವಿಚಾರದಲ್ಲಿ ಶುಕ್ರಾಚಾರ್ಯರನ್ನುಳಿದು ಮಿಕ್ಕೆಲ್ಲಾ ಗ್ರಹರೂ ನಿಮಗೆ ಪ್ರತಿಕೂಲರಿರುವ ಕಾರಣ ನಿಮ್ಮ ಯಾವತ್ತು ಪ್ರಯತ್ನಗಳು ನೀರಿನಲ್ಲಿ ಮಾಡಿದ ಹೋಮದಂತೆ ವಿಫಲವಾಗಲಿವೆ. ಜಾಗೆಂದು ಉದಸೀನನಾಗಿ ಕುಳಿತಿರುವದು. ನಂತ ಧರ್ಮವಲ್ಲವು. ವಾರದ ಆರ್ಧಂತ ದಿನಗಳು ನಿಮಗೆ ಹೆಚ್ಚಿನ ಅನುಕೂಲವನ್ನುಂಟು ಮಾಡಲಾರವು,

ಕರ್ಕಟಃ—ನಿಮ್ಮ ಭಾಗ್ಯಪತಿಯ ಅನುಗ್ರಹವೊಂದು ಬಲವತ್ತರವಾಗಿರುವ ಕಾರಣ ನೀವಾವ ಕಾರ್ಯಕ್ಕೂ ಹಿಂಜರಿಯ ಬೇಕಾದ ಅವಶ್ಯವಿಲ್ಲವು. ಸದ್ಯ ನಿಮಗೆ ಹಣದ ಕೊರತೆಯುಂಟಾಗದು. ಶತ್ರು ಜನರನ್ನು ಸ್ವಪರಿಶ್ರಮದಿಂದಲೇ ಪರಾಭವ ಗೊಳಿಸುವಿರಿ. ಆನಿರೀಕ್ಷಿತ ಧನಾಪ್ತಿಯ ಯೋಗವಿದೆ. ಆದರೆ ಸ್ತ್ರೀ ಜನರಿಂದಾಗಿ ಅನಪೇಕ್ಷ ಅಪವಾದಗಳೊದಗ ಬಹುದು. ವಾರಾಂತ್ಯದ 3 ದಿನಗಳಲ್ಲಿ ಕೊಂಚ ಜಾಗರೂಕರಾಗಿರಿ.

ಸಿಂಹಃ—ಇಂದಿನ ನಿಮ್ಮ ಜೀವನವು ಕೊಂಚ ಕರಿಣ ಪರಿಸ್ಥಿತಿಗೆ ಬರಲಿದೆ. ಕಾರಣ ಆತ್ಮೀಯರೂ ಬಂಧುಗಳೂ ದೂರ ತೊಲಗುವರು. ಸ್ವಯಂ ಧೈರ್ಯ ಸಾಹಸಗಳು ಸಾಲದು. ಕಾರ್ಯದಲ್ಲಿ ನಷ್ಟವಧಿಕವಾಗಲಿದೆ. ಮಾತ್ರವಲ್ಲ ಜೀವಭಯವೂ ಆರೋಗ್ಯ ಚೆನ್ನಾಗಿರದು. ವಿದ್ಯೋಪ ಜೀವಿಗಳಿಗೆ ನಮರ್ಧಾದೆಯಿಂದ ದಿನಗಳೆಯಲು ಅತೀವ ಕಷ್ಟವಾಗುವದು. ತಾ 23ರಿಂದ 26ರ ವರೆಗಿನ ದಿನಗಳಲ್ಲಿ ಅನಿಷ್ಟಗಳು ಬಹುತೇಕಕಡಿಮೆಯಾಗಲಿವೆ.

ಕನ್ಯಾಃ—ಈ ವಾರದಲ್ಲಿ ನಿಮ್ಮ ಧನ ಸುಖ ಭಾಗ್ಯ ಪತಿಗಳು ಉತ್ತಮ ಸ್ಥಾನವನ್ನು ಹೊಂದಿರುವುದರಿಂದ ನಿಮಗೆ ಹಣದ ಕೊರತೆಯುಂಟಾಗದು. ಮನಸ್ಸಿಗೂ ನೆಮ್ಮದಿ ಲಭಿಸೀತು. ಪಿತ್ಥ ದೋಷದಿಂದ ಆರೋಗ್ಯಕ್ಕೆ ಸ್ವಲ್ಪ ಹಾನಿತಗಲೀತು. ಮೇಲಧಿಕಾರಿಗಳ ಅವಕೃಪೆಗೆ ಪಾತ್ರರಾದೀರಿ. ಜನತೆಯ ಬೆಂಬಲವನ್ನು ಪಡೆದ ನಿಮಗೆ ಸಮಾಜದಲ್ಲಿ ಗೌರವ ಸ್ಥಾನಮಾನಗಳು ಲಭಿಸುವವು. ವಾರಾಂತ್ಯದ 3 ದಿನಗಳು ಅನುಕೂಲವಿವೆ

ತುಲಾಃ—ಕೃಷ್ಣಪಕ್ಷದ ಚಂದ್ರನಂತೆ ದಿನೇ ದಿನೇ ನಿಮ್ಮ ಅದೃಷ್ಟವು ಹ್ರಾಸವಾಗುತ್ತಾ ಬರುತ್ತಿದೆ. ಆದ ಕಾರಣ ನೀವಾವ ಕಾರ್ಯವನ್ನು ಮಾಡಿದರೂ ಫಲಾಪ್ತಿಗಿಂತ ಪರ್ಯವಸಾನವೇ ಅಧಿಕವಾಗಿ ನಿಲ್ಲಲಿದೆ. ಆತನಸ ಹಣದ ಬಿಕ್ಕಟ್ಟಿನಿಂದಾಗಿ ಮರ್ಯಾದೆಯಿಂದ ದಿನಗಳೆಯುವದೂ ದುಸ್ತರವಾಗಿ ಕಾಣಿಸೀತು. ಗೃಹ ಕೃತ್ಯದಲ್ಲಿ ಸುಖವಿರದು. ತಂದೆ ಮಕ್ಕಳೊಳು ಗಂಡ ಹೆಂಡತಿಯೊಳು ಕಲಹವಾಗುವದು, ಗುರುಜನರ ಆಗ್ರಹಕ್ಕೆ ಗುರಿಯಾಗುವಿರಿ. ಆದ ಕಾರಣ ಈ ಕಾಲದಲ್ಲಿ ಯಾವುದಕ್ಕೂ ಮುಂದಿರಿಯದೆ ಹಿಂದಾಗಿರುವದೇ ಲೇಸು. ತಾ 21, 27 ಈ 2 ದಿನಗಳಲ್ಲಿ ಮೇಲೆ ಹೇಳಿದಷ್ಟು ಅನಿಷ್ಟಗಳು ಕಾಣಿಸವು.

ವೃಶ್ಚಿಕ.—ನಿಮ್ಮ ಕಷ್ಟ ಪರಂಪರೆಗಳು ದೂರ ಸರಿವವು. ಕೈಗೊಂಡ ಕಾರ್ಯದಲ್ಲಿ ವಿಜಯವನ್ನು ಹೊಂದುವಿರಿ. ಜನರ ಬೆಂಬಲವು ಮಿತ್ರರ ನೆರವು ಉತ್ತಮವಿರುವುದರಿಂದ ದಿನ ಯಾಪನೆಯು ಸುಗಮವಾಗುವದು ಧನಲಾಭ ಪತಿಗಳ ಅನುಗ್ರಹವನ್ನು ಪಡೆದ ನಿಮಗೆ ಹಣದ ಕೊರತೆಯುಂಟಾಗದು ಕೆಲವೊಮ್ಮೆ ಪಿತ್ಥದೋಷದಿಂದ ದುಃಸ್ವಪ್ನ ನಿದ್ರಾ ಭಾವನೇತ್ಯ ಪೀಡೆಗಳು ಕಾಣಿಸಬಹುದು ತಾ 23, 24 ಇಪ್ಪ ಪ್ರದಗಳವೆ.

ಧನುಃ—ಸುಖ ದುಃಖ ಲಾಭ ನಷ್ಟಗಳು ಸಮತೂಕದಲ್ಲಿ ನಿಲ್ಲಲಿವೆ. ಶ್ರಮ ವಹಿಸಿ ದುಡಿಯುವವರಿಗೆ ಈ ವಾರದಲ್ಲಿ ಆಧಿಕ ಫಲ ಲಭಿಸುವದು ಬಂಧು ಜನರು ಮಿತ್ರವರ್ಗದವರು ನಿಮಗೆ ವಿಮುಖರಾದರೂ ಸ್ವಯಂ ಸಮರ್ಥರಾದ ನಿಮಗೆ ವ್ಯಾಪಾರದೆ ಜಯವಿದೆ. ತಾ 21, 25, 26 ಈ ಮೂರು ದಿನಗಳು ಸುಖ ಸಾಧಕಗಳಾಗಿವೆ

ಮಕರಃ—ಉತ್ಪತ್ತಿಗಿಂತ ದ್ವಿಗುಣ ವ್ಯಯವಾದೀತು. ಹೆಚ್ಚಿನ ಕಾರ್ಯಗಳು ಅರ್ಧದಲ್ಲೇ ನಿಲ್ಲುವವು. ಸತತ ಪರ್ಯಟನದಲ್ಲೇ ಕಾಲಕಳೆವ ಪರಿಸ್ಥಿತಿಯೊದಗಲಿದೆ. ಆದರೆ ನಿಮ್ಮ ಸುಖಭೋಗಗಳಿಗೆ ಕೊರತೆಯಾಗದು. ಸಾಂಸಾರಿಕ ತಾಪತ್ರಯಗಳು ಕೊಂಚ ಹೆಚ್ಚಲಿವೆ. ರಾಜಕೀಯ ವಾ ಸಾರ್ವಜನಿಕ ಕ್ಷೇತ್ರದಲ್ಲಿ ಒಳ್ಳೆ ಹೆಸರು ಲಭಿಸದು. ಆದರೂ ತಾ 23, 24, 27, ಈ 3 ದಿನಗಳಲ್ಲಿ ನಿಮ್ಮ ಬಯಕೆಯು ಸಿದ್ಧಿಸಲಿವೆ.

ಕುಂಭಃ— ಈ ಹಿಂದೆ ನೀವು ಎಲ್ಲಿ ಪುರಸ್ಕೃತರಾಗುತ್ತಿದ್ದಿರೋ ಅಲ್ಲಿ ನೀವಿಂದು ತಿರಸ್ಕೃತರಾಗುವ ಸಂಭವವಿದೆ. ಕಾರಣ ನಿಮ್ಮ ನಡತೆಯೆನ್ನಬಹುದು. ಏಕಂದರೆ ಸದ್ಯ ನಿಮ್ಮ ಬಾಯಲ್ಲಿ ನಯನಾಡಿಗಳೇ ಬರಲಾರವು ಮಿಕ್ಕೆಸಿಕ್ಕೆ ವರೊಡನೆ ಕಲಹಗೈವಿರಿ. ನಿಮ್ಮವರೇ ನಿಮಗೆ ಪ್ರತಿಕೂಲರಾಗಿ ವರ್ತಿಸುವರು. ಆದವೇಲೆ ಪೆರವರ ವಿಚಾರ ಕೇಳಬೇಕೇ ತಾ 23,24,27 ರಲ್ಲಿ ಬಹಳ ಜಾಗರೂಕರಾಗಿ ವರ್ತಿಸಿರಿ. ಕಷ್ಟನಷ್ಟಗಳು ಸಂಭವಿಸಲಿವೆ-

ಮೀನಃ—ತಾನೊಂದು ಬಗೆದರೆ ದೈವ ಮೊಂದೆಣಿಸಿತೆಂಬಂತೆ ನಿಮ್ಮ ಇಂದಿನ ಪರಿಸ್ಥಿತಿಯಾಗಿರುವದು. ಜನ್ಮದಲ್ಲಿರತಕ್ಕ ಗುರು ಅಷ್ಟಮಸ್ಥ ಕಾಣದ್ಯಾದಶಸ್ಥರವಿಗಳು ನಾನಾ ತರದ ಪೀಡೆಗಳನ್ನು ಕೊಡುವರು. ನಿಮ್ಮ ಸಂಕಲ್ಪಗಳು ಗಗನ ಕುಸುಮಗಳಂತಾದಾವು. ದೆಹಾಲಸ್ಯ ಗೃಹ ತಾಪತ್ರಯ ಆರ್ಥಿಕ ದಿಕ್ಕಟ್ಟು ಶತ್ರು ಜನರ ಪೀಡೆ ಇವುಗಳಿಂದ ಸಂತತ ದುಃಖಕ್ಕೀಡಾದ ನಿಮಗೆ ತಾ 21,22 23, 24 ಈ ದಿನಗಳಲ್ಲಿ ಮಿತ್ರಪೂಮುಖದಿಂದ ಸಂತಸಕಾರ್ಯವಿದೆ.

● ತೃಪ್ತಿಕರವಾದ ವಸತಿ — ಹಿತಕರವಾದ ಊಟ
● ರುಚಿಕರವಾದ ಉಪಾಹಾರ ಇವುಗಳಿಗೆ
ಉಡುಪಿಯ ಆದರ್ಶ ನಿಲಯವೆಂದರೆ
ವುಡ್ ಲೇಂಡ್ಸ್
ಊರ ಪರವೂರ ಸನ್ಮಾನ್ಯ ಸದ್ಗ್ರಹಸ್ಥರಿಂದ ಮುಕ್ತಕಂಠದಿಂದ ಹೊಗಳಿಸಿಕೊಂಡಿ ನಮ್ಮ ಹೋಟೆಲಿಗೇ
ಎಂದೆಂದೂ ನಿಮ್ಮ ಸಂದರ್ಶನವೀಯಲು ಮರೆಯದಿರಿ.
ಯಾತ್ರಿಕರಿಗೂ, ಪ್ರಯಾಣಿಕರಿಗೂ ಸರ್ವ ಅನುಕೂಲತೆಯಾಗುವಂತೆ
ನಗರದ ಕೇಂದ್ರ ಭಾಗದಲ್ಲಿದೆ.
WOODLANDS
Highclass Boarding & Lodging, **UDIPI S. Kanara**

ಸರ್ ಜೀವನ್ ಶಿಲಾಜಿತ್ ಲೇಹ್ಯ

ಶಿಲಾಜಿತ್ ಹಿಮವಾಲಯ ಪರ್ವತದಿಂದ ತೆಗೆಯಲ್ಪಡುವಂಥ ಅಪೂರ್ವ ವಸ್ತು, ಔಷಧಿಗಳ ರಾಜ; ಶಿಲಾಜಿತ್ತನ್ನು ಮೂಲಿಕೆಗಳೊಡನೆ ಸೇರಿಸಿ ಲೇಹ್ಯ ಮಾಡಿದೆ.

ಇದರ ಸೇವನೆಯಿಂದ ದೇಹ ದಾರ್ಢ್ಯವೂ ಶಕ್ತಿಯೂ ಉಂಟಾಗುತ್ತದೆ. ಮುಟ್ಟುಪಾಗಿ ಹೊಟ್ಟಿನೋವು, ಅನ್ನ ನೇರದಿರುವಿಕೆ ಇವೇ ಮೊದಲಾದ ರೋಗಗಳಿಗೆ ಒಂದೆರಡು ದಿನಗಳಲ್ಲಿಯೇ ಗುಣಕೊಡತಕ್ಕ ಔಷಧವಿದು ಕೆಮ್ಮು ಬಾಸ, ದಮ್ಮು ಮೂಲ, ಬೆಳಮೂಲ, ರಕ್ತಮೂಲ, ಬಹುಮೂತ್ರ, ಹೊಟ್ಟೆಯಲ್ಲಿ ಗಡ್ಡೆ ಇರುವಿಕೆ ಮತ್ತು ವಾಯುವಿನಿಂದ ಉಂಟಾಗತಕ್ಕ ಸರ್ವ ವ್ಯಾಧಿಗಳಿಗೂ ದಿವ್ಯೌಷಧ. ವಿದ್ಯಾರ್ಥಿಗಳು ಸೇವಿಸುವುದರಿಂದ ಜ್ಞಾಪಕಶಕ್ತಿಯೂ ಮತ್ತು ಚಟುವಟಿಕೆಯೂ ಹೆಚ್ಚುತ್ತೆ. ವೃದ್ಧರು ಸೇವಿಸುವುದರಿಂದ ಶಕ್ತಿಯನ್ನು ಹೆಚ್ಚಿಸಿ; ಧಾರ್ಢ್ಯವನ್ನುಂಟುಮಾಡುತ್ತೆ.

ಹೆಂಗಸರಿಗೆ—ಅಕ್ಕಮ ಬಹಿಷ್ಪೆ, ಕೈಕಾಲು ಹಿಡಿತ, ಕೀಲುವಾಯು, ಪಕ್ಕಶೂಲೆ ಮತ್ತು ಉಷ್ಣದಿಂದಾವ ಇತರ ರೋಗಗಳಿಗೆ ದಿವ್ಯೌಷಧ. ದುರ್ಬಲರಾಗಿ ಕೇವಲ ಶೃಂಗಾರಿರುವ ಶಿಶುಗಳಿಗೆ ಈ ಔಷಧವನ್ನು ಪ್ರತಿ ಬೇಳೆಸ್ಸು ಸಂಜೆ ಕೊಟ್ಟರೆ ಸ್ವಲ್ಪ ಕಾಲದಲ್ಲಿಯೇ ದೃಢಾಂಗರಾಗುವರು, ಹಣ ಮುಂಗಡ.

೪೪ ದಿನದ ಲೇಹ್ಯಕ್ಕೆ ರೂ ೫-೪-೦ (ಪೋಸ್ಟೇಜು ಮಾಫಿ)
೨೨ ದಿನದ ಲೇಹ್ಯಕ್ಕೆ ರೂ ೩-೪-೦ (ಪೋಸ್ಟೇಜು ಮಾಫಿ)

ಎಲ್ಲಾ ನೋವುಗಳಿಗೂ ಅದ್ಭುತಶೀಘ್ರ ಗುಣಕಾರಿ

ಮೆಂಥ್ಯಾಲ್ ಕೋನ್‌ಗಳು
(MENTHYAL CONES)

ಎಲ್ಲಾ ವಿಧವಾದ ಶೈತ್ಯದಿಂದಾಗಲೀ, ಉಷ್ಣದಿಂದಾಗಲೀ ಸಂಭವಿಸುವ ತಲೆ ನೋವು, ತಲೆತಿರುಗು-ವಿಕೆ, ಬುದ್ಧಿ ಮಾಂದ್ಯ, ಕಣ್ಣುರಿ, ದೇಹಾದ್ಯಂತ ಕೀಲುಗಳ ನೋವು, ವಾಯುನೋವು ಮತ್ತಾವ ವಿಧವಾದ ನರಗಳ ನೋವಿಗೂ ತಕ್ಷಣದಲ್ಲೆಯೇ ಗುಣವನ್ನು ಕೊಡುತ್ತದೆ ೧ ಕೋನು ೧೦೦೦ ಸಲ ಉಪಯೋಗಿಸಬಹುದು.

೧ ವ್ಯಾಕೆಟ್ ರೂ. ೩—೧೨—೦
೩ ವ್ಯಾಕೆಟ್ ರೂ ೬—೦—೦
೩ ವ್ಯಾಕೆಟ್ ರೂ ೯—೦—೦
(ಪೋಸ್ಟೇಜ್ ಮಾಫಿ)

ನೀಲಗಿರಿ ಡಿಪ್ಪೋ, ಅಕ್ಕಿಪೇಟೆ ಚೌಕ, ಬೆಂಗಳೂರು ಸಿಟಿ-
ಕುದ್ದ ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪ್ಪೋವಿನಲ್ಲಿ ಕೇಳಿ

ಬಿಯರ್ ಸ್ರಾವ ನಿಂತಿತು

'ಕುಮಾರ್' ಬಿಲ್ಲೆಗಳನ್ನು ಉಪಯೋಗಿಸಿದರೆ ಹದಶಕ್ತಿ ಮತ್ತು ಸ್ರಾವವಾಗುವದು. ಹಕೋಟೆಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ- ಸಾವಿರಾರು ದುಂದಿಗೆ ಪ್ರಾತ್ಯಕ್ಷ ಗುಣವಾಗಿದೆ- ದೆರೆ, ರೂ 3-; ಸ್ಪೆಶ್ಯಲ್ ರೂ. 5- ಅಧಿಕಾಧಿಕ ಸ್ಪೆಶ್ಯಲ್ ರೂ, 8-[ವಿ. ಪಿ ಹನ್ನೆರಡಾಣೆ ಪ್ರತ್ಯೇಕ.]

Mrs. P. DEVEE, F. DB. (N. J.)
Tollygunge CALCUTTA.
ಸ್ವಾತಿಕ್ಷೇರು ಶಹಾಕಂಪನಿ, ಮಂಗಳೂರು

ಮೂಲ್ಕಿ ಬ್ಯಾಂಕ್,
ಲಿಮಿಟೆಡ್, ಮೂಲ್ಕಿ

1929ರಲ್ಲಿ ಸ್ಥಾಪಿತವಾಗಿ 21 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಆತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು

The Moolky Bank Ltd.,
Moolky, S K

Edited, Printed & Published By K. H. Shetty at the Navayuga Press, Udipi, S. India.

Regd.No. M. 3618
LICENCE No. 31
Licensed to Post without Prepayment

ESTD. 1921 ಸ್ಥಾಪನೆ
31 ನೆಯ ವರ್ಷ

28–2–1952.
Founder: Sri A. B. Shetty,
Minister for Agriculture & Veterinary

ನವಯುಗ
ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ವಾರಪತ್ರಿಕೆ.
ಕೃಷಿಮಂತ್ರಿ ಶ್ರೀ.ಎ.ಬಿ. ಶೆಟ್ಟರಿಂದ ಸ್ಥಾಪಿತವಾದುದು.



ನವಯುಗ
ಉಡುಪಿ, ದ. ಕ.
ವಾರ್ಷಿಕ ಚಂದಾ
ರೂ. 5-12-0
6 ತಿಂಗಳಿಗೆ
ರೂ. 3-0-0
ಬಿಡಿ ಪ್ರತಿಗೆ
0-2-0

ವರ್ಷ ೩೧ ವಾರ ೨೫
NAVAYUGA WEEKLY Post Box No. 22 UDIPI.
Vol 31 No. 25

ಮಾನವನಲ್ಲಿ ಪ್ರಜ್ವಲಿಸುವ ದೈವೀ ಸಂಪತ್ತೆಂದರೆ ನಿಸ್ವಾರ್ಥ ಸೇವಾಬುದ್ಧಿ

ತತ್ವನಿಷ್ಠೆಯ ಅಸಿಧಾರಾ ವ್ರತ

ತತ್ವನಿಷ್ಠೆ ಅಸಿಧಾರಾ ವ್ರತ. ಅನಿಶ್ಚಿತ ಕಠಿಣ ಆ ಬಾಳಿನ ದಾರಿ. ಆ ಬಾಳನ್ನು ಎದುರಿಸುವ ಎಡರು ತೊಡರುಗಳು ಬಹಳ. ಕೆಚ್ಚೆದೆಯ್ಜೆಗೂ ವಿವಿಧ ರೂಪಗಳಿಂದ ವ್ಯತಿರೇಕ ಪ್ರವಾಹಗಳ ಮಹಾಪೂರ ಬಂದು ತತ್ವನಿಷ್ಠನನ್ನು ಪ್ರವಾಹದೊಡನೆ ಪೇಲಿಸಿಕೊಂಡು ಹೋಗಲು ಹೆಣಗುತ್ತವೆ. ಆ ಪ್ರತಿಕೂಲತೆ ಒಮ್ಮೆ ಬಂಧುವಿನಂತೆ ಗೆಳೆಯನಂತೆ ಮೋಹ ಮಮತೆಗಳ ಮಾಯಾರೂಪದಿಂದ ಬಂದರೆ ಇನ್ನೊಮ್ಮೆ ವೈರಿಯಂತೆ ಪಿಶಾಚಿಯಂತೆ ರೋಷ ಭೀಷಣಗಳ ಭೀಕರ ರೂಪದಿಂದ ಬರುತ್ತದೆ. ಒಮ್ಮೆ ಅಧಿಕಾರ, ಐಶ್ವರ್ಯ, ಕೀರ್ತಿಗಳಂತೆ ಭ್ರಾಮಕ ರೀತಿಯಲ್ಲಿ ಬಂದರೆ ಇನ್ನೊಮ್ಮೆ ಒಡೆತ, ಬಡತನ, ಅಕಕೀರ್ತಿಗಳಂತೆ ಘೋರ ರೂಪದಲ್ಲಿ ಬರುತ್ತದೆ. ಒಮ್ಮೆ ಸಮಾಜವಾಗಿ ವೈದೋರಿದರೆ ಇನ್ನೊಮ್ಮೆ ವ್ಯಕ್ತಿಯಾಗಿ ರೂಪುಗೊಳ್ಳುತ್ತದೆ. ಹೀಗೆ ತತ್ವನಿಷ್ಠನ ಬಾಳನ್ನು ಬೀಳಿಗೆಳೆಯುವ ರೂಪುಗಳುಬಹಳ. ರೀತಿಗಳು ಅನೇಕ.

ಈ ಜಗತ್ತಿನಲ್ಲಿ ಹೆಚ್ಚಿನ ಜನರು ತಮ್ಮ ಸ್ವಾರ್ಥವನ್ನು ಸಾಧಿಸುವ ಸಮಯದಲ್ಲಿ ಸತ್ಯನ್ಯಾಯಗಳೆಡೆಗೆ ಕಣ್ಣೆತ್ತಿಕೂಡಾ ಕಾಣದೆ ಗಾಳಿಬಂದಂತೆ ತೂರಿಕೊಂದು ಸಾಗುತ್ತಾರೆ. ಆ ಕಾಲದ ಅವರ ನಡೆ ಬಿರುಗಾಳಿಯಂತಿರುತ್ತದೆ. ಆಗ ಅವರ ಹಾದಿಯಲ್ಲಿ ಯಾರಾದರೂ ತತ್ವನಿಷ್ಠರು ಎದುರಾದರೆ ಅವರನ್ನು ತತ್ವಚ್ಯುತರನ್ನಾಗಿ ಮಾಡಿ ತಮ್ಮ ಪಂಥಾನಿಸಣವಂತೆ ಮಾಡಲು ಅಥವಾ ಕೊನೆಸಕ್ಷ ತಮ್ಮ ಹಾದಿಯ ತಡೆಯಾಗದಿರುವಂತಾದರೂ ಮಾಡಲು ಸಾಮ, ದಾನ, ಭೇದ, ದಂಡ ಈ ಚತುರೋಪಾಯಗಳನ್ನೂ ಉಪಯೋಗಿಸುತ್ತಾರೆ. ಆಗ ಅವರಿಗೆ ತಮ್ಮ ಸ್ವಾರ್ಥದ್ದೊಂದೇ ದೃಷ್ಟಿ. ಇದಕ್ಕಾಗಿ ಅವರು ತಮ್ಮನ್ನು ಮಾರಿಕೊಳ್ಳುವುದಲ್ಲದೆ ಸಮಾಜದ ಅಂಗಗಳಾದ ವ್ಯಕ್ತಿಗಳ ವ್ಯಕ್ತಿತ್ವವನ್ನೇ ಬಲಿಕೊಳ್ಳಲೆಸುತ್ತಾರೆ. ಜಾತಿ ಸಂಬಂಧ, ಹಣ, ಋಣ, ದಾಕ್ಷಿಣ್ಯ, ಬಲ ಇವೆಲ್ಲವುಗಳನ್ನೂ ಉಪಯೋಗಿಸಿ ತತ್ವನಿಷ್ಠ ಮಂದಿಯನ್ನು ಅಡ್ಡ ಹಾದಿಗೆಳೆಯುತ್ತಾರೆ. ಹೀಗೆ ತಮ್ಮ ಸ್ವಾರ್ಥಸಾಧನೆಗಾಗಿ ಸಮಾಜದ ನೈತಿಕ ಮಟ್ಟವನ್ನೇ ಕೆಳಗೆಳೆಯುತ್ತಾರೆ. ಆದರೆ ಇದೇ ಮಂದಿ ಬಹಿರಂಗವಾಗಿ ವೇದಿಕೆಯ ಮೇಲೆ ನಿಂತು ಸಾರುತ್ತಾರೆ. "ನಾವು ಸಮಾಜ ಸುಧಾರಕರು. ಸಮಾಜದ ಮಟ್ಟವನ್ನು ಸರ್ವತೋಮುಖವಾಗಿ ಎತ್ತರಿಸಲು ಹೆಣಗುವವರು" ಎಂದು ಹೀಗೆ ಮಾತುಕೃತಿಗಳಿಗೆ ತಾಳಮೇಳವಿಲ್ಲದ ಈ ಮಂದಿಯಿಂದ ನಮ್ಮ ಸಮಾಜದ ಭವಿಷತ್ತನ್ನು ಕತ್ತಲು ಕವಿಯುತ್ತಿದೆ.

ವ್ಯಕ್ತಿ ಸಮಾಜಗಳು ಪರಸ್ಪರಪೂರಕಗಳಾಗಿವೆ. ಆದರೆ ಕೆಲವೊಮ್ಮೆ ಈ ಪೂರಕಗಳೇ ಪರಸ್ಪರ ಮಾರಕಗಳಾಗಿ ಪರಿಣಮಿಸುತ್ತವೆ. ಇದಕ್ಕೆ ಕಾರಣ ಎರಡು. ಒಂದು ಪರಸ್ಪರ ಅರಿತುಕೊಳ್ಳದಿರುವದು. ಇನ್ನೊಂದು ಒಂದು ಇನ್ನೊಂದರಿಂದ ತನ್ನ ಸ್ವಾರ್ಥವನ್ನು ಸಾಧಿಸಿಕೊಳ್ಳಲೆಸುವುದು ಹೀಗೆ ಅರಿಯದೆ ಅಜ್ಞಾನದಿಂದ ಮತ್ತು ಅರಿತು ಸ್ವಾರ್ಥವಿ – ಪರಸ್ಪರ ಪೂರಕಗಳಾದ ಈ ವ್ಯಕ್ತಿ ಸಮಾಜಗಳು ಪರಸ್ಪರ ಮಾರಕಗಳಾಗಿ ಪರಿಣಮಿಸುತ್ತವೆ. ತತ್ವನಿಷ್ಠನು ಈ ಎರಡೂ ಒಗೆಯ ವಿರೋಧಗಳನ್ನು ಎದುರಿಸಿ ಮುನ್ನುಗ್ಗಬೇಕಾಗುತ್ತದೆ.

ವ್ಯಕ್ತಿ ಸಮಾಜಕ್ಕೆ ವೈರಿಯಾಗುವಾಗ ಸಮಾಜದ ಅಜ್ಞಾನದಿಂದ ಅಡ್ಡಹಾದಿ ಹಿಡಿಯುತ್ತಾರೆ. ಕೆಲವೊಮ್ಮೆ ಸಜ್ಜನರಿಗೂ ಸಂಕಟಕ್ಕೆಡ್ಡುಕೊಟ್ಟುಕೊಳ್ಳುತ್ತದೆ. ಸಮಾಜ ವ್ಯಕ್ತಿಗೆ ವೈರಿಯಾಗುವಾಗ ವ್ಯಕ್ತಿ ನುಗ್ಗುನುಂಗಾಗುತ್ತಾನೆ. ಇಲ್ಲಿ ಹೇಳ ಹೊರಟಿರುವುದು ಸಮಾಜದ ಕತೆಯನ್ನಲ್ಲ, ವ್ಯಕ್ತಿಯ ಗತಿಯನ್ನು.

ತತ್ವನಿಷ್ಠನಾಗಿ ಬಾಳಬೇಕೆಂದು ಬಯಸಿ ಅದರ್ಶದೆಡೆಗೆ ಹೆಜ್ಜೆಯಿಕ್ಕಹತ್ತಿದ ಮೊದಮೊದಲಲ್ಲಿ ವ್ಯಕ್ತಿಯನ್ನು ಸಮಾಜ ಗುರುತಿಸುವುದೇ ಇಲ್ಲ, ಆದರೆ ಮೆಲ್ಲಮೆಲ್ಲನೆ ವ್ಯಕ್ತಿ ಸಮಾಜವನ್ನು ಏರಿಹೋಗುತ್ತಿರುವಾಗ ಸಮಾಜದ ಬಸಿರಲ್ಲಿ ಅಸೂಯೆಯ ಕಿಚ್ಚು ತಲೆಯೆತ್ತುತ್ತದೆ. ಆಗ ವ್ಯಕ್ತಿಯ ಮೇಲೆ ಆದರ ಪ್ರತಿಕ್ರಿಯೆ ವ್ಯಂಗ ಮತ್ತು ಕೊಂಕು ನುಡಿಗಳ ರೂಪದಲ್ಲಿ ವ್ಯಕ್ತವಾಗುತ್ತದೆ. ಇದು ತತ್ವನಿಷ್ಠ ವ್ಯಕ್ತಿಗೆ ಬರುವ ಮೊದಲ ಪರೀಕ್ಷೆ. ಸಾಮಾನ್ಯರು ಇಲ್ಲೇ ಸೋಲುತ್ತಾರೆ. ಆ ಕಹುನುಡಿಗಳನ್ನು ಕಡೆಗಣಿಸಿ ವ್ಯಕ್ತಿ ಮುಂದುವಂದನೆಂದರೆ ಸಮಾಜದ ಆಸೂಯೆ ಬಲಿಯುತ್ತದೆ. ಅದರೊಡನೆ ಸಮಾಜ ಸೇರಿಕೊಳ್ಳುತ್ತದೆ. ಈ ಘಟ್ಟದಲ್ಲಿ ಸಮಾಜ ಸಿಟ್ಟನ್ನು ಹೊರತೋರಿಸದೆ, ತನ್ನ ಕೊಂಕು ನುಡಿಗಳನ್ನು ಲಕ್ಷಿಸದೆ ಮುನ್ನುಗ್ಗುತ್ತಿರುವ ವ್ಯಕ್ತಿಯನ್ನು ಉಪಾಯದಿಂದ ಹಿಂದೆಳೆಯಲು ಯತ್ನಿಸುತ್ತದೆ. ಅಧಿಕಾರ ಐಶ್ವರ್ಯ, ಕೀರ್ತಿಗಳ ಆಸೆಯನ್ನು ತೋರಿಸುತ್ತದೆ. ಇದು ತತ್ವನಿಷ್ಠನ ಇನ್ನೊಂದು ಪರೀಕ್ಷಾಕಾಲ. ಕೆಚ್ಚಿನ ಮಂದಿ ಇಲ್ಲಿ ಜಾರಿಬೀಳುತ್ತಾರೆ; ತತ್ವಚ್ಯುತರಾಗುತ್ತಾರೆ ಈ ಮಾಯೆಯು ಬಂಗಾರದ ಬಲೆಯಲ್ಲಿ ಬಿದ್ದು ಬಿಡಿಸಿಕೊಳ್ಳಲಾರದೆ ಹುಳುವಿನಂತೆ ಒದ್ದಾಡಿಕೊಂಡಿರುತ್ತಾರೆ. ಆಶ್ಚರ್ಯವೆಂದರೆ ಆ ಮಂದಿ ಆ ಮಾಯೆಯ ಮೋಹಕ ಬಲೆಯೇ ಅತ್ಯಂತ ಸುಖದ ನಿಲ್ದಾಣವೆಂದು ಭ್ರಮಿಸಿಕೊಂಡಿರುವುದು ವಿವೇಕ ವಿಶ್ವಾಸಗಳ ಸಹಾಯದಿಂದ ಈ ಬಲೆಯನ್ನೂ ಹರಿದೊಗೆದು ವ್ಯಕ್ತಿ ಮುಂದುವಂದನೆಂದರೆ ಸಮಾಜದ ಒಳಗಿಂದೊಳಗೆ ಉರಿಯುತ್ತಿದ್ದ ದೋಷದ ಕಿಡಿ ಭಗ್ನೆಂದು ಉರಿಯ ಹತ್ತಿ ಹೊಗೂ ನಾಲಗೆ ನೀಡುತ್ತದೆ. ಈ ಉರಿ ಸ್ವಾರ್ಥ ಸೂರಿತ ಅಸೂಯೆಯ ಇನ್ನೊಂದು ರೂಪ ಆಷ್ಟೆ! ಈ ಮಟ್ಟದಲ್ಲಿ ಸಮಾಜ ತನ್ನ ಸರ್ವಶಕ್ತಿಯಿಂದ ವ್ಯಕ್ತಿಯನ್ನು ಹಿಂದೆಳೆಯಲು ಯತ್ನಿಸುತ್ತದೆ. ಇದು ವ್ಯಕ್ತಿಪ್ರಜ್ಞೋದಯದ ಕಾಲ! ಬಹಳಷ್ಟು ಮಂದಿ ಇಲ್ಲಿ ಸೋತು ಹಿಂದಿರುಗುತ್ತಾರೆ. ಮುಂದೆ ಅವರ ಬಾಯಿಯಿಂದ ಬರುವುದು ಗರಕಸ ಮಾತ್ರ ಈ ಮಂದಿ ಭೂತಕಾಲದಲ್ಲಿ ಸಜೀವವಾಗಿ ಬಾಳಿದ್ದವರು ಪ್ರಸ್ತುತಕಾಲ ಅವರಿಗೆ ಅರ್ಥಹೀನ; ವ್ಯರ್ಥ; ಆದರೆ ವಿವೇಕವುಳ್ಳ ಕೆಚ್ಚೆದೆಯ ವ್ಯಕ್ತಿಮಾತ್ರ ಇಲ್ಲಿ ಸೋಲನ್ನೊಪ್ಪಿಕೊಳ್ಳದೆ ಆವಿಚಲಿತ ಧೈರ್ಯದಿಂದ ಸಮಾಜವೊಡನೆ ಸೆಣಸಿ ಅನಂತಶ್ರದ್ಧೆ ಮತ್ತು ಅಪರಿಮಿತ ಉತ್ಸಾಹದೊಡನೆ ಮುನ್ನುಗ್ಗಲೆಳಸುತ್ತಾನೆ. ಈ ಮಹಾರಣದಲ್ಲಿ ಕೆಲಮಂದಿ ಹೋರಾಡುತ್ತಾ ಹೋರಾಡುತ್ತಾ ಸಾಯುತ್ತಾರೆ. ಇನ್ನು ಕೆಲಮಂದಿ ಸಮಾಜವನ್ನು ಸೋಲಿಸಿ ಮುಂದೆ ಸಾಗುತ್ತಾರೆ. ಈ ಮಹಾರಣದಲ್ಲಿ–ಧರ್ಮಯುದ್ಧದಲ್ಲಿ ಹೋರಾಡಿ ಸತ್ತ ಆ ವ್ಯಕ್ತಿಗೆ ವಿ ರಿದ್ದಾಗ. ಆತ ಇತಿಹಾಸ

(ಸೇ ಪು.ಗೆ ನೋಡಿರಿ)

Our Pigmy Deposit Scheme

..... brings our bank to your door. You may save as small a sum as annas two Our collector will call on you every day to receive it.

At the rate of annas two per day you save Rs. 250/- in 7 years because we allow interest at 3½% per annum At the rate of Re. 1/- per day your Savings are Rs. 2,800/- in 7 years At the rate of Rs. 10/- it is Rs. 28,000/- Come in to-day and join the band of **Prudent Prosperous Pigmy People.**

The Canara Industrial & Banking Syndicate Ltd.

Estd: 1925. H. O: UDIPI.

ಮಾನವನ ಸರ್ವ ಸಂಪತ್ತುಗಳಲ್ಲಿ ಹಿರಿದಾದುದೆಂದರೆ ಆತನ ಜ್ಞಾನ

ನ್ಯಾಯವಿಧಾಯಕ ಸಭೆಯಲ್ಲಿ ಶಾಸನಗಳನ್ನು ತಯಾರಿಸುವದು ಬಹು ಸುಲಭದ ಕೆಲಸವಲ್ಲ. ಒಂದು ಮಸೂದೆಯು ಶಾಸನರೂಪಕ್ಕೆ ಬರಬೇಕಾದರೆ ದೀರ್ಘ ಕಾಲವು ಬೇಕಾಗುತ್ತದೆ ಮತ್ತು ಅನೇಕ ಕೋದಂಡಗಳಿಂದ ಪಾರಾಗಬೇಕಾಗುತ್ತದೆ. ಸಭೆಗಳಲ್ಲಿ ಎರಡು ಮೂರು ಸಲ ಮಂಜೂರಾಗಬೇಕು ಮತ್ತು ಅವುಗಳು ಸವಿತಗಳಲ್ಲಿ ಪರಿಶೀಲಿಸಲ್ಪಡಬೇಕು. ಸದಸ್ಯರ ಟೀಕೆಗಳಿಗೊಳಪಡಬೇಕು. ಅವರ ಕಿದ್ದುಪಡಿ ದ.ರಸ್ತಿಗಳಿಗೆ ಸಿಲುಕಬೇಕು. ಆ ಕರ.ವಾಯ ಆರಸನ ಅಧ್ಯಕ್ಷನ ಸಹಾಯವನ್ನು ಪಡೆದು ಶಾಸನವಾಗುವದು. ಒಂದು ಮಸೂದೆಯು ವಿರೋಧ ಪಕ್ಷದವರ ಸಹಾನುಭೂತಿಯನ್ನು ಪಡದು ಅವಸರದಿಂದ ಮಂಜೂರಾದರೂ ಅದು ಬಹುರಂಗವಾಗಿ ಜನರ ಅವಗಾಹನೆಗೆ ಬಂದು ಬರ.ತ್ತದೆ. ಒಂದು ವೇಳೆ ಜನರ ವಿರೋಧವಿದ್ದ ಮಸೂದೆಯು ಮಂಜೂರಾದರೂ ಅವರದನ್ನು ಚಡೀಪಿ ಟೀಕೆ ಮಾಡಿ ಮುಂದೆ ಇಂಥಾ ಸಂದರ್ಭದಲ್ಲಿ ಕಾನೇನು ಮಾಡಬೇಕೆಂತ ಅಲೋಚಿಸಬಹುದು ಮತ್ತು ಪ್ರಕೃತ ಎದುರು ಬಂದ ಮಸೂದೆಯ ಪರಿಣಾಮ ಕೈದು ನೋಡಬಹುದು. ಕಾರ್ಯನಿರ್ವಾಹಕ ಮಂಡಲಿಯ ಕೆಲಸವು ಹೀಗಲ್ಲ. ಅದು ಯಾರ ಅತಂಕವೂ ಇಲ್ಲದೆ ತರ್ಕ್ಷಣವೇ ಆಗುವದು. ಇವರ ಕಾರ್ಯದ ಪರಿಣಾಮವು ಬಹು ದೀರ್ಘ ಕಾಲದ ವರೆಗೆ ಕಾಣಬಹುದಾದರೂ ಕೆಲಸವು ಮಾತ್ರ ಯಾರಿಗೂ ಗೊತ್ತಾಗದೆ ಪಕ್ಕನೆ ಆಗಿ ಬಿಡುವದು. ಒಬ್ಬ ಮಂತ್ರಿಯು ಅರೆಗಳಿಗೆಯೊಳಗೆ ಪರರಾಷ್ಟ್ರದೊಡನೆ ಯುದ್ಧ ಹೂಡಬಹುದು. ಎಂಡು ಮಹಾಯುದ್ಧಗಳು ಇದೇ ರೀತಿಯಲ್ಲುಂಟಾದವು. ಯುದ್ಧವಾರಂಭಿಸಿದ ಈ ಜನರಿಗೆ ಒಂದು ಚಿಕ್ಕಾಸಿನ ನಷ್ಟವೂ ಇಲ್ಲ ಮತ್ತು ಯುದ್ಧದಲ್ಲಿ ಒಂದು ದಿವಸವಾದರೂ ಭಂಗವಪಡಲಿಲ್ಲ. ಬಿಸ್ಮಾರ್ಕನು ಕೌಂಟ್ Moltke ಮತ್ತಿತರ ಸೈನ್ಯಾಧಿಕಾರಿಗಳೊಟ್ಟಿಗೆ ಊಟಕ್ಕೆ ಕುಳಿತಾಗ ಕೈಸರನು ಕಳುಹಿಸಿದ ಎನ್ನೆಸ್ ತಂತಿಯನ್ನು ತೆದ್ದಿಪ್ರಕಟಿಸಿದುದ್ದಕ್ಕಾಗಿ ಫ್ರಾಂಕೋ ಜರ್ಮನ್ ಯುದ್ಧಕ್ಕೆ ಕಾರಣವಾಗಿದೆ. ಕೈಸರನು ಎಮ್ಸ್ ಟೆಲಿಗ್ರಾವನ್ನು ಇದ್ದಂತೆಯೇ ಅಥವಾ ಅನ ಚಿತ ಭಾಗವನ್ನು ಪ್ರಕಟಿಸಬಹುದೆಂದು ತಿಳಿದಿದ್ದನು. ಕೂಡಲೇ ತನಗೆ ಎಡೆಸಿಕ್ಕಿತೆಂದು ತಿಳಿದು ಕೌಂಟ್ ಮೋಲ್ಟನೊಡನೆ ಸೈನ್ಯದ ಕುರಿತು ವಿಚಾರಿಸಲಾಗಿ ಆತನು ಕೂಡಲೇ ಯುದ್ಧ ಹೂಡಿದರೆ ಜಯನಿಶ್ಚಯವೆಂದು ತಿಳಿಸಿದನು. ಬಿಸ್ಮಾರ್ಕನು ತಂತಿಯಲ್ಲಿರುವ ಕೆಲವು ಕಟ್ಟಗಳನ್ನು ತೆಗೆದು ಹಾಕಿ ಅದಕ್ಕೆ ದೇವಿ ಅರ್ಥವಾಗುವಂತೆ ಮಾಡಿ ಪ್ರಕಟಿಸಿದನು. ಇದರಿಂದ ಜನರು ಉದ್ರೇಗಗೊಂಡು ಸಿಟ್ಟಾದರು. ಹೀಗಾಗಿ ಯುದ್ಧವು ಆರಂಭವಾಯಿತು. ಹೀಗಲ್ಲದೆ ಇನ್ನೊಂದು ರೂಪದಲ್ಲಿಯೂ ಅನಾಹುತ ತರಬಹುದು. ಒಂದು ದೊಡ್ಡ ಯೋಜನೆಯನ್ನು ದುಡುಕುತನದಿಂದ ಆರಂಭಿಸಿ ಕೋಟಿಗಟ್ಟಲೆ ಹಣವನ್ನು ನಿರರ್ಥಕವಾಗಿ ವ್ಯಯಿಸಬಹುದು. ಇಂಥಾ ಪ್ರಸಂಗ ನಮ್ಮ ದೇಶದಲ್ಲಿ ಅನೇಕ ನಡೆದಿವೆ. ಇವುಗಳೆಲ್ಲ ಜನರ ತಿಳುವಳಿಕೆಗೆ ಬರುವದು ಇವರದು ದುಷ್ಪರಿಣಾಮಗಳು

ಪ್ರಜಾಸತ್ತೆ

ಕಾರ್ಯನಿರ್ವಾಹಕ ಮಂಡಳಿ
THE EXECUTIVE

ಬೆಳಕಿಗೆ ಬಂದಮೇಲೆಯೇ ಸರಿ ಚುನಾಯಿತರಾದ ಸದಸ್ಯರ ಕೆಚ್ಚಿದೆಯುತನಕ್ಕೆ ಗಡಿಮಿತಿಯಿಲ್ಲವೆಂದು ವಾಲ್ಟ್‌ಹ್ವಿಟ್ ಮೇನರು ಹೇಳಿದುದು ("The Never-ending audacity of elected person") ಪ್ರಜಾಸತ್ತೆಗೆ ಒಂದು ಕಟ್ಟು ಯಾಗಿರುವದು. ಕಾರ್ಯನಿರ್ವಾಹಕರನ್ನು ಅಂಕೆಯೊಳಗಿರಿಸಿಕೊಳ್ಳುವದು ಪ್ರಜೆಗಳಿಗೆ ಮುಳ್ಳಿನ ದಾರಿಯಾಗಿರುವದು.

ಪ್ರಜಾಮತ ಸರಕಾರಗಳಲ್ಲಿ ರೂಢಿಯಾಗಿರುವ ತತ್ವಗಳೇನೆಂದರೆ ಮಂತ್ರಿಗಳು ಶಾಸನ ಸಭೆಯ ವಿಶ್ವಾಸಕ್ಕೊಂದಿ ಅದಕ್ಕೆ ಜವಾಬ್ದಾರರಾಗಿರುವದು; ಶಾಸನ ಸಭೆಯು ಜನರ ನಂಬಿಕೆಗುನ್ನು ಹೊಂದಿ ಅವರಿಗೆ ಜವಾಬ್ದಾರಿಯಾಗಿವದು; ಇದೆಲ್ಲಾ ಹಿತಕರವಾದ ತತ್ವವಾದರೂ ಕಾರ್ಯಾಚರಣೆಯಲ್ಲಿ ಇಷ್ಟು ಸುಲಭವಲ್ಲವೆಂಬ ಅನುಭವವು ನಮಗಿದೆ. ನ್ಯಾಯವಿಧಾಯಕ ಸಭೆಗೂ ಕಾರ್ಯನಿರ್ವಾಹಕ ಮಂಡಲಿಗೂ ಸರಪಣಿಯ ಗ.ಣಿಸಿನಂತಿರುವವನೇ ಮಂತ್ರಿಯಾಗಿರುವನು. ಆತನು ಸಭೆಯ ಒಬ್ಬ ಸದಸ್ಯನೂ ಕಾರ್ಯನಿರ್ವಾಹಕ ಮಂಡಲಿಯು ಒಂದು ಇಬಾಬೆಯ ಮುಖ್ಯಸ್ಥನೂ ಆಗಿರುವನು. ಆದ್ದರಿಂದ ಮಂತ್ರಿಯು ಸ್ವಿಜರ್‌ಲೆಂಡಿನಲ್ಲಿರುವಂತೆ ನೇರವಾಗಿ ಚುನಾಯಿತನಾದವನಲ್ಲ. ಪೂರ್ವವರ್ತಿಯಿಂದ ಚುನಾಯಿತನಾದವನು. (Elected from a remote degree) ಆತನನ್ನು ಮುಖ್ಯಮಂತ್ರಿಯು ನೇಮಕ ಮಾಡುವದಾಗಿದೆ. ಆತನು ಶಾಸನ ಸಭೆಯ ಬಹುಮತದ ಪಕ್ಷದ ಮುಂದಾಳು. ಹೀಗೆ ಆತನು ಮುಂದಾಳತನವೆಂದು ಸ್ಪಷ್ಟ ವಿವರಿಸಲು ಸಾಧ್ಯವಿಲ್ಲ. ಅದನ್ನು ಶೋಧಿಸಲು ನಾವು ಹೋದರೆ ನದಿಮೂಲ ಹುಡುಕಿದಂತೆಯೇ ಸರಿ. ಮತ್ತು ಪ್ರಜಾಸತ್ತೆಯ ಕೂಸಾಹುವೇ ತಪ್ಪು ಹೋಗುವದು. ಮಂತ್ರಿಯು ಬಹುಮತದಿಂದ ಚುನಾಯಿತನಾದ ಪಕ್ಷದ ಪರವಾಗಿ ನ್ಯಾಯವಾರ್ಗದಿಂದಾಗಲೀ ಕಟ್ಟುಮಾರ್ಗದಿಂದಾಗಲೀ ಸಭೆಯ ಸದಸ್ಯನಾಗಿ ಆರಿಸಿಬಂದ ಕಾರಣ ಆತನನ್ನು ಜನಮತದಿಂದ ಆರಿಸಿದಂತಾಗಿದೆ. ಆತನು ಯಾರೇ ಆಗಲಿ ಎಲ್ಲಿಂದಲೇ ಬರಲಿ ನಮಗೆ ವ್ಯಕ್ತಿಯು ಬೇಕಾಗಿಲ್ಲ ಮಸೂದೆಗಳೇ ಬೇಕಾಗಿವೆ. ತನ್ನ ಇಲಾಖೆಯ ಕಾರ್ಯಗಳ ಬಗೆ ಶಾಸನ ಸಭೆಗೆ ಜವಾಬ್ದಾರನಾದರೆ ಸಾಕು

ಈ ಜವಾಬ್ದಾರಿಕೆಯನ್ನು ಹೇರುವದ ಹೇಗೆ? ಸದಸ್ಯರು ಮಂತ್ರಿಯು ಶಾಸಿಯ ಕಾರ್ಯಗಳ ಕುರಿತು ಆತನ ವರ್ತನೆಗಳ ಕುರಿತು ಸಭೆಯಲ್ಲಿ ಪ್ರಶ್ನೆಗಳನ್ನು ಕೇಳಬಹುದು. ಕೇಟಕಾನನಾದ ಸದಸ್ಯನು ಬೇಜವಾಬ್ದಾರಿ ಪ್ರಶ್ನೆಗಳಿಂದ ಕೋಟಲೆ ಕೊಡುವವನಾಗಿ ಕಾಣಿಸಿಕೊಳ್ಳಬಹುದು. ಇಂಥವರು ನಮ್ಮ ಲೋಕಸಭೆಯಲ್ಲಿ ಸಹ ಇರುವರು. ಮಂತ್ರಿಗಳು ತಮ್ಮ ಇಲಾಖೆಯ ಸಣ್ಣದೊಡ್ಡ ತಪ್ಪುಗಳು ಮತ್ತು ದುರ್ವಿನಿಯೆಗಳು ಕುರಿತು ಛಲಹಿಡಿದು ಕೇಳುವ ಪ್ರಶ್ನೆಗಳನ್ನು ಉತ್ತರಿಸಲು ಭಯಪಡುವರು. ಸವಾಲುಗಳನ್ನು ಉತ್ತರಿಸುವಾಗ ಮಂತ್ರಿಗಳು ಕೌಶಲ್ಯದಿಂದ, ದಕ್ಷತೆಯಿಂದ ಮತ್ತು ತಮ್ಮ ರಾಜತಂತ್ರ ಪ್ರವೀಣತೆಯಿಂದ ಸಮರ್ಥಕವಾದ ಉತ್ತರ ಕೊಡಲಾರದ ಸವಾಲುಗಳಿಂದ ತಪ್ಪಿಸಿಕೊಳ್ಳುವರು. ಪ್ರಶ್ನೋತ್ತರಗಳು ಪತ್ರಿಕೆಗಳಲ್ಲಿ ಪ್ರಕಟವಾತ್ತವು. ಎದುರು ಕಡೆಯ ವರ ಗೋಚರಕ್ಕೆ ಮಾತ್ರವಲ್ಲದೆ ಜಾತೀಯರಾದವರ ಮತ್ತು ದೇಸದಿಂದಿರುವವರ ತೀಣವಳಿಕೆಗೆ ಸಹ ಬರುವದು. ಕಾಲಕ್ರಮದ ಹಾಗೆ ಮಂತ್ರಿಗಳು ಕಷ್ಟದ ಮತ್ತು ಉಭಯಸಂಕಟದ ಸವಾಲುಗಳಿಗೆ ಉತ್ತರಕೊಡುವುದರ ಬದಲಿಗೆ ಮೌನವೃತವನ್ನಾಚರಿಸಿ ತಪ್ಪಿಸಿಕೊಳ್ಳುವರು. ಇನ್ನೊಂದು ರೀತಿಯಲ್ಲಿ ಅಂಕೆಯೊಳಗಿರಿಸಿಕೊಳ್ಳುವದು ಹೇಗೆಂದರೆ ಆತನ ತಲಬನಲ್ಲಿ ಕಾತರಮಾಡುವದಾಗಿದೆ. ಇದಕ್ಕೆ ಆಕ್ಷೇಪಣೆಯ ಮತನವನ್ನವರು- (Vote of censure) ಒಬ್ಬ ಮಂತ್ರಿಯ.ಮೇಲೆ ಆಕ್ಷೇಪಣೆಯು ರಂಗಾವ್ಯ ಮಂಜೂರಾದರೆ ಇಡೀ ಮಂತ್ರಿಮಂಡಲವೇ ರಾಜಿಕೊಡಬೇಕಾಗುತ್ತದೆ. ಹೊಸಚುನಾವಣೆಯಾಗಬೇಕಾಗುತ್ತದೆ ಇದಕ್ಕೆ ಪಾರ್ಲಿಮೆಂಟರಿ ಅಥವಾ ಕೆಬಿನೆಟ್ಟ್ ಪದ್ಧತಿ ಎನ್ನುವರು. ಮಂತ್ರಿಗಳೆಲ್ಲರೂ ಸಭೆಗೆ ಸಾಮೂಹಿಕ ಜವಾಬ್ದಾರರಾದುದರಿಂದ ಒಬ್ಬನ ತಪ್ಪಿಗಾಗಿ ಎಲ್ಲರೂ ತಲೆಕೊಡಬೇಕಾಗುತ್ತದೆ. ಈ ಎರಡು ಮಹಾ ಯುದ್ಧಗಳ ಸಮಯ ಇಂಗ್ಲಾಂಡಿನಲ್ಲಿ ಕೆಬಿನೆಟ್ ಪದ್ಧತಿಯು ಚ್ಯಾರಿಯಟ್ಟಲ್ಲವೆಂದೇ ಹೇಳಬೇಕು. ಆಕ್ಷೇಪಣೆಯ ರಂಗವು ದೊಡ್ಡ ಸಂಗತಿ. ಹೊಸ ಜನಾವಣೆಯಾಗಬೇಕಾದ್ದರಿಂದ ಕುಂಟಾ ಕರ್ಚನೆಷ್ಟಗಳವೆ. ಸದಸ್ಯರು ಇಂಥಾ ಪ್ರಸಂಗವದಗದಂತೆ ನೋಡಿಕೊಳ್ಳಬೇಕಾದ್ದರಿಂದ ಚುಪ್! ಎಂದು ಸದ್ದಿಲ್ಲದೆ ಆಡಗಿಸುವ ಪ್ರಯತ್ನ ಮಾಡುವರು. ಅವಿಶ್ವಾಸದ ರಂಗವು ಬಂದೇತಾದರೆ ಯಾವ ಮಂತ್ರಿಯುಮೇಲೆ ಆರೋಪ ಬಂದದ್ದೋ ಆತನ ಗೌರವವು ಕಡಮೆಯಾಗುವದು. ಆದರೆ ಹೆಚ್ಚು ವೆಟ್ಟು ತಂದು ಉಳುವ ಎತ್ತುಗಳು ಪಟ್ಟಗೆ ಮೈ ಓರೆ ಮಾಡುವಂತೆ ಮಂತ್ರಿಗಳ ಚರ್ಮವು ದಪ್ಪವಾಗಿದೆ. ಆಕ್ಷೇಪಣೆಯ ರಂಗವು ಮಂಜೂರಾಗುವದು ಕಡಮೆ. ಮಂತ್ರಿಗಳು ಮಾಡುವ ತಪ್ಪುಗಳನ್ನು ಅಥವಾ ಅವರ ಅಸಾಮರ್ಥ್ಯತೆಯನ್ನು ನಿಲ್ಲಿಸಲು ಒಂದು ಬಲವಾದ ಹಾದಿಯಲ್ಲ.

—ಸಿ. ಯಚ್. ಶೆಟ್ಟಿ, ಬಿ. ಎ.

[ಮುಂದರಿಯುವುದು]

"ನಿಮ್ಮ ಕಂಪೆನಿಯಲ್ಲಿ ವಿಮಾ ಪತ್ರದಾರರ ಹಿತಗಳಿಗೆ ಭದ್ರತೆ ತುಂಬಾ ಇರುವುದಲ್ಲದೆ ಅವರಿಗೆ ಹೆಚ್ಚಿನ ಪ್ರಮಾಣದಲ್ಲಿ ಲಾಭವೂ ಸಿಗುವುದು."

—ಶ್ರೀ ಕೆ ಎ. ಪಂಡಿತ್, B Sc, F. I. A.
(ಸಲಹೆಗಾರ ವಿಮಾಗಣಕರು)

"ಕೆನರಾ ಮ್ಯೂಚುವಲ್" ಕಂಪೆನಿಯ ಎಲ್ಲ ವ್ಯವಹಾರಗಳು ಹೀಗೆ ಚೆಲೋದಾಗಿ ನಡೆಸಲ್ಪಡುವುದರಿಂದ ಈ ಕಂಪೆನಿಯು ಜನರ ವಿಶ್ವಾಸಾದರಗಳಿಗೆ ಪಾತ್ರವಾಗಿದೆ. ಕಂಪೆನಿಯ ಚತುರ್ಥ ವಿಮಾಗಣನೆ (Valuation)ಯಂತೆ, ಆಜೀವ (Whole Life) ಮತ್ತು ಉಂಬಳಿ (Endowment) ವಿಮೆಗಳಿಗೆ ಶ್ರೀಮಂತವಾಗಿ ಸಾಲಿಯಾನ ಸಾವಿರಕ್ಕೆ ರೂ. 12 ಮತ್ತು ರೂ. 9ರಂತೆ ಬೋನಸನು ಹಂಚಲಾಗುವುದು. ಇದೇ ದರದಲ್ಲಿ ನಡುಗಾಲದ (Interim) ಬೋನಸನ್ನು ಸಹ ಇಡಲಾಗಿದೆ.

— ದಿ ಕೆನರಾ ಮ್ಯೂಚುವಲ್ —
ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,
ಪ್ರಧಾನ ಕಾರ್ಯಾಲಯಃ ಉಡುಪಿ, ದ. ಭಾರತ.

ಝಂಡುರನರ ZANDU'S
ಕೇಸರಿ ಜೀವನ KESARI JIVAN
ವನ್ನು ಉಪಯೋಗಿಸಲು ಒತ್ತಾಯಿಸಿರಿ.
ಕೆಮ್ಮು, ನೆಗಡಿ, ಆಸ್ತಮ, ಧ್ವನಿ ಒಡೆಯುವಿಕೆ ಮೊದಲಾದುವುಗಳಿಗೆ ಅತ್ಯುತ್ತಮ ಔಷಧಿ.
ಕೇಸರಿ ಜೀವನವು ತಾರುಣ್ಯವನ್ನೂ, ನವಚೈತನ್ಯವನ್ನೂ ಉಂಟು ಮಾಡಿ ದೇಹದ ಅಂಗಾಂಗಗಳನ್ನೂ ಪುಷ್ಟಿಯಾಗಿ ಮಾಡಬಲ್ಲುದು ಮೆದುಳಿನ ನಿತ್ರಾಣವಿರುವ ಅಧ್ಯಾಪಕರಿಗೂ, ವಿದ್ಯಾರ್ಥಿಗಳಿಗೂ, ವಕೀಲರಿಗೂ, ಜಡ್ಜರಿಗೂ, ಹೆಚ್ಚಿಗೆ ಸರ್ವರಿಗೂ ಉತ್ತಮ ಪರಿಣಾಮಕಾರಿ ಔಷಧ.
ಕೇಸರಿ ಜೀವನ ದೊರಕುವ ಸ್ಥಳಗಳು:-
1. ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್‌ಸ್ಟಿಟ್ಯೂಟ್, ಲಿ., ಉಡುಪಿ,
2. ವಿ. ವಿ ಶೆಣೈ, ಕೆಮಿಸ್ಟ್ಸ್, ಕಾರ್ಕಳ, 3. ಕಾ ಕಂಪೆನಿ, ಹುಂಪನಕಟ್ಟೆ, ಮಂಗಳೂರು. ಅಥವಾ ಕೆಳಗಿನ ಸೋಲ್ ಏಜಂಟರಲ್ಲಿ:—
ZANDU
ದಾನೋದರ್ ಎಂಡ್ ಕೊ.
113, ನ್ಯಾನಿಯಪ್ಪ ನಾಯಕನ್ ಸ್ಟ್ರೀಟ್,
ಪಿ. ಓ ಮದ್ರಾಸು.

ಬರ್ಫ ಕಂಟ್ರೋಲ್ ಸುಲಭ ಸಾಧ್ಯವಿದೆ.
ಅಸಾಯವಿಲ್ಲ, 100% ಖಾತ್ರಿ ಗ್ಯಾರಂಟಿಗೆ
ರೂ. 3-8-0 ಹೆಂಗಸರಿಗೆ ರೂ. 5-8-0
PERUMAL TRADERS
Near V- M- C. A. Madurai

[೧ನೇ ಪುಟದಿಂದ ಮುಂದುವರಿದ್ದು]

ಬಾಗಸದಲ್ಲಿ ಅಳಿಯದುಳಿಯುವ ನಕ್ಷತ್ರ ಆತ ಮುಂದಿನ ಮುಂದಿಗೆ ಮಾರ್ಗದರ್ಶಕ ಸ್ಫೂರ್ತಿಯ ಬತ್ತಿದ ಬುಗ್ಗೆ! ಈ ಮಹಾರಣದಲ್ಲಿ ಸಮಾಜವನ್ನು ಸೋಲಿಸಿ ಮುನ್ನುಗ್ಗಿದ ವ್ಯಕ್ತಿಯ ಬಾಳಿನಲ್ಲಂತೂ ಆನಂತಾನಂದವನ್ನು ಅಸಂಖ್ಯವಾಗಿ ರೂಪುಗೊಳ್ಳುತ್ತದೆ. ಬಾಳಗುರಿಯ ಹಾದಿಯಲ್ಲಿ ಉಬ್ಬಿದೆದ್ದೊಡನೆ ಸಾಗುತ್ತದೆ. ಇಲ್ಲಿ ಒಂದು ಪವಾಡವು ಜರಗುತ್ತದೆ. ಇಷ್ಟರವರೆಗೆ ವ್ಯಕ್ತಿಯೊಡನೆ ಅವಿರತವಾಗಿ ಜಾಡಾಜಾಡಿ ಹೋರಾಡಿದ ಸಮಾಜ ಈ ಮಟ್ಟದಲ್ಲಿ ಆತನಿಗೆ ತಲೆವಾಗುತ್ತದೆ. ಮಾತ್ರವಲ್ಲ ಆತನನ್ನು ಪೂಜಿಸಿ ಆತನ ಬೆನ್ನಹಿಂದೆ ಸಾಗಬಯಸುತ್ತದೆ. ಇದೇ ತತ್ವನಿಷ್ಠೆಯ ಹಿರಿಮೆ! ಸತ್ಯನ್ಯಾಯಗಳ ಕೌತುಕ! ಹೀಗೆ ತತ್ವನಿಷ್ಠೆಗೆ ಮೊದಲು ಎದುರಾಗುವುದು ಅಪಮಾನ ಒದೆತಗಳು; ಕೊನೆಗೆ ಕೀರ್ತಿ ಸಮ್ಮಾನಗಳು! ಪ್ರಥಮದಲ್ಲಿ ಎದುರಾಗುವುದು ವಿಷದ ಬಟ್ಟಲು; ಕೊನೆಗೆ ಸಿಗುವುದು ಅಮೃತದ ಅಕ್ಷಯ ಸಾಗರ! ಹೀಗೆ ಮಾಯ, ಮೋಹ, ಮನಮೆರೆಗಳಾವುದಕ್ಕೂ ಬಲಿಬೀಳದೆ, ಸಮಾಜದೊಡನೆ ಅವಿರತವಾಗಿ, ಅವಿಶ್ರಾಂತವಾಗಿ ಹೋರಾಡಿ, ಗೆದ್ದು ಸಮಾಜವನ್ನೇ ತನ್ನ ಬೆನ್ನ ಹಿಂದೆ ನಡೆಸಿಕೊಂಡು ಹೋಗುವ ಭಾಗ್ಯ ಬಲಃಹಿರಿದು. ಅಂತಹ ಮಹಾತ್ಮರು ಶತ ಮಾನಕ್ಕೊಬ್ಬರು ಸಿಕ್ಕರೆ ಪುಣ್ಯ! ಆದರೂ ಈ ಅಲ್ಪ ಸಂಖ್ಯಾಕರಿ ಜಗತ್ತಿನ ಭೂತ, ವರ್ತಮಾನ ಭವಿಷ್ಯತ್ಪುಟಗಳನ್ನು ರೂಪಿಸುವವರು.

ತತ್ವನಿಷ್ಠನಾಗಿ ಬಾಳಬಯಸುವ ವ್ಯಕ್ತಿಗೆ ಅಂತಹ ಮಹಾತ್ಮರ ಹಾದಿಯೇ ದಿವ್ಯ ಪಥವಾಗುತ್ತದೆ- ಆದರೆ ಅದು ಅಂಧ ವಿಶ್ವಾಸದ ಅಡ್ಡಹಾದಿಯಲ್ಲ; ವಿಮರ್ಶೆ ವಿವೇಚನೆಗಳ ರಾಜಮಾರ್ಗ. ಈ ಹಾದಿಯಲ್ಲಿ ಸಾಗುವಾಗ ಆ ಮಹಾತ್ಮರ ಬಾಳಿನಲ್ಲಿ ಎದುರಾದ ಅನ್ನಬವಣೆಗಳು ಅದನ್ನು ಅವರು ಎದುರಿಸಿ ಮುನ್ನುಗ್ಗಿದ ರೀತಿ ನೀತಿಗಳ ನೆನಪೇ ಧೈರ್ಯೋತ್ಸಾಹಗಳ ಬತ್ತದ ಬುಗ್ಗೆಯನ್ನು ಹೃದಯ ಸರಸ್ಸಿನ ನೆಲ್ಲಿ ಪುಟಿಸುವ ದಿವ್ಯಸಾಧನವಾಗುತ್ತದೆ. ಈ ಬಲದಿಂದಲೇ ತತ್ವನಿಷ್ಠ ಸಮಾಜದ ಅಪಮಾನ ಒದೆತಗಳನ್ನು ನಗುಮೊಗದಿಂದ ಎದುರಿಸುತ್ತಾ ಗುರಿಯೆಡೆಗೆ ಮುನ್ನುಗ್ಗುತ್ತಾನೆ.

—ಏರ್ಯ ಲಕ್ಷ್ಮೀನಾರಾಯಣ ಆಳ್ವ

ಋತುಸ್ರಾವ ನಿಂತಿತು

'ಅಮಾರ್' ಬಿಲ್ಲೆಗಳನ್ನು ಉಪಯೋಗಿಸಿದರೆ ಬದಲಾಪ್ಪ ಋತುಸ್ರಾವವಾಗುವುದು. ಹತೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ದಾಧಳವುಯಿಲ್ಲ. ಸಾಮಿರಾರು ಹುಂದಿಗೆ ಪಾತ್ರ ಗುಣವಾಗಿದೆ- ಬೆಲೆ: ರೂ. 3-; ಸ್ಪೆಶ್ಯಲ್ ರೂ. 5- ಅಧಿಕಾರಿಳ ಸ್ಪೆಶ್ಯಲ್ ರೂ. 8-[ವಿ. ಪಿ ಪತ್ರೆರಾಷ್ಟ್ರ ಪ್ರತ್ಯೇಕ.]

Mis. P. DEVEE, F. DB. (N. J.)
Tollygunge CALCUTTA.
ಸ್ತ್ರೀಕಿಕ್ಕರು ಕಡಾಕಂಬಿನ, ನುಂಗಳೂರು

ಸಣ್ಣ ಬಂದರುಗಳ ಅಭಿವೃದ್ಧಿ

'ನಂಜುಡಯ್ಯ ಸಮಿತಿ' ವರದಿಯ ಸಾರ

ಕೇಂದ್ರ ಸರಕಾರದ ಬಜೆಟ್ ಅಧಿವೇಶನ ಕಾಲದಲ್ಲಿ ಸಣ್ಣ ಬಂದರುಗಳ ಬೆಳವಣಿಗೆಯ ಕಾರ್ಯಕ್ರಮಕ್ಕಾಗಿ ಕೆಲವೊಂದು ಹಣವನ್ನೂ ಮಂಜೂರು ಮಾಡಲು ಒಂದು ಮಸೂದೆ ಬರಲಿರುವುದು. ಸದ್ಯದ ಎಲ್ಲಾ ಬಂದರುಗಳಲ್ಲಿಯೂ ಅಯಾತ-ನಿರ್ಯಾತವಾಗುವ ಸರಕುಗಳ ಮೇಲೆ ಪ್ರತಿಯೊಂದು ಟನ್ನಿಗೆ ಒಂದು ಆಣೆಯಂತೆ ತೆರಿಗೆ ವಸೂಲು ಮಾಡುವುದು; ಹಾಗೂ ಸಮುದ್ರ ತೀರವುಳ್ಳ ರಾಜ್ಯಗಳ ಸರಕಾರಗಳಿಂದ, ಅಲ್ಲಲ್ಲಿಯ ಸುಟ್ಟ ಬಂದರುಗಳ ಬೆಳವಣಿಗೆಗಾಗಿ ಖರ್ಚು ಮಾಡುವ ಹಣದಲ್ಲಿ ಅರ್ಧಾಂಶವನ್ನು ಪಡೆಯುವುದು. ಇವೇ ಈ ಮಸೂದೆಯಲ್ಲಿಯ ಭಂಡವಳ ವ್ಯವಸ್ಥೆಯ ಮುಖ್ಯ ಕಲಮುಗಳೆಂದು ತಿಳಿದುಬರುತ್ತದೆ.

ಬಂದರುಗಳ ಅಭಿವೃದ್ಧಿಯ ಬಗ್ಗೆ ತಕ್ಕ ಸಲಹೆ-ಶಿಫಾರಸುಗಳನ್ನು ಸೂಚಿಸುವ ಸಲುವಾಗಿ ನೇಮಿಸಲ್ಪಟ್ಟ "ನಂಜುಂಡಯ್ಯ ಸಮಿತಿ"ಯ ವರದಿಯು ಕೇಂದ್ರ ಸರಕಾರಕ್ಕೆ ಒಪ್ಪಿಸಲ್ಪಟ್ಟಿರುತ್ತದೆ. ಈ ಮಸೂದೆಯ ರಚನೆಯನ್ನು ಮಾಡುವಲ್ಲಿ ಆ ವರದಿಯ ತೀರ್ಮಾನಗಳಲ್ಲಿ ಕೆಲವನ್ನು ಆಧಾರವಾಗಿಟ್ಟುಕೊಳ್ಳಲಾಗಿದೆ ಎಂದು ಹೇಳಲ್ಪಟ್ಟಿದೆ.

ಆ ವರದಿಯಲ್ಲಿ, ಸಣ್ಣ ಪುಟ್ಟ ಬಂದರುಗಳ ಆರ್ಥಿಕ ಪರಿಸ್ಥಿತಿಯು ಕೊಂಚ ನೀಯವಾಗಿರುವುದೆಂದೂ, ವಿವರಿಸಲ್ಪಟ್ಟಿದೆ. ಪುಟ್ಟ ಬಂದರುಗಳ ಅಭಿವೃದ್ಧಿ ಕಾರ್ಯಕ್ಕೆ (ಆಳ ಅಗಿಸುವ ಖರ್ಚನ್ನುಳಿದು) ಒಟ್ಟು ಎರಡೂವರೆ ಕೋಟಿ ರೂಪಾಯಿಯಷ್ಟು ವೆಚ್ಚವಾಗಬೇಕಾದೀತೆಂದು ವರದಿಯಲ್ಲಿ ಹೇಳಿದೆ. ಯಾವ್ಯಾವ ಪ್ರಾಂತಗಳಿಗೆ ಎಷ್ಟೆಷ್ಟು ವೆಚ್ಚ ಮಾಡತಕ್ಕದ್ದೆಂಬ ವಿವರ ಹೀಗಿದೆ.

ಮದ್ರಾಸ್	100	ಲಕ್ಷ ರೂಪಾಯಿ
ಬೊಂಬಾಯಿ	25	,,
ಸೌರಾಷ್ಟ್ರಕ್ಕೆ	37	,,
ತ್ರಿವಾಂಕೂರ್-ಕೊಚ್ಚಿನ್	15	,,
ಕಚ್ಚಕ್ಕೆ	25	,,
ಒರಿಸ್ಸಾ(ಉತ್ಕಳ)ಕ್ಕೆ	10	,,
ತುತ್ತುಕುಡಿಗೆ	18	,,
ಓಖಾಕ್ಕೆ	20	,,

ಒಟ್ಟು 250 ಲಕ್ಷ ರೂಪಾಯಿ

ಪುಟ್ಟ ಬಂದರುಗಳ ಅಭಿವೃದ್ಧಿ ಕಾರ್ಯಗಳ ಒಂದು ಪಂಚವಾರ್ಷಿಕ ಯೋಜನೆ ಮಾಡತಕ್ಕದ್ದೆಂದೂ, ಆ ಬಗ್ಗೆ 109 ಲಕ್ಷ ರೂಪಾಯಿಯಷ್ಟು ರಕವನ್ನು ಮಂಜೂರು ಮಾಡುವ ವಿಧಾನವನ್ನೂ ವರದಿಯಲ್ಲಿ ವಿವರಿಸಲಾಗಿದೆ.

ಈ ಹಣವನ್ನು ಯಾವ್ಯಾವ ಪ್ರಾಂತಕ್ಕೆ ಎಷ್ಟೆಷ್ಟು ರಕಮಿನಂತೆ ಹಂಚಿ ಹಾಕಬೇಕೆಂಬುದನ್ನು ಈ ರೀತಿ ಸೂಚಿಸಲಾಗಿದೆ:

ಬೊಂಬಾಯಿ	25	ಲಕ್ಷ ರೂಪಾಯಿ
ಒರಿಸ್ಸಾ(ಉತ್ಕಳ)ಕ್ಕೆ	1	,,
ಸೌರಾಷ್ಟ್ರಕ್ಕೆ	33	,,
ತ್ರಿವಾಂಕೂರ್-ಕೊಚ್ಚಿಗೆ	30	,,
ಕಚ್ಚಕ್ಕೆ	20	,,

ಒಟ್ಟು 109 ಲಕ್ಷ ರೂಪಾಯಿ

ಕನ್ನಡ ನಾಡಿಗೆ ಒಟ್ಟು 200 ಮೈಲು ವಿಸ್ತೀರ್ಣದ ಸಮುದ್ರ ತೀರವಿದೆ. ಸದ್ಯಕ್ಕೆ ಈ ನಾಡಿಗೆ ಒಂದಾದರೂ ದೊಡ್ಡ ಬಂದರು ಇರುವುದಿಲ್ಲ. ಕನ್ನಡ ನಾಡಿಗೆ ಯಾವದೇ ಸಣ್ಣ ಬಂದರಿಗೆ ಎಷ್ಟು ಹಣ ಒದಗಿಸಲಾಗುವುದೆಂದೂ ತಿಳಿದಿಲ್ಲ. ಸಣ್ಣ ಪುಟ್ಟ ಬಂದರುಗಳ ಅಭಿವೃದ್ಧಿಗೆ ಈಗ ಸೂಚಿತವಾಗಿರುವ ಹಣವೂ ತೀರಾ ಅಲ್ಪವೆ ನವ್ಯ ಪ್ರತಿನಿಧಿಗಳೂ ಜನತೆಯೂ ಎಚ್ಚರಗೊಂಡು ಈಗಿಂದೀಗಲೆ ಚಳವಳಿಸುವುದು ವಿಹಿತವೂ ಅವಶ್ಯವೂ ಆಗಿದೆ.

ಬ್ರೂಕ್ ಬಾಂಡ್ ಚಹಾ

ವನ್ನೇ ನೀವು ಬಿತಕ್ಕೆ
ಒತ್ತಿ ಕೇಳಬೇಕೆಂಬುದಕ್ಕೆ

5

ಕಾರಣಗಳು

1. ಅದು ಮಿಲಿನವಾಗಿದ ಹಾಗೆ ಪೊಟ್ಟಣಗಳಲ್ಲಿ ಕಟ್ಟಿ ಮೊಹರು ಮಾಡಲ್ಪಟ್ಟಿರುತ್ತದೆ
2. ಬ್ರೂಕ್ ಬಾಂಡ್ ಎಂಬ ಹೆಸರೇ ಅದರ ಗುಣದ ಭರವಸೆ
3. ತಿಳಿವಾಗಿ ತಲುಪುವಂತೆ ಅದರ ಸ್ಥಿರ ಶುದ್ಧತೆಯನ್ನು ನೆಟ್ಟಗಿಸುತ್ತದೆ
4. ಬ್ರೂಕ್ ಬಾಂಡ್ ಚಹಗಳು ಇತರ ಬೇಕಾದ ಸಮಾರ್ಥಗಳಿಂದ ರೂಪಾನಿಸಿದೆಯೆಂಬ ಭರವಸೆಯನ್ನು ಕೊಡುತ್ತವೆ
5. ಉತ್ತಮ ಕಾಸ್ಮೋಪಾಲಿಟನ್ ಮಿಶ್ರಣವು ಉತ್ತಮ ರುಚಿಯನ್ನು ನಿರ್ಣಯಿಸುತ್ತದೆ

ನಮ್ಮ ಚಂದಾದಾರರಲ್ಲಿ ಇನ್ನೊಮ್ಮೆ ವಿನಂತಿ

ನಮ್ಮ ಚಂದಾದಾರರೊಡನೆ ನಾವು ಈಗಾಗಲೇ ಹಲವುಬಾರಿ ಕಳಕಳಿಯ ವಿನಂತಿ ಮಾಡಿಕೊಂಡಿದ್ದೇವೆ ಪ್ರತ್ಯೇಕ ಪತ್ರಗಳನ್ನೂ ಬರೆಕೊಂಡಿದ್ದೇವೆ ಆದರೂ ಹೆಚ್ಚಿನವರು ತಮ್ಮ ಚಂದಾ ಹಣವನ್ನು ಕಳಿಸಲಿಲ್ಲವೆಂಬುದಕ್ಕಾಗಿ ಅತ್ಯಂತ ವಿಷಾದ ಪಡುತ್ತೇವೆ ನಾವು ಆಗಾಗ್ಗೆ ಬರೆಯುವುದರಿಂದ ನಮಗೂ ಶ್ರಮ ಮತ್ತು ನಷ್ಟ ಚಂದಾದಾರರಿಗೂ ಬೇಸರಕ್ಕೆ ಕಾರಣ ಆಮದರಿಂದ ನಮ್ಮ ಚಂದಾದಾರ ಬಂಧುಗಳು ಪತ್ರಿಕೋದ್ಯಮದ ವಿಶೇಷ ಹೊಣೆ ನುತ್ತು ಪ್ರಯಾಸಗಳನ್ನು ಮನಗಂಡು ಇದು ಕನ್ನಡಕ್ಕಾಗಿ ಕಮ್ಮಿ ಸೇವೆಯೆಂದಾಗಲೀ ನವಯುಗಕ್ಕೆ ಸಹಾಯವೆಂದಾಗಲೀ ತಮ್ಮ ತಮ್ಮ ಚಂದಾ ಹಣವನ್ನು ದಯಮಾಡಿ ಕೂಡಲೇ ಕಳುಹಿಸಕೊಟ್ಟು ನಮ್ಮೊಡನೆಸಹಕರಿಸಬೇಕಾಗಿ ತಿರುತಿರುಗಿ ವಿನಂತಿಸುತ್ತೇವೆ ವಿ ಪಿ ಮಾಡಬೇಕೆಂದಿದ್ದರೆ ದಯವಿಟ್ಟು ಹಾಗೆಯೇ ತಿಳಿಸುವುದು. ಪತ್ರಿಕೆ ಬೇಡವೆಂದಿರುವವರೂ ಬಾಕಿಯನ್ನು ಕಳುಹಿಸಿಕೊಟ್ಟು ಹಾಗೆಯೇ ತಿಳಿಸಬಹುದು

ಮ್ಯಾನೇಜರ್.

ಆಹಾರ ಮಂತ್ರಿಗಳ ಪರಿಷತ್ತು ಮತ್ತು ಪರಿಸ್ಥಿತಿ

1952ಕ್ಕೆ ಆಹಾರ ವಿಚಾರದಲ್ಲಿ ನಾವು ಸ್ವಾವಲಂಬಿಗಳಾಗುವೆವೆಂದು ವಿತ್ತ ಮಂತ್ರಿ ನೆಹ್ರೂರವರು ಘೋಷಿಸಿದ್ದಂಶವು ಕಾರ್ಯರೂಪದಲ್ಲಿ ಬರದೇ ಹೋದುದಕ್ಕೆ ವಿಷಾದ ಪ್ರದರ್ಶಿಸಿ ಸದ್ಯದ ಪರಿಸ್ಥಿತಿಯನ್ನು ಹೇಗೆ ಎದುರಿಸಬಹುದೆಂದು ಅವರು ನಿರ್ದೇಶಿಸಿಕೊಂಡಿದ್ದಾರೆ. ವರ್ಷವರ್ಷಕ್ಕೆ ಭಾರತ ಆಹಾರ ಪರಿಸ್ಥಿತಿಯು ಕೆಡುತ್ತ ಬಂದಿದೆ. ವಿದೇಶದಿಂದ ಆಯಾತ ಮಾಡಿಕೊಳ್ಳುವದೂ ಅಧಿಕವಾಗಿದೆ. ಕಳೆದ ವರ್ಷ 47 ಲಕ್ಷ ಟನ್ ಆಯಾತ ಮಾಡಿದ್ದಾರೆ. ಈ ವರ್ಷ 68 ಲಕ್ಷ ಟನ್ನಿಗೂ ಮಿಕ್ಕಿ ಆಯಾತ ಮಾಡಿಕೊಳ್ಳಬೇಕಾಗಿದೆ. ಇಷ್ಟು ಮಾಡಿದರೂ ಜನಗಾಲದ ಭೀತಿ ಶಮನವಿಲ್ಲ. ಬೆಳೆಯಲ್ಲಿ ಹೆಚ್ಚಿನ ಸುಧಾರಣೆಯಾಗದೆಯಿರುವದರಿಂದಲೂ– ಪ್ರಕೃತಿ ವಿಕೋಪದಿಂದಲೂ–ಎತ್ತುವಳಿಯು ಕಾರ್ಯ ಯತ್ಸ್ಫಾರ್ಯವಿಲ್ಲ. ವಾಕ್ಸ್ವಾತಂತ್ರ್ಯದಿಂದ ಒರಿಜೇಕಾದ 60,000 ಟನ್‌ಗಿಕ್ಕಿದಿರುವುದಿಲ್ಲ. ನೇಪಾಳವು ಹೊರಕ್ಕೆ ಅಕ್ಕಿ ಕಳಿಸುವುದನ್ನು ನಿಲ್ಲಿಸಿರುತ್ತದೆ ಹೀಗಾಗಿ ಆಯಾತ ಮಾರ್ಗವೂ ಅನಿಶ್ಚಿತವಾದ ಬಿಕ್ಕಟ್ಟುಬಂದಿದೆ. ಹೆಜ್ಜಾಗಿ ಅಕ್ಕಿ ಬರುವ ಬರ್ಮಾದ ಪರಿಸ್ಥಿತಿ ನಾನೆಡೆಸಿದಷ್ಟು ಆಶಾದಾಯಕವಾಗಿರುವುದಿಲ್ಲ ಹೀಗಾಗಿ ಮುಂದಿನ ದಿನಗಳು ಅತ್ಯಂತ ಕಠಿಣದ್ದಾಗಿವೆ ತತ್ಕಾಲದ ಆಹಾರ ಸಂಗ್ರಹವು ತೃಪ್ತಿಕರವಾಗಿರುವದಾದರೂ ಮುಂದಿನ ದಿನಗಳಲ್ಲಿ ನಿರ್ದಿಷ್ಟ ಪರಿಮಿತಿಗಿಂತ ಹೆಚ್ಚಾಗಿ ಆಹಾರವು ಹೊರಗಿಂದ ಬರದೆ ಹೋದರೆ ಪರಿಸ್ಥಿತಿ ಗಂಭೀರವಾಗಬಹುದು ಆದರಲ್ಲೂ ಅಕ್ಕಿಯ ಕೊರತೆ ಬಹಳವಾಗಿದೆ. ಅಕ್ಕಿ ತಿನ್ನುವವರು ತಮ್ಮ ಪ್ರಮಾಣದಲ್ಲಿ ಕಡಿತವನ್ನುಂಟು ಮಾಡಿ ಇತರ ಗೋಧಿ–ಜೋಳಗಳನ್ನು ಸೇವಿಸಬೇಕೆಂದು ಆಹಾರಮಂತ್ರಿಗಳೂ ಮುಖ್ಯ ಮಂತ್ರಿಗಳೂ ಪದೇ ಪದೇ ಹೇಳುತ್ತಿದ್ದಾರೆ. ಮದ್ರಾಸಿಗರಾದ ನಮ್ಮ ಪಾಲಿಗಂತೂ ಇದು ಬಹುಕಷ್ಟದ ಸಂಗತಿ! ಆಹಾರ ಮಂತ್ರಿ ರೋಜಿ ವಿಕ್ಟೋರಿಯಾರವರು ಆಹಾರ ಸಂಗ್ರಹ ತೃಪ್ತಿಕರವಾಗಿದೆಂದು ಅಭಯವನ್ನು ನೀಡುತ್ತಿದ್ದ ಹಾಗೆಯೇ– ಮರುಕ್ಷಣದಲ್ಲಿಯೇ ಆಹಾರ ಪರಿಸ್ಥಿತಿ ಚಿಂತಾಜನಕವಾಗಿದೆ ಎಂದು ಹೇಳಲು ಹಿಂಜರಿಯುವುದಿಲ್ಲ. ಆಹಾರೋತ್ಪಾದನೆಯಿಂದ ನಮ್ಮ ಕೊರತೆಯನ್ನು ನೀಗುವದಕ್ಕೆ ಸಾಧ್ಯವಾಗದೆ ಹೋದರೂ ಸಾಧಿಸಿದ ಪ್ರಗತಿಯಲ್ಲು ನಾವು ಅಲ್ಲಗಳೆಯಲಾರೆವು. ಆದರೆ ವ್ಯಾಂತಿಕ ಹಾಗೂ ಕೇಂದ್ರ ಸರಕಾರಗಳ ಆಹಾರ ಹಂಚುವಿಕೆಯ ಪದ್ಧತಿಯು ದೋಷಪೂರ್ಣವಾಗಿದೆಂದು ವಿಷಾದದಿಂದ ಹೇಳಬೇಕಾಗಿದೆ ಈ ಅಂಶ ಮುಖ್ಯಮಂತ್ರಿ ನೆಹ್ರೂರವರೇ ಒಪ್ಪಿಕೊಂಡಿದ್ದಾರೆ. ವ್ಯಾಂತಗಳಲ್ಲಿ ತಲೆದೋರುವ ಆಹಾರಾಭಾವಕ್ಕೆ ಅಂಕೆಸಂಖ್ಯೆಗಳ ಆಧಾರ ತೋರಿಸಿ ಕ್ಷಣಕ್ಷಣಕ್ಕೆ ಕೇಂದ್ರವನ್ನು ಪೀಡಿಸುತ್ತಿರುವದು ನಮಗೆ ಸಾಮಾನ್ಯವಾಗಿದೆ ವ್ಯಾಂತೀಯ ಸರಕಾರಗಳು ಈ ಹಂಚುವಿಕೆಯ ಧೋರಣೆಯಲ್ಲಿ ಬದಲಾವಣೆ ಮಾಡುವದು ಅವಶ್ಯ. ವ್ಯಾಂತದಲ್ಲಿ ಆಹಾರೋತ್ಪಾದನೆ– ಎತ್ತುವಳಿ–ಹಂಚುವಿಕೆಯ ಕ್ರಮವು ಸಮರ್ಪಕವಾಗಿ ಜರಗುತ್ತಿಲ್ಲವೆಂಬುದು ಇಲ್ಲಿನ ವಿದ್ಯಮಾನಗಳನ್ನು ಗಮನಿಸುವವರಿಗೆಲ್ಲ ಅರ್ಥವಾಗದಿರದು. ಕ್ರಮಬದ್ಧತೆ ಇಲ್ಲದಲ್ಲಿ ಕಳ್ಳಸಂತೆ ನಡಿಯುವದು ಅಚ್ಚರಿಯ ಅಂಶವೇನಲ್ಲ! ಆಹಾರವು ಸರ್ವರಿಗೂ ದೊರಕುವಂತಾಗಬೇಕಾದರೆ ವಿತರಣೆ– ಹಾಗೂ ಧಾರಣೆಯ ಕ್ರಮ ದಲ್ಲಿ ಎಲ್ಲ ವ್ಯಾಂತಗಳಿಗೂ ವಿಕಸೂಕ್ರತೆ ಬೇಕು ಬೇಕು. ದಿಲ್ಲಿಯಲ್ಲೋ ಮದ್ರಾಸದಲ್ಲೋ ಸಮಾಲೋಚನೆ– ಪರಿಪತ್ರ ನಡಿಸಿದರೆ ಸಾಲದು ಅಧಿಕಾರೋತ್ಪಾದನೆಯ ಕ್ಷೇತ್ರವಾದ ಹಳ್ಳಿಯಲ್ಲೂ ಈ ಸುಧಾರಣೆಯಾಗುವದು ಅದ್ಯ ಕರ್ತವ್ಯವಾಗಿದೆ.

ಪಂಚವಾರ್ಷಿಕ ಯೋಜನೆ ಮತ್ತು ವಿದೇಶೀ ಸಾಲ

ಭಾರತ ಸರಕಾರವು ಕೈಗೊಂಡಿರುವ ಪಂಚವಾರ್ಷಿಕ ಯೋಜನೆಗಳ ಕುರಿತು ಪಾರ್ಲಿಮೆಂಟಿನಲ್ಲಿ ಒಳ್ಳೆ ಕಾರಸಿನ ಮಾತುಕತೆಗಳು ನಡೆದಿವೆ. ವಿದೇಶೀಯ ಬಂದನಗಳಿಂದ ಯೋಜನೆಯನ್ನು ಕಾರ್ಯರೂಪದಲ್ಲಿ ತರಬೇಕಾದ ಅವಶ್ಯಕತೆಯಿದೆಯೆ? ಎನ್ನುವ ಶ್ನೆಯೂ ಬಂದಿದೆ. ಇದಕ್ಕೆ ಆರ್ಥಿಕ ಮಂತ್ರಿಗಳಾದ ಶ್ರೀ. ದೇಶಮುಖರು ಸಮರ್ಪಕವಾದ ಉತ್ತರವನ್ನಿತ್ತಿದ್ದಾರೆ ಪಂಚವಾರ್ಷಿಕ ಯೋಜನೆಗೆ ಪ್ರಥಮಾರ್ಧಕ್ಕೆ ಎಷ್ಟು ಹಣ ಬೇಕಾಗ ವದೆಂದು ಅಂದಾಜು ಮಾಡಲಾಗಿದ್ದು ಇದರಲ್ಲಿ ಭಾರತ ದೇಶದ ಬಂಡವಲು ಎಷ್ಟು ದೊರಕುವದೆಂದೂ ನೋಡಲಾಗಿದೆ ಈ ಯೋಜನೆಗಳಿಗಾಗಿ ಒಟ್ಟಿಗೆ 1500 ಕೋಟಿ ರೂ.ಗಳು ಬೇಕಾಗುವದು. ಇಷ್ಟನ್ನೂ ಭಾರತವು ಪೂರೈಸಲಾರದ ಆದಕ್ಕೆ ವಿದೇಶೀಯರ ನೆರವು ಅವಶ್ಯ ಬೇಕಾಗಿದೆ.

ಜಾಗತಿಕ ಬ್ಯಾಂಕಿನ ನಿಯೋಗವೊಂದು ಈ ಮೊದಲು ಭಾರತಕ್ಕೆ ಬಂದಿದ್ದು ಇಲ್ಲಿಯ ಯೋಜನೆಗಳನ್ನು ಪರಿಶೀಲಿಸಿ ಮುಂದಕ್ಕೆ ಎಷ್ಟು ಸಾಲ ಕೊಡಬಹುದೆನ್ನುವ ಕುರಿತು ವರದಿ ಮಾಡಿದೆ. ಜಾಗತಿಕ ಬ್ಯಾಂಕಿನ ಅಧ್ಯಕ್ಷ ಶ್ರೀ ಯುಜೀನ ಬ್ಲ್ಯಾಕರು ಭಾರತವನ್ನು ಸಂದರ್ಶಿಸಿ ಭಾರತ ಸರಕಾರವು ಕೈಗೊಂಡಿರುವ ಒಕ್ಕಲುತನ ಮತ್ತು ಔದ್ಯಮಿಕ ಉತ್ಪಾದನೆಯ ಕ್ರಮವಲ್ಲಿ ಅತ್ಯಂತ ವಿಶ್ವಾಸವನ್ನು ಪ್ರದರ್ಶಿಸಿದ್ದಾರೆ. ಪ್ರತಿಯೊಂದ ಯೋಜನೆಗೂ ಅತ್ಯಂತ ಬುದ್ಧಿಮತ್ತೆಯಿಂದ ತಯಾರಿಸಲಾಗಿದ್ದು ಆರ್ಥಿಕ ಸಹಾಯ ದೊರೆತರೆ ಇವು ಕಾರ್ಯರೂಪದಲ್ಲಿ ಬರುವದರಲ್ಲಿ ಸಂದೇಹವೇ ಇಲ್ಲವೆಂದು ಅವರು ಅಭಿಪ್ರಾಯ ಪಟ್ಟಿರುವರು. ದೇಶದಲ್ಲಿಯ ಸಂಕಾದ ಮತ್ತು ಹಾನಿಗೀ ಉದ್ದಿಮೆಗಳಲ್ಲಿ ಅನೇಕ ಮಧ್ಯವರ್ತಿಗಳಿರುವದನ್ನು ಅವರು ಉಲ್ಲೇಖಿಸಿರುವರು. ಹಿಂದೀ ರೈಲ್ವೆಗಳು ಮಾಡಿತ್ತಿರುವ ಕೆಲಸಗಳು ಅತ್ಯಂತ ತೃಪ್ತಿಕರವಿದ್ದು ಭಾರತದಲ್ಲಿಯ ರೈಲ್ವೆ ಮತ್ತು ಬಸ್ಸೆಗಳ ಆಡಳಿತ ಪದ್ಧತಿಯು ಉತ್ಕೃಷ್ಟವಾಗಿದೆಂದಿದ್ದಾರೆ. ಹಿಂದೀ ರೈಲ್ವೆಗಳ ಪುನರ್ನಿವೇಶನಕ್ಕಾಗಿ ಜಾಗತಿಕ ಬ್ಯಾಂಕು ನೀಡಿದ ಕೋಟಿ ಡಾಲರುಗಳ ಸಾಲವು ಸದ್ವಿನಿಯೋಗವಾಗಿದೆಂದೂ ಅಭಿಪ್ರಾಯ ಪಟ್ಟಿರುವರು. ಅಂತೂ ಅಧ್ಯಕ್ಷ ಬ್ಲ್ಯಾಕರು ಭಾರತ ಸರಕಾರ ಕಾರ್ಯಕ್ಕೆ ಕೊಡಿರುವ ಪಂಚವಾರ್ಷಿಕ ಯೋಜನೆಯನ್ನು ಹೃತ್ಪೂರ್ವಕ ಕೊಂಡಾಡಿದ್ದು ಮಾತ್ರವಲ್ಲದೆ ಜಾಗತಿಕ ಬ್ಯಾಂಕು ವಿಶ್ವವಾದ ಆರ್ಥಿಕ ನೆರವನ್ನು ನೀಡುವಂತೆ ಶಿಫಾರಸು ಮಾಡಿ ವರದಿಯನ್ನು ಸಂದೇಹವಿಲ್ಲದೆ ಅವರು ಪರಿಶೀಲನೆಯ ನಂತರ ಕೊಟ್ಟ ಹೇಳಿಕೆ ಹಾಗೂ ಸಲಹೆಗಳು ಅತ್ಯಂತ ಗಮನಾರ್ಹವೂ ಆಶಾದಾಯಕವೂ ಆಗಿವೆ

ಕಾಸರಗೋಡು ಡಿ. ಮು. ಕೋರ್ಟಿನಲ್ಲಿ

O P. No 5/1952

1 ಮಂಡಿಯುಮ್ಮ ಮೈತಪಟ್ಟ B ಮಹಮ್ಮದ ಕುಂಞಾ ತ್ಯಾದ ಬೇಪ್ಪಂಚಿ ಅಬ್ದುಸ್ ಬ್ಯಾರಿ ಹೆಂಡ್ರಿ

2 ಬೀ ಪಾತುಮ್ಮ ತಕ್ಕಲ್ ಹಸಂಕುಟ್ಟಿ ಬ್ಯಾರಿ ಮಗಳು ಮೈತಪಟ್ಟ B ಮಹಮ್ಮದ ಕುಂಞಾಯ ಹೆಂಡ್ತಿ

3 ಆಸ್ಮಾ, 4, ನಫೀಸಾ 5, ಉಮ್ಮಾಲಿ, 6, ಮರಿಯುಮ್ಮ 7 ಖದೀಜ, 8 ಆಬಿದ 9 ಹಮೀದ್, 10 ಅಬ್ದುಸ್,

ಮೈತಪಟ್ಟ B ಮಹಮ್ಮದ ಕುಂಞಾಯ ಮಕ್ಕಳು 6ರಿಂದ 10ನೇಯವರು ಮೈನರು ಇವರ ಪ್ರೊಪ ಟಾತಕಳು ತ್ಯಾ 2ನೇ ಪ್ರತಿವಾದಿಯವ್ವ

ಕಾಸ್ರಗೋಡು ತಾಲ್ಲು ತಕ್ಕಲ ಗ್ರಾಮದಲ್ಲಿ ನವಾ ... —ಅರ್ಜಿದಾರರು.

ಸದ್ರಿ ಅರ್ಜಿದಾರ್ರು ತಿಳಿಸುವದೇನಂದ್ರೆ:

1ನೇ ಅರ್ಜಿದಾತಳ ಮಗ 2ನೇ ಅರ್ಜಿದಾರಳ ಗಂಡ ಮತ್ತು 3ರಿಂದ 10ನೇ ವರೆಗಿನ ಅರ್ಜಿದಾರರ ತಂದೆಯಾಗಿದ್ದ ಮೃತ B. ಮಹಮ್ಮದ್ದ ಕುಂಞಾಗೆ ಹೊಗಿಸಿಂದ ಬರತಕ್ಕ ಆವಜ. ವಸೂಲುಮಾಡುವರೆ ಸಕ್ಕೆಶ್ಟನ್ ಸರ್ಟಿಫಿಕೇಟಿನ ಬಗ್ಗೆ ಅರ್ಜಿದಾರರು ದಾಖ್ಲು ಮಾಡಿದ ಸದ್ರಿ ಅರ್ಜಿಯು ತಾರೀಕು 15-3-1952ಕ್ಕೆ ಕಸ್ಟಿಗೆಬ್ಬರುವ ಸಲ್ಗಿ ಈ ಮೂಲಕ ತಿಳಿಸೋಣಾಗಿದೆ.

Sd/ **P. Ahmad**
Advocate for Petitioners
Kasaragod 20-2-1952

THE MAHARASHTRA APEX BANK LTD., UDIPI

(Incorporated in India Liability of Members Limited)

NOTICE

Notice is hereby given that the 500 shares numbered 3022 to 3271 and 16223 to 16472 comprised in Share Certificate Nos 13 & 741 respy fully paid at Rs. 5000/- in The Shankar Vittal Motor Co, Ltd, Mangalore standing in our name (transferred from Sri A. Bacha Marakala, Airody, Hungarcutta) will be sold by public auction at the Registered Office, Ramanjaneya Bldgs, Udipi, on Saturday, the 15th March, 1952 at 2 P M. or at any other date & time convenient to the Bank

Ramanjaneya Bldgs,
Koladpet, **Udipi**,
21—2—1952.

K R V Kamath, Cert A.I.I.B.
Agent at H. O.



ರಾಮತೀರ್ಥ ಬ್ರಾಂಡ್ ತೈಲ

ಸ್ಪೆಶಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಜಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತಿದೆ, ಬಕ್ಕೆ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತವೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತವೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿನ ಕ್ರಯ: ದೊಡ್ಡ ಬಾಟ್ಲಿಗೆ ರೂ 3—8—0
ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಜಿ. ಐ. ಪಿ.) ಮುಂಬಯಿ, ೧೪

ಕೊವಾಲಾಂಗಿಯರೆ ನಿಮ್ಮ ಚಿಂತೆಗಳನ್ನು ಬಿಟ್ಟುಬಿಡಿರಿ ಎಲ್ಲಾತರದ ಮುಂದೋಷಗಳಿಗೂ ಮಾರಾಮತ್ತೆಯನ್ನು ಸೆಪರಿ ಸಾದಸ್ಯ ಮಾತ್ರಿಗಳಿಗೆ ರೂ.7 8 ಸ್ಪೆಶಲ್ ರೂ 10 8 0; ಅತೀ ಸ್ಪೆಶಲ್ ರೂ. 16-0-0, ವಿ ಪಿ ಚಾರ್ಜು ವ್ಯತೀ

RAJA MART,
West Vadmapokki Street, MADURAI

ವಾರದ ವಾರ್ತೆ

ಇಜಿಪ್ತ ಬ್ರಿಟನ ಮಾತುಕತೆ

ಬ್ರಿಟನ ಇಜಿಪ್ತಗಳೊಳಗೆ ಮಹತ್ವದ ಮಾತುಕತೆಯು ಈ ವಾರದಲ್ಲಿ ನಡೆಯುವುದೆಂದು ತಿಳಿದು ಬಂದಿದೆ. ಪಾಕಿಸ್ತಾನ, ಸೌದಿ ಅರೇಬಿಯಾ ಇರಾಕಗಳು ಮಧ್ಯಸ್ಥಿಕೆ ವಹಿಸುವದಾಗಿ ಮುಂದೆ ಬಂದಿದ್ದರೂ ಇಜಿಪ್ತವು ಇಂದು ನೇರಾಗಿ ಬ್ರಿಟನ್ನದೊಡನೆ ಮಾತುಕತೆ ನಡೆಸಲು ಮುಂದೆ ಬಂದಿದೆ.

ಇಜಿಪ್ತ ರಶಿಯ ವ್ಯಾಪಾರೀ ಒಪ್ಪಂದ

ರಶಿಯ ಇಜಿಪ್ತಗಳೊಳಗೆ ವಿನಿಮಯ ವ್ಯಾಪಾರ ಒಪ್ಪಂದ ನಡೆದಿದ್ದು ಈ ಒಪ್ಪಂದದಂತೆ ರಶಿಯವು ಇಜಿಪ್ತದ ಹತ್ತಿಯ ಬದಲಾಗಿ ಗೋದಿಯನ್ನು ವಿನಿಮಯವಾಗಿ ಕೊಡಬೇಕೆಂದು ಗೊತ್ತಾಗಿದೆ.

ಅಮೆರಿಕೆಯ ಅಣು ಶಕ್ತಿ

ಅಮೆರಿಕೆಯು ಸಾಕಷ್ಟು ಅಣು ಬಾಂಬುಗಳನ್ನು ಸಂಗ್ರಹಿಸಿರುವದರಿಂದ ರಶಿಯವು ಜಗತ್ತಿನ ಯಾವುದೇ ಭಾಗದಲ್ಲಿ ಥಾಳ ಪ್ರಾರಂಭಿಸುವದು ತೀರ ಮೂರ್ಖತನವೆನಿಸುವದೆಂದೂ ಅಂತಹ ಸಂಗದಲ್ಲಿ ಅಣುಬಾಂಬನ್ನು ಪ್ರಯೋಗಿಸಲು ಅಮೆರಿಕೆಯು ಹಿಂಜರಿಯುವದಿಲ್ಲವೆಂದು ಅಮೆರಿಕೆಯ ಅಣುಶಕ್ತಿಯ ಸಮಿತಿಯ ಅಧ್ಯಕ್ಷರು ನುಡಿದರು.

ಕ್ಲಿಮೆಂಟ್ ಅಟ್ಲಿಯವರ ಎಚ್ಚರಿಕೆ

ಬ್ರಿಟನ್ನಿನ ಹಿಂದಿನ ಮಂ.ಪ್ರ. ಮಂತ್ರಿ ಶ್ರೀಮಾನ್ ಅಟ್ಲಿಯವರು ಬಾನುಲಿಯಲ್ಲಿ ಮಾತನಾಡಿತ್ತಾ "ಅಮೆರಿಕೆಯಲ್ಲಿ ಕೆಲ ಪ್ರತಿಷ್ಠಿತ ಜನರು ಜಪಾನಿಗೆ ಕೈಶೇಖರ ಲಂಚಗಳ ಚಟವನ್ನು ಎತ್ತಿ ಹಿಡಿಯುವರು. ಪ್ರಧಾನ ಮಂತ್ರಿ ವಿನ್ಸ್ಟನ್ ಚರ್ಚಿಲ್ಲರು ಕಾಂಗ್ರೆಸದಲ್ಲಿ ಮಾಡಿದ ಭಾಷಣದಲ್ಲಿ ಕಮ್ಯುನಿಸ್ಟ ಚೀನದೊಡನೆ ಯುದ್ಧ ಮಾಡಬೇಕೆಂದು ಪ್ರಚೋದಿಸುತ್ತಿರುವ ಈ ಭಾಷಣ ವ್ಯಕ್ತಿಗಳನ್ನು ತಾವು ದೆಂಬಲಿಸುತ್ತಿಲ್ಲವಂತೆ ಅಮೆರಿಕನರಿಗೆ ಅನಿಸುವಂತೆ ಮಾಡಿದ್ದು ತೀಚಿನ ನೀತಿಯು. ಚೀನದ ಮೇಲೆ ಯಾವುದೇ ಪಾಶ್ಚಿಮಾತ್ಯ ರಾಷ್ಟ್ರಗಳು ದಾಳಿ ಮಾಡಿದರೆ ಸೂರ್ವದಲ್ಲಿರುವ ಎಲ್ಲ ಚೀನೀಯರಲ್ಲಿ ರಾಷ್ಟ್ರೀಯ ಭಾವನೆಯು ಜಾಗ್ರತೆಗೊಳ್ಳುವದರಿಂದ ಏಶಿಯದಲ್ಲಿ ಅಂತಹ ದೊಡ್ಡ ಯುದ್ಧದಲ್ಲಿ ತೊಡಗುವದು ಪಾಶ್ಚಿಮಾತ್ಯ ರಾಷ್ಟ್ರಗಳ ಮೂರ್ಖತನವೇ ಸರಿ" ಎಂದಿದ್ದಾರೆ.

ಕೊರಿಯ ಸಂಧಾನದಲ್ಲಿ ಬಿಕ್ಕಟ್ಟು

ಯುದ್ಧ ವಿರಾಮ ಮಾತುಕತೆಗಳಲ್ಲಿ ತಾತ್ಕಾಲಿಕ ಸಂಧಿಯ ಮೇಲ್ವಿಚಾರಣೆಯ ವಿಷಯದ ಚರ್ಚೆ ಸಾಗಿಸಿದಾಗ ರಶಿಯವನ್ನು ತಟಸ್ಥ ರಾಷ್ಟ್ರವನ್ನಾಗಿ ಗ್ರಹಿಸಬೇಕೆಂದು ಕಮ್ಯುನಿಸ್ಟರು ಮಾಡಿದ ಸೂಚನೆಗೆ ಸಂ. ರಾ. ಪ್ರತಿನಿಧಿಗಳು ಅನವಶ್ಯವಾಗಿ ಲಕ್ಷೇಪವೆತ್ತಿರುವದರಿಂದ ಸಂಧಾನ ಮಾತುಕತೆಯಲ್ಲಿ ಮತ್ತೆ ಬಿಕ್ಕಟ್ಟುಂಟಾಗಿದೆಂದು ತಿಳಿಯುತ್ತದೆ.

ಡಾಕಾದಲ್ಲಿ ಗಲಭೆ

ಒಂಬತ್ತಾಲಿಯನ್ನು ಪಾಕಿಸ್ತಾನದ ರಾಷ್ಟ್ರಭಾಷೆಯೊಂದನ್ನಾಗಿ ಸ್ವೀಕರಿಸಬೇಕೆಂದು ಕಳೆದ ನಾಲ್ಕಾರು ದಿನಗಳಿಂದ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಸಂಪು ಕೊಂಚ ಭೀಕರ ಸ್ವರೂಪವನ್ನು ತಾಳಿದೆ. ವಿದ್ಯಾರ್ಥಿಗಳ ಮೇಲೆ ಪೋಲೀಸರು ನಡೆಸಿದ ಅತ್ಯಾಚಾರವನ್ನು ನಾಗರಿಕರೂ ಸಹಿಸದಾದರು. ಅಂತಲೆ ಹೆಚ್ಚಿನ ನಾಗರಿಕರೂ ವ್ಯಾಪಾರಸ್ಥರೂ ವಿದ್ಯಾರ್ಥಿಗಳ ಸಂಘಟನಾಭಿಪ್ರಾಯವ್ಯಕ್ತರಾಗಿದ್ದಾರೆಂದು ಗೊತ್ತಾಗಿದೆ. ವಿದ್ಯಾಲಯ ಪ್ರದೇಶಗಳಲ್ಲಿ ಬಲವಾದ ಪೋಲೀಸ ಕಾವಲು ಇಟ್ಟಿರುವದರಿಂದ ಈಜಿಗೆ ವಿಶೇಷ ಘಟನೆ ನಡೆದ ವಾರ್ತೆ ಬಂದಿರುವುದಿಲ್ಲ!

ಭಾರತ ಜನತೆಯ ಆರೋಗ್ಯರಕ್ಷಣೆ

ಮಲೇರಿಯಾ ನಿಯಂತ್ರಣ ಕ್ಷಯ ರೋಗ ಪ್ರತಿಬಂಧ ಬಿ. ಕಿ. ಜಿ. ವ್ಯಾಕ್ಸಿನೇಶನ್, ಡಿ. ಡಿ. ಟಿ. ಕಯಾರಿಕೆ ಕಂಪೆನಿ, ಪೆನ್ಸಿಲಿನ್ ಕಯಾರಿಕೆ ಕಾರಖಾನೆ ಇವುಗಳ ಗಾಗಿ ಭಾರತದಲ್ಲಿ 1952ರಲ್ಲಿ 17,00,000 ಡಾಲರುಗಳನ್ನು ವೆಚ್ಚಮಾಡಲು ಜಾಗತಿಕ ಆರೋಗ್ಯ ಸಂಸ್ಥೆ ಬಮಸಿದೆಯಂತೆ

ಭಾರತ ರೈಲ್ವೆ ಶತ ಸಾಂವತ್ಸರಿಕ

1953ರಲ್ಲಿ ಭಾರತದಲ್ಲಿ ಆಂಕರರಾಷ್ಟ್ರೀಯ ಕಾಂಗ್ರೆಸು ಸೇರಿಸುವದಕ್ಕೆ ಆಮಂತ್ರಣ ಕಳಿಸಿಲಾಗಿದೆಂದೂ ಇವೆರಡೂ ಸಮಾರಂಭಗಳನ್ನು ಸಾಧ್ಯವಾದರೆ 1953ರ ವಸಂತಋತುವಿನಲ್ಲಿ ಜರಗಿಸಲಾಗುವುದೆಂದೂ-ಒಂದು ವೇಳೆ ಎರಡೂ ಸಮಾರಂಭಗಳನ್ನು ಒಂದೇ ಕಾಲದಲ್ಲಿ ಪಡೆಸಲಿಕ್ಕಾಗದೆ ಹೋದರೆ ಆಂತರರಾಷ್ಟ್ರೀಯ ಪರಿಷತ್ತಿನ ನಂತರ ಭಾರತ ರೈಲ್ವೆ ಶತ ಸಾಂವತ್ಸರಿಕ ಮಹೋತ್ಸವ ಜರುಗಿಸಲಾಗುವದೆಂದ ಶ್ರೀ ಗೋಪಾಲ ಸ್ವಾಮಿ ಅಯ್ಯಂಗಾರರು ಹೇಳಿದರು.

ವಿನೋಬಾ ಭಾವೆಯವರ ಭೂದಾನ ಯಜ್ಞ

ಆಚಾರ್ಯ ವಿನೋಬಾ ಭಾವೆಯವರಿಗೆ ಆವರ ಭೂದಾನ ಯಜ್ಞಕ್ಕಾಗಿ ಇದುವರೆಗೆ 70000 ಎಕರೆ ಭೂವಿ ದೊರಕಿದೆಯೆಂದು ತಿಳಿಯುತ್ತದೆ

ನ್ಯೂಯಾರ್ಕಿನಲ್ಲಿ ಸಾವಿತ್ರಿ ನಾಟಕದ ಪ್ರಯೋಗ

ನ್ಯೂಯಾರ್ಕಿನ ಭಾರತ ಸರಕಾರದ ಪ್ರತಿನಿಧಿಯ ಕಛೇರಿಯಲ್ಲಿ ಇಂಡೋ ಅಮೆರಿಕನ್ ವಿದ್ಯಾರ್ಥಿ ಸಂಘದವರು ಶ್ರೀ ಅರವಿಂದರ ಸಾವಿತ್ರಿ ಎಂಬ ನಾಟಕವನ್ನು ಆಡಿದರು. ಈ ಸಮಾರಂಭಕ್ಕೆ ಅಮೆರಿಕನ್ನರು ವಿಶೇಷವಾದ ಪ್ರಮುಖ ರಾಯಭಾರಿಗಳನ್ನೊಳಗೊಂಡು ಸುಮಾರು 3000 ಜನರು ಬಂದಿದ್ದರು ಅಮೆರಿಕೆನ ರಂಗಭೂಮಿಯ ಮೇಲೆ ಹೆಸರು ಗಳಿಸಿದ ಮಿಸ್ ಜೀನ್ ಟೀಸ್ಡೊ ಎಂಬ ಪಟ್ಟಿಯು ಸಾವಿತ್ರಿಯ ಪಾತ್ರವನ್ನೂ ಅಮೆರಿಕನ್ ಸಿನ್ಮೋ ಥಿಯೇಟರಿನ ಮುಖ್ಯ ಸ್ಥಾನದ ಆಸ್ಟಿನ್ ಬ್ಯಾಗ್ಸ್ ಯವನ ಪಾತ್ರವನ್ನೂ ವಹಿಸಿದ್ದರು

ಗಡಿನಾಡ ಗಾಂಧಿಯ ಬಿಡುಗಡೆಗಾಗಿ ಜನತೆಯ ಯತ್ನ

ಗಡಿನಾಡ ಗಾಂಧಿ ಖಾನ್ ಅಬ್ದುಲ್ ಗಫಾರಖಾನರು ಅಸ್ವಸ್ಥರಾಗಿರುವದೆಂದು ಪ್ರಕಟಿಸಲಾಗಿದೆ ಪಾಕಿಸ್ತಾನ ಸರಕಾರ ಸ್ಥಾಪಿತವಾದಂದಿನಿಂದ ಇವರನ್ನು ಕಾರಾಗೃಹದಲ್ಲಿಡಲಾಗಿದೆ. ಗಡಿನಾಡ ಪ್ರಾಂತದ ಸ್ವಾತಂತ್ರ್ಯ ಚಳುವಳಿಯ ಜನಕರೆಂದ ಇವರನ್ನು ಕೂಡಲೇ ಬಿಡುಗಡೆ ಮಾಡಬೇಕೆಂದು ಶೀಘ್ರ ವರ್ತಮಾನೋವೃತ್ತಿ ಪಾಕಿಸ್ತಾನ ಜನತೆಯಲ್ಲಿ ಮಾತ್ರವಲ್ಲ ಪತ್ರಿಕೆಗಳಲ್ಲೂ ಕಂಡುಬಂದಿವೆ ಮೂರು ವರ್ಷಗಳ ಸ್ವಾತಂತ್ರ್ಯದ ನಂತರ ಕೆಂಪಂಗಿ ಧುರೀಣರಾದ ಕಾಜಿ ಅತ್ತಾವುಲ್ಲಾ ಖಾನರು ಇತ್ತೀಚೆಗೆ ನಿಧನಹೊಂದಿರುವುದೇ ಈ ಚಳುವಳಿಗೆ ಮುಖ್ಯ ಕಾರಣವಾಗಿದೆ.

ತಿರುಕೊಚ್ಚಿಯಲ್ಲಿ ಸರಕಾರ ರಚನೆ

ತಿರುವಾಂಕೂರು- ಕೊಚ್ಚಿಯ ಕಾಂಗ್ರೆಸ್ ಧುರೀಣರು ದಿಲ್ಲಿಯ ಕಾಂಗ್ರೆಸ್ ವರಿಷ್ಠರೊಡನೆ ಮಾತುಕತೆ ನಡೆಸಿದ್ದು ಆ ಪ್ರಾಂತದಲ್ಲಿ ಭದ್ರವಾದ ಮತ್ತು ಶಾಂತಿಯುತ ಆಡಳಿತ ನೆಲೆಸಲು ಅವಶ್ಯವಿರುವಷ್ಟು ಕಾಂಗ್ರೆಸ್ಸೇತರರ ಹಾಗೂ ಸ್ವತಂತ್ರರ ಸಹಾಯದೊಂದಿಗೆ ಸರಕಾರವನ್ನು ಕಾಂಗ್ರೆಸು ರಚಿಸುವ ನಿರ್ಧಾರ ಮಾಡಿದೆಯೆಂದು ತಿಳಿಯುತ್ತದೆ. ಮದ್ರಾಸದ ಕಾಂಗ್ರೆಸದ ಧುರೀಣರಂಗೂ ದಿಲ್ಲಿ ಕಾಂಗ್ರೆಸ್ ವರಿಷ್ಠರಿಂದ ಆಮಂತ್ರಣ ಹೋಗಿದೆಯಂತೆ

ವಿಲಾಸ ಜೀವನಕ್ಕಿಂತ ಶ್ರಮ ಜೀವನವೇ ಮೇಲು

ನವ್ಯ ದೇಶದ ಜನರು ವಿಲಾಸಪ್ರಿಯರಾಗಿ, ಸೈರ ಜೀವನ ನಡೆಸುವದು ನನಗೆ ಬೇಕಾಗಿಲ್ಲ ಯಾವ ದೇಶದ ಜನರು ಸುಖಲೋಲುಪರಾಗುವರೋ- ಆಂಧ ದೇಶವೆ ನಿಶ್ಚೇಷ್ಟಿತವಾಗಿ ಜಾರಿಗುವುದು. ನವ್ಯನ್ನು ಬಿಗ್ಗುತರನ್ನಾಗಿಡಲು ಯಾವ ದಾರಿಯೊಂದು ಗಂಡಾಂತರ ಎದುರಾಗದೇ ಇರದು ಸದಾ ಪ್ರಗತಿಮಾತ್ರ ಭಾವನೆಯು ನಾವು ಶ್ರಮ ಪಡುತ್ತಿರುವಂತೆ ಮಾಡಲು ಬಂಧ ಕಾರಣವಿದೆಯೇಕೆಂದು. ಶ್ರೀ ಜವಾಹರಲಾಲರು ಕಾನಪುರದಲ್ಲಿ ಹೇಳಿದ್ದಾರು.

ಆಮಂತ್ರಣ

ಉಡುಪಿಯ ಮಹಾತ್ಮಾ ಗಾಂಧೀ ಮೆಮೋರಿಯಲ್ ಕಾಲೇಜಿನ ತೃತೀಯ ವಾರ್ಷಿಕೋತ್ಸವವು ತಾ. ೨೯-೩-೫೨ನೆಯ ಶುಕ್ರವಾರ ಸಾಯಂಕಾಲ ೬ ಘಂಟೆಗೆ ನಡೆಯುವುದು ಸಾರ್ವಜನಿಕರೆಲ್ಲರಿಗೂ ಸುಸ್ವಾಗತವಿದೆ

ಎಚ್. ಸುಂದರ ರಾವ್, ಎಮ್. ಎ.,
ಪ್ರಿನ್ಸಿಪಾಲ.

ಬೇಂಕಿಂಗ್ ಸಂಬಂಧದ ಎಲ್ಲ ಸಮಸ್ಯೆಗಳಿಗೆ

ದಿ ವಿಜಯಾ ಬೇಂಕ್ ಲಿಮಿಟೆಡ್

ಹೆಡ್ ಆಫೀಸು] ಇವರ ಸಲಹೆ ಕೇಳಿರಿ [ಮಂಗಳೂರು

ಉಡುಪಿಕೇರಿಯಲ್ಲಿ ಒಂದು ಶಾಖೆಯೂ ಬೊಂಬಾಯಿಯಲ್ಲಿ ಒಂದು ಶಾಖೆಯೂ ಜಿಲ್ಲೆಯೊಳಗೆ ಹಲವು ಶಾಖೆಗಳೂ ಇವೆ.

ನಿರಿಖು ರೇವಣಾತಿಗಳ ಮೇಲೆ ಆಕರ್ಷಕವಾದ ದರದ ಬಡ್ಡಿಯು ಕೊಡಲ್ಪಡುವುದು.

ತಕ್ಕುದಾದ ಜವಾಬ್ದಾರಿಗಳ ಮೇಲೆ ಸುಲಭವಾದ ಶರ್ತಗಳಲ್ಲಿ ಸಾಲಗಳು ಕೊಡಲ್ಪಡುವುವು

ಸಾಲಿಯನ್ ಸೇಕಡಾ 4½ರ ಬಡ್ಡಿ ಗಳಿಸುವ ಮೂರು ವರ್ಷದ ಅವಧಿಯ
ವಿಜಯಾ ಕೇಶ್ ಸರ್ಟಿಫಿಕೇಟುಗಳ ಮೇಲೆ ಹಣವನ್ನು ಹಾಕಿರಿ

THE VIJAYA BANK, LTD.,

(ಬಿ. ವಾಮಂಜಯ್ಯ ಹೆಗ್ಗಡೆ,
(ಜ. ಕ. ಜಿಲ್ಲಾ ಬೋರ್ಡ್ ಪ್ರೆಸಿಡೆಂಟ್
ಡೈರೆಕ್ಟರ್ ಬೋರ್ಡಿನ ಅಧ್ಯಕ್ಷರು.



ಗೀತೆಯ ಸಮೂಲ ಭಾಷಾಂತರ

ತಿಳಿಗನ್ನಡದಲ್ಲಿ ಅನುಭವಜ್ಞರಿಂದ ಬರೆಯಲ್ಪಟ್ಟ ಇಂತಹ ಅನುವಾದ 'ಗೀತೆಯ ಕೈಗನ್ನಡಿ'ಯನ್ನು ಬಿಟ್ಟರೆ ಇನ್ನೊಂದಿಲ್ಲ 'ಗೀತೆಯ ಕೈಗನ್ನಡಿ'ಯು ಹೊಸಕೆರೆ ಶ್ರೀ ಚಿದಂಬರಯ್ಯನವರ ಸರಳ ಭಾಷಾಂತರ ಅತೀ ಅಗ್ಗವಾದ ಮತ್ತು ಪ್ರತಿಮನೆಯಲ್ಲೂ ಇರಬೇಕಾದ ಗೀತಾಪುಸ್ತಕ

ಬೆಲೆ: ಬರೇ 0-12-0 ಮಾತ್ರ.

ಪ್ರತಿಗಳು ನಮ್ಮಿಲ್ಲಿ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ

ನವಯುಗ ಪ್ರೆಸ್, ಉಡುಪಿ
ಇವರಿಗೆ ಬರೆಯಿರಿ.

ಚಿತ್ತೂರಿನಲ್ಲಿ ನಮ್ಮ ಹೊಸ ಶಾಖೆ

ಇದೇ ಬರುವ ನಾರ್ಚ ೨೦ರಂದು ಗುರುವಾರ ನಮ್ಮ ಬ್ಯಾಂಕಿನ ಹೊಸತೊಂದು ಶಾಖೆ ಚಿತ್ತೂರಿನಲ್ಲಿ ತೆರೆಯಲ್ಪಡಲಿದೆಯೆಂದು ತಿಳಿಸಲು ನಾವು ಸಂತೋಷಪಡುತ್ತೇವೆ.

ದಿ ಕೆನರಾ ಬ್ಯಾಂಕಿಂಗ್ ಕೋರ್ಪೊರೇಶನ್, ಲಿಮಿಟೆಡ್

ಪ್ರಧಾನ ಕಾರ್ಯಾಲಯ, ಉಡುಪಿ, (ದ. ಕ)

THE CANARA BANKING CORPORATION LIMITED.

ನವಯುಗ

ಚಂದಾ ವಿವರ
ವರ್ಷಕ್ಕೆ ರೂ. 5—12—0
6 ತಿಂಗಳಿಗೆ ರೂ 3—0—0

ಗುರುವಾರ ಉಡುಪಿ, ೨೮-೨-೧೯೫೨

ಪ್ರಾಂತರಚನೆಗೆ ಅಡ್ಡಿ ಯಾರದು?

ಭಾಷಾವಾರು ಪ್ರಾಂತರಚನೆಯನ್ನು ಕಾಂಗ್ರೆಸ್ ಮೊದಲಿನಿಂದಲೂ ಪಟ್ಟನಾಸ್ಪದವಾಗಿ ಒಪ್ಪಿಕೊಂಡಿದೆ. ಮತ್ತು ಅದರ ಸಂಧಿಸಾಧ್ಯತೆಯ ಕುರಿತು ನವ್ಯ ಧೋರಣೆಯನ್ನು ಅಗಿಂದಾಗ್ಗೆ ಹೇಳಿಕೆಯನ್ನು ಕೊಡುತ್ತಾ ಬಂದಿದ್ದಾರೆ. ಕಾಂಗ್ರೆಸ್ ಅಧಿಕಾರಕ್ಕೆ ಒಂದ ಮೇಲೂ ಇದು ಶಕ್ಯವಾಗಲಿಲ್ಲವೆನ್ನುವಂಶ ವ್ಯಾಪಕೀಯ ವಾದಿಗಳನ್ನು ಮನಸ್ತಾಪವನ್ನುಂಟುಮಾಡಿದೆ. ಆದರೆ ಈ ಅಡ್ಡಿಗೆ ಕಾಂಗ್ರೆಸ್ ಕಾರಣವೋ—ಧುರೀಣರು ಕಾರಣರೋ—ಪ್ರಾಂತಾಭಿಮಾನಿಗಳು ಕಾರಣರೋ ಎಂಬುದನ್ನು ನಿರ್ವಿಕಾರ ಮನಸ್ಸಿನಿಂದ ನಾವಿಂದು ವಿಮರ್ಶಿಸಬೇಕಾಗಿದೆ.

ಆಂಧ್ರ ಪ್ರಾಂತವು ಕೂಡಲೇ ರೂಪುಗೊಳ್ಳಬೇಕೆಂದು ಸ್ವಾಮಿ ಶೀತಾರಾಮರು ಉಪವಾಸಕ್ಕೆ ಗೊಡ್ಡುವಿದಿತ ವಿಚಾರವೇ—ಆ ಬಳಿಕ ಪ್ರಾಂತವಾದದ ತೀವ್ರತೆಯನ್ನು ಕಂಡು ನವ್ಯ ಧುರೀಣರು ಅನೇಕರು ಪರಿಸ್ಥಿತಿಯನ್ನೊದವಿಸಿ ಕೂಡಿ ಎಂದು ಪ್ರಾಂತವಾದಿಗಳೊಡನೆ ಕೇಳಿಕೊಂಡರು. ಒಂದು ವೇಳೆ ಕಾಂಗ್ರೆಸ್ ವರಿಷ್ಠರು ಇದಕ್ಕೆ ಒಪ್ಪುವುದಾದರೂ ಭಾಷಾವಾರು ಪ್ರಾಂತರಚನೆಗೆ ಹೊಂದಿಕೆಯಾದ ಪ್ರಾಂತೀಯರಲ್ಲಿ ನಿಶ್ಚಿತ ಧೋರಣೆ ಇದೆಯೆ? ಏಕ್ಯಮತ್ಯವಿದಯೇ? ಎಂಬುದನ್ನು ನಾವಿಲ್ಲಿ ಲಕ್ಷಿಸಬೇಕು. ಸ್ವಾಮಿ ಶೀತಾರಾಮರು ಉಪವಾಸ ವ್ರತವನ್ನು ಕೈಗೊಂಡ ಸಮಯದಲ್ಲಿ ಕರ್ನಾಟಕ ಮತ್ತಿತರ ಪ್ರದೇಶದ ಕಾಂಗ್ರೆಸ್ ಅಧ್ಯಕ್ಷರು ಆಂಧ್ರ ಪ್ರಾಂತಕ್ಕೆ ತಮ್ಮುಂದ ಅಡ್ಡಿಯಿಲ್ಲ. ಆದರೆ ಆಂಧ್ರ ಪ್ರಾಂತರಚನೆಯೊಂಗಿವಾಗ ಉಳಿದ ಪ್ರಾಂತಗಳ ರಚನೆಯೂ ಏಕಕಾಲದಲ್ಲಾಗಲೀ ಎಂದು ಸೂಚಿಸಿದ್ದರು ಈ ವಾದವೂ ನ್ಯಾಯವೂ ಕೂಡಾ ಆದರೆ ಆಂಧ್ರದ ಪ್ರಮುಖ ಪತ್ರಿಕೆಯೊಂದು ಕನ್ನಡಿಗರು ಈ ಕಾಲದಲ್ಲೂ ತಮ್ಮ ಚಿಂತನೆಯ ಬಿಟ್ಟಿಲ್ಲ. ಒಂದು ಕಡೆ ತಮ್ಮುಂದ ಅಡ್ಡಿಯಿಲ್ಲವೆಂದು ಹೇಳುತ್ತಿ ತಮ್ಮ ಪ್ರಾಂತವೂ ಏಕಕಾಲದಲ್ಲಾಗಲಿ ಎಂದು ಒತ್ತಾಯಿಸಿ ಆಂಧ್ರ ಪ್ರಾಂತರಚನೆಗೆ ಅಡ್ಡಿ ಹಾಕುತ್ತಲಿದ್ದಾರೆ" ಎಂದು ಬರೆದಿದೆ. ಮುಖ್ಯವಾಗಿ ಈ ಜನಕ್ಕೆ ಆಂಧ್ರ ಪ್ರಾಂತರಚನೆಯಾಗಬೇಕು. ನೆರೆ ರಾಷ್ಟ್ರಗಳ ಹಲವು ಪ್ರದೇಶಗಳು ತಮ್ಮ ದಾಗಬೇಕು. ಸಾಧ್ಯವಾದರೆ ಮದ್ರಾಸು ರಾಜಧಾನಿಯೂ ಕನ್ನಡಿಗರದಾಗಬೇಕು. ಈ ಸ್ವಾರ್ಥ ಬುದ್ಧಿ ಇಂದು ನಿನ್ನೆಯದಲ್ಲ! ಸ್ವಾತಂತ್ರ್ಯ ಪ್ರಾಪ್ತವಾದ ನಾಲ್ಕು ವರ್ಷಗಳಲ್ಲಿ ತಮ್ಮ ಅಸ್ತಿತ್ವವನ್ನು ಭದ್ರಗೊಳಿಸಲು ಇವರು ಕಾರಸ್ಥಾನ ನಡೆಸಿದ್ದರು. ಆಂಧ್ರ ಪ್ರಾಂತದ ರಚನೆಗೆ ಈಚೆಗೆ ಆಂದರೆ ಧಾರ್ ಸಮಿತಿಯು ಬಂದ ನಂತರ ಯೋಗ್ಯ ಸಂದರ್ಭ ದೊರೆತ್ತು. ಮದ್ರಾಸಿದ ಹಲವು ಜನ ಮಂತ್ರಿಗಳೂ—ಇತರ ಅಧಿಕಾರಿಗಳೂ—ಕಾಂಗ್ರೆಸ್ ಕಾರ್ಯಕರ್ತರೂ ದಿಲ್ಲಿಗೆ ಓಡಿ ತಮ್ಮ ಬೇಳೆ ಬೇಯಿಸಿಕೊಳ್ಳುವ ಪ್ರಯತ್ನ ಮಾಡಿದ್ದರು. ಪ್ರಧಾನಮಂತ್ರಿ ಜವಾಹರಲಾಲರೂ— ಸರ್ದಾರ್ ವಲ್ಲಭಭಾಯಿ ಪಟೇಲರೂ ಆಂಧ್ರ ಪ್ರಾಂತ ಮೊದಲ ರಚನೆಯಾಗಲೆಂದು ಹಠವಿಲ್ಲವೆಂಟು ಶ್ರೀ ನೆಹ್ರೂ ಹಾಗೂ ಪಟೇಲರೂ ಆಂಧ್ರದವರು ಸಹಜವಾಗಿಯೂ ಬೇರೆಯವರಿಗೆ ಅನ್ಯಾಯವಾಗದ ರೀತಿಯಲ್ಲಿ ತಮ್ಮ ಪ್ರಾಂತವನ್ನು ನಿರ್ವಿಸಿಕೊಂಡರೆಂದು ಇದಕ್ಕೆ ಒಪ್ಪಿಗೆ ಕೊಟ್ಟದ್ದಾಗಿದೆ ಆದರೆ ಆಂಧ್ರದ ಧುರೀಣರು ಕಾಂಗ್ರೆಸ್ ವರಿಷ್ಠರಿಂತ ಆದೇಶದ ದುರುಪಯೋಗವನ್ನು ಆಗ ಬೆನ್ನಾಗಿ ಮಾಡಿಕೊಂಡ ಏ. ಒಳ್ಳಾರಿ ಜಿಲ್ಲೆ ಪೂರ್ಣ ಇನ್ನಿತರ ನಾಲ್ಕು ತಾಲೂಕುಗಳ ನ್ಯಾಯವಾಗಿ ಆಂಧ್ರಕ್ಕೆ ಸೇರತಕ್ಕದ್ದೆಂದು ವಾದ ಹೂಡಿದರು ಮಾತ್ರವಲ್ಲ ಮಂತ್ರಿ ಗೋಪಾಲ ರೆಡ್ಡಿಯವರೇ ಅಧಿಯಾಗಿ ಇನ್ನಿತರ ಹಲವತ್ತ ಮಂತ್ರಿಗಳೂ ಅಧಿಕಾರಿಗಳೂ ಒಳ್ಳಾರಿಯ ನಗರಸಭೆ ಹಾಗೂ ಸಾರ್ವಜನಿಕ ಸಭೆಗಳಲ್ಲಿ ನಾಟಕ ನಡೆಸಿ ಒಳ್ಳಾರಿಯನ್ನು ಸಂಗಾವ ಯತ್ನ ಮಾಡಿದ್ದರು. ಬಳಿಕ ಗಡಿನಿರ್ಣಯಕ ಸಮಿತಿಯು ರಚನೆಯಾಯಿತು ಅದರಲ್ಲಿ ಆಂಧ್ರ ತಮಿಳು ಪ್ರತಿನಿಧಿಗಳ ಹೊರತು ಒಬ್ಬನೇ ಒಬ್ಬ ಕನ್ನಡಿಗನಿರ್ದಿಲ್ಲ. ಜಬ್ಬಾರ್ಪದವಾದ ಕರ್ನಾಟಕ ಪ್ರದೇಶದ ಗಡಿ ನಿರೀಕ್ಷಣೆಯಲ್ಲಿ ಕನ್ನಡಿಗರ ಪ್ರತಿನಿಧ್ಯವಿಲ್ಲದೆ ಇದು ಹೇಗೆ ಶಕ್ಯವಾದೀತೆಂಬುದು ಮದ್ರಾಸದ ಆಂಧ್ರಾಭಿಮಾನಿಗಳಿಗೆ ತೋಚಲೇ ಇಲ್ಲ. ಕಾಂಗ್ರೆಸ್ ಕೊಟ್ಟ ಈ ಸುವರ್ಣ ಸಂಧಿಯನ್ನು ಆಂಧ್ರರು ತಮ್ಮ ಸ್ವಾರ್ಥ—ಸಂಕುಚಿತ ಮನೋವೃತ್ತಿಯಿಂದ ಸಂಪೂರ್ಣ ಕಳೆದುಕೊಂಡಿದ್ದಾರೆನ್ನುವದಕ್ಕೆ ಮೇಲಿನ ಉದಾಹರಣೆಗಳನ್ನು ಹೇಳಬೇಕಾಯಿತು. ಇದೇ ಸಂಧಿಯಲ್ಲಿ ಕನ್ನಡಿಗರು ತಮ್ಮ ಪಾಲಿಗಾಗುತ್ತಿರುವ ಅನ್ಯಾಯವನ್ನು ನೆಹ್ರೂ ಮತ್ತು ಪಟೇಲರಲ್ಲಿ ನಿವೇದಿಸಿಕೊಂಡರು. ಆಂಧ್ರರ ಸಣ್ಣ ಬೆನ್ನೆಯ ನೀತಿ ಬೆನ್ನಾಗಿ ಅರ್ಥವಾಯಿತು. ಅಂತಲೇ ಅವರು ಆ ಪ್ರಶ್ನೆಯನ್ನು ಮುಂದೆ ಕಳ್ಳದರು.

ಈಗ ಸ್ವಾಮಿ ಶೀತಾರಾಮರು ಆಂಧ್ರ ಪ್ರಾಂತರಚನೆಗಾಗಿ ಸತ್ಯಾಗ್ರಹ ಹೂಡುವದಾಗಿ ಸಾರಿದ್ದಾರೆ. ಸತ್ಯಾಗ್ರಹದ ಮೂಲಕ ಪ್ರಾಂತರಚನೆಯೂಡೀತೆನ್ನುವದು ಹುಚ್ಚು ಕಲ್ಪನೆ; ಆದರಲ್ಲೂ ಆಂಧ್ರದ ಪರಿಸ್ಥಿತಿಯೇನೆಂಬುದು ಕಾಂಗ್ರೆಸ್ ಧುರೀಣರಿಗೆ ಜೆನ್ನಾಗಿ ತಿಳಿದಿದೆ. ಮದ್ರಾಸು ಶಾಸನ ಸಭೆಗೆ ಆರಿಸಿಬಂದ ಬಹುಸಂಖ್ಯಾತ ಕಮ್ಯೂನಿಸ್ಟ್ ಪ್ರತಿನಿಧಿಗಳು ಆಂಧ್ರದವರು. ಪ್ರಾಂತರಚನೆಯಾಗುವದಾದರೆ ಅಲ್ಲಿನ ರಾಜಕಾರಣದಲ್ಲಿ ಬೇರೊಂದು ಕೈಯ ಕೈವಾಡ ನಡೆಯುವದು ನಿಶ್ಚಿತ. ಮದ್ರಾಸದ ರಾಜಕಾರಣಯಾವುದೇ ಒಂದು ಮೂರ್ತ ಸ್ವರೂಪಕ್ಕೆ ಬಾರದಿರುವುದರಿಂದ ಇಲ್ಲಿ ಇನ್ನೊಂದು ಸ್ಥಿರ ಮಾದವನ್ನುಂಟುಮಾಡುವದು ಸರಿಯಾಗದು. ಮದ್ರಾಸದ ರಾಜಧಾನಿಯು ಕುಂತು ಆಂಧ್ರರಲ್ಲಿ ಭಿನ್ನಾಭಿಪ್ರಾಯವಿದೆ. ರಾಯಲ ಶೀಮಾದವರು ಮದ್ರಾಸವನ್ನು ಬಿಟ್ಟು ಆಂಧ್ರ ಪ್ರಾಂತ ನಮಗೆ ಬೇಡವೆನ್ನುತ್ತಿರೆ. ಬಳ್ಳಾರಿ ಮತ್ತು ಹೈದರಾಬಾದುಗಳಲ್ಲಿ ಆಂಧ್ರದವರು ಅಕ್ರಮಣ ಮನೋವೃತ್ತಿಯುಳ್ಳವರಾಗಿದ್ದಾರೆ. ಈ ತೊಡಕುಗಳನ್ನು ಮೊದಲಾಗಿ ಬಿಡಿಸುವದು ಮುಖ್ಯವಾಗಿದೆ. ಇದು ಸುಲಭವಾಗಿ ಬಗೆಹರಿಯಬಹುದೆನ್ನುವದನ್ನು ಸ್ವಾಮಿ ಶೀತಾರಾಮರು ಯತ್ನಿಸಿ ಕಾಂಗ್ರೆಸ್ ವರಿಷ್ಠರಿಗೆ ಸರಿಯಾದ ಪರಿಸ್ಥಿತಿಯನ್ನೊದವಿಸಿಕೊಡಬೇಕಾಗಿದೆ. ಈಗ ಅವರೂ ಅವರ ಅನುಯಾಯಿಗಳೂ ಎಸ್ಸರಿಸುತ್ತಿರುವ ಧೋರಣೆಯಿಂದ ಇಷ್ಟಕ್ಕಿಂತ ಅನಿಷ್ಟವೇ ಪ್ರಾಪ್ತವಾಗಬಹುದು ತಮ್ಮನ್ನು ತಾವು ತಿದ್ದಿಕೊಳ್ಳದೆ ಬೇರೆಯವರನ್ನು ಬೆಟ್ಟಿಟ್ಟು ತೋರಿಸುವದು ಸರಿಯಲ್ಲ! ಇಂದು ಆಂಧ್ರ ಪ್ರಾಂತಕ್ಕೆ ಇರುವ ಅಡ್ಡಿ ಆತಂಕಗಳ ನಿವಾರಣಕರ್ತರು ಆಂಧ್ರರೇ ಹೊರತು ನೆಹ್ರೂಗಳೂ ಅಲ್ಲ— ಭಾರತ ಸರಕಾರವೂ ಅಲ್ಲ! ಬೇರೆಯವರನ್ನು ತಿಳಿದುಕೊಂಡು ಸೌಹಾರ್ದವನ್ನು ಬೆಳೆಸಿ ನ್ಯಾಯವಾದ ಮಾರ್ಗವನ್ನು ಆಂಧ್ರರು ಹಿಡಿಯುವವರೆಗೆ ನೆಹ್ರೂ ವರಿಷ್ಠರಾದರೂ ಈ ಸಂಕುಚಿತ ಮನೋವೃತ್ತಿಗೆ ಮಣಿಯುವಂತಿಲ್ಲ. ಇಡಿಯ ದೇಶದ ಹಿತ ಮತ್ತು ಲಕ್ಷಣೆಯ ದೃಷ್ಟಿಯಿಂದ ಇದು ವ್ಯವಸ್ಥಾರ್ಯವೂ ಅಲ್ಲ!

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಈ ಸಂಸ್ಥೆಯ ತಾ. 31-12-1951 ಕ್ಕೆ ಅಂತ್ಯವಾದ ಹದಿನೇಳನೆ ವರ್ಷದ ಪ್ರಗತಿವರ ವರದಿ ನಮ್ಮ ಕೈ ಸೇರಿದೆ; ಅದನ್ನು ವಿಮರ್ಶಿಸಲು ಅತ್ಯಾನಂದವಾಗುತ್ತದೆ.

ವರದಿ ವರುಷದಲ್ಲಿ ರೂ. ೦೨,೫೬,೧೫೦ ಮೌಲ್ಯದ ಪ್ರೊಪೋಸಲ್ ಬಂದಿದ್ದವು ವರ್ಷಾಂತ್ಯದಲ್ಲಿ ಇತ್ಯರ್ಥಕ್ಕೆ ಬಾಕಿ ಇದ್ದವುಗಳನ್ನು ಸೇರಿಸಿದನಂತರ ವರ್ಷಾಂತ್ಯದಲ್ಲಿ ರೂ. 52,10,550 ಮೌಲ್ಯದ ಪಾಲಿಸಿಗಳನ್ನು ಕೊಡಲಾಯಿತು. ಉಳಿದ ಪ್ರೊಪೋಸಲ್ಸುಗಳಲ್ಲಿ ಕೆಲವು ತಿರಸ್ಕರಿಸಲ್ಪಟ್ಟವು, ಮತ್ತೆ ಕೆಲವು ವರ್ಷಾಂತ್ಯದಲ್ಲಿ ತೀರ್ಮಾನಕ್ಕೆ ಬಾಕಿ ಇದ್ದವು.

ವರದಿ ವರುಷದಲ್ಲಿ ಪ್ರೀಮಿಯಮ್ ಮತ್ತು ಇತರ ನಿಧಿಗಳ ಬಡ್ಡಿ ರೂ 17,71,834—14—0 ಮತ್ತು ರೂ 1,99,150—10—9 ಅನುಕ್ರಮವಾಗಿ ಜನಿಯಾಗಿತ್ತು. ಇನ್ಶೂರೆನ್ಸ್ ಕಾಯಿದೆಯ ನಿಯಮಗಳ 25ನೆ ಕ್ರಮದ ತಿಳಿಕ್ಕೆ ಹಾಕಲಾಗಿ ಪ್ರೀಮಿಯಮ್ ಉತ್ಪತ್ತಿಯ ಸೇಕಡಾ 10.83ರಷ್ಟು ಮಾತ್ರ ಆಡಳಿತ ಖರ್ಚಿಗೆ ತೆಗೆಯಲಾಗಿದೆ. ಇದು ಎತ್ತಿ ಹೇಳತಕ್ಕ ವಿಷಯ.

ಕ್ಷೇಮನಿಧಿಯಲ್ಲಿರಿಸಲ್ಪಟ್ಟ ರೂ. 2,77,600 ವಿನಹ ಲೈಫ್ ಫಂಡು ವರ್ಷಾಂತ್ಯದಲ್ಲಿ ರೂ. 71,62,553-1-0 ಕ್ಕೇರಿತು.

ಕಂಪೆನಿಯ ಅಫೀರು ಕಟ್ಟಡವೊಂದು ಬೆಂಗಳೂರಲ್ಲಿ ಪೂರ್ಣವಾಗುತ್ತಲಿರುವದು. ಕಂಪೆನಿಯ ಭದ್ರತೆಗೊಂದು ನಿದರ್ಶನವಾಗಿದೆ. ವರದಿ ವರ್ಷದಲ್ಲಿ ಕಂಪೆನಿಗೆ ಹೊಸ ವ್ಯವಹಾರವು ಜೆನ್ನಾಗಿ ಅಗಿದ್ದು ಇತರ ಕಂಪೆನಿಗಳಿಗೆ ಮಾದರಿಯಾಗಿದೆ. ಉಡುಪಿಯಂತಹ ಸಣ್ಣ ನಗರದಲ್ಲಿ ಈ ಸಂಸ್ಥೆಯ ಪ್ರಧಾನ ಕಾರ್ಯಾಲಯವಿದ್ದರೂ ಅಖಿಲ ಭಾರತದ ವಿಮಾ ಜಗತ್ತಿನಲ್ಲಿ ಒಂದು ಗಣ್ಯ ಸ್ಥಾನವನ್ನು ಪಡೆದು ಮಾತ್ರವಲ್ಲದೆ ಮೆಚ್ಚಿಗೆಗೆ ಪಾತ್ರವಾಗಿರುವದು ಉದ ಪಿಗೊಂದು ಹೆಮ್ಮೆಯ ವಿಷಯ. ಕನ್ನಡಿಗರಿಗೊಂದು ಗೌರವದವಿಚಾರ. ಆಡಳಿತ ವರ್ಗದ ವ್ಯವಸ್ಥಿತ ವೈಜ್ಞಾನಿಕ ಯೋಜನೆಯಿಂದ ಸತತವಾಗಿ ದುಡಿಯುತ್ತಿರುವ ಮೇನೇಜಿಂಗ್ ಡೈರೆಕ್ಟರ್ ಶ್ರೀ.ಟಿ.ಆರ್.ಎ.ವೈಗಳ ಅತಿ ಜಾಗರೂಕತೆಯ ದಕ್ಷ ಮಾರ್ಗದರ್ಶನದಿಂದ "ಕೆನರಾ ಮ್ಯುಚವಲ್" ಅಖಿಲ ಕರ್ನಾಟಕದಲ್ಲಿ ಅತ್ಯಂತ ಜನಪ್ರಿಯವಾಗಿರುವುದಲ್ಲದೆ ಹಿಂದುಸ್ತಾನದ ಕೆಲವು ಉತ್ತಮ ಕಂಪೆನಿಗಳಲ್ಲಿ ಇದೊಂದಾಗಿದೆ ಎನ್ನಲು ನಮಗೆ ಅಭಿಮಾನವನಿಸುತ್ತದೆ ಚೀಫ್ ವಿಜಂಟಂಡ್ ಕಮರ್ಶಿಯಲ್ ಕೊಯರೀರೇಶನ್ ಆಫ್ ಇಂಡಿಯ ಲಿ.ಇವರ ಪ್ರಯತ್ನಪೂರ್ಣ ಸಹಕಾರವೂ ಶ್ಲಾಘನೀಯ. ಕೆನರಾ ಮ್ಯೂಚುವಲ್ ಇನ್ನಷ್ಟು ಉನ್ನತ ಸ್ಥಿತಿಗೇರಿ ವಿಮಾ ಪ್ರಪಂಚದಲ್ಲಿ ಪ್ರಥಮ ಮನ್ನಣೆ ಪಡೆಯುವಂತಾಗಲೆಂದೇ ನಮ್ಮ ಹಾರೈಕೆ.

ತಾರೀಕು 26-2-52ರಿಂದ

ದಿಲ್‌ರುಬಾ

ಪಾತ್ರವರ್ಗ:—ರೆಹನಾ, ದೇವಾನಂದ್, ಯಾಕೂಬ್, ಕುಳ್ಳಾ, ಮೊದಲಾದವರು.

ಮುಂದಿನ ಚಿತ್ರ

ದೀದಾರ್

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ

ಲುತನ ಮಸೂದೆ—ದಕ್ಷಿಣ ಲ್ಲಿ ಚಾಲಗೇಣಿ ವಕ್ಕಲುಗಳ ಹಿ ವಕ್ಕಲುತನ ಮಸೂದೆಯನ್ನು ಳಿಡಲೆ ಜ್ಯಾರಿಗೆ ತರುವುದರಂ ನನು ತನ್ನ ಭೂಮಿಯಲ್ಲಿ ಅನ್ಯೆ ಣಿಗನಾಹುವನು. ಇದರಿಂದ ಬ ! ಅಹಾರ ಪರಿಸ್ಥಿತಿಯು ಸು ಕುದು. ಭೂಮಿಯು ಸರ್ವಜನ ಯೋಗಾರ್ಥವಾಗಿ ತವ್ಯ ಕ್ಕೆ

ಒಂದು ನಿಶ್ಚಿತವೆಂದು ಭೂ ಮಾಲಕರು ತಿಳಿದಿರಬೇಕು. ವಕ್ಕಲುಗಳ ಉತ್ಸಮ ಉತ್ಪತ್ತಿಯನ್ನ ತಂಲು ಅನು ಕೂಲವಾಗುವಂತೆ ನ್ಯಾಯವಾದ ಗೇಣಿ ನಿಶ್ಚಯ, ಗೇಣಿ ಸಂದಾಯವಾಗುತ್ತಿರು ವಾಗ ವಕ್ಕಲುತನ ರದ್ದಾಗದಿರುವಿಕೆ, ಸ ಟ್ಟಿಸಿದ ಗೇಣಿಗೆ ರಸೀದಿ ಕೊಡುವುದು- ಇ ವೇ ಮೊದಲಾದ ಸುಧಾರಣೆಗಳನ್ನು ಸರ ಕಾರ ಜ್ಯಾರಿಗೆ ತರಬೇಕು. ಅಂತೆಯೇ ಭೂಮಾಲಿಕರಿಗೆ ಯುಕ್ತ ಭದ್ರತೆಗಳನ್ನೂ ಒದಗಿಸಬೇಕು.

ಆಹಾರ ಸಮಸ್ಯೆ ಮತ್ತು ನಿಯಂ ತ್ರಣ—ಸರಕಾರ ಮತ್ತು ಜನತೆ ನಿ ಯಂತ್ರಣ ಬೇಕೇ, ಬೇಡವೇ ಎಂದು ಒ ಮ್ಮೆ ದೃಢ ನಿಶ್ಚಯ ಮಾಡುವುದು ಒಳ್ಳೆ ಯದು. ಆಸ್ಪಷ್ಟತೆ ಧೋರಣೆಯಿಂದ ಅಪಾ ರ ಹಾನಿಯಾಗುವುದು. ನಿಯಂತ್ರಣ ಬೇ ಕೆಂದಾದರೆ ಅದರೊಂದಿಗಿನ ಅನಾನುಕೂ ಲತೆ, ಅಸಮಾಧಕ್ಕೆ ಜನರು ಸಿದ್ಧರಿರಬೇಕು ಇದರೊಂದಿಗೆ ಲಂಚಗುಳಿತನವೇ ಮೊದ ಲಾದ ಅನಿಷ್ಟಗಳೂ ಇದ್ದೇ ಇವೆ. ನಿಯಂ ತ್ರಣ ಬೇಡವೆಂದಾದರೆ, ತಮ್ಮ ತಮ್ಮ ಹೊಣೆಗಾರಿಕೆಯನ್ನು ಪ್ರತಿಯೊಬ್ಬನೂ ತಿಳಿದೇ ಯೋಗ್ಯ ರೀತಿಯಲ್ಲಿ ವರ್ತಿಸಬೇ ಕು. ಇಂತಹ ಹೊಣೆಗಾರಿಕೆಯನ್ನು ಅದ ಪ್ಪು ಬೇಗ ಜನರ ಮೇಲೆ ಹೊರಿಸುವುದೇ ಯುಕ್ತವೆಂದು ಕಾಣುತ್ತದೆ

ದಕ್ಷಿಣ ಕನ್ನಡದ ಮಟ್ಟಿಗೆ. ಕಾಸರ ಗೋಡು ತಾಲೂಕಿನ್ನು ಬಿಟ್ಟರೆ, ಆಹಾ ರ ಪದಾರ್ಥ ಅಲ್ಲಿಂದಲ್ಲಿಗಾಗಬಹುದು. 'ಲೆವ್ವಿ' ಪದ್ಧತಿಗೂ ಮಿಕ್ಕುಳಿದ ಅಕ್ಕಿಯು ಯೋಗ್ಯ ರೀತಿಯಲ್ಲಿ ವಿತರಣೆಯಾ ಗಬೇಕು, ಗುಪ್ತ ರೀತಿಯ ಸಂಗ್ರಹವಾ ಗದಂತೆ ನೋಡಿಕೊಳ್ಳಬೇಕು. ಈಗ ಜೀ ನಿಸಿನ ಅಂಗಡಿ ಇಟ್ಟವರಿಗೆಲ್ಲ ಅಕ್ಕಿಕೊಂ ಡುಕೊಳ್ಳುವ ಮತ್ತು ಮಿಡಿಗೆ ರೂ 21/ ಕ್ಕೆ ವಿಕ್ಕದಂತೆ ಮಾರುವ ಲೈಸನ್ಸ್‌ಗಳ ನ್ನು ಕೊಡುವುದರಿಂದ, ಭೂಮಾಲಿಕರು ಲೈಸನ್ಸುದಾರರಿಗೆ ಮಾತ್ರ ಮಾರಬೇಕೆಂ ಬ ನಿಯಮವಿಡುವುದರಿಂದ, ಅಗತ್ಯ ವಿ ದ್ದಾಗ ಭೂಮಾಲಿಕರಿಂದ ಮುಡಿ ಒಂದ ರ ರೂ. 14/-ರಂತೆ ಅಕ್ಕಿಯನ್ನು ಪಡೆ ಯುಕೊಳ್ಳುವ ಅಧಿಕಾರವನ್ನು ಸರಕಾರ ಇಟ್ಟುಕೊಳ್ಳುವುದರಿಂದ, ಜಿಲ್ಲೆಯೊಳಗೆ

ಆಹಾರ ಸಮಸ್ಯೆ ಮತ್ತು ನಿಯಂತ್ರಣ.

[ಶ್ರೀ ಟಿ ಎ ಪೈ, ಎಮ್ ಎಲ್, ಎ ಯವರನ್ನು ಪತ್ರಿಕಾ ಪ್ರತಿನಿಧಿಗಳು ಭೇಟಿಯಾದಾಗ ಕೆಳಗಿನ ಕೆಲವು ವಿಷಯಗಳಲ್ಲಿ ಅವರಿತ್ತ ಅಭಿಪ್ರಾಯಗಳ ಸಾರ]

ಒಂದು ಕಡೆಯಿಂದ ಇನ್ನೊಂದು ಕಡೆ ಅ ಕ್ಕಿ ಸಾಗಿಸಲು ನಿರಾತಂಕ ಮಾಡುವುದ ರಿಂದ ವಿತರಣೆಯು ಯೋಗ್ಯ ರೀತಿಯ ಲ್ಲಾಗಬಹುದೆಂದು ನನಗನಿಸುತ್ತದೆ. ಸರ ಕಾರಕ್ಕೆ ಮುಡಿ ಒಂದರ ರೂ. 14/-ರಂತೆ ಕೊಡುವುದಕ್ಕಿಂತ ಸ್ವಲ್ಪ ಹೆಚ್ಚಿನ ಕ್ರಯ ಕ್ಕೆ ಭೂಮಾಲಿಕನು ಇದ್ದ ಸ್ಟಾಕನ್ನು ಕೊಡಲು ತವಕ ಪಡುತ್ತಾನೆ. ಅಂತೆಯೇ ವರ್ತಕನಿಂದ ಸಂಕಾರ ಅಕ್ಕಿ ಕೊಳ್ಳುವಾ ಗ ಮುಡಿಗೆ 21ಕ್ಕೆ ಮಿಕ್ಕಿ ಕ್ರಯಕೊಡ ದ ಕಾರಣ, ಕಳ್ಳತನದಲ್ಲಿ ಹೆಚ್ಚಿನ ಕ್ರಯ ಕ್ಕೆ ಅವನೂ ಪಡೆಕೊಳ್ಳುವಂತಿಲ್ಲ. ಕಡಮೆ ಕ್ರಯದಲ್ಲಿ ಎಲ್ಲಿ ಅಕ್ಕಿ ಸಿಗುವುದೆಂದು ವ ರ್ತಕನು ನಿರೀಕ್ಷಿಸುತ್ತ, ಅಕ್ಕಿಯ ಧಾರ ಣೆ ಕಡಿಮೆಯಾಗಿಯೇ ಇರುವಂತೆ ಅವ ನು ಪ್ರಯತ್ನಿಸುತ್ತಾನೆ. ಅಲ್ಲದೆ, ಉಡು ಪಿ ಮಠದಾರ ಕ್ಷೇತ್ರದಲ್ಲಿ ಆಡಳಿತ ಸ್ವಯಂ ಸಹಕಾರ ಕೋರಿ ಖಾಸಗಿ 'ಲಿಫ್ಟ್ ಅಂಗಡಿ'ಗಳನ್ನು ಸ್ವತೇ ಹಳ್ಳಿಯಲ್ಲಿ ತೆರೆ ಯುವಂತೆಯೂ ಕೃಷಿ ಇಲಾಖೆಯ ಸಹ ಕಾರ ಬಯಸಿ ಉತ್ತಮ ಬೀಜ, ಗೊಬ್ಬರ ಗಳ ವಿತರಣೆಗೆ, ಬೆಳೆ ಹೆಚ್ಚಿಸಲು ಪ್ರಚಾ ರ ಮಾಡಲು ಗ್ರಾಮ ಗ್ರಾಮದಲ್ಲಿ ಒಂ ದೊಂದು ಸಂಘವನ್ನು ನಿರ್ಮಿಸುವಂತೆ ಯೂ ಪ್ರಯತ್ನಿಸಬೇಕೆಂದಿರುವೆ.

ಮಾರಾಟ ತೆರಿಗೆ ಮತ್ತು ಜನ ಜೀವನ.—ವ್ಯವಹಾರ ತೆರಿಗೆದರೂ ಮಾ ರಾಟ ತೆರಿಗೆ ಹೋಗುವಂತಿಲ್ಲ ಸರಕಾರ ಇದನ್ನು "ಕಾಮಧೇನು" ಎಂದು ತಿಳಿದಿರುವುದಾದರೂ, ವಧ್ಯಮ ತರಗತಿಯ ಮತ್ತು ಒತ್ತ ವನರಿಗೆ ಇದೊಂದ ಬಲ ವಾದ ಹೊರೆ. ಮಾರಾಟ ತೆರಿಗೆಯನ್ನು ಒಂದು ಕಡೆಯಲ್ಲಿ ಮಾತ್ರ ತೋಸಬೇ ಕು; ಅಹಾರ ಪದಾರ್ಥಗಳ ಮೇಲೆ ಹೊ ರಿಸಕೂಡದು. ಮೊಗವೀರರ ಮಾನಿನ ಹಿಡಿತದ ಮೇಲೆ ಮಾರಾಟ ತೆರಿಗೆ ಹೊರಿ ಸುವುದರಲ್ಲಿ ನ್ಯಾಯವಿಲ್ಲ ಈ ಸುಧಾರಣೆ ಗಳಿಂದ ಜನಜೀವನದ ವೆಚ್ಚ ಸ್ವಲ್ಪ ಕಡಿ ಮೆಯಬಹುದು.

ಮದ್ಯಪಾನ ನಿರೋಧ—ನನಗೆ ಈ ಕಾನೂನಿನಲ್ಲಿ ಅನುಕಂಪವಿದೆ. ಆದರೆ ಜನತೆಯಿಂದ ಸ್ವೀಕೃತವಾಗದ ಸುಧಾರ ಣಾ ಮಸೂದೆಯೂ ಯಶಸ್ವಿಯಾಗದು ಮದ್ಯಪಾನ ನಿರೋಧವು ಎಜೆಸಿದಷ್ಟು ಜ ಯಪ್ರದವಾಗಿಲ್ಲ ಜನರಲ್ಲಿ ಕಾನೂನಿನ ಮೇಲಣ ಗೌರವ ಮಾಯವಾಗುತ್ತಿದೆ. ಇ ದರ ಪುನರ್ವಿಮರ್ಶೆಯಾಗಬೇಕಾದೀತು. ವಿಚಾರಣಾಧಿಕಾರಿಗಳಾಗಿ ಆರ್ಥಿಕ ತಜ್ಞರು ಮತ್ತು ನ್ಯಾಯಾಧಿಪತಿಗಳನ್ನೊಳಗೊಂ ಡ ಒಂದು ಸಮಿತಿಯನ್ನು ನಿರ್ಮಿಸಿ ಈ ಸ್ಪಷ್ಟೀಕರಣವನ್ನು ಅದಕ್ಕೆ ಒಪ್ಪಿಸುವುದು ಒ ಳ್ಳೆಯದು. ಈ ಮಟ್ಟಿಗೆ ಇದೇ ತಿಂಗಳು 21ರ ಟೈಮ್ಸ್ ಆಫ್ ಇಂಡಿಯಾ ಪತ್ರಿ ಕೆಯಲ್ಲಿ ಟಿಕರ್ಸಿಯ 'ಒಕ್ಸ್' ಎಂಬ ದೈನಿ ಕದ ಸಂಪಾದಕರು ಕೊಟ್ಟ ಹೇಳಿಕೆಯ ನ್ನು ನಾನು ಒಪ್ಪಿಕೊಳ್ಳುತ್ತೇನೆ. ಟಿಕರ್ಸಿ ಮತ್ತು ಅಮೇರಿಕಗಳಲ್ಲಿ ಮದ್ಯಪಾನ ನಿ ರೋಧ ಕಾನೂನನ್ನು ಕೈಗೊಡಿಸಿಕೊಳ್ಳ ಲು ಸಾಧ್ಯವಾಗದಿದ್ದುದು ಮತ್ತು ಇದ ರಿಂದ ಬಂದೊದಗಿದ ಅನರ್ಥಗಳನ್ನು ಅವರು ವಿವರಿಸಿದ್ದಾರೆ ಎಂತೂ ಈ ಕಾನೂನನ್ನು ಸೂಕ್ಷ್ಮವಾಗಿ ಪರಿಶೀಲಿಸಿ ತಕ್ಕ ಬದಲಾ ವಣೆಗಳನ್ನು ಮಾಡಬೇಕಾದೀತು.

ಉಡುಪಿ

ಅನಿರೀಕ್ಷಿತ ಮಳೆ—23-24-25 ರಲ್ಲಿ ಸೀಮೆ ಗಾಳಿ, ಸೋಡ್ಮಖಂಡು ಇದ್ದು ದಕ್ಷಿಣ ಕೊನೆಗೆ ಮಳೆ ಸುರಿಯುವುದು. ಬಂ ಟಿವಾಳ ಮೊದಲಾದ ಕಡೆಗಳಲ್ಲಿ ಕರಿಯಾಗಿ ಮಳೆ ಬಿದ್ದಿರುವುದೆಂದು ತಿಳಿದು ಬರುತ್ತದೆ ಈಗ ನಿಜವೇಕ ಸಿಪೆ ಅರಂಭವಾಗಿರುವುದು.

ನಮಗೆ ಬಂದ ಪತ್ರಿಕೆಗಳು—ಈ ಗ ಸ್ಕೂಲ್‌ಡೆಗಳ ಪರ್ವಕಾಲ, ಹೆಚ್ಚಿನ ಕಡೆ ಗಳಲ್ಲಿ ಕುಂಬಾ ಕಾರ್ಯ ಕ್ರಮಗಳನ್ನು ತು ರುಕಿಸಿಕೊಂಡು ನಾಲ್ಕೈದು ಗಂಟೆ ಕಾಲ ಅ ನಾವಶ್ಯಕವಾಗಿ ಶೋಷಣೆ ಮಾಡುತ್ತಾರೆ. ಪೆ ಟ್ಟಿಂದರೆ ಕಾರ್ಯಕ್ರಮ 2 ಗಂಟೆಗೆ ಮಿಕ್ಕಿ ರಬಾರದೆಂಬ ಆರ್ಡರ್ ಬಾತ್ಮಿಯೊಂದೂ ಶ್ರೀ ಶ್ರೀಪತಿ ನಾಸಿಂಹ ಆಡಿಗರಿಂದ ಅ ಳ್ಳೋತಿಸಿಕ ಸಮ್ಮೇಲನದಲ್ಲಿ ಯಾವ ವಿಷ ಯವೂ ನಿರ್ಣಯವಾಗಿಲ್ಲ ಆದ್ದಿ ಬಂದವರು ನಾಲ್ಕೈದು ಜೋತಿಸಿಕರು, ವೃಥಾ ಕಂಠ ಕೋಷತೆ ಎಂಬರ್ಥದ ದೀರ್ಘ ಬಾತ್ಮಿಯೊಂ ದೂ ನಮ್ಮೆಡೆಗೆ ಬಂದಿದ್ದು ಸ್ಥಳಾಭಾವದಿಂದ ಪ್ರಕಟಿಸಲಿಲ್ಲ. ಸಂ ನ.

ಕಸ್ತೂರಿ ಮೆಡಿಕಲ್ ಕಾಲೇಜು—ಸ್ಥಾಪನೆಯ ಸಾಧ್ಯ ಸಾಧ್ಯತೆಯನ್ನು ಪರಿಶೀ ಲಿಸಲು ಬಂದಿದ್ದ ಕರ್ನಾಟಕ ಯುನಿವರ್ಸಿಟಿ ಕಮಿಶನಿನ ಅಧ್ಯಕ್ಷರಿಂದ ಎಳೆಮಿಯು ರ ಜೇಸ್ಕಾರ್ ಡಾ. ಟಿ. ಎಂ ಎ ಪೈಗಳಿಗೆ ಒಂ ದು ಪರಿಪತ್ರವು ಬಂದಿದ್ದು ಅದರಲ್ಲಿ ಕಟ್ಟಡ ಕೆಲವು ಸಾಹಿತ್ಯ ಸಲಕರಣಾದಿಗಳನ್ನು ಒದ ಗಿಸಲು ಸಾಧ್ಯವಾದರೆ ಜೂನಿನಲ್ಲೇ ಕಾಲೇಜ ನ್ನು ಪ್ರಾರಂಭಿಸಲು ಅನುವು ಮಾಡಿಕೊಡು ವುದಾಗಿ ತಿಳಿಸಿದ್ದಾರೆ. ಇದಕ್ಕೆ ಕಡಮೆ ಎಂದರೂ 10 ಲಕ್ಷ ರೂಪಾಯಿ ಬೇಕಾ ಗಬಹುದು. ಹಲವು ಸಂಖ್ಯ ಸಂಸ್ಥೆಗಳನ್ನು ಸ್ಥಾಪಿಸಿ ಜನರ ಸ್ವಿತ ವಿಶ್ವಾಸಗಳನ್ನು ಗಳಿ ಸಿಕೊಂಡಿರುವ ನಿಮ್ಮಿಂದ ಇದು ಸಾಧ್ಯವಾ ಗಬಹುದೆಂದೂ ಸೂಚಿಸಿದ್ದಾರೆ. ಈ ವಿಚಾರ ವನ್ನು ರಿಜಿಸ್ಟ್ರಾರರು ಶ್ರದ್ಧೇಷಾರ್ಹಿ ವಿದ್ಯಾರ್ಥಿ ಗಳ ಮತ್ತೂ ಜನತೆಯ ಮುಂದಿಟ್ಟು 10 ಲ ಕ್ಷ ರೂಪಾಯಿಗಳನ್ನೊದಗಿಸುವ ಸಾಧ್ಯಾಸಾ ಧ್ಯತೆಯನ್ನು ಸಾವಧಾನದಿಂದ ಪರಿಶೀಲಿ ಸುವಂತೆಗೆ ತಕ್ಕ ನಿರ್ಧಾರ ಮಾಡುವುದಾಗಿಯೂ ತಾ 24ರಲ್ಲಿ ಸೇರಿದ ಪತ್ರಿಕಾ ಪ್ರತಿನಿಧಿಗಳ ಸ ಭೆಯಲ್ಲಿ ತಿಳಿಸಿದರು.

ಸೈಂಟ್ ಸಿಸಿಲಿ ಕಾನ್ವೆಂಟಿನ ಪ್ರಾ ರಂಭೋತ್ಸವ ನಿನ್ನೆಯಾ ಸರಿಯಾಗಿ ಜ ಲ್ಲಾ ಕಲೆಕ್ಟರರಾದ ಎ.ಆರ್, ರಾಜಕರ್ತಂ ಇವರ ಅಧ್ಯಕ್ಷತೆಯಲ್ಲಿ ಪ್ರಾ. 25ನೇ ಸಂಜೆ ನಾಟಕ, ನೃತ್ಯ ಮೊದಲಾದ ಸುದೀರ್ಘ ಕಾ ರ್ಯಕ್ರಮಗಳಿಂದ ಬಹಳ ಯಶಸ್ವಿಯಾಗಿ ಜರಗಿತು.

ಮಂಗ್ಳೂರು ಬಂದರದಲ್ಲಿ ತುಫ ನು- ಇದೇ ತಿಂಗಳು 22ರಂದು ಬೊಂದಾ ಯಿಯಿಂದ ಬಂದ ಸ್ಟೀಮರು ಮಂಗ್ಳೂರು ಬಂದರದಲ್ಲಿ ಲಂಗರು ಹಾಕಲು ತುಫಾನಿನಿಂ ದ ಸಾಧ್ಯವಾಗದೆ, ಪ್ರಯಾಣಕ್ಕೇ ಸರಿಯ ಹಾಗೆಯೇ ಸಾರಕ್ಕಿತ ಬಂದರವಾದ ಮಲ್ಪೆಗೆ ಹಿಂದಿರುಗಿ ಬಂದು ನಂತರ ಪ್ರಯಾಣ ಕನ್ನಿಲ್ಲ ಇದ್ದಿಂದ ಇಳಿದು ಸೆಲಪಡಿಗರಾಗಿ ಮಂಗ್ಳೂರನ್ನು ಸೇರುವಂತಾಯಿತು.

ಮದ್ರಾಸಿನಲ್ಲಿ ಸಮ್ಮಿಶ್ರ ಸರಕಾರ ರಚಿಸಲು ಕಾಂಗ್ರೆಸಿಗೆ ನೆರವಾಗಲು 70 ಮಂದಿ ಸ್ವತಂತ್ರ ಜನಗಣ ಪ್ರಾಂತಿಕ ಕಟ್ಟಣ ಸದಸ್ಯರು ತಯಾರಾದ್ದಾರೆಂದು ಸಂಯುಕ್ತ ಪ್ರಜಾಪಕ್ಷದ ಧೀಮಂತ ಶ್ರೀ ಮುತ್ತಯ್ಯ ಚೆಟ್ಟಿಯಾರರು ಕಂಂಭ ಕೋಣದ ಸಭೆಯೊಂ ದರಲ್ಲಿ ಘೋಷಿಸಿದ್ದಾರೆ

ರೈಲ್ವೆ ಕೆಲಸಗಾರರ ತುಟ್ಟಿಭತ್ತೆ ಯನ್ನೆಷ್ಟು ಇಷ್ಟನೆ ಸ್ವಲ್ಪ ಭಾಗವನ್ನು ಸಂಬಳ ದಲ್ಲಿ ಸಮಿಕರಿಸುವ ಕುರಿತು ಪರ್ಯಾಲೋ ಚನೆ ನಡಿಯೊಪ್ಪಿಸಲು ಸರಕಾರವು ಸಮಿ ತಿಯೊಂದನ್ನು ನೇಮಿಸಿದೆ ಎಂದು ಕೇಂ ದ್ರ ರೈಲ್ವೆ ಸಚಿವ ಶ್ರೀ ಕೆ ಸಂತಾನಂ ರು ಪಾರ್ಲಿಮೆಂಟಿನಲ್ಲಿ ಹೇಳಿದರು

ಕೆಲಸಗಾರರ ನಿವಾಯೋಜನೆ ಯನ್ನು ಪ್ರಧಾನ ಮಂತ್ರಿ ನೆಹರೂರವರು ತಾ 24ರಲ್ಲಿ ಕಾನಪುರದಲ್ಲಿ ಉದ್ಘಾ ಟಿಸುತ್ತ ಕೆಲಸಗಾರರು ಸಂಸ್ಥಾಪ ಕರಾಗಿ ಕಾರ್ಯೋನ್ಮುಖರಾಗಿ ವರ್ತಿಸಬೇಕೆ ದೂ ಕರೆಯಿತ್ತರಲ್ಲದೆ ಮುಷ್ಕರ ಮಾ ಡಿದೆಂದೂ ತಿಳಿಸಿದರು.

ಮದ್ರಾಸಿನ ಹೊಸ ಗವರ್ನರ್ ಶ್ರೀ ಪ್ರಕಾಶರು ಇಂದು, ತಾ. 12ಕ್ಕೆ ಬಾ ರ್ಜ ಮಹಿಶಿಯವರು, ಅಂದೇ ನಿವೃತ್ತಿ ಗೊ ಳಿಸಿದ ಗವರ್ನರ್ ಭವನಕ್ಕೆ ಮಂತ್ರಿಗಳ ಸಮೇತ ರಾಜಕೀಯೇತರ ಬಿಗಿಯಾದಿ ಸಮಾ ರಂಭದಲ್ಲಿ ಪ್ರವೇಶಿಸಿದರು.

ಕರ್ನಾಟಕ ಸಂಘ ಬಾಳೆಕುದ್ರು

ದ. ಕ.

ಇದೇ ಬರುವ ತಾ 2—3—1952 ನೇ ಆದಿತ್ಯವಾರ ಸಂಜೆ ಗಂಟೆ 3ಕ್ಕೆ ನ ಮ್ಮ ಕರ್ನಾಟಕ ಸಂಘದ ಮಹಾಸಭೆಯ ನ್ನು ಜರಗಿಸಲು ನಿಶ್ಚಯಿಸಿರುವುದರಿಂದ ಸದಸ್ಯರೆಲ್ಲರೂ ಸಂಘದ ಕಾರ್ಯಾಲಯ ದಲ್ಲಿ ಹಾಜರಾಗಬೇಕಾಗಿ ಕೇಳಿಕೊಳ್ಳುವೆ.

B A Udpa,
ಕಾರ್ಯದರ್ಶಿ

Balkudru, 26—2—52

ಶ್ರೀ ಬಿ. ಮಂಜಯ್ಯ ಹೆಗ್ಡೆ, ಬಿ.ಎ.ಬಿ ಎಲ್.
ಪ್ರೆಸಿಡೆಂಟ್, ಡಿಸ್ಟ್ರಿಕ್ಟ್ ಬೋರ್ಡು, ದ. ಕ.

ಟೆಂಡರ್ ನೋಟೀಸು

1 4-1952ರಿಂದ 31 3 1953ರ ವರೆಗೆ ದಕ್ಷಿಣ ಕನ್ನಡ ಜಿಲ್ಲಾ ಬೋರ್ಡು ಆಫೀಸು ಮತ್ತು ಇದರ ತಾಲೆಯ್ದಿರುವ ವೇರೆ ಆಫೀಸುಗಳ ಫ್ಯಾರಂಗ್, ಬೈಂಡಿಂಗ್ ಇತ್ಯಾದಿ ಕೆಲಸಾವಶ್ಯಗಳ ಬಗ್ಗೆ ಸೀಲು ಟೆಂಡರುಗಳನ್ನು "1952-53ನೇ ವರ್ಷದ ಬಾಬ್ತು ಪ್ರೆಂಟಿಂಗ್, ಬೈಂಡಿಂಗ್ ವಗೈರೆ ಕೆಲಸಾವಶ್ಯಗಳ ಬಾಬ್ತು ಟೆಂಡರು" ಎಂಬ ಸೀಲು ಮಾ ಡಿದ ಲಕೋಟೆಯ ಮೇಲೆ ಪ್ರೆಸಿಡೆಂಟ್ ದ ಕ ಜಿಲ್ಲಾ ಬೋರ್ಡು ಮಂಗಳೂರು ಎಂಬ ವಿಳಾಸ ಬರೆದು 1952ನೆ ಇಸವಿ ಮಾರ್ಚಿ ತಿಂಗಳ ತಾರೀಕು 15ನೆ ಶನಿವಾರ ಆಫೀಸಿನ ಘಂಟೆ 5ರ ವಳಗೆ ದ ಕ ಜಿಲ್ಲಾ ಬೋರ್ಡು ಆಫೀಸಿಗೆ ತಲ್ಪುವಂತೆ ಕಳುಹಿಸಿಕೊಡಬೇಕಾಗಿ ಕೇಳಿಕೊಳ್ಳಲಾಗುತ್ತದೆ. ಮೇಲ್ಕಾನೆಸಿದ ತಾರೀಕಿನ ನಂತರ 5 ಘಂಟೆಯ ನಂತರ ತಲಪುವ ಟೆಂಡರುಗಳನ್ನು ಅಂಗೀಕರಿಸಲಾಗಲಿಕ್ಕಿಲ್ಲ. ಟೆಂಡರುಗಳು ದ. ಕ. ಜಿಲ್ಲಾ ಬೋರ್ಡ ಪ್ರೆಸಿಡೆಂಟರಿಂದ ಅಥವಾ ಅವರಿಂದ ಅಧಿಕಾರ ಹೊಂದಿದವ್ಯಕ್ತಿಯರಿಂದ 1952ನೆ ಇಸವಿ ಮಾರ್ಚ್ ತಿಂಗಳ ತಾರೀಕು 17ನೇ ಸೋಮವಾರ ಆಪರಾಹ್ನ ಘಂಟೆ 4-30ಕ್ಕೆ ದ. ಕ. ಜಿಲ್ಲಾ ಬೋರ್ಡು ಆಫೀಸಿನಲ್ಲಿ ಆ ಸಮಯ ಹಾಜರಿರುವ ಟೆಂಡರುದಾರರ ಸಮಕ್ಷಮ ತೆರೆಯಲ್ಪಡುತ್ತದೆ.

2 ಪ್ರಿಂಟಿಂಗ್ ಇಷ್ಟಿಂದಿ ಕೆಲಸಗಳ ಕುರಿತು ಪ್ರಿಂಟ್‌ಮಾಡಿದ ಟೆಂಡರು ಫೋರ್ಮನ್ನು ಮತ್ತು ಟೆಂಡರು ಕುರಿತಾದ ಕ್ರಮ ನಿಬಂಧನೆಗಳನ್ನು ಪ್ರತಿಯೊಂದು ಎರಡು ಫೋಟೋಗಳ ಒಂದು ಸೆಟ್ಟಿಗೆ ರೂ[1-0-0] ಎಂಬಂತೆ ಪಾವತಿಮಾಡಿ ಬರಮಾಡುಲಕ ತೆಗೆದುಕೊಳ್ಳಬಹುದು. ಅಂಚೆಯಲ್ಲಿ ಕಳಿಸಲಾಗುವುದಿಲ್ಲ.

ದ ಕ ಜಿಲ್ಲಾ ಬೋರ್ಡು ಆಫೀಸು,
ಮಂಗಳೂರು 21-2-1952

Deju Uchil
For President.

ಮಲ್ಪೆ ಮತ್ಸ್ಯ ವ್ಯವಸಾಯ ಅಭಿವೃದ್ಧಿ ಯೋಜನೆ

ನಮ್ಮೂರ ಪ್ರತಿನಿಧಿಗಳ

ಸ್ವತ್ವ ಕಾರ್ಯ

ನಮ್ಮೂರ ಎಸೆಂಬ್ಲಿ ಪ್ರತಿನಿಧಿಗಳಾದ ಶ್ರೀ ಟಿ. ಎ. ಪೈಗಳ ಕೋರಿಕೆಯಂತೆ ಮಲ್ಪೆಯನ್ನು ಸಂದರ್ಶಿಸಲು ಬಂದ ಫಿಶರೀಸ್ ಡೆಪ್ಯುಟಿ ಡೈರೆಕ್ಟರ್ ಶ್ರೀ ಪೀಟರ್ ದೇವದಾಸ್ ಮತ್ತು ಅಸಿಸ್ಟಾಂಟ್ ಡೈರೆಕ್ಟರ್ ಶ್ರೀ ಮುಕುಂದನ್ ಉಸ್ಸಾಯವರು ತಾ. ೨೦ ರಂದು ಮಲ್ಪೆಗೆ ಆಗಮಿಸಿ ಅಲ್ಲ ವಿಜ್ಞಾನ ವ್ಯವಸಾಯದ ಅಭಿವೃದ್ಧಿಗೆ ಶ್ರೀ ಪೈಗಳು ಕೊಟ್ಟ ಸಲಹೆಗಳನ್ನು ಕೇಳಿಕೊಂಡರು. ವಿಜ್ಞಾನೀಕರಣ ಕಚೇರಿಗೆ ಮಂಗ್ಳೂರಿನಲ್ಲಿ ಈಗಾಗಲೇ ಒಂದಕ್ಕೆ ರೂಪಾಯಿಗಳನ್ನು ವ್ಯಯಿಸಿರುವುದಾಗಿಯೂ, ಈ ಕಚೇರಿಯ ಶೇಕಡಾ 75 - ಸ್ಥಳ ಭಾಗ ಕುಂದಲು ಬರುವೇಕಾದುದು ಮಲ್ಪೆಯಲ್ಲಾಗಿರುವುದರಿಂದ ಅವರು ತಿಳಿಸಿದರು. ಅದರ ಮಂಗ್ಳೂರಲ್ಲೊಂದು, ಮಲ್ಪೆಯಲ್ಲೊಂದು. ಹೀಗೆ ಎರಡು ಕಚೇರಿಗಳನ್ನು ಅನುಪಯುಕ್ತವೆಂದು ಅದರಲ್ಲೊಂದು ನಷ್ಟಪಡಿಸಿದಂತಾಗುವುದೆಂದು ಮಂಗ್ಳೂರಿನಲ್ಲಿರುವ ಈ ಸಂಸ್ಥೆಯಲ್ಲಿದ್ದ ಮಲ್ಪೆಗಾಗಿ ರಿಯಾಯಿತಿ ದರದ ಪ್ರತ್ಯೇಕ ಜಾಗವನ್ನು ಕಾದಿಡುವುದಲ್ಲದೆ ತಮ್ಮ ಪ್ರದಾಯೋಗಿ ವಿಜ್ಞಾನವನ್ನು ಇದ್ದಂದೆ ಮಂಗ್ಳೂರಿಗೆ ಒಯ್ಯಲು ಶೀತಕ ಸೌಕರ್ಯವಿರುವ ವೇಗವಾಗಿ ಚಲಿಸುವ ಮೂರು ಜೀಪ್ ಹಡಗು, ಮತ್ತು ನೆಲದ ಮಾರ್ಗವಾಗಿ ಮೈಸೂರು ಸಂಸ್ಥಾನದ ನೆರೆಕರೆಯ ಜಿಲ್ಲೆಗಳಿಗೆ ವಿಜ್ಞಾನವನ್ನು ಒಯ್ಯಲು ಶೀತಕ ಸೌಕರ್ಯವಿರುವ ಲಾರಿಗಳನ್ನು ಕೂಡಲೆ ಒದಗಿಸುವುದಾಗಿ ಆಶ್ವಾಸನೆ ಇತ್ತರು. ವಿಜ್ಞಾನ ವ್ಯವಸಾಯ ಹಾಗೂ ಸಮುದ್ರ ವಿಜ್ಞಾನದ ಕುರಿತು ಶಿಕ್ಷಣಕೊಡುವರೆ ಅಖಿಲ ಭಾರತ ಸಂಸ್ಥೆಯೊಂದನ್ನು ಮಲ್ಪೆಯಲ್ಲಿ ತೆರೆಯಬೇಕೆಂದು ಸೂಚಿಸಿದ್ದಕ್ಕೆ, ಡೆಪ್ಯುಟಿ ಡೈರೆಕ್ಟರರು ಅಖಿಲ ಭಾರತದಲ್ಲಿ ವಿಜ್ಞಾನ ವ್ಯವಸಾಯದ ಮಟ್ಟಿಗೆ ಮಲ್ಪೆಯು ಶ್ರೀಷ್ಠಸ್ಥಾನವನ್ನು ಪಡೆದಿರುವ ಕಾರಣ, ಅಂತಹ ಸಂಸ್ಥೆ ಇಲ್ಲಿ ತೆರೆಯಲ್ಪಡುವುದು ಉಚಿತವೆಂದು ಅಭಿಪ್ರಾಯ ಪಟ್ಟರು. ಇಂತಹ ಸಂಸ್ಥೆಗೆ ಅಮೇರಿಕದ ಸಹಾಯ ದೊರಕುವಾದು ಬಹುಬೇಗ ಗಿಟಾಗಬಹುದೆಂಬ ಆಶಾಭಾವನೆಯನ್ನೂ ವ್ಯಕ್ತಪಡಿಸಿದರು.

ಪಣಂಬೂರು—ಪಡು ಪಣಂಬೂರು ಬೋರ್ಡ್ ಹಾಗೂ ಎ ಶಾಲಾ ಮಕ್ಕಳ ತಿಂಗಳ ಹಬ್ಬವು ಇದೇ ತಾ 20ರಲ್ಲು ಮೂಲ್ಕಿ ಗ್ರಾಮ ಸೇವಕ ಶ್ರೀ ಪಿ. ವಿ ಮಯ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಈ ಸಂಧರ್ಭದಲ್ಲಿ ಮಕ್ಕಳ ವಿವಿಧ ಚಟುವಟಿಕೆಗಳಾದುವಲ್ಲದೆ, ಸಹಕಾರ ತತ್ವದ ಕುರಿತು ಒಂದು ಮಾದರಿ ಕರ್ಕಸಭೆಯೂ ಜರಗಿತು.

ಬೇಕಾಲ್ಕಡಿ—ಆರ್. ಕೆ. ಪಾಟ್ಯುರ್ ಶಾರದಾ ಪಡು ಎ ಶಾಲೆಯ ವರ್ಧಂತ್ಯುತ್ಸವವು ಇದೇ ತಾ 17ರಲ್ಲು ಶ್ರೀ ಟಿ. ಶಿ. ಹರಿದಾಸ ಭಟ್ಟರ, ಲೆಕ್ಚರರ್, ಎಮ್. ಜಿ. ಎಮ್. ಕಾಲೇಜು ಅವರ ಅಧ್ಯಕ್ಷತೆಯಲ್ಲಿ ಜರಗಿತು. ದ. ಕ ಜಿಲ್ಲಾ ಗ್ರಾಮೋದ್ಯೋಗ ಸಂಘದ ಕಾರ್ಯದರ್ಶಿಗಳಾದ ಶ್ರೀ ಎಚ್. ನಾರಾಯಣ ರಾಯರು ಗ್ರಾಮಾಭಿವೃದ್ಧಿಯ ಕುರಿತು ಮಾತನಾಡಿದರು. ಬಹುಮಾನ ವಿತರಣೆ, ವಿವಿಧ ವಿನೋದ ಕಾಲಕ್ಷೇಪಗಳಾಗಿ ಸಭಾಂತ್ಯ ವಾಯಿತು

ಪಜೀರ—ಇದೇ ತಾ 20ರಲ್ಲು ಪಜೀರ ಗ್ರಾಮಾಭ್ಯುದಯದ ಹೊಸ ಸೋಪಾಧೀಸು ತೆರೆಯುವ ಸಮಾರಂಭವು ಸೋಪ್ಸ್ಟರ್ ಇನ್ಸ್ಪೆಕ್ಟರರ ಅಧ್ಯಕ್ಷತೆಯಲ್ಲಿ ಶ್ರೀ ಕೆ. ಪಿ. ವೆಂಕಪ್ಪ ಸೆಟ್ಟಿ ಮೊದಲಾದವರ ಕೂಡುವಿಕೆಯಿಂದ ಜರಗಿತು ಇನ್ನು ಮುಂದೆ ಸಿಹಿಪೈ ಪೋಪಾಧೀಸಿಗೆ ಕಳುಹಿಸಿ ಕೊಡುತ್ತಿದ್ದ ಪಾಣಾಜೆಯ ಯಾವತ್ತು ಟಿಪ್ಪಾಲುಗಳನ್ನು ಪಾಪಾಜೆ ಟಿಪ್ಪಾಲು ಕಛೇರಿಗೇ ಕಳುಹಿಸಿ ಕೊಡಬೇಕಾಗಿದೆ.

ಬಂಟ್ವಳ—ಇತ್ತೀಚೆಗೆ ಇಲ್ಲಿಯ ಬಾಲಾವಲಿಕರ್ ಸಾರಸ್ವತ ಬ್ರಾಹ್ಮಣ ಸಮಾಜದವರು ಶ್ರೀ ಪಾದಂಗಳ ಗೋಪಾಲ ನಾಯ್ಕರ ಅಧ್ಯಕ್ಷತೆಯಲ್ಲಿ ಶ್ರೀ ಟಿ. ಎ. ಪೈಗಳನ್ನು ಸತ್ಕರಿಸಿ ಗೌರವಿಸಿದ ಸಂದರ್ಭದಲ್ಲಿ ಶ್ರೀ ಗಳಾದ ಮಂಜುನಾಥ ನಾಯ್ಕ ಬಿ.ಎಸ್. ಹೆಗ್ಡೆ, ಕೇಳು ನಂದಿಯಾರ್ ಡಾ॥ ಸುಂದರರಾಯ ಸ್ವೀ. ಮೊದಲಾದವರು, ಸಮಯೋಚಿತ ಭಾಷಣ ಮಾಡಿದರು. ಈ ಸಮಾಜದವರು ಸ್ವಬುದ್ಧಿಯಿಂದ ಮತದಾನ ಪಡಿದ ರಾಜಕೀಯ ಪರಿಜ್ಞತೆಯನ್ನು ವ್ಯಕ್ತ ಗೊಳಿಸಿದುದಕ್ಕೆ ಶ್ರೀ ಟಿ. ಎ. ಪೈಗಳು ಅವರನ್ನು ಶ್ಲಾಘಿಸಿದರು. ದೇವಸ್ಥಾನದಲ್ಲಿದರ್ಶನಾದಿ ಕಾರ್ಯ ಕ್ರಮಗಳೂ ಇದ್ದುವು.

ಕುಕ್ಕೆಹಟ್ಟಿ—ಇದೇ ತಾ 18ರಲ್ಲಿ ಇಲ್ಲಿಯ ಆಧ್ಯಮಿಕಶಾಲೆಯರು ಶ್ರೀ ಟಿ. ಎ. ಪೈಗಳಿಗೆ ಸತ್ಕಾರ ಕೂಟ ವೊಂದನ್ನು ಏರ್ಪಡಿಸಿದ್ದರು. ರಾತ್ರಿ ಭೂತದ ಕೊಲಾದಿಗಳಿದ್ದುವು.

ಮಂಜೇಶ್ವರ—ತಾ 20ರಂದು ಶ್ರೀ ಪಿ. ಶ್ರೀಪತಿ ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿದ ಶ್ರೀ ಟಿ. ಎ. ಪೈಗಳ ಸತ್ಕಾರ ಕೂಟದಲ್ಲಿ ಕೆ. ಎಸ್. ಆಚಾರ್ ಜಪ್ಪನ್ನ ಮೊದಲಾದವರು ಮಾತನಾಡಿದರು. ಶ್ರೀ ಪೈಗಳು ತಮ್ಮ ಭಾಷಣದಲ್ಲಿ ಜನತಾ ಸರಕಾರವು ದೇಶದ ಅಭ್ಯುದಯಸಾಧನೆಗೆ ಬೇಕಾದರೆಲ್ಲವನ್ನೂ ಕೈಗಿಕನೂ ಕಾರ್ಖಾನೆಯು ಕಾವುಗಾರನೂ ತಮ್ಮ ತಮ್ಮ ಕರ್ತವ್ಯಗಳನ್ನು ಶ್ರದ್ಧಾಭಾವದಿಂದ ಮಾಡುವುದು. ಅವಶ್ಯವೆಂದರು

ಹಿರಿಯಡ್ಕ—ಸ್ಥಳೀಯ ಆರ್ಯ ಸಮಾಜ ಮುಂದಿರಿಯಲ್ಲಿ ತಾ. 24ರಂದು ಗುರುಜಿ ಬೋಧೋತ್ಸವವೆಯಜ್ಞದೊಂದಿಗೆ ಆರಂಭಗೊಳಲಾಯಿತು ಗಾಂಧಿ ಮೈದಾನದಲ್ಲಿ ಶ್ರೀ ಮುದ್ರಾಡಿ ಕೃಷ್ಣಯ್ಯ ಸೆಟ್ಟಿಯ ಅಧ್ಯಕ್ಷತೆಯಲ್ಲಿ ಸಭೆ ಜರಗಿ ಭಾಷಣಗಳಾದುವು.

ಇನ್ನಂಜೆ—ಇಲ್ಲಿ ಹೈಸ್ಕೂಲನ್ನು ಸ್ಥಾಪಿಸಿ ಮಂಜಾಧಿ ಪಕ್ಷಗಳಿಗೆ ಮೇಲ್ಪಂಕ್ತಿಯನ್ನು ಹಾಕಿಕೊಟ್ಟ ಶ್ರೀ ಸೋದೆಮಠದ ಶ್ರೀ ಪಾದಂಗಳವರು ಇಲ್ಲೊಂದು ಹಿಂದೂ ಅನಾಥಾಲಯವನ್ನು ಸ್ಥಾಪಿಸಿದ್ದಾರೆ. ಅದರ ಸಹಾಯಾರ್ಥವಾಗಿ ಇತ್ತೀಚೆಗೆ ಕೊಳಲು ಆನಂದ ರಾಯರ ಮತ್ತು ಪಾರ್ಥಿಯವರ ಸಂಗೀತ ಜಲಸವು ನಡೆದಿತ್ತು. ಧಾರ್ಮಿಕ ಸಂಸ್ಥೆಗಳ ಗುರು ಪೀಠದಲ್ಲಿರುವ ಶ್ರೀ ಪಾದಂಗಳವರು ಇಂತಹ ಸಾರ್ವಜನಿಕ ಕೆಲಸದಲ್ಲಿ ಆಸಕ್ತಿ ತೋರಿಸುತ್ತಿರುವುದು ಅನುಕರಣೀಯವೂ ಶ್ಲಾಘನೀಯವೂ ಆಗಿದೆ.

ಫಲಿಮಾರು—ಸ್ಥಳೀಯ ಬೊ॥ಹಿ॥ ಎ॥ ಶಾಲೆಯ ಶಿವಾಜಿ ಬಾಲವೀರ ದಳದ ಶಿಬಿರಾಗ್ನಿಯು ತಾ. 23ರಲ್ಲು ಶ್ರೀ ಕೆ. ವೆಂಕಟ್ರಾಯ ಪೈಗಳ ಅಧ್ಯಕ್ಷತೆಯಲ್ಲಿ ಜರಗಿ, ಸಂದ್ರಾಯ ಭಟ್, ನಿತಾರಾವು ಅಡಿಗ ಮೊದಲಾದವರ ಭಾಷಣಗಳಾದವು.

ಮಂಗಳೂರು

ಮುನಿಸಿಪಲ್ ಕೌನ್ಸಿಲು ಸಭೆಯು ಸ್ಪೆಶಲ್ ಮೀಟಿಂಗು ಇದೇ ತಾ. 22 ರಲ್ಲು ಸಂಜೆ ಶ್ರೀ ಎಲ್. ಸಿ. ಸಾಯಿಸರ ಅಧ್ಯಕ್ಷತೆಯಲ್ಲಿ ಜರಗಿತು. ಲೋಕಲ್ ಬೋರ್ಡ್ ಮತ್ತು ಮುನಿಸಿಪಾಲಿಟಿಗಳ ಇನ್ಸ್ಪೆಕ್ಟರರಿಂದ ಬಂದ ಪತ್ರದಂತೆ ವಾರ್ಡುಗಳಿಗೆ ಪುನಹ ನಂಬರುಗಳನ್ನು ಕೊಡುವ ಕುರಿತು ಚರ್ಚೆ ನಡೆದು, ಸ್ತ್ರೀಯರಿಗೆ ಸ್ಥಾನವನ್ನು ಕಾದಿಡುವುದು ಘಟನೆಗೆ ವಿರೋಧವಾಗಿರುವುದರಿಂದ ಹಾಗೆ ಸ್ತ್ರೀಯರಿಗೆ ಸ್ಥಾನ ಕಾದಿಡುವುದು ಅಗತ್ಯವಿಲ್ಲವೆಂದೇ ಕೌನ್ಸಿಲಿನ ಅಭಿಪ್ರಾಯವಾಯಿತು. ಬಳಿಕ ಸಾಮಾನ್ಯ ಸಭೆ ಜರಗಿತು. ಕೇಂದ್ರ ಮೈದಾನದಲ್ಲಿರುವ ಶ್ರೀ ಡಾಮಂಟಪದ ಉಪಯೋಗದ ವಿಚಾರದಲ್ಲಿ ಕಮೀಷನರರ ಸೂಚನೆಯು ಚರ್ಚೆಯಾಗಿ ಅದನ್ನು ಅಪ್ಪೀರು ತೀರ್ಮಾನಕ್ಕಾಗಿ ಶ್ರೀಗಳಾದ ಎನ್. ಎನ್. ಸುವರ್ಣ, ಕೆ. ಸೂರ್ಯ ನಾರಾಯಣ ಅಡಿಗ ಮತ್ತು ಬಿ. ಎಸ್ ಭಾಸ್ಕರ ರೈಗಳಿಂದ ಕೂಡಿದ ಕಮಿಟಿಗೆ ಒಪ್ಪಿಸಲಾಯಿತು.

ಶ್ರೀ ಕೆ. ಕೆ. ಸೆಟ್ಟಿರ ರಾಜೀನಾಮೆ ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಕೆ. ಕೆ. ಸೆಟ್ಟರು ತಮ್ಮ ಕಾರ್ಯದರ್ಶಿ ಸ್ಥಾನಕ್ಕೆ ರಾಜೀನಾಮೆಯನ್ನು ಕೆ. ಪಿ. ಸಿ. ಸಿ. ಗೆ ಕಳುಹಿಸಿದ್ದು ಅದನ್ನು ಕೆ. ಪಿ. ಸಿ. ಯವರು ಅಂಗೀಕರಿಸಿದ್ದಾರೆ. ಈಗ ಜಿಲ್ಲಾ ಕಾಂಗ್ರೆಸಿನ ಅಧ್ಯಕ್ಷರಾಗಿ ಡಾ॥ ಯು. ಪಿ. ಮಲ್ಯರನ್ನೂ ಕಾರ್ಯದರ್ಶಿಗಳಾಗಿ ಶ್ರೀ ಬಿ. ಆರ್. ಶೆಣೈರವರನ್ನೂ ಕೆ. ಪಿ. ಸಿ. ಸಿ. ಯವರು ನೇಮಿಸಿದ್ದಾರೆ.

ವಾರ್ಷಿಕೋತ್ಸವ— ಎಲೋಸಿಯಸ್ ಕಾಲೇಜಿನ ಕರ್ನಾಟಕ ಸಂಘದ ವಾರ್ಷಿಕೋತ್ಸವವು ಇದೇ ತಾ. 16ರಲ್ಲು ಸಂಜೆ ಮೈಸೂರ ಸಾಹಿತಿಗಳಾದ ಶ್ರೀ ವಿ. ಎಸ್. ಮೂರ್ತಿರಾವ್, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ಅಧ್ಯಕ್ಷ ಶ್ರೀ ಟಿ. ಗೋಪಾಲಕೃಷ್ಣ ಭಟ್ಟರು ಸ್ವಾಗತ ಭಾಷಣಗೈದರು. ಶ್ರೀ ನೇಮಿರಾಜ ಕೃಷ್ಣ ಭಟ್ಟರು ರನ್ನನ 'ಗದಾಯುದ್ಧ' ಕಥಾ ನಾಯಕನು ಭೀಮನೇ ಎಂದು ಸಮರ್ಥಿಸಿ ಮಾತನಾಡಿದರು. ಕುಮಾರಿ ಸಿ. ಮಾಲತಿ ಮತ್ತು ಶ್ರೀ ಪಿವಾಸ ಉಡುಪರಿಂದ ಕಾವ್ಯವಾಚನವಾದ ಬಳಿಕ ಅಧ್ಯಕ್ಷರು ಸಾಹಿತ್ಯವಿಮರ್ಶ ಎಂಬ ವಿಚಾರವಾಗಿ ಮಾತನಾಡಿದರು. ಅವರು ತಮ್ಮ ಮಾತಿನಲ್ಲಿ ಹೊಸಗನ್ನಡದಲ್ಲಿ ವಿಮರ್ಶೆ ಬೆಳೆಯಲಿಲ್ಲವೆಂದೂ ಇತ್ತೀಚೆಗೆ ನಾಲ್ಕೈದು ವರ್ಷಗಳಲ್ಲಿ ವಿಮರ್ಶೆಯು ಬಹಳ ಕೆಳಮಟ್ಟಕ್ಕಿಳಿದೆ ಎಂದೂ ಹೇಳಿದರು.

ರಂಗ ಭೂಮಿಯ ಉದ್ಘಾಟನೆ:— ಸ್ಥಳೀಯ ಕೆನರಾ ಹೈಸ್ಕೂಲಿಗೆ, ದಿವಂಗತ ಕುದ್ರಿ ಗೋಪಾಲ ಶೆಣೈ ಸ್ಮಾರಕ ನಿಧಿಯಿಂದ ಅವರ ಸ್ಮಾರ್ಥ ಕಟ್ಟಿಸಿಕೊಟ್ಟ ಶ್ರೀ ಸುಕೃತೀಂದ್ರ ತೀರ್ಥ ಸ್ವಾಮಿ ಸ್ಮಾರಕ ರಂಗ ಭೂಮಿಯ ಉದ್ಘಾಟನೆಯು ಇದೇ ತಾ 16ರಲ್ಲು ಕಾರಿಮಂಠಾಧೀಶ ಶ್ರೀ ಸುಧೀಂದ್ರ ತೀರ್ಥ ಸ್ವಾಮಿಜಿಯವರು ನೆರವೇರಿಸಿದರು. ಶ್ರೀ ಎಮ್ ಮಾಧವರಾಯರು ಸ್ವಾಗತ ಭಾಷಣ ಮಾಡಿದರು ಡಾ॥ ಬಿ ಡಾ॥ ಎಮ್ ಕೇಶವ ಪೈಗಳು ಸ್ವಾಮಿಗಳವರಿಗೆ ಪಾದಪೂಜೆ ನಡೆಸಿ ಗೌರವಿಸಿದರು.

The Moolky Bank, Ltd., Mulki.

NOTICE

The Register of Members and Transfer Books of the Moolky Bank Ltd, Mulki will remain closed from 2-3-1952 to 18-3-1952, both days inclusive.

(Sd) **M. R. H. Punja,**
Manager.

ಎ. ಸಿ. ಸಿ- ನಂಬ್ರ 902A

ಒಂದು ಅಪೂರ್ವ ಆತ್ಮಧಿಕ ಬಹುಮಾನ

ರೂ. 45,0000 ಪಡೆಯಿರಿ

ಪ್ರಥಮ ಇನಾಮು-ಸರ್ವಸಮ ರೂ **310000**

ದ್ವಿತೀಯ ಬಹುಮಾನ ಪ್ರಥಮ ಎರಡು ಸಂಖ್ಯೆ ಸರಿಯಾದುದಕ್ಕೆ ರೂ **100000**

ತೃತೀಯ ಬಹುಮಾನ-ಪ್ರಥಮ ಒಂದು ಸಂಖ್ಯೆ ಸರಿಯಾದುದಕ್ಕೆ ರೂ. 40000

ವಿಶೇಷ ಬಹುಮಾನ ರೂ. 1000

ಒಂದು ಪ್ರವೇಶಕ್ಕೆ 2 ರೂಪಾಯಿ. ಉತ್ತರ ಸ್ವೀಕರಿಸುವ ಕೊನೆಯ ದಿನ 14-3-52. ಅಪೇಕ್ಷಿಸಿದ್ದಲ್ಲಿ ನಿಬಂಧನೆಗಳು ದೊರಕುವವು.

				5	

ಬೌಕದಲ್ಲಿಯ ಕಾಣಗಳಲ್ಲಿಯೂ ಒಟ್ಟು ನೋವು 20 ಇಪತ್ತರತ್ತು ಬರುವಂತೆ 7 ರಿಂದ 6ರ ವರೆಗಿನ ಅಂಕೆಗಳನ್ನೂ ಒಳ್ಳೆ ಮಾತ್ರ ಉಪಯೋಗಿಸಿರಿ. ಕಾಣದಲ್ಲಿ ತೋರಿಸಿದ 5 ಅಂಕೆಯನ್ನು ಬದಲಾಯಿಸಕೂಡದು

ನಿಯಮಗಳು: ಖಾಲಿ ಕಾಗದದ ಮೇಲೆ ಬರೆದು ಎಷ್ಟು ಪ್ರವೇಶಗಳನ್ನು ಬೇಕಾದರೂ ರಿಜಿಸ್ಟರ್ಡ್ ಪೋಸ್ಟು ದ್ವಾರಾ ಕಳುಹಿಸಬಹುದು ಮನಿಆರ್ಡರ್ ರಸೀದಿಯನ್ನಾಗಲೀ, ಕ್ಯಾಸ್ ಮಾಡಿದ ಪೋಸ್ಟರ್ ಆರ್ಡರನ್ನಾಗಲೀ ಉತ್ತರದೊಂದಿಗೆ ಕಳುಹಿಸತಕ್ಕದ್ದು. ಪತ್ರವ್ಯವಹಾರ ಇಂಗ್ಲಿಷಿನಲ್ಲಿರಬೇಕೆಂಬ ಅಪೇಕ್ಷೆಯಿಲ್ಲವಾದರೂ ಎರಡಾಣೆ ಟಪ್ಪಾಲು ಬೇಟೆ ಸುಂದಾಗಿ ಕಳುಹಿಸತಕ್ಕದ್ದು. ಉತ್ತರ ಕಳುಹಿಸತಕ್ಕ ವಿಳಾಸ

The Manager, **A. C. Competitions (Govt Regd)**
(902-A19) MADURAI, S. India.

ಎ. ಸಿ. ಸಿ. ನಂಬ್ರ 895ನೇ ಸ್ಪರ್ಧೆಯ ಉತ್ತರ:-4—3—6—5—2 ಈ ಸ್ಪರ್ಧೆಗೆ ಎಲ್ಲಾ ಸರಿಯಾದ ಉತ್ತರ ಬಂದಿರುತ್ತ. ಪ್ರಥಮ ಮೂರು ಅಂಕೆಗಳು ಸರಿಯಾದು ದಕ್ಕೆ ಪ್ರಥಮ ಬಹುಮಾನ ರೂ. 62,945-11 0 ಪ್ರಥಮ ಎರಡು ಅಂಕೆ ಸರಿಯಾದುದಕ್ಕೆ ದ್ವಿತೀಯ ಬಹುಮಾನ ರೂ. 29,761-9-0 ತೃತೀಯ ಬಹುಮಾನ ರೂ. 12,750-6-0.

ಕತಾಯಿ ಮಂಡಲ ರಚನೆ

ಶೋಷಣರಹಿತ ಸಮಾಜ ಸ್ಥಾಪನೆ.

ದೇಶವಲ್ಲೆಲ್ಲ ಗ್ರಾಮರಾಜ್ಯ-ರಾಮರಾಜ್ಯ ವನ್ನು ಸ್ಥಾಪಿಸಬೇಕೆಂದು ನನ್ನ ಮುಖಾಂತರ ಸ್ವಯಂಪ್ರೇರಿತರಾಗಿ ಸ್ವತಂತ್ರ ಗ್ರಾಮರಾಜ್ಯವನ್ನು ಸ್ಥಾಪಿಸಲು ಹಳ್ಳಿಯವರು ತಮ್ಮ ಆರ್ಥಿಕ ಅಭಿವೃದ್ಧಿಯನ್ನು ತಾವೇ ಮಾಡಬೇಕು. ಅದಕ್ಕಾಗಿ ಲಕ್ಷಾವಧಿ ಗ್ರಾಮಗಳನ್ನು ವಸ್ತ್ರಸ್ವಾವಲಂಬನೆಯ ಮೂಲಕ ಸ್ವಯಂಪೂರ್ಣತೆಯ ಕಡೆಗೊಯ್ಯಲು ಪ್ರಥಮ ಸೋಪಾನವಾಗಿ ಕತಾಯಿಮಂಡಲಗಳ ಕಾರ್ಯಕ್ರಮವನ್ನೂ ಅಖಿಲ ಭಾರತ ಚರಖಾ ಸಂಘದವರು ಕೈಕೊಂಡಿರುವರು. ಕತಾಯಿ ಮಂಡಲಗಳ ಯೋಜನೆಯನ್ನು ಮಹಾತ್ಮಾ ಗಾಂಧೀಜಿಯವರು ತನ್ನ ನಿಧನದ ನೋವಲು ಕಲ್ಪಿಸಿದ್ದರು. ಕತಾಯಿ ಮಂಡಲಗಳನ್ನು ರಚಿಸುವುದರಿಂದ ದೇಶದಲ್ಲೆಲ್ಲ ಶೋಷಣರಹಿತ ಸಮಾಜವನ್ನುಂಟುಮಾಡಲಿಕ್ಕೆ ಸಾಧ್ಯವಾಗುವುದು. ಜನರ ಸ್ವಯಂಪೂರ್ಣತೆಯು ಸಂಘಟಿತವಾಗದೆ, ಇನ್ನಾವ ನ್ಯಾಸಕವಾದ ರಾಷ್ಟ್ರೀಯ ಯೋಜನೆಗಳನ್ನು ನಾವು ತಯಾರಿಸಿದರೂ ಅವುಗಳಿಂದ ಶೀಜನತೆಯ ಸ್ವರಾಜ್ಯ ಸ್ಥಾಪನೆಯಾಗಬಹುದೆಂಬುದು ಅಸಂಭವನೀಯವಾದ ಮಾತಾಗಿದೆ

